ಮಾರ್ಗದರ್ಶಿ

ಆತ್ಮಸಂಸ್ಕರಣೆಯ ಪ್ರವಾದಿ ಬೋಧನೆಗಳು

ಜಅ್ಫರ್ ಎಳಂಬಿಲಾಕ್ಕೋಡು

ಪರಮ ದಯಾಮಯನೂ ಕರುಣಾಳುವೂ ಆದ ಅಲ್ಲಾಹನ ನಾಮದಿಂದ

ಪ್ರಕಾಶಕರ ಮಾತು

ಅಲ್ಲಾಹನ ಸಂದೇಶವಾಹಕರು(ಸ) ಕೇವಲ ಒಬ್ಬ ಉಪದೇಶಕರಾಗಿರಲಿಲ್ಲ. ಬದಲಾಗಿ ಹೇಳುತ್ತಿರುವ ವಿಷಯಗಳನ್ನು ತಮ್ಮ ಮೂಲಕವೇ ಪ್ರಾಯೋಗಿಕವಾಗಿ ತೋರಿಸಿಕೊಟ್ಟವರು. ಅವರು ಸ್ವತಃ ನಡೆದಾಡುವ ಕುರ್‌ಆನ್ ಆಗಿದ್ದರು. ಅಲ್ಲಾಹನು ಅವರಿಗೆ(ಸ) ತನ್ನ ವಾಣಿಯನ್ನು ಅವತೀರ್ಣಗೊಳಿಸುವಾಗ, ಅದರ ಮರ್ಮವನ್ನು ವಿವರಿಸಿಕೊಡುವ ಜ್ಞಾನ ಮತ್ತು ಯುಕ್ತಿಯನ್ನು ಕೂಡ ಅವರಿಗೆ ನೀಡಿದ್ದನು. ಅದುವೇ ಅವರ ಮಾತು, ಚರ್ಯೆಗಳಲ್ಲಿ ಪ್ರತಿಬಿಂಬಿಸುತ್ತಿತ್ತು. ಅದನ್ನೆಲ್ಲ ಅವರ ಅನುಯಾಯಿಗಳು ಬರೆದಿಡುತ್ತಿದ್ದರು. 'ಹದೀಸ್'ಗಳೆಂದು ಕರೆಯಲ್ಪಡುವ ಈ ಪ್ರವಾದಿವಚನ-ಚರ್ಯೆಗಳ ಸಂಗ್ರಹ ಏನಿದೆಯೋ ಅದು ಪವಿತ್ರ ಕುರ್‌ಆನಿನ ನಂತರದ ಸ್ಥಾನಮಾನವನ್ನು ಹೊಂದಿರುವಂತಹುದಾಗಿದೆ. ಕೆಲವು ಹದೀಸ್‌ಗಳು ನೇರಾನೇರ ಅರ್ಥವನ್ನು ನೀಡುವಂತಹುದಾಗಿದ್ದರೆ, ಕೆಲವೊಂದಕ್ಕೆ ಪ್ರತ್ಯೇಕ ವ್ಯಾಖ್ಯಾನದ ಅಗತ್ಯ ತಲೆದೋರುತ್ತದೆ.

ಈ ಉದ್ದೇಶವಿಟ್ಟುಕೊಂಡು ಜಲ್‌ಫರ್ ಎಳಂಬಿಲಾಕ್ಕೋಡ್‌ರವರು 'ವಳಿವೆಲಿಚ್ಚಂ' ಎಂಬ ಅಧ್ಯಯನ ಗ್ರಂಥವನ್ನು ರಚಿಸಿರುವರು. ಅದನ್ನು ಅನುಪಮ ಮಹಿಳಾ ಮಾಸಿಕದ ಸಹಸಂಪಾದಕಿ ಸಬೀಹಾ ಫಾತಿಮಾರವರು 'ಮಾರ್ಗದರ್ಶಿ' ಎಂಬ ಹೆಸರಲ್ಲಿ ಬಹಳ ಸೊಗಸಾಗಿ ಕನ್ನಡಕ್ಕೆ ಅನುವಾದಿಸಿದ್ದಾರೆ. ಇದರಲ್ಲಿರುವ ಪ್ರತಿ ಯೊಂದು ಪ್ರವಾದಿವಚನವು ಆತ್ಮಶುದ್ಧೀಕರಣಕ್ಕಿರುವ ಅಕ್ಷಯಪಾತ್ರೆಯಂತಿದೆ. ಸಮಾಜದ ಸಂಸ್ಕರಣೆಯೆಂಬ ತಮ್ಮ ಕರ್ತವ್ಯವನ್ನು ಪ್ರವಾದಿಯವರು(ಸ) ಯಾವ ರೀತಿ ನೆರವೇರಿಸಿದರು ಎಂಬುದನ್ನು ತಿಳಿಯಬೇಕಿದ್ದರೆ, ಹದೀಸ್‌ಗಳ ಕುರಿತು ಅರಿಯಬೇಕು. ಪ್ರವಾದಿಯವರಲ್ಲಿದ್ದ ಸುಧಾರಕ, ಮಾರ್ಗದರ್ಶಕ ಮತ್ತು ಶಿಕ್ಷಕನನ್ನು ನಮಗಾಗ ಮನವರಿಕೆ ಮಾಡಿಕೊಳ್ಳಬಹುದು.

ಒಟ್ಟಿನಲ್ಲಿ ಇದು ಪ್ರತಿಯೊಂದು ಮನೆಯಲ್ಲೂ ಇರಬೇಕಾದ ಕೃತಿಯಾಗಿದ್ದು, ಆತ್ಮಸಂಸ್ಕರಣೆಗೆ ಬಹಳ ಉಪಯುಕ್ತವಾಗಿದೆ.

ಶಾಂತಿ ಪ್ರಕಾಶನ

ಪ್ರಸ್ತಾವನೆ

ಹದೀಸ್‌ಗಳು ಕುರ್‌ಆನಿನ ಪ್ರಾಯೋಗಿಕ ರೂಪಗಳಾಗಿವೆ. ಮಾತು-ಕೃತಿಗಳ ಮೂಲಕ ದೈವಿಕ ಗ್ರಂಥಕ್ಕೆ ಪ್ರವಾದಿ(ಸ) ನೀಡಿದ ವಿವರಣೆ. ಕುರ್‌ಆನನ್ನು ಅರ್ಥ ಮಾಡಿಕೊಳ್ಳಬೇಕಾದರೆ, ಹದೀಸ್‌ಗಳನ್ನು ಅರ್ಥೈಸಿಕೊಳ್ಳಬೇಕು. ಪ್ರವಾದಿಯವರ(ಸ) ವಚನಗಳನ್ನು ನಿರ್ಲಕ್ಷಿಸಿ, ತಿರಸ್ಕರಿಸಿ, ಅವಗಣಿಸಿ ಕುರ್‌ಆನನ್ನು ಕಲಿಯಲಿಕ್ಕೆ ಮತ್ತು ಅದನ್ನು ಪ್ರಾಯೋಗಿಕ ಜೀವನದಲ್ಲಿ ಅಳವಡಿಸಲಿಕ್ಕೆ ಸಾಧ್ಯವಿಲ್ಲ. ಆದುದರಿಂದ ಕುರ್‌ಆನನ್ನು ಕಲಿಯುವಂತೆಯೇ ಹದೀಸ್‌ಗಳನ್ನು ಕಲಿಯುವುದಕ್ಕೆ ಕೂಡ ಬಹಳ ಪ್ರಾಧಾನ್ಯತೆಯಿದೆ. ಹದೀಸ್‌ಗಳ ಕುರಿತು ನಡೆಸುವ ಅಧ್ಯಯನವು ಕುರ್‌ಆನನ್ನು ಅರಿಯಲಿಕ್ಕಿರುವ ಮಾರ್ಗವಾಗಿದೆ.

ಪ್ರವಾದಿಯವರ(ಸ) ವಚನಗಳೆಂದರೆ ಕೇವಲ ಬರಿಯ ಮಾತುಗಳಲ್ಲ, ಜೀವನದ ಅನೇಕ ಸಂಕೀರ್ಣ ಸಮಸ್ಯೆಗಳಿಗೆ ಇರುವ ಸರಳವಾದ ಪರಿಹಾರವಾಗಿದೆ.

ಹದೀಸ್‌ಗಳು ಸುದೀರ್ಘವಾದ ಭಾಷಣದ ರೂಪದಲ್ಲಿರುವುದಿಲ್ಲ, ಮನೋಜ್ಞವಾದ ಸಣ್ಣ ಸಣ್ಣ ಮಾತುಗಳು. ಪವಿತ್ರ ಕುರ್‌ಆನಿನ ಸೂಕ್ತಗಳು ಒಂದರಿಂದ ಇನ್ನೊಂದಕ್ಕೆ ವ್ಯಾಖ್ಯಾನಿಸುತ್ತಾ ಸಾಗುವಾಗ, ಹದೀಸ್‌ಗಳು ಸಣ್ಣ ಕೋಣೆಗಳಲ್ಲಿ ಸ್ವತಃ ಸೀಮಿತಗೊಳ್ಳುತ್ತವೆ. ವಿಶಾಲವಾದ ಇನ್ನೊಂದು ಲೋಕಕ್ಕಿರುವ ಬಾಗಿಲುಗಳಂತೆ.

ಪ್ರವಾದಿಯವರ(ಸ) ಶಿಕ್ಷಣದ ವಿಧಾನಕ್ಕೆ ಕೆಲವು ಮೂಲಭೂತ ವಿಶೇಷತೆಗಳಿವೆ. ಅವರು ಜನರನ್ನು ತರಗತಿ ಕೋಣೆಗಳೊಳಗೆ ಕೂಡಿ ಹಾಕಿ ಕಲಿಸುತ್ತಿರಲಿಲ್ಲ, ಜನರ ಜೊತೆಯಲ್ಲಿ ತಿಂದು, ಮಲಗಿ, ಆಡಿ, ನಕ್ಕು, ಒಟ್ಟಿಗೆ ಪ್ರಯಾಣಿಸಿ, ವಿಶ್ರಾಂತಿ ಪಡೆದು ವಿಷಯಗಳನ್ನು ಅವರಿಗೆ ಮನವರಿಕೆ ಮಾಡಿಸಿ ಕೊಡುತ್ತಿದ್ದರು. ಮಸೀದಿ, ಮಾರುಕಟ್ಟೆ, ಗದ್ದೆ ಹೀಗೆ ಜೀವನದ ಪ್ರತಿಯೊಂದು ರಂಗವೂ ಅವರಿಗೆ ತಮ್ಮ ಅನುಯಾಯಿಗಳನ್ನು ತರಬೇತಿಗೊಳಿಸಲಿಕ್ಕಿದ್ದ ಸ್ಥಳಗಳಾಗಿದ್ದುವು. ತಾವು ಗ್ರಹಿಸುವ ವಿಷಯಗಳನ್ನು ಅನಾಯಾಸವಾಗಿ ಮನವರಿಕೆ ಮಾಡುವ ವಿಶಿಷ್ಟವಾದ ಕಲಿಕಾ ವಿಧಾನ.

ಪ್ರವಾದಿಯವರ(ಸ) ಮಾತುಗಳು ಕೇಳುಗರು ಸುಲಭವಾಗಿ ಎಣಿಕೆ ಮಾಡು ವಷ್ಟು ನಿಧಾನವಾಗಿರುತ್ತಿತ್ತು. ಅವಸರವಸರವಾಗಿ ಮಾತನಾಡುವ ಅಭ್ಯಾಸ ಅವರಿಗಿರ ಲಿಲ್ಲ. ಪ್ರವಾದಿಯವರ(ಸ) ಮಾತುಗಳನ್ನು ಆಲಿಸಿ ಜನರು ಬಹಳ ಹೊತ್ತಿನ ತನಕ ಅಳುತ್ತಿದ್ದರು. ಪ್ರವಾದಿಯವರು ಮುಂದಿರುವಾಗ ಸ್ವರ್ಗ ಮತ್ತು ನರಕವನ್ನು ಕಣ್ಣಾರೆ ಕಾಣುವಂತಹ ಅನುಭವವಾಗುತ್ತಿತ್ತು ಎಂದು ಪ್ರಮುಖ ಸಂಗಾತಿ ಹಂಝುಲ(ರ) ಹೇಳುತ್ತಾರೆ. ವಾಕ್ಯ ಗಳನ್ನು ಅದರ ತೀಕ್ಷ್ಣತೆಯೊಂದಿಗೆ ಪ್ರಯೋಗಿಸುವ ಸಾಮರ್ಥ್ಯ ಪ್ರವಾದಿಯವರಿಗೆ(ಸ) ಸಿದ್ಧಿಸಿತ್ತು. ಒಂದು ವಿಷಯದ ಮಹತ್ವವನ್ನು ಮನವರಿಕೆ ಮಾಡಲು ಒಂದೆರಡು ವಾಕ್ಯಗಳೇ ಧಾರಾಳವೆನಿಸುತ್ತಿತ್ತು. ಸಾರವತ್ತಾದ ವಚನ ಗಳನ್ನು ಹೇಳುವ ಸಾಮರ್ಥ್ಯ ದೇವನು ನನಗೆ ನೀಡಿದ ವಿಶಿಷ್ಟ ಅನುಗ್ರಹವೆಂದು ಪ್ರವಾದಿಯವರು(ಸ) ಸ್ವಯಂ ಹೇಳಿಕೊಂಡಿದ್ದಾರೆ.

ಹದೀಸ್‌ಗಳ ಸಮಗ್ರ ಅರ್ಥವನ್ನು ಗ್ರಹಿಸಲು ನಡೆಸಿದ ಸಣ್ಣ ಪ್ರಯತ್ನದ ಫಲವೇ ಈ ಗ್ರಂಥ. ಹೆಸರೇ ಸೂಚಿಸುವಂತೆ ಆತ್ಮಸಂಸ್ಕರಣೆಗೆ ಪ್ರಾಧಾನ್ಯತೆ ಇರುವ ಪ್ರವಾದಿವಚನ ಗಳಿಗೆ ಈ ಗ್ರಂಥದಲ್ಲಿ ಪ್ರಾಮುಖ್ಯತೆ ನೀಡಲಾಗಿದೆ. ವಿದ್ವಾಂಸರು ಪ್ರಬಲವೆಂದು ಸಾರಿರುವ ಪ್ರವಾದಿವಚನಗಳನ್ನು ತಲೆಬರಹವಾಗಿ ಆಯ್ದುಕೊಂಡು, ಬಳಿಕ ಅವುಗಳನ್ನು ಪವಿತ್ರ ಕುರ್‌ಆನಿನ ಸೂಕ್ತಗಳು ಮತ್ತು ಪ್ರವಾದಿವಚನಗಳನ್ನು ಉಪಯೋಗಿಸಿ ವಿವರಿಸುವ ವಿಧಾನವನ್ನು ಇಲ್ಲಿ ಸ್ವೀಕರಿಸಲಾಗಿದೆ. ಅಧ್ಯಯನಕ್ಕೆ ಸಹಾಯಕವಾಗಲೆಂದು ಉಲ್ಲೇಖಿಸಿರುವ ಹದೀಸ್‌ಗಳ ಅರಬಿ ಮೂಲ ಮತ್ತು ಗ್ರಂಥದ ಹೆಸರನ್ನು ಸೇರಿಸಲಾಗಿದೆ. ಪ್ರಧಾನವಾದ ಹದೀಸ್‌ಗಳಿಗೆ ಆಧಾರವಾಗಿ ಅಧ್ಯಾಯಗಳ ಒಳಗೆ ಇರುವ ಇತರ ಹದೀಸ್‌ಗಳಲ್ಲಿ ಪ್ರಮಾಣಯೋಗ್ಯವಾದುದು ಮತ್ತು ಅಲ್ಲದವುಗಳು ಇವೆ. ಅವುಗಳು ಯಾವುದೆಂದು ವಿವರಿಸಿಲ್ಲ. ಸಂಸ್ಕರಣೆಯ ವಿಷಯದಲ್ಲಿ ನಿಬಂಧನೆಗಳೊಂದಿಗೆ ಇವುಗಳನ್ನು ಬಳಸಬಹುದೆಂಬುದು ವಿದ್ವಾಂಸರ ಅಭಿಪ್ರಾಯವಲ್ಲವೇ.

ಒಟ್ಟಿನಲ್ಲಿ, ಪ್ರವಾದಿವಚನಗಳನ್ನು ಇನ್ನಷ್ಟು ಆಳವಾಗಿ ಕಲಿಯಲು ಮತ್ತು ಮನದಟ್ಟು ಮಾಡಲು ಈ ಗ್ರಂಥವು ಉಪಕಾರಿಯಾಗಲೆಂದು ನಿರೀಕ್ಷಿಸುತ್ತೇನೆ. ಕುಂದು-ಕೊರತೆಗಳಿರಬಹುದು. ತಿಳಿದವರು ಅದನ್ನು ನನ್ನ ಗಮನಕ್ಕೆ ತರಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಅಲ್ಲಾಹನು ಇದನ್ನು ಸತ್ಕರ್ಮವಾಗಿ ಸ್ವೀಕರಿಸಿ, ಅರ್ಹ ಪ್ರತಿಫಲ ವನ್ನು ನೀಡಲಿ.

ಜಅ್‌ಫರ್ ಎಳಂಬಿಲಾಕ್ಕೋಡ್

ಮುನ್ನುಡಿ

ಇಸ್ಲಾಮ್ ಧರ್ಮದ ಎರಡನೆಯ ಮೂಲಾಧಾರವಾಗಿದೆ ಪ್ರವಾದಿ ವಚನಗಳು. ಇದು ಪ್ರಥಮ ಮೂಲಾಧಾರವಾದ ಕುರ್‌ಆನಿನಿಂದ ಭಿನ್ನವಾದುದಲ್ಲ. ಪ್ರಥಮ ಆಧಾರದ ಕರ್ಮರೂಪದ ವ್ಯಾಖ್ಯಾನವಿದು. ಪ್ರವಾದಿ ಮುಹಮ್ಮದ್(ಸ)ರ ಜೀವನ ಚರ್ಯೆಯನ್ನು ಸುನ್ನತ್ ಎಂದು ಕರೆಯಲಾಗುತ್ತದೆ. ವಿಶ್ವಾಸಾದರ್ಶವನ್ನು ಸ್ವಂತ ಜೀವನದಲ್ಲಿ ಸಂಪೂರ್ಣವಾಗಿ ಸಾಕ್ಷಾತ್ಕರಿಸಿ ತೋರಿಸಿದ ಲೋಕಗುರುವಾಗಿದ್ದಾರೆ ಪ್ರವಾದಿ ಮುಹಮ್ಮದ್(ಸ). ಅವರ ಸ್ವಭಾವ ಕುರ್‌ಆನ್ ಆಗಿತ್ತೆಂದು ಪ್ರವಾದಿಪತ್ನಿ ಆಯಿಶಾ(ರ) ಹೇಳಿರುತ್ತಾರೆ. ಅಂದರೆ ಕುರ್‌ಆನ್ ಪ್ರತಿಪಾದಿಸುವ ಗುಣಸ್ವಭಾವಗಳ ಪ್ರಾಯೋಗಿಕ ರೂಪವಾಗಿತ್ತು ಪ್ರವಾದಿವರ್ಯರ(ಸ) ಜೀವನ. ಆದುದರಿಂದಲೇ 'ದೇವ ಸಂದೇಶವಾಹಕರಲ್ಲಿ ನಿಮಗೆ ಅತ್ಯುತ್ತಮ ಮಾದರಿಯಿದೆ' ಎಂದು ಕುರ್‌ಆನ್ ಸತ್ಯವಿಶ್ವಾಸಿಗಳಿಗೆ ಉಪದೇಶಿಸಿದೆ. ಪವಿತ್ರ ಕುರ್‌ಆನನ್ನು ಪಾರಾಯಣ ಮಾಡಿ ಕೇಳಿಸು ವುದರ ಜತೆಗೆ ಅದನ್ನು ಜೀವನದಲ್ಲಿ ಆಚರಿಸಿ ತೋರಿಸುವುದು ಕೂಡ ಪ್ರವಾದಿ ಯವರ(ಸ) ಜೀವನದ ಉದ್ದೇಶವಾಗಿತ್ತು. ಆದುದರಿಂದ ಪ್ರವಾದಿವರ್ಯರೇ(ಸ) ಅಧಿಕೃತವಾಗಿ ಪವಿತ್ರ ಕುರ್‌ಆನಿನ ಬಹಳ ದೊಡ್ಡ ವ್ಯಾಖ್ಯಾನ ಎಂಬುದರಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಸುನ್ನತನ್ನು ನಿಷೇಧಿಸಿಕೊಂಡು ಕುರ್‌ಆನನ್ನು ಸರಿಯಾಗಿ ಪಾರಾಯಣ ಮಾಡಲು ಸಾಧ್ಯವಿಲ್ಲ. ಕುರ್‌ಆನನ್ನು ಅವಗಣಿಸಿ ಸುನ್ನತನ್ನು ಪಾಲಿಸುವುದು ಕೂಡಾ ಹೀಗೆಯೇ ಆಗಿದೆ.

ಅಡಿಪಾಯ ಭದ್ರವಾಗಿದ್ದರೆ ಗೋಡೆಗಳು ಮತ್ತು ಮೇಲ್ಛಾವಣಿ ಹೊದಿಸಿ ಎತ್ತರಕ್ಕೇರಿಸಲು ಆಗುತ್ತದೆ. ಗೋಡೆಗಳು ಮತ್ತು ಮೇಲ್ಛಾವಣಿ ಇಲ್ಲದೆ ಯಾವ ಕಟ್ಟಡವೂ ಪರಿಪೂರ್ಣವಾಗುವುದಿಲ್ಲ. ಕುರ್‌ಆನ್ ಇಸ್ಲಾಮೀ ಸಂಸ್ಕೃತಿಯ ಅಡಿಪಾಯ ವಾಗಿದ್ದರೆ, ಸುನ್ನತ್‌ಗಳು ಅದರ ಗೋಡೆ ಮತ್ತು ಮೇಲ್ಛಾವಣಿಯಾಗಿದೆ. ಕುರ್‌ಆನಿನಲ್ಲಿ ಇಸ್ಲಾಮೀ ಸಂಸ್ಕೃತಿಯ ಬುನಾದಿಗಳನ್ನು ಕಾಣಬಹುದಾಗಿದೆ. ಈ ಸಂಸ್ಕೃತಿಯ ಸೌಧಕ್ಕೆ ಪೂರ್ಣ ರೂಪ ಸಿಗಬೇಕಿದ್ದರೆ, ಸುನ್ನತನ್ನು (ಹದೀಸ್) ಅಧ್ಯಯನ ಮಾಡುವುದು

ಅನಿವಾರ್ಯವಾಗಿದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಕುರ್‌ಆನನ್ನು ಅನುಸರಿಸುವುದು ಎಂದರೆ ಪ್ರವಾದಿಚರ್ಯೆಯನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದಾಗಿದೆ. ಕುರ್‌ಆನ್ ಬೇಡ, ಪ್ರವಾದಿಚರ್ಯೆ ಸಾಕು ಎಂದು ಭಾವಿಸಿದರೆ ಅಥವಾ ಪ್ರವಾದಿಚರ್ಯೆ ಬೇಡ, ಕುರ್‌ಆನ್ ಸಾಕು ಎಂದು ಭಾವಿಸುವುದಾದರೆ ಎರಡನ್ನೂ ನಿಷೇಧಿಸಿದಂತೆ ಆಗುತ್ತದೆ.

ಈ ರೀತಿಯಲ್ಲಿ ನೋಡುವಾಗ ಕುರ್‌ಆನಿನ ಜೊತೆ ಕಲಿಯಬೇಕಾದುದಾಗಿದೆ ಪ್ರವಾದಿಚರ್ಯೆ. ಆದರೆ ಇತ್ತೀಚಿನ ವರೆಗೆ ಕುರ್‌ಆನಿನಂತೆ ಪ್ರವಾದಿಚರ್ಯೆ ಕೂಡ ಧಾರ್ಮಿಕ ಶಿಕ್ಷಣದಲ್ಲಿ ಒಳಗೊಂಡಿರಲಿಲ್ಲ. ಕೇವಲ ಕರ್ಮಶಾಸ್ತ್ರವನ್ನು ಕಲಿಯುವುದು ಮಾತ್ರ ಧಾರ್ಮಿಕ ಶಿಕ್ಷಣವೆನಿಸುತ್ತಿತ್ತು. ಕುರ್‌ಆನನ್ನು ಓದಲು ಕಲಿಯುವವರು ಬರ್ಕತನ್ನು ಗಳಿಸಲು ಓದುವರು. ಸುನ್ನತ್‌ಗಳ ವಿಷಯದಲ್ಲಿ ಅದು ಕೂಡ ಇಲ್ಲ.

ಪ್ರವಾದಿವಚನಗಳು ಶಿಕ್ಷಣ ಮತ್ತು ವಿಶ್ವಾಸದ ಖನಿಗಳಾಗಿವೆ. ಪ್ರತಿಯೊಂದು ವಚನಕ್ಕೂ ಅದರದ್ದೇ ಆದ ಚಾರಿತ್ರಿಕ ಹಿನ್ನೆಲೆ ಇದೆ. ಕುರ್‌ಆನ್ ಮತ್ತು ಇತರ ಹದೀಸ್‌ಗಳ ಅವತೀರ್ಣ ಹಿನ್ನೆಲೆಯನ್ನು ಜ್ಞಾನ ಮತ್ತು ಬೆಳಕಿನ ಆಧಾರದಲ್ಲಿ ಅರ್ಥವನ್ನು ಗ್ರಹಿಸಲು ಸಾಧ್ಯವಾಗುತ್ತದೆ. ಕುರ್‌ಆನಿನಂತೆಯೇ ಹದೀಸ್ ಕೂಡ ವ್ಯಾಖ್ಯಾನ ಮತ್ತು ವಿವರಣೆಯನ್ನು ಬಯಸುವ ತತ್ವಶಾಸ್ತ್ರವಾಗಿದೆ ಎಂದರ್ಥ. ಈ ಅಗತ್ಯವನ್ನು ಪೂರ್ತೀಕರಿಸದೆ ಹೋದರೆ, ಜನರಿಗೆ ಸುಲಭದಲ್ಲಿ ಪ್ರಯೋಜನ ಪಡೆಯಲು ಸಾಧ್ಯವಾಗುವುದಿಲ್ಲ. ಇದನ್ನು ಗಮನದಲ್ಲಿಟ್ಟುಕೊಂಡು, ಸಾಮಾನ್ಯ ಜನಜೀವನದೊಂದಿಗೆ ಹೆಚ್ಚು ಸಂಬಂಧವಿರುವ ಪ್ರವಾದಿವಚನಗಳನ್ನು ಆಯ್ದುಕೊಂಡು ವ್ಯಾಖ್ಯಾನ ಸಹಿತ ಗ್ರಂಥವನ್ನು ಹೊರ ತರಲಾಗಿದೆ. ನಾನೂ ಈ ಮಾರ್ಗದಲ್ಲಿ ಬಹಳ ಮುಖ್ಯವಾದ ಪರಿಶ್ರಮ ಪಟ್ಟಿದ್ದೇನೆ. ಅದರ ಫಲಿತಾಂಶವೇ 'ಹದೀಸ್ ಬೋಧನಂ' (ಪ್ರಕಾಶ ಬಿಂದುಗಳು) ಎಂಬ ಕೃತಿ. ಅದೊಂದು ಆರಂಭವಾಗಿದ್ದರೂ ದೌರ್ಭಾಗ್ಯವಶಾತ್ ಅದನ್ನು ಮುಂದುವರಿಸಲು ಸಾಧ್ಯವಾಗಿರ ಲಿಲ್ಲ. ಈಗ ನನ್ನ ಆದರಣೀಯ ಒಡನಾಡಿ ಜಅ್‌ಫರ್ ಎಳಂಬಿಲಾಕ್ಕೋಡ್ ಈ ಕೆಲಸದೊಂದಿಗೆ ಮುಂದೆ ಬಂದಿರುವುದಕ್ಕೆ ತುಂಬಾ ಸಂತೋಷವಾಗಿದೆ.

ಒಂದು ಸಾಧಾರಣ ವಾಕ್ಯವನ್ನು ಕೂಡ ಅನೇಕರು ಹಲವು ಅರ್ಥಗಳನ್ನು ಗ್ರಹಿಸಿ ಓದುತ್ತಾರೆ. ಹದೀಸ್‌ಗಳಾದರೋ ಅಗಾಧವಾದ ಅರ್ಥವ್ಯಾಪ್ತಿಯನ್ನು ಹೊಂದಿರುವ ವಚನಗಳು. ಅದರ ಅನುವಾದ ಮತ್ತು ವ್ಯಾಖ್ಯಾನದಲ್ಲಿ ವೈವಿಧ್ಯತೆ ಇರುವುದು ಸಾಮಾನ್ಯವಾಗಿದೆ. ವ್ಯತ್ಯಾಸಗಳಿದ್ದರೂ ಭಾಷಾಂತರ ಮತ್ತು ವ್ಯಾಖ್ಯಾನಗಳ ಮೂಲ ಸಂದೇಶ ಸಾಮಾನ್ಯವಾಗಿ ಒಂದೇ ಆಗಿರುತ್ತದೆ. ಒಂದೇ ರೀತಿಯ ಮೂಲ

ಸಂದೇಶವನ್ನು ವ್ಯಾಖ್ಯಾನಗಾರರು ತುಂಬಾ ಸರಿಯಾದ ರೀತಿಯಲ್ಲಿ ವಿವರಿಸಿದ್ದಾರೆ. ಈ ರೀತಿಯಲ್ಲಿ ಭಾಷಾಂತರ ಮತ್ತು ವ್ಯಾಖ್ಯಾನದ ಬಗ್ಗೆ ನನಗೆ ಅಭಿಪ್ರಾಯ ವ್ಯತ್ಯಾಸಗಳಿದ್ದರೂ ಅದು ಇಲ್ಲಿ ವಿಷಯವೆನಿಸುವುದಿಲ್ಲ. ಪ್ರಾಯೋಗಿಕ ಜೀವನಕ್ಕೆ ನಿಕಟವಾಗಿ ಸಂಬಂಧಿಸಿದ ಅನೇಕ ಹದೀಸ್‌ಗಳನ್ನು ಗ್ರಂಥಕರ್ತರು ಈ ಪುಸ್ತಕದಲ್ಲಿ ಸಂಗ್ರಹಿಸಿದ್ದಾರೆ. ಕುರ್‌ಆನ್ ಮತ್ತು ಸುನ್ನತ್‌ನ ಬೆಳಕಿನಲ್ಲಿ ಅದರ ಅಮೂಲ್ಯ ಅರ್ಥ ಮತ್ತು ಉದ್ದೇಶದ ಆಳದೆಡೆಗೆ ಇಳಿಯಲು ಅವರು ನಡೆಸಿದ ಪರಿಶ್ರಮ ಸಫಲವಾಗಿದೆ. ಇಸ್ಲಾಮೀ ಸಂಸ್ಕೃತಿಯನ್ನು ಕಲಿಯಲು, ಪಸರಿಸಲು ಬಯಸುವವರಿಗೆ ಅಗತ್ಯವಾದ ಬೆಳಕು ನೀಡುವ ಸಾಮರ್ಥ್ಯವನ್ನು ಈ ಪುಸ್ತಕ ಹೊಂದಿದೆ ಎಂಬ ವಿಷಯದಲ್ಲಿ ಸಂದೇಹವಿಲ್ಲ.

ಟಿ.ಕೆ. ಉಬೈದ್

ಅನುಕ್ರಮಣಿಕೆ

ಸಂಬಂಧಗಳು

ಸ್ವಭಾವ ಸಂಸ್ಕರಣೆ

ಆರ್ಥಿಕ ಸಂಸ್ಕರಣೆ

1. ಮರಣಕ್ಕೆ ಬೇಕಾದ ಸಿದ್ಧತೆ

عَنْ الْبَرَّاءِ بْنِ عَازِبٍ رَضِيَ اللّٰهُ عَنْهُ قَالَ : بَيْنَمَا مَعَ رَسُوْلُ اللّٰهِ ﷺ إِذْ بَصَرَ بِجَمَاعَةٍ فَقَالَ : عَلَامَ اجْتَمَعَ عَلَيْهِ هٰؤُلَاءِ ؟ قِيْلَ : عَلٰى قَبْرٍ يَحْفِرُوْنَهُ ، فَفَزَعَ رَسُوْلُ اللّٰهِ ﷺ، فَبَدَرَ بَيْنَ يَدَىْ أَصْحَابِهِ مُسْرِعاً حَتّٰى انْتَهٰى إِلَى الْقَبْرِ ، فَجَثَا عَلَيْهِ، فَبَكٰى حَتّٰى بَلَّ الثَّرٰى مِنْ دُمُوْعِهِ، ثُمَّ أَقْبَلَ عَلَيْنَا، قَالَ : أَىْ إِخْوَانِىْ ، لِمِثْلِ الْيَوْمِ فَاَعِدُّوْا

ಬರ್ರಾ ಇಬ್ನು ಆಝಿಬ್(ರ) ವರದಿ ಮಾಡುತ್ತಾರೆ: ನಾವು ಅಲ್ಲಾಹನ ಪ್ರವಾದಿಯ ಜೊತೆ ನಡೆಯುತ್ತಿದ್ದೆವು, ಆಗ ಜನರ ಒಂದು ಗುಂಪು ಕಾಣಿಸಿತು, ಪ್ರವಾದಿ(ಸ) ಪ್ರಶ್ನಿಸಿದರು: ಜನರೇಕೆ ಅಲ್ಲಿ ಗುಂಪು ಸೇರಿದ್ದಾರೆ? ಒಬ್ಬರು ಹೇಳಿದರು ಅವರು ಒಂದು ಕಬರ್ ಸಿದ್ದಪಡಿಸುತಿದ್ದಾರೆ ಇದನ್ನು ಆಲಿಸಿದ ಪ್ರವಾದಿಯವರು(ಸ) ವಿಚಲಿತರಾದರು, ಅನುಚರರಿಗಿಂತ ವೇಗವಾಗಿ ಅವರು ಆ ಸ್ಥಳವನ್ನು ತಲುಪಿದರು. ಕಬರಿನ ಸಮೀಪ ಮೊಣಕಾಲೂರಿದರು, ಕೆಳಗಿನ ಮಣ್ಣು ಒದ್ದೆಯಾಗುವವರೆಗೆ ಕಣ್ಣೀರು ಹಾಕಿದರು. ಆ ಬಳಿಕ ನಮ್ಮ ಬಳಿಗೆ ತಿರುಗಿ ಹೀಗೆಂದರು: ಸಹೋದರರೇ ಈ ರೀತಿಯ ಒಂದು ದಿನವನ್ನು ಎದುರಿಸಲು ನೀವು ಸಿದ್ದತೆಯನ್ನು ನಡೆಸಿರಿ.*

ಮರಣವು ಒಂದು ಅನಿವಾರ್ಯ ವಾಸ್ತವಿಕತೆಯಾಗಿದೆ. ಬಯಸಿದರೂ ಬಯ

* ಇಮಾಮ್ ಬುಖಾರಿ-ಅತ್ತಾರಿಖ್, ಇಬ್ನುಮಾಜ -ಸುನನ್ 4195, ಅಹ್ಮದ್ ಮಸ್ನದ್ 4/294 ಮುಂತಾದವರು ಈ ಪ್ರವಾದಿ ವಚನವನ್ನು ಉಲ್ಲೇಖಿಸಿರುವರು . ಇದರ ಪರಂಪರೆ ಹಸನ್ ಆಗಿರುವರೆಂದು ಪ್ರಮುಖ ಹದೀಸ್ ಪಂಡಿತರಾದ ನಾಸೀರುದ್ದೀನ್ ಅಲ್ಬಾನಿ ಅಭಿಪ್ರಾಯ ಪಟ್ಟಿರುತ್ತಾರೆ.

ಸದೇ ಇದ್ದರೂ ಎಲ್ಲರೂ ಒಂದು ದಿನ ಮರಣ ಹೊಂದುತ್ತಾರೆ. ಮರಣವು ಯಾರ ಅನುಮತಿಗೂ ಕಾಯುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಮರಣವು ಅನಿರೀಕ್ಷಿತವಾಗಿ ಬಂದು ಬಿಡುತ್ತದೆ. ಮರಣವನ್ನು ಕಣ್ಣ ಮುಂದೆ ಕಾಣುವುದಕ್ಕೆ ಮುಂಚಿತವಾಗಿ ನಮ್ಮ ಜೀವನವನ್ನು ಸತ್ಕರ್ಮಗಳಿಂದ ಪಾವನಗೊಳಿಸಬೇಕು ಎಂಬುದನ್ನು ಈ ಹದೀಸ್ ನಮಗೆ ನೆನಪಿಸುತ್ತದೆ.

ಜೀವನವು ಮರಣದೊಂದಿಗೆ ಕೊನೆಗೊಳ್ಳುವುದಿಲ್ಲ. ಮರಣವು ಚಿಂತನಾರ್ಹ ವಾದ, ಅಪರಿಚಿತವಾದ ಒಂದು ಲೋಕಕ್ಕೆ ತೆರಳಲಿಕ್ಕಿರುವ ದ್ವಾರವಾಗಿದೆ. ಆದ್ದರಿಂದ ಮರಣ ಎಂಬುದು ಬಹಳ ಮಹತ್ವವುಳ್ಳ, ಹೆಚ್ಚು ಗಮನವನ್ನು ಬಯಸುವ ವಿಷಯ ವಾಗಿದೆ. ಮರಣವನ್ನು ನೆನಪಿಸುವ ಮೂಲಕ ವ್ಯಕ್ತಿಯು ತನ್ನನ್ನೇ ನೆನಪಿಸಿಕೊಳ್ಳುತ್ತಾನೆ ಮತ್ತು ಅದನ್ನು ಮರೆತು ಬಿಡುವುದು ಸ್ವಅಸ್ತಿತ್ವವನ್ನು ಮರೆತು ಬಿಡುವುದಕ್ಕೆ ಸಮಾನ ವಾಗಿದೆ.

أَكْثِرُوْا ذِكْرَ هَادِمِ اللَّذَاتِ الْمَوْتَ، فَإِنَّهُ مَا ذَكَرَهُ أَحَدٌ فِي ضِيْقٍ إِلَّا وَسْعَهُ، وَلَا ذَكَرَهُ فِي سَعَةٍ إِلَّا ضَيَّقَهَا عَلَيْهِ

ಪ್ರವಾದಿ ಮುಹಮ್ಮದ್(ಸ) ಹೇಳಿರುವರು: ಎಲ್ಲಾ ಸುಖ ಭೋಗಗಳನ್ನು ಅಂತ್ಯ ಗೊಳಿಸುವ ಮರಣವನ್ನು ನೀವು ಧಾರಾಳವಾಗಿ ಸ್ಮರಿಸಿರಿ. ಸಂಕಷ್ಟದ ಸಮಯದಲ್ಲಿ ಒಬ್ಬನು ಮರಣವನ್ನು ನೆನಪಿಸಿದಾಗ ಅವನಿಗೆ ತನ್ನ ಜೀವನವು ವಿಶಾಲವಾದುದೆಂದು ಅರಿವಾಗುತ್ತದೆ. ಸುಖ-ಸಂತೋಷದ ಸಮಯದಲ್ಲಿ ಒಬ್ಬ ವ್ಯಕ್ತಿ ಮರಣವನ್ನು ನೆನಪಿಸಿದಾಗ ಅವನಿಗೆ ಜೀವನವು ಬಹಳ ಕಠಿಣವೆಂದು ಮನವರಿಕೆಯಾಗುತ್ತದೆ.[1]

ಒಮ್ಮೆ ಓರ್ವ ವ್ಯಕ್ತಿ ಪ್ರವಾದಿಯವರೊಡನೆ(ಸ) ಈ ರೀತಿ ಪ್ರಶ್ನಿಸಿದರು, يَا نَبِيَّ اللهِ ، مَنْ أَكْيَسُ النَّاسِ وَأَحْزَمُ النَّاسِ ؟ 'ಅಲ್ಲಾಹನ ಪ್ರವಾದಿಗಳೇ! ಜನರ ಪೈಕಿ ಅತ್ಯಂತ ಬುದ್ಧಿವಂತರು ಮತ್ತು ವಿವೇಕಶಾಲಿಗಳು ಯಾರು?' ಪ್ರವಾದಿ(ಸ) ಹೇಳಿದರು,

أَكْثَرُهُمْ ذِكْرًا لِلْمَوْتِ وَأَكْثَرُهُمْ اسْتَعْدَادًا لِلْمَوْتِ أُوْلَئِكَ الْأَكْيَاس ذَهَبُوْا بِشَرَفِ الدُّنْيَا، وَكَرَامَة الْآخِرَةِ

'ಧಾರಳವಾಗಿ ಮರಣವನ್ನು ನೆನಪಿಸುತ್ತಾ ಅದಕ್ಕಾಗಿ ತಯಾರಿಯನ್ನು ನಡೆಸುವ ವರೇ ಅತ್ಯಂತ ಹೆಚ್ಚು ಬುದ್ಧಿವಂತರು, ಜಗತ್ತಿನಲ್ಲಿಯೂ ಅವರು ಹೆಚ್ಚು ಗೌರವಾರ್ಹ ರಾಗಿರುತ್ತಾರೆ ಮತ್ತು ಪರಲೋಕದಲ್ಲಿಯೂ ಅವರು ವಿಜಯಿಗಳಾಗುತ್ತಾರೆ.[2]

ದೇಹೇಚ್ಛೆಗಳಿಂದ ಶೈತಾನನ ಪ್ರಚೋದನೆಗಳಿಂದ ಪಾರಾಗಲಿಕ್ಕಿರುವ ಅತ್ಯುತ್ತಮ ಮಾರ್ಗ ಮರಣದ ಕುರಿತು ಚಿಂತಿಸುವುದಾಗಿದೆ. ಮರಣದ ನೆನಪು ಕೆಡುಕುಗಳಿಂದ ದೂರ ಉಳಿಯಲು ಬಹಳ ಸಮರ್ಥ ಪ್ರೇರಣೆ ಮತ್ತು ಪ್ರಚೋದನೆಯನ್ನು ನೀಡುತ್ತದೆ. ಮರಣದಷ್ಟು ಪರಿಣಾಮಕಾರಿಯಾದ ಬೇರೆ ಉಪದೇಶ ನೀಡಲು ಮರಣವೇ ಸಾಕು.[3]

ಅಬೂ ಹುರೈರಾ(ರ) ವರದಿ ಮಾಡಿರುವ ಪ್ರವಾದಿವಚನವೊಂದು ಹೀಗಿದೆ:

أَكْثِرُوا ذِكْرَ الْمَوْتِ ، فَمَا مِنْ عَبْدٍ أَكْثَرَ مِنْ ذِكْرِهِ إِلَّا أَحْيَا اللهُ قَلْبَهِ وَهَوَّنَ عَلَيْهِ الْمَوْتَ

ನೀವು ಮರಣವನ್ನು ಸ್ಮರಿಸಿದಾಗ ಅಲ್ಲಾಹನು ಅವನ ಹೃದಯವನ್ನು ಜಾಗೃತ ಗೊಳಿಸುತ್ತಾನೆ ಮತ್ತು ಮರಣವು ಅವನ ಪಾಲಿಗೆ ಬಹಳ ಸುಲಭವೆನಿಸುವುದು.[4]

ಹೃದಯದ ಕಠಿಣತೆ ಮತ್ತು ವಿಶ್ವಾಸದಲ್ಲಿ ದೌರ್ಬಲ್ಯವಿದೆಯೆಂದು ದೂರು ಹೇಳಲು ಬಂದ ಮಹಿಳೆಯೊಂದಿಗೆ ಹ. ಆಯಿಶಾ(ರ) ಈ ರೀತಿ ಹೇಳಿದರು, أَكْثِرِي ذِكْرَ الْمَوْتِ ، يَرُقُّ قَلْبُكِ 'ಮರಣವನ್ನು ಅತಿಹೆಚ್ಚಾಗಿ ಸ್ಮರಿಸಿರಿ. ಆಗ ಹೃದಯವು ನಿರ್ಮಲವಾಗುತ್ತದೆ.' ಸಫಿಯ್ಯ(ರ) ಹೇಳುತ್ತಾರೆ ಆ ಮಹಿಳೆ ಆಯಿಶಾ ಹೇಳಿದಂತೆ ಮಾಡಿದಾಗ ಅವರ ಹೃದಯವು ಉತ್ತಮವಾಯಿತು. ಬಳಿಕ ಆಯಿಶಾ(ರ)ರ ಬಳಿ ಬಂದು ಆ ಮಹಿಳೆ ಕೃತಜ್ಞತೆ ಸಲ್ಲಿಸಿದರು.

ಮರಣ ಹೊಂದಿದವನ್ನು ಸ್ಮರಿಸುವುದು, ಮರಣ ಸನ್ನದ್ಧರಾದವರ ಶುಶ್ರೂಷೆ ಮಾಡುವುದು, ಕಬರ್ ಸಂದರ್ಶಿಸುವುದು - ಇವುಗಳ ಮೂಲಕ ಮರಣ ಮತ್ತು ಪರಲೋಕದ ಬಗ್ಗೆ ನೆನಪು ಸಜೀವವಾಗಿರುವುದು. ಕಬರ್‌ಗಳನ್ನು ಸಂದರ್ಶಿಸಬೇಕು ಮತ್ತು ಆ ಮೂಲಕ ಪರಲೋಕ ಜೀವನದ ಕುರಿತು ಚಿಂತಿಸಬೇಕೆಂದು ಪ್ರವಾದಿ(ಸ)ಯವರು ಸತ್ಯವಿಶ್ವಾಸಿಗಳೊಂದಿಗೆ ಆದೇಶಿಸಿದ್ದಾರೆ.

ಒಮ್ಮೆ ಪ್ರವಾದಿ(ಸ) ಅಬೂಗಿಫ್ಫಾರಿಯವರೊಂದಿಗೆ ಈ ರೀತಿ ಆದೇಶಿಸಿದರು:

زُرِ الْقُبُورَ تَذْكُرْ بِهَا الآخِرَةَ، وَاغْسِلِ الْمَوْتَى فَإِنَّ مُعَالَجَةَ جَسَدٍ خَاوٍ مَوْعِظَةٌ بَلِيْغَةٌ ، وَصَلِّ عَلَى الْجَنَائِزِ لَعَلَّ ذَلِكَ أَنْ يُحْزِنَكَ ، فَإِنَّ الْحَزِيْنَ فِي ظِلِّ اللهِ يَتَعَرَّضُ كُلَّ خَيْرٍ

ನೀನು ಕಬರ್ ಸಂದರ್ಶಿಸಬೇಕು, ಅದು ನಿನ್ನಲ್ಲಿ ಪರಲೋಕದ ನೆನಪನ್ನುಂಟು ಮಾಡುತ್ತದೆ. ಮರಣ ಹೊಂದಿದವರ ಸ್ನಾನ ಮಾಡಿಸಬೇಕು; ಜೀವವಿಲ್ಲದ ಒಂದು

ಶರೀರವನ್ನು ಉಪಚರಿಸುವುದು ಪ್ರಮುಖ ಉದ್ಯೋದೆಯಾಗಿದೆ, ನೀನು ಜನಾಝ ನಮಾಝನ್ನು ನಿರ್ವಹಿಸಬೇಕು; ಅದು ನಿನ್ನನ್ನು ದುಃಖಕ್ಕೀಡುಮಾಡಬಹುದು. ಆದರೆ ದುಃಖಿತರಿಗೆ ಅಂತ್ಯ ದಿನದಂದು ಅಲ್ಲಾಹನ ನೆರಳು ಸಿಗುವುದು ಮತ್ತು ಎಲ್ಲಾ ಒಳಿತು ಗಳು ಅವನ ಮುಂದೆ ಪ್ರದರ್ಶಿಸಲ್ಪಡುವುದು.

ರಬೀಅ ಬಿನ್ ಖೈಸಮ್(ರ) ಎಂಬೋರ್ವ ವಿದ್ವಾಂಸರು ತಮ್ಮ ಮನೆ ಯಲ್ಲಿಯೇ ಒಂದು ಗೋರಿಯನ್ನು ಸಿದ್ದಪಡಿಸಿಟ್ಟುಕೊಂಡಿದ್ದರು. ಎಲ್ಲರೂ ಈ ಬಗ್ಗೆ ಮಾತನಾಡಲು ಆರಂಭಿಸಿದಾಗ ಅವರು ಹೀಗೆ ಉತ್ತರಿಸಿದರು: ಮರಣದ ಕುರಿತು ನನಗೆ ಮರೆತು ಹೋಗಬಹುದೆಂದು ಭಯವಾಯಿತು. ಮರಣವನ್ನು ಸ್ಮರಿಸದ ಹೃದಯವು ನಷ್ಟದಲ್ಲಿರುವುದು.

ಅಬೂಹುರೈರಾ (ರ) ವರದಿ ಮಾಡಿರುವ ಪ್ರವಾದಿ ವಚನವು ಈ ರೀತಿ ಇದೆ:

لَوْ يَعْلَمُ الْمَرْءُ مَا يَأْتِيهِ بَعْدَ الْمَوْتِ ، مَا أَكَلَ أَكْلَةً وَلَا شَرِبَ شُرْبَةً إِلَّا وَهُوَ يَبْكِي وَيَضْرِبُ عَلَى صَدْرِهِ

ಮರಣಾನಂತರ ಏನೆಲ್ಲಾ ಸಂಭವಿಸಲಿಕ್ಕಿದೆ ಎಂಬುದರ ಕುರಿತು ಮನುಷ್ಯ ಅರಿತಿದ್ದರೆ, ಆಹಾರ ಸೇವಿಸುತ್ತಿರಲಿಲ್ಲ, ನೀರು ಕುಡಿಯುತ್ತಿರಲಿಲ್ಲ, ಲೌಕಿಕವಾದ ಎಲ್ಲಾ ಕೆಲಸಗಳಿಂದಲೂ ದೂರವುಳಿದು ಎದೆ ಬಡಿಯುತ್ತಾ ವಿಲಾಪಿಸುವುದರ ಹೊರತು ಬೇರೇನೂ ಮಾಡುತ್ತಿರಲಿಲ್ಲ.

---

1. ಇಬ್ನು ಹಿಬ್ಬಾನ್ 2993
2. ಇಬ್ನುಮಾಜ - 4259, ಬೈಹಕಿ - ಶುಹಾನಬುಲ್ ಈಮಾನ್ 7993, 10550
3. ಬೈಹಕಿ - ಶುಹಬುಲ್ ಈಮಾನ್, ತಬ್ರಾನಿ, ಹೈಥಮಿ - ಮಜ್ಮವುಸ್ಸವಾಇದ್ 10/308
4. ದೈಲಮಿ - ಮುಸ್ನದುಲ್ ಫಿರ್ದೌಸ್
5. ಇಬ್ನು ಅಬಿದುನ್‌ಯಾ - ಕಿತಾಬುಲ್ ಮೌತ್
6. ಹಾಕಿಮ್ 4/ 330
7. ಇಬ್ನು ಅಬಿದ್ದುನ್‌ಯಾ - ಕಿತಾಬುಲ್ ಮೌತ್
8. ತಬ್ರಾನಿ, ಸಗೀರ್ ಔಸತ್

ಲಲ

2. ಮೂವರು ಗೆಳೆಯರು

عَنْ أَبِي هُرَيْرَةَ رَضِيَ اللَّهُ عَنْهُ أَنَّ رَسُولَ اللَّهِ ﷺ قَالَ : مَثَلُ ابْنِ آدَمَ وَمَالِهِ وَأَهْلِهِ وَعَمَلِهِ كَرَجُلٍ لَهُ ثَلَاثَةُ إِخْوَةٍ ، أَوْ ثَلَاثَةُ أَصْحَابٍ ، فَقَالَ أَحَدُهُمْ : أَنَا مَعَكَ حَيَاتَكَ ، فَإِذَا مِتَّ فَلَسْتُ مِنْكَ وَلَسْتَ مِنِّي ، وَقَالَ الآخَرُ : أَنَا مَعَكَ ، فَإِذَا بَلَغْتَ تِلْكَ الشَّجَرَةَ فَلَسْتُ مِنْكَ وَلَسْتَ مِنِّي ، وَقَالَ الآخَرُ : أَنَا مَعَكَ حَيًّا وَمَيِّتاً

ಅಬೂ ಹುರೈರಾ(ರ)ರಿಂದ ವರದಿ. ಪ್ರವಾದಿವರ್ಯರು(ಸ) ಹೇಳಿದರು: ಮನುಷ್ಯನ ಸಂಪತ್ತು ಕುಟುಂಬ ಕರ್ಮಗಳ ಉದಾಹರಣೆಯು ಮೂವರು ಸಹೋದರರು ಅಥವಾ ಗೆಳೆಯರು ಇರುವ ವ್ಯಕ್ತಿಯಂತಿದೆ. ಅವರ ಪೈಕಿ ಒಬ್ಬ ಹೇಳಿದ, ನಾನು ಜೀವನದಲ್ಲಿ ನಿನ್ನ ಜೊತೆಗಿರುತ್ತೇನೆ. ಆದರೆ ನೀನು ಮರಣ ಹೊಂದಿದ ಕೂಡಲೇ ನಮ್ಮ ಮಧ್ಯೆ ಇರುವ ಎಲ್ಲ ಸಂಬಂಧಗಳೂ ಕಳಚಿಕೊಳ್ಳುವುದು. ಎರಡನೆಯವನು ಹೇಳಿದ, ನಾನು ನಿನ್ನ ಜೊತೆಗಿರುತ್ತೇನೆ. ಆದರೆ ಮರಣದ ಬಳಿ ತಲುಪಿದ ಮೇಲೆ ನನಗೆ ನಿನ್ನೊಂದಿಗೆ ಯಾವ ಸಂಬಂಧವು ಇಲ್ಲ. ಮೂರನೆಯವನು ಹೇಳಿದ, ನೀನು ಜೀವಂತವಿರುವಾಗಲೂ ಮರಣ ಹೊಂದಿದ ಬಳಿಕವೂ ಸದಾ ನಿನ್ನ ಜೊತೆಗಿರುತ್ತೇನೆ.*

ಲೌಕಿಕ ಜೀವನದಲ್ಲಿ ಮನುಷ್ಯನು ಎಸಗುವ ಕರ್ಮಗಳು, ಅವನ ಕುಟುಂಬ

* ಬಸ್ಸಾರ್ 3228. ತಬ್ರಾನಿ ಮುಂತಾದವರು ಉಲ್ಲೇಖಿಸಿರುವ ಈ ಹದೀಸಿನ ಪರಂಪರೆಯ ಪ್ರಬಲವಾಗಿದೆಯೆಂದು ಪ್ರಮುಖ ಹದೀಸ್ ಪಂಡಿತರಾದ ಹಾಫೀಝ್ ಹೈತಮಿ ಸಾಕ್ಷ್ಯ ನುಡಿದಿದ್ದಾರೆ. (ಮಜ್ಮುಉಸ್ಸವಾಇದ್, ಭಾಗ 10: ಪುಟ: 252)

ಮತ್ತು ಸಂಪತ್ತು ಇವು ಮೂರರ ವಾಸ್ತವಿಕತೆಯನ್ನು ಈ ಪ್ರವಾದಿ ವಚನವು ಸ್ಪಷ್ಟಪಡಿಸುತ್ತದೆ. ಮನುಷ್ಯನಿಗೆ ಹೆಚ್ಚು ಉಪಕಾರ ಮಾಡುವ ಐಹಿಕ ಸಾಮಗ್ರಿಗಳಲ್ಲಿ ಸಂಪತ್ತು ಕೂಡ ಬಹಳ ಪ್ರಮುಖವಾದುದಾಗಿದೆ. ಜೀವನದ ಅವಶ್ಯಕತೆಗಳನ್ನು ಪೂರ್ತೀಕರಿಸಲು ಮತ್ತು ನೆಮ್ಮದಿಯೊಂದಿಗೆ ಜೀವಿಸಲು ಇತರ ಅನೇಕ ವಿಷಯಗಳು ಅಗತ್ಯ ಬೀಳುವಂತೆ, ಸಂಪತ್ತು ಕೂಡ ಬಹಳ ಮುಖ್ಯವಾದುದಾಗಿದೆ. ದಾರಿದ್ರ್ಯ ಮತ್ತು ಸಂಕಷ್ಟಗಳು ಜೀವನವನ್ನು ಸಂಕಷ್ಟಮಯಗೊಳಿಸುತ್ತದೆ ಮತ್ತು ಸಮಸ್ಯೆಗಳಲ್ಲಿ ಸಿಲುಕಿಸುತ್ತದೆ. ಆದರೆ ಮನುಷ್ಯನ ಸಮಸ್ಯೆಗಳನ್ನು ಸರಳಗೊಳಿಸುತ್ತದೆ, ಅವನ ಐಹಿಕ ಜೀವನವನ್ನು ಸುಗಮಗೊಳಿಸುತ್ತದೆ.

ಸಂಘ ಜೀವಿಯಾದ ಮನುಷ್ಯನಿಗೆ ಸಂಪತ್ತಿನಷ್ಟೇ ಅಗತ್ಯವಿರುವ ಇನ್ನೊಂದು ವಿಷಯ ಕುಟುಂಬವಾಗಿದೆ. ಜೀವನವನ್ನು ಬೆಳಗಿಳಿಸುವುದರಲ್ಲೋ ಉನ್ನತಿಗೇರಿಸುವುದರಲ್ಲೋ ಕುಟುಂಬದ ಪಾತ್ರ ಬಹಳ ಪ್ರಮುಖವಾಗಿದೆ. ಜನನದಿಂದ ಮರಣದ ವರೆಗೆ ಜೀವನದ ಪ್ರತಿ ಹಂತದಲ್ಲೂ ವ್ಯಕ್ತಿಯೊಂದಿಗೆ ಅವನ ಕುಟುಂಬದ ಬೆಂಬಲ ಮತ್ತು ಸಹಾಯವಿಲ್ಲದೆ ಯಾರಿಗೂ ಮುಂದೆ ಬರಲು ಸಾಧ್ಯವಿಲ್ಲ.

ಆದರೆ ಈ ಎರಡು ಅನುಗ್ರಹಗಳಿಗೆ ಕೆಲವು ಕೊರತೆಗಳಿವೆ ಮತ್ತು ಇತಿಮಿತಿಗಳಿವೆ. ಇವೆರಡರ ಪ್ರಯೋಜನ ಕೇವಲ ಇಹಲೋಕ ಜೀವನಕ್ಕೆ ಸೀಮಿತವಾಗಿದೆ. ಪರಲೋಕದಲ್ಲಿ ಇವುಗಳಿಂದ ಯಾವುದೇ ಸಹಾಯ ಸಿಗಲಾರದು. ಕುಟುಂಬ, ಗೆಳೆಯರು ಮತ್ತು ಸಂಪತ್ತು ಕೇವಲ ಇಹಲೋಕದಲ್ಲಿ ಮಾತ್ರ ಪ್ರಯೋಜನ ಪಡೆಯಬಲ್ಲರು. ಮರಣದೊಂದಿಗೆ ಇವುಗಳ ಜೊತೆಗಿರುವ ಮನುಷ್ಯನ ಸಂಬಂಧವು ಕಳಚಿ ಬಿಡುತ್ತದೆ. ಎಷ್ಟು ಪ್ರೀತಿಪಾತ್ರರಾದರೂ ಮರಣದೊಂದಿಗೆ ಬೇರ್ಪಡಲು ನಿರ್ಬಂಧಿತರಾಗುತ್ತಾರೆ; ಆದರೆ ಎಂದೂ ಮನುಷ್ಯನನ್ನು ಬಿಟ್ಟು ಅಗಲದೆ ಸದಾ ಅವನ ಜೊತೆಗೆ ನಿಲ್ಲುವ ಗೆಳೆಯರಿದ್ದಾರೆ. ಇಹಲೋಕ ಜೀವನದಲ್ಲಿ ಪ್ರತಿಯೊಬ್ಬ ವ್ಯಕ್ತಿ ಮಾಡುವ ಸತ್ಕರ್ಮ-ದುಷ್ಕರ್ಮಗಳೇ ಆ ಗೆಳೆಯರು. ಇವುಗಳ ಜೊತೆಗಿರುವ ಸಂಬಂಧವು ಸಂಪತ್ತು ಮತ್ತು ಕುಟುಂಬ ಸಂಬಂಧದಂತೆ ಇಹಲೋಕದಲ್ಲೇ ಕೊನೆಗೊಳ್ಳುವುದಿಲ್ಲ. ಜೀವನದಲ್ಲಿಯೂ ಮರಣಾನಂತರವೂ ಅದು ಮನುಷ್ಯನ ಜೊತೆಗಿರುತ್ತದೆ. ಮಾತ್ರವಲ್ಲ ಮನುಷ್ಯ ಮತ್ತು ಅವನ ಕರ್ಮಗಳ ಜೊತೆಗಿನ ಯಥಾರ್ಥ ಸಂಬಂಧ ಆರಂಭವಾಗುವುದು ಮರಣದೊಂದಿಗಾಗಿರುತ್ತದೆ. ಪ್ರವಾದಿ ಮುಹಮ್ಮದ್(ಸ) ಹೇಳಿರುವರು:

يَتْبَعُ الْمَيِّتَ ثَلاَثٌ: أَهْلُهُ وَمَالُهُ وَعَمَلُهُ، فَيَرْجِعُ اثْنَانِ وَيَبْقَى وَاحِدٌ، يَرْجِعُ أَهْلُهُ وَمَالُهُ، وَيَبْقَى عَمَلُهُ

ಮರಣ ಹೊಂದಿದ ಎಲ್ಲ ವ್ಯಕ್ತಿಗಳನ್ನು ಮೂರು ವಸ್ತುಗಳು ಹಿಂಬಾಲಿಸುತ್ತವೆ, ಕುಟುಂಬ ಸಂಪತ್ತು ಮತ್ತು ಕರ್ಮಗಳು ಇವುಗಳ ಪೈಕಿ ಎರಡು ಹಿಂದಿರುಗುತ್ತವೆ. ಒಂದು ಅವನ ಜೊತೆಗೇ ಉಳಿಯುತ್ತದೆ. ಕುಟುಂಬ, ಸಂಪತ್ತು ಮರಳುತ್ತದೆ. ಕರ್ಮಗಳು ಅವನ ಜೊತೆಗೆ ಉಳಿಯುತ್ತದೆ.[1]

ಇಹಲೋಕದಲ್ಲಿ ಮನುಷ್ಯನು ಮಾಡಿದ ಎಲ್ಲ ಕರ್ಮಗಳು ಮರಣಾನಂತರ ಅವನ ಮುಂದೆ ಪ್ರತ್ಯಕ್ಷ ಕಾಣಿಸಿಕೊಳ್ಳಲಾರಂಭಿಸುತ್ತದೆ. ಅದುವರೆಗೆ ಮರೆಯಲ್ಲಿದ್ದ ಅವನ ಕರ್ಮಗಳು ಅವರು ಮರಣ ಹೊಂದಿದ ಕೂಡಲೇ ಅವನನ್ನು ಸಂತೋಷ ಪಡಿಸುವ ಅಥವಾ ಹೆದರಿಸುವ ಗೆಳೆಯನಾಗಿ ಮಾರ್ಪಡುವುದು ಇಮಾಮ್ ಅಹ್ಮದ್ ರವರು ಬರ್ರಾಅ್ ಆಸಿಬ್(ರ) ವರದಿ ಮಾಡಿರುವ ಒಂದು ಸುದೀರ್ಘ ಪ್ರವಾದಿವಚನ ವನ್ನು ಈ ರೀತಿ ಉಲ್ಲೇಖಿಸಿರುವರು:

وَيَأْتِيهِ رَجُلٌ حَسَنُ الْوَجْهِ، حَسَنُ الثِّيَابِ، طَيِّبُ الرِّيحِ فَيَقُولُ: أَبْشِرْ بِالَّذِي يَسُرُّكَ، هَذَا يَوْمُكَ الَّذِي كُنتَ تُوعَدُ، فَيَقُولُ مَنْ أَنْتَ؟ فَوَجْهُكَ الْوَجْهُ الْحَسَنُ يَجِيءُ بِالْخَيْرِ! فَيَقُولُ: أَنَا عَمَلُكَ الصَّالِحُ! فَيَقُولُ: رَبِّ، أَقِمِ السَّاعَةَ، حَتَّى أَرْجِعَ إِلَى أَهْلِي وَمَالِي.... وَيَأْتِيهِ رَجُلٌ، قَبِيحُ الْوَجْهِ، قَبِيحُ الثِّيَابِ، مُنْتِنُ الرِّيحِ، فَيَقُولُ: أَبْشِرْ بِالَّذِي يَسُوءُكَ، هَذَا يَوْمُكَ الَّذِي كُنْتَ تُوعَدُ، فَيَقُولُ: مَنْ أَنْتَ؟ فَوَجْهُكَ الْوَجْهُ الْقَبِيحُ يَجِيءُ بِالشَّرِّ! فَيَقُولُ: أَنَا عَمَلُكَ الْخَبِيثُ، فَيَقُولُ: رَبِّ، لَا تُقِمِ السَّاعَةَ!

ಸತ್ಯವಿಶ್ವಾಸಿಯಾದ ಒಬ್ಬ ವ್ಯಕ್ತಿಯ ಆತ್ಮವು ಗೋರಿಯನ್ನು ತಲುಪಿದ ಕೂಡಲೇ ಚೆನ್ನಾಗಿ ವಸ್ತ್ರ ಧರಿಸಿದ ಸುಂದರ ವದನವುಳ್ಳ ಓರ್ವವ್ಯಕ್ತಿ ಸುಗಂಧಭರಿತನಾಗಿ ಅವನ ಬಳಿ ಹಾದು ಬರುತ್ತಾನೆ. ಅವನು ಹೇಳುತ್ತಾನೆ: ಸಂತೋಷದಿಂದಿರು. ಆನಂದವನ್ನು ನೀಡುವಂತಹ ಎಲ್ಲ ವಸ್ತುಗಳು ನಿನಗಾಗಿ ಸಜ್ಜೀಕರಿಸಲ್ಪಟ್ಟಿವೆ. ವಾಗ್ದಾನ ಮಾಡಲಾಗಿ ರುವ ದಿನವಿದು. ಸತ್ಯವಿಶ್ವಾಸಿ ಪ್ರಶ್ನಿಸುವನು: ತಾವು ಯಾರು? ಮನೋಹರವಾದ ನಿಮ್ಮ ಮುಖವನ್ನು ನೋಡುವಾಗಲೇ ಬಹಳ ಸಂತೋಷವಾಗುತಿದೆ. ಆಗ ವ್ಯಕ್ತಿ ಹೇಳುವನು: ನಾನು ನಿನ್ನ ಸತ್ಕರ್ಮಗಳಾಗಿದ್ದೇನೆ. ಆಗ ಸತ್ಯವಿಶ್ವಾಸಿ ಈ ರೀತಿ ಹೇಳು ವನು: ಆ ಕಿಯಾಮತ್ ದಿನವನ್ನು ಸ್ವಲ್ಪ ಶೀಘ್ರಗೊಳಿಸು ಹಾಗಾದರೆ ನನ್ನ ಕುಟುಂಬ ದೊಡನೆ ಮರಳಿ ಸೇರಿ ಸುಖಿಸಬಹುದಲ್ಲವೇ? ಆದರೆ ಸತ್ಯನಿಷೇದಿಗಳ ಆತ್ಮವು ಗೋರಿಯನ್ನು ತಲುಪಿದಾಗ ಕೊಳೆಯಾದ ವಸ್ತ್ರವನ್ನು ಧರಿಸಿದ ವಿರೂಪನಾದ ಓರ್ವ

ವ್ಯಕ್ತಿ ದುರ್ಗಂಧಭರಿತನಾಗಿ ಘೋರಿಯನ್ನು ಪ್ರವೇಶಿಸುವನು. ಅವನು ಹೇಳುವನು: ನೀನು ನಾಶವಾಗು! ನಿನಗೆ ವಾಗ್ದಾನ ಮಾಡಲಾಗಿರುವ ದಿನವಿದು. ಸತ್ಯನಿಷೇಧಿ ಕೇಳುವನು: ನೀನು ಯಾರು? ನಿನ್ನ ವಿರೂಪವಾದ ಮುಖವನ್ನು ನೋಡುವುದೇ ಕಷ್ಟ. ಆಗ ಅವನು ಹೇಳುವನು: ನಾನು ನಿನ್ನ ದುಷ್ಕರ್ಮಗಳು. ಆಗ ಸತ್ಯನಿಷೇಧಿ ವಿಲಾಪಿಸುತ್ತಾ: ನನ್ನ ಪ್ರಭು ಆ ದಿನವು ಬಾರದೇ ಇರುತಿದ್ದರೆ ಎಷ್ಟು ಚೆನ್ನಾಗಿರುತಿತ್ತು ಎನ್ನುವನು.[2]

ಈ ಮೇಲೆ ಪ್ರಸ್ತಾಪಿಸಲಾಗಿರುವ ಗಂಭೀರವಾದ ವಾಸ್ತವಿಕತೆಯ ಕಡೆಗೆ ಆರಂಭದ ಪ್ರವಾದಿವಚನವು ಗಮನ ಸೆಳೆಯುತ್ತದೆ. ಸಂಪತ್ತು ಕುಟುಂಬ ಮತ್ತು ಗೆಳೆಯರಿಗಾಗಿ ಎಲ್ಲ ರೀತಿಯ ಓಡಾಟ ನಡೆಸುವವರು ವಾಸ್ತವದಲ್ಲಿ ನಿಜವಾದ ಗೆಳೆಯರಾಗಿ ಬಾಕಿಯುಳಿವವರನ್ನು ಮರೆತು ಬಿಡಬಾರದು ಎಂಬ ಎಚ್ಚರಿಕೆಯನ್ನು ಈ ಪ್ರವಾದಿ ವಚನವು ನೀಡುತ್ತದೆ.

---

1. ಬುಖಾರಿ: 6514, ಮುಸ್ಲಿಮ್: 2960

2. ಅಹ್ಮದ್: 4/287

3. ದೀರ್ಘಾಯುಷ್ಯ ಮತ್ತು ಹುತಾತ್ಮತೆ

عَنْ عَبْدِ اللَّهِ بْنِ مَسْعُودٍ رَضِيَ اللَّهُ عَنْهُ، قَالَ: قَالَ رَسُولُ اللَّهِ ﷺ: " إِنَّ لِلَّهِ عِبَادًا يَضِنُّ بِهِمْ عَنِ الْقَتْلِ وَيُطِيلُ أَعْمَارَهُمْ فِي حُسْنِ الْعَمَلِ ، وَيُحَسِّنُ أَرْزَاقَهُمْ ، وَيُحْيِيهِمْ فِي عَافِيَةٍ وَيَقْبِضُ أَرْوَاحَهُمْ فِي عَافِيَةٍ ، عَلَى الْفُرُشِ وَيُعْطِيهِمْ مَنَازِلَ الشُّهَدَاءِ"

ಅಬ್ದುಲ್ಲಾ ಬಿನ್ ಮಸ್ಊದ್ (ರ) ವರದಿ ಮಾಡಿರುತ್ತಾರೆ. ಪ್ರವಾದಿ(ಸ) ಹೇಳುತ್ತಾರೆ: ಅಲ್ಲಾಹನಿಗೆ ಪ್ರೀತಿ ಪಾತ್ರರಾದ ಕೆಲವು ದಾಸರಿದ್ದಾರೆ ಅವರಿಗೆ ಹುತಾತ್ಮತೆಯನ್ನು ನೀಡದೆ ಅಲ್ಲಾಹನು ತಡೆದು ನಿಲ್ಲಿಸುವನು, ಹೆಚ್ಚು ಸತ್ಕರ್ಮಗಳನ್ನು ಮಾಡಲು ಆಯುಷ್ಯವನ್ನು ವೃದ್ಧಿಸಿಕೊಡುವನು. ಜೀವನಾಧಾರವನ್ನು ಹೆಚ್ಚಿಸಿ ಕೊಡುವನು. ನೆಮ್ಮದಿಯ ಜೀವನವನ್ನು ಅವರಿಗೆ ನೀಡುವನು. ಕೊನೆಗೆ ಆರೋಗ್ಯದೊಂದಿಗೆ ಮಂಚದಲ್ಲಿ ಮಲಗಿ ನಿದ್ರಿಸುತ್ತಿರುವಾಗಲೇ ಅವರ ಆತ್ಮವನ್ನು ವಶಪಡಿಸಿಕೊಳ್ಳುವನು, ಅವರಿಗೆ ಅಲ್ಲಾಹನು ಹುತಾತ್ಮರ ಪದವಿಯನ್ನು ನೀಡುವನು.*

ಆಯುಷ್ಯವೆಂಬುದು ಅಲ್ಲಾಹನು ಮನುಷ್ಯನಿಗೆ ನೀಡಿರುವ ಮಹಾ ಅನುಗ್ರಹವಾಗಿದೆ. ಆಯುಷ್ಯದಷ್ಟು ಶ್ರೇಷ್ಠವಾದ ಯಾವ ಅನುಗ್ರಹವೂ ಲೋಕದಲ್ಲಿಲ್ಲ, ಕಾರಣವೇನೆಂದರೆ ಇತರ ಅನುಗ್ರಹಗಳನ್ನು ಅನುಭವಿಸಬೇಕಿದ್ದರೆ ಆಯುಷ್ಯವೆಂಬ ಅನುಗ್ರಹ

* ಇಮಾಮ್ ತಬ್ರಾನಿ–ಕಬೀರ್: 10371ನಲ್ಲಿ ಈ ಪ್ರವಾದಿ ವಚನವನ್ನು ಉಲ್ಲೇಖಿಸಿದ್ದಾರೆ. ಈ ಹದೀಸ್ ವಚನದ ಅವತೀರ್ಣ ಪರಂಪರೆಯ ಬಗ್ಗೆ ಹಾಫಿಝ್ ಹೈತಮಿ ಹೀಗೆ ಹೇಳಿರುವರು ಇದನ್ನು ಉಲ್ಲೇಖಿಸಿರುವವರ ಪೈಕಿ ಜಹ್‌ಫರ್ ಬಿನ್ ವಾಸಿತಿಯವರನ್ನು ಸತ್ಯಸಂಧರಾಗಿದ್ದರೆಂದು ಸ್ವೀಕಾರಾರ್ಹರೆಂದು ಇಮಾಮ್ ಇಬ್ನು ಹಜರುಲ್ ಅಸ್ಕಲಾನಿ ಸಾಕ್ಷಿ ನುಡಿಯುತ್ತಾರೆ (ತಹ್‌ದೀಬುತ್ತಹ್‌ದೀಬ್ ಭಾಗ: 2, ಪುಟ 71)

ವಿರಲೇಬೇಕು. ಆಯುಷ್ಯವು ಎಲ್ಲರಿಗೂ ಒಂದೇ ರೀತಿಯಲ್ಲಿ ನಿಶ್ಚಿತವಾಗಿರುವುದಿಲ್ಲ. ಹೆಚ್ಚು ಕಡಿಮೆ ಹೀಗೆ ಹಲವು ರೀತಿಯಲ್ಲಿ ಅದು ನೀಡಲ್ಪಡುವುದು.

ಪವಿತ್ರ ಕುರ್‌ಆನ್ ಹೇಳುತ್ತದೆ, 'ನಿಮ್ಮನ್ನು ಒಂದು ಶಿಶುವಿನ ರೂಪದಲ್ಲಿ (ತರುವಾಯ) ನೀವು ಕಾರುಣ್ಯಕ್ಕೆ ತಲುಪುವಂತಾಗಲು (ನಿಮ್ಮನ್ನು ಪೋಷಿಸುತ್ತೇವೆ) ಮತ್ತು ನಿಮ್ಮಲ್ಲಿ ಕೆಲವರನ್ನು ಮೊದಲೆ ಹಿಂದಕ್ಕೆ ಕರೆಸಿಕೊಳ್ಳಲಾಗುತ್ತದೆ ಮತ್ತು ಕೆಲವರನ್ನು ಎಲ್ಲವನ್ನೂ ತಿಳಿದುಕೊಂಡ ಬಳಿಕ ಏನೂ ತಿಳಿಯದಂತಾಗಲು ಅತಿ ವೃದ್ಧಾಪ್ಯದೆಡೆಗೆ ತಿರುಗಿಸಿ ಬಿಡಲಾಗುತ್ತದೆ.' (ಅಲ್ ಹಜ್ಜ್: 5)

ಅಂತ್ಯ ದಿನದಂದು ಮನುಷ್ಯನಿಗೆ ಸಿಕ್ಕಿರುವ ಅನುಗ್ರಹಗಳ ಕುರಿತು ವಿಚಾರಿಸುವಾಗ ಅವನಿಗೆ ದಯಪಾಲಿಸಲಾಗಿದ್ದ ಅನುಗ್ರಹಗಳ ಬಗ್ಗೆ ಪ್ರಶ್ನಿಸಲಾಗುವುದು ಎಂದು ಪ್ರವಾದಿವರ್ಯರು(ಸ) ಎಚ್ಚರಿಸಿದ್ದಾರೆ.

مَا تَزَالُ قَدَمَا عَبْدٍ يَوْمَ الْقِيَامَةِ حَتَّى يُسْئَلَ عَنْ أَرْبَعٍ : عَنْ عُمُرِهِ فِيْمَ أَفْنَاهُ ، وَعَنْ شَبَابِهِ فِيْمَ أَبْلَاهُ ،
وَعَنْ مَالِهِ مِنْ أَيْنَ اكْتَسَبَهُ وَفِيْمَ أَنْفَقَهُ ، وَعَنْ عِلْمِهِ مَاذَا عَمِلَ فِيْهِ ؟

'ನಾಲ್ಕು ವಿಷಯಗಳ ಬಗ್ಗೆ ಪ್ರಶ್ನಿಸಲ್ಪಡದೆ ಅಂತ್ಯ ದಿನದಂದು ಯಾರ ಹೆಜ್ಜೆಯೂ ಮುಂದಕ್ಕೆ ಚಲಿಸಲಾರದು. ಆಯುಷ್ಯವನ್ನು ಹೇಗೆ ಕಳೆದೆ, ಯೌವನವನ್ನು ಹೇಗೆ ಉಪಯೋಗಿಸಿದೆ, ಸಂಪತ್ತನ್ನು ಹೇಗೆ ಸಂಪಾದಿಸಿದೆ ಮತ್ತು ಎಲ್ಲಿ ಖರ್ಚು ಮಾಡಿದೆ, ಕಲಿತ ಜ್ಞಾನದಿಂದ ಏನೆನ್ನೆಲ್ಲಾ ಜೀವನದಲ್ಲಿ ಅಳವಡಿಸಿದೆ – ಇವುಗಳೇ ಆ ಪ್ರಶ್ನೆಗಳು.'[1]

ಒಬ್ಬ ಮನುಷ್ಯನಿಗೆ ಅವನ ಆಯುಷ್ಯ ಎಂಬುದು ಸತ್ಕರ್ಮಗಳನ್ನು ಮಾಡಲು ಸಾಧ್ಯವಾಗುವ ಸುವರ್ಣಾವಕಾಶವಾಗಿರುತ್ತದೆ. ಅದರ ಮೂಲಕ ಹೆಚ್ಚು ಸತ್ಕರ್ಮಗಳನ್ನು ಮಾಡಲು ಮತ್ತು ದೇವನ ಸಂಪ್ರೀತಿಯನ್ನು ಗಳಿಸಲು ಅವನಿಗೆ ಸಾಧ್ಯವಾಗುತ್ತದೆ. ಸತ್ಯ ನಿಷೇಧಿಗೆ ಆಯುಷ್ಯವು ಹೆಚ್ಚಿದಂತೆ ಅವನ ಜೀವನವು ಒಂದು ಶಾಪದಂತೆ ಭಾಸವಾಗುವುದು. ಅವಕಾಶಗಳು ಹೆಚ್ಚು ಲಭ್ಯವಾದಂತೆ, ವ್ಯಕ್ತಿಯ ಕೆಡುಕುಗಳ ಭಂಡಾರವೂ ಹೆಚ್ಚುತ್ತಾ ಹೋಗುವುದು. ಕೊನೆಗೆ ಅವನು ಸತ್ಯನಿಷೇಧಿ ದೇವಧಿಕ್ಕಾರಿಯ ರೂಪದಲ್ಲಿ ಅಲ್ಲಾಹನ ಮುಂದೆ ಹಾಜರಾಗುವನು. ಅಬೂಬಕರ್(ರ) ವರದಿ ಮಾಡಿರುತ್ತಾರೆ:

أَنَّ رَجُلًا قَالَ : يَارَسُوْلَ اللّٰهِ ، أَيُّ النَّاسِ خَيْرٌ ؟ قَالَ : " مَنْ طَالَ عُمُرُهُ وَحَسُنَ عَمَلُهُ " قَالَ :
فَأَيُّ النَّاسِ شَرٌّ ؟ قَالَ : " مَنْ طَالَ عُمُرُهُ وَسَاءَ عَمَلُهُ "

ಓರ್ವ ವ್ಯಕ್ತಿ ಪ್ರವಾದಿ ಮುಹಮ್ಮದ್(ಸ) ರೊಂದಿಗೆ ಪ್ರಶ್ನಿಸಿದರು: ಅಲ್ಲಾಹನ ಸಂದೇಶವಾಹಕರೇ, ಜನರ ಪೈಕಿ ಅತ್ಯಂತ ಶ್ರೇಷ್ಠರು ಯಾರು? ಪ್ರವಾದಿ(ಸ) ಹೇಳಿದರು: ಸುಧೀರ್ಘ ಆಯುಷ್ಯ ಲಭಿಸಿದ್ದು ಉತ್ತಮ ಕರ್ಮಗಳನ್ನು ಮಾಡುತಿದ್ದ ವ್ಯಕ್ತಿ. ಅವರು ಪ್ರಶ್ನಿಸಿದರು: ಜನರ ಪೈಕಿ ನಿಕೃಷ್ಟರು ಯಾರು? ಪ್ರವಾದಿ(ಸ) ಹೇಳಿದರು: ಸುಧೀರ್ಘ ಆಯುಷ್ಯ ಲಭಿಸಿದ್ದು ಕೆಟ್ಟ ಕರ್ಮಗಳನ್ನು ಮಾಡುತ್ತಿದ್ದ ವ್ಯಕ್ತಿ.[2]

ಆರಂಭದಲ್ಲಿ ನೀಡಲಾದ ಪ್ರವಾದಿವಚನದಲ್ಲಿ ಆಯುಷ್ಯವನ್ನು ಕ್ರಿಯಾತ್ಮಕವಾಗಿ ಉಪಯೋಗಿಸಿ ಆ ಮೂಲಕ ಅಂತ್ಯದಿನದಂದು ಅಲ್ಲಾಹನ ವಿಶೇಷ ಕರುಣೆಗೆ ಅರ್ಹರಾಗುವ ದೇವನ ದಾಸರ ಕುರಿತು ಪ್ರಸ್ತಾಪಿಸಲಾಗಿದೆ. ಅವರು ಯುದ್ಧದಲ್ಲಿ ವಧಿಸಲ್ಪಡಲಿಲ್ಲ, ಇತರ ಕೆಲವರಂತೆ ಪರೀಕ್ಷೆಗಳ ಮೂಲಕ ಪೀಡನೆಗೆ ಒಳಗಾಗಲಿಲ್ಲ, ಸುಖಕರವಾದ ಜೀವನವನ್ನು ಸಾಗಿಸಿದರು. ಯುದ್ಧ ಭೂಮಿಯಲ್ಲಿ ಮರಣ ಹೊಂದದೆ ಮಲಗಿದಲ್ಲಿ ಮರಣ ಹೊಂದಿದರು. ಹಾಗಿದ್ದರೂ ಇಂತಹ ವ್ಯಕ್ತಿಗಳಿಗೆ ಅಂತ್ಯದಿನದಂದು ಹುತಾತ್ಮತೆಯ ಪ್ರತಿಫಲವನ್ನು ನೀಡಿ ಅನುಗ್ರಹಿಸಲಾಗುವುದು. ಏಕೆಂದರೆ ಅವರು ದೇವನ ಮಾರ್ಗದಲ್ಲಿ ಸಹನೆಯೊಂದಿಗೆ ದೃಢವಾಗಿ ನಿಂತವರು. ಹುತಾತ್ಮರಾಗಲು ಸಾಧ್ಯವಾಗದೆ ಹೋದರೂ ಅಲ್ಲಾಹನಿಗಾಗಿ ಜೀವಿಸಲು ಪ್ರಯತ್ನಿಸಿದವರು. ಆದುದರಿಂದ ಅವರೂ ಕೂಡ ಹುತಾತ್ಮರಂತೆ ಗೌರವಿಸಲ್ಪಡುವರು.

ಅಬ್ದುಲ್ಲಾ ಬಿನ್ ಶದ್ದಾದ್(ರ) ವರದಿ ಮಾಡಿರುತ್ತಾರೆ. ಒಮ್ಮೆ ಬನೂ ಉದ್ರಕ್ಕೆ ಸಂಬಂಧ ಪಟ್ಟ ಮೂವರು ವ್ಯಕ್ತಿಗಳು ಬಂದು ಪ್ರವಾದಿವರ್ಯರ(ಸ) ಬಳಿ ಇಸ್ಲಾಮ್ ಸ್ವೀಕರಿಸಿದರು. ಆಗ ಪ್ರವಾದಿವರ್ಯರು(ಸ) ಪ್ರಶ್ನಿಸಿದರು: ಇವರ ಸಂರಕ್ಷಣೆಯ ಹೊಣೆಯನ್ನು ಯಾರು ವಹಿಸಿಕೊಳ್ಳುವಿರಿ? ತಲ್ಹ ಬಿನ್ ಉಬೈದುಲ್ಲ(ರ) ಹೇಳಿದರು: ನಾನು ವಹಿಸಿಕೊಳ್ಳುವೆ. ಬಳಿಕ ಆ ಮೂವರು ತಲ್ಹಾರೊಂದಿಗೆ ವಾಸಿಸಿದರು. ಹೀಗೆ ಒಂದು ದಿನ ಪ್ರವಾದಿ(ಸ) ನಿಯೋಗಿಸಿದ ಒಂದು ಸೈನ್ಯದ ಜೊತೆ ಹೊರಟವರ ಪೈಕಿ ಓರ್ವ ವ್ಯಕ್ತಿ ಯುದ್ಧದಲ್ಲಿ ಹುತಾತ್ಮನಾದ ಬಳಿಕ ಬೇರೊಂದು ಯುದ್ಧದಲ್ಲಿ ಎರಡನೆಯ ವ್ಯಕ್ತಿಯು ಹುತಾತ್ಮನಾದ ಮೂರನೆಯ ವ್ಯಕ್ತಿಯು ತನ್ನ ಹಾಸಿಗೆಯಲ್ಲಿ ಮಲಗಿ ನಿದ್ರಿಸುತ್ತಿದ್ದಾಗ ಸಹಜವಾಗಿ ಮರಣ ಹೊಂದಿದ. ತಲ್ಹ(ರ) ಹೇಳುತ್ತಾರೆ, ಒಂದು ದಿನ ರಾತ್ರಿ ನಾನು ಕನಸಿನಲ್ಲಿ ಆ ಮೂವರನ್ನು ಕಂಡೆ, ಸ್ವರ್ಗದಲ್ಲಿ ಅವರು ಮೂವರು ನನ್ನ ಜೊತೆ ನಿಂತಿದ್ದರು. ಅವರ ಪೈಕಿ ಹಾಸಿಗೆಯಲ್ಲಿ ಮಲಗಿದ ಸ್ಥಿತಿಯಲ್ಲಿ ಮರಣ ಹೊಂದಿದ ವ್ಯಕ್ತಿ ಎಲ್ಲರಿಗಿಂತ ಮುಂದಿದ್ದ, ಅವನ ಹಿಂದೆ ಎರಡನೆಯದಾಗಿ ಹುತಾತ್ಮನಾದ ವ್ಯಕ್ತಿ ಅವನಿಗೂ ಹಿಂದೆ ಪ್ರಥಮವಾಗಿ ಹುತಾತ್ಮನಾದ ವ್ಯಕ್ತಿ ನಿಂತಿದ್ದ,

ನನಗೆ ಆಶ್ಚರ್ಯವಾಯಿತು ನಾನು ಪ್ರವಾದಿ ಮುಹಮ್ಮದ್(ಸ)ರೊಂದಿಗೆ ಕನಸಿನ ಕುರಿತು ಪ್ರಸ್ತಾಪಿಸಿದೆ. ಆಗ ಅವರು ಹೇಳಿದರು:

وَمَا أَنْكَرْتَ مِنْ ذَلِكَ ؟ لَيْسَ أَحَدٌ أَفْضَلَ عِنْدَ اللهِ عَزَّوَجَلَّ مِنْ مُؤْمِنٍ يُعَمَّرُ فِي الإِسْلَامِ لِتَسْبِيحِهِ وَتَكْبِيرِهِ وَتَهْلِيلِهِ !

'ಇದರಲ್ಲಿ ಆಶ್ಚರ್ಯ ಪಡುವಂತಹದ್ದೇನಿದೆ? ಒಬ್ಬ ಸತ್ಯವಿಶ್ವಾಸಿಯ ಮಟ್ಟಿಗೆ ಅಲ್ಲಾಹನನ್ನು ಸ್ಮರಿಸುತ್ತಾ, ಪ್ರಶಂಸಿಸುತ್ತಾ, ಸ್ತುತಿಸುತ್ತಾ ಇರಲು ಇಸ್ಲಾಮಿನಲ್ಲಿದ್ದು ಆಯುಷ್ಯವು ಧೀರ್ಘವಾಗಿ ಲಭಿಸುವುದಕ್ಕಿಂತ ಶ್ರೇಷ್ಠವಾದ ಬೇರೆ ಯಾವುದೇ ಅನುಗ್ರಹವನ್ನು ಅಲ್ಲಾಹನ ಬಳಿಯಿಂದ ಬಯಸುವುದಿಲ್ಲ.'

ಅಲ್ಲಾಹನು ನೀಡಿರುವ ಆಯುಷ್ಯಕ್ಕೆ ಯಾವುದೇ ಮಹತ್ವವನ್ನು ನೀಡದೆ ವ್ಯರ್ಥ ಮಾತುಕತೆಕತೆಗಳಲ್ಲಿ, ಹಾಸ್ಯ, ವಿನೋದಗಳಲ್ಲಿ ಮುಳುಗಿ ಜೀವನವನ್ನು ಹಾಳು ಮಾಡಿ ಕೊಳ್ಳುತ್ತಿರುವ ವ್ಯಕ್ತಿಗಳು ಈ ಪ್ರವಾದಿ ವಚನದ ಕುರಿತು ಚಿಂತನೆ ನಡೆಸುತ್ತಿದ್ದರೆ?

---

1. ಬೈಹಕಿ - ಶುಅಬುಲ್ ಈಮಾನ್: 1875, ತಿರ್ಮಿದಿ: 2416 ತಬ್ರಾನಿ - ಸಗೀರ್: 1/269

2. ತಿರ್ಮಿದಿ: 2330, ಬೈಹಕಿ - ಸುಹದ್: 627-628, ಹಾಕಿಮ್: 1/339, ತಬ್ರಾನಿ - ಔಸತ್, ಸಗೀರ್

3. ಅಹ್ಮದ್: 1/63, ಅಬೂಯಅಲಾ: 634, ಬಸ್ಸಾರ್: 3590

4. ಸ್ವರ್ಗ ಮತ್ತು ನರಕ

عَنْ أَبِي هُرَيْرَةَ رَضِيَ اللَّهُ عَنْهُ، قَالَ: قَالَ رَسُوْلُ اللهِ ﷺ: "كُلُّ أَهْلِ النَّارِ يَرَى مَقْعَدَهُ مِنَ الْجَنَّةِ، فَيَقُوْلُ: لَوْ أَنَّ اللّٰهَ هَدَانِي! فَيَكُوْنُ عَلَيْهِ حَسْرَةً، وَكُلُّ أَهْلِ الْجَنَّةِ يَرَى مَقْعَدَهُ مِنَ النَّارِ، فَيَقُوْلُ: لَوْ لَا أَنَّ اللّٰهَ هَدَانِي! فَيَكُوْنُ لَهُ شُكْرًا"

ಅಬೂಹುರೈರಾ(ರ)ರಿಂದ ವರದಿ. ಪ್ರವಾದಿವರ್ಯರು(ಸ) ಹೇಳಿರುವರು: ಪ್ರತಿಯೊಬ್ಬ ನರಕವಾಸಿಯೂ ಸ್ವರ್ಗದಲ್ಲಿ ತನ್ನ ಸ್ಥಳವನ್ನು ಮೊದಲೇ ಕಾಣುತ್ತಾನೆ. ಆಗ ಅವನು ಹೇಳುವನು, 'ಅಲ್ಲಾಹನು ನನಗೆ ಸನ್ಮಾರ್ಗ ದರ್ಶನ ಮಾಡುತ್ತಿದ್ದರೆ ಎಷ್ಟು ಚೆನ್ನಾಗಿರುತಿತ್ತು!' ಹೀಗೆ ಅವನು ಬಹಳ ದುಃಖದಲ್ಲಿ ಮುಳುಗುವನು. ಪ್ರತಿಯೊಬ್ಬ ಸ್ವರ್ಗವಾಸಿಗೆ ನರಕದಲ್ಲಿರುವ ತನ್ನ ಸ್ಥಳವನ್ನು ನೋಡುವನು. ಅವನು ಹೇಳುವನು, 'ಅಲ್ಲಾಹನು ನನ್ನನ್ನು ನೇರ ಮಾರ್ಗದಲ್ಲಿ ನಡೆಸದೇ ಇರುತ್ತಿದ್ದರೆ ನನ್ನ ಅವಸ್ಥೆ ಏನಾಗಿರುತ್ತಿತ್ತು?' ಹೀಗೆ ಅವನು ಅಲ್ಲಾಹನೊಂದಿಗೆ ಇನ್ನಷ್ಟು ಕೃತಜ್ಞತೆ ಸಲ್ಲಿಸುವವನಾಗುತ್ತಾನೆ.*

ಜೀವನ ಎಂಬುದು ಒಂದು ಪರೀಕ್ಷಾ ಸ್ಥಳವಾಗಿದೆ. ಒಳಿತುಗಳನ್ನು ಮಾಡ ಬಯಸುವವರಿಗೆ ಹೆಚ್ಚು ಒಳಿತುಗಳನ್ನು ಮಾಡಲು, ಕೆಡುಕುಗಳಲ್ಲಿ ಮುಳುಗಿರಲು ಇಷ್ಟಪಡುವವರಿಗೆ ಆ ಮಾರ್ಗದಲ್ಲೇ ಮುಂದೆ ಸಾಗಲು ಬೇಕಾದ ಸಾಕಷ್ಟು ಸೌಲಭ್ಯಗಳು ಇಲ್ಲಿವೆ. ಸತ್ಕರ್ಮಗಳನ್ನು ಮಾಡಬಯಸುವವರಿಗೆ ಹಾಗೆ ಜೀವಿಸಬಹುದು, ಕೆಡುಕನ್ನು ಮಾಡಬಯಸುವವರಿಗೆ ಹಾಗೆಯೂ ಜೀವಿಸಬಹುದು. ಯಾರನ್ನು ಬೆದರಿ

* ಬುಖಾರಿ: 6569, ನಸಾಈ – ಕುಬ್‌ರಾ: 11454, ಹಾಕಿಮ್: 2/435, ಅಹ್ಮದ್: 2/513 ಬೈಹಕಿ – ಬಅ್‌ಸುವನ್ನೂರ್: 243 ಮುಂತಾದವರು ಉಲ್ಲೇಖಿಸರುವ ಪ್ರಬಲವಾದ ಪ್ರವಾದಿವಚನ.

ಸಲಾಗುದಿಲ್ಲ, ನಿಯಂತ್ರಿಸಲಾಗುವುದಿಲ್ಲ, ಎರಡು ಮಾರ್ಗಗಳನ್ನು ಅಲ್ಲಾಹನು ಮನುಷ್ಯರಿಗೆ ಸರಳ ಗೊಳಿಸಿ ಕೊಟ್ಟಿರುತ್ತಾನೆ. ಪವಿತ್ರ ಕುರ್‌ಆನ್ ಈ ಬಗ್ಗೆ ಹೀಗೆನ್ನುತ್ತದೆ: 'ಆದುದರಿಂದ ಯಾರು ದೇವಮಾರ್ಗದಲ್ಲಿ ಸಂಪತ್ತು ಕೊಟ್ಟನೋ ದೇವಾಜ್ಞೋಲ್ಲಂಘನೆ ಯಿಂದ ದೂರವುಳಿದನೋ ಮತ್ತು ಒಳಿತನ್ನು ಸತ್ಯವೆಂದು ಅಂಗೀಕರಿಸಿದನೋ ಅವನಿಗೆ ನಾವು ಸರಳ ಪಥವನ್ನು ಸುಗಮಗೊಳಿಸುವೆವು ಮತ್ತು ಜಿಪುಣತೆ ತೋರಿದನೋ (ತನ್ನ ಪ್ರಭುವಿನ ಬಗ್ಗೆ) ನಿರ್ಲಕ್ಷ್ಯ ತೋರಿದನೋ ಮತ್ತು ಒಳಿತನ್ನು ತಿರಸ್ಕರಿಸಿದನೋ ಅವನಿಗೆ ನಾವು ಕಠಿಣ ದಾರಿಯನ್ನು ಸುಗಮಗೊಳಿಸುವೆವು.' (ಅಲ್ಲೈಲ್: 10-15)

لَمَّا خَلَقَ اللّٰهُ الْجَنَّةَ وَالنَّارَ أَرْسَلَ جِبْرِيْلَ إِلَى الْجَنَّةِ فَقَالَ: أُنْظُرْ إِلَيْهَا وَإِلَى مَا أَعْدَدْتُ لِأَهْلِهَا فِيْهَا، فَجَاءَ فَنَظَرَ إِلَيْهَا وَإِلَى مَا أَعَدَّ اللّٰهُ لِأَهْلِهَا فِيْهَا، فَرَجَعَ إِلَيْهِ قَالَ وَعِزَّتِكَ، لَا يَسْمَعُ بِهَا أَحَدٌ إِلَّا دَخَلَهَا، فَأَمَرَ فَحُفَّتْ بِالْمَكَارِهِ، فَقَالَ: ارْجِعْ إِلَيْهَا فَانْظُرْ إِلَى مَا أَعْدَدْتُ لِأَهْلِهَا فِيْهَا، فَرَجَعَ إِلَيْهَا، فَإِذَا هِيَ قَدْ حُفَّتْ بِالْمَكَارِهِ، فَرَجَعَ إِلَيْهِ، فَقَالَ: وَعِزَّتِكَ، لَقَدْ خِفْتُ أَنْ لَا يَدْخُلَهَا أَحَدٌ، وَقَالَ: اِذْهَبْ إِلَى النَّارِ فَانْظُرْ إِلَيْهَا وَعِزَّتِكَ، وَإِلَى مَا أَعْدَدْتُ لِأَهْلِهَا فِيْهَا، فَنَظَرَ إِلَيْهَا، فَإِذَا هِيَ يَرْكَبُ بَعْضُهَا بَعْضًا، فَرَجَعَ إِلَيْهِ، وَقَالَ: وَعِزَّتِكَ، لَا يَسْمَعُ بِهَا أَحَدٌ فَيَدْخُلُهَا، فَأَمَرَ بِهَا فَحُفَّتْ بِالشَّهَوَاتِ، فَقَالَ: ارْجِعْ إِلَيْهَا، فَقَالَ: لَقَدْ خَشِيْتُ أَنْ لَا يَنْجُوَ مِنْهَا أَحَدٌ إِلَّا دَخَلَهَا.

ಪ್ರವಾದಿ(ಸ) ಹೇಳಿದರು: ಅಲ್ಲಾಹನು ಸ್ವರ್ಗ ನರಕಗಳನ್ನು ಸೃಷ್ಟಿಸಿದ ಬಳಿಕ ಜಿಬ್ರೀಲ್(ಅ)ರೊಂದಿಗೆ ಹೇಳಿದನು: ನೀನು, ಸ್ವರ್ಗ ಮತ್ತು ಅದರಲ್ಲಿ ನಾನು ಸಜ್ಜೀಕರಿ ಸಿದ ಅನುಗ್ರಹಗಳನ್ನು ವೀಕ್ಷಿಸಿರಿ. ಜಿಬ್ರೀಲರು ಸ್ವರ್ಗ ಮತ್ತು ಅವನ ಅನುಗ್ರಹಗಳನ್ನು ವೀಕ್ಷಿಸಿ ಮರಳಿ ಬಂದು ಹೇಳಿದರು: ನಿನ್ನ ಪ್ರತಾಪದಾಣೆ ಈ ಸ್ವರ್ಗದ ಬಗ್ಗೆ ಅರಿ ಯುವ ಯಾರು ಕೂಡಾ ಇದನ್ನು ಪ್ರವೇಶಿಸದಿರಲಿಕ್ಕಿಲ್ಲ. ಆಗ ಸ್ವರ್ಗವನ್ನು ಕಠಿಣ ಕೆಲಸಗಳಿಂದ ಆವರಿಸಿ ಬಿಡುವಂತೆ ಅಲ್ಲಾಹನು ಆಜ್ಞಾಪಿಸಿದನು. ಬಳಿಕ ಜಿಬ್ರೀಲ್(ಅ) ರೊಂದಿಗೆ ಇನ್ನೊಮ್ಮೆ ಸ್ವರ್ಗ ಮತ್ತದರ ಅನುಗ್ರಹಗಳನ್ನು ವೀಕ್ಷಿಸಿ ಬರಲು ಹೇಳಿದನು. ಈ ಬಾರಿ ಕಠಿಣ ಕೆಲಸಗಳಿಂದ ಸುತ್ತುವರಿಯಲ್ಪಟ್ಟ ಸ್ವರ್ಗವನ್ನು ವೀಕ್ಷಿಸಿ ಮರಳಿದ ಜಿಬ್ರೀಲ್(ಅ) ಹೇಳಿದರು: ನಿನ್ನ ಪ್ರತಾಪದಾಣೆ! ಈ ಸ್ವರ್ಗದೊಳಕ್ಕೆ ಯಾರಿಗೂ ಪ್ರವೇಶಿಸಲು ಸಾಧ್ಯವಾಗದೇನೋ ಎಂದು ನನಗೆ ಭಯವಾಗುತ್ತಿದೆ. ಆ ಬಳಿಕ ಅಲ್ಲಾಹನು ಜಿಬ್ರೀಲ್(ಅ)ರೊಂದಿಗೆ ನರಕವನ್ನು ವೀಕ್ಷಿಸಿ ಬರಲು ಆಜ್ಞಾಪಿಸುತ್ತಾನೆ.

ನರಕವು ಭಯಾನಕವಾಗಿ ಅಡಿಮೇಲಾಗುತ್ತಿರುವುದನ್ನು ಕಂಡು ಅವರು ಮರಳಿ ಬಂದು ಅಲ್ಲಾಹನೊಂದಿಗೆ ಈ ರೀತಿ ಹೇಳಿದರು: ನಿನ್ನ ಪ್ರತಾಪದಾಣೆ ಈ ನರಕದ ಬಗ್ಗೆ ಅರಿತ ಯಾರೂ ಇದನ್ನು ಪ್ರವೇಶಿಸಲಿಕ್ಕಿಲ್ಲ. ಆಗ ನರಕವನ್ನು ದೇಹೇಚ್ಛೆಗಳಿಂದ ಸುತ್ತುವರಿಯುವಂತೆ ಅಲ್ಲಾಹನು ನಿರ್ದೇಶಿಸಿದನು. ಪುನಃ ನರಕವನ್ನು ವೀಕ್ಷಿಸಿ ಬರಲು ಜಿಬ್ರೀಲ್(ಅ)ರೊಂದಿಗೆ ಆದೇಶಿಸಿದನು. ದೇಹೇಚ್ಛೆಗಳಿಂದ ಸುತ್ತುವರಿಯಲ್ಪಟ್ಟ ನರಕ ವನ್ನು ವೀಕ್ಷಿಸಿ ಬಂದ ಜಿಬ್ರೀಲ್(ಅ) ಹೇಳಿದರು: ನಿನ್ನ ಮಹಿಮೆಯಾಣೆ! ಈ ನರಕ ವನ್ನು ಪ್ರವೇಶಿಸದೆ ಯಾರೂ ರಕ್ಷಿಸಲ್ಪಡಲಿಕ್ಕಿಲ್ಲವೆಂದು ನನಗೆ ಭಯವಾಗುತ್ತದೆ.[1]

ತನ್ನ ದಾಸರು ಶಿಕ್ಷೆಗೆ ಅರ್ಹರಾಗಬಾರದು. ಸ್ವರ್ಗದ ದಾರಿಯಲ್ಲಿ ನಡೆಯಬೇಕು ಎಂಬುದು ಅಲ್ಲಾಹನ ಇಚ್ಛೆಯಾಗಿದೆ. ಅದೇ ವೇಳೆ ಯಾರನ್ನೂ ಬಲವಂತವಾಗಿ ಸ್ವರ್ಗಕ್ಕೆ ತಲುಪಿಸುವುದು ಅವನ ವಿಧಾನವಲ್ಲ. ಪ್ರತಿಯೊಬ್ಬರೂ ತಮ್ಮ ಸ್ವ-ಪ್ರಯತ್ನ ದಿಂದ ನರಕ ಶಿಕ್ಷೆಯಿಂದ ಪಾರಾಗಬೇಕು. ಅಲ್ಲಾಹನು ಈ ರೀತಿ ಸ್ಪಷ್ಟಪಡಿಸಿದ್ದಾನೆ, 'ನಾವು ಮಾನವನನ್ನು ಒಂದು ಸಮ್ಮಿಶ್ರ ವೀರ್ಯದಿಂದ ಸೃಷ್ಟಿಸಿದೆವು, ಅವನನ್ನು ಪರೀಕ್ಷಿಸಲಿಕ್ಕಾಗಿ ಮತ್ತು ಈ ಉದ್ದೇಶದಿಂದ ನಾವು ಆಲಿಸುವವನಾಗಿ ಹಾಗೂ ವೀಕ್ಷಿಸು ವನಾಗಿ ಮಾಡಿದೆವು. ನಾವು ಅವನಿಗೆ ಮಾರ್ಗದರ್ಶನ ಮಾಡಿದೆವು. ಅವನು ಕೃತಜ್ಞತೆ ಸಲ್ಲಿಸುವವನಾಗಿ ಅಥವಾ ಕೃತಘ್ನನಾಗಲಿ.' **(ಅದ್ದಹ್ರ್ 2:3)**

ಸ್ವರ್ಗ-ನರಕಗಳು ಮನುಷ್ಯನು ಸ್ವತಃ ಸಂಪಾದಿಸುವವುಗಳಾಗಿವೆ ಎಂಬ ಕುರ್‌ಆನ್‌ನ ಆಶಯಕ್ಕೆ ಪ್ರಸ್ತುತ ಹದೀಸ್ ವಚನ ಮತ್ತಷ್ಟು ಪುಷ್ಟಿ ನೀಡುತ್ತದೆ. ಸ್ವರ್ಗ ವಾಸಿಯು ನರಕದಲ್ಲಿ ತನ್ನ ಸ್ಥಾನವನ್ನು ಕಾಣುವನು ಎಂದರೆ ಸ್ವರ್ಗ ಮತ್ತು ನರಕ ಎರಡೂ ಕಡೆಗಳಲ್ಲಿ ಒಂದೊಂದು ಸ್ಥಳವನ್ನು ಕಾಯ್ದಿರಿಸಲಾಗಿದೆ. ಪ್ರತಿಯೊಬ್ಬರೂ ಎರಡರ ಪೈಕಿ ಯಾವ ಸ್ಥಳವು ತನಗೆ ಬೇಕು ಎಂಬುದನ್ನು ಸ್ವಯಂ ತೀರ್ಮಾನಿಸ ಬಹುದಾಗಿದೆ.

ವಿಧಿಯ ಬಗ್ಗೆ ಇರುವ ವಿಶ್ವಾಸಕ್ಕೆ ಸಂಬಂಧಿಸಿರುವ ಗೊಂದಲಗಳನ್ನು ಈ ಪ್ರವಾದಿ ವಚನವು ದೂರೀಕರಿಸುತ್ತದೆ. ಓರ್ವ ವ್ಯಕ್ತಿ ಕೆಡುಕಿನಲ್ಲಿ ತಲ್ಲೀನನಾಗುವುದು, ದೇವಧಿಕ್ಕಾರಿಯಾಗುವುದು ಜನ್ಮತಃ ಅವನ ವಿಧಿಯೇ ಹಾಗೆ ಎಂಬ ಕಾರಣಕ್ಕೋ ಅಥವಾ ದೇವನು ಅವನನ್ನು ನರಕಕ್ಕೆ ಹಾಕಲಿಕ್ಕಾಗಿಯೇ ಸೃಷ್ಟಿಸಿರುವನು ಎಂಬ ಕಾರಣಕ್ಕೋ ಅಲ್ಲ, ಒಳಿತುಗಳನ್ನು ಮಾಡುವುದು ಮತ್ತು ಸ್ವರ್ಗಕ್ಕೆ ಅರ್ಹರಾಗುವುದು, ಅಲ್ಲಾಹನು ಕೆಲವರೊಂದಿಗೆ ಪಕ್ಷಪಾತ ಮಾಡಿ ಕರುಣೆ ತೋರಿಸುವುದರಿಂದಲ್ಲ,

ಹಾಗಾದರೆ ಒಂದೇ ಸಮಯಕ್ಕೆ ಸ್ವರ್ಗ ಮತ್ತು ನರಕಗಳಲ್ಲಿಯೂ ಓರ್ವ ವ್ಯಕ್ತಿಗೆ ಸ್ಥಾನವು ನಿಶ್ಚಯಿಸಿಡಲಾಗುತ್ತಿರಲಿಲ್ಲ.

ಪ್ರವಾದಿ(ಸ) ಹೇಳಿರುವರು: اَلْجَنَّةُ أَقْرَبُ اِلَى أَحَدِكُمْ مِنْ شِرَاكِ نَعْلِهِ وَالنَّارُ مِثْلُ ذَالِكَ ನಿಮ್ಮಲ್ಲಿ ಪ್ರತಿಯೊಬ್ಬರ ಚಪ್ಪಲಿಯ ಭಾರಕ್ಕಿಂತಲೂ ಸ್ವರ್ಗವು ನಿಮಗೆ ಹತ್ತಿರವಾಗಿದೆ, ಅದೇ ರೀತಿ ನರಕವು ಕೂಡಾ.[2]

'ಅಲ್ಲಾಹನು ನನಗೆ ಮಾರ್ಗದರ್ಶನ ಮಾಡುತಿದ್ದರೆ ಎಷ್ಟು ಚೆನ್ನಾಗಿರುತಿತ್ತು' ಎಂಬ ನರಕವಾಸಿಗಳ ಮಾತು, 'ಅಲ್ಲಾಹನು ನನಗೆ ಮಾರ್ಗದರ್ಶನ ಮಾಡದೇ ಇರುತ್ತಿದ್ದರೆ ನನ್ನ ಸ್ಥಿತಿ ಏನಾಗಿ ಬಿಡುತಿತ್ತು' ಎಂಬ ಸ್ವರ್ಗವಾಸಿಗಳ ಮಾತಿನಿಂದ ಸನ್ಮಾರ್ಗದರ್ಶನ ಅಲ್ಲಾಹನ ಮಹದುಪಕಾರವಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಬೆಲೆ ಕಟ್ಟಲಾಗದ ಈ ಅನುಗ್ರಹಕ್ಕಾಗಿ ಸತ್ಯವಿಶ್ವಾಸಿಗಳ ನಿರಂತರ ಹುಡುಕಾಟವೇ ಫಾತಿಹಾ ಅಧ್ಯಾಯದಲ್ಲಿರುವ 'ನಮಗೆ ನೇರ ಮಾರ್ಗವನ್ನು ತೋರಿಸು' ಎಂಬ ಪ್ರಾರ್ಥನೆಯನ್ನು ಸತ್ಯವಿಶ್ವಾಸಿಯು ಪ್ರತಿದಿನ ಕನಿಷ್ಟ 17 ಬಾರಿ ನಮಾಝ್‌ನಲ್ಲಿ ಮಾಡುತ್ತಿರುತ್ತಾನೆ.

(1) ತಿರ್ಮಿದಿ-256, ಅಬೂದಾವೂದ್: 4774, ನಸಾಈ: 7/3-4, ಹಾಕಿಮ್: 1/26-27, ಇಬ್ನು ಹಿಬ್ಬಾನ್: 7394

(2) ಬುಖಾರಿ-6488, ಅಹ್ಮದ್: 1/387, ಇಬ್ನುಹಿಬ್ಬಾನ್: 661

5. ಪರಲೋಕ ವಿಚಾರಣೆಯ ಮೂರು ಸಂದರ್ಭಗಳು

عَنْ عَائِشَةَ رَضِيَ اللّٰهُ عَنْهَا، قَالَتْ: ذَكَرْتُ النَّارَ فَبَكَيْتُ، فَقَالَ رَسُوْلُ اللّٰهِ ﷺ "مَا تُبْكِيْكِ يَا عَائِشَةُ؟" قُلْتُ: ذَكَرْتُ النَّارَ فَبَكَيْتُ، فَهَلْ تَذْكُرُوْنَ أَهْلِيْكُمْ يَوْمَ الْقِيَامَةِ؟ فَقَالَ رَسُوْلُ اللّٰهِ ﷺ: "أَمَّا فِي ثَلَاثَةِ مَوَاطِنَ، فَلَا يَذْكُرُ أَحَدٌ أَحَدًا: عِنْدَ الْمِيْزَانِ، حَتّٰى يَعْلَمَ أَيَخِفُّ مِيْزَانُهُ أَمْ يَثْقُلُ؟ وَعِنْدَ تَطَائُرِ الصُّحُفِ، حَتّٰى يَعْلَمَ أَيْنَ يَقَعُ كِتَابُهُ فِي يَمِيْنِهِ، أَمْ فِي شِمَالِهِ، أَمْ مِنْ وَرَاءِ ظَهْرِهِ؟ وَعِنْدَ الصِّرَاطِ، إِذَا وُضِعَ بَيْنَ ظَهْرَيْ جَهَنَّمَ، حَتّٰى يَجُوْزَ!

ಆಯಿಶಾ(ರ)ರಿಂದ ವರದಿ. ನಾನೊಂದು ದಿನ ನರಕವನ್ನು ನೆನಪಿಸಿ ಅತ್ತು ಬಿಟ್ಟೆ. ಆಗ ಪ್ರವಾದಿವರ್ಯರು(ಸ) ಪ್ರಶ್ನಿಸಿದರು: ಆಯಿಶಾ! ನೀನೇಕೆ ಅಳುತ್ತಿರುವೆ? ನಾನು ಹೇಳಿದೆ: ನರಕವನ್ನು ನೆನಪಿಸಿ ಅತ್ತದ್ದು. ಅಂತ್ಯದಿನ ದಂದು ತಾವು ತಮ್ಮ ಕುಟುಂಬವನ್ನು ನೆನಪಿಸುವಿರಾ? ಪ್ರವಾದಿ(ಸ) ಹೇಳಿದರು: ಮೂರು ಸಂದರ್ಭಗಳಲ್ಲಿ ಯಾರೂ ಇನ್ನೊಬ್ಬರನ್ನು ನೆನಪಿಸ ಲಾರರು. ಒಳಿತು-ಕೆಡುಕುಗಳನ್ನು ತೂಗುವ ತಟ್ಟೆಯ ಬಳಿ, ತನ್ನ ಒಳಿತಿನ ತಟ್ಟೆ ಭಾರವಿರುವುದೋ ಅಥವಾ ಹಗುರವಿರುವುದೋ ಎಂಬುದು ತಿಳಿದು ಬರುವ ವರೆಗೆ; ಕರ್ಮಪತ್ರಗಳು ನೀಡಲ್ಪಟ್ಟಿರುವಾಗ ಅದು ಬಲಗೈಯಲ್ಲಿ ನೀಡಲ್ಪಡುವುದೋ, ಎಡಗೈಯಲ್ಲಿ ನೀಡಲ್ಪಡುವುದೋ ಅಥವಾ ಬೆನ್ನ ಹಿಂದೆ ನೀಡಲ್ಪಡುವುದೋ ಎಂಬುದು ತಿಳಿದು ಬರುವ ವರೆಗೆ; ನರಕಕ್ಕೆ ಅಡ್ಡಲಾಗಿ ಇಟ್ಟಿರುವ ಸೇತುವೆಯನ್ನು ದಾಟಿ ಹೋಗುವ ವರೆಗೆ.*

ಅಂತಿಮ ದಿನದ ಭಯಾನಕತೆಯನ್ನು ಚಿತ್ರೀಕರಿಸುವ ಪ್ರವಾದಿವಚನವಿದು. ವಿಚಾರಣಾ ದಿನದ ಭಯಾನಕತೆಯನ್ನು ಸ್ಪಷ್ಟಪಡಿಸುವ ಬಹಳಷ್ಟು ವಚನಗಳು ಪವಿತ್ರ ಕುರ್‌ಆನ್ ಮತ್ತು ಹದೀಸ್‌ಗಳಲ್ಲಿವೆ. ಭಯದ ಕಾರಣದಿಂದ ಅಂದು ಮಾನವನು ಬೇರೆಲ್ಲಾ ವಿಷಯಗಳನ್ನು ಮರೆತು ಬಿಡುವನೆಂದು ಕುರ್‌ಆನ್ ನೆನಪಿಸುತ್ತದೆ. ಮುಂದೆ ಬರಲಿರುವ ಮಹಾದಿನ (ಅದ್ದಹ್ರ್: 27), ಮಕ್ಕಳನ್ನು ವೃದ್ಧರಾಗಿ ಮಾಡಿ ಬಿಡುವಂತಹ ದಿನ (ಅಲ್ ಮುಝ್ಝಮ್ಮಿಲ್: 17) ಇತ್ಯಾದಿ. ಆಯಿಶಾ(ರ) ಹೇಳುತ್ತಾರೆ:

سَمِعْتُ رَسُوْلَ اللّٰهِ ﷺ يَقُوْلُ: " يُحْشَرُ النَّاسُ حُفَاةً، عُرَاةً، غُرْلًا، فَقُلْتُ: الرِّجَالُ وَالنِّسَاءُ جَمِيْعًا يَنْظُرُ بَعْضُهُمْ إِلٰى بَعْضٍ؟ قَالَ: " الأَمْرُ أَشَدُّ مِنْ أَنْ يَنْظُرَ بَعْضُهُمْ إِلٰى بَعْضٍ!"

ಪ್ರವಾದಿವರ್ಯರು(ಸ) ಈ ರೀತಿ ಹೇಳುವುದನ್ನು ನಾನು ಕೇಳಿಸಿಕೊಂಡೆ: ಪುನರುತ್ಥಾನದಂದು ನಗ್ನಪಾದರಾಗಿ, ವಸ್ತ್ರ ಧರಿಸದೆ, ಮುಂಜಿ ಕರ್ಮವನ್ನು ಮಾಡಿರದ ಸ್ಥಿತಿಯಲ್ಲಿ ಜನರು ಒಟ್ಟು ಸೇರಿಸಲ್ಪಡುವರು. ನಾನು ಪ್ರಶ್ನಿಸಿದೆ: ಆಗ ಸ್ತ್ರೀ-ಪುರುಷರು ಪರಸ್ಪರರ ನಗ್ನತೆಯೆಡೆಗೆ ನೋಡುವುದಿಲ್ಲವೇ? ಪ್ರವಾದಿ(ಸ) ಹೇಳಿದರು: ಪರಸ್ಪರರನ್ನು ನೋಡಲು ಸಾಧ್ಯವಾಗದ ರೀತಿಯಲ್ಲಿ ಆ ದಿನದ ಕಾಠಿಣ್ಯವಿರುವುದು.[1]

ಅಂತ್ಯದಿನದ ಭಯಾನಕತೆಯನ್ನು ಚಿತ್ರಿಸುವ ಮೂರು ಸಂದರ್ಭಗಳ ಬಗ್ಗೆ ಈ ಪ್ರವಾದಿವಚನವು ಎಚ್ಚರಿಸುತ್ತದೆ. ಪಾಪ-ಪುಣ್ಯಗಳ ತೂಕದ ತಟ್ಟೆಯಲ್ಲಿ ಒಳಿತು-ಕೆಡುಕುಗಳನ್ನು ತೂಗಿ ಲೆಕ್ಕ ಹಾಕುವ ಸಂದರ್ಭ ಅದರಲ್ಲೊಂದು. ಕೆಡುಕಿಗಿಂತ ಒಳಿತಿನ ಭಾಗವು ತೂಕದ ತಟ್ಟೆಯಲ್ಲಿ ಹೆಚ್ಚು ಭಾರವಾಗಿ ತೂಗುವಾಗ ವ್ಯಕ್ತಿಯು ಅಲ್ಲಾಹನ ಕರುಣೆ ಮತ್ತು ಸ್ವರ್ಗ ಪ್ರವೇಶಕ್ಕೆ ಅರ್ಹನಾಗಿ ಬಿಡುತ್ತಾನೆ. ಕೆಡುಕಿನ ತಟ್ಟೆಯು ಹೆಚ್ಚು ಬಾರವಾಗಿ ತೂಗುವುದಾದರೆ ಅಲ್ಲಾಹನ ಕೋಪಕ್ಕೆ ಅರ್ಹನಾಗುವನು ಮತ್ತು ಶಾಶ್ವತ ನರಕದ ಶಿಕ್ಷೆಯು ಅಂತಹ ಮಾನವನಿಗೆ ಕಾದಿರುವುದು.

ಅಲ್ಲಾಹ್ ಹೇಳುತ್ತಾನೆ: ಪುನರುತ್ಥಾನ ದಿನ ನಾವು ನಿಖರವಾಗಿ ತೂಗುವ ತಕ್ಕಡಿಯನ್ನಿಟ್ಟು ಬಿಡುವೆವು. ಅನಂತರ ಯಾರ ಮೇಲೂ ಸ್ವಲ್ಪವೂ ಅಕ್ರಮವಾಗದು. ಯಾರಾದರೂ ಸಾಸಿವೆ ಕಾಳಿನಷ್ಟಾದರೂ ಏನಾದರೂ ಮಾಡಿದ್ದರೆ ನಾವು ಅದನ್ನು ಮುಂದೆ ತರುವೆವು ಮತ್ತು ಲೆಕ್ಕ ಪರಿಶೋಧನೆಗೆ ನಾವೇ ಸಾಕು. (ಅಲ್ ಅಂಬಿಯಾ: 47)

---

* ಇಮಾಮ್ ಅಬೂದಾವೂದ್ - 4755, ಹಾಕಿಮ್ 4/578 ಮುಂತಾದವರು ಉಲ್ಲೇಖಿಸಿರುವ ಈ ಪ್ರವಾದಿವಚನವು ಪ್ರಬಲವಾಗಿದೆಯೆಂದು ಮುಹಿಯುದ್ದೀನ್ ದೀಬ್ ಮಿಸ್ತು, ಸಮೀರ್ ಅಹ್ಮದಲ್ ಅತ್ತಾರ್ ಯೂಸುಫ್ ಅಲಿ, ಬುದೈವಿ ಮುಂತಾದವರ ಅಭಿಪ್ರಾಯವಾಗಿದೆ.

'ಆಗ ಯಾರ ತೂಕದ ತಟ್ಟೆಗಳು ಭಾರವಾಗಿರುತ್ತದೋ ಅವನು ಸಂತೃಪ್ತ ಜೀವನದಲ್ಲಾಗಿರುವನು ಮತ್ತು ಯಾರ ತೂಕದ ತಟ್ಟೆಗಳು ಹಗುರವಾಗಿರುತ್ತದೋ ಅವನ ನಿವಾಸ (ನರಕದ) ಆಳವಾದ ಹೊಂಡವಾಗಿರುವುದು.' (ಅಲ್ ಕಾರಿಅ: 6-9)

ಅಂತ್ಯ ದಿನದಂದು ವ್ಯಕ್ತಿಯ ಹೃದಯ ಬಡಿತವು ಏರುಪೇರಾಗುವ ಎರಡನೆಯ ಹಂತ ಇಹಜೀವನದ ಕರ್ಮಪತ್ರವು ಅವನ ಮುಂದೆ ನೀಡಲ್ಪಡುವ ಸಂದರ್ಭದಲ್ಲಾಗಿರುತ್ತದೆ. ಒಳಿತು-ಕೆಡುಕುಗಳ ಪ್ರಮಾಣವನ್ನು ಪರಿಗಣಿಸಿ ಬಲಗೈಯಲ್ಲಿ, ಎಡಗೈಯಲ್ಲಿ ಹಾಗೂ ಬೆನ್ನ ಹಿಂದಿನಿಂದ ಅವನ ಕರ್ಮಪತ್ರಗಳು ನೀಡಲ್ಪಡುವುದು. ಜೀವನವನ್ನು ಸತ್ಕರ್ಮಗಳಿಂದ ತುಂಬಿಸಿದವರು ಬಲಗೈಯಲ್ಲಿ ಕರ್ಮಪತ್ರವನ್ನು ಸಂತೋಷದಿಂದ ಸ್ವೀಕರಿಸುವರು, ಅವರು ಸಂತೋಷದಿಂದ ತಮ್ಮ ಕುಟುಂಬದವರ ಬಳಿಗೆ ಓಡುವರೆಂದೂ ಜೀವನದ ಕರ್ಮಪತ್ರವನ್ನು ಅವರಿಗೆ ಓದಿ ಕೇಳಿಸಲು ಆತುರ ತೋರುವರೆಂದು ಪವಿತ್ರ ಕುರ್‌ಆನ್ ವಿವರಿಸಿ ಹೇಳುತ್ತದೆ. (ಅಲ್ ಹಾಕ್ಕ: 19-20)

ಆದರೆ ಎಡಗೈಯಲ್ಲಿ ಕರ್ಮಪತ್ರವನ್ನು ಸ್ವೀಕರಿಸುವವರು ಈ ರೀತಿ ವಿಲಾಪಿಸುವರು: ಅಯ್ಯೋ! ನನ್ನ ಕರ್ಮಪತ್ರವು ನನಗೆ ಕೊಡದೆ ಇರುತ್ತಿದ್ದರೆ ಮತ್ತು ನನ್ನ ಕರ್ಮವೃತ್ತಾಂತವೇನೆಂದು ನನಗೆ ತಿಳಿಯದೆ ಇರುತ್ತಿದ್ದರೆ! ಅಯ್ಯೋ (ಭೂಲೋಕದಲ್ಲಿ ಬಂದಿದ್ದ) ನನ್ನ ಈ ಮರಣವೇ ನಿರ್ಣಾಯಕವಾಗಿರುತ್ತಿದ್ದರೆ! ನನ್ನ ಸಂಪತ್ತು ಇಂದು ನನಗೇನೂ ಪ್ರಯೋಜನ ಕೊಡಲಿಲ್ಲ. ನನ್ನ ಅಧಿಕಾರವೆಲ್ಲವೂ ಕೊನೆಗೊಂಡಿತು.

(ಅಲ್ ಹಾಕ್ಕ: 25-29)

ಜೀವನದ ಕರ್ಮಪತ್ರವು ನೀಡಲ್ಪಟ್ಟ ಬಳಿಕ, ಒಳಿತು ಮತ್ತು ಕೆಡುಕುಗಳ ವಿಚಾರಣೆಯ ನಂತರ ಪ್ರತಿಯೊಬ್ಬ ಮಾನವನೂ ನರಕದ ಮೇಲ್ಭಾಗದ ಸೇತುವೆಯ ಮೇಲೆ ಹಾದು ಹೋಗಬೇಕಾಗುವುದು. ಸಜ್ಜನರು ಆ ಮಾರ್ಗದಲ್ಲಿ ವೇಗವಾಗಿ ಸಾಗಿ, ಅದನ್ನು ಸುರಕ್ಷಿತವಾಗಿ ದಾಟಿ ಸ್ವರ್ಗವನ್ನು ತಲುಪುತ್ತಾರೆ. ದುಷ್ಟ ವ್ಯಕ್ತಿಗಳು ನಿಯಂತ್ರಣ ಕಳೆದುಕೊಂಡು ಬಹಳ ಆಳವಾಗಿರುವ ನರಕದೊಳಕ್ಕೆ ಬೀಳುವರು.

ಅಲ್ಲಾಹ್ ಹೇಳುತ್ತಾನೆ: ನಿಮ್ಮ ಪೈಕಿ ನರಕವನ್ನು ಹಾದು ಹೋಗದವರು ಯಾರೂ ಇರಲಾರರು. ಇದೊಂದು ನಿರ್ಧರಿತ ವಿಷಯವಾಗಿದ್ದು ಇದನ್ನು ಪೂರ್ಣಗೊಳಿಸುವುದು ನಿಮ್ಮ ಪ್ರಭುವಿನ ಬಾಧ್ಯತೆಯಾಗಿದೆ. ಆ ಬಳಿಕ ನಾವು ಭೂಲೋಕದಲ್ಲಿ ಧರ್ಮನಿಷ್ಠರಾಗಿದ್ದವರನ್ನು ರಕ್ಷಿಸಿಕೊಳ್ಳುವೆವು ಮತ್ತು ಅಕ್ರಮಿಗಳನ್ನು ಅಲ್ಲೇ ಬಿದ್ದಿರಲು ಬಿಟ್ಟು ಬಿಡುವೆವು. (ಮರ್ಯಮ್: 71-72)

ಅಬೂಹುರ್ರೈರಾ(ರ)ರವರು ವರದಿ ಮಾಡಿರುವ ಒಂದು ಸುದೀರ್ಘವಾದ ಪ್ರವಾದಿವಚನದಲ್ಲಿ ಮೇಲೆ ಉದ್ಧರಿಸಲಾದ ವಿಷಯಕ್ಕೆ ಪೂರಕವಾದ ಕೆಲವು ವಿವರಣೆಗಳು ಬಂದಿರುತ್ತವೆ. ಪ್ರವಾದಿ(ಸ) ಹೇಳಿರುವರು:

يَضْرِبُ الصِّرَاطُ بَيْنَ ظَهْرَانَيْ جَهَنَّمَ، فَأَكُونُ أَوَّلَ مَنْ يَجُوزُ مِنَ الرُّسُلِ بِأُمَّتِهِ، وَلَا يَتَكَلَّمُ يَوْمَئِذٍ إِلَّا الرُّسُلُ، وَكَلَامُ الرُّسُلِ يَوْمَئِذٍ : اللَّهُمَّ سَلِّمْ، سَلِّمْ !

ಆ ದಿನ ನರಕಾಗ್ನಿಯ ಮೇಲೆ ಒಂದು ಕಾಲು ಸೇತುವೆಯು ನಿರ್ಮಿತವಾಗುವುದು. ಪ್ರವಾದಿಗಳ ಪೈಕಿ ಆ ದಾರಿಯನ್ನು ನನ್ನ ಸಮುದಾಯದೊಂದಿಗೆ ಪ್ರಥಮವಾಗಿ ದಾಟುವವನು ನಾನಾಗಿರುವೆನು. ದೇವಚರರಲ್ಲದೆ ಮತ್ತಾರೂ ಆ ದಿನ ಮಾತನಾಡಲಿಕ್ಕಿಲ್ಲ, ಪ್ರವಾದಿಗಳು ಕೂಡ 'ಪ್ರಭೂ ರಕ್ಷಿಸು, ಪ್ರಭೂ ರಕ್ಷಿಸು' ಎಂದು ಪ್ರಾರ್ಥಿಸುತ್ತಿರುವರು.[2]

ಸೃಷ್ಟಿಗಳಲ್ಲೇ ಶ್ರೇಷ್ಠರಾದ ಪ್ರವಾದಿಗಳು ಕೂಡ ಹೆದರಿ ಹೋಗುವಷ್ಟು ಅಂತ್ಯದಿನದ ವಿಚಾರಣೆಯ ಸಂದರ್ಭ ಭಯಾನಕವಾಗಿದ್ದರೆ, ಪಾಪಿಗಳಾದ ಜನಸಾಮಾನ್ಯರ ಅವಸ್ಥೆ ಏನಾಗಿರಬಹುದು? ಅಲ್ಲಾಹನ ವಿಶೇಷ ಔದಾರ್ಯ ಮತ್ತು ಕರುಣೆ ಇಲ್ಲದಿರುತ್ತಿದ್ದರೆ ಯಾರಿಗೂ ಅವರ ಕರ್ಮಗಳ ಆಧಾರದಿಂದ ಮಾತ್ರ ರಕ್ಷಣೆ ಹೊಂದಲು ಸಾಧ್ಯವಿಲ್ಲ.

ಪ್ರವಾದಿ ಮುಹಮ್ಮದ್(ಸ)ರು ಹೇಳಿರುವರು: لَنْ يَدْخُلَ الْجَنَّةَ أَحَدٌ إِلَّا بِرَحْمَةِ اللهِ ಅಲ್ಲಾಹನ ಕಾರುಣ್ಯವಿಲ್ಲದೆ ಯಾರಿಗೂ ಸ್ವರ್ಗವನ್ನು ಪ್ರವೇಶಿಸಲು ಸಾಧ್ಯವಿಲ್ಲ. ಅನುಯಾಯಿಗಳು ಪ್ರಶ್ನಿಸಿದರು: وَلَا أَنْتَ يَارَسُولَ اللهِ ؟ ತಾವೂ ಕೂಡ ಅದೇ ರೀತಿಯೇ ಪ್ರವಾದಿಗಳೇ? ಆಗ ಅವರು ಉತ್ತರಿಸಿದರು:

وَلَا أَنَا إِلَّا أَنْ يَتَغَمَّدَنِيَ اللهُ بِرَحْمَتِهِ ಅಲ್ಲಾಹನು ತನ್ನ ಕಾರುಣ್ಯದಿಂದ ನನ್ನನ್ನು ಆವರಿಸಿಕೊಂಡಿಲ್ಲದಿದ್ದರೆ, ನನ್ನ ಸ್ಥಿತಿಯೂ ಅದೇ ರೀತಿಯಾಗಿರುತ್ತದೆ.[3]

---

1. ಬುಖಾರಿ: 6527, ಮುಸ್ಲಿಮ್: 2859, ನಸಾಈ: 4/114.
2. ಬುಖಾರಿ, ಮುಸ್ಲಿಮ್
3. ಬುಖಾರಿ: 6467, ಮುಸ್ಲಿಮ್: 2918, ಅಹ್ಮದ್: 3/52.

6. ನರಕ ಶಿಕ್ಷೆಯ ಕಾಠಿಣ್ಯ

عَنُ النُّعْمَانِ بْنِ بَشِيرٍ رَضِيَ اللّٰهُ عَنْهُ، قَالَ: قَالَ رَسُولُ اللّٰهِ ﷺ: إِنَّ أَهْوَنَ أَهْلِ النَّارِ عَذَابًا مَنْ لَهُ نَعْلَانِ وَشِرَاكَانِ مِنْ نَارٍ، يَغْلِي مِنْهُمَا دِمَاغُهُ كَمَا يَغْلِي الْمِرْجَلُ، مَا يَرَى أَنَّ أَحَدًا أَشَدُّ مِنْهُ عَذَابًا، وَإِنَّهُ لَأَهْوَنُهُمْ عَذَابًا.

ನುಅ್‌ಮಾನ್ ಬಿನ್ ರಶೀದ್(ರ) ವರದಿ ಮಾಡಿರುತ್ತಾರೆ. ಪ್ರವಾದಿ(ಸ) ಹೇಳಿದರು: ನರಕವಾಸಿಗಳ ಪೈಕಿ ಅತ್ಯಂತ ಕಡಿಮೆ ಮಟ್ಟದ ಶಿಕ್ಷೆ ನೀಡಲ್ಪಟ್ಟವರು ಒಂದು ಜೊಡಿ ಬೆಂಕಿಯ ಚಪ್ಪಲಿಗಳನ್ನು ಧರಿಸುವವರಾಗಿರುವರು. ಅದರ ಕಾರಣದಿಂದ ಅವರ ಮೆದುಳು ಕುದಿಯುತ್ತಿರುವುದು. ತನಗೆ ನೀಡಲಾದುದಕ್ಕಿಂತ ಹೆಚ್ಚಿನ ಶಿಕ್ಷೆ ಇನ್ನಾರಿಗೂ ಲಭಿಸಿರಲಾರದು ಎಂದು ಅವನು ಭಾವಿಸುವನು. ವಾಸ್ತವದಲ್ಲಿ ಅವರು ಅತ್ಯಂತ ಕನಿಷ್ಠ ರೀತಿಯಲ್ಲಿ ಶಿಕ್ಷಿಸಲ್ಪಡು ವವರಾಗಿರುವರು.*

ಅಂತ್ಯ ದಿನದಂದು ದೇವನ ಶಿಕ್ಷೆಯ ಕಠಿಣತೆಯನ್ನು ಮನವರಿಕೆ ಮಾಡಿಸುವ ಪ್ರವಾದಿವಚನವಿದು. ದೇವನು ಕರುಣಾಸಾಗರನಾಗಿರುತ್ತಾನೆ. ತಾಯಿಗೆ ತನ್ನ ಮಗುವಿನೊಂದಿಗಿರುವ ವಾತ್ಸಲ್ಯಕ್ಕಿಂತಲೂ ಮಿಗಿಲಾಗಿ ಅಲ್ಲಾಹನು ತನ್ನ ಸೃಷ್ಟಿಗಳನ್ನು ಪ್ರೀತಿಸುತ್ತಾನೆ. ನನ್ನ ಕರುಣೆಯು ಸರ್ವವನ್ನೂ ವ್ಯಾಪಿಸಿಕೊಂಡಿದೆ (7: 156) ಎಂಬ ಕುರ್‌ಆನ್ ವಚನವು ಜಗತ್ತಿನಷ್ಟು ವಿಶಾಲತೆಯುಳ್ಳ ದೇವನ ಕಾರುಣ್ಯಕ್ಕೆ ದೃಷ್ಟಾಂತವಾಗಿದೆ.

ಈ ಅಗಾಧವಾದ ಕಾರುಣ್ಯಕ್ಕೆ ಇನ್ನೊಂದು ಮಗ್ಗುಲಿದೆ. ಅದು ಕಠಿಣತೆ

* ಇಮಾಮ್ ಬುಖಾರಿ 2561-2562; ಮುಸ್ಲಿಮ್ 213, ಬಸ್ಸಾರ್ 350, ಹಾಕಿಮ್ 4/581, ಬೈಹಕಿ-ಅಲ್ ಬಅ್‌ಸು ವನ್ನುಸೂರ್ 545, ಅಹ್ಮದ್ 2/432, ಇಬ್ನು ಹಿಬ್ಬಾನ್ 7472, ತಬ್ರಾನಿ-ಔಸತ್ ಮುಂತಾದವರು ಉದ್ಧರಿಸಿರುವರು. ಇವು ಸಹೀಹ್ ಮುಸ್ಲಿಮ್‌ನಲ್ಲಿ ಉಲ್ಲೇಖಿಸಲಾದ ವಾಕ್ಯಗಳಾಗಿವೆ.

ಯಾಗಿದೆ. ಸತ್ಯನಿಷೇಧಿಗಳೊಂದಿಗೆ ಮತ್ತು ಅಕ್ರಮಿಗಳೊಂದಿಗೆ ಅಲ್ಲಾಹನು ಕಠಿಣವಾಗಿ ವರ್ತಿಸುವನು. ಕುಕೃತ್ಯಗಳಿಂದ ದೂರ ಸರಿಯಲು ಮನಸ್ಸಿಲ್ಲದವರನ್ನು ಕಠಿಣ ಶಿಕ್ಷೆ ನೀಡಿ ಭಯಭೀತಗೊಳಪಡಿಸುವನು. ಧಿಕ್ಕಾರಿಯಾಗಿ ಮರಣ ಹೊಂದಿದ ವ್ಯಕ್ತಿ ಅಂತ್ಯದಿನದಂದು ಕಠಿಣ ಶಿಕ್ಷೆಯನ್ನು ಎದುರಿಸಬೇಕಾಗಿ ಬರುವುದು. ಅಲ್ಲಾಹನು ಪವಿತ್ರ ಕುರ್‌ಆನಿನಲ್ಲಿ ಈ ರೀತಿ ಎಚ್ಚರಿಸಿರುವನು, 'ಅಲ್ಲಾಹನ ಈ ಆಜ್ಞೆಗಳನ್ನು ಉಲ್ಲಂಘಿಸದಿರಿ. ಅಲ್ಲಾಹ್ ಕಠಿಣವಾಗಿ ಶಿಕ್ಷಿಸುವವನೆಂಬುದನ್ನು ನೀವು ಚೆನ್ನಾಗಿ ತಿಳಿದಿರಬೇಕು.' **(ಅಲ್ ಬಕರ: 196)**

ಕಲ್ಲುಗಳು ಮಾನವರು ಇಂಧನವಾಗಿ ಉರಿಸಲ್ಪಡುವ ಅಂತ್ಯದಿನದ ನರಕ ಶಿಕ್ಷೆಯು ದೇವನ ಕಠಿಣತೆಯ ಪರಾಕಾಷ್ಠೆಯಾಗಿದೆ. ನರಕದ ಕುರಿತು ಪವಿತ್ರ ಕುರ್‌ಆನಿನ ವಿವರಣೆಗಳನ್ನು ಹೃದಯ ಬೇಗುದಿಯೊಂದಿಗಲ್ಲದೆ ಯಾರಿಂದಲೂ ಓದಲು ಸಾಧ್ಯವಿಲ್ಲ. ಅದು ಮಾನವನ ಆಲೋಚನೆಗಳಲ್ಲಿರುವ ಎಲ್ಲ ಶಿಕ್ಷೆಗಿಂತಲೂ ಭಿನ್ನವಾದುದಾಗಿದೆ.

ಭಯಾನಕ ದಿನದ ಶಿಕ್ಷೆಯ ಕುರಿತು ನಿಮ್ಮ ಬಗ್ಗೆ ಭಯಪಡುತ್ತೇನೆ ಎಂದು ಎಲ್ಲ ಪ್ರವಾದಿಗಳೂ ತಮ್ಮ ಕಾಲದ ಜನಸಮುದಾಯದೊಂದಿಗೆ ಪುನರಾವರ್ತಿಸುತ್ತಾ ಮನವರಿಕೆ ಮಾಡಿಸಲು ಪ್ರಯತ್ನಿಸಿದ್ದಾರೆ. ಪರಿಸ್ಥಿತಿಯು ಎಷ್ಟು ಗಂಭೀರವಾದುದು ಎಂಬುದನ್ನು ತಿಳಿಸುವ ಪ್ರವಾದಿವಚನ ಹೀಗಿದೆ:

عَنِ النُّعْمَانِ بْنِ بَشِيْرٍ رَضِيَ اللّٰهُ عَنْهُمَا، قَالَ: سَمِعْتُ رَسُوْلَ اللّٰهِ ﷺ يَخْطُبُ يَقُوْلُ: "أَنْذَرْتُكُمُ النَّارَ، أَنْذَرْتُكُمُ النَّارَ" حَتّٰى لَوْ أَنَّ رَجُلًا كَانَ بِالسُّوْقِ لَسَمِعَهُ مِنْ مَقَامِيْ هٰذَا، حَتّٰى وَقَعَتْ خَمِيْصَةٌ كَانَتْ عَلٰى عَاتِقِهِ عِنْدَ رِجْلَيْهِ.

ನುಅ್‌ಮಾನ್ ಬಿನ್ ಬಶೀರ್(ರ) ಹೇಳುತ್ತಾರೆ, ನಾನು ನಿಮಗೆ ನರಕದ ಕುರಿತು ಮುನ್ನೆಚ್ಚರಿಕೆ ನೀಡುತ್ತೇನೆ ಎಂದು ಪ್ರವಾದಿ(ಸ) ಜೋರಾಗಿ ಜನರನ್ನು ಕರೆದು ಹೇಳುವುದನ್ನು ನಾನು ಕೇಳಿಸಿಕೊಂಡೆ. ನಾನೀಗ ನಿಂತಿರುವ ಸ್ಥಳದಲ್ಲಿ ಹತ್ತಿರವಿದ್ದ ಅಂಗಡಿಗಳಲ್ಲಿದ್ದವರೆಲ್ಲ ಕೇಳುವಷ್ಟು ಜೋರಾಗಿ ಪ್ರವಾದಿವರ್ಯರು(ಸ) ಹೇಳಿದರು. ಆಗ ಅವರ ಶರೀರದಲ್ಲಿದ್ದ ಮೇಲುವಸ್ತ್ರ ಕಾಲಿನ ಬಳಿಗೆ ಬಿದ್ದು ಹೋಯಿತು.[1]

ಆರಂಭದಲ್ಲಿರುವ ಹದೀಸ್ ಪರಲೋಕದ ಶಿಕ್ಷೆಗಳ ಪೈಕಿ ಬಹಳ ಕನಿಷ್ಠವಾಗಿರುವ ಶಿಕ್ಷೆ ಎಂಬ ನೆಲೆಯಲ್ಲಿ ಪ್ರಸ್ತಾಪಿಸಲಾಗಿದೆ. ಪಾದದಲ್ಲಿ ಎರಡು ಬೆಂಕಿಯ ಚಪ್ಪಲಿಗಳನ್ನು

ಧರಿಸಿರುವುದರಿಂದ ಮೆದುಳು ಕುದಿಯುತ್ತಿರುವ ಓರ್ವ ವ್ಯಕ್ತಿಯನ್ನು ಪ್ರವಾದಿ(ಸ) ಪರಿಚಯಿಸುತ್ತಾರೆ. ಶಿಕ್ಷೆಯ ಕಠಿಣತೆಯಿಂದಾಗಿ ತನಗೆ ಅತ್ಯಂತ ಕಠಿಣ ಶಿಕ್ಷೆ ಲಭಿಸಿದೆಯೆಂದು ಅವನಿಗೆ ಭಾಸವಾಗುವುದು. ವಾಸ್ತವದಲ್ಲಿ ಅಂತ್ಯದಿನದಂದು ಕನಿಷ್ಠ ಶಿಕ್ಷೆ ನೀಡಲ್ಪಟ್ಟ ವ್ಯಕ್ತಿ ಅವನಾಗಿರುವನು. ಅತ್ಯಂತ ಕನಿಷ್ಠತಮ ಶಿಕ್ಷೆಯೇ ಇಷ್ಟು ದೊಡ್ಡ ಶಿಕ್ಷೆಯಂತೆ ಭಾಸವಾಗುವುದಾದರೆ, ಕಠಿಣ ಶಿಕ್ಷೆಗೆ ಅರ್ಹರಾಗುವ ದೌರ್ಭಾಗ್ಯವಂತರ ಅವಸ್ಥೆ ಏನಾಗಿರಬಹುದು? ಉಬೈದ್ ಬಿನ್ ಉಮೈರ್(ರ) ವರದಿ ಮಾಡಿರುವ ಒಂದು ಪ್ರವಾದಿವಚನದಲ್ಲಿ ಈ ಮೇಲಿನ ಪ್ರವಾದಿವಚನದ ವಿವರಣೆ ಬಂದಿರುತ್ತದೆ. ಪ್ರವಾದಿ(ಸ) ಹೇಳಿರುವರು:

إِنَّ أَدْنَـي أَهْـلِ الـنَّـارِ عَـذَابًا لَرَجُلٌ عَلَيْهِ نَعْلَانِ، يَغْلِي مِنْهُمَا دِمَاغُهُ كَأَنَّهُ مِرْجَلٌ، مَسَامِعُهُ جَمْرٌ، وَأَضْرَاسُهُ جَمْرٌ، وَأَشْفَارُهُ لَهَبُ النَّارِ، وَتَخْرُجُ أَحْشَاءُ جَنْبَيْهِ مِنْ قَدَمَيْهِ، وَسَائِرُهُمْ كَالْحَبِّ الْقَلِيْلِ فِي الْمَاءِ الْكَثِيْرِ، فَهُوَ يَفُوْرُ

ನರಕವಾಸಿಗಳಲ್ಲಿ ಕನಿಷ್ಠ ಶಿಕ್ಷೆಯನ್ನು ಪಡೆಯುವವರು (ಬೆಂಕಿಯ) ಎರಡು ಚಪ್ಪಲಿಗಳನ್ನು ಧರಿಸಬೇಕಾಗುವುದು. ಆ ಕಾರಣದಿಂದಾಗಿ, ಅಗಲ ಬಾಯಿಯ ಪಾತ್ರೆಯಲ್ಲಿ ನೀರು ಕುದಿಯುವಂತೆ ಅವರ ಮೆದುಳು ಕುದಿಯುತ್ತಿರುವುದು. ಅವನ ಕಿವಿ ಮತ್ತು ದವಡೆಗಳು ಬೆಂಕಿಯುಂಡೆಗಳಂತೆ ಆಗುವುದು. ಬೆಂಕಿಯ ಜ್ವಾಲೆಗಳು ಮೇಲೇರುವುದು. ಆಂತರಿಕ ಅವಯವಗಳು ಕರಗಿ ಕಾಲಿನ ಮೂಲಕ ಹೊರ ಬೀಳುತ್ತಿರುವುದು. ಉಳಿದವರೆಲ್ಲ ತುಂಬಾ ನೀರಿನಲ್ಲಿ ಸ್ವಲ್ಪ ಧಾನ್ಯಗಳನ್ನು ಹಾಕಿ ಕುದಿಸುವಂತೆ ನರಕಾಗ್ನಿಯೊಳಗೆ ಕುದಿಯುತ್ತಿರುವರು.[2]

ಸಜ್ಜನರಾದ ಪೂರ್ವಜರು ದೇವಶಿಕ್ಷೆಯ ಬಗ್ಗೆ ಸರಿಯಾಗಿ ಅರಿತುಕೊಂಡಿದ್ದರು. ಆದುದರಿಂದ ಇತರೆಲ್ಲರಿಗಿಂತ ಮಿಗಿಲಾಗಿ ಅಲ್ಲಾಹನನ್ನು ಭಯಪಡುತ್ತಿದ್ದರು ಮತ್ತು ಅವನ ಬಗ್ಗೆ ಜಾಗರೂಕತೆಯನ್ನು ಪಾಲಿಸುವವರಾಗಿದ್ದರು. ಎಲ್ಲ ರೀತಿಯ ಕೆಡುಕುಗಳಿಂದ ದೂರವುಳಿಯಲು ಅವರು ಗರಿಷ್ಠ ಪ್ರಯತ್ನಿಸುತ್ತಿದ್ದರು. ಆತ್ಮನಿಯಂತ್ರಣಕ್ಕಾಗಿ ಹೊಸ ಹೊಸ ಮಾರ್ಗೋಪಾಯಗಳನ್ನು ಕಂಡುಕೊಂಡರು. ಈ ರೀತಿ ಪೈಶಾಚಿಕ ಪ್ರಲೋಭನೆಗಳಿಂದ ದೂರ ಉಳಿಯಲು ಪರಿಶ್ರಮಿಸಿದರು. ಒಂದು ಉದಾಹರಣೆಯನ್ನು ನೋಡಿರಿ. ವಿದ್ವಾಂಸರಾಗಿದ್ದ ಅಹ್ನಫ್ ಬಿನ್ ಕೈಸ್(ರ) ರಾತ್ರಿ ಎಲ್ಲರೂ ಮಲಗಿ ನಿದ್ರಿಸಿದ ಬಳಿಕ ತಮ್ಮ ಕೈ ಬೆರಳುಗಳನ್ನು ದೀಪದ ಜ್ವಾಲೆಯ ಮೇಲೆ ಹಿಡಿಯುತ್ತಿದ್ದರು. ಅದು ಬಿಸಿಯಾಗಿ ಬೊಬ್ಬೆ ಬಂದರೆ ಅದನ್ನುದ್ದೇಶಿಸಿ, ಏ ಅಹ್ನಫ್! ಈ

ಅಗ್ನಿಯು ನಿನ್ನ ಪಾಪದ ಪ್ರತಿಫಲ. ಈ ದಿನ ನೀನು ಮಾಡಿದ ತಪ್ಪಿಗೆ ನಿನ್ನನ್ನು ರಕ್ಷಿಸುವವರು ಯಾರಿದ್ದಾರೆ? ನಿಶ್ಚಿತ ದಿನದಂದು ಸಿಗಲಿರುವ ದೇವನ ಶಿಕ್ಷೆಯನ್ನು ಮರೆತು, ಕೆಟ್ಟ ಕೃತ್ಯಗಳಲ್ಲಿ ನಿರತನಾಗುವಂತೆ ಮಾಡಿದ್ದು ಯಾವುದು? ತಡ ರಾತ್ರಿಯ ವರೆಗೂ ಆ ವ್ಯಕ್ತಿ ಈ ರೀತಿ ಸ್ವಯಂ ತನ್ನನ್ನೇ ಪ್ರಶ್ನಿಸಿಕೊಳ್ಳುತ್ತಿದ್ದರು.

ಹ. ಇಬ್ರಾಹೀಮ್ ತೈಮಿ(ರ) ಒಮ್ಮೆ ಹೇಳಿದರು: ನಾನು ನನ್ನ ಕಲ್ಪನಾ ಲೋಕದಲ್ಲಿ ಸ್ವರ್ಗ ಸಂದರ್ಶನ ನಡೆಸಿದೆ. ಅದರ ಸಿಹಿಯಾದ ಮನೋಹರವಾದ ಫಲಗಳನ್ನು ತಿಂದೆ. ಸ್ವರ್ಗದ ತೊರೆಗಳಿಂದ ಸ್ವಚ್ಛವಾದ ನೀರನ್ನು ಕುಡಿದೆ. ಸುಂದರಿಯರಾದ ಕನ್ಯೆಯರನ್ನು ನೋಡಿದೆ. ಬಳಿಕ ನಾನು ನರಕಕ್ಕೆ ಹೋದೆ. ಕಹಿಯಾದ ಹಣ್ಣುಗಳನ್ನು ತಿಂದೆ. ಕುದಿಯುತ್ತಿರುವ ಕೆಟ್ಟ ಪಾನೀಯವನ್ನು ಕುಡಿಯಲು ಪ್ರಯತ್ನಿಸಿದೆ. ದೇಹಕ್ಕೆ ಸಂಕೋಲೆ, ಬೀಗಗಳಿಂದ ಬಂಧಿಸಿ ಪರೀಕ್ಷಿಸಲ್ಪಟ್ಟೆ. ಬಳಿಕ ನಾನು ನನ್ನ ಆತ್ಮದೊಂದಿಗೆ ಪ್ರಶ್ನಿಸಿದೆ, 'ಈ ಪೈಕಿ ಯಾವ ತಾಣವನ್ನು ನೀನು ಬಯಸುವೆ?' ಆತ್ಮ ಹೇಳಿತು, 'ನಾನು ಇಹಲೋಕದಲ್ಲೇ ಇದ್ದು ಮತ್ತಷ್ಟು ಒಳಿತುಗಳನ್ನು ಮಾಡಬಯಸುವೆ.' ನಾನು ಹೇಳಿದೆ, 'ನೀನು ಬಯಸಿದಂತೆ ನೀನು ಇಹಲೋಕದಲ್ಲೇ ಇರುವೆ. ಇನ್ನು ಸತ್ಕರ್ಮಗಳಲ್ಲಿ ನಿರತನಾಗಿರು.'

ಸ್ವರ್ಗದ ಸುಖಾಡಂಬರಗಳು, ನರಕದ ಕಠಿಣ ಶಿಕ್ಷೆಗಳ ವಿವರಣೆ ದೇಹೇಚ್ಛೆಗಳನ್ನು ನಿಯಂತ್ರಿಸಲಿಕ್ಕೆ ಸಾಧ್ಯವಾಗುವ ಪ್ರಬಲ ಪ್ರೇರಕಗಳಾಗಬೇಕಿದೆ.

---

1. ಹಾಕಿಮ್ 1/287. ಅಹ್ಮದ್ 4/268, 272, ದಾರಿಮಿ 2/330, ಇಬ್ನು ಹಿಬ್ಬಾನ್ 644, 667.

2. ಬಸ್ಸಾರ್, ಕನ್ಝುಲ್ ಆಮಾಲ್ 39545.

7. ಪುಣ್ಯ ಮತ್ತು ಪಾಪ

عَنْ وَابِصَةَ بْنِ مَعْبَدٍ رَضِيَ اللّٰهُ عَنْهُ، قَالَ: أَتَيْتُ رَسُوْلَ اللّٰهِ ﷺ، وَأَنَا أُرِيْدُ أَنْ أَدَعَ شَيْئًا مِنَ الْبِرِّ وَالإِثْمِ إِلَّا سَأَلْتُ عَنْهُ، فَقَالَ لِي: أُدْنُ يَا وَابِصَةُ، فَدَنَوتُ مِنْهُ حَتَّى مَسَّتْ رُكْبَتِي رُكْبَتَهُ، فَقَالَ لِي: يَا وَابِصَةُ، أُخْبِرُكَ عَمَّا جِئْتَ تَسْأَلُ عَنْهُ؟ قُلْتُ: يَا رَسُوْلَ اللّٰهِ، أَخْبِرْنِي، قَالَ: جِئْتَ تَسْأَلُ عَنِ الْبِرِّ وَالإِثْمِ؟ قُلْتُ: نَعَمْ، فَجَمَعَ أَصَابِعَهُ الثَّلَاثَ، فَجَعَلَ يَنْكُتُ بِهَا فِي صَدْرِي، وَيَقُوْلُ: يَا وَابِصَةُ اسْتَفْتِ قَلْبَكَ، الْبِرُّ مَا اطْمَئَنَّتْ إِلَيْهِ النَّفْسُ، وَاطْمَأَنَّ إِلَيْهِ الْقَلْبُ، وَالإِثْمُ مَا حَاكَ فِي الْقَلْبِ وَتَرَدَّدَ فِي الصَّدْرِ، وَإِنْ أَفْتَاكَ النَّاسُ وَأَفْتَوْكَ.

ವಾಬಿಸ ಬಿನ್ ಮಅ್‌ಬದಿ(ರ) ವರದಿ ಮಾಡಿರುತ್ತಾರೆ. ನಾನು ಪ್ರವಾದಿ ವರ್ಯರ(ಸ) ಬಳಿಗೆ ಹೋದೆ. ಪಾಪ-ಪುಣ್ಯಗಳ ಬಗ್ಗೆ ವಿವರವಾಗಿ ಕೇಳಿ ತಿಳಿದುಕೊಳ್ಳಬೇಕೆಂಬುದು ನನ್ನ ಉದ್ದೇಶವಾಗಿತ್ತು. ಪ್ರವಾದಿ(ಸ) ಹೇಳಿದರು: ವಾಬಿಸ್! ನನ್ನ ಸಮೀಪ ಬಂದು ಕುಳಿತುಕೊಳ್ಳಿ. ನಾನು ಅವರ ಹತ್ತಿರ ಕುಳಿತೆ. ನನ್ನ ಮೊಣಕಾಲು ಅವರ ಮೊಣಕಾಲಿಗೆ ತಾಗುತ್ತಿತ್ತು. ಅವರು(ಸ) ನನ್ನೊಂದಿಗೆ ಪ್ರಶ್ನಿಸಿದರು: ನೀವು ಏನನ್ನು ಕೇಳಲಿಕ್ಕೆಂದು ನನ್ನ ಬಳಿಗೆ ಬಂದಿರುವಿರೆಂಬುದನ್ನು ನಾನು ಹೇಳಲೇ? ನಾನು ಉತ್ತರಿಸಿದೆ: ಅಲ್ಲಾಹನ ಪ್ರವಾದಿಗಳೇ! ಹೇಳಿರಿ. ಅವರು ಹೇಳಿದರು: ಪಾಪ-ಪುಣ್ಯಗಳ ಕುರಿತು ತಿಳಿದುಕೊಳ್ಳಲಿಕ್ಕಲ್ಲವೇ ನೀವು ಬಂದಿರುವುದು? ನಾನು ಹೌದೆಂದೆ. ಆಗ ಪ್ರವಾದಿ(ಸ) ತಮ್ಮ ಮೂರು ಕೈ ಬೆರಳುಗಳನ್ನು ಸೇರಿಸಿ ಹಿಡಿದು ನನ್ನ

ಎದೆಯ ಮೇಲೆ ತಟ್ಟುತ್ತಾ ಹೀಗೆ ಹೇಳಿದರು: ವಾಬಿಸ್! ಸ್ವಂತ ಹೃದಯ ದೊಂದಿಗೆ ಫತ್ವಾ ಕೇಳು. ಮನಸ್ಸಿಗೆ ಸಮಾಧಾನ ಮತ್ತು ಆತ್ಮಕ್ಕೆ ಸಂತೃಪ್ತಿ ಅನುಭವವಾಗುವುದಾದರೆ ಅದು ಪುಣ್ಯ ಕೆಲಸ. ಮನಸ್ಸಿಗೆ ಅಸ್ವಸ್ಥತೆ ಮತ್ತು ಆತ್ಮಕ್ಕೆ ಅಸಂತೃಪ್ತಿ ಅನುಭವವಾಗುವುದಾದರೆ ಅದು ಪಾಪಕಾರ್ಯ. ಜನರು ಯಾವ ರೀತಿ ಫತ್ವ ನೀಡಿದರೂ ಸರಿ.*

ಒಳಿತನ್ನು ಆದೇಶಿಸುವ ಮತ್ತು ಕೆಡುಕಿನಿಂದ ತಡೆಯುವ ಒಂದು ಅಗೋಚರ ಸಾಮರ್ಥ್ಯವು ಪ್ರತಿಯೊಬ್ಬ ಮಾನವನಲ್ಲಿಯೂ ಇರುತ್ತದೆ. ಪ್ರತಿಯೊಬ್ಬ ವ್ಯಕ್ತಿಯಲ್ಲೂ ಒಳಿತಿನೊಂದಿಗೆ ಪ್ರೀತಿ ಮತ್ತು ಕೆಡುಕಿನ ಬಗ್ಗೆ ದ್ವೇಷ ಭಾವನೆಯು ರೂಢ ಮೂಲ ವಾಗಿರುತ್ತದೆ. ಸತ್ಕರ್ಮಗಳನ್ನು ಎಸಗಿದರೆ ಸಂತೋಷಗೊಳ್ಳುವ ಮತ್ತು ಕೆಡುಕುಗಳು ಸಂಭವಿಸಿ ಬಿಟ್ಟರೆ ನೋವು ಅನುಭವಿಸುವ ಪ್ರಕೃತಿದತ್ತವಾದ ವ್ಯವಸ್ಥೆ! ಉತ್ತರ ದಿಕ್ಕನ್ನು ಮಾತ್ರ ಸೂಚಿಸುವ ದಿಕ್ಸೂಚಿ ಮಾಪಕದಂತೆ ಒಳಿತಿನೆಡೆಗೆ ಮಾತ್ರ ಮುನ್ನಡೆಸುವ ಅದೃಶ್ಯವಾದ ಈ ಸಾಮರ್ಥ್ಯವನ್ನು ವಿದ್ವಾಂಸರು ಆತ್ಮಸಾಕ್ಷಿ ಎಂದು ಕರೆದಿದ್ದಾರೆ.

ಶರೀರದಲ್ಲಿ ಬಿಳಿ ರಕ್ತಕಣಗಳಿರುವಂತೆ ಹೃದಯದಲ್ಲಿ ಆತ್ಮಸಾಕ್ಷಿ ಇದೆ. ಅದು ಸದಾ ಕ್ರಿಯಾಶೀಲವಾಗಿರುತ್ತದೆ. ಪಾಪಕೃತ್ಯಗಳು ಅದನ್ನು ನಿರಂತರ ಬೇಟೆಯಾಡುತ್ತಿ ರುತ್ತವೆ. ಅದು ಅಕ್ರಮವನ್ನು ಮಾಡುವ ಮನಸ್ಸಿನಿಂದ ಪ್ರೇರಣೆಯನ್ನು ಮೂಲದಲ್ಲೇ ಚಿವುಟಿ ಹಾಕಲು ಪ್ರಯತ್ನಿಸುತ್ತಿರುತ್ತದೆ. ರೋಗವನ್ನು ಹರಡುವ ಬೀಜಗಳ ಬಗ್ಗೆ ಹೃದಯಕ್ಕೆ ಮುನ್ನೆಚ್ಚರಿಕೆಯನ್ನು ನೀಡುತ್ತಿರುತ್ತದೆ. ಸಚ್ಚಾರಿತ್ರ್ಯ ಮತ್ತು ಧರ್ಮನಿಷ್ಠೆಯ ಆಧಾರ ಸ್ತಂಭವಾಗಿ ಪರಿಗಣಿಸಲ್ಪಡುವ ಈ ಆತ್ಮಸಾಕ್ಷಿಯನ್ನು 'ಮಾನವನನ್ನು ಸೃಷ್ಟಿಸಿದ ಪ್ರಕೃತಿ' (ಅರ್ರೂಮ್: 30), 'ಹಳಿಯುವ ಚಿತ್ತ' (ಅಲ್ ಕಿಯಾಮ: 2) ಎಂದು ಮುಂತಾಗಿ ಪವಿತ್ರ ಕುರ್‌ಆನಿನಲ್ಲಿ ಪರಿಚಯಿಸಲಾಗಿದೆ.

ಪ್ರವಾದಿ ಮುಹಮ್ಮದ್(ಸ)ರೊಂದಿಗೆ ಪಾಪ-ಪುಣ್ಯಗಳ ಬಗ್ಗೆ ಕೇಳಿ ಅರಿತು ಕೊಳ್ಳಲು ಬಂದ ಅನುಯಾಯಿಗೆ ಪ್ರವಾದಿಯವರು(ಸ) ನೀಡಿದ ಸಾರವತ್ತಾದ ಉತ್ತರವೇ ಪ್ರಸ್ತುತ ಹದೀಸ್ ವಚನ.

ಹೃದಯವು ಒಳಿತು ಮತ್ತು ಉತ್ತಮ ಕೆಲಸವೆಂದು ಸಾಕ್ಷಿ ನೀಡುವ ಕೆಲಸಗಳು

* ಅಹ್ಮದ್ 4/228. ದಾರಿಮಿ 2/245. ಬಸ್ಸಾರ್, ತಬ್ರಾನೀ-ಕಬೀರ್, ಅಬೂಯಅ್‌ಲ, ಮುಸ್ನದ್ 1586. ಬುಖಾರಿ, ಅತ್ತಾರೀಖ್ ಉದ್ಧರಿಸಿದ್ದಾರೆ. ಹಾಫಿಝ್ ಮುಂದಿರಿ ಹೇಳುತ್ತಾರೆ, ಇದರ ವರದಿಯ ಪರಂಪರೆ ಹಸನ್ ಆಗಿರುತ್ತದೆ. (ಅತ್ತರ್ಗೀಬ್ ವತ್ತರ್‌ಹೀಬ್ ಭಾಗ: 2, ಪುಟ: 556)

ಪುಣ್ಯ ಕೆಲಸಗಳಾಗಿವೆ. ಮನಸ್ಸಿಗೆ ಅರೋಚಕವೆನಿಸುವ ಮತ್ತು ಅಸಹನೆಯನ್ನುಂಟು ಮಾಡುವ ವಿಷಯಗಳು ಪಾಪಕೃತ್ಯಗಳಾಗಿವೆ ಎಂಬುದು ಈ ಹದೀಸ್ ನೀಡುವ ಪಾಠ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಪುಣ್ಯ ಕೆಲಸಗಳು ಮನಸ್ಸಿಗೆ ಸಂತೋಷ ಮತ್ತು ಸಮಾಧಾನವನ್ನು ನೀಡಿದರೆ, ಪಾಪಕೃತ್ಯಗಳು ಹೃದಯವನ್ನು ನೋಯಿಸುತ್ತದೆ ಮತ್ತು ಅಸ್ವಸ್ಥಗೊಳಿಸುತ್ತದೆ. ಪ್ರವಾದಿ(ಸ) ಹೇಳಿರುವರು:

الْبِرُّ حُسْنُ الْخُلُقِ، وَالإِثْمُ مَا حَاكَ فِي صَدْرِكَ وَكَرِهْتَ أَنْ يَطَّلِعَ عَلَيْهِ النَّاسُ

ಸಚ್ಚಾರಿತ್ರ್ಯವೇ ಪುಣ್ಯ ಮತ್ತು ನಿನ್ನ ಮನಸ್ಸಿಗೆ ಚುಚ್ಚುವ ಹಾಗೂ ಜನರು ತಿಳಿಯಬಾರದು ಎಂದು ನೀನು ಬಯಸುವ ಕ್ರಿಯೆಯೇ ಪಾಪವಾಗಿದೆ.[1]

ಅಬೂ ಉಮಾಮಾ ಬಿನ್ ಬಾಹಿಲಿ(ರ) ಹೇಳುತ್ತಾರೆ. ಒಮ್ಮೆ ಓರ್ವರು ಬಂದು ಪ್ರವಾದಿಯವರೊಂದಿಗೆ(ಸ) ಪ್ರಶ್ನಿಸಿದರು: مَا الإِثْمُ؟ ಪಾಪವೆಂದರೇನು? ಆಗ ಪ್ರವಾದಿ(ಸ) ಹೇಳಿದರು: إِذَا حَاكَ فِي نَفْسِكَ شَيْءٌ فَدَعْهُ ನಿನ್ನ ಮನಸ್ಸಿಗೆ ಅಸ್ವಸ್ಥತೆಯನ್ನುಂಟು ಮಡುವ ಕೆಲಸಗಳು ಏನಿವೆಯೋ ಅವುಗಳು ಪಾಪವಾಗಿವೆ. ನೀನವುಗಳನ್ನು ವರ್ಜಿಸಬೇಕು. ಪುನಃ ಪ್ರಶ್ನಿಸಲಾಯಿತು: فَمَا الإِيْمَانُ؟ ಹಾಗಾದರೆ ವಿಶ್ವಾಸವೆಂದರೇನು? ಪ್ರವಾದಿ(ಸ) ಹೇಳಿದರು: إِذَا سَاءَتْكَ سَيِّئَتُكَ وَسَرَّتْكَ حَسَنَتُكَ فَأَنْتَ مُؤْمِنٌ ನೀನೆಸಗುವ ತಪ್ಪು ಕೆಲಸಗಳು ನಿನ್ನನ್ನು ನೋಯಿಸುವುದು ಮತ್ತು ನೀನು ಮಾಡುವ ಒಳಿತುಗಳು ನಿನ್ನನ್ನು ಸಂತೋಷಪಡಿಸುವುದು ಎಂದಾದರೆ ನೀನು ವಿಶ್ವಾಸಿಯಾಗಿರುವೆ.[2]

ಕೆಲವು ಸಾರ್ವಕಾಲಿಕ ವಾಸ್ತವಿಕತೆಗಳನ್ನು ಕೂಡ ಈ ಹದೀಸ್ ಮುಂದಿಡುತ್ತದೆ. ಇಸ್ಲಾಮಿನ ಶರೀಅತ್ ಕಾನೂನುಗಳಾಗಿ ಮಾಡಿರುವ ಎಲ್ಲ ವಿಷಯಗಳು ಮನುಷ್ಯನ ಆತ್ಮದ ದಾಹವನ್ನು ನೀಗಿಸಲಿಕ್ಕೆ ಮತ್ತು ಅದನ್ನು ತೃಪ್ತಿಪಡಿಸುವುದಕ್ಕೆ ಇರುವಂತಹವುಗಳಾಗಿವೆ. ಧರ್ಮವು ಏನನ್ನಾದರೂ ನಿಷೇಧಿಸಿದ್ದರೆ, ಅಂತಹ ಕೆಲಸಗಳನ್ನು ಮನುಷ್ಯ ಪ್ರಕೃತಿಯೇ ಸ್ವಯಂ ನಿಷೇಧಿಸುತ್ತದೆ. ಹೃದಯದೊಂದಿಗೆ ಫತ್ವವನ್ನು ಕೇಳಿ ಎಂಬ ಮಾತಿನ ಮೂಲಕ ಧರ್ಮ ಮತ್ತು ಆತ್ಮಸಾಕ್ಷಿ ಎರಡು ಪ್ರತ್ಯೇಕ ವಿಷಯಗಳಲ್ಲ, ಬದಲಾಗಿ ಒಂದು ಇನ್ನೊಂದಕ್ಕೆ ಪೂರಕವಾಗಿದೆ ಎಂದು ಪ್ರವಾದಿ(ಸ) ಕಲಿಸಿರುವರು. ಪ್ರವಾದಿ(ಸ) ಹೇಳಿದ್ದಾರೆ:

إِنَّ الْمُؤْمِنَ إِذَا أَذْنَبَ ذَنْباً كَانَتْ نُكْتَةٌ سَوْدَاءُ فِي قَلْبِهِ فَإِنْ تَابَ وَنَزَعَ وَاسْتَغْفَرَ صُقِلَ مِنْهَا، وَإِنْ
زَادَ زَادَتَ حَتَّى يُغَلَّفَ بِهَا قَلْبُهُ

'ಸತ್ಯವಿಶ್ವಾಸಿಯು ಒಂದು ಪಾಪಕೃತ್ಯವೆಸಗಿದರೆ, ಅವನ ಹೃದಯದಲ್ಲಿ ಒಂದು ಕಪ್ಪು ಕಲೆಯುಂಟಾಗುವುದು. ಅವನು ಪಶ್ಚಾತ್ತಾಪ ಪಟ್ಟು ಮರಳಿದರೆ, ಪಾಪ ವಿಮೋಚನೆಯನ್ನು ಬಯಸಿದರೆ ಹಿಂದಿನಂತೆಯೇ ಅವನ ಮನಸ್ಸು ಪ್ರಕಾಶಭರಿತ ವಾಗುವುದು. ಆದರೆ ಪಾಪಕೃತ್ಯಗಳನ್ನು ನಿರಂತರ ಮುಂದುವರಿಸುತ್ತಾ ಹೋದರೆ, ಕಪ್ಪುಕಲೆಯು ವೃದ್ಧಿಸುವುದು. ಹೀಗೆ ಅವನ ಹೃದಯವು ಕೆಟ್ಟ ಕೆಲಸಗಳಿಂದ ಸಂಪೂರ್ಣವಾಗಿ ಮುಳುಗಿ ಬಿಡುವುದು.'[3]

ಹೃದಯವು ಈ ಅವಸ್ಥೆಗೆ ತಲುಪಿಬಿಟ್ಟರೆ, ಆ ಬಳಿಕ ಅದಕ್ಕೆ ಒಳಿತಿನೊಂದಿಗೆ ಪ್ರೀತಿ ಮತ್ತು ಕೆಡುಕಿನೊಂದಿಗೆ ದ್ವೇಷ ಉಂಟಾಗುವುದಿಲ್ಲ. ಸರಿತಪ್ಪುಗಳು ಅವರ ದೃಷ್ಟಿಯಲ್ಲಿ ಒಂದೇ ರೀತಿಯಾಗಿ ಬಿಡುತ್ತದೆ. ಪಾಪಗಳನ್ನು ಎಸಗಿದರೆ ಅಸ್ವಸ್ಥತೆಯಾಗಲಿ, ಸತ್ಕರ್ಮ ಗಳನ್ನು ಮಾಡಿದರೆ ಸಂತೋಷವಾಗಲಿ ಉಂಟಾಗುವುದಿಲ್ಲ. ಎಷ್ಟೇ ಪರಿಣಾಮಕಾರಿ ಉಪದೇಶಗಳು ಕೂಡ ಅವರನ್ನು ಬದಲಿಸುವುದಿಲ್ಲ. ಕಣ್ಣು ಕಾಣದವರಿಗೆ ಬೆಳಕು ಎಷ್ಟು ತೀಕ್ಷ್ಣವಾಗಿದ್ದರೂ ಗೋಚರಿಸದಿರುವಂತೆ, ಕೇಳುವ ಶಕ್ತಿ ನಷ್ಟ ಹೊಂದಿದವರಿಗೆ ಎಷ್ಟೇ ದೊಡ್ಡ ಶಬ್ದವಾದರೂ ಕೇಳಲು ಸಾಧ್ಯವಿಲ್ಲದಿರುವಂತೆ ಅವರ ಪರಿಸ್ಥಿತಿ ಇರುತ್ತದೆ. ಆದುದರಿಂದ ಬಹಳ ಕ್ಷುಲ್ಲಕ ಮತ್ತು ಪರವಾಗಿಲ್ಲ ಎಂದು ನಾವು ಭಾವಿಸುವ ಸಣ್ಣ ತಪ್ಪುಗಳನ್ನು ಕೂಡ ನಾವು ಬಹಳ ಗಂಭೀರವಾಗಿ ಪರಿಗಣಿಸಬೇಕು. ಸತ್ಕರ್ಮಗಳಲ್ಲಿ ಸದಾ ನಿರತರಾಗಿ ನಮ್ಮೊಳಗಿನ ಪ್ರಕಾಶವನ್ನು ಇನ್ನಷ್ಟು ಪ್ರಭಾವಪೂರ್ಣಗೊಳಿಸಲು ಸತ್ಯವಿಶ್ವಾಸಿಗಳು ಸದಾ ಪರಿಶ್ರಮಿಸುತ್ತಿರಬೇಕು.

---

1. ಮುಸ್ಲಿಮ್ 2553

2. ಅಹ್ಮದ್ 5/251, ಮುಂದಿರಿ 2/559

3. ತಿರ್ಮಿದಿ 3334, ನಸಾಈ – ಫೀ ಅಮಲಿಲ್ ಯೌಮಿ ವಲ್ಲೈಲ್ 418, ಇಬ್ನು ಮಾಜಃ 4244, ಇಬ್ನು ಹಿಬ್ಬಾನ್ 930, ಹಾಕಿಮ್ 2/517.

8. ನಾಲ್ಕು ವಿಧದ ಹೃದಯಗಳು

عَنْ أَبِي سَعِيْدٍ رَضِيَ اللّٰهُ عَنْهُ، قَالَ: قَالَ رَسُوْلُ اللّٰهِ ﷺ "الْقُلُوْبُ أَرْبَعَةٌ: قَلْبٌ أَجْرَدُ فِيْهِ مِثْلَ السِّرَاجِ يُزْهِرُ، وَقَلْبٌ أَغْلَفُ مَرْبُوْطٌ عَلَى غِلاَفِهِ، وَقَلْبٌ مَنْكُوْسٌ، وَقَلْبٌ مُصْفَحٌ، فَأَمَّا الْقَلْبُ الأَجْرَدُ فَقَلْبُ الْمُؤْمِنِ سِرَاجُهُ فِيْهِ نُوْرُهُ وَأَمَّا الْقَلْبُ الأَغْلَفُ فَقَلْبُ الْكَافِرِ، وَأَمَّا الْقَلْبُ الْمَنْكُوسُ فَقَلْبُ الْمُنَافِقِ، عَرَفَ ثُمَّ أَنْكَرَ، وَأَمَّا الْقَلْبُ الْمُصْفَحُ فَقَلْبٌ فِيْهِ إِيْمَانٌ وَنِفَاقٌ، فَمَثَلُ الإِيْمَانِ فِيْهِ، كَمَثَلِ الْبَقْلَةِ يَمُدُّهَا الْمَاءُ الطَّيِّبُ، فَمَثَلُ النِّفَاقِ فِيْهِ كَمَثَلِ الْقُرْحَةِ يَمُدُّهَا الْقَيْحُ وَالدَّمُ، فَأَيُّ الْمُدَّتَيْنِ غَلَبَتْ عَلَى الأُخْرَى غَلَبَتْ عَلَيْهِ"

ಅಬೂ ಸಈದ್(ರ)ರಿಂದ ವರದಿ. ಪ್ರವಾದಿವರ್ಯರು(ಸ) ಹೇಳಿದರು: ನಾಲ್ಕು ವಿಧದ ಹೃದಯಗಳಿವೆ. ದೀಪದಂತೆ ಪ್ರಕಾಶ ಹೊರಡಿಸುವ ನಿಷ್ಕಳಂಕ ಹೃದಯ, ಮುದ್ರೆಯೊತ್ತಲ್ಪಟ್ಟ ಹೃದಯ, ತಲೆಕೆಳಗಾದ ಹೃದಯ, ಭಾರರಹಿತ ಹೃದಯ. ನಿಷ್ಕಳಂಕ ಹೃದಯವು ಸತ್ಯವಿಶ್ವಾಸಿಗಳದ್ದಾಗಿರುತ್ತದೆ. ಮುದ್ರೆಯೊತ್ತಲ್ಪಟ್ಟ ಹೃದಯ ಸತ್ಯನಿಷೇಧಿಗಳದ್ದು. ಸತ್ಯವು ಮನವರಿಕೆಯಾದ ಬಳಿಕವೂ ನಿಷೇಧಿಸುವ ಕಪಟವಿಶ್ವಾಸಿಗಳ ಹೃದಯ ತಲೆಕೆಳಗಾಗಿರುತ್ತದೆ. ಸತ್ಯವಿಶ್ವಾಸ ಮತ್ತು ಕಾಪಟ್ಯವು ಒಟ್ಟು ಸೇರಿದ ಹೃದಯವು ಭಾರರಹಿತವಾಗಿರುತ್ತದೆ. ಇಂತಹ ಹೃದಯದಲ್ಲಿರುವ ವಿಶ್ವಾಸದ ಉದಾಹರಣೆಯು ಶುದ್ಧ ಜಲದಿಂದ ಪೋಷಿಸಲ್ಪಟ್ಟ ಸಸ್ಯದಂತಿರುವುದು. ಕಾಪಟ್ಯದ ಉದಾಹರಣೆಯು ರಕ್ತ ಮತ್ತು ಕೀವು ಹರಿಯುತ್ತಿ

ರುವ ಹುಣ್ಣಿನಂತಿರುವುದು. ಅವೆರಡರ ಪೈಕಿ ಯಾವುದು ಹೆಚ್ಚಾಗುವುದೋ ಅದರ ಗುಣಗಳನ್ನೇ ಅಂತಹ ಹೃದಯಗಳು ಹೊಂದಿರುವುದು.*

ಒಳಿತು-ಕೆಡುಕುಗಳ ಕೇಂದ್ರ ಸ್ಥಾನವು ಹೃದಯವಾಗಿರುತ್ತದೆ. ಒಳಿತುಗಳು ಮೊಳಕೆ ಯೊಡೆಯುವುದು ಮತ್ತು ಕೆಡುಕುಗಳು ನೀರು ಆಹಾರ ಸ್ವೀಕರಿಸಿ ಶಕ್ತಿಯನ್ನು ಗಳಿಸುವುದು ಇಲ್ಲಿಯೇ ಆಗಿರುತ್ತದೆ. ಮನುಷ್ಯನ ಭಾವನೆಗಳು ಮತ್ತು ಇಚ್ಛೆಗಳ ಕೇಂದ್ರಸ್ಥಾನವೂ ಹೃದಯವೇ ಆಗಿದೆ.

ಮನುಷ್ಯನ ಬೆಳವಣಿಗೆ ಮತ್ತು ವಿಕಾಸವು ಹೃದಯದೊಂದಿಗೆ ಸಂಬಂಧಪಟ್ಟಿದೆ. ಹೃದಯವು ಸಂಸ್ಕರಿಸಲ್ಪಡುವಾಗ ಮನುಷ್ಯನು ಉತ್ತಮನಾಗುವನು. ಹೃದಯವು ಕೆಟ್ಟು ಹೋದರೆ ಮನುಷ್ಯನೂ ಕೆಟ್ಟು ಹೋಗುವನು. ಇಮಾಮ್ ಬೈಹಕಿಯವರು ಅಬೂ ಹುರೈರಾ(ರ)ರಿಂದ ವರದಿ ಮಾಡಿರುವ ಪ್ರವಾದಿವಚನವು ಹೀಗಿದೆ:

الْقَلْبُ مَلِكٌ، وَلَهُ جُنُودٌ، فَإِذَا صَلَحَ الْمَلِكُ صَلَحَتْ جُنُوْدُهُ، وَإِذَا فَسَدَ الْمَلِكُ فَسَدَتْ جُنُودُهُ،
وَالْأُذُنَانِ قَمْعٌ، وَالْعَيْنَانِ مَسْلَحَةٌ، وَاللِّسَانُ تَرْجُمَانٌ، وَالْيَدَانِ جَنَاحَانِ، وَالرِّجْلَانِ بَرِيْدٌ

ಮಾನವನ ಹೃದಯವು ರಾಜನಿದ್ದಂತೆ. ಅದಕ್ಕೆ ಕೆಲವು ಸೈನಿಕರಿದ್ದಾರೆ. ರಾಜನು ಒಳ್ಳೆಯವನಾದರೆ ಸೈನಿಕರೂ ಒಳ್ಳೆಯವರಾಗುವರು. ರಾಜನು ಕೆಟ್ಟವನಾದರೆ ಸೈನಿಕರೂ ಕೆಟ್ಟು ಹೋಗುವರು. ಕಿವಿಗಳು ಬಾಟಲಿಯೊಳಗೆ ನೀರು ತುಂಬಿಸಲು ಬಳಸುವ ಸೋಸುವ ಪಾತ್ರೆಯಂತೆ. ಕಣ್ಣುಗಳು ಶತ್ರುಗಳನ್ನು ವೀಕ್ಷಿಸುವ ಕಾವಲು ಸೈನ್ಯದಂತೆ. ನಾಲಗೆಯು ವಿಷಯಗಳನ್ನು ವ್ಯಕ್ತಪಡಿಸುವ ಅನುವಾದಕನಂತೆ. ಕೈಗಳು ರೆಕ್ಕೆಗಳಿಗೆ ಸಮಾನ ಮತ್ತು ಕಾಲುಗಳು ವಾರ್ತೆಗಳನ್ನು ಹುಡುಕಿ ನಡೆಯುವ ದೂತನಂತೆ.[1]

ಈ ಮೇಲಿನ ಹದೀಸ್ ವಚನದಲ್ಲಿ ಪ್ರವಾದಿ(ಸ) ಮನುಷ್ಯನ ಹೃದಯವನ್ನು ನಾಲ್ಕು ವಿಧಗಳಾಗಿ ವಿಂಗಡಿಸಿರುವರು. ವ್ಯಕ್ತಿ ಮತ್ತು ಸಮೂಹದಲ್ಲಿ ಅದು ಉಂಟು ಮಾಡುವ ಪ್ರಭಾವವನ್ನು ಅನುಸರಿಸಿ ಈ ರೀತಿಯ ವಿಂಗಡಣೆ ಮಾಡಲಾಗಿದೆ. ಒಂದನೆಯದು ದೀಪದಂತೆ ಪ್ರಕಾಶಮಯವಾದ ನಿಷ್ಕಳಂಕವಾದ ಹೃದಯ. ಅಲ್ಲಾಹ್ ಮತ್ತು ಪ್ರವಾದಿಯವರ(ಸ) ಮೇಲೆ ದೃಢ ವಿಶ್ವಾಸವಿರಿಸುವ ಮತ್ತು ಅದಕ್ಕೆ ಅನುಗುಣವಾದ

* ಇಮಾಮ್ ಅಹ್ಮದ್ 7/3. ತಬ್ರಾನಿ - ಸಗೀರ್ 1075. ಅಬೂ ನುಐಮ್ - ಹಿಲ್‌ಯತುಲ್ ಔಲಿಯಾ 4/385, ಸುಯೂತಿ - ದುರ್‍ರುಲ್ ಮನ್ಸೂರ್, ಇಬ್ನು ಕಸೀರ್ - ತಫ್ಸೀರ್ ಇಬ್ನು ಕಸೀಸ್ ಎಂಬವರು ಈ ಪ್ರವಾದಿವಚನ ಉಲ್ಲೇಖಿಸಿರುವರು. ಇವರ ವರದಿಯ ಹಿನ್ನೆಲೆಯು ಜಯ್ಯಿದ್ (ನಂಬಲರ್ಹ) ಎಂದು ಇಮಾಮ್ ಸುಯೂತಿ ಇಬ್ನು ಕಸೀರ್ ಅಭಿಪ್ರಾಯಪಟ್ಟಿದ್ದಾರೆ.

ಜೀವನವನ್ನು ಸಾಗಿಸುವ ಸತ್ಯವಿಶ್ವಾಸಿಯಾದ ಒಬ್ಬ ವ್ಯಕ್ತಿಯ ಹೃದಯವದು. أَجْرَدُ ಎಂಬ ಪದಕ್ಕೆ ತಿಳಿಯಾದುದು, ಹೊಳಪುಳ್ಳದ್ದು, ದ್ವೇಷವಿಲ್ಲದ್ದು ಎಂಬಿತ್ಯಾದಿ ಅರ್ಥಗಳಿವೆ. ನೀರಿನ ಚಿಲುಮೆಯಂತೆ ತಿಳಿಯಾದ, ಕನ್ನಡಿಯಂತೆ ಹೊಳಪುಳ್ಳ ಯಾವುದೇ ರೀತಿಯ ಮಾಲಿನ್ಯವೂ ಇಲ್ಲದ ನಿಷ್ಕಳಂಕ ಹೃದಯಕ್ಕೆ 'ಕಲ್ಬುಲ್ ಅಜ್‌ರದ್' ಎಂದು ಹೇಳುತ್ತಾರೆ. ಮಾಲಿನ್ಯದಿಂದ ರಕ್ಷಿಸಲ್ಪಟ್ಟ ಹೃದಯಕ್ಕೆ 'ಕಲ್ಬುನ್ ಸಲೀಮ್' (ಪರಿಶುದ್ಧವಾದ ಹೃದಯ) (ಅಸ್ಸಾಫ್ಫಾತ್: 84) ಎಂಬ ಪದ ಪ್ರಯೋಗವನ್ನು ಪವಿತ್ರ ಕುರ್‌ಆನಿನಲ್ಲಿ ನೋಡಬಹುದು. ಇಂತಹ ಹೃದಯಗಳು ಸ್ವಯಂ ಸದ್ಗುಣ ಸಂಪನ್ನವಾಗಿರುವುದರೊಂದಿಗೆ ಗಾಢಾಂಧಕಾರದಲ್ಲಿರುವ ದೀಪದಂತೆ ಪರಿಸರವನ್ನು ಪ್ರಕಾಶಮಯಗೊಳಿಸುತ್ತದೆ. ತಮ್ಮ ಸಂಪರ್ಕಕ್ಕೆ ಬರುವ ಎಲ್ಲರಿಗೂ ಪ್ರಕಾಶವನ್ನು ಹಂಚುವ ವಿಶಾಲ ಮನಸ್ಸು ಜನರನ್ನು ಸದಾ ಮುಂದಕ್ಕೆ ಒಯ್ಯುವ ಕೆಲಸವನ್ನು ಮಾಡುತ್ತದೆ ಎಂಬುದನ್ನು ಈ ಪ್ರವಾದಿವಚನ ನೆನಪಿಸುತ್ತದೆ. ಅಬ್ದುಲ್ಲಾ ಬಿನ್ ಅಮ್ರ್(ರ) ವರದಿ ಮಾಡಿರುತ್ತಾರೆ:

قِيْلَ: يَا رَسُولَ اللّٰهِ، أَيُّ النَّاسِ أَفْضَلُ؟ قَالَ: "كُلُّ مَخْمُومِ الْقَلْبِ، صُدُوْقِ اللِّسَانِ" قَالُوا: صُدُوْقُ اللِّسَانِ نَعْرِفُهُ، فَمَا مَخْمُومُ الْقَلْبِ؟ قَالَ: "هُوَ التَّقِيُّ النَّقِيُّ لَا إِثْمَ فِيْهِ وَلَا بَغْيَ فِيْهِ، وَلَا غِلَّ وَلَا حَسَدَ"

ಓರ್ವರು ಪ್ರಶ್ನಿಸಿದರು: ಪ್ರವಾದಿಗಳೇ! ಜನರು ಪೈಕಿ ಅತ್ಯಂತ ಶ್ರೇಷ್ಠರು ಯಾರು? ಪ್ರವಾದಿ(ಸ) ಉತ್ತರಿಸಿದರು: ಶುದ್ಧವಾದ ಹೃದಯ ಮತ್ತು ಸತ್ಯಸಂಧ ನಾಲಗೆ ಇರುವವರು. ಅನುಯಾಯಿಗಳು ಪ್ರಶ್ನಿಸಿದರು: ಸತ್ಯಸಂಧ ನಾಲಗೆ ಏನೆಂದು ನಮಗೆ ಅರ್ಥವಾಯಿತು. ಆದರೆ ಶುದ್ಧ ಹೃದಯವೆಂದರೇನು? ಆಗ ಪ್ರವಾದಿ(ಸ) ಹೇಳಿದರು: ದೇವಭಯವುಳ್ಳ, ಮಾಲಿನ್ಯಗಳಿಂದ ಮುಕ್ತವಾದ ಹೃದಯ. ಪಾಪಕೃತ್ಯ, ಕೆಟ್ಟ ಚಿಂತನೆ, ಯಾರೊಂದಿಗಾದರೂ ದ್ವೇಷ, ಅಸೂಯೆ ಅದರಲ್ಲಿ ಇರುವುದಿಲ್ಲ.[2]

ಎರಡನೆಯ ವಿಧದ ಹೃದಯ ಸತ್ಯನಿಷೇಧಿಗಳದ್ದಾಗಿರುತ್ತದೆ. ಸತ್ಯನಿಷೇಧಿಗಳ ಹೃದಯ ಅಂಧಕಾರದಿಂದ ಕೂಡಿರುತ್ತದೆ. ಪವಿತ್ರ ಕುರ್‌ಆನ್ ಹೇಳುತ್ತದೆ, 'ಅಂಧಕಾರದ ಮೇಲೆ ಅಂಧಕಾರ ಕವಿದಿದೆ. ಮನುಷ್ಯನು ತನ್ನ ಕೈಯನ್ನು ಹೊರಚಾಚಿದರೆ ಅದೂ ಅವನಿಗೆ ಕಾಣಿಸದು.' (ಅನ್ನೂರ್: 40)

ಬೆಳಕಿಗೆ ತೆರೆಯಲ್ಪಡದ, ಮುಚ್ಚಲ್ಪಟ್ಟ ಬಾಗಿಲಿನಂತೆ ಅದು ಇರುತ್ತದೆ. ಸನ್ಮಾರ್ಗಕ್ಕೆ ಅದರ ಕಣ್ಣುಗಳು ಎಂದೂ ತೆರೆಯಲ್ಪಡುವುದಿಲ್ಲ. ಮುದ್ರೆಯೊತ್ತಲ್ಪಟ್ಟ ಕಾರಣ ಹತ್ತಿರದಲ್ಲೇ ಬೆಳಕಿದ್ದರೂ ಅದನ್ನದು ಸ್ಪರ್ಶಿಸಲಾರದು. ಇಂತಹ ಹೃದಯದ ಕುರಿತು

ಪವಿತ್ರ ಕುರ್‌ಆನ್ ಈ ರೀತಿ ಹೇಳುತ್ತದೆ: ಸತ್ಯವನ್ನು ನಿಷೇಧಿಸಿದವರಿಗೆ ನೀವು ಎಚ್ಚರಿಕೆ ಕೊಟ್ಟರೂ ಕೊಡದಿದ್ದರೂ ಸರಿಯೆ. ಅವರಂತೂ ವಿಶ್ವಾಸವಿರಿಸುವವರಲ್ಲ. ಅಲ್ಲಾಹನು ಅವರ ಹೃದಯಗಳ ಹಾಗೂ ಕಿವಿಗಳ ಮೇಲೆ ಮುದ್ರೆಯೊತ್ತಿರುತ್ತಾನೆ. ಅವರ ದೃಷ್ಟಿಗಳ ಮೇಲೆ ಪರದೆ ಬಿದ್ದಿದೆ. ಅವರಿಗೆ ಘೋರ ಶಿಕ್ಷೆ ಕಾದಿದೆ. **(ಅಲ್ ಬಕರ: 6-7)**

ಮೂರನೆಯ ವಿಧದ ಹೃದಯ ಕಪಟ ವಿಶ್ವಾಸಿಗಳದ್ದಾಗಿದೆ. ವಿಶ್ವಾಸ ಮತ್ತು ಅವಿಶ್ವಾಸದೊಂದಿಗೆ ಏಕಪ್ರಕಾರ ಕಾಪಟ್ಯ ತೋರಿಸುವವರು ಕಪಟವಿಶ್ವಾಸಿಗಳು. ಲಾಭ ಗಳಿಸುವುದು ಮಾತ್ರ ಅವರ ಧರ್ಮ. 'ಲಾಭವಿರುವುದಾದರೆ ಹರಿತವಾದ ನಾಲಗೆ ಯೊಂದಿಗೆ ಅವರು ನಿಮ್ಮನ್ನು ಸ್ವಾಗತಿಸಲು ಬಂದು ಬಿಡುತ್ತಾರೆ' **(ಅಲ್ ಅಹ್‌ಝಾಬ್: 19)** ಎಂದು ಪವಿತ್ರ ಕುರ್‌ಆನ್ ನೆನಪಿಸುತ್ತದೆ. 'ಮೃತ್ಯುವಿನ ಕಡೆಗೆ ಅವರನ್ನು ಅಟ್ಟಲಾಗುತ್ತಿ ದೆಯೋ' **(ಅಲ್ ಅನ್ಫಾಲ್: 6)** ಎಂಬಂತೆ ಭೀತಿಯಿಂದ ಹೆದರಿ ಓಡಿ ಹೋಗುವರು. ಕಪಟವಿಶ್ವಾಸಿಗಳ ಉದ್ದೇಶರಾಹಿತ್ಯ ಮತ್ತು ಆದರ್ಶಶೂನ್ಯತೆಯ ಕುರಿತು ತಲೆಕೆಳಗಾಗಿ ತೂಗು ಹಾಕಲಾದ ಹೃದಯ ಎಂದು ಪ್ರವಾದಿಯವರು(ಸ) ಹೇಳಿರುತ್ತಾರೆ.

ವಿಶ್ವಾಸ ಮತ್ತು ಕಾಪಟ್ಯವು ಒಟ್ಟಿಗೆ ಸೇರಿರುವ ಹೃದಯದ ಕುರಿತು ಹದೀಸಿನ ಕೊನೆಯಲ್ಲಿ ಚರ್ಚಿಸಲಾಗಿದೆ. ವಿಶ್ವಾಸವನ್ನು ತಿಳಿಯಾದ ನೀರಿನಿಂದ ಪೋಷಿಸಲ್ಪಟ್ಟ ಸಸ್ಯಕ್ಕೆ ಹೋಲಿಸಿದರೆ, ಕಾಪಟ್ಯವನ್ನು ಕೀವು ಮತ್ತು ರಕ್ತ ತುಂಬಿದ ಹುಣ್ಣಿಗೆ ಹೋಲಿಸ ಲಾಗಿದೆ. ಚಿಲುಮೆಯ ನೀರು ಲಭ್ಯವಾಗುವ ಸಸ್ಯಗಳು ಮತ್ತು ಅವುಗಳು ಲಭಿಸದ ಸಸ್ಯಗಳ ಮಧ್ಯೆ ವ್ಯತ್ಯಾಸವಿರುತ್ತದೆಯಲ್ಲವೇ? ನೀರು ಸಿಗುವ ಸಸ್ಯಗಳು ಬಹಳ ವಿಶ್ವಾಸ ದೊಂದಿಗೆ ಬೆಳೆಯುತ್ತವೆ. ಅದು ಲಭಿಸದ ಸಸ್ಯಗಳು ಬಾಡಿ ಒಣಗಿ ಹೋಗುತ್ತವೆ. ವಿಶ್ವಾಸವು ಇದೇ ರೀತಿಯಾಗಿದೆ. ಹೃದಯಕ್ಕೆ ಹರಿಯುವ ಚಿಲುಮೆಯ ನೀರದು. ಅದು ಲಭಿಸಿದಾಗ ಹೃದಯವು ವಿಶ್ವಾಸ ದೃಢತೆಯನ್ನು ಪಡೆದು ಪ್ರಕಾಶ ಭರಿತವಾಗುತ್ತದೆ. ಆದರೆ ಕಾಪಟ್ಯವು ಹಾಗಲ್ಲ, ರಕ್ತ ಮತ್ತು ಕೀವಿನಂತೆ ಅದು ಹೃದಯ ವನ್ನು ರೋಗ ಗ್ರಸ್ತಗೊಳಿಸಿ ಬಿಡುತ್ತದೆ. ಸರಿಯಾಗಿ ಗಮನ ಹರಿಸದೆ ಹೋದರೆ ಹೃದಯವು ಕೆಲಸವನ್ನೇ ನಿಲ್ಲಿಸಿ ಬಿಡಲು ಅದು ಕಾರಣವಾಗಬಲ್ಲದು. ಕಾಪಟ್ಯದ ಕುರಿತು ಜಾಗ್ರತೆ ವಹಿಸಬೇಕು ಮತ್ತು ಅದರಿಂದ ದೂರ ಉಳಿಯಬೇಕೆಂದು ಈ ಹದೀಸ್ ನಮ್ಮನ್ನು ಎಚ್ಚರಿಸುತ್ತದೆ.

---

1. ಬೈಹಕಿ – ಶುಅ್‌ಬುಲ್ ಈಮಾನ್: 109–110.
2. ಇಬ್ನುಮಾಜಃ – 4216, ಬೈಹಕಿ – ಶುಅ್‌ಬುಲ್ ಈಮಾನ್ 6604.

9. ನೇರಮಾರ್ಗದ ಉದಾಹರಣೆ

عَنْ النَّوَاسِ بْنِ سَمْعَانَ الأَنْصَارِيِّ رَضِيَ اللّٰهُ عَنْهُ، عَنْ رَسُولُ اللّٰهِ ﷺ قَالَ: "ضَرَبَ اللّٰهُ مَثَلاً صِرَاطًا مُسْتَقِيمًا، وَعَلَى جَنْبَتَيِ الصِّرَاطِ، سُوْرَانِ، فِيْهِمَا أَبْوَابٌ مُفَتَّحَةٌ، وَعَلَى الأَبْوَابِ سُتُورٌ مُرْخَاةٌ، وَعَلَى بَابِ الصِّرَاطِ دَاعٍ، يَقُوْلُ: أَيُّهَا النَّاسُ، ادْخُلُوا الصِّرَاطَ جَمِيْعًا وَلَا تَتَفَرَّجُوا، وَدَاعٍ يَدْعُومِنْ جَوْفِ الصِّرَاطِ، فَإِذَا أَرَادَ أَنْ يَفْتَحَ شَيْئًا مِنْ تِلْكَ الأَبْوَابِ، قَالَ: وَيْحَكَ! لَا تَفْتَحْهُ، فَإِنَّكَ إِنْ تَفْتَحْهُ تَلِجْهُ، وَالصِّرَاطُ الإِسْلَامُ وَالسُّوْرَانِ حُدُوْدُ اللّٰهِ تَعَالَى، وَالأَبْوَابُ الْمُفَتَّحَةُ مَحَارِمُ اللّٰهِ تَعَالَى، ذَلِكَ الدَّاعِيُ عَلَى رَأْسِ الصِّرَاطِ كِتَابُ اللّٰهِ عَزَّوَجَّلَ، وَالدَّاعِيُ فَوْقَ الصِّرَاطِ وَاعِظُ اللّٰهِ فِيُ قَلْبِ كُلِّ مُسْلِمٍ"

ನವ್ವಾಸ್ ಬಿನ್ ಸಮ್‌ಆನಿ(ರ) ವರದಿ ಮಾಡಿರುತ್ತಾರೆ. ಪ್ರವಾದಿ(ಸ) ಹೇಳಿದರು: ಅಲ್ಲಾಹನು ಒಂದು ಉದಾಹರಣೆಯನ್ನು ನೀಡುತ್ತಾನೆ. ನೇರವಾದ ಒಂದು ದಾರಿ. ಆ ದಾರಿಯ ಇಕ್ಕೆಲಗಳಲ್ಲಿಯೂ ಗೋಡೆಗಳು. ಅದರಲ್ಲಿ ತೆರೆದಿಡಲ್ಪಟ್ಟ ಬಾಗಿಲುಗಳು. ಆ ಬಾಗಿಲಿನ ಮೇಲೆ ಪರದೆಗಳನ್ನು ಇಳಿ ಬಿಡಲಾಗಿದೆ. ದಾರಿಯ ಆರಂಭದಲ್ಲಿ ಒಬ್ಬ ಎಚ್ಚರಿಕೆ ನೀಡುವವನಿದ್ದಾನೆ. ಅವನು ಈ ರೀತಿ ಹೇಳುತ್ತಿದ್ದಾನೆ: ಜನರೇ! ನೀವೆಲ್ಲರೂ ಜೊತೆಯಾಗಿ ಈ ದಾರಿಯಲ್ಲಿ ಪ್ರವೇಶಿಸಿರಿ. ಯಾರೂ ದಾರಿ ತಪ್ಪಬಾರದು. ದಾರಿಯ ಹೊರ ಭಾಗದಲ್ಲಿ ಒರ್ವ ಎಚ್ಚರಿಕೆ ನೀಡುವವನಿದ್ದಾನೆ. ಆ

ಬಾಗಿಲುಗಳ ಪೈಕಿ ಯಾವುದಾದರೂ ಒಂದರ ಪರದೆಯನ್ನು ಎತ್ತಲು ಪ್ರಯತ್ನಿಸಿದರೆ ಅವನು ಎಚ್ಚರಿಸುತ್ತಾನೆ: ನೀನು ನಾಶವಾಗು. ನೀನದನ್ನು ತೆರೆಯಬೇಡ. ತೆರೆದರೆ ನೀನು ಸರ್ವನಾಶವಾಗುವೆ. ಪ್ರವಾದಿ(ಸ) ಮುಂದುವರಿಸುತ್ತಾ ಹೇಳುತ್ತಾರೆ: ಆ 'ದಾರಿ' ಇಸ್ಲಾಮ್ ಧರ್ಮವಾಗಿದೆ. 'ಗೋಡೆಗಳು' ಅಲ್ಲಾಹನ ನಿಯಮ ನಿರ್ದೇಶನಗಳು. 'ತೆರೆದಿಟ್ಟ ಬಾಗಿಲು ಗಳು' ಅಲ್ಲಾಹನು ನಿಷೇಧಿಸಿರುವ ಕೆಲಸಗಳು. ದಾರಿಯ ಆರಂಭದಲ್ಲಿ ರುವ ಎಚ್ಚರಿಕೆ ನೀಡುವವನು 'ದೇವಗ್ರಂಥ'ವಾಗಿದೆ. ದಾರಿಯ ಹೊರ ಭಾಗದಲ್ಲಿರುವ 'ಎಚ್ಚರಿಸುವವನು' ಪ್ರತಿಯೊಬ್ಬ ಮುಸ್ಲಿಮನ ಹೃದಯ ದೊಳಗೆ ಇರುವ ಅಲ್ಲಾಹನನ್ನು ನೆನಪಿಸುತ್ತಿರುವ ಉಪದೇಶಕ.*

ಕಠಿಣವಾದ ವಿಷಯಗಳನ್ನು ಕಥೆಗಳ ಮೂಲಕ ಸರಳವಾಗಿ ವಿವರಿಸುವುದು ಪ್ರವಾದಿ ಮುಹಮ್ಮದ್(ಸ)ರ ಶಿಕ್ಷಣದ ವಿಶಿಷ್ಟ ವಿಧಾನವಾಗಿತ್ತು. ಜನಸಾಮಾನ್ಯರಿಗೂ ಸುಲಭವಾಗಿ ಗ್ರಹಿಸಲು ಸಾಧ್ಯವಾಗುವ ರೀತಿಯಲ್ಲಿ ವಿಷಯಗಳನ್ನು ವಿವರಿಸುವ ಸಾಮರ್ಥ್ಯ ಪ್ರವಾದಿ ಮುಹಮ್ಮದ್(ಸ)ರಲ್ಲಿತ್ತು. ಈ ಪ್ರವಾದಿವಚನವು ಕುತೂಹಲ ಕಾರಿ ಯಾದ ಕೆಲವು ಉದಾಹರಣೆಗಳ ಮೂಲಕ ವಿಶಾಲವಾದ ಲೋಕವನ್ನು ಚಿಂತಿ ಸುವವರ ಮುಂದೆ ತೆರೆದಿಡುತ್ತದೆ.

ವಕ್ರತೆಯಿಲ್ಲದ ನೇರವಾದ ದಾರಿಯೊಂದಿಗೆ ಸತ್ಯಧರ್ಮವನ್ನು ಹೋಲಿಸಲಾ ಗಿದೆ. ದೇವನ ಸನ್ಮಾರ್ಗದ ಕುರಿತು ತಿಳಿಸಲು ನೇರಮಾರ್ಗ ಎಂಬ ಪದಪ್ರಯೋಗ ಪವಿತ್ರ ಕುರ್‌ಆನಿನಲ್ಲಿ ಅನೇಕ ಕಡೆಗಳಲ್ಲಿ ಬಂದಿರುತ್ತದೆ. ಇಸ್ಲಾಮಿನ ವಿಶಾಲತೆ, ಪ್ರಕೃತಿ ಯೊಂದಿಗೆ ಮತ್ತು ಮನುಷ್ಯ ಜೀವನದೊಂದಿಗೆ ಅದಕ್ಕಿರುವ ಅಸದೃಶ ಸಾಮ್ಯತೆಯ ಬಗ್ಗೆ ಈ ಪ್ರಯೋಗವು ನಮ್ಮ ಗಮನ ಸೆಳೆಯುತ್ತದೆ. ಧರ್ಮವು ಒಂದು ನೇರವಾದ ರೇಖೆ. ಎಡ ಅಥವಾ ಬಲಕ್ಕೆ ಅದು ಹೊರಳುವುದಿಲ್ಲ, ಅಡ್ಡದಾರಿಯ ಮೂಲಕವೋ ಮೋಸದ ದಾರಿಯಲ್ಲೋ ಅದು ಕೊನೆಗೊಳ್ಳುವುದಿಲ್ಲ. ಜೀವನದಂತೆ ಅದು ಅನಂತ ವಾಗಿ ಮುಂದುವರಿಯುತ್ತದೆ.

ದಾರಿಯ ಎರಡು ಬದಿಗಳಲ್ಲಿ ಎದ್ದು ನಿಂತಿರುವ ಗೋಡೆಗಳನ್ನು ಆ ಬಳಿಕ ವಿವರಿಸಲಾಗಿದೆ. ಅಲ್ಲಾಹನು ಮನುಷ್ಯರಿಗೆ ನಿಶ್ಚಯಿಸಿರುವ ವಿಧಿ-ನಿಷೇಧಗಳೆಂಬ ಗೋಡೆಗಳಿವು. ಆ ಗೋಡೆಗಳನ್ನು ಕೆಡವಬಾರದು ಮತ್ತು ಜಿಗಿದು ದಾಟಬಾರದು.

---

* ಇಮಾಮ್ ಅಹ್ಮದ್ 4/182, ಹಾಕಿಮ್ 1/73 ಮೊದಲಾದವರು ಉದ್ಧರಿಸಿದರು. ಇದರ ವರದಿಯ ಪರಂಪರೆ ಸಹೀಹ್ ಆಗಿದೆ ಎಂದು ಹಾಕಿಮ್ ಅಭಿಪ್ರಾಯ ಪಡುತ್ತಾರೆ.

ಹಾಗೆ ಮಾಡಿದರೆ, ಅಂತಹ ವ್ಯಕ್ತಿಗಳು ನೇರಮಾರ್ಗದಿಂದ ವ್ಯತಿಚಲಿಸಲ್ಪಟ್ಟು ಪೈಶಾಚಿಕ ಮಾರ್ಗದಲ್ಲಿ ಬಿದ್ದು ಬಿಡುವರು. ಪವಿತ್ರ ಕುರ್‌ಆನ್ ಈ ರೀತಿ ಸ್ಪಷ್ಟಪಡಿಸುತ್ತದೆ: ಅಲ್ಲಾಹನು ನಿರ್ಣಯಿಸಿ ಕೊಟ್ಟ ಮೇರೆಗಳನ್ನು ಮೀರುವವನನ್ನು ಅಲ್ಲಾಹನು ನರಕಾಗ್ನಿಗೆ ತಳ್ಳುವನು. ಅದರಲ್ಲಿ ಅವನು ಸದಾಕಾಲವಿರುವನು ಮತ್ತು ಅವನಿಗೆ ನಿಂದನಾತ್ಮಕ ಶಿಕ್ಷೆ ಇದೆ. (ಅನ್ನಿಸಾ: 14) ಪ್ರವಾದಿ(ಸ) ಹೇಳಿರುವರು:

أَلَا، وَإِنَّ لِكُلِّ مَلِكٍ حِمًى، أَلَا وَإِنَّ حِمَى اللهِ مَحَارِمُهُ!

'ತಿಳಿಯಿರಿ. ಪ್ರತಿಯೊಬ್ಬ ರಾಜನಿಗೂ ಇತರರು ಲಂಘಿಸಿ ಬರಬಾರದೆಂಬ ಸಂರಕ್ಷಕ ವಲಯವಿರುತ್ತದೆ. ತಿಳಿಯಿರಿ. ಅಲ್ಲಾಹನ ಸಂರಕ್ಷಕ ವಲಯ ಅವನು ನಿಷೇಧಿಸಿರುವ ಕೆಲಸಗಳಾಗಿವೆ.'[1]

ಮನುಷ್ಯ ದೇವಚರರಂತಲ್ಲ, ತಪ್ಪೆಸಗಲು ಸಾಧ್ಯವಿರುವ ಸ್ವಾತಂತ್ರ್ಯದೊಂದಿಗೆ ಅಲ್ಲಾಹನು ಮನುಷ್ಯನನ್ನು ಸೃಷ್ಟಿಸಿದ್ದಾನೆ. ಮನುಷ್ಯರನ್ನು ಕೆಡುಕುಗಳಿಗೆ ಆಕರ್ಷಿಸುವಂತಹ ಎಲ್ಲ ರೀತಿಯ ವ್ಯವಸ್ಥೆಗಳೊಂದಿಗೆ ಅವನು ಭೂಲೋಕವನ್ನು ವ್ಯವಸ್ಥೆಗೊಳಿಸಿರುವನು. ದಾರಿಯ ಇಕ್ಕೆಲಗಳಲ್ಲಿಯೂ ತೆರೆದಿಡಲ್ಪಟ್ಟ ಬಾಗಿಲುಗಳು ಈ ವಿಷಯದ ಮೇಲೆ ಬೆಳಕು ಚೆಲ್ಲುತ್ತದೆ. ಅಬ್ದುಲ್ಲಾ ಬಿನ್ ಮಸ್‌ಊದ್(ರ) ವರದಿ ಮಾಡುತ್ತಾರೆ:

خَطَّ لَنَا رَسُولُ اللهِ ﷺ خَطًّا، ثُمَّ قَالَ: هَذَا سَبِيلُ اللهِ، ثُمَّ خَطَّ خُطُوطًا عَنْ يَمِينِهِ وَعَنْ شِمَالِهِ، ثُمَّ قَالَ: هَذِهِ سُبُلٌ مُتَفَرِّقَةٌ، عَلَى كُلِّ سَبِيلٍ مِنْهَا شَيْطَانٌ يَدْعُوا إِلَيْهِ، ثُمَّ قَرَأَ: وَأَنَّ هَذَا صِرَاطِي مُسْتَقِيمًا فَاتَّبِعُوهُ وَلَا تَتَّبِعُوا السُّبُلَ فَتَفَرَّقَ بِكُمْ عَنْ سَبِيلِهِ (الأنعام : ١٥٣)

ಒಮ್ಮೆ ಪ್ರವಾದಿ(ಸ) ನಮ್ಮ ಮುಂದೆ ಸರಳ ರೇಖೆಯನ್ನು ಎಳೆದು, ಇದು ಅಲ್ಲಾಹನ ಮಾರ್ಗವಾಗಿದೆಯೆಂದರು. ಬಳಿಕ ಅದರ ಎಡಬಲಗಳಲ್ಲಿ ಅನೇಕ ಗೆರೆಗಳನ್ನು ಎಳೆದು ಹೇಳಿದರು: ಇವೆಲ್ಲವೂ ಭಿನ್ನಭಿನ್ನ ಮಾರ್ಗಗಳು. ಪ್ರತಿ ಮಾರ್ಗದಲ್ಲೂ ಶೈತಾನನಿರುತ್ತಾನೆ. ತನ್ನ ದಾರಿಗೆ ಅವನು ಮನುಷ್ಯರನ್ನು ಕರೆಯುತಿರುತ್ತಾನೆ. ಬಳಿಕ ಈ ಕುರ್‌ಆನ್ ವಚನವನ್ನು ಪಠಿಸಿದರು: ನನ್ನ ನೇರಮಾರ್ಗವು ಇದುವೇ. ಆದು ದರಿಂದ ಇದರಲ್ಲೇ ನಡೆಯಿರಿ ಮತ್ತು ಅನ್ಯ ಮಾರ್ಗದಲ್ಲಿ ನಡೆಯದಿರಿ. ಅವು ಅವನ ಮಾರ್ಗದಿಂದ ತಪ್ಪಿಸಿ ನಿಮ್ಮನ್ನು ಚದುರಿಸಿ ಬಿಡುವುವು. (ಅಲ್ ಅನ್‌ಆಮ್: 153)[2]

ಇಳಿಬಿಟ್ಟ ಪರದೆಗಳು ಎಂಬುದರ ಮೂಲಕ ಕೆಡುಕುಗಳ ಬಾಗಿಲುಗಳನ್ನು ಅಲ್ಲಾಹನು ಮರೆಸಿಟ್ಟಿರುವನು ಎಂಬುದಾಗಿ ಪ್ರವಾದಿವಚನವು ನೆನಪಿಸುತ್ತದೆ. ಇದು

ಅಲ್ಲಾಹನು ಮನುಷ್ಯರೊಂದಿಗೆ ತೋರಿಸಿದ ಕರುಣೆಯಾಗಿದೆ. ಕೆಡುಕುಗಳು ಮತ್ತು ಮನುಷ್ಯನ ಶುದ್ಧ ಪ್ರಕೃತಿಯ ಮಧ್ಯೆ ಒಂದು ಪರದೆಯನ್ನು ಹಾಕಿ ಅಲ್ಲಾಹನು ನಮ್ಮನ್ನು ಅನುಗ್ರಹಿಸಿರುವನು. ಆ ಪರದೆಯ ಆಚೆ ಏನಿದೆ ಎಂಬುದನ್ನು ತೆರೆದು ನೋಡಲು ಪ್ರಯತ್ನಿಸಿದರೆ, ಅಲ್ಲಾಹನ ಮರೆಸಿ ಇಟ್ಟಿರುವುದನ್ನು ನೋಡಲು ಕುತೂಹಲ ತೋರಿಸಿದಾಗ, ಅಲ್ಲಾಹನು ತೋರಿಸಿರುವ ನೇರ ಮಾರ್ಗದಿಂದ ಮನುಷ್ಯನು ವ್ಯತಿಚಲಿಸಿ ಶೈತಾನನ ಮೋಸದ ಜಾಲಕ್ಕೆ ಬಲಿ ಬೀಳುವನು. ಹಾಗಲ್ಲದಿದ್ದರೆ ಅವನು ನೇರಮಾರ್ಗದಲ್ಲಿಯೇ ಮುಂದಕ್ಕೆ ಹೋಗುವನು. ಸತ್ಯದ ಮಾರ್ಗದಲ್ಲಿ ದೃಢವಾಗಿ ನಿಲ್ಲಲು ಬಹಳ ಜಾಗರೂಕತೆ ಮತ್ತು ಎಚ್ಚರಿಕೆಯು ಅತ್ಯಗತ್ಯ ಎಂಬುದು ಈ ಮೂಲಕ ಮನದಟ್ಟಾಗುತ್ತದೆ. ಕೆಡುಕುಗಳು ತುಂಬಿರುವ ರಸ್ತೆಯಲ್ಲಿ ಬಿದ್ದುಬಿಡಲು ಕೇವಲ ಹೆಜ್ಜೆ ತಪ್ಪಿದರೂ ಸಾಕು. ಆದುದರಿಂದ ಒಮ್ಮೆ ಅದರಲ್ಲಿ ಬಿದ್ದುಬಿಟ್ಟರೆ ಆ ಬಳಿಕ ಕಠಿಣ ಪರಿಶ್ರಮದೊಂದಿಗೆ ಅದರಿಂದ ರಕ್ಷಣೆ ಹೊಂದಬಹುದು ಎಂದು ಹೇಳುವಂತಿಲ್ಲ.

ಕೆಡುಕುಗಳ ಬಾಗಿಲುಗಳನ್ನು ತೆರೆಯದಿರಿ ಎಂಬ ಮುನ್ನೆಚ್ಚರಿಕೆ ನೀಡುವ ವ್ಯಕ್ತಿಯನ್ನು ಕೂಡ ಅಲ್ಲಾಹನು ನಮಗಾಗಿ ವ್ಯವಸ್ಥೆ ಮಾಡಿರುತ್ತಾನೆ. ದಾರಿಯ ಬದಿಯಲ್ಲಿ ಸದಾ ಈ ಎಚ್ಚರಿಸುವವನಿರುತ್ತಾನೆ. ಸತ್ಯವಿಶ್ವಾಸಿಯ ಹೃದಯವನ್ನು ಜಾಗೃತಾವಸ್ಥೆಯಲ್ಲಿರಿಸುವ ಈಮಾನ್ ಎಂಬ ಆತ್ಮಸಾಕ್ಷಿಯೇ ಈ ಕಾವಲುಗಾರ. ದಾರಿಯ ಮುಂಭಾಗದಲ್ಲಿ ಅದರ ಬಾಗಿಲಿನ ಹತ್ತಿರವೇ ನಿಂತಿರುವ ಇನ್ನೊಬ್ಬ ಎಚ್ಚರಿಸುವವನ ಕುರಿತೂ ಹೇಳಲಾಗಿದೆ. ಅಲ್ಲಾಹನು ತನ್ನ ಅಪಾರವಾದ ಕರುಣೆಯೊಂದಿಗೆ ಮನುಷ್ಯನ ಸನ್ಮಾರ್ಗದರ್ಶನಕ್ಕಾಗಿ ಅವತೀರ್ಣಗೊಳಿಸಿರುವ ದೈವಿಕ ಗ್ರಂಥ. ಜನರನ್ನು ಅಂಧಕಾರದಿಂದ ಪ್ರಕಾಶದೆಡೆಗೆ ಸಾಗಿಸುವುದು ಅದರ ಗುರಿಯಾಗಿದೆ. 'ವಾಸ್ತವದಲ್ಲಿ ಈ ಕುರ್‌ಆನ್ ಅತ್ಯಂತ ನೇರಮಾರ್ಗವನ್ನು ತೋರಿಸಿ ಕೊಡುತ್ತದೆ.' (ಬನೀ ಇಸ್ರಾಈಲ್: 9)

ಈ ಮೇಲೆ ನೀಡಲಾದ ಎಲ್ಲ ಮುನ್ನೆಚ್ಚರಿಕೆಗಳನ್ನು ಕಡೆಗಣಿಸಿ, ಪೈಶಾಚಿಕವಾದ ದೇಹೇಚ್ಛೆಗೆ ಇಷ್ಟವಾಗುವ ದಾರಿಯ ಮೂಲಕ ಹಠಮಾರಿತನದೊಂದಿಗೆ ಮುಂದುವರಿಯಲು ಯಾರಾದರೂ ತೀರ್ಮಾನಿಸಿದರೆ, ಅವನು ದೇವನ ಮಾರ್ಗದಿಂದ ಬಹಳ ದೂರ ಹೋಗುವನು, ಅಂತ್ಯದಿನದಂದು ಕಠಿಣ ಶಿಕ್ಷೆಗೆ ಅರ್ಹನಾಗಿ ಬಿಡುವನು.

---

1) ಬುಖಾರಿ: 52, ಮುಸ್ಲಿಮ್: 1599, ತಿರ್ಮಿದಿ: 1205, ಅಬೂದಾವೂದ್: 3329, ಇಬ್ನುಮಾಜ: 3984. 2) ಅಹ್ಮದ್: 1/435, ದಾರಿಮಿ: 1/67, ನಸಾಈ – ಕುಬ್ರಾ: 11174, ಹಾಕಿಮ್: 2/318, ಇಬ್ನುಹಿಬ್ಬಾನ್.

10. ಸ್ವರ್ಗ-ನರಕಗಳು ಅದಲು ಬದಲಾಗುವಾಗ

عَنْ أَبِي هُرَيْرَةَ رَضِيَ اللَّهُ عَنْهُ، عَنِ النَّبِيِّ ﷺ قَالَ: إِنَّ الرَّجُلَ لَيَعْمَلُ الزَّمَانَ الطَّوِيلَ بِأَعْمَالِ أَهْلِ الْجَنَّةِ، ثُمَّ يَخْتِمُ اللَّهُ لَهُ عَمَلَهُ بِأَعْمَالِ أَهْلِ النَّارِ، فَيَجْعَلُهُ مِنْ أَهْلِ النَّارِ، وَإِنَّ الرَّجُلَ لَيَعْمَلُ الزَّمَانَ الطَّوِيلَ بِأَعْمَالِ أَهْلِ النَّارِ، ثُمَّ يَخْتِمُ اللَّهُ لَهُ عَمَلَهُ بِأَعْمَالِ أَهْلِ الْجَنَّةِ، فَيَجْعَلُهُ مِنْ أَهْلِ الْجَنَّةِ، فَيُدْخِلُهُ الْجَنَّةَ.

ಅಬೂಹುರೈರಾ(ರ)ರಿಂದ ವರದಿ. ಪ್ರವಾದಿವರ್ಯರು(ಸ) ಹೇಳಿದರು: ಓರ್ವ ವ್ಯಕ್ತಿ ಸುದೀರ್ಘ ಕಾಲ ಸ್ವರ್ಗಕ್ಕೆ ಹೋಗಲು ಅರ್ಹವಾದ ಕೆಲಸ ಗಳನ್ನು ಮಾಡಿಕೊಂಡು ಜೀವಿಸುತ್ತಿರುತ್ತಾನೆ. ಕೊನೆಗೆ ನರಕಕ್ಕೆ ಅರ್ಹವಾದ ಕೆಲಸ ಗಳನ್ನು ಮಾಡಿ ತನ್ನ ಜೀವನವನ್ನು ಕೊನೆಗೊಳಿಸುತ್ತಾನೆ. ಅಂತಹ ವ್ಯಕ್ತಿಯನ್ನು ನರಕಕ್ಕೆ ತಳ್ಳಲಾಗುತ್ತದೆ. ಇನ್ನೋರ್ವ ವ್ಯಕ್ತಿ ಜೀವನ ಪೂರ್ತಿ ನರಕಕ್ಕೆ ಅರ್ಹ ವಾದ ಕೆಲಸಗಳನ್ನು ಮಾಡುತ್ತಾ ಜೀವಿಸಿರುತ್ತಾನೆ. ಆ ಬಳಿಕ ಸ್ವರ್ಗಕ್ಕೆ ಅರ್ಹ ವಾದ ಕೆಲಸವನ್ನು ಮಾಡುತ್ತಾ ಜೀವನವನ್ನು ಕೊನೆಗೊಳಿಸಿ ರುತ್ತಾನೆ. ಆ ವ್ಯಕ್ತಿಯನ್ನು ಸ್ವರ್ಗವಾಸಿಗಳೊಂದಿಗೆ ಸೇರಿಸಲಾಗುತ್ತದೆ. ಕೊನೆಗೆ ಅಲ್ಲಾಹನು ಆ ಮನುಷ್ಯನನ್ನು ಸ್ವರ್ಗಕ್ಕೆ ಪ್ರವೇಶಗೊಳಿಸುತ್ತಾನೆ.*

ಕಲುಷಿತಗೊಳ್ಳಲು ಅಥವಾ ಪ್ರಕಾಶಭರಿತವಾಗಲು ಸಮಾನ ಸಾಧ್ಯತೆ ಇರುವ ಪ್ರಕೃತಿಯೊಂದಿಗೆ ಮನುಷ್ಯ ಸೃಷ್ಟಿಸಲ್ಪಟ್ಟಿದ್ದಾನೆ. ಕೆಲವೊಮ್ಮೆ ಅವನ ಅಂತರಾತ್ಮವು ಅಶಾಂತವಾದ ಕಡಲಿನಂತೆ ಪ್ರಕ್ಷುಬ್ಧವಾಗಿರುತ್ತದೆ. ಕೆಲವು ಸಲ ನಿಶ್ಶಬ್ದವಾಗಿ

* ಇಮಾಮ್ ಬುಖಾರಿ: 6607, ಮುಸ್ಲಿಮ್: 2651, ಅಹ್ಮದ್: 2/485 ಮುಂತಾದವರು ಈ ಹದೀಸ್ ಉದ್ಧರಿಸಿದ್ದಾರೆ. ಇವುಗಳು ಮುಸ್ನದ್ ಅಹ್ಮದ್‌ನಲ್ಲಿರುವ ವಾಕ್ಯಗಳು.

ಹರಿಯುತ್ತಿರುವ ಚಿಲುಮೆಯ ನೀರಿನಂತೆ ಪ್ರಶಾಂತವಾಗಿರುತ್ತದೆ. ಕೆಲವೊಮ್ಮೆ ಗಾಳಿಗೆ ಸಿಲುಕಿದ ಕರಿಬೇವಿನ ಎಲೆಯಂತೆ ಅದರ ಅವಸ್ಥೆ ಇದ್ದರೆ, ಇನ್ನೊಮ್ಮೆ ಅಲೆಗಳಿಲ್ಲದ ಸಮುದ್ರದಂತೆ ನಿಶ್ಚಲವಾಗಿರುತ್ತದೆ. ಹೃದಯವನ್ನು ಸೂಚಿಸುವ 'ಕಲ್ಬ್' ಎಂಬ ಅರಬಿ ಪದವು ಈ ಸಂಕೀರ್ಣತೆ ಮತ್ತು ಸ್ಥಾನಪಲ್ಲಟಗೊಳ್ಳುವುದನ್ನು ಪ್ರತಿನಿಧಿಸುತ್ತದೆ. ಅಬೂ ಮೂಸಾ ಅಶ್‌ಅರಿ(ರ) ವರದಿ ಮಾಡಿರುತ್ತಾರೆ. ಪ್ರವಾದಿ(ಸ) ಈ ರೀತಿ ಹೇಳಿರುವರು:

إِنَّمَا سُمِّيَ الْقَلْبُ مِنْ تَقَلُّبِهِ، إِنَّمَا مَثَلُ الْقَلْبِ كَمَثَلِ رِيشَةٍ مُعَلَّقَةٍ فِي أَصْلِ شَجَرَةٍ، يُقَلِّبُهَا الرِّيَاحُ ظَهْرًا لِبَطْنٍ.

ಹೃದಯವು ಸ್ಥಾನಪಲ್ಲಟಗೊಳ್ಳುವ ಕಾರಣ ಅದಕ್ಕೆ 'ಕಲ್ಬ್' ಎಂಬ ಹೆಸರು ಬಂದಿದೆ. ಒಂದು ಮರದಲ್ಲಿ ಕಟ್ಟಿ ತೂಗು ಹಾಕಿರುವ ಪಕ್ಷಿಯ ಗರಿಯಂತಿದೆ ಹೃದಯ. ಗಾಳಿಯು ನಿರಂತರ ಅದನ್ನು ಮೇಲೆ ಕೆಳಗೆ ಮಾಡುತ್ತಿರುತ್ತದೆ.[1]

ನಮ್ಮ ಮನಸ್ಸಿನಂತೆಯೇ ಸುತ್ತಮುತ್ತಲ ಪರಿಸರವೂ ಇರುತ್ತದೆ. ನಮ್ಮ ಮನಸ್ಸಿಗೆ ಸ್ಥಿರತೆ ಎಂಬುದು ಇಲ್ಲದಂತೆ, ನಮ್ಮ ಸುತ್ತಮುತ್ತಲ ಪರಿಸರವೂ ಸ್ಥಿರವಾಗಿರುವುದಿಲ್ಲ. ಬಿಸಿಲು, ನೆರಳು, ರಾತ್ರಿ, ಹಗಲು ಹೀಗೆ ಒಂದರ ಹಿಂದೆ ಒಂದು ಬರುತ್ತಿರುತ್ತದೆ. ಮನಸ್ಸಿನ ಬದಲಾವಣೆ ಸುತ್ತಮುತ್ತಲನ್ನೂ ಸುತ್ತಮುತ್ತಲಿನ ಬದಲಾವಣೆ ಮನಸ್ಸನ್ನೂ ನಿಯಂತ್ರಿಸುತ್ತದೆ.

ಒಳಿತು-ಕೆಡುಕುಗಳ ಬಗ್ಗೆ ಮನಸ್ಸಿನ ಅನಿಯಂತ್ರಿತ ಆಕರ್ಷಣೆಯ ಕುರಿತು ಪ್ರವಾದಿ ಮುಹಮ್ಮದ್(ಸ)ರು ಮುನ್ನೆಚ್ಚರಿಕೆ ನೀಡಿದ್ದಾರೆ. ಒಳಿತುಗಳನ್ನು ಮಾಡುತ್ತಾ ಜೀವಿಸುತ್ತಿರುವವನು ಕೆಟ್ಟವನಾಗಲು, ಕೆಡುಕುಗಳನ್ನು ಮಾಡುತ್ತಾ ಜೀವಿಸುತ್ತಿರುವ ವನು ಒಳ್ಳೆಯವ ನಾಗಲು ಈ ಇಹಜೀವನದಲ್ಲಿ ಬೇಕಾದಷ್ಟು ಸಾಧ್ಯತೆಗಳು ಲಭ್ಯವಿದೆ. ಇಂದು ಕೆಡುಕನ್ನು ಮಾಡುತ್ತಿರುವವರು ನಾಳೆ ಅಲ್ಲಾಹನಲ್ಲಿ ಪಶ್ಚಾತ್ತಾಪ ಪಟ್ಟು ಒಳ್ಳೆಯವನಾಗಿ ಬದಲಾಗ ಬಾರದು ಎಂದೇನಿಲ್ಲ. ಇಂದು ಸತ್ಕರ್ಮಗಳನ್ನು ಮಾಡುತ್ತಿ ರುವವರು ನಾಳೆ ದೇವಧಿಕ್ಕಾರಿ ಗಳಾಗಿ ಕೆಡುಕಿನಲ್ಲಿ ಮುಳುಗುವ ಸಾಧ್ಯತೆಯೂ ಅಷ್ಟೇ ಪ್ರಮಾಣದಲ್ಲಿರುತ್ತದೆ. ದೇಹೇಚ್ಛೆಯ ಮೇಲುಗೈ ಮತ್ತು ಪ್ರತಿ ನಿಮಿಷ ಬದಲಾಗುತ್ತಿ ರುವ ಸನ್ನಿವೇಶಗಳು ಪ್ರಭಾತದ 'ಮೂಮಿನ್' ಸಾಯಂಕಾಲದ 'ಕಾಫಿರ್' ಮತ್ತು ಸಾಯಂಕಾಲದ 'ಮೂಮಿನ್' ಪ್ರಭಾತದ 'ಕಾಫಿರ್' ಆಗಿ ಪರಿವರ್ತಿಸಲು ಸಾಮರ್ಥ್ಯವುಳ್ಳದ್ದಾಗಿದೆ.

ಸಹ್ಲ್ ಬಿನ್ ಸಅದ್(ರ) ಹೇಳುತ್ತಾರೆ. ಪ್ರವಾದಿ ಮುಹಮ್ಮದ್(ಸ)ರ ಜೊತೆ

ಸತ್ಯನಿಷೇಧಿಗಳ ವಿರುದ್ಧ ಒಂದು ಯುದ್ಧದಲ್ಲಿ ಪಾಲ್ಗೊಂಡಿದ್ದೆವು. ಅಂದು ನಮ್ಮ ಜೊತೆ ಒಬ್ಬರಿದ್ದರು. ಶತ್ರುಸೇನೆಯಲ್ಲಿ ಅವರ ಮುಂದೆ ಎದುರಾಳಿಯಾಗಿ ನಿಲ್ಲುವ ಎಲ್ಲರನ್ನೂ ಅವರು ವಧಿಸುತ್ತಿದ್ದರು. ಜನರು ಈ ರೀತಿ ಹೇಳಲಾರಂಭಿಸಿದರು: ದೇವನ ಮಾರ್ಗ ದಲ್ಲಿ ಹೋರಾಡುತ್ತಾ ಇಂದು ಇವರು ಗಳಿಸಿದ ಪ್ರತಿಫಲಕ್ಕೆ ಸಮಾನವಾದ ಪ್ರತಿಫಲ ಗಳಿಸಲು ಯಾರಿಂದಲೂ ಸಾಧ್ಯವಿಲ್ಲ. ಇದನ್ನು ಕೇಳಿಸಿಕೊಂಡ ಪ್ರವಾದಿವರ್ಯರು(ಸ) ಹೇಳಿದರು: ಆದರೆ ಹಾಗಲ್ಲ, ನಿಶ್ಚಯವಾಗಿಯೂ ಅವನು ನರಕವಾಸಿಯಾಗಿದ್ದಾನೆ.

ಸಹಲ್(ರ) ಹೇಳುತ್ತಾರೆ: ಜನರು ಅವರನ್ನು ಹಿಂಬಾಲಿಸಿಕೊಂಡು ಹೋದರು. ಅವರು ಮಾಡುವ ಎಲ್ಲ ಕೆಲಸಗಳನ್ನು ಮರೆಯಲ್ಲಿ ನಿಂತು ನೋಡಲಾರಂಭಿಸಿದರು. ಹೀಗಿರುವಾಗ ಶತ್ರುಸೇನೆಯಿಂದ ಅವರ ಮೇಲೆ ದಾಳಿ ನಡೆಯಿತು. ಶರೀರದಲ್ಲಿ ಮಾರಣಾಂತಿಕ ಗಾಯವಾಯಿತು. ನೋವು ತಾಳಲಾರದೆ ಆ ವ್ಯಕ್ತಿ ಅಸ್ವಸ್ಥನಾದನು. ಖಡ್ಗವನ್ನು ನೆಲದ ಮೇಲೆ ಊರಿ, ಅದರ ಚೂಪಾದ ತುದಿಯ ಭಾಗವು ಮೇಲ್ಭಾಗದಲ್ಲಿ ರುವಂತೆ ಮಾಡಿ ಅದರ ಮೇಲೆ ತನ್ನ ಎದೆಯನ್ನು ತಾಗಿಸಿ ಆತ್ಮಹತ್ಯೆ ಮಾಡಿಕೊಂಡನು. ಅವರನ್ನು ಹಿಂಬಾಲಿಸಿ ನೋಡುತ್ತಿದ್ದ ವ್ಯಕ್ತಿ ಓಡಿ ಬಂದು ಪ್ರವಾದಿಯವರ(ಸ) ಬಳಿ ತಾವು ಅಲ್ಲಾಹನ ಸಂದೇಶವಾಹಕರಾಗಿರುವಿರಿ ಎಂಬುದಾಗಿ ನಾನು ಇನ್ನೊಮ್ಮೆ ಸಾಕ್ಷ್ಯ ಹೇಳುತ್ತಿದ್ದೇನೆ ಎಂದನು. ಪ್ರವಾದಿವರ್ಯರು(ಸ) ವಿಷಯವೇನೆಂದು ಕೇಳಿದರು. ಆಗ ಆ ವ್ಯಕ್ತಿ ಹೇಳಿದನು: ತಾವು ಸ್ವಲ್ಪ ಮೊದಲು ನರಕವಾಸಿಯೆಂದು ಹೇಳಿದ್ದ ಆ ವ್ಯಕ್ತಿ ಯನ್ನು ನಾನು ಹಿಂಬಾಲಿಸಿದೆ. ನಾನು ನೋಡುತ್ತಿದ್ದಂತೆಯೇ ಆ ವ್ಯಕ್ತಿಗೆ ಗಾಯ ವಾಯಿತು. ಆ ಬಳಿಕ ಆ ವ್ಯಕ್ತಿ ಆತ್ಮಹತ್ಯೆ ಮಾಡಿಕೊಳ್ಳುವುದನ್ನು ನಾನು ಕಂಡೆ.

إِنَّ الْعَبْدَ لَيَعْمَلُ عَمَلَ أَهْلِ النَّارِ وَإِنَّهُ مِنْ أَهْلِ الْجَنَّةِ، وَيَعْمَلُ عَمَلَ أَهْلِ الْجَنَّةِ وَإِنَّهُ مِنْ أَهْلِ النَّارِ، وَإِنَّمَا الأَعْمَالُ بِالْخَوَاتِيمِ.

ಪ್ರವಾದಿ(ಸ) ಹೇಳಿದರು: ಸ್ವರ್ಗಕ್ಕೆ ಅರ್ಹವಾದ ವ್ಯಕ್ತಿಗಳು ಕೆಲವೊಮ್ಮೆ ನರಕಕ್ಕೆ ಹೋಗುವವರು ಮಾಡುವ ಕೆಲಸಗಳನ್ನು ಮಾಡಬಹುದು. ಅದೇ ರೀತಿ ನರಕಕ್ಕೆ ಅರ್ಹ ವಾದ ವ್ಯಕ್ತಿಗಳು ಸ್ವರ್ಗಕ್ಕೆ ಹೋಗುವವರು ಮಾಡುವ ಕೆಲಸಗಳನ್ನು ಕೆಲವೊಮ್ಮೆ ಮಾಡ ಬಹುದು. ವ್ಯಕ್ತಿಯ ಅಂತ್ಯವು ಹೇಗಾಗುತ್ತದೆ ಎಂಬುದನ್ನು ಅನುಸರಿಸಿ ಅವನ ಕರ್ಮಗಳು ನಿರ್ಧರಿಸಲ್ಪಡುತ್ತವೆ.[2]

ಕೆಡುಕಿಗೆ ಜಾರಿ ಬೀಳುವ ಮತ್ತು ಸತ್ಕರ್ಮಗಳೆಡೆಗೆ ನಡೆಯುವ ಸಮಾನ ಅವಕಾಶಗಳುಳ್ಳ ಒಂದು ಲೋಕದಲ್ಲಿ ನಾವು ಜೀವಿಸುತ್ತಿದ್ದೇವೆಂಬ ವಾಸ್ತವಿಕತೆಯನ್ನು

ಈ ಪ್ರವಾದಿವಚನದ ಮೂಲಕ ಸತ್ಯವಿಶ್ವಾಸಿಗಳಿಗೆ ನೆನಪಿಸಿದ್ದಾರೆ.

ಇಮಾಮ್ ತಬ್ರೀ(ರ) ಇತಿಹಾಸದ ಒಂದು ಘಟನೆಯನ್ನು ವಿವರಿಸುತ್ತಾರೆ. ವಿದ್ವಾಂಸರಾಗಿದ್ದ ಇಬ್ನು ಮುಬಾರಕ್‌ರೊಂದಿಗೆ ಒಮ್ಮೆ ಓರ್ವ ವ್ಯಕ್ತಿ ಈ ರೀತಿ ಪ್ರಶ್ನಿಸಿದರು: ನಾನು ಅಕ್ರಮಿಯಾದ ಒಬ್ಬ ಕೊಲೆಪಾತಕಿಯನ್ನು ನೋಡಿದೆ ಮತ್ತು ಸತ್ಕರ್ಮಗಳನ್ನು ಮಾಡುತ್ತಿರುವ ನಾನು ಅವನಿಗಿಂತ ಶ್ರೇಷ್ಠನಲ್ಲವೇ ಎಂದು ನನ್ನಲ್ಲೇ ನಾನು ಭಾವಿಸಿದೆ. ಇಬ್ನು ಮುಬಾರಕ್(ರ) ಹೇಳಿದರು: ನಿನ್ನ ಈ ಭಾವನೆಯು ಅವನ ಕೆಡುಕುಗಳಿಗಿಂತಲೂ ಹೆಚ್ಚು ಗುರುತರವಾಗಿದೆ. ತ್ವಬ್ರೀ(ರ) ವಿವರಿಸುತ್ತಾರೆ. ಇಬ್ನು ಮುಬಾರಕ್(ರ) ಈ ರೀತಿ ಹೇಳಿರುವುದಕ್ಕೆ ಕಾರಣವಿದೆ. ಕೆಡುಕು ಮಾಡಿದ ವ್ಯಕ್ತಿ ಪಶ್ಚಾತ್ತಾಪ ಪಟ್ಟು ಮರಳಲು, ಅದೇ ರೀತಿ ಸತ್ಕರ್ಮಿಯಾದ ವ್ಯಕ್ತಿ ದಾರಿ ತಪ್ಪಲು ಸಮಾನವಾದ ಸಾಧ್ಯತೆ ಯಿದೆ. ತನ್ನ ಕೊನೆ ಯಾವ ರೀತಿ ಆಗಬಹುದೆಂಬು ಯಾರಿಗೂ ತಿಳಿದಿರುವುದಿಲ್ಲ.[3]

ಮನಸ್ಸು ಈ ರೀತಿ ಸ್ಥಾನಪಲ್ಲಟಗೊಳ್ಳಲು ಹುತಾತ್ಮತೆಯ ಸೌಭಾಗ್ಯ ಮತ್ತು ಅನಿರೀಕ್ಷಿತ ಮರಣವನ್ನು ಆಗ್ರಹಿಸದ ಮರಣಗಳು ಕಾರಣವಾಗಿರುತ್ತವೆ. ಕೆಟ್ಟ ವಿಚಾರಗಳ ಕಾರಣದಿಂದ ಮನಸ್ಸು ಮಲಿನಾವಸ್ಥೆಯಲ್ಲಿರುವ ಸಂದರ್ಭದಲ್ಲಿ ಅನಿರೀಕ್ಷಿತ ಮರಣ ಸಂಭವಿಸಬಹುದು. ಅದೇ ವೇಳೆ ದೇವಸನ್ನಿಧಿಯನ್ನು ತಲುಪಬೇಕೆನ್ನುವ ಅತೀವವಾದ ಆಗ್ರಹ ಮತ್ತು ಲೌಕಿಕವಾದ ಎಲ್ಲ ವಿಷಯಗಳು ತೃಣಸಮಾನವಾಗಿ ಪರಿಗಣಿಸಲ್ಪಡುವ ಸಂದರ್ಭದಲ್ಲಿ ಒಬ್ಬನು ಹುತಾತ್ಮತೆಯೆಡೆಗೆ ನಡೆದು ಸಾಗುತ್ತಿರುವನು. ಪ್ರವಾದಿ(ಸ) ಹೇಳಿರುವರು:

اَللّٰهُمَّ اجْعَلْ خَيْرَ أَيَّامِي يَوْمَ أَلْقَاكَ فِيهِ، وَاجْعَلْ خَيْرَ أَعْمَارِي آخِرَهَا، وَاجْعَلْ خَيْرَ أَعْمَالِي خَوَاتِيمَهَا

ಅಲ್ಲಾಹನೇ, ನನ್ನ ದಿನಗಳ ಪೈಕಿ ಅತ್ಯುತ್ತಮ ದಿನ ನಿನ್ನನ್ನು ನಾನು ನೆನಪಿಸುವ ದಿನವಾಗಿರುವುದು. ನನ್ನ ಆಯುಷ್ಯದ ಶ್ರೇಷ್ಠ ಭಾಗವಾಗಿ ನೀನು ಅದರ ಕೊನೆಯನ್ನು ಮಾಡಬೇಕು. ನನ್ನ ಕರ್ಮಗಳಲ್ಲಿ ಅತ್ಯುತ್ತಮವಾಗಿರುವುದನ್ನು ಅದರ ಕೊನೆಯಲ್ಲಿ ಮಾಡುವಂತಾಗಬೇಕು.[4]

ದೇವಸ್ಮರಣೆಯನ್ನು ಸದಾ ದೈನಂದಿನ ಚರ್ಯೆಯಾಗಿಸುವುದು, ಮರಣಕ್ಕೆ ಸದಾ ಸಿದ್ಧನಾಗಿ ನಿಲ್ಲುವುದು, ಲೌಕಿಕ ಸುಖ-ಸೌಕರ್ಯಗಳಿಂದ ದೂರ ಉಳಿಯುವುದು, ಸತ್ಕರ್ಮಗಳನ್ನು ಮುಂದೂಡದೆ ಸದಾ ಮಾಡುತ್ತಿರುವುದು, ಅಲ್ಲಾಹನೊಂದಿಗೆ ಪ್ರಾರ್ಥಿಸುತ್ತಿರುವುದು ಮುಂತಾದವುಗಳು ಮನಸ್ಸು ದಾರಿ ತಪ್ಪದೆ ಇರುವ

ಪ್ರಾಯೋಗಿಕ ಮಾರ್ಗಗಳಾಗಿವೆ. ಪ್ರವಾದಿ(ಸ) ಈ ರೀತಿ ಪ್ರಾರ್ಥಿಸುತ್ತಿದ್ದರು: يَا مُقَلِّبَ الْقُلُوبِ، ثَبِّتْ قَلْبِي عَلَى دِينِكَ 'ಹೃದಯಗಳನ್ನು ಪಲ್ಲಟಗೊಳಿಸುವವನೇ, ನನ್ನ ಹೃದಯವನ್ನು ನಿನ್ನ ಧರ್ಮದಲ್ಲಿ ಸ್ಥಿರವಾಗಿರಿಸು.'

ಈ ಪ್ರಾರ್ಥನೆಯನ್ನು ಸದಾ ಪ್ರವಾದಿ(ಸ) ಹೇಳುತ್ತಿರುವುದನ್ನು ಕೇಳಿಸಿಕೊಂಡ ಉಮ್ಮು ಸಲಮ(ರ) ಪ್ರಶ್ನಿಸುತ್ತಾರೆ:

يَا رَسُولَ اللهِ، مَا أَكْثَرَ دُعَاءَكَ : يَا مُقَلِّبَ الْقُلُوبِ ثَبِّتْ قَلْبِي عَلَى دِينِكَ؟

'ಅಲ್ಲಾಹನ ಸಂದೇಶವಾಹಕರೇ(ಸ), ತಾವೇಕೆ ಸದಾ ಹೃದಯವನ್ನು ಪಲ್ಲಟಗೊಳಿಸುವವನೇ, ನನ್ನ ಹೃದಯವನ್ನು ಧರ್ಮದಲ್ಲಿ ನೆಲೆ ನಿಲ್ಲಿಸು ಎಂದು ಪ್ರಾರ್ಥಿಸುತ್ತಿರುವಿರಿ? ಇದಕ್ಕೆ ಕಾರಣವೇನು?' ಪ್ರವಾದಿ(ಸ) ಹೇಳಿದರು:

يَا أُمَّ سَلَمَةَ، إِنَّهُ لَيْسَ آدَمِيٌّ إِلَّا وَقَلْبُهُ بَيْنَ أُصْبُعَيْنِ مِنْ أَصَابِعِ اللهِ، فَمَنْ شَاءَ أَقَامَ وَمَنْ شَاءَ أَزَاغَ .

'ಉಮ್ಮು ಸಲಮ(ರ), ದಾಸರ ಹೃದಯವು ಅಲ್ಲಾಹನ ಬೆರಳುಗಳ ಎಡೆಯಲ್ಲಿದೆ. ಒಬ್ಬ ದಾಸನ ಹೃದಯವನ್ನು ನೇರವಾಗಿಸಬೇಕೆಂದು ಅವನು ಆಗ್ರಹಿಸಿದರೆ, ಅದನ್ನು ನೇರಗೊಳಿಸುತ್ತಾನೆ. ಹೃದಯವನ್ನು ಮಲಿನಗೊಳಸಬೇಕೆಂದು ಅವನಿಚ್ಛಿಸಿದರೆ ಹಾಗೆ ಮಾಡಿ ಬಿಡುತ್ತಾನೆ. ಇದಾಗಿದೆ ಪರಿಸ್ಥಿತಿ.'[5]

---

1. ಅಹ್ಮದ್: 4/408, ಇಬ್ನುಮಾಜ, ತಬ್ರಾನಿ–ಕಬೀರ್.
2. ಬುಖಾರಿ: 6607, ಮುಸ್ಲಿಮ್: 112.
3. ಫತ್ಹುಲ್ ಬಾರಿ. ಭಾಗ: 7, ಪುಟ: 338.
4. ಫಿಕ್ಹುಸ್ಸಿಯಾಮ್, ಡಾ। ಯೂಸುಫುಲ್ ಕರ್ಝಾವಿ.
5. ತಿರ್ಮಿದಿ: 3522.

11. ಎರಡು ಬಿಂದುಗಳು, ಎರಡು ಗುರುತುಗಳು

عَنْ أَبِي أُمَامَةَ رَضِيَ اللَّهُ عَنْهُ، عَنِ النَّبِيِّ ﷺ قَالَ: "لَيْسَ شَيْءٌ أَحَبَّ إِلَى اللَّهِ مِنْ قَطْرَتَيْنِ وَأَثَرَيْنِ: قَطْرَةٌ مِنْ دُمُوعٍ فِي خَشْيَةِ اللَّهِ وَقَطْرَةُ دَمٍ تُهَرَاقُ فِي سَبِيلِ اللَّهِ، وَأَمَّا الأَثَرَانِ: فَأَثَرٌ فِي سَبِيلِ اللَّهِ وَأَثَرٌ فِي فَرِيضَةٍ مِنْ فَرَائِضِ اللَّهِ"

ಅಬೂ ಉಮಾಮಾ(ರ) ವರದಿ ಮಾಡಿರುತ್ತಾರೆ. ಪ್ರವಾದಿ(ಸ) ಹೇಳಿರುವರು: ಎರಡು ಬಿಂದುಗಳಿಗಿಂತ ಎರಡು ಗುರುತುಗಳಿಗಿಂತ ಅಲ್ಲಾಹನಿಗೆ ಪ್ರಿಯವಾದುದು ಬೇರೆ ಯಾವುದೂ ಇಲ್ಲ. ದೇವಭಯದಿಂದ ಹರಿಯುವ ಕಣ್ಣೀರ ಹನಿಗಳು, ದೇವಮಾರ್ಗದಲ್ಲಿ ಹರಿಯುವ ರಕ್ತದ ಬಿಂದುಗಳು. ಎರಡು ಗುರುತುಗಳು - ಅಲ್ಲಾಹನ ಮಾರ್ಗದಲ್ಲಿ ನಡೆಯುವ ಹೆಜ್ಜೆ ಗುರುತುಗಳು, ಕಡ್ಡಾಯ ಕರ್ಮಗಳನ್ನು ಮಾಡಲಿಕ್ಕಾಗಿ ಯಾತ್ರೆ ಹೋದ ಕಾರಣದಿಂದ ಉಂಟಾದ ಹೆಜ್ಜೆ ಗುರುತುಗಳು.*

ಅಲ್ಲಾಹನ ಪ್ರೀತಿ, ಕರುಣೆಯನ್ನು ಸುಮ್ಮನೆ ಗಳಿಸಲು ಸಾಧ್ಯವಿಲ್ಲ. ಮನದಾಳದ ಪ್ರಾರ್ಥನೆ ಮತ್ತು ಕರ್ಮಗಳು ಅದಕ್ಕೆ ಅಗತ್ಯವಾಗಿದೆ. ಮನಸ್ಸು ಮತ್ತು ಶರೀರದ ಭಾಗಗಳೆಲ್ಲ ದೇವಭಯದಿಂದ ಜಾಗ್ರತವಾಗಿರಬೇಕು ಮತ್ತು ದೇವಮಾರ್ಗದಲ್ಲಿ ಸದಾ ಸನ್ನದ್ಧವಾಗಿರಬೇಕು. ಆಗ ಮಾತ್ರ ಒಬ್ಬನಿಗೆ ಅಲ್ಲಾಹನ ವಿಶೇಷವಾದ ಪ್ರೀತಿ, ಕರುಣೆ ಗಳಿಸುವ ಅರ್ಹತೆಯುಂಟಾಗುತ್ತದೆ. ಈ ಜೀವನದ ಯಾತ್ರೆಯಲ್ಲಿ ಸತ್ಯವಿಶ್ವಾಸಿಯ ಕಣ್ಣಿನಿಂದ ಹರಿಯುವ ಕಣ್ಣೀರು, ರಕ್ತ ಮತ್ತು ನಿಟ್ಟುಸಿರು ಎಲ್ಲವೂ ಅತ್ಯಮೂಲ್ಯವೆಂದು ಪರಿಗಣಿಸಲ್ಪಡುವುದು. ಪ್ರಸ್ತುತ ಪ್ರವಾದಿವಚನವು ಅದನ್ನೇ ಸ್ಪಷ್ಟಪಡಿಸುತ್ತದೆ.

* ಇಮಾಮ್ ತಿರ್ಮಿದಿ ವರದಿ ಮಾಡಿರುವ ಪ್ರವಾದಿವಚನ. ಇದು ಹಸನ್ ಆಗಿದೆ ಎಂದು ಅವರು ಅಭಿಪ್ರಾಯಪಡುತ್ತಾರೆ. (ಹದೀಸ್ ಸಂಖ್ಯೆ 1669)

ಪ್ರಥಮವಾಗಿ ಅಲ್ಲಾಹನಿಗೆ ಇಷ್ಟವಾದ ಎರಡು ಹನಿಗಳ ಕುರಿತು ಪ್ರವಾದಿ(ಸ) ಹೇಳಿದ್ದಾರೆ. ದೇವಭಯದಿಂದ ಒಬ್ಬ ವ್ಯಕ್ತಿಯ ಕಪೋಲಗಳಲ್ಲಿ ಹರಿಯುವ ಕಣ್ಣೀರ ಹನಿಗಳು ಒಂದನೆಯದಾಗಿದೆ. ಕಣ್ಣೀರು ನಿಷ್ಕಳಂಕತೆ ಮತ್ತು ಆತ್ಮಾರ್ಥತೆಯ ಪ್ರತೀಕ ವಾಗಿದೆ. ಕಠಿಣ ಹೃದಯಿಗಳಿಗೆ, ಕಪಟಿಗಳಿಗೆ, ಒಳಗೆ ಮಾಲಿನ್ಯ ತುಂಬಿ ನಡೆಯುವ ವರಿಗೆ ದೇವನನ್ನು ನೆನಪಿಸಿ ಕಣ್ಣೀರು ಹರಿಸಲು, ವ್ಯಾಕುಲಗೊಳ್ಳಲು ಸಾಧ್ಯವಿಲ್ಲ. ನಿರ್ಮಲ ಹೃದಯಿಗಳಿಂದ ಮಾತ್ರ ಮಂಜು ನೀರಿನಂತೆ ಶುದ್ಧವಾದ ಕಣ್ಣೀರು ಹರಿಯುತ್ತದೆ. ವಿಶ್ವಾಸಿಗಳ ಕಣ್ಣೀರು ಅಲ್ಲಾಹನಿಗೆ ಹೆಚ್ಚು ಪ್ರೀತಿಪಾತ್ರವಾಗುವುದು ಈ ಕಾರಣದಿಂದಾಗಿದೆ. ಅಬೂಹುರೈರಾ(ರ)ರಿಂದ ವರದಿ. ಪ್ರವಾದಿ(ಸ) ಹೇಳಿರುವರು:

لَا يَلِجُ النَّارَ رَجُلٌ بَكَى مِنْ خَشْيَةِ اللهِ حَتَّى يَعُوْدَ اللَّبَنُ فِي الضَّرْعِ

'ಅಲ್ಲಾಹನ ಭಯದಿಂದ ಕಣ್ಣೀರಿಳಿಸಿದ ಕಣ್ಣುಗಳು ಎಂದಿಗೂ ನರಕಾಗ್ನಿಯನ್ನು ಪ್ರವೇಶಿಸಲಾರವು. ಕೆಚ್ಚಲಿನಿಂದ ಕರೆದು ತೆಗೆದ ಹಾಲು ಪುನಃ ಕೆಚ್ಚಲಿಗೆ ಹಿಂದಿರುಗಿದರೂ ಸರಿ.'[1]

ಅಂತ್ಯದಿನದಂದು ಅಲ್ಲಾಹನ ನೆರಳು ಸಿಗುವ ಏಳು ಮಂದಿಯ ಪೈಕಿ ಒಬ್ಬರು ಏಕಾಂತದಲ್ಲಿ ಅಲ್ಲಾಹನನ್ನು ನೆನಪಿಸಿಕೊಂಡು ಕಣ್ಣುಗಳನ್ನು ತುಂಬಿಸಿಕೊಂಡವನಾಗಿರು ವನು ಎಂಬುದು ಹದೀಸ್‌ಗಳಲ್ಲಿ ಬಂದಿರುತ್ತದೆ. ಪ್ರವಾದಿಯವರ(ಸ) ಒಂದು ಪ್ರಾರ್ಥನೆ ಈ ರೀತಿ ಇತ್ತು:

اَللّٰهُمَّ ارْزُقْنِي عَيْنَيْنِ هَطَّالَتَيْنِ، تَشْفِيَانِ الْقَلْبَ بِذُرُوْفِ الدُّمُوْعِ مِنْ خَشْيَتِكَ، قَبْلَ أَنْ تَكُوْنَ الدُّمُوْعُ دَمًا، وَالأَضْرَاسُ جَمْرًا.

'ಅಲ್ಲಾಹನೇ ನಿನ್ನ ಭಯದಿಂದ ಕಣ್ಣೀರಿಳಿಸುವ ಮೂಲಕ ಹೃದಯಕ್ಕೆ ಶಾಂತಿ ಯನ್ನು ನೀಡುವ ಎರಡು ಕಣ್ಣುಗಳನ್ನು ನೀನು ನನಗೆ ನೀಡು. ನನ್ನ ಕಣ್ಣೀರು ರಕ್ತವಾಗಿ ಮತ್ತು ದವಡೆಯ ಹಲ್ಲುಗಳು ಬೆಂಕಿಯ ತುಂಡುಗಳಾಗಿ ಮಾರ್ಪಡುವುದಕ್ಕಿಂತ ಮೊದಲು.'[2]

ಎರಡನೆಯದಾಗಿ, ದೇವನ ಮಾರ್ಗದಲ್ಲಿ ಹರಿಯುವ ರಕ್ತದ ಹನಿಗಳ ಕುರಿತು ಹೇಳಲಾಗಿದೆ. ಜೀವನವನ್ನು ಅಲ್ಲಾಹನ ಮಾರ್ಗದಲ್ಲಿ ಸಮರ್ಪಿಸಿಕೊಂಡವನು ಸತ್ಯವಿಶ್ವಾಸಿ. ಧರ್ಮ ಮತ್ತು ಅಧರ್ಮಗಳ ಮಧ್ಯೆ ಯುದ್ಧ ನಡೆಯುವಾಗ ಧರ್ಮದಲ್ಲಿ ಸ್ಥಿರವಾಗಿ ನಿಲ್ಲಬೇಕಾದವನು. ಈ ಸಂಘರ್ಷದಲ್ಲಿ ಅವನ ಶರೀರದಿಂದ

ಹರಿಯುವ ಒಂದೊಂದು ಹನಿ ರಕ್ತವೂ ದೇವನ ಸನ್ನಿಧಿಯಲ್ಲಿ ಬಹಳ ಮಹತ್ವ ಪೂರ್ಣವೂ ಶ್ರೇಷ್ಠವೂ ಆಗಿರುತ್ತದೆ. ಪ್ರವಾದಿ(ಸ) ಹೇಳಿರುವರು:

مَا مِنْ مَكْلُومٍ يُكْلَمُ فِي سَبِيلِ اللهِ إِلَّا جَاءَ يَوْمَ الْقِيَامَةِ، وَكَلْمُهُ يَدْمَى، اللَّوْنُ لَوْنُ الدَّمِ، وَالرِّيحُ رِيحُ مِسْكٍ.

ದೇವನ ಮಾರ್ಗದಲ್ಲಿ ಗಾಯಗೊಂಡ ಯಾವನೇ ವ್ಯಕ್ತಿ ರಕ್ತ ಹರಿಯುತ್ತಿರುವ ಅವಸ್ಥೆಯಲ್ಲಿಯೇ ಅಂತ್ಯದಿನದಂದು ಹಾಜರಾಗುವನು. ಅದರ ಬಣ್ಣ ರಕ್ತದ್ದಾಗಿದ್ದರೆ, ಪರಿಮಳವು ಕಸ್ತೂರಿಯದ್ದಾಗಿರುವುದು.[3]

ಅಲ್ಲಾಹನ ಪ್ರೀತಿ, ಕರುಣೆಗೆ ಅರ್ಹನನ್ನಾಗಿಸುವ ಇನ್ನೆರಡು ವಿಷಯಗಳನ್ನು ಮುಂದೆ ವಿವರಿಸಲಾಗುವುದು. ಅದರಲ್ಲೊಂದು ದೇವಮಾರ್ಗದ ಹೆಜ್ಜೆ ಗುರುತುಗಳು. ಎರಡನೆಯದು ಒಂದು ಕಡ್ಡಾಯ ಕಾರ್ಯವನ್ನೆಸಗಲಿಕ್ಕಾಗಿ ಓಡಾಡುವಾಗ ಉಂಟಾದ ಹೆಜ್ಜೆ ಗುರುತುಗಳು. ಇಲ್ಲಿ ಅಲ್ಲಾಹನ ಮಾರ್ಗದಲ್ಲಿ (فِي سَبِيلِ اللهِ) ಎಂಬುದರ ಮೂಲಕ ಅರ್ಥೈಸಿಕೊಳ್ಳಬೇಕಾಗಿರುವುದು ಏನೆಂದರೆ, ದೇವಮಾರ್ಗದಲ್ಲಿ ನಡೆಸುವ ತ್ಯಾಗ ಪರಿಶ್ರಮಗಳು, ಯುದ್ಧ, ಹೋರಾಟಗಳು, ಅಲ್ಲಾಹನ ವಚನದ ಉತ್ತುಂಗತೆಗಾಗಿ ಸತ್ಯವಿಶ್ವಾಸಿ ಮಾಡುವ ಎಲ್ಲ ಪ್ರಯತ್ನಗಳು ಇದರಲ್ಲಿ ಪರಿಗಣಿಸಲ್ಪಡುತ್ತವೆ. ಪ್ರವಾದಿ(ಸ) ಹೇಳಿದರು:

مَنِ اغْبَرَّتْ قَدَمَاهُ فِي سَبِيلِ اللهِ، فَهُوَ حَرَامٌ عَلَى النَّارِ.

ದೇವನ ಮಾರ್ಗದಲ್ಲಿ ಧೂಳುಗ್ರಸ್ತವಾದ ಕಾಲುಗಳಿಗೆ ನರಕವು ನಿಷಿದ್ಧವಾಗಿದೆ[4] ಎಂಬುದು ಇನ್ನೊಂದು ಪ್ರವಾದಿವಚನ.

لَا يَجْتَمِعُ غُبَارٌ فِي سَبِيلِ اللهِ، وَدُخَانُ جَهَنَّمَ فِي مِنْخَرَيْ مُسْلِمٍ أَبَدًا.

ದೇವಮಾರ್ಗದಲ್ಲಿ ಧೂಳು ಮತ್ತು ನರಕದ ಹೊಗೆಯು ಒಬ್ಬ ಸತ್ಯವಿಶ್ವಾಸಿಯ ಮೂಗಿನ ಹೊಳ್ಳೆಗಳಲ್ಲಿ ಒಮ್ಮೆಯೂ ಜೊತೆ ಸೇರಲು ಸಾಧ್ಯವಿಲ್ಲ.[5]

ಕಡ್ಡಾಯ ನಮಾಝ್‌ಗಳನ್ನು ನಿರ್ವಹಿಸಲಿಕ್ಕಾಗಿ ಒಬ್ಬನು ಮಸೀದಿಗೆ ನಡೆಯುವಾಗ ಉಂಟಾಗುವ ಹೆಜ್ಜೆಯ ಗುರುತುಗಳ ಬಗ್ಗೆ ಆ ಬಳಿಕ ವಿವರಿಸಲಾಗಿದೆ. ಸಂಘಟಿತ ನಮಾಝ್‌ನ ಮಹತ್ವ ಮತ್ತು ಶ್ರೇಷ್ಠತೆಯ ಕಡೆಗೆ ಈ ಪ್ರವಾದಿವಚನವು ಸೂಚನೆ ನೀಡುತ್ತದೆ. ಯುದ್ಧಭೂಮಿಗೆ ಸಿದ್ಧತೆಯೊಂದಿಗೆ ಹೊರಡುವಾಗ ಉಂಟಾಗುವ ಹೆಜ್ಜೆ ಗುರುತುಗಳು ಮತ್ತು ನಮಾಝ್ ನಿರ್ವಹಿಸಲಿಕ್ಕೆಂದು ಹೋಗುವಾಗ

ಉಂಟಾಗುವ ಹೆಜ್ಜೆ ಗುರುತುಗಳನ್ನು ಒಟ್ಟಾಗಿ ಹೇಳಿರುವುದರಿಂದ, ಸಂಘಟಿತ ನಮಾಝ್‌ಗೆ ಧರ್ಮದಲ್ಲಿ ಎಷ್ಟು ಪ್ರಾಧಾನ್ಯತೆ ಇದೆ ಎಂಬುದನ್ನು ಮನವರಿಕೆ ಮಾಡಬಹುದು. ಅಬೂ ಹುರೈರಾ(ರ) ವರದಿ ಮಾಡಿರುವ ಒಂದು ಪ್ರವಾದಿ ವಚನದಲ್ಲಿ ಇದನ್ನು ಬೇರೆ ರೀತಿ ವಿವರಿಸಲಾಗಿದೆ:

مَنْ تَطَهَّرَ فِي بَيْتِهِ، ثُمَّ مَضَى إِلَى بَيْتٍ مِنْ بُيُوتِ اللهِ، لِيَقْضِيَ فَرِيضَةً مِنْ فَرَائِضِ اللهِ، كَانَتْ خُطْوَاتُهُ إِحْدَاهَا تَحُطُّ خَطِيئَةً وَالأُخْرَى تَرْفَعُ دَرَجَةً.

'ಒಬ್ಬನು ಮನೆಯಲ್ಲಿ ವುಝೂ ಮಾಡಿ ಒಂದು ಕಡ್ಡಾಯ ಆರಾಧನೆಯನ್ನು ನಿರ್ವಹಿಸಲು ದೇವನ ಭವನಕ್ಕೆ ನಡೆದುಕೊಂಡು ಹೋದರೆ, ಅವನ ಹೆಜ್ಜೆಗಳ ಪೈಕಿ ಒಂದು ಅವನ ಪಾಪಗಳನ್ನು ಪರಿಹರಿಸಿದರೆ, ಎರಡನೆಯದು ಅವನ ಪದವಿಯನ್ನು ಉನ್ನತಗೊಳಿಸುತ್ತದೆ.'[6]

ದೇವಭಯ ಮತ್ತು ದೇವನ ಮಾರ್ಗದಲ್ಲಿ ಹೋರಾಟ ಧರ್ಮದಲ್ಲಿ ಎರಡು ಭಿನ್ನವಾದ ಕೆಲಸಗಳಲ್ಲ, ಒಂದು ಇನ್ನೊಂದರ ಅನಿವಾರ್ಯ ಬೇಡಿಕೆ ಮತ್ತು ಪರಿಪೂರ್ಣತೆಯಾಗಿದೆ ಎಂಬುದನ್ನು ಈ ಹದೀಸ್ ವಚನದಿಂದ ತಿಳಿಯಬಹುದಾಗಿದೆ. ಹೋರಾಟಕ್ಕೆ ಪ್ರೇರಣೆ ನೀಡದ ದೇವಭಯ ಮತ್ತು ದೇವಭಯವಿಲ್ಲದ ಹೋರಾಟ ಇವು ಎರಡೂ ಧರ್ಮದಲ್ಲಿಲ್ಲ. ಈ ವಿಶೇಷತೆಯನ್ನು ಮನದಟ್ಟು ಮಾಡಿಸುವ ಇಬ್ನು ಅಬ್ಬಾಸ್(ರ) ವರದಿ ಮಾಡಿರುವ ಪ್ರವಾದಿವಚನ ಹೀಗಿದೆ:

عَيْنَانِ لَا تَمَسُّهُمَا النَّارُ: عَيْنٌ بَكَتْ مِنْ خَشْيَةِ اللهِ، وَعَيْنٌ بَاتَتْ تَحْرُسُ فِي سَبِيلِ اللهِ

'ಎರಡು ಕಣ್ಣುಗಳನ್ನು ನರಕಾಗ್ನಿಯು ಸ್ಪರ್ಶಿಸದು. ದೇವಭಯದಿಮದ ಕಣ್ಣೀರಿಳಿಸಿದ ಕಣ್ಣುಗಳು. ದೇವಮಾರ್ಗದಲ್ಲಿ ಕಾವಲು ಕಾಯುವ ಮೂಲಕ ನಿದ್ದೆಗೆಟ್ಟ ಕಣ್ಣುಗಳು.'[7]

---

1) ತಿರ್ಮಿದಿ: 1633, ನಸಾಈ: 6/12, ಹಾಕಿಮ್: 4/260, ಅಹ್ಮದ್: 2/505. **2)** ತಬ್ರಾನಿ – ಕಬೀರ್, ಸುಯೂತಿ – ಜಾಮಿಉಸ್ಸಗೀರ್: 1530. **3)** ಬುಖಾರಿ: 2803, ಮುಸ್ಲಿಮ್: 185/1876, ತಿರ್ಮಿದಿ: 1656, ನಸಾಈ: 6/28. **4)** ತಿರ್ಮಿದಿ: 1632. **5)** ತಿರ್ಮಿದಿ: 1633, ನಸಾಈ: 6/12, ಹಾಕಿಮ್: 4/260, ಬೈಹಕಿ– ಶುಅಬುಲ್ ಈಮಾನ್: 800, ಅಹ್ಮದ್: 2/505. **6)** ಮುಸ್ಲಿಮ್: 666. **7)** ತಿರ್ಮಿದಿ: 1639.

12. ನಾಲ್ಕು ಅನುಗ್ರಹಗಳು

عَنِ بْنِ عَبَّاسٍ رَضِيَ اللّٰهُ عَنْهُمَا: أَنَّ رَسُوْلَ اللّٰهِ ﷺ قَالَ: "أَرْبَعٌ مَنْ أُعْطِيَهُنَّ فَقَدْ أُعْطِيَ خَيْرَ الدُّنْيَا وَالآخِرَةِ: قَلْبٌ شَاكِرٌ، وَلِسَانٌ ذَاكِرٌ، وَبَدَنٌ عَلَى الْبَلَاءِ صَابِرٌ، وَزَوْجَةٌ لَا تَبْغِيهِ خَوْنًا فِي نَفْسِهَا وَلَا مَالِهِ."

ಇಬ್ನು ಅಬ್ಬಾಸ್(ರ)ರಿಂದ ವರದಿ. ಪ್ರವಾದಿ(ಸ) ಹೇಳಿದರು: ಒಬ್ಬನಲ್ಲಿ ಈ ನಾಲ್ಕು ವಿಷಯಗಳಿದ್ದರೆ, ಅವನಿಗೆ ಇಹಲೋಕದಲ್ಲೂ ಪರಲೋಕ ದಲ್ಲೂ ಒಳಿತುಗಳು ಲಭಿಸಿದಂತೆ. ಕೃತಜ್ಞತೆ ಸಲ್ಲಿಸುವ ಹೃದಯ, ಅಲ್ಲಾಹನನ್ನು ಸ್ಮರಿಸುವ ನಾಲಗೆ, ಪರೀಕ್ಷೆಗಳೆದುರಾದಾಗ ಸಹನೆ ವಹಿಸುವ ಶರೀರ, ತನ್ನ ಶರೀರ ಮತ್ತು ಪತಿಯ ಸಂಪತ್ತಿನಲ್ಲಿ ವಂಚನೆಯನ್ನು ಇಷ್ಟಪಡದ ಪತ್ನಿ.*

ಬಹಳ ಅಮೂಲ್ಯವಾದ ದೇವನ ನಾಲ್ಕು ಅನುಗ್ರಹಗಳ ಕುರಿತು ಚಿಂತನಾರ್ಹ ವಾದ ನೆನಪಿಸುವಿಕೆಯು ಈ ಪ್ರವಾದಿವಚನದಲ್ಲಿದೆ.

ಮನುಷ್ಯನ ಬೆಳವಣಿಗೆ ಮತ್ತು ಅಭಿವೃದ್ಧಿಯಲ್ಲಿ ಹೃದಯಕ್ಕೆ ಇರುವಷ್ಟು ನಿಯಂತ್ರಣ ಬೇರೆ ಯಾವುದೇ ಅಂಗಗಳಿಗೆ ಇಲ್ಲ. ಹೃದಯವೇ ಸರ್ವಸ್ವ. ಶರೀರ ವನ್ನು ಸಂಪೂರ್ಣವಾಗಿ ನಿಯಂತ್ರಿಸುವಂತಹದ್ದು ಹೃದಯ. ಹೃದಯವು ಏನನ್ನು ಆದೇಶಿಸುತ್ತದೋ ಅದನ್ನು ಅನುಸರಿಸುವುದರ ಹೊರತು ನಮ್ಮ ದೇಹದ ಇತರ ಅಂಗಗಳಿಗೆ ಬೇರೆ ಏನನ್ನೂ ಮಾಡಲು ಸಾಧ್ಯವಿಲ್ಲ. ಆದುದರಿಂದಲೇ ಹೃದಯವು ಉತ್ತಮವಾದರೆ ಮನುಷ್ಯನು ಉತ್ತಮನಾಗುತ್ತಾನೆ. ಹೃದಯವು ಕೆಟ್ಟು ಹೋದರೆ

* ಇಮಾಮ್ ಬೈಹಕಿ – ಶುಅ್‌ಬುಲ್ ಈಮಾನ್: 4429, ತಬ್ರಾನೀ – ಕಬೀರ್: 11275 ಮುಂತಾದವರು ಈ ಪ್ರವಾದಿವಚನವನ್ನು ಉದ್ಧರಿಸಿದ್ದಾರೆ. ಪ್ರಮುಖ ಹದೀಸ್ ಪಂಡಿತರಾದ ಹಾಫಿಝ್ ಹೈತಮಿ ಈ ಹದೀಸ್ ಪರಂಪರೆಯು ಪ್ರಬಲವಾದುದಾಗಿದೆ ಎಂದು ಅಭಿಪ್ರಾಯ ಪಡುತ್ತಾರೆ. (ಮಜ್‌ಉಸ್ಸವಾಇದ್, ಭಾಗ: 4, ಪುಟ: 273)

ಮನುಷ್ಯ ಕೆಟ್ಟು ಹೋಗುತ್ತಾನೆ ಎಂದು ಹೇಳಲಾಗುತ್ತದೆ. ಪ್ರವಾದಿ(ಸ) ಹೇಳಿದರು:

أَلاَ وَإِنَّ فِي الْجَسَدِ مُضْغَةً، إِذَا صَلَحَتْ صَلَحَ الْجَسَدُ كُلُّهُ وَإِذَا فَسَدَتْ
فَسَدَ الْجَسَدُ كُلُّهُ، أَلاَ وَهِيَ الْقَلْبُ!

'ತಿಳಿಯಿರಿ, ಶರೀರದಲ್ಲಿ ಒಂದು ಮಾಂಸದ ತುಂಡಿದೆ. ಅದು ಉತ್ತಮವಾದರೆ, ಶರೀರವು ಉತ್ತಮವಾಗುತ್ತದೆ. ಅದು ಕೆಟ್ಟು ಹೋದರೆ ಶರೀರವು ಕೆಟ್ಟು ಹೋಗುತ್ತದೆ. ತಿಳಿದಿರಲಿ. ಅದುವೇ ಹೃದಯ.'[1]

ಹೃದಯವು ಸೃಷ್ಟಿಕರ್ತನನ್ನು ಅರಿತುಕೊಂಡಾಗ ದೇವನ ಅನುಗ್ರಹಗಳ ಬಗ್ಗೆ ಕೃತಜ್ಞತೆಯನ್ನು ಅರ್ಪಿಸುವಾಗ, ಶರೀರವು ಅನುಸರಣೆಯ ಮೂಲಕ ಅದಕ್ಕೆ ಬೆಂಬಲ ವನ್ನು ನೀಡುತ್ತದೆ. ಈ ಕಾರಣದಿಂದಾಗಿ ದೇಹದ ಅಂಗಾಂಗಗಳು ಕೆಡುಕುಗಳಿಂದ ದೂರ ಉಳಿಯಲು ಮತ್ತು ದೇವನ ಮಾರ್ಗದಲ್ಲಿ ದೃಢವಾಗಿ ನಿಲ್ಲಲು ಸಾಧ್ಯವಾ ಗುತ್ತದೆ. ಅಂದರೆ ಅಹಂಕಾರ ಮತ್ತು ಸ್ವೇಚ್ಛೆಯು ಒಬ್ಬನ ಹೃದಯದಲ್ಲಿ ಸ್ಥಳಾವಕಾಶ ಪಡೆದುಕೊಂಡರೆ, ಅವನ ಸ್ವಭಾವವು ಸಂಪೂರ್ಣ ಕೆಟ್ಟು ಹೋಗುತ್ತದೆ. ಜೀವನವೇ ಸಮಸ್ಯೆಗಳಲ್ಲಿ ಸಿಲುಕಿಕೊಳ್ಳುತ್ತದೆ. ಕೃತಜ್ಞತೆ ಸಲ್ಲಿಸುವ ಹೃದಯ ದೇವನ ಅನುಗ್ರಹಗಳ ಸಾಲಿನಲ್ಲಿ ಪ್ರಥಮ ಸ್ಥಾನ ಪಡೆಯಲಿಕ್ಕಿರುವ ಕಾರಣವು ಇದುವೇ ಆಗಿದೆ.

ಹೃದಯದ ನಂತರ ಮನುಷ್ಯ ಶರೀರದಲ್ಲಿರುವ ಇನ್ನೊಂದು ಪ್ರಮುಖ ಅಂಗ ನಾಲಗೆಯಾಗಿದೆ. ಒಬ್ಬನ ಸೋಲು-ಗೆಲುವುಗಳನ್ನು ನಿರ್ಣಯಿಸುವಲ್ಲಿ ಹೃದಯ ದಂತೆ ನಾಲಗೆಗೂ ಅದರದ್ದೇ ಆದ ಪಾಲಿದೆ. ನಾಲಗೆ ಒಳ್ಳೆಯದಿರದಿದ್ದರೆ, ಬೇರೆ ಯಾವ ಒಳ್ಳೆಯ ಗುಣಗಳಿದ್ದರೂ ಪ್ರಯೋಜನವಿಲ್ಲ.

ಕಟ್ಟನ್ನು ಕಳಚಿ ಬಿಟ್ಟರೆ ಕೇವಲ ಅಪಾಯಕಾರಿಯಾಗಿ ಮಾರ್ಪಡುವ ಬಹಳ ವಿಷಕಾರಿ ಅಂಗವಾದ ಈ ನಾಲಗೆಯನ್ನು ಒಳಿತಿನಲ್ಲಿ ಹಿಡಿದಿಡುವುದು ಕ್ಲಿಷ್ಟಕರ ಕೆಲಸವಾಗಿದೆ. ದೇವಸ್ಮರಣೆಯಲ್ಲಿ ಮಗ್ನವಾಗಿರುವ ನಾಲಗೆ ಮಹಾ ಅನುಗ್ರಹಗಳ ಪೈಕಿ ಒಂದಾಗಿದೆ ಎಂಬುದನ್ನು ಪ್ರತ್ಯೇಕವಾಗಿ ಹೇಳಿರುವುದು ಇದೇ ಕಾರಣ ದಿಂದಾಗಿದೆ.

ಪರೀಕ್ಷೆಗಳೆದುರಾದಾಗ ಸಹನೆ ವಹಿಸುವ ಶರೀರ ಮೂರನೆಯ ಅನುಗ್ರಹ. ಜೀವನವೆಂಬುದು ಸುಖ-ದುಃಖಗಳ ಸಮ್ಮಿಲನ. ಜೀವನದ ಸುಖ ಸೌಲಭ್ಯಗಳ ಮಧ್ಯೆ ಬೀಸುವ ಪರೀಕ್ಷೆಯ ಸುಂಟರ ಗಾಳಿಯನ್ನು ಸಹನೆ ಮತ್ತು ಸಂಯಮದೊಂದಿಗೆ ಸಮ ಚಿತ್ತದಿಂದ ಎದುರಿಸಲು ಸಾಧ್ಯವಾದರೆ, ಅದೊಂದು ಮಹಾ ಸೌಭಾಗ್ಯವಾಗಿದೆ. ಅಬೂ ಸಈದ್ ಖುದ್ರಿ(ರ) ವರದಿ ಮಾಡಿರುತ್ತಾರೆ. ಪ್ರವಾದಿ(ಸ) ಹೇಳಿರುವರು:

وَمَنْ يَتَصَبَّرْ يُصَبِّرْهُ اللهُ، وَمَا أَعْطَى اللهُ أَحَدًا عَطَاءً هُوَ خَيْرٌ وَأَوْسَعُ مِنَ الصَّبْرِ

ಪರೀಕ್ಷೆಗಳೆದುರಾದಾಗ ಸಹನೆಯನ್ನು ವಹಿಸುವವರಿಗೆ ಅಲ್ಲಾಹನು ಇನ್ನಷ್ಟು ಸಹನಾ ಶಕ್ತಿ ನೀಡಿ ಅನುಗ್ರಹಿಸುತ್ತಿರುವನು. ಸಹನೆಯಷ್ಟು ವಿಶಾಲವಾದ ಮತ್ತು ವಿಶಿಷ್ಟವಾದ ಒಂದು ಅನುಗ್ರಹ ಅಲ್ಲಾಹನು ಯಾರಿಗೂ ನೀಡಿಲ್ಲ.[2]

ಪತಿಯ ಸಂಪತ್ತು ಹಾಗೂ ಸ್ವಂತ ದೇಹದಲ್ಲಿ ವಂಚನೆಯನ್ನು ಇಷ್ಟಪಡದ ಉತ್ತಮ ಚಾರಿತ್ರ್ಯದ ಸ್ತ್ರೀಯರ ಕುರಿತು ಹದೀಸ್‌ನ ಕೊನೆಯ ಭಾಗದಲ್ಲಿ ಪ್ರಸ್ತಾಪಿಸಲಾಗಿದೆ. ಜೀವನವನ್ನು ಅರ್ಥಪೂರ್ಣ ಹಾಗೂ ಅಲಂಕಾರಭರಿತವಾಗಿಸುವುದರಲ್ಲಿ ಪತ್ನಿಗಿರುವ ಪಾಲು ಕಡಿಮೆಯೇನಲ್ಲ. ಕೌಟುಂಬಿಕ ಜೀವನದಲ್ಲಿ ಶಾಂತಿ ಸಮಾಧಾನವು ಪತ್ನಿಯನ್ನು ಅವಲಂಬಿಸಿರುತ್ತದೆ. ಅದೇ ವೇಳೆ ಜೀವನದ ಮಾಧುರ್ಯವನ್ನು ಕೆಡಿಸಲು, ಕೌಟುಂಬಿಕ ಜೀವನದಲ್ಲಿ ಅಶಾಂತಿಯನ್ನು ಉಂಟು ಮಾಡಲು ಚಾರಿತ್ರ್ಯಹೀನ ಪತ್ನಿಗೆ ಸಾಧ್ಯವಾಗುತ್ತದೆ. ಪ್ರವಾದಿ(ಸ) ಹೇಳಿರುವರು:

مَا اسْتَفَادَ الْمُؤْمِنُ بَعْدَ تَقْوَى اللهِ خَيْرًا لَهُ مِنْ زَوْجَةٍ صَالِحَةٍ، إِنْ أَمَرَهَا أَطَاعَتْهُ، وَإِنْ نَظَرَ إِلَيْهَا سَرَّتْهُ، وَإِنْ أَقْسَمَ عَلَيْهَا أَبَرَّتْهُ، وَإِنْ غَابَ عَنْهَا نَصَحَتْهُ فِي نَفْسِهَا وَمَالِهِ

'ಸತ್ಯವಿಶ್ವಾಸಿಗೆ ದೇವಭಯದ ಬಳಿಕ ಅತಿಹೆಚ್ಚು ಪ್ರಯೋಜನ ಲಭಿಸುವುದು ಸಚ್ಚಾರಿತ್ರ್ಯವಂತ ಪತ್ನಿಯಿಂದಾಗಿದೆ. ಆಜ್ಞಾಪಿಸಿದರೆ ಅವಳು ಅದನ್ನು ಅನುಸರಿಸುವಳು, ನೋಟದಲ್ಲಿ ಕುತೂಹಲ ಮೂಡಿಸುವಳು, ಅವಳಿಗೆ ಏನಾದರೂ ಹೊಣೆಯನ್ನು ವಹಿಸಿದರೆ ಅವಳದನ್ನು ಪೂರ್ತೀಕರಿಸುವಳು, ಪತಿಯ ಅನುಪಸ್ಥಿತಿಯಲ್ಲಿ ಸ್ವಂತ ಶರೀರ ಮತ್ತು ಪತಿಯ ಸಂಪತ್ತಿನ ವಿಷಯದಲ್ಲಿ ಬಹಳ ಜಾಗರೂಕತೆಯನ್ನು ಪಾಲಿಸುವಳು.'[3]

ಭೂಮಿಯ ಮೇಲಿನ ಅತ್ಯುತ್ತಮ ಸಂಪತ್ತು ಯಾವುದೆಂದು ಓರ್ವರು ಪ್ರವಾದಿ ಮುಹಮ್ಮದ್(ಸ)ರೊಡನೆ ಪ್ರಶ್ನಿಸಿದಾಗ, ಅವರು ಈ ರೀತಿ ಉತ್ತರಿಸಿದರು:

لِسَانٌ ذَاكِرٌ، وَقَلْبٌ شَاكِرٌ، وَزَوْجَةٌ مُؤْمِنَةٌ تُعِينُهُ عَلَى إِيمَانِهِ

'ಅಲ್ಲಾಹನನ್ನು ಸ್ಮರಿಸುವ ನಾಲಗೆ, ಕೃತಜ್ಞತೆ ಸಲ್ಲಿಸುವ ಹೃದಯ, ಪುರುಷನ ಸತ್ಯವಿಶ್ವಾಸಕ್ಕೆ ಬೆಂಬಲವಾಗಿ ನಿಲ್ಲುವ ಸತ್ಯನಿಷ್ಠಳಾದ ಪತ್ನಿ.'[4]

---

1) ಬುಖಾರಿ: 52, ಮುಸ್ಲಿಮ್: 1599. 2) ಬುಖಾರಿ: 1469, ಮುಸ್ಲಿಮ್: 1053, ಅಬೂದಾವೂದ್: 1644, ತಿರ್ಮಿದಿ: 2024, ಮಾಲಿಕ್ - ಮುವತ್ತಾ: 2/997, ನಸಾಈ: 5/95-96. 3) ಇಬ್ನುಮಾಜ: 1857. 4) ತಿರ್ಮಿದಿ: 3094, ಇಬ್ನುಮಾಜ: 1856.

ಅಂಡು

13. ಸಣ್ಣಪುಟ್ಟ ಪಾಪಕೃತ್ಯಗಳಿಂದ ದೂರವಿರುವುದು

عَنْ عَبْدِ اللّٰهِ بْنِ مَسْعُوْدٍ رَضِيَ اللّٰهُ عَنْهُ: أَنَّ رَسُولَ اللّٰهِ ﷺ قَالَ: "إِيَّاكُمْ وَمُحَقَّرَاتِ الذُّنُوْبِ، فَإِنَّهُنَّ يَجْتَمِعْنَ عَلَى الرَّجُلِ حَتَّى يُهْلِكْنَهُ" وَإِنَّ رَسُولَ اللّٰهِ ﷺ ضَرَبَ لَهُنَّ مَثَلًا: "كَمَثَلِ قَوْمٍ نَزَلُوا أَرْضَ فَلَاةٍ، فَحَضَرَ صَنِيعُ الْقَوْمِ، فَجَعَلَ الرَّجُلُ يَنْطَلِقُ فَيَجِيئُ بِالْعُوْدِ، وَالرَّجُلُ يَجِيئُ بِالْعُوْدِ، حَتَّى جَمَعُوْا سَوَادًا، وَأَجَّجُوْا نَارًا، وَأَنْضَجُوا مَا قَذَفُوْا فِيْهَا"

ಅಬ್ದುಲ್ಲಾ ಬಿನ್ ಮಸ್‌ಊದ್(ರ)ರಿಂದ ವರದಿ. ಪ್ರವಾದಿಯವರು(ಸ) ಹೇಳಿರುವರು: ಸಣ್ಣಪುಟ್ಟ ಪಾಪಕೃತ್ಯಗಳ ಬಗ್ಗೆಯೂ ಜಾಗರೂಕತೆ ಪಾಲಿಸ ಬೇಕು. ಏಕೆಂದರೆ ಅವುಗಳೇ ಒಂದೆಡೆ ಒಟ್ಟು ಸೇರಿದರೆ, ಅವನನ್ನು ನಾಶ ಪಡಿಸಿಬಿಡುವುದು. ಬಳಿಕ ಪ್ರವಾದಿ(ಸ) ಅದಕ್ಕೆ ಒಂದು ಉದಾಹರಣೆ ಯನ್ನು ನೀಡಿದರು: ಜನರ ಒಂದು ಗುಂಪು ಜನವಾಸವಿಲ್ಲದ ಒಂದೆಡೆ ತಂಗುತ್ತದೆ. ಬಳಿಕ ಆಹಾರವನ್ನು ಬೇಯಿಸಲಿಕ್ಕಾಗಿ ಕಟ್ಟಿಗೆಯನ್ನು ಹುಡು ಕುತ್ತಾ ಒಬ್ಬನು ಹೊರಡುತ್ತಾನೆ. ಒಂದು ಕಟ್ಟಿಗೆಯ ತುಂಡಿನೊಂದಿಗೆ ಹಿಂದಿರುಗುತ್ತಾನೆ. ಹೀಗೆ ಪ್ರತಿಯೊಬ್ಬರು ಒಂದೊಂದು ಕಟ್ಟಿಗೆಯ ತುಂಡನ್ನು ತರುತ್ತಾರೆ. ಹೀಗೆ ಎಲ್ಲರೂ ಕಟ್ಟಿಗೆಯ ತುಂಡನ್ನು ತಂದು ಹಾಕಿದಾಗ, ಅದು ಕಟ್ಟಿಗೆಯ ದೊಡ್ಡ ರಾಶಿಯಾಗುತ್ತದೆ. ಅದಕ್ಕೆ ಬೆಂಕಿ ಯನ್ನು ಉರಿಸಿ ಆಹಾರವನ್ನು ಬೇಯಿಸಲಾಗುತ್ತದೆ.*

* ಅಹ್ಮದ್; 1/402, ಬೈಹಕಿ – ಶುಅ್‌ಬುಲ್ ಈಮಾನ್: 285, ತಬ್ರಾನೀ–ಔಸಾತ್ ಅಬೂ ಯಅ್‌ಲಾ: 3287 ಮುಂತಾದವರು ಉದ್ಧರಿಸಿದ ಪ್ರವಾದಿವಚನ. ಇದರ ಪರಂಪರೆ ಹಸನ್ ಆಗಿದೆಯೆಂದು ಮುಹ್ಯುದ್ದೀನ್ ದೀಬ್ ಮುಸ್ತು, ಸಮೀರ್ ಅಹ್ಮದುಲ್ ಅತ್ತಾರ್, ಯೂಸುಫ್ ಅಲಿ ಬುದೈವಿ ಸಾಕ್ಷ್ಯ ನುಡಿಯುತ್ತಾರೆ.

ಜನರು ಹೆಚ್ಚು ಗಮನ ನೀಡದ ಒಂದು ವಿಷಯವನ್ನು ಈ ಪ್ರವಾದಿವಚನದಲ್ಲಿ ಚಿತ್ರಿಸಲಾಗಿದೆ. ಮಹಾಪಾಪಗಳು ಸಂಭವಿಸಿಬಿಡದಂತೆ ಹೆಚ್ಚಿನವರೆಲ್ಲರೂ ತಮ್ಮ ಸಾಮರ್ಥ್ಯದ ಪರಮಾವಧಿ ಸೂಕ್ಷ್ಮತೆಯನ್ನು ಪಾಲಿಸುತ್ತಾರೆ. ಸದಾ ಪಾಪಕೃತ್ಯಗಳನ್ನೆಸಗುವವರು ಯಾವುದೇ ಸಮಾಜದಲ್ಲಾದರೂ ಬಹಳ ಕಡಿಮೆ ಸಂಖ್ಯೆಯಲ್ಲಿ ರುತ್ತಾರೆ. ಪರ ಲೋಕದಲ್ಲಿ ವಿಶ್ವಾಸವಿಲ್ಲದ ಕೆಲವು ಧಿಕ್ಕಾರಿಗಳ ಹೊರತು ಬೇರೆ ಯಾರೂ ಮಹಾಪಾಪ ಕೃತ್ಯಗಳನ್ನು ಮಾಡುವುದಿಲ್ಲ. ಆದರೆ ಸಣ್ಣಪುಟ್ಟ ಪಾಪಕೃತ್ಯಗಳ ವಿಷಯ ಹಾಗಲ್ಲ. ಮಹಾ ಪಾಪಗಳು ಸಂಭವಿಸಿಬಿಡದಂತೆ ಪಾಲಿಸಲಾಗುವ ಎಚ್ಚರಿಕೆಗಳನ್ನು ಸಣ್ಣ ಪಾಪಕೃತ್ಯಗಳ ವಿಷಯಗಳಲ್ಲಿ ಪಾಲಿಸಲಾಗುವುದಿಲ್ಲ. ಸಣ್ಣ ಪುಟ್ಟ ಪಾಪಕೃತ್ಯಗಳನ್ನು ಅಲ್ಪ ಮತ್ತು ಕ್ಷುಲ್ಲಕವೆಂದು ಭಾವಿಸುತ್ತೇವೆ. ಆದುದರಿಂದ ಇದನ್ನು ಮಾಡಿದರೂ ಅಲ್ಲಾಹನ ಅಪಾರ ವಾದ ಕಾರುಣ್ಯದಿಂದ ಅಂತ್ಯದಿನದಂದು ಅವನು ನಮ್ಮನ್ನು ಕ್ಷಮಿಸಿ ಬಿಡುವನೆಂದು ಹೆಚ್ಚಿನವರು ಭಾವಿಸಿಕೊಂಡಿದ್ದಾರೆ. ಆದುದರಿಂದಲೇ ಮಹಾಪಾಪಗಳ ಬಗ್ಗೆ ಪಾಲಿಸಲಾಗುವ ಜಾಗರೂಕತೆಯನ್ನು ಸಣ್ಣ ಪಾಪಕೃತ್ಯಗಳ ಬಗ್ಗೆ ಪಾಲಿಸಲಾಗುವುದಿಲ್ಲ. ಆದರೆ ಸಣ್ಣ ಪುಟ್ಟ ಪಾಪಕೃತ್ಯಗಳು ಅಷ್ಟು ಕ್ಷುಲ್ಲಕ ವಿಷಯಗಳಲ್ಲ. ನಿರಂತರವಾಗಿ ಇಂತಹ ಪಾಪಗಳನ್ನು ಎಸಗುವಾಗ, ಅವುಗಳೂ ಮಹಾಪಾಪಗಳಂತೆ ಆಗಿಬಿಡುತ್ತವೆ ಎಂಬುದನ್ನು ಈ ಪ್ರವಾದಿ ವಚನವು ನಮ್ಮನ್ನು ಎಚ್ಚರಿಸುತ್ತದೆ.

ಸಣ್ಣಪುಟ್ಟ ಪಾಪಕೃತ್ಯಗಳನ್ನು ಮಹಾಪಾಪಗಳೊಂದಿಗೆ ಹೋಲಿಸಿದಾಗ ಅವು ನಮಗೆ ಕ್ಷುಲ್ಲಕವೆಂದು ಭಾಸವಾಗುತ್ತದೆ. ಅಲ್ಲಾಹನಿಗೆ ಇಷ್ಟವಿಲ್ಲದ ಕೆಲಸಗಳು ಅದು ದೊಡ್ಡದಾದರೂ ಸಣ್ಣದಾದರೂ ಕ್ಷುಲ್ಲಕವೋ ನಿಸ್ಸಾರವೋ ಅಲ್ಲ. ಓರ್ವ ವ್ಯಕ್ತಿ ಒಂದು ಪಾಪ ಕೃತ್ಯ ಎಸಗುವಾಗ, ಅವನು ಅಲ್ಲಾಹನ ಒಂದು ಆದೇಶವನ್ನು ಉಲ್ಲಂಘಿಸುವ ತಪ್ಪನ್ನು ಎಸಗುತ್ತಾನೆ. ಆದುದರಿಂದ ಪಾಪಕೃತ್ಯವು ಸಣ್ಣದಾಗಿದ್ದರೂ ದೊಡ್ಡದಾಗಿದ್ದರೂ ಅವೆರಡೂ ಅಲ್ಲಾಹನ ಬಳಿ ಬಹಳ ಮಹತ್ವವಿರುವ ವಿಷಯಗಳಾಗಿರುತ್ತವೆ. ಪ್ರವಾದಿ ಮುಹಮ್ಮದ್(ಸ)ರು ಈ ರೀತಿ ಹೇಳಿರುವರು:

يَا عَائِشَةُ، إِيَّاكَ وَمُحْقِرَاتِ الذُّنُوبِ، فَإِنَّ لَهَا مِنَ اللهِ عَزَّوَجَلَّ طَالِبًا

'ಓ ಆಯಿಶಾ, ಸಣ್ಣಪುಟ್ಟ ಪಾಪಕೃತ್ಯಗಳಿಂದಲೂ ದೂರವಿರು. ಏಕೆಂದರೆ ಅಲ್ಲಾಹನ ಬಳಿ ಅವುಗಳ ಬಗ್ಗೆಯೂ ಖಂಡಿತ ವಿಚಾರಿಸಲಾಗುವುದು.'[1]

ಸಣ್ಣ ಪಾಪಕೃತ್ಯಗಳೇ ಸಣ್ಣ ಕಟ್ಟಿಗೆಯ ತುಂಡುಗಳಂತೆ ಒಂದೇ ತುಂಡು ಇದ್ದರೆ, ಅದು ಜನರಿಗೆ ಉಪಕಾರ ಅಥವಾ ಉಪದ್ರವ ಮಾಡುವುದಿಲ್ಲ. ಒಂದರ ಮೇಲೆ

ಒಂದು ಹಾಕಿದರೆ, ಅದರಿಂದ ಬೆಂಕಿಯ ಒಂದು ಹೊಂಡವನ್ನೇ ಉಂಟು ಮಾಡ ಬಹುದು. ಸಣ್ಣದು ಮತ್ತು ಕ್ಷುಲ್ಲಕವೆಂದು ಭಾಸವಾಗುವ ಪಾಪಕೃತ್ಯಗಳ ಅವಸ್ಥೆಯೂ ಇದೇ ರೀತಿ ಯಾಗಿದೆ. ಒಂದೊಂದಾಗಿ ಪರಿಗಣಿಸಿದರೆ ಅವುಗಳು ಸತ್ಯವಿಶ್ವಾಸಿಯ ಸ್ವರ್ಗ ಪ್ರವೇಶಕ್ಕೆ ತಡೆಯಾಗಲಾರದು. ಆದರೆ ಅಂತ್ಯದಿನದಂದು ಮನುಷ್ಯನ ಸಣ್ಣ ಮತ್ತು ದೊಡ್ಡ ಎಲ್ಲ ಪಾಪಕೃತ್ಯಗಳನ್ನು ಒಟ್ಟು ಸೇರಿಸಿ ವಿಚಾರಣೆ ನಡೆಸಲಾಗುವುದು. ಆಗ ಸಣ್ಣ ಪಾಪಕೃತ್ಯಗಳೇ ದೊಡ್ಡ ಪಾಪಗಳಂತಾಗುವುದು. ಹೀಗೆ ಒಬ್ಬನ ಒಳಿತುಗಳನ್ನು, ಸತ್ಕರ್ಮಗಳನ್ನು ನಾಶ ಪಡಿಸಿ ಬಿಡಲು ಸಣ್ಣಪುಟ್ಟ ಪಾಪಕೃತ್ಯಗಳೇ ಕಾರಣವಾಗುವುದು. ಪ್ರವಾದಿಯವರು(ಸ) ಹೀಗೆ ಹೇಳಿರುವರು:

إِنَّ الشَّيْطَانَ قَدْ يَئِسَ أَنْ تُعْبَدَ الأَصْنَامُ فِي أَرْضِ الْعَرَبِ, وَلَكِنَّهُ سَيَرْضَى مِنْكُمْ بِدُوْنِ ذَلِكَ بِالْمُحَقَّرَاتِ, وَهِيَ الْمُوبِقَاتُ يَوْمَ الْقِيَامَةِ

ಇನ್ನು ಮುಂದೆ ಅರೇಬಿಯದಲ್ಲಿ ವಿಗ್ರಹಾರಾಧನೆ ನಡೆಯಬಹುದು ಎಂಬ ವಿಷಯದಲ್ಲಿ ಶೈತಾನನು ನಿರಾಶನಾಗಿದ್ದಾನೆ. ಆದರೆ ನೀವು ಸಣ್ಣಪುಟ್ಟ ಪಾಪ್ಯಕೃತ್ಯ ಗಳನ್ನು ನಿರಂತರವಾಗಿ ಎಸಗುತ್ತೀರಿ ಎಂಬ ವಿಷಯದಲ್ಲಿ ಅವನು ಬಹಳ ಸಂತುಷ್ಟ ನಾಗಿದ್ದಾನೆ. ನಿಶ್ಚಯವಾಗಿಯೂ ಅಂತ್ಯದಿನದಂದು ಸಣ್ಣಪುಟ್ಟ ಪಾಪಕೃತ್ಯಗಳು ಮಹಾಪಾಪಗಳಾಗಿ ಪರಿಣಮಿಸುವುದು.[2]

ಸಅದ್ ಬಿನ್ ಜುನಾದ(ರ) ವರದಿ ಮಾಡಿರುವ ಒಂದು ಐತಿಹಾಸಿಕ ಘಟನೆ ಈ ರೀತಿ ಇದೆ:

لَمَّا فَرَغَ رَسُولُ اللّٰهِ ﷺ مِنْ حُنَيْنٍ, نَزَلْنَا قَفْرًا مِنَ الأَرْضِ, لَيْسَ فِيْهَا شَيْءٌ, فَقَالَ النَّبِيُّ ﷺ: اِجْمَعُوا, مَنْ وَجَدَ شَيْئًا فَلْيَأْتِ بِهِ, وَمَنْ وَجَدَ عَظْمًا أَوْ سِنًّا فَلْيَأْتِ بِهِ! قَالَ: فَمَا كَانَ إِلَّا سَاعَةً حَتَّى جَعَلْنَاهُ رُكَامًا, فَقَالَ النَّبِيُّ ﷺ: أَتَرَوْنَ هَذَا؟ فَكَذَلِكَ تَجْتَمِعُ الذُّنُوبُ عَلَى الرَّجُلِ مِنْكُمْ كَمَا جَمَعْتُمْ هَذَا, فَلْيَتَّقِ اللّٰهَ رَجُلٌ فَلَا يُذْنِبُ صَغِيرَةً وَلَا كَبِيرَةً, فَإِنَّهَا مُحْصَاتٌ عَلَيْهِ.

ಹುನೈನ್ ಯುದ್ಧ ಮುಗಿಸಿ ಮರಳಿ ಬರುವಾಗ ನಾವು ಒಂದು ತಗ್ಗು ಪ್ರದೇಶ ದಲ್ಲಿ ವಿಶ್ರಾಂತಿ ಪಡೆಯುತ್ತಿದ್ದೆವು. ಗಿಡಗಂಟಿಗಳೋ ಕಸಕಡ್ಡಿಗಳೋ ಅಲ್ಲಿರಲಿಲ್ಲ. ಆಗ ಪ್ರವಾದಿ(ಸ) ಹೇಳಿದರು, ನೀವು ಈ ಮೈದಾನದಲ್ಲಿ ಏನನ್ನಾದರೂ ಕಂಡರೆ ಅದನ್ನು ನನ್ನ ಮುಂದೆ ತಂದು ಹಾಕಬೇಕು. ಎಲುಬಿನ ತುಂಡುಗಳೋ ಪ್ರಾಣಿಗಳ ಹಲ್ಲುಗಳೋ

ಏನಾದರೂ ಸರಿ. ಸಅದ್(ರ) ಹೇಳುತ್ತಾರೆ. ಸ್ವಲ್ಪ ಸಮಯದೊಳಗೆ ಎಲ್ಲ ರೀತಿಯ ಕಸಕಡ್ಡಿಗಳ ಒಂದು ರಾಶಿಯೇ ಅಲ್ಲಿ ಸಂಗ್ರಹವಾಯಿತು. ಪ್ರವಾದಿ(ಸ) ಪ್ರಶ್ನಿಸಿದರು: ನಿಮಗೆ ಈಗ ಹೇಗನಿಸುತ್ತದೆ? ಪಾಪಕೃತ್ಯಗಳು ಒಬ್ಬನಲ್ಲಿ ಒಟ್ಟು ಸೇರಿದರೆ, ಇದೇ ಪರಿಸ್ಥಿತಿಯಾಗಿ ಬಿಡುತ್ತದೆ. ಆದುದರಿಂದ ಪ್ರತಿಯೊಬ್ಬರೂ ಅಲ್ಲಾಹನನ್ನು ಭಯ ಪಡಿರಿ. ಸಣ್ಣಪುಟ್ಟ ಮತ್ತು ಮಹಾಪಾಪಕೃತ್ಯಗಳಿಂದ ದೂರ ಉಳಿಯಲಿ. ಏಕೆಂದರೆ ಪಾಪಕೃತ್ಯಗಳು ಇದೇ ರೀತಿ ಒಬ್ಬ ಮನುಷ್ಯನಲ್ಲಿಯೂ ಒಂದುಗೂಡಿ ಬಿಡುವ ಸಾಧ್ಯತೆ ಇರುತ್ತದೆ.[3]

---

1. ಇಬ್ನು ಮಾಜ: 4243, ಅಹ್ಮದ್: 6/70.
2. ತಬ್ರಾನಿ – ಔಸಾತ್, ಅಬೂ ಯಅ್‌ಲಾ: 5122, ಅಹ್ಮದ್: 1/402.
3. ತಬ್ರಾನಿ.

14. ಅಂತ್ಯದಿನದಂದು ಮೊದಲು ವಿಚಾರಣೆಗೆ ಒಳಪಡುವ ವಿಷಯ

عَنْ أَنَسِ بْنِ مَالِكٍ رَضِيَ اللَّهُ عَنْهُ، قَالَ: قَالَ رَسُولُ اللَّهِ ﷺ: "أَوَّلُ مَا يُحَاسَبُ بِهِ الْعَبْدُ يَوْمَ الْقِيَامَةِ الصَّلاَةُ، فَإِنْ صَلَحَتْ صَلَحَ سَائِرُ عَمَلِهِ، وَإِنْ فَسَدَتْ فَسَدَ سَائِرُ عَمَلِهِ"

ಅನಸ್ ಬಿನ್ ಮಾಲಿಕ್(ರ)ರಿಂದ ವರದಿ. ಪ್ರವಾದಿ ಮುಹಮ್ಮದ್(ಸ) ಹೇಳಿದರು: ಅಂತ್ಯದಿನದಂದು ದಾಸರಲ್ಲಿ ವಿಚಾರಣೆ ನಡೆಸಲ್ಪಡುವುದು ನಮಾಝಿನ ಕುರಿತಾಗಿರುತ್ತದೆ. ಅದು ಸರಿಯಾಗಿದ್ದರೆ ಬೇರೆ ಎಲ್ಲ ಕರ್ಮಗಳು ಸರಿಯಾಗಿರುತ್ತವೆ. ಅದು ಸರಿಯಾಗಿಲ್ಲದಿದ್ದರೆ, ಬೇರೆಲ್ಲ ಕರ್ಮಗಳು ಕೆಟ್ಟು ಹೋಗುತ್ತವೆ.*

ನಮಾಝ್, ಇಸ್ಲಾಮಿನಲ್ಲಿ ಬಹಳ ಮಹತ್ವವಿರುವ ಕಡ್ಡಾಯ ಕರ್ಮವಾಗಿದೆ. ನಮಾಝಿನಷ್ಟು ಮಹತ್ವಪೂರ್ಣವಾದ ಬೇರೆ ಯಾವುದೇ ಆರಾಧನೆ ಧರ್ಮದಲ್ಲಿಲ್ಲ. ಧರ್ಮದ ಮೂಲಾಧಾರವೇ ನಮಾಝಿನ ಮೇಲೆ ನಿಂತಿರುತ್ತದೆ. ಒಬ್ಬನು ಇಸ್ಲಾಮನ್ನು ಸ್ವೀಕರಿಸಿದರೆ, ಅವನು ಮಾಡಬೇಕಾದ ಪ್ರಥಮ ಕರ್ಮ ನಮಾಝ್ ಆಗಿರುತ್ತದೆ. ಆ ಬಳಿಕ ಉಳಿದ ಕರ್ಮಗಳು ಕಡ್ಡಾಯವಾಗುತ್ತವೆ. ಪ್ರವಾದಿ(ಸ) ಹೇಳಿರುವರು:

إِنَّ أَوَّلَ مَا افْتَرَضَ اللَّهُ عَلَى النَّاسِ مِنْ دِينِهِمُ الصَّلَاةُ، وَآخِرَ مَا يَبْقَى الصَّلَاةُ، وَأَوَّلَ مَا يُحَاسَبُ بِهِ الصَّلَاةُ

* ಇಮಾಮ್ ತಬ್ರಾನಿ - ಔಸತ್‌ನಲ್ಲಿ, ಸುಯೂತಿ - ಜಾಮಿಉಸ್ಸಗೀರ್(2818)ನಲ್ಲಿ ಈ ಪ್ರವಾದಿವಚನವನ್ನು ಉಲ್ಲೇಖಿಸಿದ್ದಾರೆ. ಇದರ ವರದಿ ಪರಂಪರೆ ಸಹೀಹ್ ಆಗಿದೆಯೆಮದು ಶೈಖ್ ನಾಸಿರುದ್ದೀನ್ ಅಲ್ಬಾನಿ ಸಾಕ್ಷಿ ನುಡಿದಿದ್ದಾರೆ. (ಸಿಲ್‌ಸಿಲತ್ತು ಅಹಾದೀಸಿಸ್ಸಹೀಹ: 1358)

ಜನರಿಗೆ ಅವರ ಧರ್ಮದಲ್ಲಿ ಪ್ರಥಮವಾಗಿ ಕಡ್ಡಾಯಗೊಳಿಸಿದ ವಿಷಯ ನಮಾಝ್ ಆಗಿರುತ್ತದೆ. (ಅಂತ್ಯದಿನದಂದು) ಪ್ರಥಮವಾಗಿ ವಿಚಾರಣೆ ನಡೆಸಲ್ಪಡುವ ವಿಷಯವೂ ನಮಾಝ್ ಆಗಿರುತ್ತದೆ.[1]

ಹಿಂದಿನ ಪ್ರವಾದಿಗಳಿಗೂ ಅವರ ಸಮುದಾಯಕ್ಕೂ ನಮಾಝನ್ನು ಕಡ್ಡಾಯ ಗೊಳಿಸಲಾಗಿತ್ತು. ನಮಾಝನ್ನು ಕಡ್ಡಾಯಗೊಳಿಸದ ಯಾವ ಸಮುದಾಯವೂ ಗತಿಸಿ ಹೋಗಿಲ್ಲ. ಪವಿತ್ರ ಕುರ್‌ಆನ್ ಅನೇಕ ಕಡೆಗಳಲ್ಲಿ ಈ ವಿಷಯವನ್ನು ನೆನಪಿಸಿದೆ. ಪ್ರವಾದಿ ಇಬ್ರಾಹೀಮ್(ಅ)ರವರು ತಮಗಾಗಿಯೂ ತಮ್ಮ ಕುಟುಂಬಕ್ಕಾಗಿಯೂ ಅಲ್ಲಾಹನಲ್ಲಿ ಪ್ರಾರ್ಥಿಸಿರುವುದನ್ನು ನೋಡಿರಿ: ಓ ನನ್ನ ಪ್ರಭೂ! ನೀನು ನನ್ನನ್ನು ನಮಾಝ್ ಸಂಸ್ಥಾಪಿಸುವವನನ್ನಾಗಿ ಮಾಡು. ನನ್ನ ಸಂತತಿಯಿಂದಲೂ (ಈ ಕಾರ್ಯ ವೆಸಗುವವರನ್ನು ಎಬ್ಬಿಸು). ಓ ನನ್ನ ಪ್ರಭೂ, ನನ್ನ ಪ್ರಾರ್ಥನೆಯನ್ನು ಸ್ವೀಕರಿಸು. **(ಇಬ್ರಾಹೀಮ್: 40)**

ಪ್ರವಾದಿಯಾಗಿ ನೇಮಿಸಿದ ಬಳಿಕ ಹ. ಮೂಸಾ(ಅ)ರಿಗೆ ಅಲ್ಲಾಹನು ಪ್ರಥಮ ವಾಗಿ ಆದೇಶಿಸಿದ್ದು, ನಮಾಝನ್ನು ಸರಿಯಾಗಿ ನಿರ್ವಹಿಸಬೇಕು ಎಂದಾಗಿತ್ತು: ನಿಮ್ಮನ್ನು ನಾನು (ಪ್ರವಾದಿಯಾಗಿ) ಆರಿಸಿಕೊಂಡಿದ್ದೇನೆ. ನಿಮಗೆ ಮಾಡಲಾಗುವ ದಿವ್ಯವಾಣಿಯ ಅವತೀರ್ಣವನ್ನು ಆಲಿಸಿರಿ. ನಿಶ್ಚಯವಾಗಿಯೂ ನಾನೇ ಅಲ್ಲಾಹ್. ನನ್ನ ಹೊರತು ಇನ್ನಾವ ದೇವನೂ ಇಲ್ಲ. ಆದುದರಿಂದ ನೀವು ನನ್ನ ದಾಸ್ಯ ಆರಾಧನೆ ಮಾಡಿರಿ ಮತ್ತು ನನ್ನ ಸ್ಮರಣೆಗಾಗಿ ನಮಾಝನ್ನು ಸಂಸ್ಥಾಪಿಸಿರಿ. **(ತಾಹಾ: 13-14)**

ಮೂಸಾ(ಅ) ಮತ್ತು ಹಾರೂನ್(ಅ)ರೊಂದಿಗೆ ತಮ್ಮ ಸಮುದಾಯಕ್ಕೆ ಆಜ್ಞಾಪಿಸಲಿಕ್ಕಾಗಿ ಆದೇಶಿಸಿದ್ದ ವಿಷಯ ಕೂಡ ಅದೇ ಆಗಿತ್ತು: ನಾವು ಮೂಸಾ ಮತ್ತು ಅವರ ಸಹೋದರನಿಗೆ (ಈ ರೀತಿ) ಸೂಚನೆ ಕೊಟ್ಟೆವು- ಈಜಿಪ್ಟಿನಲ್ಲಿ ತಮ್ಮ ಜನಾಂಗ ದವರಿಗಾಗಿ ಕೆಲವು ನಿವೇಶನಗಳನ್ನು ಒದಗಿಸಿರಿ. ತಮ್ಮ ಆ ನಿವೇಶನಗಳನ್ನು ಅಭಿಮುಖ ಕೇಂದ್ರ(ಕಿಬ್ಲಾ)ವನ್ನಾಗಿ ಮಾಡಿಕೊಳ್ಳಿರಿ. ನಮಾಝನ್ನು ಸಂಸ್ಥಾಪಿಸಿರಿ. **(ಯೂನುಸ್: 87)**

ಪ್ರವಾದಿ ಈಸಾ(ಅ) ರವರು ತೊಟ್ಟಿಲಲ್ಲಿ ಮಾತನಾಡಿದ ವಿಷಯವನ್ನು ಕುರ್‌ಆನ್ ಈ ರೀತಿ ವಿವರಿಸುತ್ತದೆ: ನನ್ನ ಬಾಳಿನುದ್ದಕ್ಕೂ ನಮಾಝ್ ಮತ್ತು ಝಕಾತ್ ಪಾವತಿಸುತ್ತಿರಲು ಆಜ್ಞೆಯಿತ್ತನು. **(ಮರ್ಯಮ್: 31)**

ಇಸ್ರಾಯೀಲಿ ಸಮುದಾಯದೊಂದಿಗೆ ಅಲ್ಲಾಹನು ಪಡೆದ ಬಹಳ ಮುಖ್ಯ

ಕರಾರುಗಳಲ್ಲಿ ನಮಾಝ್ ಕೂಡ ಇತ್ತು (ಅಲ್ ಬಕರ: 83) ಎಂದು ಕುರ್ಆನ್ ಸ್ಪಷ್ಟಪಡಿಸುತ್ತದೆ. ಅಬ್ದುಲ್ಲಾ ಬಿನ್ ಉಮರ್(ರ) ವರದಿ ಮಾಡಿರುತ್ತಾರೆ:

أَنَّ رَجُلاً أَتَى رَسُولَ اللهِ ﷺ، فَسَأَلَهُ عَنْ أَفْضَلِ الْأَعْمَالِ؟ فَقَالَ النَّبِيُّ ﷺ: اَلصَّلَاةُ، قَالَ: ثُمَّ مَه؟ قَالَ: ثُمَّ الصَّلَاةُ، قَالَ: ثُمَّ مَه؟ قَالَ: ثُمَّ الصَّلَاةُ، ثَلَاثَ مَرَّاتٍ، قَالَ: ثُمَّ مَه؟ قَالَ: ثُمَّ الْجِهَادُ فِي سَبِيلِ اللهِ.

ಒಮ್ಮೆ ಓರ್ವ ವ್ಯಕ್ತಿ ಬಂದು ಪ್ರವಾದಿ ಮುಹಮ್ಮದ್(ಸ)ರೊಂದಿಗೆ ಈ ರೀತಿ ಪ್ರಶ್ನಿಸುತ್ತಾರೆ: ಅತ್ಯುತ್ತಮ ಕರ್ಮ ಯಾವುದು? ಪ್ರವಾದಿ(ಸ) ಹೇಳಿದರು: ನಮಾಝ್. ಆ ವ್ಯಕ್ತಿ ನಂತರ ಯಾವುದು ಎಂದು ಪ್ರಶ್ನಿಸಿದಾಗ ಪ್ರವಾದಿ(ಸ) ನಮಾಝ್ ಎಂದೇ ಉತ್ತರಿಸಿದರು. ಅಬ್ದುಲ್ಲಾ ಬಿನ್ ಉಮರ್(ರ) ಹೇಳುತ್ತಾರೆ: ಈ ರೀತಿ ಪ್ರವಾದಿವರ್ಯರು(ಸ) ಮೂರು ಬಾರಿ ಪುನರಾವರ್ತಿಸಿದರು. ಆಗಂತುಕ ಪುನಃ ಪ್ರಶ್ನಿಸಿದ: ಆ ಬಳಿಕ ಯಾವುದು? ಪ್ರವಾದಿ(ಸ) ಹೇಳಿದರು: ದೇವಮಾರ್ಗದ ಧರ್ಮಯುದ್ಧ.[2]

ಧರ್ಮದಲ್ಲಿ ಇಷ್ಟು ಶ್ರೇಷ್ಠತೆ ಮತ್ತು ಮಹತ್ವವಿರುವ ನಮಾಝನ್ನು ಯಾವ ಕಾರಣಕ್ಕೂ ನಿರ್ಲಕ್ಷಿಸಬಾರದು. ಬಹಳ ನಿಷ್ಠೆಯಿಂದ ಅದನ್ನು ನಿರ್ವಹಿಸಬೇಕೆಂದು ಪ್ರವಾದಿವರ್ಯರು(ಸ) ಎಚ್ಚರಿಸಿರುವರು. ಪ್ರವಾದಿ(ಸ) ಹೇಳಿದರು:

مَنْ حَافَظَ عَلَى الصَّلَاةِ كَانَتْ لَهُ نُورًا وَبُرْهَانًا، وَنَجَاةً يَوْمَ الْقِيَامَةِ، وَمَنْ لَمْ يُحَافِظْ عَلَيْهَا لَمْ يَكُنْ لَهُ نُورٌ، وَلَا بُرْهَانٌ، وَلَا نَجَاةٌ، وَكَانَ يَوْمَ الْقِيَامَةِ مَعَ قَارُونَ وَفِرْعَوْنَ، وَهَامَانَ وَأُبَيِّ بْنِ خَلَفٍ

ಯಾರು ನಮಾಝನ್ನು ಸರಿಯಾಗಿ ನಿರ್ವಹಿಸುತ್ತಾರೋ, ಅವರಿಗದು ಅಂತ್ಯದಿನದಂದು ಪ್ರಕಾಶ, ಮಾರ್ಗದರ್ಶಕ ಮತ್ತು ರಕ್ಷಣೆಯಾಗಿ ಪರಿಣಮಿಸುವುದು. ಯಾರು ಅದನ್ನು ಜಾಗರೂಕತೆಯೊಂದಿಗೆ ನಿರ್ವಹಿಸಲಿಲ್ಲವೋ ಅವನಿಗದು ಪ್ರಕಾಶ, ಮಾರ್ಗದರ್ಶನ ಮತ್ತು ರಕ್ಷಣೆಯಾಗಿರಲಾರದು. ಅವರು ಅಂತ್ಯದಿನದಂದು ಫಿರ್ಔನ್, ಹಾಮಾನ್, ಕಾರೂನ್, ಉಬೈ ಬಿನ್ ಖಲಫ್ ಮುಂತಾದವರ ಜೊತೆ ಒಟ್ಟು ಸೇರುವರು.[3]

ನಮಾಝನ್ನು ತೊರೆಯುವುದು ಮಹಾಪಾಪವಾಗಿದೆ. ಎರಡೂ ಲೋಕದಲ್ಲಿ ಅಲ್ಲಾಹನ ಕೋಪ ಮತ್ತು ಶಿಕ್ಷೆಯನ್ನು ಆಹ್ವಾನಿಸುವ ಕಠಿಣ ಧಿಕ್ಕಾರದ ವರ್ತನೆಯಾಗಿದೆ. ಪ್ರವಾದಿ(ಸ) ಹೇಳಿರುವರು:

مَنْ تَرَكَ الصَّلَاةَ لَقِيَ اللّٰهَ وَهُوَ عَلَيْهِ غَضْبَانُ

ನಮಾಝುನ್ನು ತೊರೆಯುವವನು ಅಂತ್ಯದಿನದಂದು ಅಲ್ಲಾಹನನ್ನು ಭೇಟಿಯಾಗುವಾಗ ಅವನನ್ನು ಕೋಪಿಷ್ಠನಾಗಿ ಕಾಣುವನು.[4]

ಮಿಅ್‌ರಾಜ್ ರಾತ್ರಿಯಂದು ಪ್ರವಾದಿಯವರಿಗೆ(ಸ) ಕಂಡು ಬಂದ ದೃಶ್ಯ ಈ ರೀತಿ ಇತ್ತು: ಒಂದು ಗುಂಪು ಜನರು. ದೇವಚರರು ದೊಡ್ಡ ದೊಡ್ಡ ಕಲ್ಲುಗಳನ್ನೆಸೆದು ಅವರ ತಲೆಗಳನ್ನು ಒಡೆಯುತ್ತಿದ್ದರು. ಮರು ನಿಮಿಷ ಆ ತಲೆಗಳು ಪೂರ್ವ ಸ್ಥಿತಿಗೆ ಮರಳುತ್ತಿತ್ತು. ಪುನಃ ಕಲ್ಲುಗಳನ್ನೆಸೆದು ಒಡೆಯಲಾಗುತ್ತಿತ್ತು. ಪ್ರವಾದಿಯವರು(ಸ) ಪ್ರಶ್ನಿಸಿದರು: يَا جِبْرِيلُ، مَنْ هَؤُلَاءِ؟ ಜಿಬ್ರೀಲ್ ಇವರು ಯಾರು? ಜಿಬ್ರೀಲ್(ಅ) ಹೇಳಿದರು: هَؤُلَاءِ تَتَاقَلَتْ رُؤُوسُهُمْ عَنِ الصَّلَاةِ الْمَكْتُوبَةِ ಅಲ್ಲಾಹನು ಕಡ್ಡಾಯಗೊಳಿಸಿದ ನಮಾಝುನ್ನು ನಿರ್ವಹಿಸಲು ಮನಸ್ಸು ಮಾಡದ, ಆಲಸ್ಯ ತೋರಿಸಿದ ವ್ಯಕ್ತಿಗಳಿವರು.[5]

إِنَّ أَهَمَّ أُمُورِكُمْ عِنْدِي الصَّلَاةُ، مَنْ حَفِظَهَا وَحَافَظَ عَلَيْهَا حَفِظَ دِينَهُ،
وَمَنْ ضَيَّعَهَا فَهُوَ لِمَا سِوَاهَا أَضْيَعُ

ಉಮರ್(ರ) ಹೇಳುತ್ತಾರೆ: ನಿಶ್ಚಯವಾಗಿಯೂ ನಿಮ್ಮ ವಿಷಯದಲ್ಲಿ ನನಗೆ ಬಹಳ ಮಹತ್ವವಿರುವುದು ನಮಾಝ್ ಆಗಿದೆ. ಯಾರು ತನ್ನ ನಮಾಝುನ್ನು ಸರಿಯಾಗಿ ನಿರ್ವಹಿಸಿ ಸರಿಯಾದ ರೀತಿಯಲ್ಲಿ ಸಂರಕ್ಷಿಸಿಕೊಳ್ಳುತ್ತಾನೋ, ಅವನು ತನ್ನ ಧರ್ಮವನ್ನು ಸಂರಕ್ಷಿಸಿಕೊಳ್ಳುತ್ತಾನೆ. ಆದರೆ ಯಾರು ಅದನ್ನು ಹಾಳು ಮಾಡುತ್ತಾನೋ ಅವನು ತನ್ನ ಬೇರೆ ಕರ್ಮಗಳನ್ನೂ ನಾಶಪಡಿಸಿಬಿಡುತ್ತಾನೆ.[6] ಅನಸ್ ಹೇಳುತ್ತಾರೆ:

كُنَّا عِنْدَ رَسُولِ اللّٰهِ ﷺ حَيْثُ حَضَرَتْهُ الْوَفَاةُ، فَقَالَ لَنَا: "إِتَّقُوا اللّٰهَ فِي الصَّلَاةِ، إِتَّقُوا اللّٰهَ فِي الصَّلَاةِ" ثَلَاثًا، "إِتَّقُوا اللّٰهَ فِيمَا مَلَكَتْ أَيْمَانُكُمْ، إِتَّقُوا اللّٰهَ فِي الضَّعِيفَيْنِ: الْمَرْأَةَ الْأَرْمِلَةَ وَالصَّبِيِّ الْيَتِيمَ، إِتَّقُوا اللّٰهَ فِي الصَّلَاةِ" فَجَعَلَ يُرَدِّدُهَا، وَهُوَ يَقُولُ: "الصَّلَاةُ" وَهُوَ يُغَرْغِرُ حَتَّى فَاضَتْ نَفْسُهُ!

ಪ್ರವಾದಿ ಮುಹಮ್ಮದ್(ಸ)ರ ಮರಣದ ವೇಳೆ ನಾವು ಅವರ ಬಳಿ ಇದ್ದೆವು. ಅವರು ನಮ್ಮೊಂದಿಗೆ ಹೇಳಿದರು, ನಮಾಝಿನ ವಿಷಯದಲ್ಲಿ ನೀವು ಅಲ್ಲಾಹನನ್ನು ಭಯಪಡಿರಿ. ಈ ರೀತಿ ಪ್ರವಾದಿಯವರು(ಸ) ಮೂರು ಬಾರಿ ಪುನರಾವರ್ತಿಸಿದರು. ಬಳಿಕ ಮುಂದುವರಿದು, ನಿಮ್ಮ ಕೈಕೆಳಗಿರುವ ಆಳುಗಳ ಬಗ್ಗೆ ಹಾಗೂ ವಿಧವೆಯರು

ಮತ್ತು ಅನಾಥರರಾದ ಎರಡು ದುರ್ಬಲ ವಿಭಾಗಗಳ ವಿಷಯದಲ್ಲಿಯೂ ಅಲ್ಲಾಹನನ್ನು ಭಯಪಡಿರಿ. ನಮಾಝಿನ ವಿಷಯದಲ್ಲಿ ವಿಶೇಷವಾಗಿ ಅಲ್ಲಾಹನ ಭಯವಿರಿಸಿಕೊಳ್ಳಿರಿ. ಅನಸ್(ರ) ಹೇಳುತ್ತಾರೆ. ಪ್ರವಾದಿಯವರು(ಸ) 'ನಮಾಝ್ ನಮಾಝ್' ಎಂದು ಪುನರಾವರ್ತಿಸಿ ಹೇಳುತ್ತಿದ್ದರು. ಮರಣವು ಗಂಟಲಿಗೆ ತಲಪುವ ವರೆಗೂ, ಬಳಿಕ ಜೀವನ ಕೊನೆಗೊಳಿಸುವ ವರೆಗೂ ಹೀಗೆಯೇ ಹೇಳುತ್ತಿದ್ದರು.[7]

---

1. ಅಬೂ ಯಅ್‌ಲಾ – ಮುಸ್ನದ್: 4124, ಹೈತಮಿ – ಮಜ್‌ವುಸ್ಸವಾಯಿದ್: 1/288.
2. ಅಹ್ಮದ್: 2/172, ಇಬ್ನು ಹಿಬ್ಬಾನ್: 1719.
3. ಅಹ್ಮದ್: 2/169, ತಬ್ರಾನಿ, ಬೈಹಕಿ – ಸುನನ್, ಇಬ್ನುಹಿಬ್ಬಾನ್: 1465.
4. ತಬ್ರಾನಿ – ಕಬೀರ್, ಬಸ್ಸಾರ್ – ಕಶ್ಫುಲ್ ಅಸ್ರಾರ್: 43.
5. ಬಸ್ಸಾರ್ – ಕಶ್ಫುಲ್ ಅಸ್ರಾರ್: 55, ಮಜ್‌ಮಸ್ಸವಾಇದ್: 1/72.
6. ಮಾಲಿಕ್, ಮಿಷ್ಕಾತ್.
7. ಬೈಹಕಿ – ಶುಅ್‌ಬುಲ್ ಈಮಾನ್: 11053.

15. ನಮಾಝ್‌ನ ಪರಿಪೂರ್ಣತೆ

عَنْ عُبَادَةِ بْنِ صَامِتٍ رَضِيَ اللّٰهُ عَنْهُ، قَالَ: قَالَ رَسُوْلُ اللّٰهِ ﷺ: "إِذَا تَوَضَّأَ الْعَبْدُ، فَأَحْسَنَ الْوُضُوءَ، ثُمَّ قَامَ إِلَى الصَّلَاةِ، فَأَتَمَّ رُكُوعَهَا وَسُجُودَهَا وَالْقِرَاءَةَ فِيْهَا، قَالَتْ: حَفِظَكَ اللّٰهُ كَمَا حَفِظْتَنِيْ! ثُمَّ أُصْعِدَ بِهَا إِلَى السَّمَاءِ، وَلَهَا ضَوْءٌ وَنُوْرٌ، وَفُتِحَتْ لَهَا أَبْوَابُ السَّمَاءِ، وَإِذَا لَمْ يُحْسِنِ الْعَبْدُ الْوُضُوءَ، وَلَمْ يُتِمَّ الرُّكُوعَ وَالسُّجُودَ وَالْقِرَاءَةَ، قَالَتْ: ضَيَّعَكَ اللّٰهُ كَمَا ضَيَّعْتَنِيْ! ثُمَّ أُصْعِدَ بِهَا إِلَى السَّمَاءِ، وَعَلَيْهَا ظُلْمَةٌ، وَغُلِّقَتْ أَبْوَابُ السَّمَاءِ، ثُمَّ تُلَفُّ كَمَا يُلَفُّ الثَّوْبُ الْخَلَقُ، ثُمَّ يُضْرَبُ بِهَا وَجْهُ صَاحِبِهَا"

ಉಬಾದಾ ಬಿನ್ ಸಾಮಿತ್(ರ)ರಿಂದ ವರದಿ. ಪ್ರವಾದಿ(ಸ) ಹೇಳಿದರು: ಒಬ್ಬ ವ್ಯಕ್ತಿ ಸರಿಯಾಗಿ ವುಝೂ ಮಾಡಿ ಬಳಿಕ ನಮಾಝ್‌ಗೆ ನಿಂತು ಅದರ ರುಕೂಅ್, ಸುಜೂದ್, ಕುರ್‌ಆನ್ ಪಾರಾಯಣ ಎಲ್ಲವನ್ನೂ ಬಹಳ ನಿಷ್ಠೆಯೊಂದಿಗೆ ನಿರ್ವಹಿಸಿದರೆ, ಆ ನಮಾಝ್ ಅವನೊಂದಿಗೆ ಹೀಗೆ ಹೇಳುತ್ತದೆ- ನೀನು ನನ್ನನ್ನು ಸಂರಕ್ಷಿಸಿದಂತೆ ಅಲ್ಲಾಹನೂ ನಿನ್ನನ್ನು ಸಂರಕ್ಷಿಸಲಿ. ಬಳಿಕ ಪ್ರಕಾಶ ಮತ್ತು ಬೆಳಕಾಗಿ ಅದು ಬಾನಲೋಕಕ್ಕೆ ಏರಿಸಲ್ಪಡುವುದು. ಆಕಾಶದ ದ್ವಾರಗಳು ಅದಕ್ಕಾಗಿ ತೆರೆಯಲ್ಪಡುವುದು. ಆದರೆ ಇನ್ನೋರ್ವ ವ್ಯಕ್ತಿ ಸರಿಯಾಗಿ ವುಝೂ ಮಾಡದೆ ರುಕೂಅ್, ಸುಜೂದ್, ಕುರ್‌ಆನ್ ಪಾರಾಯಣ ಮುಂತಾದವುಗಳನ್ನು ನಿಷ್ಠೆಯಿಂದ ನಿರ್ವಹಿಸದೆ ಇದ್ದರೆ, ಅಂತಹ ನಮಾಝ್ ಅವನೊಂದಿಗೆ- ನೀನು ನನ್ನನ್ನು ಕೆಡಿಸಿ

ಬಿಟ್ಟಂತೆ ಅಲ್ಲಾಹನೂ ಕೆಡಿಸಿ ಬಿಡಲಿ ಎನ್ನುವುದು. ಆ ಬಳಿಕ ಅದು ಕಪ್ಪು ಕಪ್ಪಾಗಿ ಆಕಾಶ ಲೋಕಕ್ಕೆ ಏರುವುದು. ಅದನ್ನು ಕಂಡು ಆಕಾಶದ ದ್ವಾರಗಳು ಮುಚ್ಚಲ್ಪಡುವುದು. ಬಳಿಕ ಹಳೆಯ ವಸ್ತ್ರಗಳನ್ನು ಕಟ್ಟಿ ಬಿಸಾಡಿದಂತೆ ಅದನ್ನು ಆ ನಮಾಝ್ ನಿರ್ವಹಿಸಿದವನ ಮುಖಕ್ಕೆ ಎಸೆದು ಬಿಡಲಾಗುವುದು.*

ನಮಾಝ್ ಎಂಬುದು ದಾಸನು ಅಲ್ಲಾಹನೊಂದಿಗೆ ನಡೆಸುವ ವೈಯಕ್ತಿಕ ಮಾತುಕತೆಯಾಗಿದೆ. ಸಂಪೂರ್ಣ ನಿಷ್ಠೆ ಮತ್ತು ಬದ್ಧತೆಯೊಂದಿಗೆ ಅದನ್ನು ನಿರ್ವಹಿಸ ಬೇಕು. ಅಶ್ರದ್ಧರಂತೆ ಶರೀರದಲ್ಲಿ ಚೇಷ್ಟೆಗಳನ್ನು ಮಾಡುತ್ತಾ, ಆಲಸ್ಯದೊಂದಿಗೆ ನಮಾಝ್ ನಿರ್ವಹಿಸಿದರೆ, ಅದು ನಿರ್ವಹಿಸಿದ ವ್ಯಕ್ತಿಗೇ ನಷ್ಟವನ್ನುಂಟು ಮಾಡುತ್ತದೆ. ಅಲ್ಲಾಹನ ಕಾರುಣ್ಯಕ್ಕೆ ಬದಲಾಗಿ ಅಂತಹ ನಮಾಝುಗಳು ಅಲ್ಲಾಹನ ಕೋಪ ಮತ್ತು ದ್ವೇಷಕ್ಕೆ ಪಾತ್ರರಾಗುತ್ತಾರೆ. ಈ ವಾಸ್ತವಿಕತೆಯನ್ನು ಮೇಲಿನ ಪ್ರವಾದಿವಚನವು ಬಹಳ ಎಚ್ಚರಿಕೆಯೊಂದಿಗೆ ನೆನಪಿಸುತ್ತದೆ.

ಸರ್ವಲೋಕಗಳ ಸೃಷ್ಟಿಕರ್ತನೂ ರಾಜಾಧಿರಾಜನೂ ಆದವನ ಮುಂದೆ ನಾನು ನಿಂತಿದ್ದೇನೆ. ಅವನು ನನ್ನ ಎಲ್ಲ ಕರ್ಮಗಳನ್ನು ನೋಡುತ್ತಿದ್ದಾನೆ ಎಂಬ ಸರಿಯಾದ ಪ್ರಜ್ಞೆಯು ನಮಾಝ್ ನಿರ್ವಹಿಸುವವನಲ್ಲಿ ಮೊತ್ತಮೊದಲನೆಯದಾಗಿ ಇರಬೇಕು. ಆಗ ಮಾತ್ರ ನಮಾಝ್‌ಗೆ ಮೊದಲು ಮಾಡುವ ಅಂಗಸ್ನಾನದಿಂದ (ವುಝೂ) ಹಿಡಿದು ರುಕೂಅ್, ಸುಜೂದ್, ಕುರ್‌ಆನ್ ಪಾರಾಯಣ ಮುಂತಾದ ಎಲ್ಲ ಕ್ರಿಯೆ ಗಳಲ್ಲೂ ಭಯ-ಭಕ್ತಿ ಉಂಟಾಗುತ್ತದೆ. ಪ್ರವಾದಿವರ್ಯರು(ಸ) ಹೇಳಿರುವರು:

إِنَّ أَحَدَكُمْ إِذَا قَامَ يُصَلِّيْ إِنَّمَا يَقُوْمُ يُنَاجِي رَبَّهُ، فَالْيَنْظُرْ كَيْفَ يُنَاجِيْهِ

ನಿಮ್ಮಲ್ಲಿ ಯಾರಾದರೂ ನಮಾಝ್‌ಗೆ ನಿಂತರೆ, ತನ್ನ ಪ್ರಭುವಿನೊಂದಿಗೆ ಸಂಭಾಷಣೆ ನಡೆಸಲಿಕ್ಕಾಗಿ ನಾನು ನಿಂತಿದ್ದೇನೆ ಎಂದು ತಿಳಿದುಕೊಳ್ಳಲಿ. ಆದುದರಿಂದ ತನ್ನ ಪ್ರಭುವಿ ನೊಂದಿಗೆ ತಾನು ಯಾವ ರೀತಿ ಸಂಭಾಷಣೆ ನಡೆಸಿದೆನೆಂದು ಪ್ರತಿಯೊಬ್ಬನೂ ಚಿಂತಿಸಲಿ.[1]

ನಮಾಝಿನ ಎಲ್ಲ ಸಣ್ಣ ಮತ್ತು ದೊಡ್ಡ ಕ್ರಿಯೆಗಳನ್ನು ಬಹಳ ಮನಪೂರ್ವಕ

* ಇಮಾಮ್ ಬೈಹಕಿ, ತ್ವಯಾಲಿಸಿ, ತಬ್ರಾನಿ, ಬಸ್ಸಾರ್ ಮುಂತಾದವರು ಈ ಪ್ರವಾದಿವಚನವನ್ನು ಉದ್ಧರಿಸಿರುವರು. ಹಾಫಿಝ್ ಹೈತಮಿ ಹೇಳುತ್ತಾರೆ: ಇದರ ಮೂಲವು ಪ್ರಬಲವಾಗಿದೆ. ಅಹ್ವಸ್ ಬಿನ್ ಹಕೀಮ್ ಇಂಬೋರ್ವ ವ್ಯಕ್ತಿಯನ್ನು ಬಿಟ್ಟು, ಈ ವ್ಯಕ್ತಿಯ ಕುರಿತು ಭಿನ್ನಾಭಿಪ್ರಾಯವಿದೆ. ಇಬ್ನು ಮದೀನಿ, ಇಜ್‌ಲಿ ಮುಂತಾದವರು ಈ ವ್ಯಕ್ತಿ ಪ್ರಬಲನಾಗಿರುವನೆಂದು ಅಭಿಪ್ರಾಯ ಪಟ್ಟಿರುವರು. ಆದರೆ ಉಳಿದವರು, ಆ ವ್ಯಕ್ತಿ ದುರ್ಬಲನೆಂಬ ಅಭಿಪ್ರಾಯವುಳ್ಳವರು. (ಮಜ್‌ಮಉಸ್ಸವಾಇದ್, ಬಾಗ: 2, ಪುಟ: 122)

ವಾಗಿ ಮತ್ತು ಸಂಪೂರ್ಣ ಶಿಸ್ತಿನೊಂದಿಗೆ ನಿರ್ವಹಿಸಬೇಕು. ಪ್ರವಾದಿ(ಸ) ಹೀಗೆ ಹೇಳಿರುವರು:

مَا مِن امْرِ إمُسْلِمٍ تَحْضُرُهُ صَلاَةٌ مَكْتُوبَةٌ، فَيُحْسِنُ وُضُوءَ هَا، وَخُشُوعَهَا، وَرُكُوعَهَا، إِلاَّ كَانَتْ كَفَّارَةً بِمَا قَبْلَهَا مِنَ الذُّنُوبِ، مَالَمْ تُؤْتَ كَبِيْرَةٌ

ಒಬ್ಬ ಮುಸ್ಲಿಮನು ಕಡ್ಡಾಯ ನಮಾಝ್‌ನ ವೇಳೆ ಅದಕ್ಕಾಗಿ ಸರಿಯಾಗಿ ವುಝೂ ಮಾಡಿ ನಮಾಝ್‌ನಲ್ಲಿ ಭಯ-ಭಕ್ತಿಯೊಂದಿಗೆ ರುಕೂಅನ್ನು ಸಂಪೂರ್ಣ ವಾಗಿ ನಿರ್ವಹಿಸಿದರೆ, ಆ ವ್ಯಕ್ತಿ ಮಹಾಪಾಪ ಕೃತ್ಯಗಳನ್ನು ಮಾಡಿಲ್ಲವೆಂದಾದರೆ ಅವನ ಹಿಂದಿನ ಎಲ್ಲ ಪಾಪಗಳಿಗೆ ಆ ನಮಾಝ್ ಪ್ರಾಯಶ್ಚಿತ್ತವಾಗುತ್ತದೆ.[2]

ರುಕೂಅ್, ಸುಜೂದ್‌ಗಳನ್ನು ಸರಿಯಾಗಿ ನಿರ್ವಹಿಸದೆ ಆತುರದಿಂದ ನಮಾಝ್ ನಿರ್ವಹಿಸುವ ಕುರಿತು ಪ್ರವಾದಿ(ಸ) ವಿಮರ್ಶಿಸಿದ್ದಾರೆ.

أَنَّ رَسُوْلَ اللّٰهِ ﷺ قَالَ:" أَسْوءُ النَّاسِ سَرِقَةً الَّذِيْ يَسْرِقُ مِنْ صَلاَتِهِ" قَالُوْا: يَا رَسُوْلَ اللّٰهِ كَيْفَ يَسْرِقُ مِنَ الصَّلاَةِ؟ قَالَ: "لاَ يَتِمُّ رُكُوعَهَا وَلاَ سُجُوْدَهَا"

ಅಬೂಕತಾದ(ರ)ರಿಂದ ವರದಿ. ಪ್ರವಾದಿ(ಸ) ಹೇಳಿರುವರು: ಜನರ ಪೈಕಿ ಅತ್ಯಂತ ಕೆಟ್ಟ ಕಳ್ಳರು ತಮ್ಮ ನಮಾಝ್‌ನಲ್ಲಿ ಕಳ್ಳತನ ಮಾಡುವವರಾಗಿದ್ದಾರೆ. ಅನು ಚರರು ಪ್ರಶ್ನಿಸಿದರು: ಅಲ್ಲಾಹನ ಸಂದೇಶವಾಹಕರೇ, ನಮಾಝ್‌ನಲ್ಲಿ ಕಳ್ಳತನ ಮಾಡುವುದು ಹೇಗೆ? ಪ್ರವಾದಿ(ಸ) ಹೇಳಿದರು: ನಮಾಝಿನಲ್ಲಿ ರುಕೂಅ್ ಮತ್ತು ಸುಜೂದ್‌ಗಳನ್ನು ಸರಿಯಾಗಿ ನಿರ್ವಹಿಸದೆ ಇರುವುದು ನಮಾಝಿನ ಕಳ್ಳತನವಾಗಿದೆ.[3]

ಒಮ್ಮೆ ಓರ್ವ ವ್ಯಕ್ತಿ ಈ ರೀತಿ ನಮಾಝ್ ನಿರ್ವಹಿಸುತ್ತಿರುವುದನ್ನು ಕಂಡು ಪ್ರವಾದಿ(ಸ) ಹೇಳಿದರು: لَوْ مَاتَ هٰذَا عَلَى حَالِهِ هٰذِهِ مَاتَ عَلَى غَيْرِ مِلَّةِ مُحَمَّدٍ! ಒಂದು ವೇಳೆ ಈ ರೀತಿಯಲ್ಲಿ ನಮಾಝ್ ನಿರ್ವಹಿಸುತ್ತಿರುವಾಗ ಈತನಿಗೆ ಮರಣ ಸಂಭವಿಸುತ್ತದೆ ಎಂದಾದರೆ, ಇವನ ಮರಣವು ಮುಹಮ್ಮದ್‌ನ ಮಾರ್ಗದಲ್ಲಿ ಆಗಿರಲಿಕ್ಕೆ ಸಾಧ್ಯವಿಲ್ಲ.[4]

ಅಬೂಹುರೈರಾ(ರ)ರಿಂದ ವರದಿ. ಪ್ರವಾದಿ(ಸ) ಹೇಳಿದರು:

إِنَّ الـرَّجُـلَ لَيُصَلِّي سِتِّيْنَ سَنَةً، وَمَا تُقْبَلُ لَهُ صَلاَةٌ، لَعَلَّهُ يُتِمُّ الرُّكُوْعَ وَلاَ يُتِمُّ السُّجُوْدَ، وَ يُتِمُّ السُّجُوْدَ وَلاَ يُتِمُّ الرُّكُوْعَ

ಓರ್ವ ವ್ಯಕ್ತಿ ಅರುವತ್ತು ವರ್ಷ ನಮಾಝ್ ನಿರ್ವಹಿಸಿದನು. ಆದರೆ ಆ ಪೈಕಿ ಒಂದು ನಮಾಝನ್ನೂ ಅಲ್ಲಾಹನು ಸ್ವೀಕರಿಸಿರಲಿಲ್ಲ. ಏಕೆಂದರೆ ಅವನು ರುಕೂಅ್ ಸರಿಯಾಗಿ ನಿರ್ವಹಿಸಿದರೆ, ಸುಜೂದನ್ನು ಪೂರ್ಣವಾಗಿ ನೆರವೇರಿಸಿರಲಿಲ್ಲ. ಸುಜೂದ್ ಚೆನ್ನಾಗಿ ನಿರ್ವಹಿಸಿದರೆ, ರುಕೂಅನ್ನು ಸರಿಯಾಗಿ ನಿರ್ವಹಿಸಿರಲಿಲ್ಲ.[5]

ಆಕಾಶದ ದ್ವಾರಗಳು ಆ ನಮಾಝಿಗಳಿಗಾಗಿ ತೆರೆಯಲ್ಪಡಲಾರವು ಎಂದರೆ, ಯಾವ ಕಾರಣಕ್ಕೂ ಅಂತಹ ನಮಾಝ್ ಅಲ್ಲಾಹನಿಂದ ಸ್ವೀಕರಿಸಲ್ಪಡಲಾರದು. ಅಲ್ಲಾಹನ ದೃಷ್ಟಿಯಲ್ಲಿ ಆ ನಮಾಝ್‌ಗಿರುವುದು ಒಂದು ಹಳೆಯ ಬಟ್ಟೆಗಿರುವ ಪರಿಗಣನೆ ಮಾತ್ರ. ಹಳೆಯ ವಸ್ತ್ರವನ್ನು ಸುರುಟಿ ಎಸೆಯುವಂತೆ ಅಂತಹ ನಮಾಝ್ ಅದರ ಯಜಮಾನನ ಮುಖಕ್ಕೆ ಎಸೆಯಲ್ಪಡುವುದು. ಆದರೆ ಕರ್ಮಗಳನ್ನು ಶ್ರದ್ಧೆ ಯೊಂದಿಗೆ ನಿರ್ವಹಿಸಿದ, ಭಯಭಕ್ತಿಯೊಂದಿಗೆ ನೆರವೇರಿಸಿದ ವ್ಯಕ್ತಿಯ ನಮಾಝ್ ಬೆಳಕು ಮತ್ತು ಪ್ರಕಾಶದಂತೆ ಬಾನಲೋಕಕ್ಕೆ ಎತ್ತರಿಸಲ್ಪಡುವುದು. ಆಕಾಶ ದ್ವಾರಗಳು ಅದಕ್ಕಾಗಿ ಪೂರ್ಣ ಪ್ರಮಾಣದಲ್ಲಿ ತೆರೆಯಲ್ಪಡುವುದು. ನಮಾಝಿಗನಿಗಾಗಿ ಅದು ಅಲ್ಲಾಹನ ಬಳಿ ಶಿಫಾರಸ್ಸು ಮಾಡುತ್ತಿರುವುದು. ಕರ್ಮವು ಎಷ್ಟು ಸಣ್ಣದಾಗಿದ್ದರೂ ಅದನ್ನು ಕ್ಷುಲ್ಲಕವಾಗಿ ಕಾಣಬಾರದು. ಸಂಪೂರ್ಣ ಶ್ರದ್ಧೆ ಮತ್ತು ಅಚ್ಚುಕಟ್ಟುತನ ದೊಂದಿಗೆ ಅದನ್ನು ನಿರ್ವಹಿಸಬೇಕು ಎಂಬುದನ್ನು ಈ ಪ್ರವಾದಿವಚನವು ನೆನಪಿಸುತ್ತದೆ.

ನಮಾಝನ್ನು ಭಯಭಕ್ತಿಯೊಂದಿಗೆ ಸಂಪೂರ್ಣವಾದ ರೀತಿಯಲ್ಲಿ ಪ್ರತಿ ಫಲಾರ್ಹ ಗೊಳಿಸಲು ಪ್ರವಾದಿ(ಸ) ನೀಡಿರುವ ಉಪದೇಶ ಈ ರೀತಿ ಇದೆ:

إِذَا صَلَّى أَحَدُكُمْ فَلْيُصَلِّ صَلَاةَ مُوَدِّعٍ, صَلَاةَ مَنْ لَا يَظُنُّ أَنَّهُ يَرْجِعُ إِلَيْهَا أَبَدًا

ನಿಮ್ಮ ಪೈಕಿ ಒಬ್ಬರು ನಮಾಝ್ ನಿರ್ವಹಿಸಲು ನಿಂತರೆ, ಇಹಲೋಕದಿಂದ ವಿದಾಯ ಕೋರುವವನ ರೀತಿಯಲ್ಲಿ ನಮಾಝ್ ನಿರ್ವಹಿಸಲಿ. ಇದರ ಬಳಿಕ ಇನ್ನೆಂದೂ ತನಗೆ ನಮಾಝ್ ನಿರ್ವಹಿಸಲು ಅವಕಾಶ ಲಭಿಸಲಿಕ್ಕಿಲ್ಲ ಎಂಬುದಾಗಿ ಅವನು ವಿಶ್ವಾಸವಿರಿಸಲಿ.[6]

ನಾನು ನಮಾಝ್ ನಿರ್ವಹಿಸುವುದನ್ನು ನೋಡಿರುವಂತೆ ನೀವೂ ನಮಾಝ್ ನಿರ್ವಹಿಸಿರಿ[7] (صَلُّوا كَمَا رَأَيْتُمُونِي أُصَلِّي) ಎಂಬುದು ಪ್ರವಾದಿವರ್ಯರ(ಸ) ಆದೇಶ ವಾಗಿತ್ತು. ಅವರ ನಮಾಝ್ ಸದ್ಗುಣ ಸಂಪನ್ನವಾರುತ್ತಿತ್ತು. ಪ್ರವಾದಿಯವರ(ಸ) ರಾತ್ರಿ ನಮಾಝ್‌ಗಳ ಕುರಿತು ಪ್ರಶ್ನಿಸಿದ ಅನುಚರರೊಂದಿಗೆ ಹ. ಆಯಿಶಾ(ರ) ಈ ರೀತಿ ಹೇಳುತ್ತಾರೆ: ಅದರ ಸೌಂದರ್ಯ ಮತ್ತು ಸುದೀರ್ಘತೆಯ ಕುರಿತು ನೀವು

ನನ್ನೊಂದಿಗೆ ಕೇಳದಿರುವುದೇ ಉತ್ತಮ.[8] (فَلَا تَسْأَلْ عَنْ حُسْنِهِنَّ وَطُولِهِنَّ) ನಮಾಝ್‌ನ ಸಮಯವಾದರೆ ಪ್ರವಾದಿಯವರ(ಸ) ಮುಖ ಸಂತೋಷದಿಂದ ಅರಳುತ್ತಿತ್ತು. ಬಿಲಾಲ್‌ರನ್ನು ಕರೆದು ನಮ್ಮನ್ನು ಸಂತೋಷಪಡಿಸು, ನಮ್ಮನ್ನು ಸಂತೋಷಪಡಿಸು[9] (أَرِحْنَا يَا بِلَالُ! أَرِحْنَا!) ಎಂಬುದಾಗಿ ಕೂಗಿ ಹೇಳುತ್ತಿದ್ದರು. ಅದು ನಮಾಝ್‌ಗಾಗಿ ಅದಾನ್ ಕರೆ ನೀಡಲಿಕ್ಕೆ ಇರುವ ಆದೇಶವಾಗಿತ್ತು. ನಮಾಝ್‌ಗೆ ನಿಂತ ಬಳಿಕ ಒಲೆಯ ಮೇಲಿಟ್ಟ ಪಾತ್ರೆ ಕುದಿಯುವಂತಹ[10] (أَزِيْزٌ كَأَزِيْزِ الْمِرْجَلِ) ಶಬ್ದದೊಂದಿಗೆ ಬಿಕ್ಕಿಬಿಕ್ಕಿ ಅಳುತ್ತಿದ್ದರು.

ವಿದ್ವಾಂಸರಾದ ಹಾತಿಮುಲ್ ಅಸ್ವಮ್ಮಿಯವರೊಂದಿಗೆ ಓರ್ವರು ಪ್ರಶ್ನಿಸಿದರು: ತಾವು ಹೇಗೆ ನಮಾಝ್ ನಿರ್ವಹಿಸುತ್ತೀರಿ? ಆಗ ಅವರು ಹೇಳಿದರು:

إِذَا حَانَتِ الصَّلَاةُ أَسْبَغْتُ الْوُضُوْءَ وَأَتَيْتُ الْمَوْضِعَ الَّذِي أُرِيْدُ الصَّلَاةَ فِيْهِ، فَأَقْعُدُ فِيْهِ حَتَّى تَجْتَمِعَ جَوَارِحِيْ، ثُمَّ أَقُوْمُ إِلَى صَلَاتِي، وَأَجْعَلُ الْكَعْبَةَ بَيْنَ حَاجِبِيْ، وَالصِّرَاطَ تَحْتَ قَدَمِيْ، وَالْجَنَّةَ عَنْ يَمِيْنِيْ، وَالنَّارَ عَنْ شِمَالِيْ، وَمَلَكُ الْمَوْتِ وَرَائِيْ، أَظُنُّهَا آخِرَ صَلَاتِي، ثُمَّ أَقُوْمُ بَيْنَ الرَّجَاءِ وَالْخَوْفِ، ثُمَّ لَا أَدْرِيْ أَقُبِلَتْ مِنِّي أَمْ لَا ؟

ನಮಾಝ್‌ನ ಸಮಯವಾದರೆ ನಾನು ಸರಿಯಾಗಿ ವುಝೂ ಮಾಡಿಕೊಂಡು ನಮಾಝಿನ ಸ್ಥಳಕ್ಕೆ ತಲುಪುತ್ತೇನೆ. ಬಳಿಕ ನನ್ನ ಅಂಗಾಂಗಗಳೆಲ್ಲ ಶಾಂತ ರೀತಿಗೆ ಬರುವ ವರೆಗೆ ಸ್ವಲ್ಪ ಹೊತ್ತು ವಿರಮಿಸುತ್ತೇನೆ. ಬಳಿಕ ನಾನು ನಮಾಝಿಗೆ ಎದ್ದು ನಿಲ್ಲುತ್ತೇನೆ. ಆಗ ಕಅಬಾ ನನ್ನ ಬಲಭಾಗದಲ್ಲಿ ಇರುವುದು. ನರಕದ ಮೇಲಿರುವ ಸೇತುವೆಯಲ್ಲಿ ನಾನು ನಿಂತಿರುವಂತೆ ಮತ್ತು ನನ್ನ ಹಿಂದೆ ಮರಣದ ದೇವಚರರು ನನ್ನ ಜೀವವನ್ನು ಸ್ವಾಧೀನಪಡಿಸಲು ನಿಂತಿರುವಂತೆ ನಾನು ಭಾವಿಸುವೆ. ಇದು ನನ್ನ ಕೊನೆಯ ನಮಾಝ್ ಆಗಿರುವುದೆಂದೂ ಭಾವಿಸುವೆ. ಈ ರೀತಿ ಭಯ ಮತ್ತು ನಿರೀಕ್ಷೆಯೊಂದಿಗೆ ನಾನು ನಮಾಝನ್ನು ನಿರ್ವಹಿಸುತ್ತೇನೆ. ಆದರೂ ನನ್ನ ನಮಾಝ್ ಅಲ್ಲಾಹನ ಬಳಿ ಸ್ವೀಕೃತವಾಗುವುದೋ ಇಲ್ಲವೋ ಎಂಬ ಭಯವು ನನ್ನನ್ನು ಸದಾ ಕಾಡುತ್ತಿದೆ.[11]

---

1) ಮುಸ್ಲಿಮ್: 423, ನಸಾಈ: 2/119, ಇಬ್ನು ಖುಝೈಮಾ: 1/241. **2)** ಮುಸ್ಲಿಮ್: 228. **3)** ಅಹ್ಮದ್: 5/310, ಇಬ್ನು ಖುಝೈಮಾ: 1/332, ಹಾಕಿಮ್: 1/229, ತಬ್ರಾನಿ – ಕಬೀರ್. **4)** ತಬ್ರಾನಿ – ಅಬೂ ಯಅ್‌ಲಾ. **5)** ಅಸ್‌ಬಹಾನಿ – ತರ್ಗೀಬ್ ವತ್ತರ್‌ಹೀಬ್; 1895. **6)** ದೈಲಮಿ – ಮುಸ್ನದ್, ಸುಯೂತಿ ಜಾಮಿಉಸ್ಸಗೀರ್: 716. **7)** ಬುಖಾರಿ, ಮುಸ್ಲಿಮ್, ಅಹ್ಮದ್. **8)** ಬುಖಾರಿ, ಮುಸ್ಲಿಮ್, ತಿರ್ಮಿದಿ, ಬೈಹಕಿ. **9)** ಅಬೂದಾವೂದ್. **10)** ಅಬೂದಾವೂದ್: 904, ನಸಾಈ; 3/13, ಇಬ್ನು ಖುಝೈಮಾ: 2/53. **11)** ಇಹ್ಯಾಉ ಉಲೂಮುದ್ದೀನ್, ಭಾಗ: 1, ಪುಟ: 151.

16. ಸಂಘಟಿತ ನಮಾಝ್‌ನ ಮಹತ್ವ

عَنْ أُبَيِّ بِنْ كَعْبٍ رَضِيَ اللّٰهُ عَنْهُ، قَالَ: صَلَّى بِنَا رَسُوْلِ اللّٰهِ ﷺ يَوْمًا الصُّبْحَ فَقَالَ: أَشَاهِدٌ فُلَانٌ؟ قَالُوا : لَا ، قَالَ: أَشَاهِدٌ فُلَانٌ؟ قَالُوا: لَا ، قَالَ: إِنَّ هَاتَيْنِ الصَّلَاتَيْنِ أَثْقَلُ الصَّلَوَاتِ عَلَى الْمُنَافِقِيْنَ، وَلَوْ تَعْلَمُوْنَ مَا فِيْهِمَا لَأَتَيْتُمُوْهَا وَلَوْ حَبْوًا عَلَى الرُّكَبِ، وَإِنَّ الصَّفَّ الْأَوَّلَ عَلَى مِثْلِ صَفِّ الْمَلَائِكَةِ، وَلَوْ عَلِمْتُمْ مَا فَضِيْلَتُهُ لَا بْتَدَرْتُمُوْهُ، وَإِنَّ صَلَاةَ الرَّجُلِ مَعَ الرَّجُلِ أَزْكَى مِنْ صَلَاتِهِ وَحْدَهُ، وَصَلَاتُهُ مَعَ الرَّجُلَيْنِ أَزْكَى مِنْ صَلَاتِهِ مَعَ الرَّجُلِ، وَكُلُّ مَا كَثُرَ فَهُوَ أَحَبُّ إِلَى اللّٰهِ تَعَالَى

ಉಬೈ ಬಿನ್ ಕಅಬ್(ರ) ಹೇಳುತ್ತಾರೆ. ಒಮ್ಮೆ ಪ್ರವಾದಿ(ಸ) ನಮ್ಮೊಂದಿಗೆ ಫಜ್ರ್ ನಮಾಝ್ ನಿರ್ವಹಿಸಿದರು. ಬಳಿಕ, ಈ ವ್ಯಕ್ತಿ ನಮಾಝಿಗೆ ಬಂದಿಲ್ಲವೇ ಎಂದು ಕೇಳಿದರು. ಜನರು ಇಲ್ಲವೆಂದರು. ಪ್ರವಾದಿ(ಸ), ಈ ವ್ಯಕ್ತಿ ಬಂದಿದ್ದಾರೆಯೇ ಎಂದು ಕೇಳಿದರು. ಜನರು ಇಲ್ಲ ಎಂದು ಉತ್ತರಿಸಿದರು. ಪ್ರವಾದಿ(ಸ) ಹೇಳಿದರು: ನಿಶ್ಚಯವಾಗಿಯೂ ಕಪಟ ವಿಶ್ವಾಸಿಗಳಿಗೆ ಫಜ್ರ್ ಮತ್ತು ಇಶಾ ನಮಾಝ್ ಬಹಳ ಪ್ರಯಾಸಕರವಾಗಿರುತ್ತದೆ. ಅವುಗಳನ್ನು ಸಂಘಟಿತವಾಗಿ ನಿರ್ವಹಿಸುವುದರ ಪ್ರಾಮುಖ್ಯತೆಯನ್ನು ನೀವು ಅರಿತುಕೊಂಡಿದ್ದರೆ, ತೆವಳಿಕೊಂಡಾದರೂ ನೀವಲ್ಲಿ ತಲುಪುತ್ತಿದ್ದಿರಿ. ಸಂಘಟಿತ ನಮಾಝಿನ ಪ್ರಥಮ ಪಂಕ್ತಿಯ ಶ್ರೇಷ್ಠತೆ ದೇವ ಸನ್ನಿಧಿಯಲ್ಲಿ ದೇವಚರರೊಂದಿಗೆ ನಿಂತಿರುವುದಕ್ಕೆ ಸಮಾನವಾಗಿದೆ. ಅದರ ಮಹತ್ವವನ್ನು

ಸರಿಯಾಗಿ ಮನದಟ್ಟು ಮಾಡಿಕೊಂಡಿದ್ದರೆ, ಅದನ್ನು ಗಳಿಸಲಿಕ್ಕಾಗಿ ನೀವು ಸ್ಪರ್ಧಿಸುತ್ತಿದ್ದಿರಿ. ಒಬ್ಬರು ಇನ್ನೊಬ್ಬರೊಂದಿಗೆ ಸೇರಿ ನಮಾಝ್ ನಿರ್ವಹಿಸುವುದು ಒಂಟಿಯಾಗಿ ನಮಾಝ್ ನಿರ್ವಹಿಸುವುದಕ್ಕಿಂತ ಪುಣ್ಯದಾಯಕ. ಒಬ್ಬರೊಂದಿಗೆ ನಮಾಝ್ ನಿರ್ವಹಿಸುವುದಕ್ಕಿಂತ ಇಬ್ಬರ ಜತೆ ಸೇರಿ ನಮಾಝ್ ನಿರ್ವಹಿಸುವುದು ಹೆಚ್ಚು ಶ್ರೇಷ್ಠವಾಗಿದೆ. ಹೀಗೆ ಹೆಚ್ಚು ಜನರು ಸೇರಿದಷ್ಟೂ ಅದು ಅಲ್ಲಾಹನ ಪ್ರೀತಿಗೆ ಪಾತ್ರವಾಗುವುದು.*

ಸಂಘಟಿತ ಜೀವನಕ್ಕೆ ಧರ್ಮದಲ್ಲಿ ಬಹಳ ಪ್ರಾಧಾನ್ಯತೆ ಮತ್ತು ಪ್ರಾಮುಖ್ಯತೆ ಇದೆ. ಮುಸ್ಲಿಮರು ಸದಾ ಸಂಘಟಿತರಾಗಿ ಮತ್ತು ಒಗ್ಗಟ್ಟಾಗಿ ಇರಬೇಕೆಂದು ಇಸ್ಲಾಮ್ ಆದೇಶಿಸುತ್ತದೆ. ಜನರಿಂದ ದೂರವಾಗಿ ಏಕಾಂತವಾಸ ನಡೆಸುವುದಕ್ಕೆ ಇಸ್ಲಾಮ್ ಅನುಮತಿ ನೀಡುವುದಿಲ್ಲ. ಸತ್ಯವಿಶ್ವಾಸಿಯು ಜನರೊಂದಿಗೆ ಬೆರೆತು ಬಾಳಬೇಕಾದವನು ಮತ್ತು ಅವರ ಸಮಸ್ಯೆಗಳಿಗೆ ಪರಿಹಾರ ಸೂಚಿಸಬೇಕಾದವನು. ಈ ಕಾರಣದಿಂದಲೇ ಜೀವನದ ಎಲ್ಲ ವಿಷಯಗಳಲ್ಲೂ ಸಂಘಟಿತವಾಗಿರುವುದಕ್ಕೆ ಇಸ್ಲಾಮ್ ಆದ್ಯತೆ ನೀಡಿದೆ. ನಮಾಝ್, ಉಪವಾಸ, ಝಕಾತ್, ಹಜ್ಜ್ ಎಲ್ಲವೂ ವೈಯಕ್ತಿಕ ಆರಾಧನೆಗಳಾದರೂ ಅವುಗಳನ್ನು ಸಂಘಟಿತವಾಗಿ ನಿರ್ವಹಿಸಬೇಕೆಂದು ಅದು ನಿರ್ದೇಶಿಸುತ್ತದೆ. ಮೇಲೆ ಉದ್ಧರಿಸಲಾದ ಪ್ರವಾದಿ ವಚನದಲ್ಲಿ ಈ ಅಭಿಪ್ರಾಯವನ್ನೇ ಬಹಳ ಪ್ರಬಲವಾಗಿ ಪ್ರತಿಪಾದಿಸಲಾಗಿದೆ.

ನಮಾಝನ್ನು ಸಂಘಟಿತವಾಗಿ ನಿರ್ವಹಿಸಬೇಕೆಂದು ಆದೇಶಿಸಿರುವುದರ ಅರ್ಥವೇನೆಂದರೆ ಸತ್ಯವಿಶ್ವಾಸಿಯ ಸಂಪೂರ್ಣ ಜೀವನವು ಸಂಘಟಿತವಾಗಿರಬೇಕು ಅಥವಾ ನಮಾಝನ್ನು ಸಂಘಟಿತವಾಗಿ ನಿರ್ವಹಿಸಲು ಮನಸ್ಸು ಮಾಡದವರು ಇಸ್ಲಾಮನ್ನು ಸ್ವೀಕರಿಸಿದ ಬಳಿಕ ಅದರೊಳಗೆ ಪ್ರವೇಶಿಸಲು ಉದಾಸೀನತೆ ತೋರುವವರಿಗೆ ಸಮಾನರಾಗಿದ್ದಾರೆ. ಇಸ್ಲಾಮ್ ಸತ್ಯವೆಂದು ಅದರೊಳಗೆ ಪ್ರವೇಶಿಸದೆ ತಡೆದು ನಿಲ್ಲುವವರ ಕುರಿತು ಊಹಿಸಿ ನೋಡಿ. ಇಂತಹ ವ್ಯಕ್ತಿಗಳ ನಮಾಝ್, ಉಪವಾಸ ಮತ್ತಿತರ ಆರಾಧನಾ ಕರ್ಮಗಳು ಹೇಗೆ ಸ್ವೀಕೃತವಾಗಬಲ್ಲುದು? ಇವರು ವಿಶ್ವಾಸ ಘೋಷಣೆಯನ್ನು ಪ್ರಾಯೋಗಿಕ ಜೀವನದಲ್ಲಿ ನಿರ್ಲಕ್ಷಿಸುವವರಾಗಿರುವರು.

* ಇಮಾಮ್ ಅಹ್ಮದ್: 5/140, ಅಬೂದಾವೂದ್: 554, ನಸಾಈ: 2/104, ಹಾಕಿಮ್: 1/247, ಇಬ್ನು ಹಿಬ್ಬಾನ್: 2054, ಇಬ್ನು ಖುಝೈಮಾ: 2/366 ಮುಂತಾದವರು ಉದ್ಧರಿಸಿರುವ ಈ ಹದೀಸ್ ಪರಂಪರೆಯು ಹಸನ್ ಆಗಿದೆ ಎಂದು ಮುಹಿಯುದ್ದೀನ್ ದೀಬ ಮತ್ತು ಸಮೀರ್ ಅಬ್ದುಲ್ ಅತ್ತಾರ್, ಯೂಸುಫ್ ಅಲಿ ಬುದ್ಯೆವಿ ಮುಂತಾದವರು ಸಾಕ್ಷಿ ನುಡಿಯುತ್ತಾರೆ.

مَنْ سَمِعَ النِّدَاءَ فَارِغًا صَحِيحًا فَلَمْ يُجِبْ فَلَا صَلَاةَ لَهُ

'ಯಾವುದೇ ಕೆಲಸದ ಒತ್ತಡವಿಲ್ಲದ ಒಬ್ಬ ವ್ಯಕ್ತಿ ಅಝಾನ್ ಕರೆಯನ್ನು ಆಲಿಸಿಯೂ ಅದಕ್ಕೆ ಉತ್ತರವನ್ನು ನೀಡದಿದ್ದರೆ, ಆ ಬಳಿಕ ಅವನಿಗೆ ನಮಾಝ್ ಇರುವುದಿಲ್ಲ.'[1]

ಇಬ್ನು ಅಬ್ಬಾಸ್(ರ) ವರದಿ ಮಾಡಿರುತ್ತಾರೆ. ಪ್ರವಾದಿ(ಸ) ಹೇಳಿರುವರು:

مَنْ سَمِعَ النِّدَاءَ فَلَمْ يُجِبْ فَلَا صَلَاةَ لَهُ إِلَّا مِنْ عُذْرٍ

'ಒಬ್ಬನು ಅಝಾನ್ ಆಲಿಸಿದನು. ಆದರೆ ಅದಕ್ಕೆ ಉತ್ತರಿಸಲಿಲ್ಲ, ಹಾಗಾದರೆ ಅವನ ನಮಾಝ್ ಸ್ವೀಕರಿಸಲ್ಪಡುವುದಿಲ್ಲ. ನ್ಯಾಯ ಸಮ್ಮತ ಕಾರಣಗಳಿದ್ದರೆ ಹೊರತು.'[2]

ಒಮ್ಮೆ ಅಂಧರಾಗಿದ್ದ ಅಬ್ದುಲ್ಲಾ ಬಿನ್ ಉಮ್ಮು ಮಖ್ತೂಮ್(ರ)ರವರು ಪ್ರವಾದಿಯವರೊಡನೆ(ಸ) ಪ್ರಶ್ನಿಸಿದರು: ಅಲ್ಲಾಹನ ಸಂದೇಶವಾಹಕರೇ, ನನ್ನ ಮಾತಾಪಿತರು ತಮಗೆ ಅರ್ಪಿತ. ತಮಗೆ ತಿಳಿದಿರುವಂತೆ ಪ್ರಾಯಾಧಿಕ್ಯದಿಂದ ಮೂಳೆಗಳು ಸವೆದು ದೃಷ್ಟಿಹೀನತೆ ಸಂಭವಿಸಿದ ಒಬ್ಬ ವ್ಯಕ್ತಿ ನಾನು. ಮಸೀದಿಗೆ ನನ್ನನ್ನು ಕರೆದುಕೊಂಡು ಬರಲು ಒಬ್ಬ ಸಹಾಯಕನೂ ನನ್ನ ಬಳಿ ಇಲ್ಲ. ಆದುದರಿಂದ ಐದು ಹೊತ್ತಿನ ನಮಾಝುನ್ನು ಮನೆಯಲ್ಲಿಯೇ ನಿರ್ವಹಿಸಲು ನನಗೆ ಅನುಮತಿ ಇದೆಯೇ? ಪ್ರವಾದಿಯವರು(ಸ) ಪ್ರಶ್ನಿಸಿದರು: ನೀವು ಮನೆಯಲ್ಲಿರುವಾಗ ಮಸೀದಿಯ ಅದಾನ್ ಕರೆ ನಿಮಗೆ ಕೇಳಿಸುತ್ತದೆಯೇ? ಅವರು ಹೇಳಿದರು: ಹೌದು ಕೇಳಿಸುತ್ತದೆ. ಪ್ರವಾದಿ(ಸ) ಹೇಳಿದರು:

مَا أَجِدُ لَكَ رُخْصَةً، وَلَوْ يَعْلَمُ هٰذَا الْمُتَخَلِّفُ عَنِ الصَّلَاةِ فِي الْجَمَاعَةِ مَا لِهٰذَا الْمَاشِي إِلَيْهَا لَأَتَاهَا، وَلَوْ حَبْوًا عَلَى يَدَيْهِ وَرِجْلَيْهِ!

ಹಾಗಾದರೆ ನಿಮಗೆ ಅದರಿಂದ ವಿನಾಯಿತಿ ಸಿಗುವ ಯಾವ ಅವಕಾಶವೂ ಇಲ್ಲ. ಸಂಘಟಿತ ನಮಾಝುನ್ನು ಉಪೇಕ್ಷಿಸುವ ವ್ಯಕ್ತಿಯು ಅದರ ಶ್ರೇಷ್ಠತೆಯನ್ನು ಅರಿತಿದ್ದರೆ, ಕೈಕಾಲುಗಳ ಸಹಾಯದಿಂದ ತೆವಳಿಕೊಂಡಾದರೂ ನಮಾಝಿಗೆ ಹಾಜರಾಗುತ್ತಿದ್ದನು.[3]

ಅಬ್ದುಲ್ಲಾ ಬಿನ್ ಮಸ್‌ಊದ್(ರ) ಹೇಳುತ್ತಾರೆ, ಮುಸ್ಲಿಮನೆಂಬ ನೆಲೆಯಲ್ಲಿ ಯಾರಾದರೂ ನಾಳೆ ಅಲ್ಲಾಹನನ್ನು ಹೋಗಿ ಕಾಣಬೇಕೆಂದು ಬಯಸುವುದಾದರೆ,

ನಮಾಝಿಗೆಂದು ಅದಾನ್ ಕೊಡಲಾಗುವ ಸ್ಥಳದಲ್ಲಿಯೇ ಅವನು ನಮಾಝ್ ನಿರ್ವಹಿಸಲಿ. ಏಕೆಂದರೆ ಅಲ್ಲಾಹನು ನಿಮ್ಮ ಪ್ರವಾದಿಗೆ ಸನ್ಮಾರ್ಗದ ನಿಯಮಗಳನ್ನು ಕಲಿಸಿ ಕೊಟ್ಟಿರುವನು. ಸಂಘಟಿತ ನಮಾಝ್ ಈ ಸನ್ಮಾರ್ಗದ ನಿಯಮಗಳಲ್ಲಿ ಒಳಗೊಂಡಿದೆ. ಜಮಾಅತ್ ನಮಾಝ್‌ನಲ್ಲಿ ನೀವು ಪಾಲ್ಗೊಳ್ಳದೆ ದೂರ ಉಳಿದರೆ, ನೀವು ಪ್ರವಾದಿಚರ್ಯೆಯನ್ನು ನಿಷೇಧಿಸಿದಂತಾಗುತ್ತದೆ. ಪ್ರವಾದಿಚರ್ಯೆಯನ್ನು ಉಲ್ಲಂಘಿಸಿದರೆ, ನೀವು ದಾರಿ ತಪ್ಪುವಿರಿ. ನಮ್ಮ ಕಾಲದಲ್ಲಿ ಸ್ಪಷ್ಟ ಮುನಾಫಿಕರಲ್ಲದ ಯಾರೂ ಸಂಘಟಿತ ನಮಾಝಿನಿಂದ ದೂರ ಉಳಿಯುತ್ತಿರಲಿಲ್ಲ. ಅಂದು ನಡೆದಾಡಲು ಸಾಧ್ಯವಾಗದ ವ್ಯಕ್ತಿಗಳನ್ನು ಕೂಡ ಎಡಬಲಗಳಲ್ಲಿ ಸಹಾಯಕರು ಸಹಕರಿಸಿ ಮಸೀದಿಗೆ ಕರೆದುಕೊಂಡು ಬಂದು ನಮಾಝಿನ ಪಂಕ್ತಿಯಲ್ಲಿ ನಿಲ್ಲಿಸುತ್ತಿದ್ದರು.[4]

ಒಮ್ಮೆ ಜಮಾಅತ್ ನಮಾಝಿಗೆ ಜನರು ಬಹಳ ಕಡಿಮೆ ಸಂಖ್ಯೆಯಲ್ಲಿ ಸೇರಿರುವುದನ್ನು ಕಂಡು ಕೋಪಿಸಿಕೊಂಡ ಪ್ರವಾದಿ(ಸ) ಹೇಳಿದರು:

وَالَّذِي نَفْسِي بِيَدِهِ، لَقَدْ هَمَمْتُ أَنْ آمُرَ بِحَطَبٍ، ثُمَّ آمُرَ بِالصَّلاَةِ، فَيُؤَذَّنُ لَهَا، ثُمَّ آمُرَ رَجُلاً، فَيَؤُمُّ النَّاسَ، ثُمَّ أُخَالِفُ إِلَى رِجَالٍ لاَ يَشْهَدُوْنَ الصَّلاَةَ فَأُحَرِّقُ عَلَيْهِمْ بُيُوْتَهُمْ، وَالَّذِيْ نَفْسِيْ بِيَدِهِ، لَوْ يَعْلَمُ أَحَدُهُمْ أَنَّهُ يَجِدُ عَرَقًا سَمِيْنًا أَوْ مِرْمَاتَيْنِ حَسَنَتَيْنِ لَشَهِدَ الْعِشَاءَ!

ನನ್ನ ಆತ್ಮದ ಒಡೆಯನ ಆಣೆ. ಸ್ವಲ್ಪ ಕಟ್ಟಿಗೆಯನ್ನು ಸಂಗ್ರಹಿಸಲು ಆಜ್ಞಾಪಿಸಿ, ಅದು ಸಂಗ್ರಹವಾದ ಬಳಿಕ ಅದಾನ್ ಕೊಡಲು ಮತ್ತು ನಮಾಝ್ ನಿರ್ವಹಿಸಲು ಒಬ್ಬರನ್ನು ನಾಯಕನಾಗಿ ನಿಶ್ಚಯಿಸಿ, ನಮಾಝಿಗೆಂದು ಬಾರದೆ ದೂರ ಉಳಿಯುವ ವ್ಯಕ್ತಿಗಳ ಮನೆಗಳನ್ನು ಅವರಿರುವಂತೆಯೇ ಸುಟ್ಟು ಬಿಡಲು ನನಗೆ ಮನಸ್ಸಾಗುತ್ತದೆ. ಅಲ್ಲಾಹನಾಣೆ, ಮಾಂಸವಿರುವ ಎಲುಬಿನ ತುಂಡೋ ಅಥವಾ ಎರಡು ದೊಡ್ಡ ಎಲುಬುಗಳೋ ಸಿಗುವುದಾದರೆ ಇಶಾ ನಮಾಝ್ ನಿರ್ವಹಿಸಲು ಇಲ್ಲಿ ಎಲ್ಲರೂ ಓಡೋಡಿ ಬಂದು ಸೇರುತ್ತಿದ್ದರು.[5]

ಸಾಮಾನ್ಯವಾಗಿ ಇಶಾ ಮತ್ತು ಫಜ್ರ್ ನಮಾಝ್‌ಗಳ ವೇಳೆ ಜಮಾಅತ್ ನಿರ್ವಹಿಸಲು ಜನರಿಗೆ ಮಸೀದಿಗೆ ಬರಲು ಸ್ವಲ್ಪ ಪ್ರಯಾಸವೆನಿಸುವ ಸಮಯಗಳಾಗಿರುತ್ತವೆ. ಯಾವುದೇ ರೀತಿಯಲ್ಲಿ ಅದನ್ನು ನಿರ್ಲಕ್ಷಿಸದೆ ಕ್ರಮಬದ್ಧವಾಗಿ ನೆರವೇರಿಸಬೇಕಾದರೆ, ಅದಕ್ಕೆ ದೃಢವಾದ ದೇವಭಯ ಮತ್ತು ಪರಲೋಕ ಚಿಂತೆಯು ಅತ್ಯಗತ್ಯ. ಆದ ಕಾರಣದಿಂದಲೇ ಈ ಎರಡೂ ನಮಾಝಿನ ಕುರಿತು ಪ್ರವಾದಿ(ಸ) ವಿಶೇಷವಾಗಿ ನೆನಪಿಸಿರುವರು. ಪ್ರವಾದಿ(ಸ) ಹೇಳಿರುವರು:

مَنْ صَلَّى الْعِشَاءَ فِي جَمَاعَةٍ فَكَأَنَّمَا قَامَ نِصْفَ اللَّيْلِ، وَمَنْ صَلَّى الصُّبْحَ فِي جَمَاعَةٍ فَكَأَنَّمَا صَلَّى اللَّيْلَ كُلَّهُ

ಇಶಾ ನಮಾಝನ್ನು ಜಮಾಅತ್‌ನೊಂದಿಗೆ ನಿರ್ವಹಿಸಿದವರು ಅರ್ಧ ರಾತ್ರಿ ಪೂರ್ತಿ ನಮಾಝ್ ನಿರ್ವಹಿಸಿದವನಿಗೆ ಸಮಾನನಾಗಿದ್ದಾನೆ. ಫಜ್ರ್ ನಮಾಝನ್ನು ಸಂಘಟಿತವಾಗಿ ನಿರ್ವಹಿಸಿದವನು ರಾತ್ರಿ ಪೂರ್ತಿ ನಿಂತು ನಮಾಝ್ ನಿರ್ವಹಿಸಿದವನಂತೆ ಪರಿಗಣಿಸಲ್ಪಡುವನು.[6]

ಇನ್ನೊಂದು ಪ್ರವಾದಿವಚನ ಹೀಗಿದೆ:

مَنْ صَلَّى فِي مَسْجِدٍ جَمَاعَةً أَرْبَعِينَ لَيْلَةً لَا تَفُوتُهُ الرَّكْعَةُ الأُولَى مِنْ صَلَاةِ الْعِشَاءِ كَتَبَ اللهُ لَهُ بِهَا عِتْقًا مِنَ النَّارِ

ಯಾರಾದರೂ ಇಶಾ ನಮಾಝನ್ನು ಅದರ ಪ್ರಥಮ ರಕಅತ್ ಕೂಡ ನಷ್ಟವಾಗದದಂತೆ ಮಸೀದಿಯಲ್ಲಿ ನಿರಂತರ ನಲ್ವತ್ತು ರಾತ್ರಿ ಜಮಾಅತ್‌ನೊಂದಿಗೆ ನಿರ್ವಹಿಸಿದರೆ, ಅವನ ಪಾಲಿಗೆ ನರಕದಿಂದ ಮುಕ್ತಿಯನ್ನು ಬರೆದಿಡಲಾಗುತ್ತದೆ.[7]

ಜಮಾಅತ್ ನಮಾಝಿನ ಪ್ರಥಮ ಪಂಕ್ತಿಯು ಬೇರೆ ಪಂಕ್ತಿಗಳಿಗಿಂತ ಶ್ರೇಷ್ಠವಾಗಿರುತ್ತದೆ. ಯಾವುದೇ ಕೆಲಸವನ್ನು ಪೂರ್ಣ ಶ್ರದ್ಧೆಯೊಂದಿಗೆ ನಿರ್ವಹಿಸುವಾಗ ಅದು ಹೆಚ್ಚು ಸುಂದರ ಮತ್ತು ಆಕರ್ಷಕವೆನಿಸುತ್ತದೆ. ಜಮಾಅತ್ ನಮಾಝ್ ಕೂಡ ಅದೇ ರೀತಿಯಾಗಿರುತ್ತದೆ. ಹೆಚ್ಚು ಶ್ರದ್ಧೆ ವಹಿಸಿ ನಿರ್ವಹಿಸಿದಾಗ ಹೆಚ್ಚು ಪ್ರತಿಫಲ ಸಿಗುತ್ತದೆ. ಪ್ರವಾದಿಯವರು(ಸ) ಪ್ರಥಮ ಪಂಕ್ತಿಯನ್ನು ದೇವಚರರ ಪಂಕ್ತಿಗೆ ಹೋಲಿಸಿದ್ದಾರೆ. ದೇವನ ಸಿಂಹಾಸನದ ಸುತ್ತಲೂ ಇರುವ ದೇವಚರರಿಗೆ ಅವರು ಸಮಾನರಾಗಿರುತ್ತಾರೆ ಎಂಬುದು ಇದರ ತಾತ್ಪರ್ಯ. ಸಂಘಟಿತ ನಮಾಝಿನ ಪ್ರಥಮ ಪಂಕ್ತಿಗಿರುವ ಮಹಾನ್ ಪ್ರತಿಫಲದ ಕುರಿತು ಈ ಪ್ರವಾದಿವಚನವು ನಮ್ಮ ಗಮನ ಸೆಳೆಯುತ್ತದೆ.

ಅಬೂ ಹುರೈರಾ(ರ) ವರದಿ ಮಾಡಿರುತ್ತಾರೆ. ಪ್ರವಾದಿ(ಸ) ಈ ರೀತಿ ಹೇಳಿರುವರು:

لَوْ يَعْلَمُوْنَ مَا فِي الصَّفِّ الْمُقَدَّمِ لَكَانَتْ قُرْعَةٌ

ಪ್ರಥಮ ಪಂಕ್ತಿಯ ಶ್ರೇಷ್ಠತೆಯನ್ನು ಜನರು ಮನದಟ್ಟು ಮಾಡಿಕೊಂಡಿದ್ದರೆ, ಅದಕ್ಕಾಗಿ ಅವರು ಸ್ಪರ್ಧಿಸುತ್ತಿದ್ದರು.[8]

ಒಟ್ಟಿನಲ್ಲಿ ಸಂಘಟಿತ ನಮಾಝ್ ಅಪಾರವಾದ ಪ್ರತಿಫಲವು ವಾಗ್ದಾನ ಮಾಡಲ್ಪಟ್ಟಿರುವ ಶ್ರೇಷ್ಠ ಕರ್ಮವಾಗಿದೆ. ಒಬ್ಬರು ತಿಂಗಳು ಪೂರ್ತಿ ಒಂಟಿಯಾಗಿ ನಮಾಝ್ ನಿರ್ವಹಿಸಿದರೆ ಸಿಗುವ ಪ್ರತಿಫಲಕ್ಕಿಂತ ಹೆಚ್ಚು ಪ್ರತಿಫಲವು ಒಂದು ಜಮಾಅತ್ ನಮಾಝ್ ನಿಂದ ಸಿಗುತ್ತದೆ.

صَلَاةُ الْجَمَاعَةِ أَفْضَلُ مِنْ صَلَاةِ الْفَذِّ بِسَبْعٍ وَعِشْرِيْنَ دَرَجَةً

ಒಬ್ಬನು ಒಂಟಿಯಾಗಿ ನಮಾಝ್ ನಿರ್ವಹಿಸುವುದಕ್ಕಿಂತ 27 ಪಟ್ಟು ಅಧಿಕ ಶ್ರೇಷ್ಠತೆಯು ಸಂಘಟಿತ ನಮಾಝಿಗೆ ಇದೆ.[9]

---

1. ಹಾಕಿಮ್: 1/246, ಅಲ್ ಮುಂದಿರಿ: 617.
2. ಇಬ್ನು ಮಾಜ: 793, ಹಾಕಿಮ್: 1/245-246.
3. ತಬ್ರಾನಿ - ಕಬೀರ್, ಹೈತಮಿ - ಮಜ್‌ಮಉಸ್ಸವಾಇದ್: 2/43.
4. ಮುಸ್ಲಿಮ್: 654, ಅಬೂದಾವುದ್: 550, ನಸಾಈ: 2/108, ಇಬ್ನುಮಾಜ: 777.
5. ಬುಖಾರಿ, ಮುಸ್ಲಿಮ್.
6. ಮುಸ್ಲಿಮ್: 656, ಅಬೂದಾವೂದ್: 555, ತಿರ್ಮಿದಿ: 221, ಮಾಲಿಕ್ - ಮುವತ್ತಾ; 1/132, ಇಬ್ನು ಖುಝೈಮಾ: 2/365.
7. ಇಬ್ನುಮಾಜ: 798, ತಿರ್ಮಿದಿ: 2/8-9.
8. ಮುಸ್ಲಿಮ್: 439.
9. ಬುಖಾರಿ: 645, ಮುಸ್ಲಿಮ್: 650, ತಿರ್ಮಿದಿ: 215, ನಸಾಈ: 2/103, ಮಾಲಿಕ್ - ಮುವತ್ತಾ: 1/129.

17. ಝುಕಾತ್ ನೀಡಲು ನಿರಾಕರಿಸಿದರೆ ಇರುವ ಶಿಕ್ಷೆ

عَنْ أَبِي هُرَيْرَةَ رَضِيَ اللّٰهُ عَنْهُ قَالَ: قَالَ رَسُوْلُ اللّٰهِ ﷺ: "مَنْ آتَاهُ اللّٰهُ مَالًا فَلَمْ يُؤَدِّ زَكَاتَهُ مُثِّلَ لَهُ يَوْمَ الْقِيَامَةِ شُجَاعاً أَقْرَعَ، لَهُ زَبِيْبَتَانِ يُطَوَّقُهُ يَوْمَ الْقِيَامَةِ، ثُمَّ يَأْخُذُ بِلِهْزِمَتَيْهِ ثُمَّ يَقُوْلُ: أَنَا مَالُكَ، أَنَا كَنْزُكَ"

ಅಬೂ ಹುರೈರಾ(ರ) ವರದಿ ಮಾಡಿರುತ್ತಾರೆ. ಪ್ರವಾದಿ(ಸ) ಹೇಳಿರುವರು: ಅಲ್ಲಾಹನು ಒಬ್ಬನಿಗೆ ಸಂಪತ್ತನ್ನು ನೀಡಿದ್ದು, ಅವನು ಅದರ ಝುಕಾತನ್ನು ನಿರಾಕರಿಸಿದರೆ, ಅದು ಅಂತ್ಯದಿನದಂದು ವಿಷಭರಿತವಾದ, ಕಪ್ಪಗಿನ ಎರಡು ಚುಕ್ಕೆಗಳಿರುವ ಮಿರಮಿರನೆ ಮಿಂಚುವ ಉಗ್ರ ಸರ್ಪವಾಗಿ ಅವನನ್ನು ಹುಡುಕಿಕೊಂಡು ಬರುವುದು. ಅದು ಅವನ ಕುತ್ತಿಗೆಯಲ್ಲಿ ಸುತ್ತು ಹಾಕಲ್ಪಟ್ಟು, ಬಾಯಿಯ ಪಾರ್ಶ್ವಗಳನ್ನು ಕಚ್ಚಿ ಎಳೆದು, ನಾನು ನಿನ್ನ ಸಂಪತ್ತು, ನಾನಾಗಿದ್ದೇನೆ ನಿನ್ನ ಗಳಿಕೆ ಎಂದು ಹೇಳುವುದು.*

ಝುಕಾತ್ ಎಂಬುದು ಶ್ರೀಮಂತರ ಸಂಪತ್ತಿನಿಂದ ಬಡವರ ಹಕ್ಕನ್ನು ಬೇರ್ಪಡಿಸಿ ತೆಗೆಯುವ ಒಂದು ಶುದ್ಧೀಕರಣ ಪ್ರಕ್ರಿಯೆ. ಇಸ್ಲಾಮಿನಲ್ಲಿ ನಮಾಝಿನಷ್ಟೇ ಪ್ರಾಮುಖ್ಯತೆ ಮತ್ತು ಪ್ರಾಧಾನ್ಯತೆ ಝುಕಾತ್‌ಗಿದೆ. ವಿಶ್ವಾಸ ಸ್ವೀಕರಿಸಿದ ಬಳಿಕ ನಮಾಝ್ ನಿರ್ವಹಿಸದೆ ಇರುವುದು ಬಹಳ ದೊಡ್ಡ ಅಪರಾಧವಲ್ಲವೇ? ಅದೇ ರೀತಿ ಝುಕಾತ್ ನೀಡದೆ ಇರುವುದು ಕೂಡ ದೊಡ್ಡ ಪಾಪವಾಗಿದೆ. ಪವಿತ್ರ ಕುರ್‌ಆನ್ ನಮ್ಮನ್ನು ಈ ರೀತಿ ಎಚ್ಚರಿಸುತ್ತದೆ:

'ಚಿನ್ನವನ್ನೂ ಬೆಳ್ಳಿಯನ್ನೂ ಸಂಗ್ರಹಿಸಿಟ್ಟು ಅವುಗಳನ್ನು ದೇವಮಾರ್ಗದಲ್ಲಿ

* ಇಮಾಮ್ ಬುಖಾರಿ: 1403, ನಸಾಈ: 5/12-14 ಮುಂತಾದವರು ಉಲ್ಲೇಖಿಸಿರುವ ಪ್ರಮುಖ ಹದೀಸ್ ಇದಾಗಿದೆ.

ಖರ್ಚು ಮಾಡದವರಿಗೆ ವೇದನಾಯುಕ್ತ ಯಾತನೆಯ ಸುವಾರ್ತೆ ನೀಡಿರಿ. ಈ ಚಿನ್ನ-ಬೆಳ್ಳಿಗಳ ಮೇಲೆ ನರಕಾಗ್ನಿಯನ್ನು ಉರಿಸಲಾಗುವುದು. ತರುವಾಯ ಅದರಿಂದಲೇ ಅವರ ಹಣೆಗಳಿಗೂ ಪಾರ್ಶ್ವಗಳಿಗೂ ಬೆನ್ನುಗಳಿಗೂ ಬರೆ ಹಾಕಲಾಗುವುದು ಮತ್ತು ನೀವು ನಿಮಗಾಗಿ ಸಂಗ್ರಹಿಸಿಟ್ಟಿದ್ದ ಸಂಪತ್ತು ಇದುವೇ. ಈಗ ನೀವು ಕೂಡಿ ಹಾಕಿದ್ದ ಸಂಪತ್ತನ್ನು ಸವಿಯಿರಿ (ಎನ್ನಲಾಗುವುದು).' **(ಅತ್ತೌಬ: 34-35)**

ಝಕಾತ್ ನೀಡದಿರುವುದು ಪರಲೋಕವನ್ನು ನಿಷೇಧಿಸುವ ಬಹುದೇವ ವಿಶ್ವಾಸಿಗಳ ಲಕ್ಷಣವೆಂದು ಪವಿತ್ರ ಕುರ್‌ಆನ್ ಹೇಳುತ್ತದೆ, 'ಬಹುದೇವವಿಶ್ವಾಸಿಗಳಿಗೆ ವಿನಾಶವಿದೆ. ಅವರು ಝಕಾತ್ ಕೊಡದವರು ಹಾಗೂ ಪರಲೋಕ ಜೀವನವನ್ನು ನಿರಾಕರಿಸುವವರು.' **(ಹಾಮೀಮ್ ಅಸ್ಸಜ್ದ: 6-7)**

'ತೌಬಾ' ಸ್ವೀಕೃತವಾಗಲು ಇಸ್ಲಾಮಿನ ಸಾಹೋದರ್ಯವು ನೆಲೆನಿಲ್ಲಲು ಪ್ರಮುಖ ಮಾನದಂಡಗಳಲ್ಲಿ ಒಂದಾಗಿ ನಮಾಝ್‌ನೊಂದಿಗೆ ಝಕಾತನ್ನು ಪವಿತ್ರ ಕುರ್‌ಆನ್ ಸೇರಿಸಿ ಹೇಳುತ್ತದೆ, 'ಆದರೂ ಇವರು ಪಶ್ಚಾತ್ತಾಪ ಪಟ್ಟರೆ ಮತ್ತು ನಮಾಝನ್ನು ಸಂಸ್ಥಾಪಿಸಿ ಝಕಾತ್ ಕೊಟ್ಟರೆ, ನಿಮ್ಮ ಧರ್ಮ ಬಾಂಧವರಾಗುತ್ತಾರೆ.' **(ಅತ್ತೌಬ: 11)**

ಝಕಾತ್ ನೀಡದವರ ನಮಾಝ್ ಪರಿಗಣಿಸಲ್ಪಡುವುದಿಲ್ಲ. ಅವರ ಆರಾಧನಾ ಕರ್ಮಗಳು ಸ್ವೀಕೃತವಾಗುವುದಿಲ್ಲ. ಅಬ್ದುಲ್ಲಾ ಬಿನ್ ಮಸ್‌ಊದ್(ರ) ಹೇಳುತ್ತಾರೆ:

أُمِرْنَا بِإِقَامَةِ الصَّلَاةِ وَإِيْتَاءِ الزَّكَاةِ، وَمَنْ لَمْ يُزَكِّ فَلَا صَلَاةَ لَهُ

'ನಮ್ಮೊಂದಿಗೆ ನಮಾಝ್ ಸಂಸ್ಥಾಪಿಸಲು, ಝಕಾತನ್ನು ನೀಡಲು ಆದೇಶಿಸಲಾಗಿದೆ. ಯಾರಾದರೂ ಝಕಾತ್ ನೀಡದಿದ್ದರೆ, ಅವನಿಗೆ ನಮಾಝ್ ಕೂಡ ಇಲ್ಲ.'[1]

ಇದೇ ಕಾರಣದಿಂದಾಗಿ ಪ್ರಥಮ ಖಲೀಫ ಹ. ಅಬೂಬಕರ್(ರ) ಝಕಾತನ್ನು ನೀಡಲು ನಿರಾಕರಿಸಿದವರೊಂದಿಗೆ ಯುದ್ಧ ಮಾಡಿದ್ದರು. ತನ್ನ ಈ ನಿರ್ಧಾರವನ್ನು ಪ್ರಶ್ನಿಸಿದವರೊಂದಿಗೆ ಹೀಗೆ ಹೇಳಿದ್ದರು:

وَاللهِ لَأُقَاتِلَنَّ مَنْ فَرَّقَ بَيْنَ الصَّلَاةِ وَالزَّكَاةِ، فَإِنَّ الزَّكَاةَ حَقُّ الْمَالِ، وَاللهِ لَوْ مَنَعُوْنِي عِقَالًا
كَانُوْا يُؤَدُّوْنَهُ إِلَى رَسُوْلِ اللهِ ﷺ لَقَاتَلْتُهُمْ عَلَى مَنْعِهِ!

'ಅಲ್ಲಾಹನಾಣೆ! ನಮಾಝ್ ಮತ್ತು ಝಕಾತಿನ ಮಧ್ಯೆ ತಾರತಮ್ಯ

ಮಾಡುವವರ ವಿರುದ್ಧ ನಾವು ಹೋರಾಡುತ್ತೇವೆ. ಝಕಾತ್ ಸಂಪತ್ತಿನ ಹಕ್ಕಾಗಿದೆ. ಅಲ್ಲಾಹನ ಸಂದೇಶವಾಹಕರಿಗೆ ಅವರು ನೀಡಿರುವುದು ಒಂಟೆಯ ಮೂಗುದಾರ ವನ್ನಾಗಿದ್ದರೂ, ಅದನ್ನು ನನಗೆ ನೀಡುವುದಕ್ಕೆ ನಿರಾಕರಿಸಿದರೆ ಅಲ್ಲಾಹನಾಣೆ, ನಾನು ಅವರೊಂದಿಗೆ ಯುದ್ಧ ಮಾಡುವೆನು.'[2]

ಇಹಲೋಕದಲ್ಲಿ ನಾವು ಪ್ರೀತಿಯಿಂದ ಶೇಖರಿಸಿರುವ ನಮ್ಮ ಸಂಪತ್ತು ಯಾವ ರೀತಿ ಅಂತಿಮ ದಿನದಂದು ನಮ್ಮದೇ ಶತ್ರುವಾಗಿ ಮಾರ್ಪಡುತ್ತದೆ ಎಂಬುದರ ಅತ್ಯಂತ ಭಯಾನಕ ಚಿತ್ರಣವಾಗಿದೆ ಈ ಪ್ರವಾದಿವಚನ. ಮನುಷ್ಯನ ಅಸ್ಥಿಗಳಲ್ಲೂ ಮಾಂಸಖಂಡ ಗಳಲ್ಲಿಯೂ ವಿಷ ಸರ್ಪದಂತೆ ಸುರುಟಿ ಮಲಗಿರುವ ಧನಮೋಹ ಮತ್ತು ಸ್ವಾರ್ಥಗಳೆಲ್ಲ ವಿಚಾರಣೆಯ ದಿನ ನಿಜಾರ್ಥದಲ್ಲಿ ಉಗ್ರ ಸರ್ಪವಾಗಿ ಪರಿಣಮಿಸುವುದು.

ಅಬೂ ಹುರೈರಾ(ರ) ವರದಿ ಮಾಡಿರುವ ಇನ್ನೊಂದು ಪ್ರವಾದಿವಚನವು ಈ ರೀತಿ ಇದೆ:

مَا مِنْ صَاحِبِ ذَهَبٍ وَلَا فِضَّةٍ لَا يُؤَدِّي مِنْهَا حَقَّهَا إِلَّا إِذَا كَانَ يَوْمَ الْقِيَامَةِ صُفِّحَتْ
لَهُ صَفَائِحُ مِنْ نَارٍ، فَأُحْمِيَ عَلَيْهَا فِي نَارِ جَهَنَّمَ، فَيُكْوَى بِهَا جَنْبُهُ وَجَبِينُهُ وَظَهْرُهُ

'ಚಿನ್ನ, ಬೆಳ್ಳಿಯ ಒಡೆಯನಾಗಿದ್ದೂ ಅವುಗಳ ಝಕಾತ್ ನೀಡದೆ ಇದ್ದರೆ, ಅಂತ್ಯ ದಿನದಂದು ಅವರಿಗಾಗಿ ಅಗ್ನಿಯ ಫಲಕಗಳು ತಯಾರಾಗುವುದು. ನರಕಾಗ್ನಿಯಲ್ಲಿ ಹಾಕಿ ಅವುಗಳನ್ನು ಬಿಸಿ ಮಾಡಿ ತೆಗೆಯಲಾಗುವುದು. ಅದರ ಸಹಾಯದಿಂದ ಅವರ ಪಾರ್ಶ್ವಗಳಿಗೂ ಹಣೆಗೂ ಬೆನ್ನಿಗೂ ಬರೆ ಎಳೆಯಲಾಗುವುದು.'[3]

ಅಹ್ನಫ್ ಬಿನ್ ಕೈಸ್(ರ) ಹೇಳುತ್ತಾರೆ. ನಾನೊಮ್ಮೆ ಕುರೈಶ್ ಸರದಾರರೊಂದಿಗೆ ಕುಳಿತುಕೊಂಡಿದ್ದೆ. ಆಗ ಸಾಧಾರಣ ರೀತಿಯಲ್ಲಿ ವಸ್ತ್ರ ಧರಿಸಿದ ಒಬ್ಬ ವ್ಯಕ್ತಿ ಅಲ್ಲಿಗೆ ಬಂದರು. ಅವರು ಪ್ರಮುಖ ಸಹಾಬಿ ಅಬೂದರ್ ಗಿಫ್ಫಾರಿ(ರ) ಆಗಿದ್ದರು. ಅವರು ಜನರನ್ನುದ್ದೇಶಿಸಿ ಈ ರೀತಿ ಹೇಳಿದರು:

بَشِّرِ الْكَانِزِينَ بِرَضْفٍ يُحْمَى عَلَيْهِ فِي نَارِ جَهَنَّمَ، ثُمَّ يُوضَعُ عَلَى حَلَمَةِ ثَدْيِ أَحَدِهِمْ حَتَّى
يَخْرُجَ مِنْ نُغْضِ كَتِفِهِ، وَيُوضَعُ عَلَى نُغْضِ كَتِفِهِ حَتَّى يَخْرُجَ مِنْ حَلَمَةِ ثَدْيِهِ، يَتَزَلْزَلُ!

'ಝಕಾತನ್ನು ನೀಡದೆ ಸಂಪತ್ತನ್ನು ಶೇಖರಿಸಿ ಇಡುವವರಿಗೆ ಸುವಾರ್ತೆ ನೀಡಿರಿ.

ಅಂತ್ಯ ದಿನದಂದು ಬಿಸಿಯಾದ ಒಂದು ಕಲ್ಲನ್ನು ನರಕದಲ್ಲಿ ಹಾಕಿ ಕುದಿಸಿ ಸ್ತನದ ತೊಟ್ಟಿನ ಮೇಲೆ ಇರಿಸಲಾಗುವುದು. ಆಗ ಅದು ಶರೀರದ ಒಳಗೆ ಪ್ರವೇಶಿಸಿ ಕೈಯ ಅಸ್ಥಿಯ ಮೂಲಕ ಹೊರ ಬರುವುದು. ಕೈಯ ಮೂಳೆಗಳಲ್ಲಿ ಇರಿಸುವ ಕಲ್ಲು ಸ್ತನದ ತೊಟ್ಟಿನ ಮೂಲಕ ಹೊರ ಬರುವುದು. ನೋವಿನಿಂದ ವ್ಯಕ್ತಿಯು ಚೀರುತ್ತಿರುವನು.'[4]

---

1. ತಬ್ರಾನಿ, ಕಬೀರ್, ಹೈತಮಿ, ಮಜ್‌ಮಉಝ್ಝವಾಇದ್: 3/62, ಅಸ್ಬಹಾನಿ–ತರ್ಹೀಬ್: 1018.
2. ಬುಖಾರಿ: 7284–85, ಮುಸ್ಲಿಮ್: 20.
3. ಬುಖಾರಿ: 1402, ಮುಸ್ಲಿಮ್: 987, ನಸಾಈ: 5/12.
4. ಬುಖಾರಿ: 1407, ಮುಸ್ಲಿಮ್: 992.

18. ಅನುಗ್ರಹಗಳ ಮಾಸ

عَـنْ جَابِرِ بْنِ عَبْدِ اللّٰهِ رَضِيَ اللّٰهُ عَنْهُ قَالَ: أَنَّ رَسُوْلَ اللّٰهِ ﷺ قَالَ: أُعْطِيَتْ أُمَّتِي فِي شَهْرِ رَمَضَانَ خَمْسًا، لَمْ يُعْطَهُنَّ نَبِيٌّ قَبْلِي، أَمَّا وَاحِدَةٌ، فَإِنَّهُ إِذَا كَانَ اَوَّلُ لَيْلَةٍ مِنْ شَهْرِ رَمَضَانَ نَظَرَ اللّٰهُ تَعَالَى إِلَيْهِمْ، وَمَنْ نَظَرَ اللّٰهُ إِلَيْهِ لَمْ يُعَذِّبْهُ أَبَدًا، وَأَمَّا الثَّانِيَةُ، فَإِنَّ خَلُوْفَ أَفْوَاهِهِمْ حِيْنَ يُمْسُوْنَ أَطْيَبُ عِنْدَ اللّٰهِ مِنْ رِيْحِ الْمِسْكِ، وَأَمَّا الثَّالِثَةُ، فَإِنَّ الْمَلَائِكَةَ تَسْتَغْفِرُ لَهُمْ فِي كُلِّ يَوْمٍ وَلَيْلَةٍ، وَأَمَّا الرَّابِعَةُ، فَإِنَّ اللّٰهَ تَعَالَى يَأْمُرُ جَنَّتَهُ فَيَقُوْلُ لَهَا: اِسْتَعِدِّي، وَتَزَيَّنِي لِعِبَادِي، أَوْشَكَ أَنْ يَسْتَرِيْحَ مِنْ تَعَبِ الدُّنْيَا إِلٰى دَارِي وَكَرَامَتِي، وَاَمَّا الْخَامِسَةُ، فَإِنَّهُ إِذَا كَانَ آخِرُ لَيْلَةٍ غَفَرَ اللّٰهُ لَهُمْ جَمِيْعًا، فَقَالَ رَجُلٌ مِنَ الْقَوْمِ: أَهِيَ لَيْلَةُ الْقَدْرِ؟ فَقَالَ: لَا، أَلَمْ تَرَ إِلَى الْعُمَّالِ يَعْمَلُوْنَ فَإِذَا فَرَغُوا مِنْ أَعْمَالِهِمْ وُفُّوا أُجُوْرَهُمْ

ಜಾಬಿರ್ ಬಿನ್ ಅಬ್ದುಲ್ಲಾ(ರ)ರಿಂದ ವರದಿ. ಪ್ರವಾದಿ(ಸ) ಹೇಳಿರುವರು: ರಮಝಾನಿನಲ್ಲಿ 5 ಅನುಗ್ರಹಗಳು ನನ್ನ ಸಮುದಾಯಕ್ಕೆ ನೀಡಲ್ಪಟ್ಟಿದೆ. ನನಗಿಂತ ಮೊದಲು ಯಾವ ಪ್ರವಾದಿಗೂ ಇದು ಲಭಿಸಿಲ್ಲ. ಒಂದನೆ ಯದು, ರಮಝಾನಿನ ಪ್ರಥಮ ರಾತ್ರಿ ಆಗತವಾದಾಗ ಅಲ್ಲಾಹನು ಅವ ರನ್ನು ಸಂರಕ್ಷಿಸುವನು. ಯಾರನ್ನು ಅಲ್ಲಾಹನು ಸಂರಕ್ಷಿಸುವನೋ ಅವರು ಮತ್ತೆಂದೂ ಶಿಕ್ಷಿಸಲ್ಪಡಲಾರರು. ಎರಡನೆಯದು, ಉಪವಾಸಿಗರ ಬಾಯಿ ಯಿಂದ ಹೊರಡುವ ವಾಸನೆಯು ದೇವನ ಸನ್ನಿಧಿಯಲ್ಲಿ ಕಸ್ತೂರಿಯ

ಪರಿಮಳಕ್ಕಿಂತಲೂ ಪರಿಮಳಯುಕ್ತವಾಗಿರುವುದು. ಮೂರನೆಯದು, ರಮಝಾನಿನ ದಿನರಾತ್ರೆಗಳಲ್ಲಿ ಉಪವಾಸಿಗರ ಪಾಪ ವಿಮೋಚನೆಗಾಗಿ ದೇವಚರರು ಪ್ರಾರ್ಥಿಸುತ್ತಿರುವರು. ನಾಲ್ಕನೆಯದು, ಅಲ್ಲಾಹನು ಸ್ವರ್ಗ ದೊಂದಿಗೆ ಈ ರೀತಿ ಆದೇಶಿಸುವನು, ನನ್ನ ದಾಸರಿಗಾಗಿ ಸಿದ್ಧತೆಯನ್ನು ನಡೆಸು. ಲೌಕಿಕ ಜೀವನದ ಸಂಕಷ್ಟದಿಂದ ನನ್ನ ಭವನಕ್ಕೆ, ಉದಾರತೆಯೆಡೆಗೆ ವಿಶ್ರಮಿಸಲಿಕ್ಕಾಗಿ ಹೊರಟು ಬರಲು ಅವರಿಗೆ ಸಮಯವಾಗಿದೆ. ಐದನೆ ಯದು, ರಮಝಾನಿನ ಕೊನೆಯ ರಾತ್ರಿ ಆಗತವಾದರೆ, ಅವರ ಎಲ್ಲ ಪಾಪ ಗಳನ್ನು ಅಲ್ಲಾಹನು ಕ್ಷಮಿಸುವನು. ಆಗ ಒಬ್ಬರು ಕೇಳಿದರು: ಪಾಪಗಳು ಕ್ಷಮಿಸಲ್ಪಡುವುದು ವಿಧಿ ನಿರ್ಣಾಯಕ ರಾತ್ರಿಯಲ್ಲೇ? ಪ್ರವಾದಿ(ಸ) ಹೇಳಿದರು: ಅಲ್ಲ, ಕಾರ್ಮಿಕರು ತಮ್ಮ ಕೆಲಸ ಮುಗಿಸಿ ವಿಶ್ರಾಂತಿ ಪಡೆಯಲು ಮರಳಿ ಹೋಗುವಾಗ, ಅವರಿಗೆ ಪ್ರತಿಫಲ ಕೊಡುವುದನ್ನು ನೀವು ನೋಡಲಿಲ್ಲವೇ? ಇದು ಕೂಡ ಅದೇ ರೀತಿಯಾಗಿದೆ.*

ಬಿಸಿಲಿನಲ್ಲಿ ಸುಟ್ಟು ಬೇಯುವ ಮರುಭೂಮಿಯಲ್ಲಿ ಯಾವುದೇ ಮುನ್ಸೂಚನೆ ಯಿಲ್ಲದೆ ಬರುವ ಮಳೆಗೆ ಅರಬಿಗಳು 'ರಮದ್' ಎಂದು ಹೇಳುತ್ತಿದ್ದರು. ಆ ಅರ್ಥದಲ್ಲಿ ದೇವಾನುಗ್ರಹಗಳ ಒಂದು ಮಳೆಗಾಲಕ್ಕೆ ರಮಝಾನ್ ಎಂದು ಹೇಳಲಾಗುತ್ತದೆ. ಬರಡಾಗಿ ಒಣಗಿ ಸೀಳಿ ಹೋಗಿರುವ ಮನುಷ್ಯನ ಹೃದಯಗಳ ಮೇಲೆ ಅನಿರೀಕ್ಷಿತ ವಾಗಿ ಬಂದು ಬೀಳುವ ತುಂತುರು ಮಳೆಯಾಗಿದೆ. ಈ ಪವಿತ್ರ ತಿಂಗಳನ್ನು ಇತರ ತಿಂಗಳುಗಳಿಂದ ಬೇರ್ಪಡಿಸುವ ಒಂದು ವಿಶೇಷತೆ ಇದುವೇ ಆಗಿದೆ. ಜೋರಾಗಿ ಸುರಿ ಯುವ ಮಳೆಯಿಂದ ಗುಂಡಿಗಳಲ್ಲಿ, ಕೊಳಗಳಲ್ಲಿ, ತೋಡುಗಳಲ್ಲಿ ನೀರು ತುಂಬಿ ಹರಿ ಯುವಂತೆ ರಮಝಾನಿನ ದಿನರಾತ್ರೆಗಳಲ್ಲಿ ದೇವಕಾರುಣ್ಯವು ತುಂಬಿ ಹರಿಯುತ್ತದೆ. ರಮಝಾನಿನ ಉಪವಾಸವನ್ನು ಆಚರಿಸುವ ದೇವನ ದಾಸರಿಗೆ ಸಿದ್ಧಪಡಿಸಲಾಗಿರುವ ಅನುಗ್ರಹಗಳ ಕುರಿತು ಈ ಪ್ರವಾದಿವಚನದಲ್ಲಿ ವಿವರಿಸಲಾಗಿದೆ. ಪ್ರಥಮ ರಾತ್ರಿ ದೊರೆ ಯುವ ದೇವನ ಸಂರಕ್ಷಣೆ ಅದರಲ್ಲಿ ಒಂದಾಗಿದೆ. ಉಪವಾಸ ಆರಂಭಿಸುವ ಮೊದಲು ಬರುವ ರಮಝಾನಿನ ರಾತ್ರಿಯೇ ಅನುಗ್ರಹದಾಯಕವಾಗಿರುತ್ತವೆ. ಪವಿತ್ರ ತಿಂಗಳನ್ನು ಸ್ವಾಗತಿಸಲು ಸತ್ಯವಿಶ್ವಾಸಿಗಳು ಕಾದು ಕುಳಿತ ಕಾರಣದಿಂದ ಈ ಅನುಗ್ರಹ ಸಿಗುತ್ತದೆ. ಸಚ್ಚಾರಿತ್ರ್ಯವಂತರಾದ ಸತ್ಯವಿಶ್ವಾಸಿಗಳಿಗೆ ಮಾತ್ರ ಇದು ಸಿಗುವುದು.

* ಇಮಾಮ್ ಬೈಹಕಿ – ಶುಅ್‌ಬುಲ್ ಈಮಾನ್: 3603, ಅಹ್ಮದ್: 2/292, ಬಸ್ಸಾರ್ ಕಶ್‌ಫುಲ್ ಅಸ್ತಾರ್: 963, ಅಬೂ ಶೈಖ್ ಬಿನ್ ಹಯ್ಯಾನ್, ಕಿತಾಬುತ್ತವ್ವಾಬ್ ಮುಂತಾದವರು ಕೇವಲ ಪದಗಳ ವ್ಯತ್ಯಾಸದ ಮೂಲಕ ಈ ಪ್ರವಾದಿವಚನವನ್ನು ಉಲ್ಲೇಖಿಸಿರುತ್ತಾರೆ. ಇಮಾಮ್ ಬೈಹಕಿಯವರ ವಚನಗಳು.

ಅನುಗ್ರಹಗಳ ಪೈಕಿ ಎರಡನೆಯದು, ಉಪವಾಸಿಗನ ಬಾಯಿಯ ವಾಸನೆ ಕಸ್ತೂರಿಯ ಪರಿಮಳಕ್ಕಿಂತಲೂ ಹೆಚ್ಚು ಪ್ರಿಯವಾಗಿದೆ ಎಂಬ ಶುಭವಾರ್ತೆ. ಮುಂಜಾನೆಯಿಂದ ಮುಸ್ಸಂಜೆಯ ವರೆಗೆ ಆಹಾರ ಪಾನೀಯಗಳನ್ನು ಬಿಟ್ಟು ನಿಲ್ಲುವು ದರಿಂದಾಗಿ ಎಷ್ಟು ಜಾಗರೂಕತೆ ವಹಿಸಿದರೂ ಬಾಯಿಯಿಂದ ಒಂದು ರೀತಿಯ ದುರ್ಗಂಧವು ಹೊರಬರುವುದು ಸ್ವಾಭಾವಿಕವಾಗಿದೆ. ಇದರಿಂದ ಬೇಸರಗೊಂಡು ಉಪವಾಸವನ್ನು ತೊರೆಯಬಾರದು ಮತ್ತು ಉಪವಾಸವಿರುವ ವ್ಯಕ್ತಿಯಿಂದ ದೂರ ಓಡುವುದಾಗಲಿ ಮಾಡಬಾರದು. ಏಕೆಂದರೆ ಅಲ್ಲಾಹನ ಆದೇಶಗಳನ್ನು ಅನುಸರಿಸು ವಾಗ ಉಂಟಾಗುವ ಇಂತಹ ತೊಂದರೆಗಳು ಅಲ್ಲಾಹನಿಗೆ ಅತ್ಯಂತ ಪ್ರಿಯವಾದುದಾ ಗಿದೆ. ಹುತಾತ್ಮರ ರಕ್ತದ ಪರಿಮಳದಂತೆ ಅಲ್ಲಾಹನ ವಿಶೇಷ ಕರುಣೆ ಮತ್ತು ಪರಿ ಗಣನೆಗೆ ಅದು ಅರ್ಹವಾಗಿದೆ.

ಉಪವಾಸಿಗರ ಪಾಪ ವಿಮೋಚನೆಗಾಗಿ ದೇವಚರರು ಪ್ರಾರ್ಥಿಸುತ್ತಾರೆ ಎಂಬುದು ಮೂರನೆಯ ಅನುಗ್ರಹವಾಗಿದೆ. ಸಚ್ಚಾರಿತ್ರ್ಯವಂತರಾದ ದೇವದಾಸರ ಕ್ಷೇಮಾಭಿವೃದ್ಧಿಗಾಗಿ ದೇವಚರರು ಅಲ್ಲಾಹನೊಂದಿಗೆ ಪ್ರಾರ್ಥಿಸುತ್ತಿರುವರು ಎಂಬು ದನ್ನು ಪವಿತ್ರ ಕುರ್‌ಆನ್ ಮತ್ತು ಪ್ರವಾದಿವಚನಗಳು ನಮಗೆ ನೆನಪಿಸುತ್ತವೆ.

ಅಲ್ಲಾಹ್ ಹೇಳುತ್ತಾನೆ: ಅರ್ಶ್ (ವಿಶ್ವ ಸಿಂಹಾಸನವನ್ನು) ಹೊತ್ತ ದೇವಚರರು ಮತ್ತು ಅದರ ಸುತ್ತಲೂ ಉಪಸ್ಥಿತರಿರುವರು. ತಮ್ಮ ಪ್ರಭುವಿನ ಪ್ರಶಂಸೆಯೊಂದಿಗೆ ಅವನನ್ನು ಸ್ತುತಿಸುತ್ತಿರುತ್ತಾರೆ. ಅವರು ಅವನ ಮೇಲೆ ವಿಶ್ವಾಸವಿರಿಸುತ್ತಾರೆ ಮತ್ತು ಸತ್ಯವಿಶ್ವಾಸಿಗಳ ಪಾಪ ವಿಮೋಚನೆಗಾಗಿ ಪ್ರಾರ್ಥಿಸುತ್ತಿರುತ್ತಾರೆ. ಅವರು ಹೇಳುತ್ತಾರೆ: ನಮ್ಮ ಪ್ರಭೂ, ನೀನು ನಿನ್ನ ಕೃಪೆ ಮತ್ತು ಜ್ಞಾನದೊಂದಿಗೆ ಸಕಲ ವಸ್ತುಗಳನ್ನು ಆವರಿಸಿ ಕೊಂಡಿರುವೆ. ಆದುದರಿಂದ ಪಶ್ಚಾತ್ತಾಪ ಪಟ್ಟವರನ್ನು ಹಾಗೂ ನಿನ್ನ ಮಾರ್ಗವನ್ನು ಸ್ವೀಕರಿಸಿಕೊಂಡವರನ್ನು ಕ್ಷಮಿಸು ಮತ್ತು ನರಕ ಯಾತನೆಯಿಂದ ರಕ್ಷಿಸು. ನಮ್ಮ ಪ್ರಭೂ, ನೀನು ಅವರಿಗೆ ವಾಗ್ದಾನ ಮಾಡಿರುವ ಶಾಶ್ವತ ವಾದ ಸ್ವರ್ಗೋದ್ಯಾನಗಳಲ್ಲಿ ಅವರನ್ನು ಪ್ರವೇಶಗೊಳಿಸು. ಅವರ ಪಿತರ, ಪತ್ನಿಯರ ಮತ್ತು ಮಕ್ಕಳ ಪೈಕಿ ಸಜ್ಜನ ರಾದವರನ್ನು ಕೂಡ ಅವರೊಂದಿಗೆ ಅಲ್ಲಿಗೆ ತಲುಪಿಸು. ನಿಶ್ಚಯವಾಗಿಯೂ ನೀನು ಪ್ರಬಲನೂ ಯುಕ್ತಿವಂತನೂ ಆಗಿರುವೆ. (ಅಲ್ ಮೂಮಿನ್: 7-8) ಈ ವಚನವನ್ನು ಅನು ಸರಿಸಿ ಯಹ್ಯಾ ಬಿನ್ ಮುಆದ್(ರ) ಹೇಳುತ್ತಾರೆ:

إِفْهَمُوْهَا، فَمَا فِي الْعَالَمِ جَنَّةٌ أَرْجَىٰ مِنْهَا، إِنَّ مَلَكًا وَاحِدًا لَوْ سَأَلَ اللهَ أَنْ يَغْفِرَ لِجَمِيعِ
الْمُؤْمِنِيْنَ لَغَفَرَ لَهُمْ، كَيْفَ وَجَمِيعُ الْمَلَائِكَةِ وَحَمَلَةُ الْعَرْشِ يَسْتَغْفِرُوْنَ لِلْمُؤْمِنِيْنَ؟!

ಜನರೇ, ಈ ವಚನದ ಕುರಿತು ನೀವು ಅರ್ಥ ಮಾಡಿಕೊಳ್ಳಿರಿ. ಇದಕ್ಕಿಂತ ಹೆಚ್ಚು ಪ್ರತೀಕ್ಷೆ ನೀಡುವ ಸ್ವರ್ಗವು ಈ ಭೂಲೋಕದಲ್ಲಿಲ್ಲ. ಏಕೆಂದರೆ ಒಬ್ಬ ದೇವಚರ ಮನುಷ್ಯರ ಪಾಪವಿಮೋಚನೆಗಾಗಿ ಪ್ರಾರ್ಥಿಸಿದರೂ ಅಲ್ಲಾಹನು ಆ ಮನುಷ್ಯನ ಪಾಪಗಳನ್ನು ಕ್ಷಮಿಸುವನು. ಹೀಗಿರುತ್ತಾ ಸಕಲ ದೇವಚರರು, ವಿಶ್ವಸಿಂಹಾಸನದ ಪರಿಚಾರಕರು ವಿಶ್ವಾಸಿಗಳಿಗಾಗಿ ಪಾಪವಿಮೋಚನೆಯ ಪ್ರಾರ್ಥನೆಯನ್ನು ಮಾಡಿದರೆ ಏನು ಸಂಭವಿಸಬಹುದು?[1]

ವಿದ್ವಾಂಸರಾದ ಸಲೀಮ್ ಬಿನ್ ಈಸಾ(ರ) ಹೇಳುತ್ತಾರೆ:

مَا أَكْرَمَ الْمُؤْمِنَ عَلَى اللهِ نَائِمًا عَلَى فِرَاشِهِ وَالْمَلَائِكَةُ يَسْتَغْفِرُوْنَ لَهُ !

ಒಬ್ಬ ಸತ್ಯವಿಶ್ವಾಸಿಗೆ ಅಲ್ಲಾಹನು ಯಾವ ಪ್ರಮಾಣದಲ್ಲಿ ಗೌರವ ಮತ್ತು ಪರಿಗಣನೆ ನೀಡುತ್ತಾನೆ ಎಂಬದನ್ನು ನೋಡಿ. ಅವರು ಹಾಸಿಗೆಯಲ್ಲಿ ನಿದ್ರಿಸುತ್ತಿರುವರು. ಆಗಲೂ ದೇವಚರರು ಅವರಿಗಾಗಿ ಪ್ರಾರ್ಥಿಸುತ್ತಿರುವರು.[2]

ಉಪವಾಸಿಗನ ಪ್ರತಿಫಲ ಸ್ವರ್ಗವಾಗಿದೆ ಎಂಬುದನ್ನು ತಿಳಿಸುವುದು ನಾಲ್ಕನೆಯ ಅನುಗ್ರಹವಾಗಿದೆ. ಅನುಗ್ರಹೀತ ತಿಂಗಳಲ್ಲಿ ಸ್ವರ್ಗವು ಶೃಂಗರಿಸಲ್ಪಟ್ಟು ಸಿದ್ಧಗೊಂಡಿರುವುದು. ಉಪವಾಸಿಗರನ್ನು ಸ್ವಾಗತಿಸಲು ಅದರ ಬಾಗಿಲುಗಳು ತೆರೆಯಲ್ಪಟ್ಟಿರುವುದು. ಇಬ್ನು ಉಮರ್(ರ) ಹೇಳುತ್ತಾರೆ:

إِنَّ الْجَنَّةَ لَتُزَيَّنُ لِرَمَضَانَ مِنْ رَأْسِ الْحَوْلِ إِلَى الْحَوْلِ، فَإِذَا كَانَ أَوَّلُ يَوْمٍ مِنْ رَمَضَانَ هَبَّتْ رِيْحٌ مِنْ تَحْتِ الْعَرْشِ، فَصَفَقَتْ وَرَقَ أَشْجَارِ الْجَنَّةِ، وَتَنْظُرُ الْحُوْرُ الْعِيْنُ إِلَى ذٰلِكَ، فَيَقُلْنَ: يَا رَبَّنَا! اِجْعَلْ لَنَا مِنْ عِبَادِكَ فِي هٰذَا الشَّهْرِ أَزْوَاجًا تَقَرُّ أَعْيُنُنَا بِهِمْ، وَتَقَرُّ أَعْيُنُهُمْ بِنَا

ರಮಝಾನ್ ತಿಂಗಳಿಗಾಗಿ ವರ್ಷದ ಆರಂಭದಿಂದ ಇನ್ನೊಂದು ವರ್ಷದ ಆರಂಭದ ವರೆಗೆ ಸ್ವರ್ಗವು ಅಲಂಕರಿಸಲ್ಪಡುವುದು. ರಮಝಾನಿನ ಆ ಪ್ರಥಮ ದಿನವು ಬಂದು ಬಿಟ್ಟರೆ, ಅರ್ಶ್‌ನ (ವಿಶ್ವ ಸಿಂಹಾಸನ) ಕಡೆಯಿಂದ ಒಂದು ಗಾಳಿ ಬೀಸುವುದು. ಸ್ವರ್ಗದ ಎಲೆಗಳ ಮೂಲಕ ಹಾಗೂ ಅದು ಸ್ವರ್ಗದ ಸುಂದರಿಯರ ಬಳಿ ತಲುಪುವುದು. ಆಗ ಅವರು ಈ ರೀತಿ ಪ್ರಾರ್ಥಿಸುವರು: ದೇವಾ ನಿನ್ನ ದಾಸರ ಪೈಕಿ ನಮ್ಮ ಕಣ್ಣುಗಳಿಗೆ ತಂಪನ್ನು ನೀಡುವ, ನಮ್ಮಿಂದಾಗಿ ಅವರ ಕಣ್ಣುಗಳಿಗೆ ತಂಪು ಸಿಗುವಂತಹ ಸಂಗಾತಿಗಳನ್ನು ನೀನು ನಮಗೆ ಅನುಗ್ರಹಿಸು.[3]

ಉಪವಾಸಿಗನಿಗೆ ಸ್ವರ್ಗ ಪ್ರವೇಶಕ್ಕೆ ಬೇರೆಯೇ ದ್ವಾರಗಳಿರುವುದಾಗಿ ಪ್ರವಾದಿ ಮುಹಮ್ಮದ್(ಸ)ರು ಹೇಳಿರುವರು.

إِنَّ فِي الْجَنَّةِ بَابًا يُقَالُ لَهُ الرَّيَّانُ، يَدْخُلُ مِنْهُ الصَّائِمُونَ يَوْمَ الْقِيَامَةِ، لَا يَدْخُلُ مِنْهُ أَحَدٌ غَيْرُهُمْ، فَإِذَا دَخَلُوا أُغْلِقَ فَلَمْ يَدْخُلْ مِنْهُ أَحَدٌ

ಸ್ವರ್ಗದಲ್ಲಿ ರಯ್ಯಾನ್ ಎಂಬ ಹೆಸರಿನ ಒಂದು ಬಾಗಿಲಿದೆ. ಅಂತ್ಯ ದಿನದಂದು ಉಪವಾಸಿಗರು ಆ ಬಾಗಿಲಿನ ಮೂಲಕ ಹಾದು ಹೋಗುವರು. ಅವರಿಗಲ್ಲದೆ ಬೇರೆ ಯಾರಿಗೂ ಅದರ ಮೂಲಕ ಪ್ರವೇಶವಿರಲಿಕ್ಕಿಲ್ಲ. ಆ ಬಳಿಕ ಬೇರೆ ಯಾರೂ ಅದರ ಮೂಲಕ ಒಳ ಪ್ರವೇಶಿಸಲಾರರು.[4]

ಪಾಪಗಳಿಂದ ಸಂಪೂರ್ಣ ಮುಕ್ತಿಯು ಐದನೆಯ ಅನುಗ್ರಹವಾಗಿದೆ. ರಮಝಾನ್ ಕಾರುಣ್ಯ, ಪಾಪವಿಮೋಚನೆ ಮತ್ತು ನರಕ ವಿಮುಕ್ತಿಯ ತಿಂಗಳಾಗಿದೆ (أَوَّلُهُ رَحْمَةٌ، وَأَوْسَطُهُ مَغْفِرَةٌ، وَآخِرُهُ عِتْقٌ مِنَ النَّارِ) ಎಂಬ ಪ್ರಸಿದ್ಧ ಪ್ರವಾದಿವಚನದ ಸಾರಾಂಶ ಇದುವೇ ಆಗಿದೆ. ಪ್ರವಾದಿವರ್ಯರು(ಸ) ಈ ರೀತಿ ನೆನಪಿಸಿದ್ದಾರೆ:

(مَنْ صَامَ رَمَضَانَ إِيمَانًا وَاحْتِسَابًا غُفِرَ لَهُ مَا تَقَدَّمَ مِنْ ذَنْبِهِ)

'ಸತ್ಯವಿಶ್ವಾಸ ಮತ್ತು ಪ್ರತಿಫಲದ ಅಪೇಕ್ಷೆಯಿಂದ ರಮಝಾನಿನ ಉಪವಾಸವನ್ನು ಯಾರಾದರೂ ಆಚರಿಸಿದರೆ, ಅವನ ಕಳೆದು ಹೋದ ಎಲ್ಲ ಪಾಪಗಳು ಕ್ಷಮಿಸಲ್ಪಡುವುದು.'[6]

ಒಟ್ಟಿನಲ್ಲಿ ಉಪವಾಸ ವ್ರತವನ್ನಾಚರಿಸಿ ಒಣಗಿದ ವಿಶ್ವಾಸಿಯ ನಾಲಗೆ, ಹೃದಯ ದಲ್ಲಿ ನಿರೀಕ್ಷೆ ಮತ್ತು ಭರವಸೆಯನ್ನು ಈ ಪ್ರವಾದಿವಚನವು ನಮಗೆ ನೀಡುತ್ತದೆ.

---

1. ಕುರ್ತುಬಿ – ಜಾಮಿಉಲ್ ಅಹ್‌ಕಾಮಿಲ್ ಕುರ್‌ಆನ್, ಭಾಗ: 15, ಪುಟ: 295
2. ಕುರ್ತುಬಿ – ಜಾಮಿಉಲ್ ಅಹ್‌ಕಾಮಿಲ್ ಕುರ್‌ಆನ್, ಭಾಗ: 15, ಪುಟ: 295
3. ಇಬ್ನು ಖುಝೈಮ: 1886, ಬೈಹಕಿ – ಶುಅಬುಲ್ ಈಮಾನ್: 3634, ತಬ್ರಾನಿ – ಕಬೀರ್.
4. ಬುಖಾರಿ: 1896, ಮುಸ್ಲಿಮ್: 1152, ನಸಾಈ: 4/169, ತಿರ್ಮಿದಿ: 765, ಇಬ್ನು ಖುಝೈಮ: 3608.
5. ಇಬ್ನು ಖುಝೈಮ: 1887, ಅಸ್‌ಬಹಾನಿ – ತರ್‌ಹೀಬ್: 1729, ಬೈಹಕಿ – ಶುಅಬುಲ್ ಈಮಾನ್: 3608.
6. ಬುಖಾರಿ: 1901, ಮುಸ್ಲಿಮ್: 759, ಅಬೂದಾವೂದ್: 1372, ತಿರ್ಮಿದಿ: 683, ನಸಾಈ: 4/157.

19. ಪುಣ್ಯ ಗಳಿಸುವವರು ಮತ್ತು ನಷ್ಟಪಡಿಸುವವರು

عَنْ أَنَسِ بْنِ مَالِكٍ رَضِيَ اللّٰهُ عَنْهُ قَالَ: لَمَّا أَقْبَلَ شَهْرُ رَمَضَانَ قَالَ رَسُوْلُ اللّٰهِ ﷺ: سُبْحَانَ اللّٰهِ! مَا تَسْتَقْبِلُوْنَ وَمَاذَا يَسْتَقْبِلُكُمْ؟ قَالَ عُمَرُ بْنُ خَطَّابِ رَضِيَ اللّٰهُ عَنْهُ: بَأَبِي أَنْتَ وَأُمِّي يَا رَسُوْلَ اللّٰهِ، وَحْيٌ نَزَلَ، أَوْ عَدُوٌّ حَضَرَ؟ قَالَ: لَا، وَلَاكِنْ شَهْرُ رَمَضَانَ يَغْفِرُ اللّٰهُ فِي أَوَّلِ لَيْلَةٍ لِكُلِّ أَهْلِ هٰذِهِ الْقِبْلَةِ. قَالَ: وَفِي الْقَوْمِ رَجُلٌ يَهُزُّ رَأْسَهُ فَيَقُوْلُ: بَخٍ، بَخٍ، فَقَالَ لَهُ النَّبِيُّ ﷺ: كَأَنَّهُ ضَاكَ صَدْرُكَ بِمَا سَمِعْتَ؟ قَالَ: لَا، وَاللّٰهِ يَا رَسُوْلَ اللّٰهِ، وَلَاكِنْ ذَكَرْتُ الْمُنَافِقَ، فَقَالَ النَّبِيُّ ﷺ: الْمُنَافِقُ كَافِرٌ، وَلَيْسَ فِي ذٰلِكَ شَيْءٌ

ಅನಸ್ ಬಿನ್ ಮಾಲಿಕ್(ರ)ರಿಂದ ವರದಿ. ರಮಝಾನ್ ತಿಂಗಳು ಆಗತವಾದಾಗ ಪ್ರವಾದಿ(ಸ) ಹೇಳಿದರು: ಸುಬ್‌ಹಾನಲ್ಲಾಹ್! ನೀವು ಯಾವುದನ್ನು ಎದುರುಗೊಳ್ಳಲಿದ್ದೀರಿ? ನಿಮ್ಮ ಬಳಿಗೆ ಹಾದು ಬರುತ್ತಿರುವುದೇನು? ಉಮರ್(ರ) ಕೇಳಿದರು: ಅಲ್ಲಾಹನ ಪ್ರವಾದಿಗಳೇ, ನನ್ನ ಮಾತಾಪಿತರು ತಮಗೆ ಅರ್ಪಿತ. ಯಾವುದಾದರೂ ದಿವ್ಯವಾಣಿ ಅವತೀರ್ಣವಾಯಿತೇ? ಅಥವಾ ಶತ್ರುಗಳು ಆಕ್ರಮಣಕ್ಕಾಗಿ ಸಿದ್ಧರಾಗಿರುವರೇ? ಅಗ ಪ್ರವಾದಿ(ಸ) ಹೇಳಿದರು: ಅದಲ್ಲ ವಿಷಯ. ಬದಲಾಗಿ ರಮಝಾನಿನ ಪ್ರಥಮ ರಾತ್ರಿಯೇ ಕಿಬ್ಲಾದ ಹಕ್ಕುದಾರರನ್ನೆಲ್ಲ ಅಲ್ಲಾಹನು ಕ್ಷಮಿಸಿ ಬಿಡುವನು. ಅನಸ್(ರ) ಹೇಳುತ್ತಾರೆ: ಜನರ ಪೈಕಿ ಒಬ್ಬರು ಇದನ್ನು ಕೇಳಿದಾಗ ತಲೆಯಲ್ಲಾಡಿಸಿ, ಛೆ, ಛೆ ಎಂದು ಹೇಳುತ್ತಿದ್ದರು. ಪ್ರವಾದಿ(ಸ) ಪ್ರಶ್ನಿಸಿದರು:

ಇದನ್ನು ಕೇಳಿ ನಿಮ್ಮ ಹೃದಯವು ಸಂಕುಚಿತವಾದಂತೆ ಭಾಸವಾಗುತ್ತ ದಲ್ಲವೇ? ಆ ವ್ಯಕ್ತಿ ಉತ್ತರಿಸಿದರು: ಅಲ್ಲಾಹನಾಣೆ. ಹಾಗಲ್ಲ. ನಾನು ಕಪಟವಿಶ್ವಾಸಿಗಳ ಬಗ್ಗೆ ಆಲೋಚಿಸಿದೆ. (ಅವರನ್ನೂ ಅಲ್ಲಾಹನು ಕ್ಷಮಿಸು ವನೇ?) ಪ್ರವಾದಿ(ಸ) ಹೇಳಿದರು: ಕಪಟವಿಶ್ವಾಸಿ ಸತ್ಯನಿಷೇಧಿ ಯಾಗಿದ್ದಾನೆ. ಈ ಅನುಗ್ರಹದಲ್ಲಿ ಅವನಿಗೇನೂ ಲಭಿಸುವುದಿಲ್ಲ.*

ರಮಝಾನಿನ ಶ್ರೇಷ್ಠತೆ ಮತ್ತು ಮಹತ್ವವನ್ನು ವಿವರಿಸುವ ಒಂದು ಪ್ರವಾದಿ ವಚನವಿದು. ರಮಝಾನ್ ಎಂಬುದು ಅಲ್ಲಾಹನು ತನ್ನ ದಾಸರಿಗಾಗಿ ವಿಶೇಷವಾಗಿ ಆರಿಸಿಕೊಂಡ ಒಂದು ಅನುಗ್ರಹೀತ ತಿಂಗಳಾಗಿದೆ. ರಮಝಾನನ್ನು ಸೂಕ್ತವಾದ ಗೌರವದೊಂದಿಗೆ ಸ್ವಾಗತಿಸಬೇಕು ಮತ್ತು ಅದರ ಒಳಿತುಗಳನ್ನು ಯಾವ ಕಾರಣಕ್ಕೂ ನಷ್ಟವಾಗಲು ಬಿಡಬಾರದು ಎಂಬುದನ್ನು ಈ ಪ್ರವಾದಿವಚನವು ನೆನಪಿಸುತ್ತದೆ. 'ಸುಬ್‌ಹಾನಲ್ಲಾಹ್' ಎಂಬುದು ಅಲ್ಲಾಹನ ಮಹಾನತೆ ಮತ್ತು ಮಹತ್ವವನ್ನು ವ್ಯಕ್ತ ಪಡಿಸುವ ಪದ ಪ್ರಯೋಗ ವಾಗಿದೆ. ಅಲ್ಲಾಹನು ಮಹೋನ್ನತನು, ಮಹಾನನು ಮತ್ತು ಪರಿಶುದ್ಧನು ಎಂಬುದು ಇದರ ಅರ್ಥ. ಆಶ್ಚರ್ಯಜನಕವಾದ ವಿಷಯ ಗಳನ್ನು ನೋಡಿದರೆ, ಕೇಳಿದರೆ ಜನರು 'ಸುಬ್‌ಹಾನಲ್ಲಾಹ್' ಎಂದು ಹೇಳುತ್ತಾರೆ. ಇಂತಹ ಸಂದರ್ಭಗಳಲ್ಲಿ ಅಲ್ಲಾಹನ ಮಹಾನತೆ, ಶ್ರೇಷ್ಠತೆ ಮತ್ತು ಸಾಮರ್ಥ್ಯವು ನೆನಪಿಗೆ ಬಂದು ಬಿಡುವುದರಿಂದ ಹೀಗೆ ಹೇಳಲಾಗುತ್ತದೆ. ಇಲ್ಲಿ ರಮಝಾನ್ ತಿಂಗಳ ಬಗ್ಗೆ ಪ್ರಸ್ತಾಪಿಸುವಾಗ ಪ್ರವಾದಿ(ಸ) 'ಸುಬ್‌ಹಾನಲ್ಲಾಹ್' ಎಂದು ಹೇಳಿರುತ್ತಾರೆ. ಇದರ ಅರ್ಥವೇನೆಂದರೆ, ರಮಝಾನ್ ಇತರ ತಿಂಗಳುಗಳಂತಹ ಒಂದು ತಿಂಗಳಲ್ಲ, ಆಶ್ಚರ್ಯಜನಕವಾದ ಅನೇಕ ಅನುಗ್ರಹಗಳು ಇದರಲ್ಲಿ ಒಳಗೊಂಡಿದೆ. ಅಬೂ ಮಸ್‌ಊದ್ ಗಿಫ್ಫಾರಿ(ರ) ಹೇಳುತ್ತಾರೆ. ಪ್ರವಾದಿ(ಸ) ಹೇಳಿದರು:

لَوْ يَعْلَمُ الْعِبَادُ مَا فِي شَهْرِ رَمَضَانَ لَتَمَنَّتْ أُمَّتِيْ أَنْ تَكُوْنَ السَّنَةُ كُلُّهَا رَمَضَان

ರಮಝಾನಿನ ಶ್ರೇಷ್ಠತೆ ಮತ್ತು ಮಹತ್ವವನ್ನು ಸತ್ಯವಿಶ್ವಾಸಿಗಳು ಅರಿತಿದ್ದರೆ, ವರ್ಷ ಪೂರ್ತಿ ರಮಝಾನ್ ಆಗಿದ್ದರೆ ಚೆನ್ನಾಗಿತ್ತು ಎಂದು ಸಮುದಾಯವು ಬಯ ಸುತ್ತಿತ್ತು.[1]

---

* ಇಮಾಮ್ ಬೈಹಕಿ – ಶುಅ್‌ಬುಲ್ ಈಮಾನ್: 3621, ಇಬ್ನು ಖುಝೈಮಾ: 1885 ಮುಂತಾದವರು ಈ ಪ್ರವಾದಿವಚನವನ್ನು ಉಲ್ಲೇಖಿಸಿರುವರು. ಈ ಹದೀಸ್‌ನ ಬಗ್ಗೆ ವಿವಿಧ ಅಭಿಪ್ರಾಯಗಳಿವೆ. ಪ್ರಮುಖ ಹದೀಸ್ ವಿದ್ವಾಂಸರಾದ ಅಹ್ಮದುಲ್ ಬನ್ನಾ ಅಸ್ಸಾಲಿಅತ್ತಿ ಈ ಹದೀಸ್ ಶೃಂಖಲೆಯು ಜಯ್ಯಿದ್ (ಸರಿಯಾದುದು) ಎಂದು ಅಭಿಪ್ರಾಯ ಪಡುತ್ತಾರೆ. (ಅಲ್ ಫತ್‌ಹುರ್‍ರಬ್ಬಾನಿ: 9/235)

ಪಾಪ ಕೃತ್ಯಗಳು ಅಲ್ಲಾಹ್ ಮತ್ತು ಅವನ ದಾಸರ ಮಧ್ಯೆ ಇರುವ ಬೇಲಿಗಳಾಗಿವೆ. ಸೃಷ್ಟಿಕರ್ತನೊಂದಿಗೆ ಸುಗಮವಾದ ಸಂಬಂಧಕ್ಕೆ ಈ ಪಾಪಕೃತ್ಯಗಳು ತಡೆಯಾಗಿ ನಿಲ್ಲುತ್ತವೆ. ಆದುದರಿಂದ ಮೊದಲು ಪಾಪಗಳಿಂದ ಮುಕ್ತರಾಗಬೇಕು. ಪಾಪಮುಕ್ತಿಯಿಂದ ಬೇರೆಲ್ಲ ಅನುಗ್ರಹಗಳು ಲಭಿಸಲು ಆರಂಭವಾಗುತ್ತದೆ. ಆದುದರಿಂದ ಅಲ್ಲಾಹನ ಪ್ರೀತಿ ಮತ್ತು ಕಾರುಣ್ಯವು ಸಿಗಬೇಕಾದರೆ ಪಾಪಮುಕ್ತರಾಗಲೇ ಬೇಕು. ದೇವನ ಅನುಗ್ರಹಗಳ ವರ್ಷ ಧಾರೆಯಾಗಿ ರಮಝಾನ್ ಸತ್ಯವಿಶ್ವಾಸಿಗಳಿಗೆ ಮೊತ್ತ ಮೊದಲನೆಯದಾಗಿ ನೀಡುವ ಅನುಗ್ರಹ ಪಾಪವಿಮೋಚನೆಯಾಗಿದೆ. ಇದನ್ನು ಪ್ರತ್ಯೇಕವಾಗಿ ಪ್ರವಾದಿವರ್ಯರು(ಸ) ಹೇಳಿರುವುದು ಇದೇ ಕಾರಣದಿಂದಾಗಿದೆ.

ವ್ಯಕ್ತಿಯು ಎಷ್ಟು ದೊಡ್ಡ ಪಾಪಗಳನ್ನು ಮಾಡಿದರೂ ಅಲ್ಲಾಹನು ಕ್ಷಮಿಸಿ ಬಿಡುವನು ಎಂಬುದು ಇದರರ್ಥವಲ್ಲ. ಕಿಬ್ಲಾದ ಹಕ್ಕುದಾರರು ಎಂದು ಪ್ರವಾದಿ(ಸ) ವಿಶೇಷವಾಗಿ ಪ್ರಸ್ತಾಪಿಸಿರುವುದು ಕೆಟ್ಟ ಕೃತ್ಯಗಳಿಂದ ಸಾಧ್ಯವಾದಷ್ಟು ದೂರವಿರುವ ನಿಷ್ಕಳಂಕ ದೇವವಿಶ್ವಾಸಿಗಳ ಕುರಿತಾಗಿದೆ. ಯಾವುದೇ ಪರಿವೆಯಿಲ್ಲದೆ ಪಾಪಕೃತ್ಯಗಳನ್ನು ಮಾಡುತ್ತಾ ಜೀವನವನ್ನು ಹಾಳುಗೆಡಹುವ ಅಕ್ರಮಿಗಳು ಈ ಸೌಭಾಗ್ಯಕ್ಕೆ ಅರ್ಹರಲ್ಲ. ಆದುದರಿಂದಲೇ ಪ್ರವಾದಿ(ಸ) ಇನ್ನೊಂದು ಸಂದರ್ಭದಲ್ಲಿ ಈ ರೀತಿ ಹೇಳಿರುವರು:

الصَّلَوَاتُ الْخَمْسُ، وَالْجُمُعَةُ إِلَى الْجُمُعَةِ، وَرَمَضَانُ إِلَى رَمَضَانَ، مُكَفِّرَاتٌ
مَا بَيْنَهُنَّ إِذَا اجْتُنِبَتْ الْكَبَائِرُ

ಐದು ಹೊತ್ತಿನ ನಮಾಝ್ ಅವುಗಳ ಮಧ್ಯೆ ಸಂಭವಿಸಿ ಹೋದ ಪಾಪಗಳನ್ನು, ಒಂದು ಶುಕ್ರವಾರದ ಜುಮಾ ನಮಾಝ್ ಇನ್ನೊಂದು ಶುಕ್ರವಾರದ ಜುಮಾದ ವರೆಗಿನ ಪಾಪಗಳನ್ನು, ಒಂದು ರಮಝಾನ್ ಇನ್ನೊಂದು ರಮಝಾನಿನ ವರೆಗಿನ ಪಾಪಗಳನ್ನು ಮುಕ್ತಗೊಳಿಸುತ್ತದೆ. ವ್ಯಕ್ತಿಯು ಮಹಾಪಾಪಗಳಿಂದ ದೂರವುಳಿಯುವುದಾದರೆ.[2]

ಆರಂಭದ ಹದೀಸ್ ವಚನದಲ್ಲಿ ಕಪಟವಿಶ್ವಾಸಿಗಳ ವಿಷಯವನ್ನು ಪ್ರವಾದಿ(ಸ) ಪ್ರತ್ಯೇಕವಾಗಿ ಪ್ರಸ್ತಾಪಿಸಿದ್ದಾರೆ. ಅವನು ಸತ್ಯನಿಷೇಧಿಯಾಗಿದ್ದಾನೆ ಮತ್ತು ರಮಝಾನ್‌ನ ಅನುಗ್ರಹಗಳು ಅವನಿಗೆ ಲಭಿಸುವುದಿಲ್ಲ ಎಂಬುದಾಗಿಯೂ ಎಚ್ಚರಿಸಿದ್ದಾರೆ. ಪವಿತ್ರ ತಿಂಗಳಲ್ಲಿ ಪಾಪವಿಮೋಚನೆಯ ಅನುಗ್ರಹವು ಸತ್ಯವಿಶ್ವಾಸಿಗಳಿಗೆ ಮಾತ್ರ ಲಭಿಸುತ್ತದೆ. ಕಪಟವಿಶ್ವಾಸಿಗಳಿಗೆ ಅದು ಲಭಿಸುವುದಿಲ್ಲ ಎಂಬುದನ್ನು ಈ ಹದೀಸ್

ವಚನವು ಸ್ಪಷ್ಟಪಡಿಸುತ್ತದೆ. ಕಪಟವಿಶ್ವಾಸಿಗಳು ರಮಝಾನಿನ ಶ್ರೇಷ್ಠತೆಯನ್ನು ನಿರ್ಲಕ್ಷಿಸುತ್ತಾರೆ ಮತ್ತು ನಿಷೇಧಿಸುತ್ತಾರೆ. ಅವರ ಹೃದಯಗಳು ತಲೆಕೆಳಗಾಗಿರಿಸಿದ ಪಾತ್ರೆಗಳಂತಿರುತ್ತದೆ. ಮಳೆ ಎಷ್ಟು ಜೋರಾಗಿ ಸುರಿದರೂ ಒಂದು ಹನಿ ನೀರು ಪಾತ್ರೆಯೊಳಗೆ ತಲುಪುವುದಿಲ್ಲ. ಇದೇ ರೀತಿ ರಮಝಾನಿಗೆ ಬೆನ್ನು ತಿರುಗಿಸಿ ನಿಲ್ಲುವ ಕಾರಣ, ಅದರ ಅನುಗ್ರಹಗಳೂ ಅವರಿಗೆ ಲಭಿಸುವುದಿಲ್ಲ. ಪ್ರವಾದಿ(ಸ) ಹೇಳಿರುವರು:

أَظَلَّكُمْ شَهْرُكُمْ هٰذَا، مَا مَرَّ عَلَى الْمُسْلِمِينَ شَهْرٌ خَيْرٌ لَهُمْ مِنْهُ، وَلَا يَأْتِي عَلَى الْمُنَافِقِينَ شَهْرٌ شَرٌّ لَهُمْ مِنْهُ، إِنَّ اللّٰهَ يَكْتُبُ أَجْرَهُ وَثَوَابَهُ مِنْ قَبْلِ اَنْ يَدْخُلَ، وَيَكْتُبُ وِزْرَهُ وَشَقَائَهُ مِنْ قَبْلِ أَنْ يَدْخُلَ، وَذٰلِكَ أَنَّ الْمُؤْمِنَ يُعِدُّ فِيْهِ الْقُوَّةَ مِنَ النَّفَقَةِ لِلْعِبَادَةِ، وَيُعِدُّ فِيْهِ الْمُنَافِقُ إِغْتِيَابَ الْمُؤْمِنِيْنَ، وَاتِّبَاعَ عَوْرَاتِهِمْ، فَهُوَ غُنْمٌ لِلْمُؤْمِنِ وَمَعْصِيَةٌ عَلَى الْفَاجِرِ.

ನಿಮ್ಮ ಮೇಲೆ ಒಂದು ತಿಂಗಳು ನೆರಳನ್ನು ಹರಡಿದೆ. ಈ ತಿಂಗಳಿಗಿಂತ ಶ್ರೇಷ್ಠವಾದ ತಿಂಗಳು ಮುಸ್ಲಿಮರ ಮೇಲೆ ಹಾದು ಹೋಗಿಲ್ಲ. ಇದರಷ್ಟು ಉಪದ್ರವ ಕಾರಿ ಯಾವ ತಿಂಗಳೂ ಮುನಾಫಿಕರ ಪಾಲಿಗೆ ಹಾದು ಹೋಗಿಲ್ಲ. ತಿಳಿಯಿರಿ. ಈ ತಿಂಗಳ ಅನುಗ್ರಹ ಮತ್ತು ಪ್ರತಿಫಲವನ್ನು ಈ ತಿಂಗಳು ಬರುವುದಕ್ಕೆ ಮುನ್ನವೇ ಅಲ್ಲಾಹನು ಬರೆದಿಟ್ಟಿರುತ್ತಾನೆ. ಅದೇ ರೀತಿ ಅದರ ಪಾಪ ಮತ್ತು ದೌರ್ಭಾಗ್ಯದ ಕುರಿತೂ ಈ ತಿಂಗಳು ಬರುವ ಮೊದಲೇ ಅಲ್ಲಾಹನು ಬರೆದಿಟ್ಟಿರುವನು. ನಿಶ್ಚಯ ವಾಗಿಯೂ ಸತ್ಯವಿಶ್ವಾಸಿಗಳಿಗೆ ಈ ತಿಂಗಳು ದೇವನ ಆರಾಧನೆಗೆ ಬೇಕಾದ ಶಕ್ತಿ ತುಂಬುವ ಕಾಲವಾಗಿದೆ. ಕಪಟವಿಶ್ವಾಸಿಗಳಿಗೆ ಸತ್ಯವಿಶ್ವಾಸಿಗಳ ನ್ಯೂನತೆ ಮತ್ತು ಕೊರತೆಗಳನ್ನು ಹುಡುಕುತ್ತಾ ನಡೆಯುವ ಕಾಲವಾಗಿದೆ. ಈ ರೀತಿ ರಮಝಾನ್ ತಿಂಗಳು ಸತ್ಯವಿಶ್ವಾಸಿಗಳ ಪಾಲಿಗೆ ಸಂಪಾದನೆ ಮತ್ತು ಅನುಗ್ರಹವಾದರೆ, ಕಪಟವಿಶ್ವಾಸಿ ಗಳಿಗೆ ಶಿಕ್ಷೆ ಮತ್ತು ಶಾಪವಾಗಿ ಪರಿಣಮಿಸುತ್ತದೆ.[3]

---

1. ಬೈಹಕಿ – ಶುಅ್‌ಬುಲ್ ಈಮಾನ್: 3634, ತಬ್ರಾನಿ – ಕಬೀರ್: 22/967, ಇಬ್ನು ಖುಝೈಮಾ: 1886.

2. ಮುಸ್ಲಿಮ್: 233, ತಿರ್ಮಿದಿ: 214, ಅಹ್ಮದ್: 2/359, ಇಬ್ನು ಹಿಬ್ಬಾನ್: 1730.

3. ಅಹ್ಮದ್: 2/524, ಬೈಹಕಿ – ಶುಅ್‌ಬುಲ್ ಈಮಾನ್: 3607, ಇಬ್ನು ಖುಝೈಮಾ: 1884, ಇಬ್ನು ಅಬೀ ಶೈಬ – ಮುಸನ್ನಫ್: 3/2, ಅಸ್ಬಹಾನಿ – ತರ್ಹೀಬ್: 56.

20. ಉಪವಾಸವನ್ನು ತೊರೆಯುವವರು

عَنْ أَبِي أُمَامَةَ الْبَاهِلِي رَضِيَ اللّٰهُ عَنْهُ قَالَ: قَالَ رَسُوْلُ اللّٰهِ ﷺ: بَيْنَا اَنَا نَائِمٌ اَتَانِي رَجُلاَنِ، فَاَخَذَا بَضَبْعَيَّ، فَاَتَيَا بِي جَبَلاً وَعْرًا، فَقَالَ لِي، اِصْعَدْ، فَقُلْتُ: إِنِّي لَا أُطِيْقُهُ، فَقَالَا: إِنَّا سَنُسَهِّلُهُ لَكَ، فَصَعِدْتُ حَتَّى إِذَا كُنْتُ فِي سَوَاءِ الْجَبَلِ، إِذَا بِاَصْوَاتٍ شَدِيْدَةٍ! فَقُلْتُ: مَا هٰذِهِ الْأَصْوَاتُ؟ قَالُوْا هٰذَا عُوَاءُ اَهْلِ النَّارِ، ثُمَّ انْطَلَقَا بِي، فَإِذَا اَنَا بِقَوْمٍ مُعَلَّقِيْنَ بِعَرَاقِيْبِهِمْ، مُشَقَّقَةٌ اَشْدَاقُهُمْ، تَسِيْلُ اَشْدَاقُهُمْ دَمًا! قُلْتُ مَنْ هٰؤُلَاءِ؟ قَالُوا: هٰؤُلَاءِ الَّذِيْنَ يُفْطِرُوْنَ قَبْلَ تَحِلَّةِ صَوْمِهِمْ

ಅಬೂ ಉಮಾಮಾ(ರ) ವರದಿ ಮಾಡಿರುತ್ತಾರೆ. ಪ್ರವಾದಿ(ಸ) ಹೇಳಿರುವರು: ನಾನು ನಿದ್ರಿಸುತ್ತಿದ್ದಾಗ ಇಬ್ಬರು ವ್ಯಕ್ತಿಗಳು ಬಂದು ನನ್ನ ಕೈ ಹಿಡಿದು ಎತ್ತರದ ಒಂದು ಪರ್ವತದ ಬಳಿ ಕರೆದುಕೊಂಡು ಹೋದರು. 'ಮೇಲಕ್ಕೆ ಹತ್ತಿರಿ' ಎಂದು ನನಗೆ ಆದೇಶಿಸಿದರು. ನಾನು ಹೇಳಿದೆ, 'ನನಗೆ ಹತ್ತಲು ಸಾಧ್ಯವಿಲ್ಲ.' ಅವರೆಂದರು, 'ನಾವು ನಿಮಗೆ ಸಹಾಯ ಮಾಡುತ್ತೇವೆ.' ಹೀಗೆ ಪರ್ವತದ ತುದಿಗೆ ತಲುಪಿದಾಗ ಅಲ್ಲಿ ಭಯಾನಕ ಆರ್ತನಾದ ಕೇಳಿಸುತ್ತಿತ್ತು. ನಾನು ಕೇಳಿದೆ, 'ಅದೇನು ಶಬ್ದ?' ಅವರೆಂದರು, 'ನರಕವಾಸಿಗಳ ಚೀತ್ಕಾರವದು.' ಪುನಃ ಮುಂದಕ್ಕೆ ನಡೆದೆವು. ಆಗ ತಲೆ ಕೆಳಗಾಗಿ ತೂಗು ಹಾಕಲ್ಪಟ್ಟ ಕೆಲವು ಜನರನ್ನು ನಾನು ಕಂಡೆ. ಅವರ ಕೆನ್ನೆಗಳು ಹರಿದಿದ್ದುವು. ಬಾಯಿಯ ಅಂಚಿನಿಂದ ರಕ್ತ ಹರಿಯುತ್ತಿತ್ತು. ನಾನು ಕೇಳಿದೆ, 'ಇವರು ಯಾರು?' ಅವರು ಹೇಳಿದರು, 'ಉಪವಾಸ ಪಾರಣೆಗೆ ಸಮಯವಾಗುವುದಕ್ಕೆ ಮುನ್ನವೇ ಉಪವಾಸವನ್ನು ತೊರೆದಂತಹ ಜನರವರು.'*

ಧರ್ಮಸಮ್ಮತ ಕಾರಣವಿಲ್ಲದೆ ಉಪವಾಸವನ್ನು ಆಚರಿಸದವರಿಗೆ ಸಿಗುವ ಕಠಿಣವಾದ ಶಿಕ್ಷೆಯ ಕುರಿತು ಎಚ್ಚರಿಕೆಯನ್ನು ನೀಡುವ ಪ್ರವಾದಿವಚನವಿದು. ರಮಝಾನಿನ ಉಪವಾಸ ವ್ರತವು ಪ್ರಾಯಪ್ರಬುದ್ಧರಾದ ಆರೋಗ್ಯವುಳ್ಳ ಪ್ರತಿಯೊಬ್ಬ ಮುಸ್ಲಿಮನೂ ಕಡ್ಡಾಯವಾಗಿ ಪಾಲಿಸಲೇ ಬೇಕಾದ ಧಾರ್ಮಿಕ ಕರ್ಮಗಳ ಪೈಕಿ ಒಂದಾ ಗಿದೆ. ಧರ್ಮದ ಮಹತ್ವಪೂರ್ಣ ಆರಾಧನಾ ಕರ್ಮ ಮತ್ತು ಇಸ್ಲಾಮಿನ ಪಂಚಸ್ತಂಭ ಗಳಲ್ಲಿ ಒಂದಾಗಿದೆ. ಇದನ್ನು ಪಾಲಿಸಿದವರು ಧರ್ಮವನ್ನು ಪಾಲಿಸಿದಂತೆ. ಇದನ್ನು ತೊರೆದವರು ಧರ್ಮದಿಂದಲೇ ಹೊರ ಹೋಗುತ್ತಾರೆ.

ರಮಝಾನಿನ ಉಪವಾಸ ವ್ರತವನ್ನು ಕಡ್ಡಾಯವಲ್ಲವೆಂದು ನಿಷೇಧಿಸುವುದು, ಸಂಶಯಪಡುವುದು, ಕಡೆಗಣಿಸುವುದು ಇತ್ಯಾದಿಗಳನ್ನು ಮಾಡುವವರು ಸತ್ಯನಿಷೇಧಿಗಳು ಮತ್ತು ಧರ್ಮ ನಿರಪೇಕ್ಷರು ಎಂಬ ವಿಷಯದಲ್ಲಿ ವಿದ್ವಾಂಸರ ಮಧ್ಯೆ ಯಾವುದೇ ಭಿನ್ನಾ ಭಿಪ್ರಾಯವಿಲ್ಲ, ಏಕೆಂದರೆ ಅವರು ಅಲ್ಲಾಹನನ್ನು ಮತ್ತು ಪ್ರವಾದಿಯನ್ನು ನಿಷೇಧಿಸುವವರು. ಅಥವಾ ಇದು ಇಸ್ಲಾಮಿನಿಂದ ಬಹಿರಂಗವಾಗಿ ಹೊರ ಹೋಗುವುದಕ್ಕೆ ಸಮಾನವಾಗಿದೆ. ಪ್ರವಾದಿ(ಸ) ಹೇಳಿರುವರು:

عُرَى الْإِسْلَامِ وَقَوَاعِدُ الدِّيْنِ ثَلَاثَةٌ، عَلَيْهِنَّ أُسِّسَ الْإِسْلَامُ، مَنْ تَرَكَ وَاحِدَةً مِنْهُنَّ فَهُوَ بِهَا
كَافِرٌ حَلَالُ الدَّمِ: شَهَادَةُ أَنْ لَا إِلَاهَ إِلَّا اللهُ، وَالصَّلَاةُ الْمَكْتُوبَةُ، وَصَوْمُ رَمَضَانَ.

ಇಸ್ಲಾಮಿನ ಸಂವಿಧಾನ ಮತ್ತು ಧರ್ಮದ ಅಡಿಪಾಯವು ಮೂರು ವಿಷಯಗಳಾಗಿವೆ. ಅದರ ಮೇಲೆ ಇಸ್ಲಾಮ್ ಸ್ಥಾಪಿಸಲ್ಪಟ್ಟಿದೆ. ಇವುಗಳ ಪೈಕಿ ಯಾವುದನ್ನು ಉಪೇಕ್ಷಿಸಿದರೂ ವ್ಯಕ್ತಿಯು ನಿಷೇಧಿಯಾಗುತ್ತಾನೆ. ಅಂತಹ ವ್ಯಕ್ತಿಯ ರಕ್ತವೂ ಅನುವದನೀಯವಾಗಿಬಿಡುತ್ತದೆ. ಅಲ್ಲಾಹನಲ್ಲದೆ ಅನ್ಯ ಆರಾಧ್ಯರಿಲ್ಲವೆಂದು ಸಾಕ್ಷ್ಯ ವಹಿಸುವುದು, ನಮಾಝ್ ನಿರ್ವಹಿಸುವುದು ಮತ್ತು ರಮಝಾನ್ ತಿಂಗಳ ಉಪವಾಸ ವ್ರತ ಆಚರಿಸುವುದು ಇವುಗಳೇ ಆ ಮೂರು ಕಾರ್ಯಗಳು.[1]

ಪ್ರಜ್ಞಾಪೂರ್ವಕ, ಯಾವುದೇ ಕಾರಣವಿಲ್ಲದೆ ಉಪವಾಸವ್ರತವನ್ನು ಪಾಲಿಸದೆ ಇರುವುದು ಬಹಳ ದೊಡ್ಡ ಪಾಪವಾಗಿದೆ.

---

* ಇಮಾಮ್ ಹಾಕಿಮ್; 1/430, ಇಬ್ನು ಹಿಬ್ಬಾನ್: 7448, ಇಬ್ನು ಖುಝೈಮಾ: 1986 ಮುಂತಾದವರು ಈ ಹದೀಸನ್ನು ಉಲ್ಲೇಖಿಸಿರುವರು. ಇಮಾಮ್ ಮುಸ್ಲಿಮ್‌ರ ಹದೀಸ್ ಸ್ವೀಕಾರಾರ್ಹವಾಗುವ ಮಾನದಂಡಗಳು ಇದರ ಪ್ರಕಾರ ಈ ಹದೀಸ್ ಸಹೀಹ್ ಆಗಿದೆಯೆಮದು ಇಮಾಮ್ ಹಾಕಿಮ್, ದಹಬಿಯವರು ಅಭಿಪ್ರಾಯ ಪಡುತ್ತಾರೆ.

ಅಬೂಹುರೈರಾ(ರ) ವರದಿ ಮಾಡಿರುವ ಪ್ರವಾದಿವಚನದಲ್ಲಿ ಹೀಗಿದೆ:

مَنْ أَفْطَرَ يَوْماً مِنْ رَمَضَانَ فِي غَيْرِ رُخْصَةٍ رَخَّصَهَا اللهُ لَهُ، لَمْ يَقْضِ عَنْهُ صِيَامُ الدَّهْرِ كُلِّهِ وَإِنْ صَامَهُ!

ಅಲ್ಲಾಹನು ನೀಡಿರುವ ವಿಶೇಷ ಅನುಮತಿಯ ಹೊರತಾಗಿ ಬೇರೆ ಯಾರಾದರೂ ರಮಝಾನ್ ತಿಂಗಳ ಒಂದು ದಿನದ ಉಪವಾಸವನ್ನು ತೊರೆದರೆ, ಬಳಿಕ ವರ್ಷಪೂರ್ತಿ ಉಪವಾಸ ಆಚರಿಸಿದರೂ ಅದು ಅದಕ್ಕೆ ಬದಲಿಯಾಗಲಾರದು.[2]

ಇಮಾಮ್ ದಹಬಿ ಹೇಳುತ್ತಾರೆ:

وَعِنْدَ الْمُؤْمِنِينَ مُقَرَّرٌ: أَنَّ مَنْ تَرَكَ الصَّوْمَ رَمَضَانَ بِلاَ مَرَضٍ، أَنَّهُ شَرٌّ مِنَ الزَّانِي وَمُدْمِنُ الْخَمْرِ، بَلْ يَشُكُّونَ فِي إِسْلاَمِهِ وَيَظُنُّونَ بِهِ الزَّنْدَقَةَ وَالْإِنْحِلاَلَ.

ಯಾವುದೇ ಧರ್ಮಸಮ್ಮತ ಕಾರಣವಿಲ್ಲದೆ ಉಪವಾಸವನ್ನು ತೊರೆದರೆ ಅವನು ವ್ಯಭಿಚಾರಿಗಿಂತ, ಮದ್ಯಪಾನಿಗಿಂತ ನೀಚನಾಗಿಬಿಡುವನು ಎಂಬುದು ಸತ್ಯವಿಶ್ವಾಸಿಗಳ ದೃಢವಾದ ಅಭಿಪ್ರಾಯವಾಗಿದೆ. ಅವನು ಇಸ್ಲಾಮಿನಲ್ಲಿದ್ದಾನೋ ಎಂಬುದೇ ಸಂಶಯ. ಅವನು ಅಧರ್ಮಿ ಮತ್ತು ಸ್ವೇಚ್ಛಾಚಾರಿಯಾಗಿರಬಹುದೆಂದು ಅವರು ಭಾವಿಸುತ್ತಾರೆ.[3]

ಆರಂಭದಲ್ಲಿ ಪ್ರಸ್ತಾಪಿಸಿದ ಪ್ರವಾದಿವಚನವು ರಮಝಾನಿನ ಪ್ರಭಾತಗಳಲ್ಲಿ ಉಪವಾಸ ಹಿಡಿದು ಬಳಿಕ ಹಗಲಿನ ವೇಳೆ ಮುಗಿಯುವ ಮೊದಲೇ ಅದನ್ನು ತೊರೆಯುವವರ ಕುರಿತಾಗಿದೆ. ಅಂತ್ಯದಿನದಂದು ಅಂತಹ ವ್ಯಕ್ತಿಗಳು ಕೆನ್ನೆ ಹರಿದು ರಕ್ತ ಹರಿಯುತ್ತಿರುವ ಸ್ಥಿತಿಯಲ್ಲಿ, ತಲೆಕೆಳಗಾಗಿ ತೂಗು ಹಾಕಲಾಗಿರುವ ಸ್ಥಿತಿಯಲ್ಲಿ ಇರುವವರು ಎಂಬುದಾಗಿ ಹದೀಸ್ ನೆನಪಿಸುತ್ತದೆ. ಇವರು ಉಪವಾಸವನ್ನು ಹಿಡಿಯಲು ನಿರಾಕರಿಸಿದವರಲ್ಲ ಎಂಬ ವಿಷಯವು ಗಮನಾರ್ಹವಾಗಿದೆ. ಉಪವಾಸವನ್ನು ಹಿಡಿದು ಅದನ್ನು ಪೂರ್ತಿಗೊಳಿಸದೆ ಬಿಟ್ಟು ಬಿಡುವುದರ ಕುರಿತು ಇಲ್ಲಿ ಹೇಳಲಾಗಿದೆ. ಅರ್ಧದಲ್ಲೇ ಉಪವಾಸವನ್ನು ಮೊಟಕುಗೊಳಿಸುವವರಿಗೆ ಈ ರೀತಿಯ ಶಿಕ್ಷೆ ಇರುವುದಾದರೆ, ರಮಝಾನಿನ ಹಗಲಿನ ವೇಳೆಯಲ್ಲಿ ಅನ್ನ ಪಾನೀಯಗಳನ್ನು ಸೇವಿಸಿ ಅವಮಾನ ಮಾಡುವ ವ್ಯಕ್ತಿಗಳಿಗೆ ಅದೆಷ್ಟು ಭೀಕರ ಶಿಕ್ಷೆ ಕಾದಿರಬಹುದು!

ನಮ್ಮ ಹಿರಿಯರು ರಮಝಾನನ್ನು ಬಹಳ ಗೌರವಿಸುತ್ತಿದ್ದರು. ರಮಝಾನ್ ಅನುಗ್ರಹ ಮತ್ತು ಕರುಣೆಯ ತಿಂಗಳೆಂಬುದನ್ನು ಅರಿತುಕೊಂಡು ಅದರ ಒಳಿತುಗಳನ್ನು ಸಂಗ್ರಹಿಸಲು ಸ್ಪರ್ಧಿಸುತ್ತಿದ್ದರು.

ಒಂದು ಚಾರಿತ್ರಿಕ ಘಟನೆಯನ್ನು ನೋಡಿರಿ-

ಪ್ರಾಯಾಧಿಕ್ಯದ ಬಳಿಕವೂ ಉಪವಾಸವನ್ನು ಆಚರಿಸುತ್ತಿದ್ದ ಅಹ್ನಫ್ ಬಿನ್ ಕೈಸ್‌ರೊಂದಿಗೆ ಒಬ್ಬರು ಪ್ರಶ್ನಿಸಿದರು: إِنَّكَ شَيْخٌ كَبِيرٌ، وَإِنَّ الصِّيَامَ يُضْعِفُكَ ನಿಮಗೆ ತುಂಬಾ ವಯಸ್ಸಾಯಿತು. ಇನ್ನೂ ಉಪವಾಸವನ್ನು ಆಚರಿಸುತ್ತಿದ್ದರೆ, ದೇಹವು ಕ್ಷೀಣಿಸುವುದಿಲ್ಲವೇ? ಆಗ ಅವರು ಈ ರೀತಿ ಉತ್ತರಿಸಿದರು:

أَيْ أَخِي، إِنِّي أُعِدُّهُ لِسَفَرٍ طَوِيلٍ، وَالصَّبْرُ عَلَى طَاعَةِ اللهِ سُبْحَانَهُ أَهْوَنُ مِنَ الصَّبْرِ عَلَى عَذَابِهِ.

ಸಹೋದರಾ, ನಾನು ದೀರ್ಘಕಾಲದಿಂದ ಒಂದು ಯಾತ್ರೆಗೆ ಸಿದ್ಧತೆ ನಡೆಸುತ್ತಿದ್ದೇನೆ. ದೇವನ ಆದೇಶಗಳನ್ನು ಅನುಸರಿಸುವಾಗ ಉಂಟಾಗುವ ಕಷ್ಟಗಳನ್ನು ಸಹಿಸುವುದು ಅವನ ಶಿಕ್ಷೆಯನ್ನು ಸಹಿಸುವುದಕ್ಕಿಂತ ಸುಲಭವಲ್ಲವೇ? ಆದುದರಿಂದ ಪ್ರಯಾಸಪಟ್ಟಾದರೂ ನಾನು ಉಪವಾಸವನ್ನು ಆಚರಿಸುತ್ತೇನೆ.[4]

ಇಮಾಮ್ ತಬ್ರಾನಿ ಉಮ್ಮು ಹಾನಿಯವರಿಂದ ವರದಿ ಮಾಡಿರುವ ಒಂದು ಪ್ರವಾದಿವಚನದಲ್ಲಿ ರಮಝಾನನ್ನು ಬಹಳ ಗೌರವದೊಂದಿಗೆ ಪರಿಗಣಿಸಬೇಕಾದ ಅಗತ್ಯವನ್ನು ಮನವರಿಕೆ ಮಾಡಿಸಲಾಗಿದೆ. ಪ್ರವಾದಿ(ಸ) ಹೇಳಿರುವರು:

قَالَ رَسُولُ اللهِ ﷺ: إِنَّ أُمَّتِي لَنْ يَخْزُوا مَا أَقَامُوا شَهْرَ رَمَضَانَ، قِيلَ: يَا رَسُولَ اللهِ، وَمَا خِزْيُهُمْ فِي إِضَاعَةِ شَهْرِ رَمَضَانَ؟ إِنْتِهَاكُ الْمَحَارِمِ فِيهِ، مَنْ زَنَى فِيهِ أَوْ شَرِبَ فِيهِ خَمْرًا لَعَنَهُ اللهُ وَمَنْ فِي السَّمَاوَاتِ إِلَى مِثْلِهِ مِنَ الْحَوْلِ، فَإِنْ مَاتَ قَبْلَ أَنْ يُدْرِكَهُ رَمَضَانُ فَلَيْسَتْ لَهُ عِنْدَ اللهِ حَسَنَةٌ يَتَّقِي بِهَا النَّارَ، فَاتَّقُوا شَهْرَ رَمَضَانَ، فَإِنَّ الْحَسَنَاتِ تُضَاعَفُ فِيهِ مَا لَا تُضَاعَفُ فِيمَا سِوَاهُ، وَكَذَالِكَ السَّيِّئَاتُ!

ರಮಝಾನನ್ನು ಗೌರವಿಸುವ ಜನರಿರುವ ತನಕ ನನ್ನ ಸಮುದಾಯವು ನಿಂದ್ಯವಾಗಲಾರದು. ಒಬ್ಬರು ಪ್ರಶ್ನಿಸಿದರು: ಅಲ್ಲಾಹನ ಸಂದೇಶವಾಹಕರೇ(ಸ)! ರಮಝಾನನ್ನು ಅಗೌರವಿಸುವುದರಿಂದ ಅವರಿಗೆ ಬರುವ ನಿಂದ್ಯತೆಯು ಯಾವ ರೂಪ ದಲ್ಲಿರುವುದು? ಪ್ರವಾದಿ(ಸ) ಹೇಳಿದರು: ರಮಝಾನಿನಲ್ಲಿ ಅಲ್ಲಾಹನು ನಿಷೇಧಿಸಿದವುಗಳನ್ನು ಒಬ್ಬನು ಮಾಡಿದರೆ, ಅಂದರೆ ಆ ದಿನಗಳಲ್ಲಿ ವ್ಯಭಿಚಾರ ಮಾಡಿದರೆ, ಮದ್ಯ ಪಾನ ಮಾಡಿದರೆ, ಅಲ್ಲಾಹನ ಬಳಿ ಆಕಾಶಲೋಕದಲ್ಲಿರುವ ದೇವಚರರು ವರ್ಷಪೂರ್ತಿ ಆ ವ್ಯಕ್ತಿಗೆ ಶಾಪ ಹಾಕುತ್ತಿರುವರು. ಹೀಗೆ ಇನ್ನೊಂದು

ರಮಝಾನ್ ತಿಂಗಳು ಬರುವುದಕ್ಕೆ ಮೊದಲು ಆ ವ್ಯಕ್ತಿ ನಿಧನ ಹೊಂದಿದರೆ, ನರಕಾಗ್ನಿಯಿಂದ ಅವನನ್ನು ತಡೆಯುವ ಯಾವ ಒಳಿತೂ ಅವನ ಬಳಿ ಇರುವುದಿಲ್ಲ. ಆದುದರಿಂದ ನೀವು ರಮಝಾನನ್ನು ಜಾಗರೂಕತೆಯಿಂದ ಪಾಲಿಸಿರಿ. ನಿಶ್ಚಯ ವಾಗಿಯೂ ಆ ತಿಂಗಳಲ್ಲಿ ಪ್ರತಿಯೊಂದು ಒಳಿತಿಗೂ ಬೇರಾವ ತಿಂಗಳಲ್ಲೂ ಸಿಗದಂತಹ ಇಮ್ಮಡಿ ಪ್ರತಿಫಲ ಸಿಗುತ್ತಿರುವುದು. ಕೆಡುಕುಗಳ ವಿಷಯವೂ ಇದೇ ರೀತಿಯಾಗಿದೆ.[5]

---

1. ಅಬೂ ಯಅ್‌ಲಾ – ಮುಸ್ನದ್: 2345, ಮುಂದಿರಿ ಅತ್ತರ್ಗೀಬ್ ವತ್ತರ್ಹೀಬ್: 1/379, ಹೈತಮಿ ಮಜ್ಮಉಸ್ಸವಾಇದ್: 1/47.

2. ತಿರ್ಮಿದಿ: 723, ಅಬುದಾವೂದ್: 2396, ಇಬ್ನುಮಾಜ: 1672, ಇಬ್ನು ಖುಝೈಮಾ: 1987, ಬೈಹಕಿ – ಶುಅ್‌ಬುಲ್ ಈಮಾನ್: 3654.

3. ಫಿಕ್ಹುಸ್ಸುನ್ನ, ಭಾಗ: 1, ಪುಟ: 502.

4. ಇಹ್ಯಾಉ ಉಲೂಮುದ್ದೀನ್, ಭಾಗ: 1, ಪುಟ: 236.

5. ತಬ್ರಾನಿ – ಸಗೀರ್, ಔಸಾತ್, ಹೈತಮಿ – ಮಜ್ಮಉಸ್ಸವಾಇದ್, ಭಾಗ: 3, ಪುಟ: 144.

21. ಕುರ್‌ಆನ್ ಪಾರಾಯಣ ಮತ್ತು ಪ್ರತಿಫಲ

عَنْ بُرَيْدَةَ رَضِيَ اللَّهُ عَنْهُ قَالَ: قَالَ رَسُولُ اللَّهِ ﷺ: مَنْ قَرَأَ الْقُرْآنَ وَتَعَلَّمَهُ وَعَمِلَ بِهِ، أُلْبِسَ يَوْمَ الْقِيَامَةِ تَاجًا مِنْ نُورٍ، ضَوْؤُهُ مِثْلَ ضَوْءِ الشَّمْسِ، وَيُكْسَى وَالِدَيْهِ حُلَّتَانِ لَا يُقَوَّمُ بِهِمَا الدُّنْيَا، فَيَقُولَانِ: بِمَ كُسِينَا هٰذَا؟ فَيُقَالُ: بِأَخْذِ وَلَدِكُمَا الْقُرْآنَ

ಬುರೈದಾ(ರ)ರಿಂದ ವರದಿ. ಪ್ರವಾದಿ(ಸ) ಹೇಳಿರುವರು: ಒಬ್ಬನು ಕುರ್‌ಆನ್ ಪಾರಾಯಣ ಮಾಡುತ್ತಾನೆ, ಕಲಿಯುತ್ತಾನೆ ಮತ್ತು ಅದರ ಪ್ರಕಾರ ಜೀವಿಸುತ್ತಾನೆ ಎಂದಾದರೆ, ಅಂತ್ಯದಿನದಂದು ಸೂರ್ಯನಂತೆ ಬೆಳಗುವ ಒಂದು ಕಿರೀಟವು ಅವನ ಶಿರವನ್ನು ಅಲಂಕರಿಸುತ್ತದೆ. ಅವನ ಹೆತ್ತವರಿಗೆ ಎರಡು ಜೋಡಿ ವಸ್ತ್ರಗಳನ್ನು ಉಡಿಸಲಾಗುತ್ತದೆ. ಇಡೀ ಇಹಲೋಕವನ್ನು ಒಟ್ಟುಗೂಡಿಸಿದರೂ ಅದಕ್ಕೆ ಬದಲಿಯಾಗಲಾರದು. ಆಗ ಅವರು: ನಮಗೆ ಯಾವ ಕಾರಣಕ್ಕಾಗಿ ಈ ವಸ್ತ್ರಗಳನ್ನು ಉಡಿಸಲಾಗಿದೆ? ಎಂದು ಕೇಳುವರು. ನಿಮ್ಮ ಮಕ್ಕಳು ಕುರ್‌ಆನ್ ಕಲಿತ ಕಾರಣಕ್ಕಾಗಿ... ಎಂದು ಅವರಿಗೆ ಉತ್ತರಿಸಲಾಗುವುದು.*

ಕುರ್‌ಆನ್ ಓದಲು ಕಲಿತ ಮತ್ತು ಅದರ ಪ್ರಕಾರ ಜೀವನವನ್ನು ಸಾಗಿಸಿದ ಸಚ್ಚಾರಿತ್ರ್ಯವಂತ ದೇವದಾಸರಿಗೆ ಅಂತ್ಯದಿನದಂದು ಸಿಗಲಿರುವ ಪ್ರತಿಫಲದ ಕುರಿತು ಈ ಪ್ರವಾದಿವಚನದಲ್ಲಿ ಪ್ರಸ್ತಾಪಿಸಲಾಗಿದೆ. ಕುರ್‌ಆನ್ ಇತರ ಗ್ರಂಥಗಳಂತಹ ಒಂದು

* ಇಮಾಮ್ ಹಾಕಿಮ್: 1/568, ಇಬ್ನುಮಾಜ: 3181, ಅಹ್ಮದ್: 5/348 ಮುಂತಾದವರು ಕೇವಲ ಪದಗಳ ವ್ಯತ್ಯಾಸದೊಂದಿಗೆ ಈ ವಚನವನ್ನು ಉಲ್ಲೇಖಿಸಿರುವರು. ಇಮಾಮ್ ಮುಸ್ಲಿಮ್‌ರವರ ಹದೀಸ್ ಸ್ವೀಕಾರಾರ್ಹವಾಗುವ ಮಾನದಂಡಗಳು ಇದರ ಪ್ರಕಾರ ಈ ಹದೀಸ್ ಸಹೀಹ್ ಆಗಿದೆಯೆಂದು ಹಾಕಿ, ದಹಬಿ ಮುಂತಾದವರು ಅಭಿಪ್ರಾಯಪಡುತ್ತಾರೆ.

ಗ್ರಂಥವಲ್ಲ, ಮನುಷ್ಯರ ಮಾರ್ಗದರ್ಶನಕ್ಕಾಗಿ ಪ್ರಪಂಚದ ಸೃಷ್ಟಿಕರ್ತನಾದ ದೇವನು ಅರಿಸಿಕೊಂಡ ದಿವ್ಯ ಬೋಧನೆಗಳ ಸಮಾಹಾರವದು. ದಿವ್ಯಗ್ರಂಥ (كِتَابُ اللهِ) ಎಂಬುದು ಪವಿತ್ರ ಕುರ್‌ಆನಿನ ಮಹತ್ವ ಮತ್ತು ವಿಶೇಷತೆಯಾಗಿದೆ. ಮನುಷ್ಯರಿಗೆ ಸನ್ಮಾರ್ಗ ತೋರಿಸುವ ಗ್ರಂಥ (هُدًى لِلنَّاسِ), ಪ್ರಕಾಶ (نُورٌ), ಉಪದೇಶ (ذِكْرٌ), ಆತ್ಮ (رُوحٌ) , ಸತ್ಯಾಸತ್ಯ ವಿವೇಚಕ (فُرْقَانٌ) ಈ ರೀತಿ ಹಲವು ಹೆಸರುಗಳ ಮೂಲಕ ಪವಿತ್ರ ಕುರ್‌ಆನ್ ತನ್ನನ್ನು ಸ್ವತಃ ಪರಿಚಯಿಸುತ್ತದೆ.

ಕುರ್‌ಆನಿನ ಶ್ರೇಷ್ಠತೆ, ಗಾಂಭೀರ್ಯ ಇತ್ಯಾದಿಗಳ ಕುರಿತು ಅಲ್ಲಾಹನು ಈ ರೀತಿ ಹೇಳಿರುವನು: ನಾವು ಈ ಕುರ್‌ಆನನ್ನು ಒಂದು ಪರ್ವತದ ಮೇಲೆ ಇಳಿಸಿ ಬಿಡುತ್ತಿದ್ದರೆ, ಅದು ಅಲ್ಲಾಹನ ಭಯದಿಂದ ಮುದುಡಿ ನುಚ್ಚುನೂರಾಗುವುದನ್ನು ನೀವು ಕಾಣುತ್ತಿದ್ದಿರಿ. ಜನರು (ತಮ್ಮ ಅವಸ್ಥೆಯ ಕುರಿತು) ಚಿಂತಿಸಲೆಂದು ನಾವು ಅವರ ಮುಂದೆ ಈ ಉಪಮೆಗಳನ್ನು ವಿವರಿಸುತ್ತೇವೆ. (ಅಲ್ ಹಶ್ರ್: 24)

ಅಲ್ಲಾಹನ ವಚನಗಳನ್ನು ಅದು ಬಯಸುವ ಅರ್ಹವಾದ ಗೌರವದೊಂದಿಗೆ ಸ್ವೀಕರಿಸುವುದು ಮತ್ತು ಪರಿಗಣಿಸುವುದು ಕುರ್‌ಆನಿನೊಂದಿಗೆ ಸತ್ಯವಿಶ್ವಾಸಿಗಳ ಪ್ರಾಥಮಿಕ ಕರ್ತವ್ಯವಾಗಿರುತ್ತದೆ. ಕುರ್‌ಆನಿನ ಪಠಣ ಮತ್ತು ಪಾರಾಯಣವು ಪ್ರತಿಫಲಾರ್ಹವಾದ ಪುಣ್ಯ ಕರ್ಮವೆಂದು ಪರಿಗಣಿಸಲ್ಪಟ್ಟಿರುವುದು ಈ ಕಾರಣ ದಿಂದಾಗಿದೆ. ಪ್ರವಾದಿ(ಸ) ಈ ರೀತಿ ಹೇಳಿರುವರು: خَيْرُكُمْ مَنْ تَعَلَّمَ الْقُرْآنَ وَعَلَّمَهُ ನಿಮ್ಮ ಪೈಕಿ ಅತ್ಯುತ್ತಮರು ಕುರ್‌ಆನ್ ಕಲಿಯುವವರು ಮತ್ತು ಕಲಿಸುವವರಾಗಿ ರುವರು.[1] ಅಬೂ ಹುರೈರಾ(ರ) ವರದಿ ಮಾಡಿರುವ ಪ್ರವಾದಿವಚನದಲ್ಲಿ ಹೀಗಿದೆ:

مَا اجْتَمَعَ قَوْمٌ فِي بَيْتٍ مِنْ بُيُوتِ اللهِ يَتْلُونَ كِتَابَ اللهِ وَيَتَدَارَسُونَهُ بَيْنَهُمْ إِلَّا نَزَلَتْ عَلَيْهِمُ السَّكِينَةُ، وَغَشِيَتْهُمُ الرَّحْمَةُ، وَحَفَّتْهُمُ الْمَلَائِكَةُ، وَذَكَرَهُمُ اللهُ فِيمَنْ عِنْدَهُ

ಯಾರಾದರೂ ಅಲ್ಲಾಹನ ಭವನ(ಮಸೀದಿ)ಗಳ ಪೈಕಿ ಯಾವುದಾದರೂ ಒಂದರಲ್ಲಿ ಒಟ್ಟು ಸೇರಿ ದೇವಗ್ರಂಥದ ಪಾರಾಯಣ ಮಾಡಿ, ಅದರ ಬಗ್ಗೆ ಚರ್ಚೆ ಮಾಡಿ ಕಲಿತರೆ, ಅವರ ಮೇಲೆ ಅಲ್ಲಾಹನ ಶಾಂತಿ ವರ್ಷಿಸುವುದು. ದೇವನ ಕರುಣೆಯು ಅವರನ್ನು ಆಚ್ಛಾದಿಸುವುದು. ದೇವಚರರು ಅವರನ್ನು ಸುತ್ತುವರಿ ಯುವರು. ಅಲ್ಲಾಹನು ತನ್ನ ಸಮೀಪವರ್ತಿಗಳೊಂದಿಗೆ ಅವರ ಬಗ್ಗೆ ಪ್ರಸ್ತಾಪಿಸು ವನು.[2] ಕುರ್‌ಆನ್ ಪಾರಾಯಣ ನಡೆಯುವ ಮನೆಗಳಲ್ಲಿ ಅಲ್ಲಾಹನ ಅನುಗ್ರಹವು

ತುಂಬುವುದು ಮತ್ತು ಶೈತಾನರು ಅಲ್ಲಿಂದ ಓಟ ಕೀಳುವರು ಎಂಬುದಾಗಿ ಬುಖಾರಿ ಮತ್ತು ಮುಸ್ಲಿಮ್‌ಗಳಲ್ಲಿ ಉದ್ಧರಿಸಿದ ಹದೀಸ್‌ಗಳಲ್ಲಿ ಕಾಣಬಹುದಾಗಿದೆ.

ಕುರ್‌ಆನ್ ಪಾರಾಯಣ ಮಾಡಿದಂತೆಯೇ ಬಹಳ ಮಹತ್ವವುಳ್ಳ ಇನ್ನೊಂದು ವಿಷಯ ಕುರ್‌ಆನ್ ಕಂಠಪಾಠ ಮಾಡುವುದಾಗಿದೆ. ಹೃದಯದಲ್ಲಿ ಕುರ್‌ಆನಿನ ಸ್ವಲ್ಪಂಶವೂ ಇಲ್ಲದವರ ಹೃದಯವನ್ನು ಜನವಾಸವಿಲ್ಲದ ಪಾಳುಬಿದ್ದ ಮನೆಗಳಿಗೆ ಅಲ್ಲಾಹನ ಪ್ರವಾದಿಯವರು(ಸ) ಹೋಲಿಸಿದ್ದಾರೆ. ಪ್ರವಾದಿ(ಸ) ಹೇಳಿರುವರು:

إِنَّ الَّذِي لَيْسَ فِي جَوْفِهِ شَيْءٌ مِنَ الْقُرْآنِ كَالْبَيْتِ الْخَرِبِ

ಕುರ್‌ಆನಿನ ಅಲ್ಪಂಶವೂ ಹೃದಯದಲ್ಲಿ ಇಲ್ಲದಂತಹ ವ್ಯಕ್ತಿಗಳು ಪಾಳುಬಿದ್ದ ಭವನಗಳಂತಾಗಿದ್ದಾರೆ.[3] ಅಂತಹ ಮನೆಗಳಲ್ಲಿ ಜೇಡರ ಬಲೆ, ವಿಷಜಂತುಗಳ, ಉಪದ್ರವಕಾರಿಯಾದ ಮತ್ತಿತರ ಜೀವಿಗಳು ಗೂಡುಕಟ್ಟಿ ವಾಸಿಸಲಾರಂಭಿಸುತ್ತವೆ. ಕುರ್‌ಆನ್ ಹೃದಯದಲ್ಲಿ ಇಲ್ಲದೆ ಹೋದರೆ, ಕೆಡುಕುಗಳು ಮತ್ತು ಪೈಶಾಚಿಕತೆಯ ವಿಷಜಂತುಗಳು ತುಂಬಿ ಕೆಡುಕುಗಳು ಆಳವಾಗಿ ಬೇರೂರಿ ಬಿಡಬಹುದೆಂದು ಪ್ರವಾದಿ(ಸ) ಎಚ್ಚರಿಸಿರುವರು.

قَالَ رَسُوْلُ اللّٰهِ ﷺ: إِنَّ لِلّٰهِ أَهْلِيْنَ مِنَ النَّاسِ، قَالُوْا: مَنْ هُمْ يَا رَسُوْلَ اللّٰهِ؟

قَالَ: أَهْلُ الْقُرْآنِ، هُمْ أَهْلُ اللّٰهِ وَخَاصَّتُهُ

ಪ್ರವಾದಿ(ಸ) ಹೇಳಿರುವರು: ಜನರ ಪೈಕಿ ಅಲ್ಲಾಹನ ಪ್ರೀತಿಗೆ ಪಾತ್ರರಾದ ಕೆಲವ ರಿದ್ದಾರೆ. ಸಹಾಬಿಗಳು ಪ್ರಶ್ನಿಸಿದರು: ಅವರು ಯಾರು? ಪ್ರವಾದಿ(ಸ) ಉತ್ತರಿಸಿದರು: ಕುರ್‌ಆನಿನ ಜನರು, ಅವರು ಅಲ್ಲಾಹನ ವಿಶೇಷ ಪ್ರೀತಿಗೆ ಪಾತ್ರರಾಗುವರು.[4]

ಕುರ್‌ಆನ್ ಪಾರಾಯಣಗಳಿಗೆ ಸಿದ್ಧರಾಗುವವರು ಕುರ್‌ಆನ್ ಕೇವಲ ಓದಲಿಕ್ಕಿರುವ ಗ್ರಂಥವಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಜೀವನವನ್ನು ಆಮೂಲಾಗ್ರವಾಗಿ ಬದಲಾಯಿಸುವುದು ಕುರ್‌ಆನಿನ ಅವತೀರ್ಣದ ಹಿಂದಿರುವ ಉದ್ದೇಶವಾಗಿದೆ. ಇದರ ವಚನಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುತ್ತೇನೆಂಬ ಉದ್ದೇಶದೊಂದಿಗೆ ಅದನ್ನು ಪಾರಾಯಣ ಮಾಡಬೇಕು. ಅಬ್ದುಲ್ಲಾ ಬಿನ್ ಮಸ್‌ಊದ್(ರ) ಹೇಳುತ್ತಾರೆ:

كُنَّا إِذَا تَعَلَّمْنَا مِنَ النَّبِيِّ عَشَرَ آيَاتٍ مِنَ الْقُرْآنِ، لَمْ نَتَعَلَّمْ مِنَ الْعَشْرِ الَّتِي نَزَلَتْ بَعْدَهَا حَتَّى نَعْلَمَ مَا فِيهِ مِنَ الْعَمَلِ

ಪ್ರವಾದಿಯವರಿಂದ(ಸ) ನಾವು ಹತ್ತು ವಚನಗಳನ್ನು ಕಲಿತರೆ, ಅದರಲ್ಲಿ ನಾವು ಮಾಡಬೇಕಾದ ಕೆಲಸಗಳೇನು ಎಂಬುದನ್ನು ಅರ್ಥ ಮಾಡಿಕೊಳ್ಳದೆ ಮುಂದಿನ ಹತ್ತು ವಚನಗಳನ್ನು ಕಲಿಯುತ್ತಿರಲಿಲ್ಲ.[5] ಇನ್ನೊಂದು ಸಂದರ್ಭದಲ್ಲಿ ಅವರು ಹೀಗೆ ಹೇಳಿರುವರು:

أُنْـزِلَ الْـقُرْآنُ عَلَيْهِمْ لِيَعْمَلُوْا بِهِ، فَاتَّخَذُوا دِرَاسَتَهُ عَمَلًا، إِنَّ أَحَدَكُمْ لَيَقْرَأُ الْقُرْآنَ

مِنْ فَاتِحَتِهِ إِلَى خَاتِمَتِهِ، مَا يُسْقِطُ مِنْهُ حَرْفًا، وَقَدْ أَسْقَطَ الْعَمَلَ بِهِ!

ಪವಿತ್ರ ಕುರ್‌ಆನ್ ಅವತೀರ್ಣವಾದುದು ಜನರು ಅದನ್ನು ಅನುಸರಿಸಿ ಜೀವಿಸಲಿಕ್ಕಾಗಿರುತ್ತದೆ. ಆದರೆ ಜನರು ಅದನ್ನು ಓದುವುದನ್ನೇ ಒಂದು ಉದ್ಯೋಗವನ್ನಾಗಿ ಮಾಡಿಕೊಂಡಿರುವರು. ನಿಮ್ಮ ಪೈಕಿ ಒಬ್ಬರು ಕುರ್‌ಆನಿನ ಆರಂಭದಿಂದ ಕೊನೆಯ ವರೆಗೆ ಒಂದಕ್ಷರವೂ ಬಿಟ್ಟು ಹೋಗದಂತೆ ಸಂಪೂರ್ಣವಾಗಿ ಓದಿ ಮುಗಿಸುವರು. ಆದರೆ ಅದನ್ನು ಅನುಸರಿಸಿ ಮಾಡಬೇಕಾದ ಕೆಲಸಗಳನ್ನು ಆ ವ್ಯಕ್ತಿ ನಿರ್ಲಕ್ಷಿಸುವರು.[6]

ಕುರ್‌ಆನ್ ಕಲಿಯುವುದು, ಅದರಂತೆ ಜೀವಿಸುವುದು, ಅದಕ್ಕೆ ಅಗತ್ಯವಾದ ವ್ಯವಸ್ಥೆಗಳನ್ನು ನಿರ್ಮಿಸಿಕೊಳ್ಳುವುದು ಹೀಗೆ ಮಾಡಿದ ವ್ಯಕ್ತಿಗಳಿಗೆ ಅಂತ್ಯದಿನದಂದು ಅಲ್ಲಾಹನ ಶ್ರೇಷ್ಠ ಪ್ರತಿಫಲ ಲಭಿಸುವುದು. ಸೂರ್ಯನಂತೆ ಪ್ರಕಾಶಿಸುವ ಒಂದು ಕಿರೀಟವನ್ನು ಅವರಿಗೆ ತೊಡಿಸಲಾಗುವುದೆಂದು ಆರಂಭದಲ್ಲಿ ಪ್ರಸ್ತಾಪಿಸಲಾದ ಹದೀಸ್‌ನಲ್ಲಿ ಹೇಳಲಾಗಿದೆ. ಭೂಮಿಯಲ್ಲಿ ಪ್ರಕಾಶವನ್ನು ಹರಡಿ ಜೀವಿಸಿದ ಕುರ್‌ಆನ್‌ನ ಅನುಯಾಯಿಗಳಿಗೆ ಪರಲೋಕದಲ್ಲಿ ಸಿಗಲಿರುವ ಅರ್ಹವಾದ ಪ್ರತಿಫಲವಿದು. ಅವರಿಗೆ ಮಾತ್ರವಲ್ಲ, ಅವರಿಗೆ ಕುರ್‌ಆನ್ ಕಲಿಯಲು ವ್ಯವಸ್ಥೆ ಮಾಡಿಕೊಟ್ಟ ಹೆತ್ತವರಿಗೂ ರಕ್ಷಕರಿಗೂ ಅಂತ್ಯ ದಿನದಂದು ಅಲ್ಲಾಹನ ಪ್ರತ್ಯೇಕ ಪರಿಗಣನೆ ಮತ್ತು ಕಾರುಣ್ಯವು ಲಭಿಸುವುದು. ಮಕ್ಕಳ ಜನನಕ್ಕೆ ಮತ್ತು ಅವರು ಶಿಕ್ಷಣ ಗಳಿಸುವುದಕ್ಕೆ ಹೆತ್ತವರು ಕಾರಣಕರ್ತರಾಗಿರುವುದರಿಂದ ಅವರಿಗೆ ಈ ಗೌರವ ಸಲ್ಲುತ್ತದೆ. ಅನಸ್ ಬಿನ್ ಮಾಲಿಕ್(ರ) ಹೇಳುತ್ತಾರೆ. ಪ್ರವಾದಿ(ಸ) ಹೇಳಿರುವರು:

مَنْ عَلَّمَ ابْنَهُ الْقُرْآنَ نَظَرًا غُفِرَ لَهُ مَا تَقَدَّمَ مِنْ ذَنْبِهِ وَمَا تَأَخَّرَ، وَمَنْ عَلَّمَهُ إِيَّاهُ ظَاهِرًا بَعَثَهُ اللهُ يَوْمَ الْقِيَامَةِ عَلَى صُوْرَةِ الْقَمَرِ لَيْلَةَ الْبَدْرِ وَيُقَالُ لِابْنِهِ: اِقْرَأْ، فَكُلَّمَا قَرَأَ آيَةً رَفَعَ اللهُ عَزَّ وَجَلَّ الْأَبَ بِهَا دَرَجَةً، حَتَّى يَنْتَهِيَ إِلَى آخِرِ مَا مَعَهُ مِنَ الْقُرْآنِ

ಒಬ್ಬನು ತನ್ನ ಮಗುವಿಗೆ ಕುರ್‌ಆನನ್ನು ನೋಡಿ ಓದಲು ಕಲಿಸಿದರೆ, ಅವನ

ಕಳೆದು ಹೋದ ಮತ್ತು ಬರಲಿರುವ ಸಕಲ ಪಾಪಗಳು ಕ್ಷಮಿಸಲ್ಪಡುವುದು. ಇನ್ನು ವ್ಯಕ್ತಿ ತನ್ನ ಮಗುವಿಗೆ ಕುರ್‌ಆನನ್ನು ಕಂಠಪಾಟ ಮಾಡಿಸಿದರೆ ಹದಿನಾಲ್ಕನೆಯ ರಾತ್ರಿಯ ಚಂದಿರನಂತೆ ಅಲ್ಲಾಹನು ಅವನನ್ನು ಪ್ರಕಾಶಮಯಗೊಳಿಸುವನು. ಅವನ ಮಗನೊಂದಿಗೆ ಹೀಗೆ ಹೇಳಲಾಗುವುದು: ಕುರ್‌ಆನ್ ಪಾರಾಯಣ ಮಾಡು. ನೀನು ಓದುವ ಒಂದೊಂದು ವಚನವನ್ನು ಅನುಸರಿಸಿ, ನಿನ್ನ ತಂದೆಯ ಪದವಿಯನ್ನು ಅಲ್ಲಾಹನು ಉನ್ನತಿಗೇರಿಸುವನು. ಹೀಗೆ ಅವನು ಸಂಪೂರ್ಣ ಕುರ್‌ಆನನ್ನು ಓದಿ ಮುಗಿಸುವ ವರೆಗೆ ಈ ಪ್ರಕ್ರಿಯೆ ಮುಂದುವರಿಯುವುದು.[7]

---

1. ಬುಖಾರಿ: 5027, ಅಬೂದಾವೂದ್: 1452, ತಿರ್ಮಿದಿ: 2908, ಇಬ್ನುಮಾಜ: 211.
2. ಮುಸ್ಲಿಮ್: 2639, ಅಬೂದಾವೂದ: 1455, ತಿರ್ಮಿದಿ: 2945, ಇಬ್ನುಮಾಜ: 225.
3. ತಿರ್ಮಿದಿ: 2913, ಹಾಕಿಮ್: 1/554.
4. ನಸಾಈ – ಕುಬ್ರಾ: 8031, ಇಬ್ನುಮಾಜ: 215, ಹಾಕಿಮ್: 1/556.
5. ಬೈಹಕಿ – ಸುನನ್ ಕುಬ್ರಾ: 3/170.
6. ಇಹ್ಯಾಉ ಉಲೂಮುದ್ದೀನ್, ಭಾಗ: 1, ಪುಟ: 275.
7. ತಬ್ರಾನಿ – ಔಸಾತ್, ಹೈತಮಿ ಮಜ್ಮಉಸ್ಸವಾಇದ್, ಭಾಗ: 7, ಪುಟ: 165.

22. ತಿರಸ್ಕರಿಸಲ್ಪಡದ ಪ್ರಾರ್ಥನೆಗಳು

عَنْ أَبِي هُرَيْرَةَ رَضِيَ اللّٰهُ عَنْهُ قَالَ: قَالَ رَسُوْلُ اللّٰهِ ﷺ: ثَلاثَةٌ لا تُرَدُّ دَعْوَتُهُمْ: اَلصَّائِمُ حَتَّى يُفْطِرَ، وَالْإِمَامُ الْعَادِلُ، وَدَعْوَةُ الْمَظْلُوْمِ يَرْفَعُهَا اللّٰهُ فَوْقَ الْغَمَامِ وَ يَفْتَحُ لَهَا أَبْوَابَ السَّمَاءِ، وَيَقُوْلُ الرَّبُّ: وَعِزَّتِي: لأَنْصُرَنَّكَ وَلَوْ بَعْدَ حِيْنٍ

ಅಬೂ ಹುರೈರಾ(ರ)ರಿಂದ ವರದಿ. ಪ್ರವಾದಿಯವರು(ಸ) ಹೇಳಿರುವರು: ಮೂವರ ಪ್ರಾರ್ಥನೆ ತಿರಸ್ಕರಿಸಲ್ಪಡುವುದಿಲ್ಲ. ಉಪವಾಸಿಗನು ಉಪವಾಸ ಪಾರಣೆ ಮಾಡುವ ವರೆಗೆ, ನ್ಯಾಯ ಪಾಲಿಸುವ ಆಡಳಿತಗಾರನ ಪ್ರಾರ್ಥನೆ, ಮರ್ದಿತನ ಪ್ರಾರ್ಥನೆ. ಮೋಡಗಳ ಮೇಲೆ ಅಲ್ಲಾಹನು ಅವುಗಳನ್ನು ಎತ್ತರಕ್ಕೆ ಕರೆದೊಯ್ಯುವನು. ಆಕಾಶದ ದ್ವಾರಗಳು ಅವುಗಳಿಗಾಗಿ ತೆರೆಯಲ್ಪಡುವುದು. ಆಗ ಅಲ್ಲಾಹನು, 'ನನ್ನಾಣೆ, ನಾನು ನಿಮಗೆ ಖಂಡಿತ ಸಹಾಯ ಮಾಡುವೆನು, ಸ್ವಲ್ಪ ವಿಳಂಬವಾದರೂ ಸರಿ' ಎಂದು ಹೇಳುವನು.

ಪ್ರಾರ್ಥನೆ ಎಂಬುದು ಮನುಷ್ಯ ಮತ್ತು ಅಲ್ಲಾಹನ ಮಧ್ಯೆ ಇರುವ ಸಂಬಂಧದ ಉದಾತ್ತವಾದ ದಾರಿಯಾಗಿದೆ. ಇದು ದಾಸನನ್ನು ಅವನ ಸೃಷ್ಟಿಕರ್ತನೊಂದಿಗೆ ಜೋಡಿಸುವ ಬಲಿಷ್ಠವಾದ ಪಾಶವಾಗಿದೆ. ಅದರ ಜೊತೆಗೆ ಪ್ರಾರ್ಥನೆ ಎಂಬುದು ಅಲ್ಲಾಹನಿಗಾಗಿರುವ ಆರಾಧನೆ ಮತ್ತು ಬಹಳ ಮಹತ್ವವಿರುವ ಪುಣ್ಯ ಕೆಲಸವಾಗಿದೆ.

ಮೇಲೆ ಪ್ರಸ್ತಾಪಿಸಲಾಗಿರುವ ಪ್ರವಾದಿವಚನದಲ್ಲಿ ಪ್ರಾರ್ಥನೆಗಳು ಖಂಡಿತ

* ಇಮಾಮ್ ತಿರ್ಮಿದಿ: 3598, ಅಹ್ಮದ್: 2/445, ಇಬ್ನು ಖುಝೈಮಾ: 1901, ಇಬ್ನು ಹಿಬ್ಬಾನ್: 3419 ಮುಂತಾದವರು ಈ ಪ್ರವಾದಿವಚನವನ್ನು ಉಲ್ಲೇಖಿಸಿರುವರು. ಈ ಪ್ರವಾದಿವಚನವು ಪ್ರಬಲವಾಗಿದೆ ಎಂದು ಇಮಾಮ್ ತಿರ್ಮಿದಿ ಸಾಕ್ಷ್ಯ ನುಡಿದಿದ್ದಾರೆ. (ಸುನನುತ್ತಿರ್ಮಿದಿ, ಭಾಗ: 5, ಪುಟ: 578)

ವಾಗಿಯೂ ಸ್ವೀಕರಿಸಲ್ಪಡುವ ಮೂರು ವಿಭಾಗಗಳ ಕುರಿತು ಬೆಳಕು ಚೆಲ್ಲುತ್ತದೆ. ಉಪವಾಸಿಗ ಈ ಪೈಕಿ ಮೊದಲಿಗ. ಅಲ್ಲಾಹನ ಪ್ರೀತಿ ಮತ್ತು ಕರುಣೆಯನ್ನು ನಿರೀಕ್ಷಿಸಿ, ಅವನ ಆದೇಶ ಪ್ರಕಾರ ನಿರ್ವಹಿಸುವ ಬಹಳ ಶ್ರೇಷ್ಠವಾದ ಆರಾಧನೆಯಾಗಿದೆ ಉಪವಾಸ. ಉಪವಾಸಿಗ ಲೌಕಿಕ ಬೇಡಿಕೆಗಳಿಂದ, ಚಾಪಲ್ಯಗಳಿಂದ ತನ್ನ ಆತ್ಮ ಮತ್ತು ಶರೀರವನ್ನು ಶುದ್ಧೀಕರಿಸಲು ಪ್ರತಿಜ್ಞೆ ಕೈಗೊಂಡವನಾಗಿರುವನು. ದೇವನ ಸಂಪ್ರೀತಿ ಗಾಗಿ ಅನ್ನಪಾನೀಯ ಮತ್ತು ದೇಹೇಚ್ಛೆಗಳನ್ನು ತೊರೆಯಲು ಸಿದ್ಧನಾಗಿರುವವ ನಾಗಿದ್ದಾನೆ. ಇಷ್ಟು ಮಾತ್ರವಲ್ಲ, ಶರೀರದ ಎಲ್ಲ ಅಂಗಾಂಗಗಳನ್ನು ಸೃಷ್ಟಿಕರ್ತನ ಆದೇಶದ ಪ್ರಕಾರ ಕ್ರಮಬದ್ಧಗೊಳಿಸಲು ಪ್ರತಿಕ್ಷಣವೂ ಪರಿಶ್ರಮ ಪಡುತ್ತಿರುವವನು. ಒಂದು ಅಸಭ್ಯ ಮಾತು ಕೂಡ ಉಪವಾಸಿಗನಿಂದ ಹೊರಡಲಾರದು. ಅಲ್ಲಾಹನನ್ನು ಸ್ಮರಿಸುತ್ತಾ ಅವನ ಆದೇಶಗಳ ಪ್ರಕಾರ ಜೀವನವನ್ನು ರೂಪಿಸುವ ಅವನು, ಸೃಷ್ಟಿ ಗಳಲ್ಲೇ ಶ್ರೇಷ್ಠರಾದ ದೇವಚರರಂತಾಗುವನು. ಆದುದರಿಂದ ಅಲ್ಲಾಹನು ಉಪವಾಸಿ ಗನಿಗೆ ಪ್ರತ್ಯೇಕ ಪರಿಗಣನೆ ನೀಡಿರುವನು ಮತ್ತು ಅವನ ಪ್ರಾರ್ಥನೆಗೆ ಉತ್ತರ ನೀಡುವನು. ಪ್ರವಾದಿ(ಸ) ಹೇಳಿರುವರು:

نَوْمُ الصَّائِمِ عِبَادَةٌ، وَصُمْتُهُ تَسْبِيحٌ، وَعَمَلُهُ مُضَاعَفٌ، وَدُعَاءُهُ مُسْتَجَابٌ، وَذَنْبُهُ مَغْفُورٌ

ಉಪವಾಸಿಗನ ನಿದ್ರೆಯೂ ದೇವನ ಆರಾಧನೆಯಾಗಿದೆ. ಅವನ ಮೌನವು ದೇವ ಸ್ಮರಣೆಯಾಗಿದೆ. ಅವನ ಪ್ರತಿಯೊಂದು ಕರ್ಮಕ್ಕೆ ಎರಡು ಪಟ್ಟು ಅಧಿಕ ಪ್ರತಿಫಲ ಲಭಿಸುವುದು. ಪ್ರಾರ್ಥನೆಗಳು ಸ್ವೀಕರಿಸಲ್ಪಡುವುದು. ಅಲ್ಲಾಹನು ಅವನ ಪಾಪ ಗಳನ್ನು ಕ್ಷಮಿಸುವನು.[1]

ಅಬೂಹುರೈರಾ(ರ) ವರದಿ ಮಾಡಿರುವ ಪ್ರವಾದಿವಚನ ಹೀಗಿದೆ:

لِكُلِّ عَبْدٍ صَائِمٍ دَعْوَةٌ مُسْتَجَابَةٌ أُعْطِيهَا فِي الدُّنْيَا، أَوِ ادَّخِرَ لَهُ فِي الآخِرَةِ

ಎಲ್ಲಾ ಉಪವಾಸಿಗರಿಂದ ಅಲ್ಲಾಹನ ಬಳಿ ಸ್ವೀಕರಿಸಲ್ಪಡುವ ಪ್ರಾರ್ಥನೆ ಯೊಂದಿದೆ. ಒಂದು ವೇಳೆ ಇಹಲೋಕದಲ್ಲೇ ಅಲ್ಲಾಹನು ಅವನಿಗೆ ಅದನ್ನು ನೀಡುವನು. ಇಲ್ಲವಾದರೆ ಪರಲೋಕಕ್ಕೆ ಅದನ್ನು ಮೀಸಲಾಗಿರಿಸುವನು.[2]

ಇಮಾಮ್ ತಿರ್ಮಿದಿಯವರು ಉದ್ಧರಿಸಿರುವ ಒಂದು ವರದಿಯಲ್ಲಿ (الصَّائِمُ حَتَّى يُفْطِرَ) ಉಪವಾಸಿಗನು ಉಪವಾಸ ಪಾರಣೆ ಮಾಡುವ ತನಕ ಎಂಬುದಕ್ಕೆ ಬದಲಾಗಿ ಉಪವಾಸಿಗನು ಪಾರಣೆ ಮಾಡುವಾಗ[3] (الصَّائِمُ حِينَ يُفْطِرُ) ಎಂದಿದೆ. ಉಪವಾಸಿಗನಿಗೆ ನೀಡಲ್ಪಟ್ಟಿರುವ ಈ ಅನುಕೂಲತೆ ಹೆಚ್ಚು ಪರಿಗಣಿಸಲ್ಪಡುವುದು

ಉಪವಾಸ ಪಾರಣೆಯ ಸಂದರ್ಭದಲ್ಲಾಗಿರುತ್ತದೆ. ನಮಾಝ್ ನಿರ್ವಹಿಸುವವನ ಪ್ರಾರ್ಥನೆಯು ಹೆಚ್ಚಾಗಿ ಆಲಿಸಲ್ಪಡುವುದು ಅದರ ಕೊನೆಯ ಸಂದರ್ಭದಲ್ಲಾಗಿರುತ್ತದೆ ಎಂಬ ಪ್ರವಾದಿವಚನವನ್ನು ಇದು ಹೋಲುತ್ತದೆ. ಯಾವುದೇ ಕೆಲಸಕ್ಕೆ ಪ್ರತಿಫಲ ದೊರೆಯುವುದು ಅದರ ಕೊನೆಯಲ್ಲಿ ಕೆಲಸ ಮುಗಿಸುವಾಗ ಆಗಿರುತ್ತದೆ. ಪ್ರವಾದಿ(ಸ) ಹೇಳಿರುವರು: إِنَّ لِلصَّائِمِ عِنْدَ فِطْرِهِ لَدَعْوَةً مَا تُرَدُّ ಉಪವಾಸಿಗನಿಗೆ ಉಪವಾಸ ಪಾರಣೆಯ ಸಂದರ್ಭದಲ್ಲಿ ತಿರಸ್ಕರಿಸಲ್ಪಡದ ಪ್ರಾರ್ಥನೆಯಿದೆ.[4]

ಮುಂದುವರಿಯುತ್ತಾ ಹದೀಸ್‌ನಲ್ಲಿ ನ್ಯಾಯ ಪಾಲಿಸುವ ಆಡಳಿತಾಧಿಕಾರಿಯ ಕುರಿತು ಪ್ರಸ್ತಾಪಿಸಲಾಗಿದೆ. ಅಧಿಕಾರವು ಅಲ್ಲಾಹನ 'ಅಮಾನತ್' ಆಗಿರುತ್ತದೆ. ಅಕ್ರಮ ಮತ್ತು ಅನ್ಯಾಯದಿಂದ ದೂರ ಉಳಿದು ನ್ಯಾಯಪೂರ್ಣ ಆಡಳಿತ ನಡೆಸುವುದು ಅಧಿಕಾರಿಗಳ ಕರ್ತವ್ಯವಾಗಿರುತ್ತದೆ. ಅಕ್ರಮಿಯಾದ ಆಡಳಿತಾಧಿಕಾರಿ ಊರಿಗೂ ಸಮುದಾಯಕ್ಕೂ ಲೋಕಕ್ಕೂ ಒಂದು ಶಾಪವಾಗಿದ್ದಾನೆ. ಅವನ ಮೂಲಕ ಉಂಟಾಗುವ ಅಕ್ರಮಗಳ ಕಾರಣದಿಂದಾಗಿ ಮುಂದೆ ಹಲವು ತಲೆಮಾರುಗಳ ವರೆಗೆ ಅದು ಮನುಷ್ಯ ರನ್ನು ಸಂಕಷ್ಟಕ್ಕೀಡು ಮಾಡುತ್ತಿರುತ್ತದೆ.. ಆದರೆ ನ್ಯಾಯ ಪಾಲಿಸುವ ಆಡಳಿತಾಧಿಕಾರಿಯು ಪ್ರಜೆಗಳಿಗೆ ಭರವಸೆ ಮತ್ತು ಸಾಂತ್ವನದಂತಿರುತ್ತಾರೆ. ಜನರ ಸಮಾಧಾನ ಮತ್ತು ಸಮೃದ್ಧಿಯು ಅವರ ಗುರಿಯಾಗಿರುತ್ತದೆ. ಇದರಿಂದಾಗಿ ತನ್ನ ಅಗತ್ಯಗಳನ್ನು ಮುಂದೂಡಲು ಮತ್ತು ಸ್ವಯಂ ಸಂಕಷ್ಟ ಸಹಿಸಲು ಅವರು ಸದಾ ಸನ್ನದ್ಧರಾಗಿರುತ್ತಾರೆ. ಈ ಕಾರಣದಿಂದಾಗಿ ನ್ಯಾಯ ಪಾಲಿಸುವ ಆಡಳಿತಾಧಿಕಾರಿಯು ಅಲ್ಲಾಹನಿಗೆ ಅತ್ಯಂತ ಪ್ರೀತಿ ಪಾತ್ರನಾಗಿರುತ್ತಾನೆ. ಪ್ರವಾದಿ(ಸ) ಹೇಳಿರುವರು:

أَحَبُّ النَّاسِ إِلَى اللَّهِ يَوْمَ الْقِيَامَةِ، وَأَدْنَاهُمْ مِنْهُ مَجْلِسًا: إِمَامٌ عَادِلٌ، وَأَبْغَضُ النَّاسِ
إِلَى اللَّهِ تَعَالَى، وَأَبْعَدُهُمْ مِنْهُ مَجْلِسًا: إِمَامٌ جَائِرٌ

'ಅಂತ್ಯದಿನದಂದು ಅಲ್ಲಾಹನಿಗೆ ಅತ್ಯಂತ ಪ್ರೀತಿಪಾತ್ರರು ಮತ್ತು ಅವನಿಗೆ ಅತಿ ಸಮೀಪದಲ್ಲಿರುವವರು ನ್ಯಾಯವಂತ ಆಡಳಿತಾಧಿಕಾರಿಗಳಾಗಿರುವರು. ಅಕ್ರಮಿಯಾದ ಆಡಳಿತಾಧಿಕಾರಿಗಳು ಅಲ್ಲಾಹನಿಗೆ ಅತ್ಯಂತ ಹೆಚ್ಚು ದ್ವೇಷವುಳ್ಳವರು ಮತ್ತು ಅವನಿಂದ ಅತಿ ದೂರದಲ್ಲಿರುವವರು ಆಗಿರುವರು.'[5]

ಅಂತ್ಯ ದಿನದಂದು ಅರ್ಶ್‌ನ ನೆರಳು ದೊರೆಯುವ ಏಳು ವಿಭಾಗಗಳ ಪೈಕಿ ಒಬ್ಬರು ನ್ಯಾಯವಂತ ಆಡಳಿತಾಧಿಕಾರಿ ಆಗಿರುವರು ಎಂದು ಪ್ರವಾದಿ(ಸ) ಹೇಳಿದ್ದಾರೆ.

ಮರ್ದಿತನ ಪ್ರಾರ್ಥನೆಯ ಬಗ್ಗೆ 'ಹದೀಸ್'ನ ಕೊನೆಯ ಭಾಗದಲ್ಲಿ ಪ್ರಸ್ತಾಪಿಸಲಾಗಿದೆ. ಅವರ ಪ್ರಾರ್ಥನೆಯು ದೇವನ ಸನ್ನಿಧಿಗೆ ತಲುಪಲಿಕ್ಕಾಗಿ ಎತ್ತರಿಸಲ್ಪಡುವುದುರ ಕುರಿತು ಬಹಳ ಮನೋಜ್ಞವಾಗಿ ಪ್ರವಾದಿವಚನದಲ್ಲಿ ವರ್ಣಿಸಲಾಗಿದೆ. ದುರ್ಬಲ ಮತ್ತು ಶೋಷಿತ ವಿಭಾಗಗಳೊಂದಿಗೆ ತೋರುವ ಕರುಣೆ ಮತ್ತು ಅವರ ಪರವಾಗಿರುವುದರ ಸೂಚನೆಯಿದು. ಪ್ರವಾದಿ(ಸ) ಹೇಳಿರುವರು:

اِتَّقُوْا دَعْوَةَ الْمَظْلُوْمِ، فَإِنَّهَا تَصْعَدُ إِلَى السَّمَاءِ كَأَنَّهَا شَرَارَةٌ

ಅಕ್ರಮಿಸಲ್ಪಟ್ಟ ವ್ಯಕ್ತಿಯ ಪ್ರಾರ್ಥನೆಯ ಬಗ್ಗೆ ನೀವು ಎಚ್ಚರಿಕೆಯಿಂದಿರಿ. ಏಕೆಂದರೆ ಅದೊಂದು ಬೆಂಕಿಯ ಕಿಡಿಯಂತೆ ಆಕಾಶ ಲೋಕಕ್ಕೆ ಏರಿ ಹೋಗುವುದು.[6]

ಪ್ರವಾದಿವರ್ಯರು(ಸ) ಮುಆದ್ ಬಿನ್ ಜಬಲ್(ರ)ರನ್ನು ಯಮನ್‌ನ ರಾಜ್ಯಪಾಲರನ್ನಾಗಿ ನೇಮಿಸಿ ಕಳುಹಿಸುವಾಗ ಈ ವಿಷಯವನ್ನು ವಿಶೇಷವಾಗಿ ನೆನಪಿಸಿದ್ದರು:

اِتَّقِ دَعْوَةَ الْمَظْلُوْمِ، فَإِنَّهُ لَيْسَ بَيْنَهَا وَبَيْنَ اللّٰهِ حِجَابٌ

ಮರ್ದಿತನ ಪ್ರಾರ್ಥನೆಯ ಬಗ್ಗೆ ನೀವು ಭಯಪಡಿರಿ. ಕಾರಣವೇನೆಂದರೆ ಆ ಪ್ರಾರ್ಥನೆ ಮತ್ತು ಅಲ್ಲಾಹನ ಮಧ್ಯೆ ಯಾವುದೇ ತಡೆಯೂ ಇರುವುದಿಲ್ಲ.[7]

ಪ್ರಾರ್ಥನೆಗೆ ಉತ್ತರ ಲಭಿಸಲು ಅವಸರ ಪಡಬಾರದು ಎಂಬ ಬಗ್ಗೆಯೂ ಈ ಹದೀಸ್‌ನಲ್ಲಿ ಸೂಚನೆ ಲಭಿಸುತ್ತದೆ. ಕೇಳಿದ್ದನ್ನೆಲ್ಲ ಯಾವುದೇ ರೀತಿಯ ಯುಕ್ತಿಯಿಲ್ಲದೆ ಕೊಡುತ್ತಿರುವುದು ಅಲ್ಲಾಹನ ವಿಧಾನವಲ್ಲ. ಎಲ್ಲ ಕೆಲಸಗಳಲ್ಲೂ ಅವನ ಯುಕ್ತಿ ಮತ್ತು ಜ್ಞಾನವು ಕಂಡು ಬರುತ್ತದೆ. ಅವುಗಳಿಗೆ ವಿಧೇಯವಾಗಿಯೇ ಪ್ರಪಂಚದಲ್ಲಿ ಎಲ್ಲವೂ ಸಂಭವಿಸುತ್ತವೆ. ಆದುದರಿಂದಲೇ ಪ್ರಾರ್ಥನೆಯ ಜೊತೆಗೆ ಸಹನೆ ಮತ್ತು ಸಮಾಧಾನದಿಂದ ಕಾಯುವ ಸ್ವಭಾವವೂ ಇರಬೇಕು.

---

1) ಬೈಹಕಿ – ಶುಅ್‌ಬುಲ್ ಈಮಾನ್: 3937–38. **2)** ಕನ್‌ಝುಲ್ ಅಮ್ಮಾಲ್, ಭಾಗ: 8, ಪುಟ: 211. **3)** ತಿರ್ಮಿದಿ: 2526. **4)** ಇಬ್ನುಮಾಜ: 1753, ಹಾಕಿಮ್: 1/422. **5)** ಅಹ್ಮದ್: 3/22, ತಿರ್ಮಿದಿ: 1329. **6)** ಹಾಕಿಮ್: 1/29. **7)** ಬುಖಾರಿ: 1496, ಮುಸ್ಲಿಮ್: 19, ಅಬೂದಾವುದ್: 1584, ನಸಾಈ 5/2–4, ತಿರ್ಮಿದಿ: 625.

23. ಕುಟುಂಬವನ್ನು ಕರೆದು ಎಬ್ಬಿಸಿರಿ

عَـنْ أَبِي هُـرَيْرَةَ رَضِيَ اللّٰهُ عَنْهُ قَالَ: قَالَ رَسُوْلُ اللّٰهِ ﷺ قَالَ: رَحِمَ اللّٰهُ رَجُلًا قَامَ مِنَ اللَّيْلِ فَصَلَّى وَأَيْقَضَ امْرَأَتَهُ فَصَلَّتْ، وَإِنْ أَبَتْ نَضَحَ فِي وَجْهِهَا الْمَاءَ. وَرَحِمَ اللّٰهُ امْـرَأَةً قَامَتْ مِنَ اللَّيْلِ فَصَلَّتْ وَأَيْقَضَتْ زَوْجَهَا فَصَلَّى، فَإِنْ أَبَى نَضَحَتْ فِي وَجْهِهِ الْمَاءَ

ಅಬೂಹುರ್ರೈರಾ(ರ)ರಿಂದ ವರದಿ. ಪ್ರವಾದಿ(ಸ) ಹೇಳಿರುವರು: ರಾತ್ರಿ ಹೊತ್ತು ಎದ್ದು ತಹಜ್ಜುದ್ ನಮಾಝ್ ಮಾಡುವ ಮತ್ತು ತನ್ನ ಪತ್ನಿಯನ್ನು ನಮಾಝ್ ಮಾಡಲಿಕ್ಕಾಗಿ ಎಬ್ಬಿಸುವ, ನಿದ್ರೆಯ ಆಧಿಕ್ಯದಿಂದ ಆಕೆಗೆ ಏಳಲಾಗದಿದ್ದರೆ, ಆಕೆಯ ಮುಖಕ್ಕೆ ನೀರು ಚಿಮುಕಿಸುವ ಪತಿಯ ಮೇಲೆ ಅಲ್ಲಾಹನ ಅನುಗ್ರಹವಿರಲಿ. ಅದೇ ರೀತಿ ರಾತ್ರಿ ಹೊತ್ತು ಎದ್ದು ತಹಜ್ಜುದ್ ನಮಾಝ್ ಮಾಡುವ ಮತ್ತು ತನ್ನ ಪತಿಯನ್ನೂ ನಮಾಝ್ ಮಾಡಲಿಕ್ಕೆ ಎಬ್ಬಿಸುವ, ನಿದ್ರೆಯ ಭಾರದಿಂದ ಆತನಿಗೆ ಏಳಲಾಗದಿದ್ದರೆ, ಆತನ ಮುಖಕ್ಕೆ ನೀರು ಚಿಮುಕಿಸುವ ಪತ್ನಿಯ ಮೇಲೂ ಅಲ್ಲಾಹನ ಅನುಗ್ರಹವಿರಲಿ.*

ತಡರಾತ್ರಿಯ ವೇಳೆ ನಿರ್ವಹಿಸುವ ನಮಾಜ್ ಬಹಳ ಪುಣ್ಯ ಲಭಿಸುವ ಆರಾಧನೆಯಾಗಿದೆ. ಕಡ್ಡಾಯ ನಮಾಝಿನ ಬಳಿಕ ಐಚ್ಛಿಕ ಕರ್ಮಗಳಲ್ಲಿ ಅಲ್ಲಾಹನಿಗೆ

* ಇಮಾಮ್ ಅಹ್ಮದ್: 7410, ಅಬೂದಾವೂದ್: 1308, ಇಬ್ನುಮಾಜ: 1336, ನಸಾಈ: 3/205, ಹಾಕಿಮ್: 1/309, ಇಬ್ನು ಖುಝೈಮಾ: 2/183 ಮುಂತಾದವರು ಈ ಪ್ರವಾದಿವಚನವನ್ನು ಉದ್ಧರಿಸಿರುವರು. ಇದರ ವರದಿಯ ಪರಂಪರೆಯು ಇಮಾಮ್ ಮುಸ್ಲಿಮ್‌ರವರ ಹದೀಸ್ ಸ್ವೀಕಾರಾರ್ಹವಾಗುವ ಮಾನದಂಡಗಳ ಪ್ರಕಾರ ಸಹೀಹ್ ಆಗಿದೆಯೆಂದು ಹಾಕಿಮ್ ಹೇಳುತ್ತಾರೆ. (ಮುಸ್ತದ್‌ರಕ್: 1205)

ಹೆಚ್ಚು ಪ್ರೀತಿಪಾತ್ರವಾದುದು ತಹಜ್ಜುದ್ ನಮಾಝ್ ಆಗಿರುತ್ತದೆ. ಪವಿತ್ರ ಕುರ್‌ಆನ್ ಅನೇಕ ಕಡೆಗಳಲ್ಲಿ ಸತ್ಯವಿಶ್ವಾಸಿಗಳ ಸ್ವಭಾವ ಮತ್ತು ಜೀವನ ವಿಧಾನ ಎಂಬ ರೀತಿಯಲ್ಲಿ ತಹಜ್ಜುದ್ ನಮಾಝಿನ ಕುರಿತು ಹೇಳಿದೆ:

'ರಾತ್ರಿ ಸ್ವಲ್ಪವೇ ನಿದ್ರಿಸುತ್ತಿದ್ದರು ಮತ್ತು ಅವರು ರಾತ್ರಿಯ ಕೊನೆಯ ಜಾವಗಳಲ್ಲಿ ಕ್ಷಮಾಯಾಚನೆ ಮಾಡುತ್ತಿದ್ದರು.' **(ಅದ್ದಾರಿಯಾತ್: 17-18)**

'ಅವರು ತಮ್ಮ ಪ್ರಭುವಿನ ಮುಂದೆ ಸಾಷ್ಟಾಂಗವೆರಗುತ್ತಲೂ ನಿಲ್ಲುತ್ತಲೂ ರಾತ್ರಿಗಳನ್ನು ಕಳೆಯುತ್ತಾರೆ.' **(ಅಲ್ ಫುರ್ಖಾನ್: 64)**

'ಅವರ ಬೆನ್ನುಗಳು ಹಾಸಿಗೆಗಳನ್ನು ಬಿಟ್ಟಿರುತ್ತವೆ. ತಮ್ಮ ಪ್ರಭುವನ್ನು ಭಯ ಹಾಗೂ ನಿರೀಕ್ಷೆಯೊಂದಿಗೆ ಪ್ರಾರ್ಥಿಸುತ್ತಾರೆ.' **(ಅಸ್ಸಜ್ದ: 16)**

ತಹಜ್ಜುದ್ ನಮಾಝ್‌ನ ಪ್ರಾಮುಖ್ಯತೆಯ ಕುರಿತು ಪ್ರವಾದಿ(ಸ) ಹೀಗೆ ಹೇಳಿರುವರು:

عَلَيْكُمْ بِقِيَامِ اللَّيْلِ، فَإِنَّهُ دَأْبُ الصَّالِحِيْنَ قَبْلَكُمْ، وَقُرْبَةٌ إِلَى رَبِّكُمْ، وَمَكْفَرَةٌ
لِلسَّيِّئَاتِ وَمَنْهَاةٌ عَنِ الْإِثْمِ

'ನೀವು ತಹಜ್ಜುದ್ ನಮಾಝನ್ನು ರೂಢಿಸಿಕೊಳ್ಳಿರಿ. ಏಕೆಂದರೆ ಇದು ನಿಮಗಿಂತ ಮುಂಚಿನ ಸಜ್ಜನರ ಕ್ರಮವಾಗಿದೆ. ಇದು ನಿಮ್ಮನ್ನು ನಿಮ್ಮ ಪ್ರಭುವಿಗೆ ಹತ್ತಿರಗೊಳಿಸುವ, ನಿಮ್ಮ ಪಾಪಗಳನ್ನು ಕ್ಷಮಾರ್ಹಗೊಳಿಸುವ ಮತ್ತು ನಿಮ್ಮನ್ನು ಪಾಪಕೃತ್ಯಗಳಿಂದ ರಕ್ಷಿಸುವ ವಸ್ತುವಾಗಿದೆ.'[1]

ತಹಜ್ಜುದ್ ನಮಾಝ್ ನಿರ್ವಹಿಸುವ ವ್ಯಕ್ತಿಗಳಿಗೆ ಅಂತ್ಯ ದಿನದಂದು ಲಭಿಸುವ ಮಹಾ ಪ್ರತಿಫಲದ ಕುರಿತು ಸೂಚಿಸುತ್ತಾ ಅಸ್ಮಾ ಬಿಂತಿ ಯಝೀದ್(ರ) ವರದಿ ಮಾಡಿರುವ ಇನ್ನೊಂದು ಪ್ರವಾದಿವಚನ ಹೀಗಿದೆ:

يُحْشَرُ النَّاسُ فِي صَعِيْدٍ وَاحِدٍ يَوْمَ الْقِيَامَةِ، فَيُنَادِي مُنَادٍ فَيَقُوْلُ: أَيْنَ الَّذِينَ كَانُوا تَتَجَافَى
جُنُوْبُهُمْ عَنِ الْمَضَاجِعِ؟ فَيَقُوْمُوْنَ وَهُمْ قَلِيْلٌ، فَيَدْخُلُوْنَ الْجَنَّةَ بِغَيْرِ حِسَابٍ،
ثُمَّ يُؤْمَرُ بِسَائِرِ النَّاسِ إِلَى الْحِسَابِ

'ಅಂತ್ಯ ದಿನದಂದು ಅಲ್ಲಾಹನು ಮನುಷ್ಯರನ್ನೆಲ್ಲ ಒಂದೆಡೆ ಒಟ್ಟು ಸೇರಿಸುವನು. ಆಗ ಒಬ್ಬ ದೇವಚರ ಹೀಗೆ ಕೂಗಿ ಹೇಳುವರು: ತಮ್ಮ ಹಾಸಿಗೆಯಿಂದ ಎದ್ದು

ರಾತ್ರಿ ವೇಳೆ ನಮಾಝ್ ನಿರ್ವಹಿಸಿದವರೆಲ್ಲಿ? ಆಗ ಒಂದು ಗುಂಪು ಜನರು ಮುಂದೆ ಬರುವರು. ಅವರು ಸಂಖ್ಯೆಯಲ್ಲಿ ಕಡಿಮೆ ಇರುವರು. ಅವರು ವಿಚಾರಣೆ ಇಲ್ಲದೆ ಸ್ವರ್ಗವನ್ನು ಪ್ರವೇಶಿಸುವರು. ಆ ಬಳಿಕ ಇತರರನ್ನು ವಿಚಾರಣೆ ನಡೆಸಲು ಅಲ್ಲಾಹನು ಆದೇಶಿಸುವನು.'[2]

ಆರಂಭದಲ್ಲಿ ನೀಡಲಾದ ಹದೀಸ್ ತಹಜ್ಜುದ್ ನಮಾಝ್‌ನ ಪ್ರಾಮುಖ್ಯತೆ ಯನ್ನು ಸ್ಪಷ್ಟಪಡಿಸುತ್ತದೆ. ಇದರ ಜೊತೆಗೆ ಇನ್ನೂ ಕೆಲವು ವಿಷಯಗಳನ್ನು ಅದು ತಿಳಿಸುತ್ತದೆ. ಒಬ್ಬಂಟಿಗನಾಗಿ ನಮಾಝ್ ನಿರ್ವಹಿಸದೆ ತನ್ನ ಸಂಗಾತಿಯನ್ನು ಕರೆದು ಎಬ್ಬಿಸಿ, ಅವರೂ ನಮಾಝ್ ನಿರ್ವಹಿಸುವಂತೆ ಪ್ರೇರೇಪಿಸುವ ಪತಿ-ಪತ್ನಿಯರಿಗಾಗಿ ಅಲ್ಲಾಹನ ಪ್ರವಾದಿ ಪ್ರಾರ್ಥಿಸಿರುವರು. ಆರಾಧನೆಗಳನ್ನು ನಿರ್ವಹಿಸುತ್ತಾ ಸತ್ಕರ್ಮ ವೆಸಗಲು ಉತ್ಸಾಹ ತೋರಿಸುವ ವಿಶ್ವಾಸಿಯು ತನ್ನ ಕುಟುಂಬದವರನ್ನು ಕೂಡ ಮರೆತು ಬಿಡಬಾರದು ಎಂಬುದನ್ನು ಇದು ನೆನಪಿಸುತ್ತದೆ. ತನ್ನ ಬಗ್ಗೆ ಕರ್ತವ್ಯಗಳಿರು ವಂತೆಯೇ ಒಬ್ಬ ಸತ್ಯವಿಶ್ವಾಸಿಗೆ ತನ್ನ ಕುಟುಂಬದವರೊಂದಿಗೂ ಕರ್ತವ್ಯಗಳಿವೆ. ತನ್ನ ಕುಟುಂಬವನ್ನು ನರಕಾಗ್ನಿಯಿಂದ ರಕ್ಷಿಸುವುದು ಪ್ರತಿಯೊಬ್ಬ ವ್ಯಕ್ತಿಯ ಬಹಳ ಪ್ರಾಮುಖ್ಯವಾದ ಧಾರ್ಮಿಕ ಕರ್ತವ್ಯವಾಗಿದೆ.

ಪವಿತ್ರ ಕುರ್‌ಆನ್ ಇದನ್ನು ಈ ರೀತಿ ನೆನಪಿಸುತ್ತದೆ, 'ಸತ್ಯವಿಶ್ವಾಸಿಗಳೇ, ಮಾನವರೂ ಶಿಲೆಗಳೂ ಇಂಧನವಾಗಲಿರುವ ಅಗ್ನಿಯಿಂದ ನಿಮ್ಮನ್ನೂ ನಿಮ್ಮ ಕುಟುಂಬ ದವರನ್ನೂ ರಕ್ಷಿಸಿಕೊಳ್ಳಿರಿ.' **(ಅತ್ತಹ್ರೀಮ್: 6)**

ಅಂತ್ಯ ಪ್ರವಾದಿಯವರಿಗೆ(ಸ) ಅಲ್ಲಾಹನು ನೀಡಿದ ಆದೇಶ ಹೀಗಿದೆ, 'ನಿಮ್ಮ ಮನೆಯವರಿಗೆ ನಮಾಝಿನ ಅಪ್ಪಣೆ ಕೊಡಿರಿ ಮತ್ತು ಸ್ವತಃ ನೀವೂ ಅದನ್ನು ಸಂಸ್ಥಾಪಿಸಿರಿ.' **(ತಾಹಾ: 132)**

ನಿದ್ರೆಯ ಭಾರದಿಂದ ಏಳಲಾರದ ಪತ್ನಿಯ ಮುಖಕ್ಕೆ ನೀರು ಚಿಮುಕಿಸುವುದು ಎಂಬ ವಾಕ್ಯವು ಪತಿ-ಪತ್ನಿಯರ ಮಧ್ಯೆ ಇರಬೇಕಾದ ಸ್ನೇಹಭರಿತವಾದ ಕಾಳಜಿ ಯೆಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗಿದೆ. ಸನ್ಮಾರ್ಗದ ದಾರಿಯಲ್ಲಿ ಸಂಗಾತಿಯನ್ನು ಕರೆದೊಯ್ಯಲು ಯಾವ ರೀತಿ ಪ್ರಯತ್ನಿಸಬೇಕು ಎಂಬುದನ್ನು ಇದು ಮನವರಿಕೆ ಮಾಡಿಸಿಕೊಡುತ್ತದೆ. ಇತರರಿಗೆ ದ್ವೇಷ, ಬೇಸರ, ವಿರಕ್ತಿ ಮೂಡುವ ರೀತಿಯಲ್ಲಿ ಜನರನ್ನು ಅಲ್ಲಾಹನ ಮಾರ್ಗದೆಡೆಗೆ ಆಹ್ವಾನಿಸುವುದು ಸರಿಯಲ್ಲ. ಸದಾ ಕರುಣೆ ಮತ್ತು ನಯ-ವಿನಯದ ನಡವಳಿಕೆಯ ಮೂಲಕ ಈ ಕೆಲಸವನ್ನು

ನಿರ್ವಹಿಸಬೇಕು. ಮೇಲಿನ ಪ್ರವಾದಿವಚನವು ಈ ವಿಷಯವನ್ನು ಕೂಡ ಸ್ಪಷ್ಟ ಪಡಿಸುತ್ತದೆ.

ರಮಝಾನ್ ಸತ್ಕರ್ಮಗಳಿಗೆ ಅತಿ ಹೆಚ್ಚು ಪ್ರತಿಫಲ ಸಿಗುವ ತಿಂಗಳಲ್ಲವೇ? ಪ್ರವಾದಿ(ಸ) ರಮಝಾನಿನ ಕೊನೆಯ ದಿನಗಳಲ್ಲಿ ತಮ್ಮ ಪತ್ನಿಯರನ್ನು, ಕುಟುಂಬದ ಇತರ ಸದಸ್ಯರನ್ನು ರಾತ್ರಿಯ ತಹಜ್ಜುದ್ ನಮಾಝಿಗೆ ಕರೆದು ಎಬ್ಬಿಸುತ್ತಿದ್ದರು ಎಂಬುದಾಗಿ ಹದೀಸ್‌ಗಳಲ್ಲಿ ಬಂದಿರುತ್ತದೆ. ಆಯಿಶಾ(ರ) ಹೇಳುತ್ತಾರೆ:

كَانَ رَسُوْلُ اللهِ ﷺ إِذَا دَخَلَ الْعَشْرُ الأَوَاخِرُ مِنْ رَمَضَانَ أَحْيَا اللَّيْلَ وَأَيْقَظَ أَهْلَهُ وَجَدَّ وَشَدَّ الْمِئْزَرَ

'ರಮಝಾನಿನ ಕೊನೆಯ ಹತ್ತು ದಿನಗಳಲ್ಲಿ ಪ್ರವಾದಿ(ಸ) ರಾತ್ರಿ ನಿದ್ರೆಯನ್ನು ಬಿಟ್ಟು ಎಚ್ಚರವಿರುತ್ತಿದ್ದರು. ಕುಟುಂಬದವರನ್ನು ಕರೆದು ಎಬ್ಬಿಸಿ ಸತ್ಕರ್ಮಗಳಲ್ಲಿ ನಿರತರಾಗುತ್ತಿದ್ದರು. ಬಟ್ಟೆಯನ್ನು ಬಿಗಿಯಾಗಿ ಕಟ್ಟುತ್ತಿದ್ದರು.'[3]

ಅಬೂ ಹುರೈರಾ(ರ) ವರದಿ ಮಾಡಿರುತ್ತಾರೆ:

كَانَ رَسُوْلُ اللهِ ﷺ يُرَغِّبُ فِي قِيَامِ رَمَضَانَ مِنْ غَيْرِ أَنْ يَأْمُرَهُمْ فِيْهِ بِعَزِيْمَةٍ، فَيَقُوْلُ: "مَنْ قَامَ رَمَضَانَ إِيْمَانًا وَاحْتِسَابًا غُفِرَ لَهُ مَا تَقَدَّمَ مِنْ ذَنْبِهِ"

ರಮಝಾನಿನ ರಾತ್ರಿ ನಮಾಝ್‌ಗಳನ್ನು ನಿರ್ವಹಿಸುವುದಕ್ಕೆ ಪ್ರವಾದಿ(ಸ) ನಮ್ಮನ್ನು ತುಂಬಾ ಪ್ರೋತ್ಸಾಹಿಸುತ್ತಿದ್ದರು. ಒತ್ತಾಯಪಡಿಸುತ್ತಿರಲಿಲ್ಲ. ಅವರು(ಸ) ಹೀಗೆ ಹೇಳುತ್ತಿದ್ದರು, 'ಯಾರಾದರೂ ಸತ್ಯವಿಶ್ವಾಸ ಮತ್ತು ಪ್ರತಿಫಲಾಪೇಕ್ಷೆಯಿಂದ ರಾತ್ರಿ ನಮಾಝನ್ನು ನಿರ್ವಹಿಸಿದರೆ, ಅಲ್ಲಾಹನು ಅವನಿಂದ ಸಂಭವಿಸಿ ಹೋದ ಪಾಪಗಳನ್ನು ಕ್ಷಮಿಸುವನು.'[4]

---

1. ಹಾಕಿಮ್: 1/308, ತಿರ್ಮಿದಿ: 3549, ಇಬ್ನು ಖುಝೈಮಾ: 2/177.
2. ಬೈಹಕಿ – ಶುಅ್‌ಬುಲ್ ಈಮಾನ್: 3244, ಮಿಷ್ಕಾತುಲ್ ಮಸಾಬೀಹ್: 5565.
3. ಬುಖಾರಿ: 4/233–234, ಮುಸ್ಲಿಮ್: 1174.
4. ಮುಸ್ಲಿಮ್: 759/174, ಅಬೂದಾವೂದ್: 1371, ತಿರ್ಮಿದಿ: 808, ನಸಾಈ: 4/129.

24. ಇಅ್‌ತಿಕಾಫ್ ಮತ್ತು ಜನಸೇವೆ

عَنْ إِبْنِ عَبَّاسٍ رَضِيَ اللّٰهُ عَنْهُمَا أَنَّهُ كَانَ مُعْتَكِفًا فِي مَسْجِدِ رَسُوْلِ اللّٰهِ ﷺ، فَأَتَاهُ رَجُلٌ، فَسَلَّمَ عَلَيْهِ، ثُمَّ جَلَسَ، فَقَالَ لَهُ ابْنُ عَبَّاسٍ: يَا فُلَانُ، أَرَاكَ مُكْتَئِبًا حَزِيْنًا؟ قَالَ: نَعَمْ يَابْنَ عَمِّ رَسُوْلِ اللّٰهِ، لِفُلَانٍ عَلَيَّ حَقُّ وَلَاءٍ، وَحُرْمَةِ صَاحِبِ هٰذَا الْقَبْرِ مَا أَقْدِرُ عَلَيْهِ! قَالَ ابْنُ عَبَّاسٍ: أَفَلَا أُكَلِّمُهُ فِيْكَ؟ فَقَالَ: إِنْ أَحْبَبْتَ، فَانْتَعَلَ ابْنُ عَبَاسٍ ثُمَّ خَرَجَ مِنَ الْمَسْجِدِ، فَقَالَ لَهُ الرَّجُلُ: أَنَسِيْتَ مَا كُنْتَ فِيْهِ؟ قَالَ: لَا، وَلٰكِنِّي سَمِعْتُ صَاحِبَ هٰذَا الْقَبْرِ ﷺ وَالْعَهْدُ بِهِ قَرِيْبٌ فَدَمَعَتْ عَيْنَاهُ وَهُوَ يَقُوْلُ: "مَنْ مَشَى فِي حَاجَتِ أَخِيْهِ وَبَلَغَ فِيْهَا كَانَ خَيْرًا لَهُ مِنْ اِعْتِكَافِ عَشَرَ سِنِيْنَ، وَمَنْ اِعْتَكَفَ يَوْمًا اِبْتِغَاءِ وَجْهِ اللّٰهِ تَعَالٰى جَعَلَ اللّٰهُ بَيْنَهُ وَبَيْنَ النَّارِ ثَلَاثَ خَنَادِقَ، أَبْعَدَ مِمَّا بَيْنَ الْخَافِقَيْنِ"

ಇಬ್ನು ಅಬ್ಬಾಸ್(ರ)ರಿಂದ ವರದಿ. ಒಮ್ಮೆ ಅವರು ಪ್ರವಾದಿಯವರ(ಸ) ಮಸೀದಿಯಲ್ಲಿ ಇಅ್‌ತಿಕಾಫ್ ಕುಳಿತಿದ್ದರು. ಆಗ ಒಬ್ಬ ವ್ಯಕ್ತಿ ಸಲಾಮ್ ಹೇಳುತ್ತಾ ಅವರ ಬಳಿ ಬಂದು ಕುಳಿತರು. ಇಬ್ನು ಅಬ್ಬಾಸ್(ರ)ರವರು ಅವರೊಂದಿಗೆ ಪ್ರಶ್ನಿಸಿದರು: ತಾವು ಬಹಳ ಬೇಸರ ಮತ್ತು ದುಃಖದಲ್ಲಿ ಇರುವಂತಿದೆಯಲ್ಲ? ಅವರೆಂದರು: ಹೌದು. ಪ್ರವಾದಿಯವರ ಚಿಕ್ಕಪ್ಪನ ಮಗನೇ! ನನಗೆ ಒಬ್ಬರೊಂದಿಗೆ ಆರ್ಥಿಕವಾಗಿ ಕೆಲವು ಕರ್ತವ್ಯಗಳಿವೆ. [ಪ್ರವಾದಿಯವರ(ಸ) ಗೋರಿಯನ್ನು ತೋರಿಸಿ] ಆದರೆ ಈ ಗೋರಿಯಲ್ಲಿ

ಮಲಗಿರುವವರ ಮಹಾತ್ಮೆ! ನನಗೆ ಅದನ್ನು ಕೊಟ್ಟು ಮುಗಿಸಲು ಸಾಧ್ಯವಾಗಲಿಲ್ಲ. ಇಬ್ನು ಅಬ್ಬಾಸ್(ರ) ಹೇಳಿದರು: ನಿಮ್ಮ ವಿಷಯದಲ್ಲಿ ಆ ಸಂಬಂಧ ಪಟ್ಟ ವ್ಯಕ್ತಿಯೊಂದಿಗೆ ನಾನು ಮಾತನಾಡಿದರೆ ಆಗಬಹುದೇ? ಆ ವ್ಯಕ್ತಿ ಹೇಳಿದರು: ನಿಮಗೆ ಇಷ್ಟವಾದರೆ ಹಾಗೆ ಮಾಡಬಹುದು. ಇಬ್ನು ಅಬ್ಬಾಸ್(ರ) ಪಾದರಕ್ಷೆ ಧರಿಸಿ ಮಸೀದಿಯಿಂದ ಹೊರಟರು. ಆಗಂತುಕ ಪ್ರಶ್ನಿಸಿದರು: ತಾವು ಇಅ್‌ತಿಕಾಫ್‌ನಲ್ಲಿದ್ದ ವಿಷಯ ಮರೆತು ಬಿಟ್ಟಿರೇನೋ! ಇಬ್ನು ಅಬ್ಬಾಸ್(ರ) ಹೇಳುತ್ತಾರೆ: ಹಾಗಲ್ಲ, ಈ ಗೋರಿಯಲ್ಲಿ ಮಲಗಿರುವ ವ್ಯಕ್ತಿ ಒಮ್ಮೆ ಈ ರೀತಿ ಹೇಳುವುದನ್ನು ನಾನು ಕೇಳಿಸಿಕೊಂಡಿದ್ದೇನೆ... [ಪ್ರವಾದಿ(ಸ) ನಿಧನರಾಗಿ ಆಗ ಸ್ವಲ್ಪ ದಿನಗಳು ಮಾತ್ರ ಕಳೆದಿತ್ತು. ಆದುದರಿಂದ ಹೀಗೆ ಹೇಳುವಾಗ ಇಬ್ನು ಅಬ್ಬಾಸ್(ರ)ರ ಕಣ್ಣಾಲಿಗಳು ತುಂಬಿಕೊಂಡವು.] ಒಬ್ಬ ವ್ಯಕ್ತಿ ತನ್ನ ಸಹೋದರನ ಅಗತ್ಯಕ್ಕಾಗಿ ಹೊರಗೆ ಹೋಗಿ ಅವನಿಗೆ ಅದನ್ನು ಮಾಡಿ ಕೊಟ್ಟರೆ, ಹತ್ತು ವರ್ಷ ಮಸೀದಿಯಲ್ಲಿ ಇಅ್‌ತಿಕಾಫ್ ಕುಳಿತುಕೊಳ್ಳುವುದಕ್ಕಿಂತ ಶ್ರೇಷ್ಠವಾಗಿದೆ. ಅಲ್ಲಾಹನ ಸಂಪ್ರೀತಿಯನ್ನು ಬಯಸಿ ಯಾರಾದರೂ ಮಸೀದಿಯಲ್ಲಿ ಇಅ್‌ತಿಕಾಫ್ ಕುಳಿತರೆ, ಅಲ್ಲಾಹನು ಅವನಿಗಾಗಿ ನರಕ ಮತ್ತು ಅವನ ಮಧ್ಯೆ ಮೂರು ಕಣಿವೆಗಳನ್ನು ಉಂಟು ಮಾಡುವನು. ಅವುಗಳಲ್ಲಿ ಪ್ರತಿಯೊಂದು ಎರಡು ಸಾಮ್ರಾಜ್ಯ ಗಳಿಗಿಂತಲೂ ಅಧಿಕ ವಿಸ್ತಾರವಾಗಿರುವುದು.*

ದೇವನ ಆರಾಧನೆ ಮತ್ತು ಜನಸೇವೆಯ ಬಗ್ಗೆ ಇರುವ ಸಾರವತ್ತಾದ ಒಂದು ಪ್ರವಾದಿವಚನವಿದು.

'ಇಅ್‌ತಿಕಾಫ್' ಎಂಬುದು ಬಹಳ ಪುಣ್ಯವುಳ್ಳ ಒಂದು ಐಚ್ಛಿಕ ಕರ್ಮವಾಗಿದೆ. ಅಲ್ಲಾಹನ ಸಾಮಿಪ್ಯವನ್ನು ಬಯಸಿ ಜೀವನದ ಚಟುವಟಿಕೆಗಳಿಂದೆಲ್ಲ ಅಗಲಿ ನಿಂತು ದೇವಸ್ಮರಣೆ ಮತ್ತು ಆರಾಧನೆಗಳಲ್ಲಿ ನಿರತನಾಗಿ ಮಸೀದಿಯಲ್ಲಿ ಸಮಯವನ್ನು

* ಇಮಾಮ್ ಬೈಹಕಿಯವರು ಶುಅ್‌ಬುಲ್ ಈಮಾನ್(3965)ನಲ್ಲಿ ಈ ಮೇಲೆ ಹೇಳಿದ ಪದಗಳೊಂದಿಗೆ, ಇಬ್ನು ಅಬಿದ್ದುನ್ಯಾ (ಖದಾಉಲ್ ಹವಾಇಜ್: 35), ತಬ್ರಾನಿ (ಔಸಾತ್: 7322) ಅಬೂ ನುಐಮ್ (ಹಿಲ್‌ಯತುಲ್ ಔಲಿಯಾಅ್: 8/200) ಮುಂತಾದವರು ಸಣ್ಣ ವ್ಯತ್ಯಾಸಗಳೊಂದಿಗೆ ಈ ಹದೀಸನ್ನು ಉದ್ಧರಿಸಿರುವರು. ಇದರ ವರದಿಯ ಪರಂಪರೆ ಜಯ್ಯಿದ್ (ಉತ್ತಮ) ಎಂದು ಹಾಫಿಝ್ ಹೈತಮಿ (ಮಜ್‌ಮಉಸ್ಸವಾಇದ್: 8/192) ಇದನ್ನು ಉಲ್ಲೇಖಿಸಿರುವವರು ಪ್ರಬಲರೆಂದು ಡಾ। ಅಬ್ದುಲ್ ಅಲಿ ಅಬ್ದುಲ್ ಹಮೀದ್ ಹಾಮಿದ್ (ಅಲ್ ಜಾಮಿಉ ಲಿ ಶುಅಬಿಲ್ ಈಮಾನ್, ಭಾಗ: 7, ಪುಟ: 573, ಪ್ರಕಾಶಕರು: ದಾರುಸ್ಸಲಫಿಯ್ಯ, ಮುಂಬೈ 1987) ಅಭಿಪ್ರಾಯ ಪಟ್ಟಿದ್ದಾರೆ.

ವ್ಯಯಿಸುವುದಕ್ಕೆ 'ಇಅ್‌ತಿಕಾಫ್' ಎನ್ನುತ್ತಾರೆ. ಶರೀಅತ್‌ನಲ್ಲಿ ನಮಾಝ್ ಮತ್ತು ಉಪವಾಸ ವ್ರತಗಳಂತಹ ಆರಾಧನೆಗಳಂತೆ ಬಹಳ ಪ್ರಾಚೀನ ಕಾಲದಿಂದಲೇ ಅಸ್ತಿತ್ವದಲ್ಲಿರುವ ಒಂದು ಆರಾಧನಾ ಕರ್ಮವಾಗಿದೆ. ಪ್ರವಾದಿ ಮುಹಮ್ಮದ್(ಸ)ರವರ ಆಗಮನಕ್ಕಿಂತ ಮುಂಚೆ ಅಜ್ಞಾನಕಾಲದಲ್ಲಿ ಕೂಡ ಜನರು ಇಅ್‌ತಿಕಾಫನ್ನು ಒಂದು ಪುಣ್ಯ ಕೆಲಸವೆಂದು ಪರಿಗಣಿಸಿದ್ದರು.

ಜೀವನದ ಕೆಲಸಕಾರ್ಯಗಳಿಂದ ದೂರವುಳಿಯುವ ಒಂದು ಆಧ್ಯಾತ್ಮಿಕತೆ ಇಸ್ಲಾಮಿನಲ್ಲಿ ಇಲ್ಲ. ಆದರೂ ಕೆಲವು ವಿಶೇಷ ಸಂದರ್ಭಗಳಲ್ಲಿ ವ್ಯಕ್ತಿಯ ಆಧ್ಯಾತ್ಮಿಕ ಉನ್ನತಿ ಮತ್ತು ವ್ಯಕ್ತಿತ್ವ ವಿಕಸನಕ್ಕಾಗಿ ಒಂದು ನಿರ್ದಿಷ್ಟ ಸಮಯಕ್ಕೆ ಅನುಗುಣವಾದ ಕೆಲವು ಆರಾಧನೆಗಳನ್ನು ಇಸ್ಲಾಮ್ ಅಂಗೀಕರಿಸುತ್ತದೆ. ಇಅ್‌ತಿಕಾಫ್ ಈ ವಿಭಾಗಕ್ಕೆ ಒಳಪಟ್ಟಿದೆ. ಅಲ್ಲಾಹನ ಸಾಮಿಪ್ಯವನ್ನು ಗಳಿಸಲು, ಆರಾಧನೆಗಳನ್ನು ಧಾರಾಳವಾಗಿ ನಿರ್ವಹಿಸಲು, ತನ್ನನ್ನು ಸಂಸ್ಕರಿಸಲು ಸತ್ಯವಿಶ್ವಾಸಿಗೆ ಈ ಮೂಲಕ ಸಾಧ್ಯವಾಗುತ್ತದೆ. ಲೌಕಿಕ ಜೀವನದಲ್ಲಿ ಉಂಟಾದ ಕೊರತೆಗಳನ್ನು ದೇವನ ಉಪಾಸನೆಯ ಮೂಲಕ ನೀಗಿಸಲು ಸಾಧ್ಯ ಎಂಬ ಆತ್ಮವಿಶ್ವಾಸ ಇದರಿಂದ ಸಿಗುತ್ತದೆ. ಪ್ರವಾದಿ(ಸ) ಹೇಳಿರುವರು:

اَلْمُعْتَكِفُ يَعْتَكِفُ الذُّنُوبَ، وَيُجْرَى لَهُ مِنَ الْحَسَنَاتِ كَعَامِلِ الْحَسَنَاتِ كُلِّهَا

'ಇಅ್‌ತಿಕಾಫ್ ನಿರ್ವಹಿಸುವವರಿಗೆ ಪಾಪಕೃತ್ಯಗಳಿಂದ ದೂರವುಳಿಯಲು ಸಾಧ್ಯವಾಗುತ್ತದೆ. ಎಲ್ಲಾ ಸತ್ಕರ್ಮಗಳನ್ನು ಮಾಡುವವರಂತೆ, ತನ್ನ ಹೆಸರಲ್ಲೂ ಧಾರಾಳ ಸತ್ಕರ್ಮಗಳು ಬರೆಸಲ್ಪಡಲು ಇದು ಕಾರಣವಾಗುತ್ತದೆ.'[1]

ಪ್ರವಾದಿ(ಸ) ಮತ್ತು ಅನುಯಾಯಿಗಳು ರಮಝಾನಿನ ಕೊನೆಯ ಹತ್ತು ದಿನಗಳಲ್ಲಿ ಮಸೀದಿಯಲ್ಲಿ ಇಅ್‌ತಿಕಾಫ್ ಕುಳಿತುಕೊಳ್ಳುತ್ತಿದ್ದರು. ಪ್ರವಾದಿ(ಸ) ಜೀವನದ ಕೊನೆಯ ರಮಝಾನಿನಲ್ಲಿ ಇಪ್ಪತ್ತು ದಿನಗಳ ಕಾಲ ಇಅ್‌ತಿಕಾಫ್ ಕುಳಿತಿರುವುದಾಗಿ ಹದೀಸ್‌ಗಳಲ್ಲಿ ಬಂದಿರುತ್ತದೆ. ರಮಝಾನಿನ ಇಅತಿಕಾಫ್‌ನ ಮಹತ್ವದ ಕುರಿತು ಹೇಳುವ ಪ್ರವಾದಿವಚನವೊಂದು ಹೀಗಿದೆ:

مَنْ اِعْتَكَفَ عَشْرًا فِي رَمَضَانَ كَانَ كَحَجَّتَيْنِ وَعُمْرَتَيْنِ

'ಒಬ್ಬನು ರಮಝಾನಿನ ಹತ್ತು ದಿನಗಳಲ್ಲಿ ಇಅತಿಕಾಫ್ ಕುಳಿತರೆ, ಅದು ಎರಡು ಹಜ್ಜ್ ಮತ್ತು ಉಮ್ರಾ ನಿರ್ವಹಿಸುವುದಕ್ಕೆ ಸಮಾನವಾಗಿದೆ.'[2]

ಪ್ರಥಮವಾಗಿ ಪ್ರಸ್ತಾಪಿಸಿದ ಪ್ರವಾದಿವಚನದಲ್ಲಿ ಇಅತಿಕಾಫ್ ಕುಳಿತುಕೊಳ್ಳುವುದಕ್ಕೆ ಸಿಗುವ ಮಹಾನ್ ಪ್ರತಿಫಲದ ಕುರಿತು ಪ್ರಸ್ತಾಪಿಸಲಾಗಿದೆ. ಅದರ ಜೊತೆಗೆ

ಅಲ್ಲಾಹನ ಸಂಪ್ರೀತಿಯಂತೆಯೇ, ಸೃಷ್ಟಿಗಳನ್ನು ಪ್ರೀತಿಸುವುದರ ಮತ್ತು ಗೌರವಿಸುವುದರ ಮಹತ್ವವನ್ನು ತಿಳಿಸುತ್ತದೆ. ಇಂತಹ ವ್ಯಕ್ತಿಗಳಿಗೆ ಅಲ್ಲಾಹನ ಬಳಿ ಸಿಗಲಿರುವ ಪ್ರತಿಫಲದ ಕುರಿತು ಈ ಹದೀಸ್‌ನಲ್ಲಿ ವಿವರಿಸಲಾಗಿದೆ. ಅಲ್ಲಾಹನ ಆರಾಧನೆಗೆ ಇಸ್ಲಾಮಿನಲ್ಲಿ ಎಷ್ಟು ಪ್ರಾಮುಖ್ಯತೆ ಇದೆಯೋ, ಅದೇ ರೀತಿ ಸಹಜೀವಿಗಳೊಂದಿಗಿನ ಪ್ರೀತಿಯು ಬಹಳ ಮುಖ್ಯವಾಗಿದೆ. ಒಂದು ಇನ್ನೊಂದಕ್ಕಿಂತ ಪ್ರಧಾನವೋ ಮಹತ್ವವಿರುವುದೋ ಅಲ್ಲ. ಅನಸ್ ಬಿನ್ ಮಾಲಿಕ್(ರ)ರಿಂದ ಉದ್ಧರಿಸಿರುವ ಪ್ರವಾದಿವಚನವು ಹೀಗಿದೆ:

مَنْ أَغَاثَ مَلْهُوفًا كَتَبَ اللهُ ثَلَاثًا وَسَبْعِينَ مَغْفِرَةً، وَاحِدَةٌ فِيهَا صَلَاحُ أُمُورِهِ كُلِّهِ، وَاثْنَتَانِ وَسَبْعُونَ لَهُ دَرَجَاتٌ يَوْمَ الْقِيَامَةِ

'ಯಾವುದಾದರೂ ಸಂಕಷ್ಟದಲ್ಲಿ ಸಿಲುಕಿ ಅಸಹಾಯಕರಾಗಿ ಬಿಟ್ಟಿರುವ ವ್ಯಕ್ತಿಯ ಸಂಕಷ್ಟವನ್ನು ನೀಗಿಸಲು ಸಹಾಯ ಮಾಡುವ ವ್ಯಕ್ತಿಗೆ ಅಲ್ಲಾಹನು ಎಪ್ಪತ್ತಮೂರು ಪಾಪ ವಿಮೋಚನೆಯನ್ನು ಬರೆಯುತ್ತಾನೆ. ಅದರಲ್ಲಿ ಒಂದು ಅವನ ಎಲ್ಲಾ ಕೆಲಸಗಳನ್ನೂ ಒಳಿತಾಗಿ ಮಾರ್ಪಡಿಸುತ್ತದೆ. ಬಾಕಿ ಉಳಿಯುವ ಎಪ್ಪತ್ತೆರಡು ಅವನಿಗೆ ಅಂತ್ಯದಿನದಲ್ಲಿ ಸಿಗುವ ಪದವಿಗಳಾಗಿರುವುದು.'[3]

ಇದೇ ಆಶಯವನ್ನೊಳಗೊಂಡ ಇನ್ನೊಂದು ಪ್ರವಾದಿವಚನವಿದೆ:

مَنْ مَشَى فِي حَاجَتِ أَخِيهِ الْمُسْلِمِ كَتَبَ اللهُ لَهُ بِكُلِّ خَطْوَةٍ سَبْعِينَ حَسَنَةً وَمَحَا عَنْهُ سَبْعِينَ سَيِّئَةً، إِلَى أَنْ يَرْجِعَ مِنْ حَيْثُ فَارَقَهُ، فَإِنْ قُضِيَتْ حَاجَتُهُ عَلَى يَدَيْهِ خَرَجَ مِنْ ذُنُوبِهِ كَيَوْمِ وَلَدَتْهُ أُمُّهُ، وَإِنْ هَلَكَ فِيمَا بَيْنَ ذَٰلِكَ دَخَلَ الْجَنَّةَ بِغَيْرِ حِسَابٍ

ಒಬ್ಬ ವ್ಯಕ್ತಿ ಮುಸ್ಲಿಮನಾದ ಒಬ್ಬ ಸಹೋದರನ ಅವಶ್ಯಕತೆಗಳನ್ನು ಪೂರೈಸಲಿಕ್ಕಾಗಿ ನಡೆದರೆ, ಅವನ ಒಂದೊಂದು ಹೆಜ್ಜೆಯ ಹೆಸರಲ್ಲಿ ಅವನಿಗೆ ಎಪ್ಪತ್ತು ಪುಣ್ಯಗಳನ್ನು ಅಲ್ಲಾಹನು ಬರೆಯುವನು ಮತ್ತು ಎಪ್ಪತ್ತು ಕೆಡುಕುಗಳನ್ನು ಅಳಿಸಿ ಹಾಕುವನು. ಅವನು ಎಲ್ಲಿಂದ ಹೊರಟು ಬಂದಿರುವನೋ ಅಲ್ಲಿಗೆ ಮರಳಿ ಹೋಗಿ ತಲುಪುವ ತನಕ ಇದು ಅವನ ಅವಸ್ಥೆಯಾಗಿರುವುದು. ಒಂದು ವೇಳೆ ಆ ವ್ಯಕ್ತಿಯ ಅಗತ್ಯಗಳನ್ನು ಪೂರೈಸಿದರೆ ಆ ದಿನ ಜನಿಸಿದ ತಾಯಿಯ ಉದರದಿಂದ ಹೊರ ಬಂದ ಮಗು ಪಾಪ ರಹಿತವಾಗಿರುವಂತೆ ಪಾಪಗಳಿಂದ ಪರಿಶುದ್ಧನಾಗಿ ಹೊರ ಬರುವನು. ಆ ಮಾರ್ಗದಲ್ಲಿ ಅವನು ಮರಣ ಹೊಂದಿದರೆ, ವಿಚಾರಣೆಯಿಲ್ಲದೆ ಸ್ವರ್ಗವನ್ನು ತಲುಪುವನು.[4]

ಜನರಿಗಾಗಿ ಜೀವಿಸುತ್ತಾ, ಅವರ ನೋವು ಸಂಕಷ್ಟಗಳನ್ನು ನೀಗಿಸಲು ಪರಿಶ್ರಮ

ಪಟ್ಟರೆ, ಅಂತಹವರು ಅಲ್ಲಾಹನಿಗೆ ಹೆಚ್ಚು ಪ್ರಿಯರಾಗಿರುವರು, ಅವನ ಆಪ್ತರಾಗುವರು. ಅಲ್ಲಾಹನ ವಿಶೇಷವಾದ ಕರುಣೆ ಮತ್ತು ಅನುಗ್ರಹವು ಸದಾ ಅವರ ಮೇಲೆ ವರ್ಷಿಸುತ್ತಿರುವುದು. ಪ್ರವಾದಿ(ಸ) ಹೇಳಿರುವರು:

إِنَّ لِلّٰهِ عِبَادًا اِخْتَصَّهُمْ بِحَوَائِجِ النَّاسِ، يَفْزَعُ النَّاسُ إِلَيْهِمْ فِي حَوَائِجِهِمْ، أُوْلَائِكَ الْآمِنُوْنَ مِنْ عَذَابِ اللّٰهِ

'ಅಲ್ಲಾಹನ ಕೆಲವು ದಾಸರಿರುವರು. ಜನರ ಅಗತ್ಯಗಳನ್ನು ಪೂರೈಸಲಿಕ್ಕಾಗಿಯೇ ಅಲ್ಲಾಹನು ಅವರನ್ನು ಸೃಷ್ಟಿಸಿರುತ್ತಾನೆ. ತಮ್ಮ ಅಗತ್ಯಗಳಿಗಾಗಿ ಜನರು ಅವರನ್ನು ಸಮೀಪಿಸುತ್ತಲೇ ಇರುವರು. ಅವರೇ ಅಲ್ಲಾಹನ ಶಿಕ್ಷೆಯಿಂದ ಸುರಕ್ಷಿತರಾಗಿ ಉಳಿಯುವರು.'[5]

ಒಮ್ಮೆ ಒಬ್ಬ ವ್ಯಕ್ತಿ ಮಸೀದಿಯಲ್ಲಿ ವಿಶ್ರಮಿಸುತ್ತಿದ್ದ ಹುಸೈನ್ ಬಿನ್ ಅಲೀ ಬಿನ್ ಅಬೀತಾಲಿಬ್(ರ)ರವರನ್ನು ಒಂದು ಅತಿ ಅಗತ್ಯದ ಕೆಲಸಕ್ಕಾಗಿ ತಮ್ಮ ಜೊತೆ ಬರುವಂತೆ ವಿನಂತಿಸಿದರು. ಆಗ ಅವರು: ಸಹೋದರ, ನಾನು ಇಅ್‌ತಿಕಾಫ್‌ನಲ್ಲಿದ್ದೇನೆ. ಸ್ವಲ್ಪ ಹೊತ್ತು ಕಳೆದು ಬನ್ನಿ ಎಂದರು. ಈ ವಿಷಯವನ್ನು ತಾಬಈ ಆಗಿರುವ ಹಸನ್ ಬಸರೀ(ರ)ಯವರೊಂದಿಗೆ ಹೇಳಿದಾಗ ಅವರು ಈ ರೀತಿ ಪ್ರತಿಕ್ರಿಯೆ ನೀಡಿದರು:

لَوْ مَشَى مَعَهُ لَكَانَ خَيْرًا مِنْ إِعْتِكَافِهِ, وَاللّٰهِ, لَأَنْ أَمْشِى مَعَكَ فِي حَاجَتِكَ أَحَبَّ إِلَيَّ مِنْ إِعْتِكَافِ شَهْرٍ.

'ಅವರು ಆ ವ್ಯಕ್ತಿಯೊಂದಿಗೆ ಮಸೀದಿಯಿಂದ ಹೊರಟು ಹೋಗುವುದು ಅವರಿಗೆ ಇಅತಿಕಾಫ್‌ಗಿಂತ ಹೆಚ್ಚು ಶ್ರೇಷ್ಠವಾಗಿತ್ತು. ಅಲ್ಲಾಹನಾಣೆ! ಒಂದು ತಿಂಗಳು ಇಅತಿಕಾಫ್ ನಿರ್ವಹಿಸುವುದಕ್ಕಿಂತ ನನಗೆ ಹೆಚ್ಚು ಇಷ್ಟವಾದುದು ನಿಮ್ಮ ಅವಶ್ಯಕತೆಗಳನ್ನು ಪೂರ್ತೀಕರಿಸಲಿಕ್ಕಾಗಿ ನಿಮ್ಮೊಂದಿಗೆ ಹೊರಡುವುದಾಗಿರುತ್ತದೆ.'[6]

ಇನ್ನೊಂದು ಸಂದರ್ಭದಲ್ಲಿ ಅವರು ಈ ರೀತಿ ಹೇಳಿರುವರು:

لَأَنْ أَقْضِيَ لِمُسْلِمٍ حَاجَةً أَحَبَّ إِلَيَّ مِنْ أَنْ أُصَلِّيَ أَلْفَ رَكْعَةٍ

'ಒಬ್ಬ ಮುಸ್ಲಿಮನ ಅಗತ್ಯವನ್ನು ನೆರವೇರಿಸಿಕೊಡುವುದು ನನ್ನ ಮಟ್ಟಿಗೆ ಒಂದು ಸಾವಿರ ರಕಅತ್ ನಮಾಝ್‌ಗಿಂತ ಶ್ರೇಷ್ಠವಾಗಿದೆ.'[7]

ಇಅತಿಕಾಫ್‌ನಂತಹ ಉತ್ಕೃಷ್ಟ ಕರ್ಮದ ಗೌರವ ಮತ್ತು ಮಹತ್ವವನ್ನು

ನಿರ್ಲಕ್ಷಿಸುವುದು ಈ ಹದೀಸ್ ವಚನದ ಉದ್ದೇಶವಲ್ಲ ಎಂಬುದನ್ನು ವಿಶೇಷವಾಗಿ ಗಮನದಲ್ಲಿಟ್ಟುಕೊಳ್ಳಬೇಕು. ಧರ್ಮದ ಬಗ್ಗೆ, ದೇವನ ಸಾಮಿಪ್ಯದ ಬಗ್ಗೆ, ಪುಣ್ಯ ಕೆಲಸಗಳ ಬಗ್ಗೆ ಜನರ ಮನಸ್ಸಿನಲ್ಲಿ ಬೇರೂರಿರುವ ಕೆಲವು ಮೌಢ್ಯಗಳಿವೆ. ಧರ್ಮವೆಂದರೆ ಕೇವಲ ಪ್ರಾರ್ಥನೆ, ಆರಾಧನೆ ಮತ್ತು ಕೀರ್ತನೆಗಳಾಗಿವೆ ಎಂಬ ಅಪನಂಬಿಕೆಗಳು ಎಲ್ಲ ಕಾಲಗಳಲ್ಲಿಯೂ ಮನುಷ್ಯರ ಹೃದಯಗಳಲ್ಲಿ ನೆಲೆನಿಂತಿರುವುದನ್ನು ಕಾಣಬಹುದಾಗಿದೆ. ಪ್ರವಾದಿ(ಸ) ಈ ನಂಬಿಕೆಯನ್ನು ಬೇರು ಸಹಿತ ಕಿತ್ತೆಸೆದಿದ್ದರು.

---

1. ಇಬ್ನುಮಾಜ: 1781.
2. ತಬ್ರಾನಿ - ಕಬೀರ್: 2888, ಬೈಹಕಿ - ಶುಅ್‌ಬುಲ್ ಈಮಾನ್: 3966.
3. ಬುಖಾರಿ - ಅತ್ತಾರೀಖ್: 1-2/320, ಇಬ್ನು ಅಬಿದ್ದುನ್ಯಾ ಖದಾಉಲ್ ಹವಾಇಜ್: 29.
4. ಅಸ್‌ಬಹಾನಿ - ತರ್‌ಹೀಬ್: 1148, ಅಬೂ ಯಅ್‌ಲಾ: 2789.
5. ತಬ್ರಾನಿ - ಕಬೀರ್: 13334, ಇಬ್ನು ಅಬಿದ್ದುನ್ಯಾ - ಖದಾಇಲ್ ಹವಾಇಜ್: 49, ಸುಯೂತಿ - ಜಾಮಿಉಸ್ಸಗೀರ್: 2350.
6. ಇಬ್ನು ಅಬಿದ್ದುನ್ಯಾ - ಖದಾಉಲ್ ಹವಾಇಜ್: 63.
7. ಇಬ್ನು ಅಬಿದ್ದುನ್ಯಾ - ಖದಾಉಲ್ ಹವಾಇಜ್: 37.

25. ಶ್ರೇಷ್ಠ ಕರ್ಮಗಳು

عَنْ اِبْنِ عُمَرَ رَضِيَ اللّٰهُ عَنْهُ: أَنَّ رَجُلًا جَاءَ إِلَى النَّبِيِّ ﷺ فَقَالَ: يَا رَسُوْلَ اللّٰهِ، أَيُّ النَّاسِ أَحَبُّ إِلَى اللّٰهِ تَعَالَى؟ وَأَيُّ الْأَعْمَالِ أَحَبُّ إِلَى اللّٰهِ؟ فَقَالَ رَسُوْلُ اللّٰهِ ﷺ: أَحَبُّ النَّاسِ إِلَى اللّٰهِ تَعَالَى أَنْفَعُهُمْ لِلنَّاسِ، وَأَحَبُّ الْأَعْمَالِ إِلَى اللّٰهِ سُرُوْرٌ تُدْخِلُهُ عَلَى مُسْلِمٍ، أَوْ تَكْشِفُ عَنْهُ كُرْبَةً، أَوْ تَقْضِيْ عَنْهُ دَيْنًا، أَوْ تَطْرُدُ عَنْهُ جُوْعًا، وَلَأَنْ أَمْشِيَ مَعَ أَخِي فِي حَاجَةٍ أَحَبُّ إِلَيَّ مِنْ أَنْ أَعْتَكِفَ فِي هٰذَا الْمَسْجِدِ (يَعْنِي مَسْجِدَ الْمَدِيْنَةِ) شَهْرًا، وَمَنْ كَفَّ غَضَبَهُ سَتَرَ اللّٰهُ عَوْرَتَهُ، وَمَنْ كَظَمَ غَيْظَهُ وَلَوْ شَاءَ أَنْ يُمْضِيَهُ أَمْضَاهُ مَلَأَ اللّٰهُ قَلْبَهُ رَجَاءً يَوْمَ الْقِيَامَةِ، وَمَنْ مَشَى مَعَ أَخِيْهِ فِي حَاجَةٍ حَتَّى يَتَهَيَّأَ لَهُ أَثْبَتَ اللّٰهُ قَدَمَهُ يَوْمَ تَزُوْلُ الْأَقْدَامُ.

ಇಬ್ನು ಉಮರ್(ರ) ಹೇಳುತ್ತಾರೆ. ಒಬ್ಬರು ಪ್ರವಾದಿಯವರೊಡನೆ(ಸ) ಪ್ರಶ್ನಿಸಿದರು: ಅಲ್ಲಾಹನ ಸಂದೇಶವಾಹಕರೇ, ಜನರ ಪೈಕಿ ಅಲ್ಲಾಹನಿಗೆ ಹೆಚ್ಚು ಪ್ರಿಯರು ಯಾರು? ಅಲ್ಲಾಹನಿಗೆ ಹೆಚ್ಚು ಇಷ್ಟವಾಗುವ ಕೆಲಸ ಯಾವುದು? ಪ್ರವಾದಿ(ಸ) ಹೇಳಿದರು: ಜನರಿಗೆ ಹೆಚ್ಚು ಉಪಕಾರ ಮಾಡುವವರು ಅಲ್ಲಾಹನಿಗೆ ಹೆಚ್ಚು ಪ್ರಿಯರಾಗುತ್ತಾರೆ. ಅಲ್ಲಾಹನಿಗೆ ಹೆಚ್ಚು ಇಷ್ಟವಾಗುವ ಕೆಲಸ ಒಬ್ಬ ಮುಸ್ಲಿಮನಿಗೆ ನಿನ್ನ ಕಾರಣದಿಂದಾಗಿ ಸಂತೋಷ ಲಭಿಸುವುದಾಗಿರುತ್ತದೆ. ಅಲ್ಲದಿದ್ದರೆ ಅವನ ಒಂದು ಸಂಕಷ್ಟ ವನ್ನು ನೀಗಿಸುವುದು ಅಥವಾ ಹಸಿವೆಯನ್ನು ನೀಗಿಸುವುದು. ಖಂಡಿತ

ವಾಗಿಯೂ ಒಬ್ಬ ಸಹೋದರನೊಂದಿಗೆ ಅವನ ಅಗತ್ಯವನ್ನು ಪೂರೈಸಿ ಕೊಡಲು ಹೋಗುವುದು, ಈ ಮಸೀದಿಯಲ್ಲಿ (ಮಸ್ಜಿದುನ್ನಬವಿ) ಒಂದು ತಿಂಗಳು ಪೂರ್ತಿ ಇಅ್ತಿಕಾಫ್ ಕುಳಿತುಕೊಳ್ಳುವುದಕ್ಕಿಂತ ನನಗೆ ಹೆಚ್ಚು ಪ್ರಿಯವಾಗಿದೆ. ಒಬ್ಬ ವ್ಯಕ್ತಿ ತನ್ನ ಕೋಪವನ್ನು ನಿಯಂತ್ರಿಸಿದರೆ, ಅಲ್ಲಾಹ್ ಅವನ ಕುಂದು ಕೊರತೆ ಗಳನ್ನು ಅಡಗಿಸುವನು. ಪ್ರತೀಕಾರವೆಸಗುವ ಸಾಮರ್ಥ್ಯವಿದ್ದೂ ತನ್ನ ದ್ವೇಷವನ್ನು ನಿಯಂತ್ರಿಸಿಕೊಂಡವನ ಹೃದಯವನ್ನು ಅಲ್ಲಾಹನು ಅಂತ್ಯ ದಿನದಂದು ಪ್ರತೀಕ್ಷೆಯಿಂದ ತುಂಬುವನು. ತನ್ನ ಸಹೋದರನ ಅಗತ್ಯಗಳನ್ನು ಪೂರೈಸಿಕೊಡಲಿಕ್ಕಾಗಿ ಅವನೊಂದಿಗೆ ನಡೆದ ಕಾಲಿನ ಪಾದಗಳನ್ನು ಎಲ್ಲ ಪಾದಗಳೂ ಎಡವಿ ಬೀಳುವ ಒಂದು ದಿನ ಅಲ್ಲಾಹನು ದೃಢವಾಗಿ ನಿಲ್ಲಿಸುವನು.*

ಅಲ್ಲಾಹನೊಂದಿಗಿನ ಪ್ರೀತಿ ಮತ್ತು ಸಹಜೀವಿಗಳ ಸೇವೆಯು ಇಸ್ಲಾಮಿನಲ್ಲಿ ಬಹಳ ಪ್ರಾಮುಖ್ಯತೆಯಿರುವ ಕೆಲಸಗಳಾಗಿವೆ. ಬೇರ್ಪಡಿಸಲು ಸಾಧ್ಯವಾಗದ ರೀತಿ ಯಲ್ಲಿ ಅವು ಪರಸ್ಪರ ಪೂರಕಗಳಾಗಿವೆ. ಅಲ್ಲಾಹನೊಂದಿಗಿರುವ ಪ್ರೀತಿ, ಅನುರಾಗವು ಸಕಲ ಸೃಷ್ಟಿಗಳೊಂದಿಗೆ ಕರುಣೆ ಮತ್ತು ದಯೆಯಾಗಿ ತುಂಬಿ ತುಳುಕುತ್ತದೆ. ಒಬ್ಬ ವ್ಯಕ್ತಿ ಅಲ್ಲಾಹನಿಂದ ದೂರವಾಗುತ್ತಲೇ ಸೃಷ್ಟಿಗಳಿಂದಲೂ ಅಗಲುತ್ತಾ ಹೋಗುತ್ತಾನೆ. ಅಲ್ಲಾಹನ ಸಾಮಿಪ್ಯ ಗಳಿಸುತ್ತಿರುವಂತೆಯೇ ಸೃಷ್ಟಿಗಳ ಸಾಮಿಪ್ಯವನ್ನೂ ಗಳಿಸುತ್ತಾನೆ. ಪ್ರವಾದಿ(ಸ) ಹೇಳಿರುವರು: اَلْخَلْقُ كَلُّهُمْ عِيَالُ اللهِ، وَأَحَبُّ الْخَلْقِ إِلَى اللهِ أَنْفَعُهُمْ لِعِيَالِهِ ಸೃಷ್ಟಿಗಳೆಲ್ಲವೂ ಅಲ್ಲಾಹನ ಕುಟುಂಬವಾಗಿದೆ. ಅವನ ಕುಟುಂಬಕ್ಕೆ ಹೆಚ್ಚು ಉಪಕಾರ ವನ್ನು ಮಾಡುವವರು ಯಾರೋ ಅವರೇ ಅಲ್ಲಾಹನಿಗೆ ಅತಿ ಹೆಚ್ಚು ಪ್ರಿಯರು.[1]

ಇಸ್ಲಾಮಿನ ದೃಷ್ಟಿಯಲ್ಲಿ ಜನಸೇವೆಯು ಒಂದು ಲೌಕಿಕ ಕೆಲಸವಲ್ಲ, ಅಲ್ಲಾಹನಿ ಗಾಗಿರುವ ಇಬಾದತ್ ಮತ್ತು ಪುಣ್ಯ ಕೆಲಸವಾಗಿದೆ. ಜನರ ಸೇವೆಯನ್ನು ಮಾಡುವವರು, ಜನರನ್ನು ಪ್ರೀತಿಸುವವರು ಆ ಮೂಲಕ ಅಲ್ಲಾಹನ ಸೇವೆಯನ್ನು ಮಾಡುತ್ತಾರೆ. ಜನರನ್ನು ದ್ವೇಷಿಸುವವರು ಅಲ್ಲಾಹನನ್ನು ದ್ವೇಷಿಸುತ್ತಾರೆ. ಅಬೂಹುರೈರಾ(ರ) ವರದಿ ಮಾಡಿರುವ ಪ್ರವಾದಿವಚನದಲ್ಲಿ ಈ ರೀತಿ ಇದೆ:

إِنَّ اللّٰهَ عَزَّ وَجَلَّ يَقُوْلُ يَوْمَ الْقِيَامَةِ: يَابْنَ آدَمَ، مَرِضْتُ فَلَمْ تَعُدْنِي، قَالَ: يَارَبِّ، كَيْفَ أَعُوْدُكَ

* ತಬ್ರಾನಿ – ಕಬೀರ್: 13646, ಇಬ್ನು ಅಬಿದ್ದುನ್ಯಾ – ಖದಾಉಲ್ ಹವಾಇಜ್: 36 ಮುಂತಾದವರು ಉದ್ಧರಿಸಿರುವ ಪ್ರವಾದಿವಚನವಿದು. ಇದರ ವರದಿಯ ಪರಂಪರೆ ಹಸನ್ ಆಗಿದೆ ಎಂದು ಹದೀಸ್ ಪಂಡಿತ ರಾದ ನಸೀರುದ್ದೀನ್ ಅಲ್‌ಬಾನಿ ಸಾಕ್ಷ್ಯ ನುಡಿದಿದ್ದಾರೆ. (ಸಿಲ್‌ಸಿಲತುಲ್ ಅಹಾದೀಸಿಸ್ಸಹೀಹ: 906)

وَأَنْتَ رَبُّ الْعَالَمِيْنِ؟ قَالَ: أَمَا عَلِمْتَ أَنَّ عَبْدِي فُلاَنًا مَرِضَ فَلَمْ تَعُدْهُ، أَمَا عَلِمْتَ أَنَّكَ لَوْ عُدْتَهُ لَوَجَدْتَنِي عِنْدَهُ؟ يَابْنَ آدَمَ ، إِسْتَطْعَمْتُكَ فَلَمْ تُطْعِمْنِي، قَالَ: يَا رَبِّ، كَيْفَ أُطْعِمُكَ وَأَنْتَ رَبُّ الْعَالَمِيْنِ؟ قَالَ: أَمَا عَلِمْتَ أَنَّهُ اسْتَطْعَمَكَ عَبْدِي فُلَانٌ فَلَمْ تُطْعِمْهُ، أَمَا عَلِمْتَ أَنَّكَ لَوْ أَطْعَمْتَهُ لَوَجَدْتَ ذٰلِكَ عِنْدِى؟ يَابْنَ آدَمَ، اسْتَسْقَيْتُكَ فَلَمْ تَسْقِنِي، قَالَ: يَا رَبِّ، كَيْفَ أَسْقِيْكَ وَأَنْتَ رَبُّ الْعَالَمِيْنِ؟ قَالَ: اسْتَسْقَاكَ عَبْدِي فُلَانٌ فَلَمْ تَسْقِهِ، أَمَا إِنَّكَ لَوْ سَقَيْتَهُ لَوَجَدْتَ ذٰلِكَ عِنْدِي؟

ಅಂತ್ಯದಿನದಂದು ತನ್ನ ಮುಂದೆ ಹಾಜರಾಗುವ ವ್ಯಕ್ತಿಯೊಂದಿಗೆ ಅಲ್ಲಾಹನು ಪ್ರಶ್ನಿಸುವನು, 'ಓ ಮನುಷ್ಯಾ, ನಾನು ರೋಗಿಯಾಗಿದ್ದೆ. ನೀನೇಕೆ ನನ್ನ ಸಂದರ್ಶನ ನಡೆಸಲಿಲ್ಲ?' ಮನುಷ್ಯ ಪ್ರಶ್ನಿಸುವನು, 'ನನ್ನ ಪ್ರಭುವೇ, ನಾನು ನಿನ್ನನ್ನು ಸಂದರ್ಶಿಸುವುದೇ? ನೀನು ಸರ್ವಲೋಕಗಳ ಪರಿಪಾಲಕನಲ್ಲವೇ?' ಆಗ ಅಲ್ಲಾಹನು ಹೇಳುವನು, 'ನನ್ನ ಇಂತಿಂತಹ ದಾಸನು ರೋಗಿಯಾಗಿದ್ದುದು ನಿನಗೆ ತಿಳಿದಿಲ್ಲವೇ? ಮತ್ತೇಕೆ ನೀನು ಅವನನ್ನು ಸಂದರ್ಶಿಸಲಿಲ್ಲ? ಅವನನ್ನು ನೀನು ಸಂದರ್ಶಿಸಿದರೆ ನಿಶ್ಚಯವಾಗಿಯೂ ನೀನು ಅವನ ಬಳಿ ನನ್ನನ್ನು ಕಾಣುತ್ತಿದ್ದೆ. ಆದಮನ ಪುತ್ರನೇ, ನಾನು ನಿನ್ನಿಂದ ಆಹಾರ ಬೇಡಿದ್ದೆ. ಆದರೆ ನೀನು ನನಗೆ ಆಹಾರ ಕೊಟ್ಟಿರಲಿಲ್ಲ.' ಮಾನವನು ಹೇಳುವನು, 'ನನ್ನ ಪ್ರಭುವೇ, ನಾನು ನಿನಗೆ ಆಹಾರ ಹೇಗೆ ನೀಡಲಿ? ನೀನಂತೂ ವಿಶ್ವದೊಡೆಯನಾಗಿರುವೆ.' ಆಗ ಅಲ್ಲಾಹನು ಹೇಳುವನು, 'ನಿನಗೆ ತಿಳಿದಿಲ್ಲವೇ? ನನ್ನ ಇಂತಿಂತಹ ದಾಸನು ಹಸಿದಿದ್ದನು. ಅವನು ನಿನ್ನೊಡನೆ ಆಹಾರ ಬೇಡಿದ್ದನು. ಆದರೆ ನೀನು (ನಿನ್ನ ಬಳಿ ಸಾಕಷ್ಟು ಆಹಾರವಿದ್ದರೂ) ಆತನಿಗೆ ಕೊಟ್ಟಿರಲಿಲ್ಲ. ಅಂದು ನೀನು ಅವನ ಹೊಟ್ಟೆಯ ಹಸಿವಿನ ಬೆಂಕಿಯನ್ನು ನಂದಿಸಿರುತ್ತಿದ್ದರೆ, ಅದರ ಪುಣ್ಯಫಲವನ್ನು ನನ್ನ ಬಳಿ ಇಂದು ಕಾಣುತ್ತಿದ್ದೆ.' ಆ ಬಳಿಕ ಅಲ್ಲಾಹನು ಹೇಳುವನು, 'ಆದಮನ ಪುತ್ರನೇ, ನಾನು ನಿನ್ನೊಡನೆ ನೀರನ್ನು ಬೇಡಿದ್ದೆ. ಆದರೆ ನೀನು ನನ್ನ ದಾಹವನ್ನು ನೀಗಿಸಲಿಲ್ಲ.' ಅವನು ಹೇಳುವನು, 'ನನ್ನ ಪ್ರಭುವೇ, ನಿನಗೆ ನಾನು ನೀರನ್ನು ಹೇಗೆ ಒದಗಿಸಲಿ? ನೀನಂತೂ ವಿಶ್ವದೊಡೆಯನಾಗಿರುವೆ.' ಇದಕ್ಕುತ್ತರವಾಗಿ ಅಲ್ಲಾಹನು ಹೇಳುವನು, 'ನಿನಗೆ ತಿಳಿದಿಲ್ಲವೇ? ನನ್ನ ಇಂತಿಂತಹ ದಾಸನು ನಿನ್ನಿಂದ ನೀರನ್ನು ಬೇಡಿದ್ದನು. ಆದರೆ ನೀನು ಅವನ ದಾಹವನ್ನು ನೀಗಿಸಿರಲಿಲ್ಲ. ಅಂದು ನೀನು ಅವನ ದಾಹವನ್ನು ನೀಗಿಸಿರುತ್ತಿದ್ದರೆ, ಇಂದು ಅದರ ಪುರಸ್ಕಾರವನ್ನು ನನ್ನಿಂದ ಪಡೆಯುತ್ತಿದ್ದೆ.'[2]

ಸಮಾಜದಲ್ಲಿ ಸಂಕಷ್ಟಗಳನ್ನು ಅನುಭವಿಸುವವರಿಗೆ ಕೇವಲ ಸಮಾಧಾನದ ಮಾತುಗಳನ್ನು ಹೇಳಿ ಕಳುಹಿಸಲು ಪ್ರವಾದಿ(ಸ) ಕಲಿಸಲಿಲ್ಲ. ಬದಲಾಗಿ ಅವರು ಅನು ಭವಿಸುತ್ತಿರುವ ಸಂಕಷ್ಟಗಳಿಂದ ಅವರನ್ನು ಸಂರಕ್ಷಿಸಲು, ಅವರ ಕಷ್ಟ-ತೊಂದರೆಗಳನ್ನು ದೂರ ಮಾಡಲು ಕಲಿಸಿ ಕೊಟ್ಟಿದ್ದಾರೆ. ಸಾಧ್ಯವಾದರೆ ನೀವು ಅವರ ಸಾಲವನ್ನು ಪಾವತಿಸಿರಿ, ಅದಲ್ಲದಿದ್ದರೆ ಹಸಿವು ನೀಗಿಸಿರಿ, ಇಲ್ಲದಿದ್ದರೆ ಕಷ್ಟವನ್ನು ದೂರೀಕರಿಸಿರಿ ಎಂದು ಮುಂತಾಗಿ ಪ್ರವಾದಿವಚನದಲ್ಲಿ ಪ್ರತ್ಯೇಕವಾಗಿ ನೆನಪಿಸಿರುವುದು ಈ ಕಾರಣ ಕ್ಕಾಗಿರುತ್ತದೆ. ಮಧುರ ವಾದ ಬೋಧನೆಗಳಿಂದ ಪ್ರಯೋಜನವಿಲ್ಲ. ಪ್ರಾಯೋಗಿಕ ವಾಗಿ ಜನರಿಗಾಗಿ ಕೆಲಸ ಮಾಡಬೇಕು ಎಂಬುದು ಇದರ ಸಾರಾಂಶವಾಗಿದೆ. ಜನರಿಗೆ ಸಹಾಯ ಮಾಡಲು ಸಾಧ್ಯವಿಲ್ಲದಿದ್ದರೆ, ಕನಿಷ್ಠಪಕ್ಷ ಅವರಿಗೆ ಉಪದ್ರ ಮಾಡುವು ದರಿಂದಲಾದರೂ ದೂರ ಉಳಿಯಬೇಕು. ಇದು ಕೂಡ ಪ್ರತಿಫಲಾರ್ಹವಾದ ಸತ್ಕರ್ಮವಾಗಿರುತ್ತದೆ. ಕೆಲವರ ಜೊತೆಗಿನ ದ್ವೇಷ ಮತ್ತು ಹಗೆತನವು ಜನರು ಅವರ ಮೇಲೆ ಅತಿರೇಕವೆಸಗಲು ಪ್ರೇರಣೆ ನೀಡುವ ವಿಷಯಗಳಾಗಿವೆ. ಕೋಪವನ್ನು ನಿಯಂತ್ರಿಸಲು ಸಾಧ್ಯವಾದರೆ, ಒಂದು ಹಂತದ ವರೆಗೆ ಅತಿರೇಕಗಳಿಂದ ರಕ್ಷಣೆ ಹೊಂದಲು ಸಾಧ್ಯವಾಗುತ್ತದೆ. ಆದುದರಿಂದ ಇಂತಹ ಪೈಶಾಚಿಕ ಸ್ವಭಾವಗಳ ಬಗ್ಗೆ ಬಹಳ ಜಾಗರೂಕತೆಯನ್ನು ಪಾಲಿಸಬೇಕೆಂದು ಪ್ರವಾದಿ(ಸ) ನಮ್ಮನ್ನು ಎಚ್ಚರಿಸಿರು ವರು. ಜನರೊಂದಿಗೆ ದಯೆ-ಕಾರುಣ್ಯದಿಂದ ವರ್ತಿಸು ವವರು ಪ್ರಥಮವಾಗಿ ಇಂತಹ ದುರ್ಗುಣಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಬೇಕಾಗಿದೆ.

ಈ ಹದೀಸ್‌ನ ಕೊನೆಯ ಭಾಗದಲ್ಲಿ ಜನಸೇವೆ ಮಾಡಿದವರಿಗೆ ಸಿಗುವ ಹಿರಿದಾದ ಪ್ರತಿಫಲದ ಕುರಿತು ಪ್ರಸ್ತಾಪಿಸಲಾಗಿದೆ. ಅಂತ್ಯದಿನದಂದು ವಿಚಾರಣೆ ನಡೆಯುವಾಗ ಪ್ರತಿಯೊಬ್ಬರು ನರಕಕ್ಕೆ ಅಭಿಮುಖವಾಗಿ ನಿಲ್ಲಬೇಕಾಗಿ ಬರುವ ಸಂದರ್ಭವೊಂದಿದೆ. ಸತ್ಯವಿಶ್ವಾಸಿಗಳು ಮಾತ್ರ ಸುರಕ್ಷಿತರಾಗುವ, ಸತ್ಯನಿಷೇಧಿಗಳು ನರಕಾಗ್ನಿಗೆ ಬೀಳಲ್ಪಡುವ ಸಂದರ್ಭ. ಆ ಸಂದರ್ಭದಲ್ಲಿ ಪ್ರವಾದಿಗಳು ಕೂಡ ತಾವು ಸುರಕ್ಷಿತರಾಗಲು ಅಲ್ಲಾಹನಲ್ಲಿ ಪ್ರಾರ್ಥಿಸುತ್ತಿರುವರು ಎಂಬುದಾಗಿ ಹದೀಸ್‌ಗಳಲ್ಲಿ ಬಂದಿರುತ್ತದೆ. ಇಂತಹ ಸನ್ನಿವೇಶದಲ್ಲಿ ವ್ಯಕ್ತಿಯ ಕಾಲು ಎಡವಿ ಬೀಳದೆ ದೃಢವಾಗಿ ನಿಲ್ಲುವುದು ಎಂದರೆ ಅದು ಬಹಳ ದೊಡ್ಡ ಅನುಗ್ರಹವಾಗಿದೆ.

ಇಅ್‌ತಿಕಾಫ್ ಮತ್ತು ಜನಸೇವೆಯ ಕುರಿತು ಒಂದು ಹೋಲಿಕೆ ಕೂಡ ಈ ಹದೀಸಿ ನಲ್ಲಿ ಕಾಣಬಹುದಾಗಿದೆ. ಇಅ್‌ತಿಕಾಫ್ ಅತಿ ಶ್ರೇಷ್ಠವಾದ ಪುಣ್ಯ ಲಭಿಸುವ ಒಂದು ಮಹತ್ಕಾರ್ಯವಾಗಿದೆ. ಅದು ಮದೀನದ ಮಸೀದಿಯಲ್ಲಾದರೆ, ಅದರ

ಪ್ರತಿಫಲವು ಅಗಣಿತವಾಗಿರುತ್ತದೆ. ಅಂತಹ ಮೂವತ್ತು ದಿನ ರಾತ್ರಿಗಳ ಇಅ್ತಿಕಾಫ್ ನಿರ್ವಹಿಸುವು ದಕ್ಕಿಂತ ಒಬ್ಬ ಸಹೋದರನ ಸಮಸ್ಯೆಯನ್ನು ಪರಿಹರಿಸಲಿಕ್ಕಾಗಿ, ಅವನ ಜೊತೆ ಹೊರಟು ಹೋಗುವುದು ಹೆಚ್ಚು ಪುಣ್ಯದಾಯಕ ಕಾರ್ಯವಾಗಿದೆ ಎಂಬು ದಾಗಿ ಪ್ರವಾದಿ(ಸ) ನೆನಪಿಸಿಕೊಟ್ಟಿರುವರು. ಸಹಜೀವಿಗಳ ಸಂಕಷ್ಟಗಳನ್ನು ಪರಿಗಣಿ ಸದೆ, ಅದನ್ನು ನಿವಾರಿಸಲು ಪ್ರಯತ್ನಿಸದೆ, ಮಸೀದಿ-ಮಠಗಳಲ್ಲಿ ಪ್ರಾರ್ಥನೆ, ಕೀರ್ತನೆ, ಭಜನೆ, ಸ್ತುತಿಗೀತೆಗಳಲ್ಲಿ ದೇವಸಂಪ್ರೀತಿಯನ್ನು ಹುಡುಕುವ ವ್ಯಕ್ತಿಗಳ ಬಗ್ಗೆ ಪ್ರವಾದಿವಚನವೊಂದು ಹೀಗೆ ವಿಮರ್ಶಿಸುತ್ತದೆ:

مَنْ أَرَادَ أَنْ تُسْتَجَابَ دَعْوَتُهُ وَأَنْ تُكْشَفَ كُرْبَتُهُ فَلْيُفَرِّجْ عَنْ مُعْسِرٍ

ಯಾರಾದರೂ ತನ್ನ ಪ್ರಾರ್ಥನೆ ಸ್ವೀಕರಿಸಲ್ಪಡಬೇಕು, ಸಂಕಷ್ಟಗಳು ದೂರೀಕರಿ ಸಲ್ಪಡ ಬೇಕು ಎಂದು ಬಯಸುವುದಾದರೆ, ಅವನು ಸಂಕಷ್ಟಗಳನ್ನು ಅನುಭವಿಸುವ ವರಿಗೆ ಸಾಂತ್ವನವನ್ನು ನೀಡಲಿ.[3]

---

1. ತಬ್ರಾನಿ: 10033.
2. ಮುಸ್ಲಿಮ್: 2569.
3. ಅಹ್ಮದ್: 2/23, ಅಬೂ ಯಅ್ಲಾ.

26. ಕರ್ಮಗಳು ನಿರರ್ಥಕವಾಗದಿರಲಿ

عَنْ زَيْدِ بْنِ أَسْلَمَ رَضِيَ اللّٰهُ عَنْهُ، عَنْ أَبِيْهِ: أَنَّ عُمَرَ رَضِيَ اللّٰهُ عَنْهُ خَرَجَ إِلَى الْمَسْجِدِ، فَوَجَدَ مُعَاذًا عِنْدَ قَبْرِ رَسُوْلِ اللّٰهِ ﷺ يَبْكِي! فَقَالَ: مَا يُبْكِيْكَ؟ قَالَ: حَدِيْثٌ سَمِعْتُهُ مِنْ رَسُوْلِ اللّٰهِ ﷺ قَالَ: "اَلْيَسِيْرُ مِنَ الرِّيَاءِ شِرْكٌ، وَمَنْ عَادَ أَوْلِيَاءَ اللّٰهِ فَقَدْ بَارَزَ اللّٰهَ بِالْمُحَارَبَةِ، إِنَّ اللّٰهَ يُحِبُّ الْأَبْرَارَ، الْأَتْقِيَاءَ، الْأَخْفِيَاءَ، اَلَّذِيْنَ إِنْ غَابُوْا لَمْ يُفْتَقَدُوْا، وَإِنْ حَضَرُوا لَمْ يُعْرَفُوا، قُلُوْبُهُمْ مَصَابِيْحُ الْهُدَى، يَخْرُجُوْنَ مِنْ كُلِّ غَبْرَاءَ مُظْلِمَةٍ

ಸಅದ್ ಬಿನ್ ಅಸ್ಲಮಿ(ರ) ವರದಿ ಮಾಡಿರುತ್ತಾರೆ. ಒಮ್ಮೆ ಉಮರ್(ರ) ರವರು ಮಸೀದಿಯಿಂದ ಹೊರ ಬರುತ್ತಿರುವಾಗ ಪ್ರವಾದಿವರ್ಯರ(ಸ) ಗೋರಿಯ ಬಳಿ ಕುಳಿತು ಮುಆದ್ ಬಿನ್ ಜಬಲ್(ರ) ಅಳುತ್ತಿರುವುದು ಕಾಣಿಸಿತು. ಉಮರ್(ರ) ಪ್ರಶ್ನಿಸಿದರು: ಯಾಕಾಗಿ ಅಳುತ್ತಿರುವಿರಿ? ಮುಆದ್(ರ) ಹೇಳಿದರು: ಪ್ರವಾದಿ ಮುಹಮ್ಮದ್(ಸ)ರಿಂದ ಆಲಿಸಿದ ಒಂದು ಹದೀಸ್ ವಚನವು ನನ್ನನ್ನು ಅಳುವಂತೆ ಮಾಡಿತು. ಅವರು(ಸ) ಹೀಗೆ ಹೇಳಿದ್ದರು - ಜನರಿಗೆ ತೋರಿಸಲಿಕ್ಕಾಗಿ ಮಾಡುವ ಕೆಲಸಗಳ ಪೈಕಿ ಅತಿ ನಿಕೃಷ್ಟವಾದುದು ಕೂಡ ಶಿರ್ಕ್ (ಅಲ್ಲಾಹನೊಂದಿಗೆ ಸಹಭಾಗಿ ಗೊಳಿಸುವುದು) ಆಗಿರುತ್ತದೆ. ಅಲ್ಲಾಹನ ಪ್ರೀತಿಪಾತ್ರರಾದ ವ್ಯಕ್ತಿಗಳೊಡನೆ ಶತ್ರುತ್ವ ಬೆಳೆಸುವವನು ಅಲ್ಲಾಹನೊಂದಿಗೆ ಯುದ್ಧ ಹೂಡಿದಂತೆ. ಖಂಡಿತವಾಗಿಯೂ ಅಲ್ಲಾಹನು ಪುಣ್ಯ ಕೆಲಸ ಮಾಡುವವರನ್ನು, ಜಾಗರೂಕತೆ ಪಾಲಿಸುವವರನ್ನು ಮತ್ತು ರಹಸ್ಯವಾಗಿ ಪುಣ್ಯ ಕೆಲಸಗಳಲ್ಲಿ

ನಿರತರಾಗಿರುವವರನ್ನು ಇಷ್ಟಪಡುತ್ತಾನೆ. ಅಂತಹವರು ಸಭೆಯಲ್ಲಿ ಹಾಜ ರಾಗದಿದ್ದರೂ ಯಾರೂ ಅವರ ಬಗ್ಗೆ ವಿಚಾರಿಸುವುದಿಲ್ಲ. ಅವರು ಬಂದರೆ ಅವರ ಉಪಸ್ಥಿತಿಯನ್ನು ಪರಿಗಣಿಸುವುದಿಲ್ಲ. ಅವರ ಹೃದಯಗಳು ಸನ್ಮಾರ್ಗದ ದೀಪಗಳಂತಿರುತ್ತವೆ. ಅಂಧಕಾರವಿರುವ, ಜನವಿರಳ ಸ್ಥಳ ಗಳಿಂದೆಲ್ಲ ಅವರು ಹಾದು ಬರುವರು.*

ಪ್ರದರ್ಶನ ಪ್ರಿಯತೆಯು ಇಸ್ಲಾಮ್ ಬಹಳ ಕಟ್ಟುನಿಟ್ಟಾಗಿ ನಿಷೇಧಿಸಿರುವ ದುರ್ಗುಣಗಳ ಪೈಕಿ ಒಂದಾಗಿದೆ. ಯಾವುದೇ ಕೆಲಸವನ್ನು ಮಾಡುವಾಗ ಅಲ್ಲಾಹನ ಪ್ರೀತಿ ಮತ್ತು ಕಾರುಣ್ಯವನ್ನು ಬಯಸುವುದೆಂಬ ಗುರಿಯನ್ನು ಬಿಟ್ಟು ಜನರಿಂದ ಪ್ರಶಂಸೆ ಮತ್ತು ಗೌರವವು ಲಭಿಸಬೇಕು ಎಂದು ನಿರೀಕ್ಷಿಸುವಾಗ, ಇಂತಹ ದುರವಸ್ಥೆಗೆ ಮನುಷ್ಯ ತಲುಪಿ ಬಿಡುತ್ತಾನೆ. ಆಗ ಸತ್ಕರ್ಮಗಳು ಒಳಗೆ ಟೊಳ್ಳಾದ ಬಲೂನಿನಂತೆ ನೆಲೆ ಮತ್ತು ಬೆಲೆಯನ್ನು ಕಳೆದುಕೊಂಡು ಮೌಲ್ಯಹೀನವಾಗಿ ಬಿಡುವುದು.

ಪ್ರವಾದಿ ಗಳೆಲ್ಲರೂ ಕೇವಲ ಅಲ್ಲಾಹನ ಸಂಪ್ರೀತಿಯನ್ನು ಬಯಸಿ ಕರ್ಮನಿರತರಾಗಿದ್ದರು. ಯಾವ ಸೇವೆಗೂ ಜನರಿಂದ ಯಾವ ರೀತಿಯ ಪ್ರತ್ಯುಪಕಾರ ವನ್ನೂ ನಿರೀಕ್ಷಿಸಲಿಲ್ಲ. ನಿಸ್ವಾರ್ಥತೆ ಅವರ ಬಂಡವಾಳವಾಗಿತ್ತು. ಈ ಕಾರಣದಿಂದಲೇ ಎಲ್ಲ ರೀತಿಯ ಪ್ರಲೋಭನೆ ಮತ್ತು ಪೀಡನೆಗಳಿಂದ ಪಾರಾಗಲು ಅವರಿಗೆ ಸಾಧ್ಯ ವಾಯಿತು. ಪ್ರತಿಯೊಬ್ಬ ಪ್ರವಾದಿಯೂ ತನ್ನ ಸಮುದಾಯದೊಂದಿಗೆ ಈ ರೀತಿ ಹೇಳಿದ್ದರು, 'ಈ ಕಾರ್ಯಕ್ಕೆ ನಾನು ನಿಮ್ಮಿಂದ ಯಾವ ಪ್ರತಿಫಲವನ್ನೂ ಬಯಸು ವುದಿಲ್ಲ. ನನ್ನ ಪ್ರತಿಫಲವು ಸರ್ವಲೋಕಗಳ ಪಾಲಕ ಪ್ರಭುವಿನ ಬಳಿ ಇದೆ.'

(ಅಶ್ಶುಅರಾ: 109)

ಪ್ರವಾದಿಗಳು ಮಾತ್ರವಲ್ಲ, ಅವರ ಅನುಯಾಯಿಗಳ ಕುರಿತೂ ಪವಿತ್ರ ಕುರ್‌ಆನ್ ಈ ರೀತಿ ಹೇಳಿದೆ: ಅವರು ಅಲ್ಲಾಹನ ಮೇಲಿನ ಪ್ರೇಮದಿಂದ ದರಿದ್ರ ರಿಗೂ ಅನಾಥರಿಗೂ ಸೆರೆಯಾಳುಗಳಿಗೂ ಊಟ ಕೊಡುತ್ತಾರೆ (ಮತ್ತು) ನಾವು ನಿಮಗೆ ಕೇವಲ ಅಲ್ಲಾಹನಿಗಾಗಿ ಉಣಿಸುತ್ತಿದ್ದೇವೆ. ನಾವು ನಿಮ್ಮಿಂದ ಯಾವುದೇ ಪ್ರತಿಫಲ ವನ್ನಾಗಲಿ, ಕೃತಜ್ಞತೆಯನ್ನಾಗಲಿ ಬಯಸುವುದಿಲ್ಲ (ಎಂದು ಅವರೊಡನೆ ಹೇಳುತ್ತಾರೆ). **(ಅದ್ದಹ್ರ್: 8-9)**

---

* ಇಬ್ನು ಮಾಜ: 3989, ಹಾಕಿಮ್: 1/4, 3/270, ಬೈಹಕಿ – ಸುಹ್‌ದ್: 195, ಅಬೂ ನುಐಮ್ – ಹಿಲ್‌ಯತುಲ್ ಔಲಿಯಾಅ್: 1/15 ಮುಂತಾದವರು ಉದ್ಧರಿಸಿರುವರು. ಇದರ ವರದಿಯ ಪರಂಪರೆಯು ಸಹೀಹ್ ಆಗಿದೆಯೆಂದು ಹಾಕಿಮ್ ಅಭಿಪ್ರಾಯ ಪಡುತ್ತಾರೆ. ದಹಬಿ ಅದನ್ನು ಅಂಗೀಕರಿಸಿರುತ್ತಾರೆ.

ಜನರಿಗೆ ತೋರಿಸಲಿಕ್ಕಾಗಿ ಕೆಲಸ ಮಾಡುವವರು ತಮ್ಮನ್ನು ತಾವೇ ವಂಚಿಸುತ್ತಾರೆ. ಈ ಪ್ರದರ್ಶನ ಪ್ರಿಯತೆಯ ಕಾರಣದಿಂದಾಗಿ ತಮ್ಮ ಕರ್ಮಗಳನ್ನೇ ಸ್ವತಃ ನಷ್ಟಪಡಿಸಿಕೊಳ್ಳುತ್ತಾರೆ. ಪರಲೋಕದ ಪ್ರತಿಫಲ, ಸೌಭಾಗ್ಯ ಮತ್ತು ದೇವ ಸಂಪ್ರೀತಿಯನ್ನು ಅವರು ಆಗ್ರಹಿಸುವುದಿಲ್ಲ. ತಮ್ಮ ಕರ್ಮಗಳಿಗೆ ಜನರಿಂದ ಪ್ರಶಂಸೆ ಮತ್ತು ಮಾನ್ಯತೆ ಸಿಗಬೇಕೆಂಬ ಕ್ಷುಲ್ಲಕ ಲಾಭವನ್ನು ಅವರು ಬಯಸುತ್ತಾರೆ. ಆದ ಕಾರಣದಿಂದ ಅಂತ್ಯದಿನದಂದು ಅವರ ಕರ್ಮಪತ್ರದಲ್ಲಿ ಕೇವಲ ಶೂನ್ಯವೇ ತುಂಬಿರುವುದು. ಅಲ್ಲಾಹನ ವಿಶಿಷ್ಟವಾದ ಕರುಣೆ ಮತ್ತು ಪ್ರತಿಫಲವು ಆ ವ್ಯಕ್ತಿಗೆ ನಷ್ಟವಾಗಿ ಬಿಡುವುದು. ಅವರ ಕರ್ಮಗಳು ಮರಳಿನ ಅರಮನೆಯಂತೆ ಅವರ ಮುಂದೆಯೇ ಕುಸಿದು ಬೀಳುವುದು.

ಮಹ್ಮೂದ್ ಬಿನ್ ಲಬೀದ್(ರ) ವರದಿ ಮಾಡಿರುವ ಹದೀಸ್ ಹೀಗಿದೆ:

أَنَّ رَسُوْلَ اللهِ ﷺ قَالَ: "إِنَّ أَخْوَفَ مَا أَخَافُ عَلَيْكُمْ اَلشِّرْكُ الأَصْغَرُ" وَمَا الشِّرْكُ الأَصْغَرُ يَا رَسُوْلَ اللهِ؟ قَالَ: "اَلرِّيَاءُ، يَقُوْلُ اللهُ عَزَّ وَجَلَّ إِذَا جُزِيَ النَّاسُ بِأَعْمَالِهِمْ: إِذْهَبُوا إِلَى الَّذِيْنَ كُنْتُمْ تُرَاؤُوْنَ فِي الدُّنْيَا، فَانْظُرُوا هَلْ تَجِدُوْنَ عِنْدَهُمْ جَزَاءً!"

ಪ್ರವಾದಿ(ಸ) ಹೇಳಿದರು: ನಾನು ನಿಮ್ಮಿಂದ ಸಣ್ಣ ಶಿರ್ಕ್ ಸಂಭವಿಸುವುದರ ಬಗ್ಗೆ ಹೆಚ್ಚು ಭಯಪಡುತ್ತೇನೆ. ಒಬ್ಬರು ಪ್ರಶ್ನಿಸಿದರು: ಅಲ್ಲಾಹನ ಸಂದೇಶವಾಹಕರೇ! ಸಣ್ಣ ಶಿರ್ಕ್ ಎಂದರೇನು? ಪ್ರವಾದಿ(ಸ) ಹೇಳಿದರು: ಜನರಿಗಾಗಿ ಕರ್ಮಗಳನ್ನು ಮಾಡು ವುದು. ಅಂತ್ಯದಿನದಂದು ಅಲ್ಲಾಹನು ಅಂತಹ ವ್ಯಕ್ತಿಗಳೊಂದಿಗೆ, ಯಾರಿಗಾಗಿ ನೀವು ಭೂಮಿಯಲ್ಲಿ ಕರ್ಮಗಳನ್ನು ಮಾಡಿದ್ದಿರೋ, ಅವರೊಂದಿಗೆ ಅದಕ್ಕೆ ಪ್ರತಿಫಲವನ್ನು ಕೇಳಿ ಪಡೆಯಿರಿ ಎಂದು ಹೇಳುವನು.[1]

ಶಿರ್ಕ್‌ನ ವಿವಿಧ ರೂಪಗಳಲ್ಲಿ ಪ್ರದರ್ಶನ ಪ್ರಿಯತೆಯೂ ಒಂದಾಗಿದೆ. ಅಲ್ಲಾಹನಿಗೆ ಸಿಗಬೇಕಾದ ಹಕ್ಕುಗಳನ್ನು ಇತರರಿಗೆ ಹಂಚುವಾಗ ಶಿರ್ಕ್ ಉಂಟಾ ಗುತ್ತದೆ. ಕರ್ಮಗಳು ಮನುಷ್ಯನಿಂದ ಅಲ್ಲಾಹನಿಗೆ ಸಲ್ಲಬೇಕಾದ ಹಕ್ಕುಗಳಾಗಿವೆ. ಅದನ್ನು ಜನರಿಗಾಗಿ ಮಾಡಿದರೆ ಅದು ಅವರಿಗಾಗಿರುವ ಆರಾಧನೆಯಾಗಿ ಮಾರ್ಪಡುತ್ತದೆ. ಅಲ್ಲಾಹನಿಗೆ ನೀಡಬೇಕಾದು ದನ್ನು ಜನರಿಗೆ ನೀಡಿದಂತಾಗುತ್ತದೆ. ಈ ಕಾರಣದಿಂದಲೇ ರಿಯಾಅ್-ತೋರಿಕೆಯು ಶಿರ್ಕ್ ಆಗಿ ಮಾರ್ಪಡುತ್ತದೆ.

ಮಹ್ಮೂದ್ ಬಿನ್ ಲಬೀದ್(ರ) ವರದಿ ಮಾಡಿರುತ್ತಾರೆ:

خَرَجَ عَلَيْنَا النَّبِيُّ ﷺ فَقَالَ: "يَا أَيُّهَا النَّاسُ، إِيَّاكُمْ وَشِرْكَ السَّرَائِرِ" قَالُوا: يَا رَسُوْلَ اللّٰهِ وَمَا شِرْكُ السَّرَائِرِ؟ قَالَ: يَقُوْمُ الرَّجُلُ فَيُصَلِّي فَيُزَيِّنُ صَلَاتَهُ جَاهِدًا، لِمَا يَرَى مِنْ نَظَرِ النَّاسِ إِلَيْهِ فَذٰلِكَ شِرْكُ السَّرَائِرِ"

ಒಮ್ಮೆ ಪ್ರವಾದಿವರ್ಯರು(ಸ) ನಮ್ಮ ಬಳಿ ಬಂದು ಈ ರೀತಿ ಹೇಳಿದರು, 'ಜನರೇ! ರಹಸ್ಯ ಬಹುದೇವಾರಾಧನೆಯ ಬಗ್ಗೆ ಎಚ್ಚರಿಕೆಯಿಂದಿರಿ.' ಅನುಚರರು ಪ್ರಶ್ನಿಸಿದರು, 'ಅಲ್ಲಾಹನ ಪ್ರವಾದಿಗಳೇ! ರಹಸ್ಯವಾದ ಶಿರ್ಕ್ ಎಂದರೇನು? ಪ್ರವಾದಿ(ಸ) ಹೇಳಿದರು, 'ಒಬ್ಬ ವ್ಯಕ್ತಿ ನಮಾಝ್ ನಿರ್ವಹಿಸುವನು. ತಾನು ನಮಾಝ್ ನಿರ್ವಹಿಸುವುದನ್ನು ಜನರು ನೋಡುತ್ತಿದ್ದಾರೆ ಎಂಬುದನ್ನು ಅರಿತಾಗ ಆ ನಮಾಝನ್ನು ಸರಿಯಾಗಿ ಮಾಡಲು ಶ್ರಮಿಸುವನು. ಇದುವೇ ರಹಸ್ಯವಾದ ಶಿರ್ಕ್.'[2]

ಶದ್ದಾದ್ ಬಿನ್ ಔಸ್(ರ)ರಿಂದ ವರದಿಯಾಗಿರುವ ಇನ್ನೊಂದು ಪ್ರವಾದಿವಚನ ಹೀಗಿದೆ– ಒಮ್ಮೆ ಒಬ್ಬ ವ್ಯಕ್ತಿ ನಮಾಝ್ ಮುಗಿಸಿದ ಬಳಿಕ ಚಾಪೆಯಲ್ಲಿ ಕುಳಿತು ಅಳುತ್ತಿದ್ದನು. ಒಬ್ಬರು ಕೇಳಿದರು: ತಾವೇಕೆ ಅಳುತ್ತಿರುವಿರಿ? ಆತ ಉತ್ತರಿಸಿದನು: ಪ್ರವಾದಿವರ್ಯರಿಂದ ಆಲಿಸಿದ ಒಂದು ವಚನವು ನನ್ನನ್ನು ಅಳುವಂತೆ ಮಾಡಿತು. (ಅವರು ಹೀಗೆ ಹೇಳಿದ್ದರು), 'ನನ್ನ ಕಾಲಾನಂತರ ನನ್ನ ಸಮುದಾಯವು ಶಿರ್ಕ್‌ನಲ್ಲಿ ಮುಳುಗಿ ಬಿಡುವುದೋ ಎಂಬುದನ್ನು ನಾನು ಬಹಳ ಭಯಪಡುತ್ತೇನೆ.' ನಾನು ಪ್ರಶ್ನಿಸಿದೆ, 'ಅಲ್ಲಾಹನ ಪ್ರವಾದಿಗಳೇ! ತಮ್ಮ ಮರಣದ ಬಳಿಕ ಜನರು ಶಿರ್ಕ್ ಮಾಡಲು ಆರಂಭಿಸುವರು ಎಂಬುದಾಗಿ ತಾವು ಹೇಳುತ್ತಿರುವಿರಾ?' ಪ್ರವಾದಿ(ಸ) ಹೇಳಿದರು:

يَا شَدَّادُ، إِنَّهُمْ لَا يَعْبُدُوْنَ شَمْسًا وَلَا قَمَرًا وَلَا حَجَرًا وَلَا وَثَنًا، وَلٰكِنْ يُرَاؤُوْنَ بِأَعْمَالِهِمْ!

'ಹಾಗಲ್ಲ ಶದ್ದಾದ್. ಅವರು ಸೂರ್ಯ, ಚಂದ್ರ, ಕಲ್ಲು, ವಿಗ್ರಹ ಇತ್ಯಾದಿಗಳನ್ನು ಆರಾಧಿಸಲು ಆರಂಭಿಸುವರು ಎಂಬುದು ನನ್ನ ಹೇಳಿಕೆಯ ಉದ್ದೇಶವಲ್ಲ. ಬದಲಾಗಿ ಅವರು ಜನರಿಗೆ ತೋರಿಸಲು ಕೆಲಸ ಮಾಡುವವರಾಗಿ ಮಾರ್ಪಡುವರು.'[3]

ಪ್ರಶಂಸೆ, ಪ್ರಶಸ್ತಿಗಳನ್ನು ಬಯಸದ ಕೆಲವು ನಿಸ್ವಾರ್ಥ ವ್ಯಕ್ತಿಗಳು ಸಮಾಜದಲ್ಲಿರುತ್ತಾರೆ. ಅವರ ಬಗ್ಗೆ ಪ್ರಾರಂಭದ ಹದೀಸ್‌ನಲ್ಲಿ ಪ್ರಸ್ತಾಪಿಸಲಾಗಿದೆ. ಸಭೆಗಳಲ್ಲಿ ಅವರು ಇತರರಂತೆ ಸ್ವಾಗತಿಸಲ್ಪಡುವುದಿಲ್ಲ. ಅವರು ಬಂದಿಲ್ಲವೇ ಎಂದು ಯಾರೂ ವಿಚಾರಿಸು ವುದಿಲ್ಲ. ಅವರು ಯಾವಾಗಲೂ ತೆರೆಮರೆಯಲ್ಲೇ ಇರುತ್ತಾರೆ. ಸ್ಥಾನಮಾನಗಳು, ಹುದ್ದೆಗಳು ಅವರನ್ನು ಹುಡುಕಿಕೊಂಡು ಬರುವುದಿಲ್ಲ. ಅವರು

ನಿಷ್ಕಾಮಕರ್ಮಿ ಗಳಾಗಿರುತ್ತಾರೆ. ನಾಯಕನ ಕರೆಯು ಕೇಳಿದೊಡನೆಯೇ ಅವರು ಬಹಳ ದೂರದಿಂದ ಓಡಿ ಬಂದು ತಲುಪುತ್ತಾರೆ. ಉನ್ನತವಾದ ಸ್ಥಾನಮಾನ, ಅಧಿಕಾರ ಮೋಹವು ಅವರ ಈ ವರ್ತನೆಗೆ ಪ್ರೇರಕವಾಗಿರುವುದಿಲ್ಲ. ಅಲ್ಲಾಹನೊಂದಿಗಿರುವ ಅಪಾರ ಪ್ರೀತಿಯ ಕಾರಣದಿಂದಾಗಿ ಅವರು ಬೇರೆಲ್ಲ ವಿಷಯಗಳನ್ನು ಬದಿಗೊತ್ತಿ ಆಂದೋಲನಕ್ಕಾಗಿ ಜೀವಿಸುವವರಾಗಿರುತ್ತಾರೆ. ತಮ್ಮ ಕೆಲಸಗಳನ್ನು, ಸೇವೆಗಳನ್ನು ಇತರರು ಗಮನಿಸ ಬೇಕೆಂದು ಅವರು ಬಯಸುವುದಿಲ್ಲ. ಅವರೇ ಅಲ್ಲಾಹನ ನಿಜವಾದ ಔಲಿಯಾಗಳು. ಅಲೀ(ರ) ಹೇಳುತ್ತಾರೆ:

طُوبَى لِعَبْدٍ يُعْرِفُ النَّاسَ وَلَا يَعْرِفُونَهُ! يَعْرِفُ اللّٰهُ بِرِضْوَانٍ، أُوْلٰئِكَ مَصَابِيحُ الْهُدٰى، لَيْسُوْا
فِي الْمَذَايِيعِ وَلَا الْبَذَرِ يُنْجِيهِمُ اللّٰهُ مِنْ كُلِّ فِتْنَةٍ غَبْرَاءَ مُظْلِمَةٍ

'ಜನರನ್ನು ಅರಿಯುವ, ಜನರಿಂದ ಗುರುತಿಸಲ್ಪಡದ ದೇವನ ದಾಸರು ಅದೃಷ್ಟ ಶಾಲಿಗಳು. ತನ್ನ ಪ್ರೀತಿ ಮತ್ತು ಇಷ್ಟದಿಂದ ಅಲ್ಲಾಹನು ಅವರ ಬಗ್ಗೆ ಅರಿತಿರುವನು. ಅವರು ಸನ್ಮಾರ್ಗದ ಬೆಳಕಾಗಿರುವರು. ಅವರು ಮಾತುಗಾರಿಕೆಯ ಸಾಮರ್ಥ್ಯವಿರು ವವರು. ಅಧಿಕವಾಗಿ ಮಾತನಾಡುವವರು ಅಲ್ಲ. ಎಲ್ಲ ರೀತಿಯ ಕ್ಷೋಭೆಗಳಿಂದ ಅಲ್ಲಾಹನು ಅವರನ್ನು ಸಂರಕ್ಷಿಸುವನು.'[4]

ಯಾರಿಂದಲೂ ಏನನ್ನೂ ಬಯಸದೆ, ನಿಸ್ವಾರ್ಥತೆಯ ದಿಗಂತದಲ್ಲಿ ವಿಹರಿಸುವ ಇಂತಹ ವ್ಯಕ್ತಿಗಳೇ ಆಂದೋಲನದ ಬೆನ್ನೆಲುಬಾಗಿರುತ್ತಾರೆ. ಆತ್ಮಾರ್ಥವಾಗಿ ಕೆಲಸ ಮಾಡುವ ಇಂತಹ ನಿಸ್ವಾರ್ಥಿಗಳೇ ಆಂದೋಲನವನ್ನು ಮುನ್ನಡೆಸುವವರಾಗಿರುತ್ತಾರೆ. ಪ್ರಶಸ್ತಿ ಬಯಸುವ ವಾಚಾಳಿಗಳಿಗಿಂತ, ಅಜ್ಞಾತರಾಗಿ ಉಳಿಯಬಯಸುವ ನಿಷ್ಕಳಂಕ ವ್ಯಕ್ತಿಗಳೇ ಒಂದು ಆಂದೋಲನದ ಶಕ್ತಿಯನ್ನು ನಿರ್ಧರಿಸುತ್ತಾರೆ.

ಒಂದು ಚಾರಿತ್ರಿಕ ಘಟನೆ ಹೀಗಿದೆ. ಖಲೀಫಾ ಉಮರ್(ರ)ರವರು ನುಅ್‌ಮಾನ್ ಬಿನ್ ಮುಕರ್‍ರಿನ್‌ರ ನೇತೃತ್ವದಲ್ಲಿ ನಹಾವಂದ್ ಎಂಬಲ್ಲಿಗೆ ಒಂದು ಸೈನ್ಯ ವನ್ನು ಕಳುಹಿಸಿದರು. ಯುದ್ಧಭೂಮಿಯಿಂದ ಮರಳಿ ತನ್ನನ್ನು ಭೇಟಿಯಾಗಲು ಬಂದ ಸೈನಿಕರೊಂದಿಗೆ ಉಮರ್(ರ), ಯುದ್ಧಭೂಮಿಯ ವಿಶೇಷಗಳೇನು, ಯಾರೆಲ್ಲ ಹುತಾತ್ಮರಾದರೆಂದು ಪ್ರಶ್ನಿಸಿದಾಗ, ಸೈನಿಕನು ಕೆಲವು ವ್ಯಕ್ತಿಗಳ ಹೆಸರನ್ನು ಸೂಚಿಸಿದ ಬಳಿಕ: ಇನ್ನು ಕೆಲವರಿದ್ದಾರೆ, ಅವರ ಪರಿಚಯ ನಮಗಿಲ್ಲ, ಹೆಸರು ಕೂಡ ತಿಳಿದಿಲ್ಲ ವೆಂದನು. ಉಮರ್(ರ) ಹೇಳಿದರು: ಆದರೆ ಅವರು ಯಾರೆಂದು ಅಲ್ಲಾಹನಿಗೆ ತಿಳಿದಿದೆ. ಅಲ್ಲಾಹನು ಹುತಾತ್ಮತೆಯನ್ನು ನೀಡಿ ಗೌರವಿಸಿದ ಅವರು ಯಾರೆಂದು

ಅವನಿಗೆ ತಿಳಿದಿದೆ. ಅವರ ಹೆಸರೂ ತಿಳಿದಿದೆ. ಅವರ ಹೆತ್ತವರ ಮತ್ತು ಕುಟುಂಬದ ಬಗ್ಗೆಯೂ ತಿಳಿದಿದೆ.[5]

ರಹಸ್ಯವಾಗಿ ಸತ್ಕರ್ಮಗಳನ್ನು ಮಾಡುವ ಅಭ್ಯಾಸವನ್ನು ಬೆಳೆಸುವ ಮೂಲಕ ಈ ತೋರಿಕೆಯ ದುರ್ಗುಣದಿಂದ ದೂರ ಉಳಿಯಬಹುದಾಗಿದೆ. ಪ್ರವಾದಿವರ್ಯರು(ಸ) ಕಲಿಸಿರುವ ಪ್ರಾರ್ಥನೆಗಳು ಕೂಡ ಇಂತಹ ದುರ್ಗುಣಗಳನ್ನು ತಡೆಯಲು ಶಕ್ತಿ ನೀಡುತ್ತವೆ. ಅಬೂ ಮೂಸಾ ಅಶ್‌ಅರಿ(ರ) ವರದಿ ಮಾಡಿರುತ್ತಾರೆ:

خَطَبَنَا رَسُوْلُ اللهِ ﷺ ذَاتَ يَوْمٍ فَقَالَ: "يَا أَيُّهَا النَّاسُ، اِتَّقُوا هٰذَا الشِّرْكَ، فَإِنَّهُ أَخْفَى مِنْ دَبِيْبِ النَّمْلِ" فَقِيْلَ لَهُ: وَكَيْفَ نَتَّقِيْهِ وَهُوَ أَخْفَى مِنْ دَبِيْبِ النَّمْلِ يَا رَسُوْلَ اللهِ؟ قَالَ: "قُوْلُوْا: اَللّٰهُمَّ إِنَّا نَعُوْذُ بِكَ مِنْ أَنْ نُشْرِكَ بِكَ شَيْئًا نَعْلَمُهُ، وَنَسْتَغْفِرُكَ لِمَا لَا نَعْلَمُهُ"

ಒಮ್ಮೆ ಪ್ರವಾದಿ ಮುಹಮ್ಮದ್(ಸ)ರವರು ನಮ್ಮ ಬಳಿ ಬಂದು ಈ ರೀತಿ ಉಪದೇಶಿಸಿದರು, ಜನರೇ, ನೀವು ಈ ಶಿರ್ಕ್‌ನ ಬಗ್ಗೆ ಜಾಗರೂಕರಾಗಿರಿ. ಇರುವೆಯ ಚಲನೆಗಿಂತ ರಹಸ್ಯವಾಗಿ ಅದು ಬಂದು ಸೇರುತ್ತದೆ. ಸಹಾಬಿಗಳು ಪ್ರಶ್ನಿಸಿದರು, ಅಲ್ಲಾಹನ ಪ್ರವಾದಿಗಳೇ, ಇರುವೆಯ ಚಲನೆಗಿಂತ ರಹಸ್ಯವಾಗಿದ್ದರೆ, ನಾವು ಅದರ ಬಗ್ಗೆ ಜಾಗೃತರಾಗಿರುವುದು ಹೇಗೆ? ಪ್ರವಾದಿ(ಸ) ಹೇಳಿದರು, ನೀವು ಈ ರೀತಿ ಪ್ರಾರ್ಥಿಸುತ್ತಲಿರಿ- ಅಲ್ಲಾಹನೇ, ಅರಿತು ಶಿರ್ಕ್ ಮಾಡುವುದರಿಂದ ನಾನು ನಿನ್ನ ಅಭಯ ಯಾಚಿಸುತ್ತೇನೆ. ತಿಳಿಯದೆ ಸಂಭವಿಸಿ ಹೋಗುವ ತಪ್ಪುಗಳಿಗೆ ನೀನು ನನ್ನನ್ನು ಕ್ಷಮಿಸಬೇಕು.[6]

---

1. ಬೈಹಕಿ – ಶುಅ್‌ಬುಲ್ ಈಮಾನ್: 6831, ಅಹ್ಮದ್: 5/428.
2. ಇಬ್ನು ಖುಝೈಮಾ, ದೈಲಮಿ – ಮುಸ್ನದುಲ್ ಫಿರ್ದೌಸ್: 8164.
3. ಬೈಹಕಿ – ಶುಅ್‌ಬುಲ್ ಈಮಾನ್: 6830, ಹಾಕಿಮ್: 4/330.
4. ಬೈಹಕಿ – ಶುಅ್‌ಬುಲ್ ಈಮಾನ್: 9671.
5. ಅಬೂ ಯೂಸುಫ್ – ಕಿತಾಬುಲ ಖರಾಜ್: 35
6. ಅಹ್ಮದ್: 4/403, ತಬ್ರಾನಿ – ಕಬೀರ್, ಔಸತ್.

27. ಸತ್ಯವಿಶ್ವಾಸಿಯ ಆತ್ಮಾವಲೋಕನ

عَنْ عَائِشَةَ رَضِيَ اللّٰهُ عَنْهَا قَالَتْ: قُلْتُ: يَا رَسُولَ اللّٰهِ ﷺ وَالَّذِيْنَ يُؤْتُوْنَ مَا آتَوْ وَقُلُوْبُهُمْ وَجِلَةٌ أَنَّهُمْ إِلَى رَبِّهِمْ رَاجِعُوْن (اَلْمُؤْمِنُوْن ٦٠) أَهُوَ الرَّجُلُ يَزْنِي وَيَسْرِقُ وَيَشْرَبُ الْخَمْرَ؟ قَالَ: لَا يَا بِنْتَ أَبِي بَكْرٍ، لٰكِنَّهُ الرَّجُلُ يَصُوْمُ وَيُصَلِّي وَيَتَصَدَّقُ، وَهُوَ يَخَافُ أَنْ لَا يُقْبَلَ مِنْهُ

ಹ. ಆಯಿಶಾ(ರ)ರಿಂದ ವರದಿ. 'ಮತ್ತು ಅವರು ಕೊಡುವುದೆಲ್ಲವನ್ನು ಕೊಟ್ಟು ಅವರ ಮನಸ್ಸು ಕಂಪಿಸುತ್ತಿರುತ್ತದೆ' (ಅಲ್ ಮೂಮಿನೂನ್: 60) ಎಂಬ ವಚನದ ಕುರಿತು ನಾನು ಪ್ರವಾದಿವರ್ಯರಲ್ಲಿ(ಸ) ಪ್ರಶ್ನಿಸಿದೆ: ಇವರು ವ್ಯಭಿಚಾರ ಮಾಡುವ ಮತ್ತು ಕಳ್ಳತನ ಮಾಡುವ ಜನರಾಗಿರುವರೇ? ಅದಕ್ಕೆ ಪ್ರವಾದಿ(ಸ) ಹೇಳಿದರು: ಸಿದ್ದೀಕ್‌ರ ಪುತ್ರಿಯೇ! ಅಲ್ಲ, ಅವರು ಉಪವಾಸ ವ್ರತಾಚರಿಸುವ, ನಮಾಝ್ ಮಾಡುವ ಮತ್ತು ದಾನಧರ್ಮ ಗಳನ್ನು ನೀಡುವವರಾಗಿರುವರು. ಆದರೂ ತಮ್ಮ ಈ ಪುಣ್ಯ ಕಾರ್ಯಗಳು ಅಸ್ವೀಕೃತವಾಗಿ ಬಿಡುವವೇ ಎಂಬ ಬಗ್ಗೆ ಹೆದರುತ್ತಿರುವರು. ಇವರೇ ಪುಣ್ಯ ಕಾರ್ಯಗಳೆಡೆಗೆ ವೇಗವಾಗಿ ಸಾಗುವವರಾಗಿರುತ್ತಾರೆ.*

ದೇವಭಯದ ಕಾರಣದಿಂದಾಗಿ ಸತ್ಯವಿಶ್ವಾಸಿಯು ನಡೆಸುವ ಆತ್ಮಾವಲೋಕನವನ್ನು ಬಹಳ ಮನೋಹರವಾಗಿ ಚಿತ್ರಿಸಿರುವುದನ್ನು ಈ ಹದೀಸ್‌ನಲ್ಲಿ ನಾವು ನೋಡ

* ಇಮಾಮ್ ಅಹ್ಮದ್: 6/206, ತಿರ್ಮಿದಿ – ಜಾಮಿಅ್: 3174, ಇಬ್ನುಮಾಜ: 4198, ಬೈಹಕಿ – ಶುಅ್‌ಬುಲ್ ಈಮಾನ್, ಹಾಕಿಮ್: 2/394 ಮುಂತಾದವರು ಈ ಪ್ರವಾದಿವಚನವನ್ನು ಉಲ್ಲೇಖಿಸಿರುವರು. ಇದರ ವರದಿಯ ಪರಂಪರೆಯು ಸಹೀಹ್ ಆಗಿದೆ ಎಂದು ಹಾಕಿಮ್, ದಹಬಿ ಮುಂತಾದವರು ಅಭಿಪ್ರಾಯ ಪಡುತ್ತಾರೆ.

ಬಹುದಾಗಿದೆ. ಸತ್ಯವಿಶ್ವಾಸಿಗಳು ದೇವನ ಕಾರುಣ್ಯದ ಬಗ್ಗೆ ನಿರೀಕ್ಷೆಯನ್ನು ಹೊಂದಿರುವಂತೆ, ದೇವನ ಶಿಕ್ಷೆಯ ಬಗ್ಗೆ ಭೀತರಾಗಿ ಕಂಪಿಸುವವರೂ ಪ್ರಲಾಪಿಸುವ ವರೂ ಆಗಿರುತ್ತಾರೆ. ಸೃಷ್ಟಿಕರ್ತನ ಮಹಾನತೆಯ ಬಗ್ಗೆ ಆಳವಾಗಿ ಅರಿವು ಇರುವ ಕಾರಣದಿಂದಾಗಿ, ಅವನ ಮುಂದೆ ತಾನೆಷ್ಟು ದುರ್ಬಲ ಮತ್ತು ನಿಕೃಷ್ಟ ವ್ಯಕ್ತಿ ಎಂಬ ತಿಳುವಳಿಕೆಯು ಅವನನ್ನು ಸದಾ ಚಿಂತೆಗೀಡುಮಾಡುತ್ತದೆ. ದೇವನ ಆದೇಶಗಳನ್ನು ಪಾಲಿಸಿಕೊಂಡು ಧಾರಾಳ ಸತ್ಕರ್ಮಗಳನ್ನು ಮತ್ತು ಸಮಾಜಸೇವೆಯ ಕೆಲಸಗಳನ್ನು ಮಾಡುತ್ತಾನೆ. ಜನರು ಆ ಕೆಲಸಗಳನ್ನು ಮಹತ್ಕಾರ್ಯವೆಂದು ತಿಳಿಯುತ್ತಾರೆ ಮತ್ತು ಅಂಗೀಕರಿಸುತ್ತಾರೆ. ಆದರೆ ಅಲ್ಲಾಹನ ಶಿಕ್ಷೆಯಿಂದ ರಕ್ಷಣೆ ಹೊಂದಲು, ಅವನ ಪ್ರೀತಿ ಲಭ್ಯವಾಗಲು ಜನರ ಈ ಮಾನ್ಯತೆಯು ಯಾವ ಉಪಕಾರವನ್ನೂ ಮಾಡುವುದಿಲ್ಲ ಎಂಬುದು ಸತ್ಯವಿಶ್ವಾಸಿಗೆ ಚೆನ್ನಾಗಿ ತಿಳಿದಿರುತ್ತದೆ. ಕರ್ಮಗಳ ಲೆಕ್ಕಕ್ಕೆ ಬದಲಾಗಿ ಅದರಲ್ಲಿ ಅಡಗಿರುವ ನಿಷ್ಕಳಂಕತೆಯೇ ದೇವನ ಸಂಪ್ರೀತಿಗೆ ಮೂಲಾಧಾರವಾಗಿರುತ್ತದೆ. ಇದರ ಬಗ್ಗೆ ಸರಿಯಾದ ತಿಳುವಳಿಕೆ ಇರುವ ಕಾರಣದಿಂದಾಗಿ, ತನ್ನ ಕರ್ಮಗಳು ನಷ್ಟವಾಗಿ ಬಿಡುವುದೋ ಎಂಬ ಶಂಕೆಯಿಂದ ಸತ್ಯವಿಶ್ವಾಸಿ ಸದಾ ಕಳವಳದಿಂದಿರುತ್ತಾನೆ.

ಕುದ್ಸಿಯಾಗಿರುವ ಒಂದು ಪ್ರವಾದಿವಚನವು ಇಹಲೋಕದಲ್ಲಿ ಅಲ್ಲಾಹನನ್ನು ಭಯಪಡಬೇಕಾದುದರ ಅನಿವಾರ್ಯತೆಯನ್ನು ಸ್ಪಷ್ಟಪಡಿಸುತ್ತದೆ.

يَقُوْلُ اللهُ عَزَّ وَ جَلَّ: وَعِزَّتِي، لَا أَجْمَعُ عَلَى عَبْدِي خَوْفَيْنِ وَأَمْنَيْنِ، إِذَا خَافَنِي فِي الدُّنْيَا أَمَّنْتُهُ
يَوْمَ الْقِيَامَةِ، وَإِذَا أَمِنَنِي فِي الدُّنْيَا أَخَفْتُهُ يَوْمَ الْقِيَامَةِ

ಅಲ್ಲಾಹನು ಈ ರೀತಿ ವಿವರಿಸುತ್ತಾನೆ: ನನ್ನ ಪ್ರತಾಪದಾಣೆ ನಾನು ನನ್ನ ದಾಸರ ಮೇಲೆ ಎರಡು ಸಂದರ್ಭದಲ್ಲಿ ಭಯ ಮತ್ತು ಎರಡು ಸಂದರ್ಭಗಳಲ್ಲಿ ನಿರ್ಭಯತೆಯನ್ನು ಒಟ್ಟಿಗೆ ಹೇರಿರುವುದಿಲ್ಲ. ಇಹಲೋಕದಲ್ಲಿ ನನ್ನನ್ನು ಭಯಪಟ್ಟು ಜೀವಿಸಿದವನಿಗೆ ಪುನರುತ್ಥಾನ ದಿನ ನಾನು ನಿರ್ಭಯತೆಯನ್ನು ನೀಡುವೆ. ಭೂಮಿಯಲ್ಲಿ ನನ್ನ ಬಗ್ಗೆ ನಿರ್ಭೀತಿಯಿಂದ ಬದುಕಿದವರನ್ನು ನಾನು ಅಂತ್ಯ ದಿನದಂದು ಭೀತಿಗೆ ಒಳಪಡಿಸುವೆ.[1]

ಶೈತಾನನ ಪ್ರಲೋಭನೆಗಳು ಅದೆಷ್ಟೇ ಆಕರ್ಷಣೀಯವಾಗಿದ್ದರೂ ಅವುಗಳನ್ನು ಮೀರಿ ನಿಲ್ಲಲು ದೇವಭಯವಿರುವವರು ಸದಾ ಸನ್ನದ್ಧರಾಗಿರುತ್ತಾರೆ. ಒಂದು ಪ್ರವಾದಿವಚನ ಹೀಗಿದೆ: مَنْ خَافَ شَيْئًا هَرَبَ مِنْهُ، وَمَنْ خَافَ اللهَ هَرَبَ إِلَيْهِ 'ಯಾವುದಾದರೂ

ವಸ್ತುವಿನ ಕುರಿತು ಭಯವಿದ್ದರೆ ಮನುಷ್ಯನು ಅದರಿಂದ ದೂರ ಓಡಿ ಹೋಗಲು ಬಯಸುವನು. ಆದರೆ ಅಲ್ಲಾಹನನ್ನು ಭಯಪಡುವುದು ಆ ರೀತಿಯಲ್ಲಲ್ಲ. ಅಲ್ಲಾಹನ ಮೇಲಿನ ನಿಷ್ಠೆಯಿಂದ ಅವನು ಅಲ್ಲಾಹನ ಬಳಿ ಓಡಿ ತಲುಪುತ್ತಾನೆ.'[2]

ನನ್ನ ಕರ್ಮಗಳನ್ನು ಅಲ್ಲಾಹನು ಸ್ವೀಕರಿಸಬಹುದೋ ಇಲ್ಲವೋ ಎಂಬ ಸಂದೇಹವು ಸತ್ಯವಿಶ್ವಾಸಿಗಳನ್ನು ಸದಾ ಕಾಡುತ್ತಿರುತ್ತದೆ. ತಾಬಈ ಪಂಡಿತರಾದ ಹಸನ್ ಬಸರಿ(ರ), ಸಹಾಬಿಗಳ ಬಗ್ಗೆ ಸತ್ಕರ್ಮಗಳನ್ನು ಮಾಡುವ ವಿಷಯದಲ್ಲಿ ಅವರ ನಿಲುವನ್ನು ವಿವರಿಸುತ್ತಾ ಈ ರೀತಿ ಹೇಳಿರುವರು:

لَقَدْ أَدْرَكْتُ أَقْوَامًا كَانُوا مِنْ حَسَنَاتِهِمْ أَنْ تُرَدَّ عَلَيْهِمْ أَشْفَقَ مِنْهُمْ عَلَى سَيِّئَاتِكُمْ أَنْ تُعَذَّبُوا عَلَيْهَا

'ನಾನು ಒಂದು ವಿಭಾಗದ ಜನರನ್ನು ನೋಡಿದ್ದೇನೆ. ಅವರು (ಸಹಾಬಿಗಳು) ತಮ್ಮ ಪಾಪಕರ್ಮಗಳಿಗಾಗಿ ಶಿಕ್ಷಿಸಲ್ಪಡುವೆವೋ ಎಂಬ ಭೀತಿಗಿಂತ ಹೆಚ್ಚಾಗಿ ನಮ್ಮ ಕರ್ಮಗಳು ಅಲ್ಲಾಹನ ಬಳಿ ಸ್ವೀಕರಿಸಲ್ಪಡುವುದರ ಕುರಿತು ಭೀತಿಯಲ್ಲಿರುತ್ತಾರೆ.'[3]

ಉಮರ್(ರ) ಒಮ್ಮೆ ಈ ರೀತಿ ಹೇಳಿದರು:

لَوْ نَادَى مُنَادٍ مِنَ السَّمَاءِ: أَيُّهَا النَّاسُ، إِنَّكُمْ دَاخِلُوْنَ الْجَنَّةَ كُلُّكُمْ أَجْمَعُوْنَ، إِلَّا رَجُلًا وَاحِدًا،
لَخِفْتُ أَنْ أَكُوْنَ أَنَا هُوَ! وَلَوْ نَادَى مُنَادٍ: أَيُّهَا النَّاسُ، إِنَّكُمْ دَاخِلُونَ النَّارَ إِلَّا رَجُلًا وَاحِدًا،
لَرَجَوْتُ أَنْ أَكُوْنَ أَنَا هُوَ!

'ಆಕಾಶದಿಂದ ಒಂದು ಘೋಷಣೆ ಮೊಳಗಿತು: ಜನರೇ! ನಿಮ್ಮ ಪೈಕಿ ಒಬ್ಬ ವ್ಯಕ್ತಿಯನ್ನು ಬಿಟ್ಟು ಉಳಿದವರೆಲ್ಲರೂ ಸ್ವರ್ಗವನ್ನು ಪ್ರವೇಶಿಸಿರಿ. ಇದನ್ನು ಕೇಳಿದಾಗ ಆ ಪ್ರತ್ಯೇಕವಾಗಿ ಉಳಿಯುವ ವ್ಯಕ್ತಿ ನಾನಾಗಿಬಿಡುವೆನೇ ಎಂದು ಭಯಪಡುತ್ತೇನೆ. ಅದೇ ರೀತಿ, ಜನರೇ! ನಿಮ್ಮ ಪೈಕಿ ಈ ವ್ಯಕ್ತಿಯನ್ನು ಹೊರತು ಪಡಿಸಿ ಎಲ್ಲರೂ ನರಕಕ್ಕೆ ಹೋಗಿರಿ ಎಂದು ಹೇಳಲಾಗುವಾಗ ಪ್ರತ್ಯೇಕವಾಗಿ ಪ್ರಸ್ತಾಪಿಸಿದ ವ್ಯಕ್ತಿ ನಾನಾಗಿರ ಬಹುದೆಂದು ಭಾವಿಸುತ್ತೇನೆ.'[4]

ಶ್ರೇಷ್ಠವಾದ ಕರ್ಮಗಳನ್ನು ನಿರಂತರವಾಗಿ ಮಾಡುತ್ತಾ ಅಷ್ಟಕ್ಕೆ ತೃಪ್ತರಾಗದೆ, ನನ್ನ ಕರ್ಮಗಳು ಸ್ವೀಕರಿಸಲ್ಪಡಬಹುದೇ ಎಂದು ಚಿಂತಿಸಿ ಕಂಪಿಸುವ ಒಂದು ನಿಷ್ಕಳಂಕ ಮನಸ್ಸಿನ ಕುರಿತು ಆರಂಭದ ಹದೀಸ್‌ನಲ್ಲಿ ಪ್ರಸ್ತಾಪವಿದೆ. ಕರ್ಮಗಳ ಬಗ್ಗೆ ಸ್ವಯಂ ವಿಚಾರಣೆ ನಡೆಸುವುದು ಸತ್ಯವಿಶ್ವಾಸಿಗಳ ಮೂಲ ಸ್ವಭಾವವಾಗಿದೆ ಎಂಬುದನ್ನು ಇದು ಸ್ಪಷ್ಟಪಡಿಸುತ್ತದೆ. ಇಂತಹ ವ್ಯಕ್ತಿಗಳು ತಮ್ಮ ಕರ್ಮಗಳ ತೂಕ ಮತ್ತು ಮೌಲ್ಯವನ್ನು

ನಿರಂತರವಾಗಿ ತೂಗಿ, ಸರಿಪಡಿಸಿ ಆತ್ಮವಿಮರ್ಶೆ ಮಾಡುತ್ತಿರುತ್ತಾರೆ.

ಒಂದು ಚಾರಿತ್ರಿಕ ಘಟನೆ ಹೀಗಿದೆ: ಒಮ್ಮೆ ಹಸನ್ ಬಸರಿ(ರ)ಯವರಿಗೆ ರಮಝಾನಿನ ನಂತರದ ಹಬ್ಬದ ದಿನ ವಿವಿಧ ರೀತಿಯ ಹಾಸ್ಯ-ವಿನೋದಗಳಲ್ಲಿ ನಿರತರಾಗಿದ್ದ ಯುವಕರ ತಂಡದ ಬಳಿಯಿಂದ ಹಾದು ಹೋಗಬೇಕಾಗಿ ಬಂತು. ಅವರು ಹೇಳುತ್ತಾರೆ:

إِنَّ اللّٰهَ عَزَّ وَجَلَّ جَعَلَ شَهْرَ رَمَضَانَ مِضْمَارًا لِخَلْقِهِ، يَسْتَبِقُونَ فِيْهِ بِطَاعَتِهِ، فَسَبَقَ أَقْوَامٌ فَفَازُوْا، وَتَخَلَّفَ أَقْوَامٌ فَخَابُوْا، فَالْعَجَبُ كُلُّ الْعَجَبِ لِلضَّاحِكِ اللَّاعِبِ فِي الْيَوْمِ الَّذِيْ فَازَ فِيْهِ الْمُسَارِعُونَ، وَخَابَ فِيْهِ الْمُبْطِلُوْنَ، أَمَا وَاللّٰهِ لَوْ كُشِفَ الغِطَاءُ لَاشْتَغَلَ الْمُحْسِنُ بِإِحْسَانِهِ وَاشْتَغَلَ الْمُسِيْءُ بِإِسَاءَتِهِ

ರಮಝಾನ್ ಅಲ್ಲಾಹನ ದಾಸರಿಗೆ ಆರಾಧನೆಗಳ ವಿಷಯದಲ್ಲಿ ಸ್ಪರ್ಧಿಸಿ ಮುನ್ನಡೆಯಲಿಕ್ಕಾಗಿದ್ದ ಸಮಯವಾಗಿತ್ತು. ಕೆಲವರು ಮುಂದೆ ಹೋಗಿ ಜಯಗಳಿಸಿದರು. ಹಲವರು ಹಿಂದೆ ಉಳಿದು ಪರಾಜಿತರಾದರು. ಇದರಲ್ಲಿ ನಾನು ಯಾವ ವಿಭಾಗಕ್ಕೆ ಸೇರಿರಬಹುದು ಎಂದು ಚಿಂತಿಸದೆ, ಆಟ-ತಮಾಷೆಗಳಲ್ಲಿ ಮುಳುಗಿ ಈ ದಿನವನ್ನು ಹಾಳು ಮಾಡುವವರ ವಿಷಯ ವಿಚಿತ್ರವೇ ಸರಿ. ವಿಜಯಿಗಳಾದವರು ಯಾರು, ಪರಾಜಿತರಾದವರು ಯಾರು ಎಂಬುದನ್ನು ಇವರು ಮನವರಿಕೆ ಮಾಡುತ್ತಿದ್ದರೆ, ಈ ರೀತಿ ಹಾಸ್ಯ-ವಿನೋದಗಳಲ್ಲಿ ಮುಳುಗುತ್ತಿರಲಿಲ್ಲ. ಉಪವಾಸ ವ್ರತ ಸ್ವೀಕರಿಸಲ್ಪಟ್ಟವರು ಅದರ ಸಂತೋಷದಲ್ಲಿ, ಸ್ವೀಕರಿಸಲ್ಪಡದವರು ಅದರ ದುಃಖದಲ್ಲಿ ಮುಳುಗಿರುವುದರ ಹೊರತು.[5]

---

1. ಬೈಹಕಿ - ಶುಅ್‌ಬುಲ್ ಈಮಾನ್, ಇಬ್ನು ಹಿಬ್ಬಾನ್: 640.
2. ಇಹ್ಯಾಉ ಉಲೂಮುದ್ದೀನ್: 4/156.
3. ಕುರ್ತುಬಿ - ಜಾಮಿಉ ಅಹ್‌ಕಾಮಿಲ್ ಕುರ್‌ಆನ್: 11-12: 132.
4. ಅಬೂ ನುಐಮ್ - ಹಿಲ್‌ಯತುಲ್ ಔಲಿಯಾ.
5. ಅಬೂ ನುಐಮ್ - ಹಿಲ್‌ಯತುಲ್ ಔಲಿಯಾ

28. ಸ್ವರ್ಗದ ಕೀಲಿಕೈಗಳು

عَنْ عَبْدِ اللّٰهِ بْنِ عَمْرو بْنِ العَاص رَضِيَ اللّٰهُ عَنْهُ، قَالَ: أَقْبَلَ رَجُلٌ إِلَى رَسُولِ اللّٰهِ ﷺ فَقَالَ: أُبَايِعُكَ عَلَى الْهِجْرَةِ وَالْجِهَادِ، أَبْتَغِي الْأَجْرَ مِنَ اللّٰهِ، قَالَ: "فَهَلْ مِنْ وَالِدَيْكَ أَحَدٌ حَيٌّ؟" قَالَ: نَعَمْ بَلْ كِلَاهُمَا، قَالَ: "فَتَبْتَغِي الْأَجْرَ مِنَ اللّٰهِ؟" قَالَ: نَعَمْ، قَالَ: "فَارْجِعْ إِلَى وَالِدَيْكَ، فَأَحْسِنْ صُحْبَتَهُمَا"

ಅಬ್ದುಲ್ಲಾ ಬಿನ್ ಅಮ್ರ್ ಬಿನ್ ಆಸ್(ರ) ಹೇಳುತ್ತಾರೆ. ಒಮ್ಮೆ ಓರ್ವ ವ್ಯಕ್ತಿ ಪ್ರವಾದಿ ಮುಹಮ್ಮದ್(ಸ)ರ ಸನ್ನಿಧಿಯಲ್ಲಿ ಬಂದು ಹೇಳಿದ: ಅಲ್ಲಾಹನ ಪ್ರತಿಫಲವನ್ನು ನಿರೀಕ್ಷಿಸಿ, ಹಿಜ್ರತ್ ಮಾಡುವೆನೆಂದು, ದೇವ ಮಾರ್ಗದಲ್ಲಿ ಯುದ್ಧಕ್ಕೆ ಹೊರಡುವೆನೆಂದು ನಾನು ನಿಮ್ಮೊಂದಿಗೆ ಪ್ರತಿಜ್ಞೆ ಮಾಡುತ್ತೇನೆ. ಪ್ರವಾದಿ(ಸ) ಪ್ರಶ್ನಿಸಿದರು: ನಿಮ್ಮ ಮಾತಾಪಿತರ ಪೈಕಿ ಯಾರಾದರೂ ಜೀವಿಸಿದ್ದಾರೆಯೇ? ಆ ವ್ಯಕ್ತಿ: ಹೌದು. ಇಬ್ಬರೂ ಜೀವಂತವಿದ್ದಾರೆ ಎಂದನು. ಪ್ರವಾದಿ(ಸ) ಕೇಳಿದರು: ಅಲ್ಲಾಹನ ಪ್ರತಿಫಲವನ್ನು ನಿರೀಕ್ಷಿಸಿ ಯಲ್ಲವೇ ನೀನಿಲ್ಲಿಗೆ ಬಂದದ್ದು? ಆತ ಹೌದೆಂದು ಉತ್ತರಿಸಿದ. ಪ್ರವಾದಿ(ಸ) ಹೇಳಿದರು: ಹಾಗಾದರೆ ನಿನ್ನ ಮಾತಾಪಿತರ ಬಳಿ ಮರಳಿ ಹೋಗು. ಅವರೊಂದಿಗೆ ಅತ್ಯುತ್ತಮ ರೀತಿಯಲ್ಲಿ ವರ್ತಿಸು.*

ಅಲ್ಲಾಹ್ ಮತ್ತು ಅವನ ಪ್ರವಾದಿಯ ಬಳಿಕ ವ್ಯಕ್ತಿಗೆ ಅತ್ಯಂತ ಹೆಚ್ಚು ಕರ್ತವ್ಯ ಗಳಿರುವುದು ಅವರ ಹೆತ್ತವರೊಂದಿಗಾಗಿರುತ್ತದೆ. ದೇವನ ಆರಾಧನೆಯಂತೆಯೇ

* ಇಮಾಮ್ ಬುಖಾರಿ: 3004, ಮುಸ್ಲಿಮ್: 2549, ನಸಾಈ: 6/10, ಅಹ್ಮದ್: 2/185, ಬೈಹಕಿ - ಸುನನ್ ಕುಬ್ರಾ: 9/25, ಅಬೂದಾವೂದ್: 2529 ಮುಂತಾದವರು ಇದನ್ನು ಉದ್ಧರಿಸಿರುವರು. ಈ ವಾಕ್ಯಗಳು ಸಹೀಹ್ ಮುಸ್ಲಿಮ್‌ನಲ್ಲಿದೆ.

ಹೆತ್ತವರೊಂದಿಗಿನ ಉತ್ತಮ ವ್ಯವಹಾರವೂ ಬಹಳ ಮುಖ್ಯವಾಗಿರುತ್ತದೆ. ಕುರ್‌ಆನ್ ನಲ್ಲಿ ಅನೇಕ ಕಡೆಗಳಲ್ಲಿ ಅಲ್ಲಾಹನನ್ನು ಆರಾಧಿಸಬೇಕೆಂದು ಆದೇಶಿಸಿದ ಕೂಡಲೇ ಹೆತ್ತವರೊಂದಿಗೆ ಉತ್ತಮವಾಗಿ ವರ್ತಿಸಬೇಕೆಂಬ ಆದೇಶವಿರುವುದು ಕಂಡುಬರುತ್ತದೆ. ಜೀವನ ನೀಡಿದ ಸೃಷ್ಟಿಕರ್ತ ಹಾಗೂ ಜನ್ಮ ನೀಡಿದ ಹೆತ್ತವರನ್ನು ಯಾವ ಸಂದರ್ಭದಲ್ಲೂ ಕಡೆಗಣಿಸಬಾರದು ಎಂಬುದು ಅದರ ಅರ್ಥವಾಗಿದೆ. ಎಷ್ಟು ನಿರ್ವಹಿಸಿದರೂ ಪೂರ್ತಿಗೊಳ್ಳದಷ್ಟು ಹಕ್ಕುಗಳು ಪ್ರತಿಯೊಬ್ಬ ವ್ಯಕ್ತಿಗೆ ತನ್ನ ಹೆತ್ತವರೊಂದಿಗಿರುತ್ತದೆ.

ಮಾತಾಪಿತರನ್ನು ಬೇಸರಪಡಿಸುವುದು, ಅವರ ಕೋಪಕ್ಕೆ ಪಾತ್ರರಾಗುವುದು ಅಲ್ಲಾಹನ ಕೋಪಕ್ಕೆ ಕಾರಣವಾಗುವ ಗುರುತರವಾದ ಅಪರಾಧವಾಗಿದೆ. ದೇವನ ಸಂಪ್ರೀತಿ ಗಳಿಸಬೇಕಿದ್ದರೆ, ಮಾತಾಪಿತರ ಸಂಪ್ರೀತಿಯನ್ನು ಗಳಿಸಲೇ ಬೇಕು.

مَنْ أَصْبَحَ مُطِيعًا فِي وَالِدَيْهِ، أَصْبَحَ لَهُ بَابَانِ مَفْتُوحَانِ مِنَ الْجَنَّةِ، وَإِنْ كَانَ وَاحِدًا فَوَاحِدًا،
وَمَنْ أَصْبَحَ عَاصِيًا لِلّٰهِ فِي وَالِدَيْهِ، أَصْبَحَ لَهُ بَابَانِ مَفْتُوحَانِ مِنَ النَّارِ، وَإِنْ كَانَ وَاحِدًا
فَوَاحِدًا، قَالَ الرَّجُلُ: وَإِنْ ظَلَمَاهُ؟ قَالَ: وَإِنْ ظَلَمَاهُ! وَإِنْ ظَلَمَاهُ! وَإِنْ ظَلَمَاهُ!

ಪ್ರವಾದಿ(ಸ) ಹೇಳಿರುವರು: ಮಾತಾಪಿತರನ್ನು ಅನುಸರಿಸಿ, ಅವರಿಗೆ ಸಂತೋಷವನ್ನುಂಟು ಮಾಡಿ ಒಬ್ಬನಿಗೆ ಪ್ರಭಾತವಾಗುವುದಾದರೆ, ಅಲ್ಲಾಹನು ಅವನಿಗಾಗಿ ಸ್ವರ್ಗದ ಎರಡು ಬಾಗಿಲನ್ನು ತೆರೆದು ಕೊಡುತ್ತಾನೆ. ಅವರ ಪೈಕಿ ಒಬ್ಬರ ಪ್ರೀತಿಗೆ ಪಾತ್ರರಾದರೆ, ಒಂದು ಬಾಗಿಲು ತೆರೆಯಲ್ಪಡುವುದು. ಮಾತಾಪಿತರ ಮನನೋಯಿಸಿ ಒಬ್ಬ ವ್ಯಕ್ತಿ ಪ್ರಭಾತದಲ್ಲಿ ಎದ್ದರೆ, ಅವನಿಗಾಗಿ ನರಕದ ಎರಡು ಬಾಗಿಲುಗಳನ್ನು ಅಲ್ಲಾಹನು ತೆರೆಯುವನು. ಅವರ ಪೈಕಿ ಒಬ್ಬರ ಮನನೋಯಿಸಿದರೆ ನರಕದ ಒಂದು ಬಾಗಿಲು ತೆರೆಯಲ್ಪಡುವುದು. ಒಬ್ಬರು ಪ್ರಶ್ನಿಸಿದರು: ಅಲ್ಲಾಹನ ಪ್ರವಾದಿಗಳೇ, ಅವರು ಅವನನ್ನು ಉಪದ್ರವಿಸುವವರಾಗಿದ್ದರೆ? ಪ್ರವಾದಿ(ಸ) ಹೇಳಿದರು: ಅವರು ಅವನನ್ನು ಉಪದ್ರವಿಸುವವರಾಗಿದ್ದರೂ ಸರಿ. ಇದನ್ನವರು ಮೂರು ಬಾರಿ ಪುನರಾವರ್ತಿಸಿದರು.[1]

ಮಾತಾಪಿತರಿಗೆ ಒಳಿತನ್ನು ಮಾಡಬೇಕೆಂದು ಪವಿತ್ರ ಕುರ್‌ಆನ್ ಅನೇಕ ಸ್ಥಳಗಳಲ್ಲಿ ಆದೇಶ ನೀಡುತ್ತದೆ. ಅಲ್ಲಾಹನು ಹೇಳುತ್ತಾನೆ: ತನ್ನ ಮಾತಾಪಿತರೊಂದಿಗೆ ಸೌಜನ್ಯದಿಂದ ವರ್ತಿಸಬೇಕೆಂದು ನಾವು ಮಾನವನಿಗೆ ಆದೇಶಿಸಿದೆವು. ಅವನ ತಾಯಿಯು ಬಹಳ ಕಷ್ಟಪಟ್ಟು ಅವನನ್ನು ಗರ್ಭದಲ್ಲಿರಿಸಿದಳು ಮತ್ತು ಕಷ್ಟಪಟ್ಟೇ ಹೆತ್ತಳು. ಅವನ ಗರ್ಭಾವಧಿಯಲ್ಲಿ ಮತ್ತು ಮೊಲೆಹಾಲು ಬಿಡಿಸುವುದರಲ್ಲಿ ಮೂವತ್ತು ತಿಂಗಳುಗಳು ತಗುಲಿದುವು. **(ಅಲ್ ಅಹ್‌ಕಾಫ್: 15)**

ಮಾನವನಿಗೆ ತನ್ನ ಮಾತಾಪಿತರ ಹಕ್ಕುಗಳನ್ನು ತಿಳಿದುಕೊಳ್ಳಲು ನಾವೇ ತಾಕೀತು ಮಾಡಿರುತ್ತೇವೆ. ಅವನ ತಾಯಿಯು ನಿತ್ರಾಣದ ಮೇಲೆ ನಿತ್ರಾಣವನ್ನು ಸಹಿಸಿ ಅವನನ್ನು ತನ್ನ ಗರ್ಭದಲ್ಲಿರಿಸಿದಳು ಮತ್ತು ಅವನ ಸ್ತನಪಾನ ಬಿಡಿಸುವುದರಲ್ಲಿ ಎರಡು ವರ್ಷಗಳು ತಗಲಿದುವು. (ಆದುದರಿಂದಲೇ ನಾವು ಅವನೊಡನೆ) ನನಗೆ ಕೃತಜ್ಞತೆ ಸಲ್ಲಿಸು ಮತ್ತು ನಿನ್ನ ಮಾತಾಪಿತರಿಗೆ ಕೃತಜ್ಞತೆ ಸಲ್ಲಿಸು. ನೀನು ನನ್ನ ಕಡೆಗೇ ಮರಳಬೇಕಾಗಿದೆ (ಎಂದು ಉಪದೇಶಿಸಿದೆವು) (ಲುಕ್ಮಾನ್: 14)

ನಮ್ಮ ಅರಿವಿಗೆ ಬಾರದ ರೀತಿಯಲ್ಲಿ ಮಾತಾಪಿತರು ನಮಗಾಗಿ ಸಹಿಸಿದ ತ್ಯಾಗ, ಪರಿಶ್ರಮಗಳ ಬಗ್ಗೆ ಕುರ್‌ಆನ್ ಮತ್ತು ಪ್ರವಾದಿವಚನಗಳು ನಮಗೆ ನೆನಪಿಸುತ್ತವೆ.

عَنْ بُرَيْدَةَ رَضِيَ اللهُ عَنْهُ، قَالَ: أَنَّ رَجُلاً جَاءَ إِلَى النَّبِيِّ ﷺ، فَقَالَ: يَا رَسُوْلَ اللهِ، إِنِّي حَمَلْتُ

أُمِّي عَلَى عُنُقِي فَرْسَخَيْنِ فِي رَمَضَاءَ شَدِيْدَةٍ، لَوْ أُلْقِيَتْ فِيهَا بِضْعَةٌ مِنْ لَحْمٍ لَنَضِجَتْ!

فَهَلْ أَدَّيْتُ شُكْرَهَا؟ فَقَالَ: لَعَلَّهُ أَنْ يَكُوْنَ لِطَلْقَةٍ وَاحِدَةٍ!

ಬುರೈದಾ(ರ)ರಿಂದ ವರದಿ. ಒಮ್ಮೆ ಪ್ರವಾದಿಯವರ(ಸ) ಬಳಿಗೆ ಓರ್ವ ವ್ಯಕ್ತಿ ಬಂದು ಹೇಳುತ್ತಾರೆ: ಅಲ್ಲಾಹನ ಪ್ರವಾದಿಗಳೇ, ಮಾಂಸ ಬಿದ್ದರೆ ಬೆಂದು ಹೋಗುವಷ್ಟು ತೀಕ್ಷ್ಣವಾದ ಬಿಸಿಲುಳ್ಳ ಮರುಭೂಮಿಯಲ್ಲಿ ನನ್ನ ಮಾತಾಪಿತರನ್ನು ಬೆನ್ನ ಮೇಲೆ ಹೊತ್ತುಕೊಂಡು ದೀರ್ಘ ಪ್ರಯಾಣ ಮಾಡಿದ್ದೇನೆ. ಅವರೊಂದಿಗಿರುವ ನನ್ನ ಹಕ್ಕುಗಳು ಪೂರ್ತಿಗೊಂಡವೇ? ಪ್ರವಾದಿ(ಸ) ಹೇಳಿದರು: ನಿನ್ನನ್ನು ಹೆರುವ ವೇಳೆ ಆಕೆ ಸಹಿಸಿದ ವೇದನೆಯ ಒಂದು ಪಾಲಿಗೆ ಅದು ಪರಿಹಾರವಾದೀತು. ಅಷ್ಟು ಮಾತ್ರ.[2]

ತಾಯಿಯನ್ನು ಹೆಗಲ ಮೇಲೆ ಹೊತ್ತು ಕಅಬಾದ ತವಾಫ್ ಮಾಡುತ್ತಿದ್ದ ಒಬ್ಬ ವ್ಯಕ್ತಿಯನ್ನು ಇಬ್ನು ಉಮರ್(ರ) ಒಮ್ಮೆ ನೋಡಿದರು. ತವಾಫ್ ಮುಗಿಸಿದ ಬಳಿಕ ಆ ವ್ಯಕ್ತಿ ಇಬ್ನು ಉಮರ್(ರ)ರೊಂದಿಗೆ ಪ್ರಶ್ನಿಸಿದರು: أَتَرَانِي جَزَيْتُهَا؟ ಈ ನನ್ನ ಕೆಲಸಗಳು ಮಾತೆಯು ನನಗಾಗಿ ಮಾಡಿದ ಸೇವೆಗೆ ಪ್ರತ್ಯುಪಕಾರವಾಗಬಲ್ಲುದೇ? ಇಬ್ನು ಉಮರ್(ರ) ಹೇಳಿದರು: لَا، وَلَا بِزَفْرَةٍ وَاحِدَةٍ ಇಲ್ಲ, ನಿನ್ನನ್ನು ನೆನಸಿ ಅವರು ಹೊರ ಹಾಕಿದ ಒಂದು ನಿಟ್ಟುಸಿರಿಗೂ ಅದು ಸರಿಸಮಾನವಾಗಲಾರದು.[3]

ಮಾತಾಪಿತರು ವೃದ್ಧಾಪ್ಯಕ್ಕೆ ತಲುಪಿದಾಗ ಅವರಿಂದ ವಿವಿಧ ರೀತಿಯ ತೊಂದರೆ, ಸಂಕಷ್ಟಗಳು ಉಂಟಾಗಬಹುದು. ಅಂತಹ ಸಂದರ್ಭಗಳಲ್ಲಿ ಅವರೊಂದಿಗೆ ಮುಖ ಸಿಂಡರಿಸುವುದಾಗಲಿ, ಕೋಪಿಸಿಕೊಳ್ಳುವುದಾಗಲಿ, ಏರು ಧ್ವನಿಯಲ್ಲಿ ಮಾತನಾಡುವು

ದಾಗಲಿ ಮಾಡಕೂಡದು. ಅತ್ಯಂತ ಕರುಣೆ, ದಯೆ ಮತ್ತು ಯುಕ್ತಿಯೊಂದಿಗೆ ವರ್ತಿಸ ಬೇಕು. ಮಾತಾಪಿತರಿಗೆ ಕಷ್ಟ ಕೊಡುವುದು ಮಹಾಪಾಪವಾಗಿದೆ ಎಂದು ಪ್ರವಾದಿ(ಸ) ಎಚ್ಚರಿಸಿರುವರು. ಅಬೂಬಕರ್(ರ)ರವರು ಹೀಗೆ ವರದಿ ಮಾಡಿರುವರು:

قَالَ رَسُوْلُ اللّٰهِ ﷺ: "أَلَا أُنَبِّئُكُمْ بِأَكْبَرِ الْكَبَائِرِ؟" ثَلَاثًا، قُلْنَا: بَلٰى، يَا رَسُولَ اللّٰهِ،

قَالَ: "اَلْإِشْرَاكُ بِاللّٰهِ وَعُقُوقُ الْوَالِدَيْنِ"

ಒಮ್ಮೆ ಪ್ರವಾದಿ(ಸ) ನಮ್ಮೊಂದಿಗೆ ಪ್ರಶ್ನಿಸಿದರು, 'ಮಹಾಪಾಪಗಳ ಪೈಕಿ ಅತಿ ಹೆಚ್ಚು ಗುರುತರವಾದುದು ಯಾವುದೆಂದು ನಾನು ನಿಮಗೆ ತಿಳಿಸಲೇ?' ಮೂರು ಬಾರಿ ಈ ಪ್ರಶ್ನೆಯನ್ನು ಪುನರಾವರ್ತಿಸಿದರು. ನಾನು ಹೇಳಿದೆ, 'ಹೇಳಿರಿ ಪ್ರವಾದಿ ಗಳೇ.' ಪ್ರವಾದಿ(ಸ) ಹೇಳಿದರು, 'ಅಲ್ಲಾಹನೊಂದಿಗೆ ಸಹಭಾಗಿಗಳನ್ನು ಸೇರಿಸುವುದು ಮತ್ತು ಮಾತಾಪಿತರಿಗೆ ದ್ರೋಹ ಬಗೆಯುವುದಾಗಿದೆ.'[4]

ಮಕ್ಕಳ ಪೀಡನೆಯ ಕಾರಣದಿಂದ ಮಾತಾಪಿತರು ಅಳಬೇಕಾಗಿ ಬರುವುದರ ಬಗ್ಗೆ ಅಬ್ದುಲ್ಲಾ ಬಿನ್ ಉಮರ್(ರ) ಹೇಳುತ್ತಾರೆ: بُكَاءُ الْوَالِدَيْنِ مِنَ الْعُقُوْقِ وَالْكَبَائِرِ ಮಾತಾಪಿತರು ಅಳಲು ಕಾರಣವಾಗುವುದು ಮತ್ತು ಅವರನ್ನು ಉಪದ್ರವಿಸುವುದು ಮಹಾ ಪಾಪವಾಗಿದೆ.[5]

ಅಲ್ಲಾಹನ ಮಾರ್ಗದಲ್ಲಿ ಎಲ್ಲವನ್ನು ಅರ್ಪಿಸಿ ವಲಸೆ ಹೋಗುವಾಗಲೂ ಜೀವನ ವನ್ನೇ ಸಮರ್ಪಿಸಬೇಕಾಗಿ ಬರುವ ಧರ್ಮಯುದ್ಧಕ್ಕಿಂತಲೂ ಪ್ರಾಮುಖ್ಯವಾದುದು ಓರ್ವ ವ್ಯಕ್ತಿ ತನ್ನ ಮಾತಾಪಿತರನ್ನು ಚೆನ್ನಾಗಿ ನೋಡಿಕೊಳ್ಳುವುದಾಗಿರುತ್ತದೆ ಎಂಬು ದನ್ನು ಆರಂಭದ ಪ್ರವಾದಿವಚನವು ಮನವರಿಕೆ ಮಾಡಿಸುತ್ತದೆ. ಮಾತಾಪಿತರನ್ನು ನಿಂದಿಸುವುದು, ಉಪದ್ರವಿಸುವುದು, ಅವರನ್ನು ವೃದ್ಧಾಶ್ರಮಗಳಿಗೆ ತಳ್ಳಿಬಿಡುವುದು ಮುಂತಾದವುಗಳನ್ನು ಮಾಡುತ್ತಿರುವ ಹೊಸ ತಲೆಮಾರಿನ ಇಂದಿನ ಪರಿಸ್ಥಿತಿಯಲ್ಲಿ ಮೇಲಿನ ಉಪದೇಶಕ್ಕೆ ಮಹತ್ವ ಮತ್ತು ಪ್ರಸಕ್ತಿ ಹೆಚ್ಚುತ್ತದೆ.

---

1. ಬೈಹಕಿ – ಶುಅಬುಲ್ ಈಮಾನ್: 7916.
2. ತಬ್ರಾನಿ – ಸಗೀರ್, ಮಜ್ಮುಸ್ಸವಾಇದ್, ಭಾಗ: 8, ಪುಟ: 137.
3. ಬುಖಾರಿ – ಅದಬುಲ್ ಮುಫ್ರದ್: 10.
4. ಬುಖಾರಿ: 5976, ಮುಸ್ಲಿಮ್: 87, ತಿರ್ಮಿದಿ: 1901.
5. ಬುಖಾರಿ – ಅದಬುಲ್ ಮುಫ್ರದ್: 31.

29. ಪ್ರಾರ್ಥಿಸುವ ಸಂತಾನಗಳು

عَنْ أَبِي هُرَيْرَةَ رَضِيَ اللّٰهُ عَنْهُ، قَالَ: قَالَ رَسُولُ اللّٰهِ ﷺ " إِنَّ اللّٰهَ لَيَرْفَعُ الدَّرَجَةَ لِلْعَبْدِ الصَّالِحِ فِي الْجَنَّةِ، فَيَقُولُ: يَا رَبِّ أَنَّى لِي هٰذِهِ؟ فَيَقُولُ: بِاسْتِغْفَارِ وَلَدِكَ لَكَ!"

ಅಬೂ ಹುರೈರಾ(ರ)ರಿಂದ ವರದಿ. ಪ್ರವಾದಿ(ಸ) ಹೇಳಿದರು: ಸದ್ಗುಣ ಸಂಪನ್ನನಾದ ಒಬ್ಬ ವ್ಯಕ್ತಿಯನ್ನು ಅಲ್ಲಾಹನು ಸ್ವರ್ಗದಲ್ಲಿ ಪದವಿಗಳನ್ನು ಹೆಚ್ಚಿಸುತ್ತಾ ಹೋಗುವನು. ಆಗ ವ್ಯಕ್ತಿ ಪ್ರಶ್ನಿಸುವನು, 'ಪ್ರಭೂ! ಯಾಕಾಗಿ ನನ್ನ ಅನುಗ್ರಹಗಳನ್ನು ವರ್ಧಿಸುತ್ತಿರುವೆ?' ಅಲ್ಲಾಹನು ಹೇಳುವನು, 'ನಿನ್ನ ಮಗನು ನಿನಗಾಗಿ ಪಾಪ ವಿಮೋಚನೆಯ ಪ್ರಾರ್ಥನೆ ಮಾಡುವ ಕಾರಣಕ್ಕಾಗಿ.'*

ದೇವನ ಮಾರ್ಗದಲ್ಲಿ ಬೆಳೆಸಲ್ಪಟ್ಟ, ಮರಣಾನಂತರ ಪರಲೋಕದ ಜೀವನದಲ್ಲಿ ಮಾತಾಪಿತರ ಪಾಲಿಗೆ ಅನುಗ್ರಹವಾಗುವ ಸದ್ಗುಣ ಸಂಪನ್ನರಾದ ಓರ್ವ ಮಗನ ಕುರಿತು ಈ ಹದೀಸ್‌ನಲ್ಲಿದೆ. ಸದ್ಗುಣ ಸಂಪನ್ನರಾದ ಮಕ್ಕಳು ಈ ಜೀವನದ ಅನರ್ಘ್ಯ ಸೌಭಾಗ್ಯಗಳಾಗಿರುವರು. ಎಲ್ಲರಿಗೂ ಈ ಸೌಭಾಗ್ಯ ಲಭ್ಯವಾಗುವುದಿಲ್ಲ. ಬಹಳ ವಿರಳ ವಾಗಿ ಕೆಲವರಿಗೆ ಮಾತ್ರ ಅದು ಲಭಿಸುತ್ತದೆ. ಈ ರೀತಿ ಅವರ ಮಕ್ಕಳು ಅವರ ಪಾಲಿಗೆ

* ಇಮಾಮ್ ಬುಖಾರಿ – ಅದಬುಲ್ ಮುಫ್ರದ್: 36, ಅಹ್ಮದ್: 509, ಇಬ್ನುಮಾಜ: 3660, ಬೈಹಕಿ: 7/78–79, ಇಬ್ನು ಅಬೀ ಶೈಬ: 3/389, ತಬ್ರಾನಿ – ಔಸತ್: 5104, ಬಸ್ಸಾರ್ – ಕಶ್ಫುಲ್ ಅಸ್ತಾರ್: 3141, ಇಬ್ನು ಅಬ್ದುಲ್ ಬರ್ರ್ – ತೌಹೀದ್: 23/142, ಬಗವಿ: 1396 ಮುಂತಾದವರು ಈ ಹದೀಸ್ ವಚನವನ್ನು ಉದ್ಧರಿಸಿರುವರು. ಇದರ ವರದಿಯ ಪರಂಪರೆಯು ಪ್ರಬಲವಾಗಿದೆಯೆಂದು ಅಲ್ಲಾಮಾ ಝ್ಯುನುದ್ದೀನ್ ಅಲ್ ಇರಾಕಿ, ಶುಐಬ್ ಅಲ್ ಅರ್‌ನಊತ್ ಮುಂತಾದವರು ಸಾಕ್ಷ್ಯ ವಹಿಸಿರುವರು. ಮುಸ್ನದ್ ಅಹ್ಮದ್‌ನಲ್ಲಿರುವ ವಾಕ್ಯಗಳಿವು. (ಹದೀಸ್: 10610)

ಇಹಲೋಕದಲ್ಲೂ ಪರಲೋಕದಲ್ಲೂ ನೆರಳು ಮತ್ತು ತಂಪಾಗಿ ಮಾರ್ಪಡುತ್ತಾರೆ.

ಮಕ್ಕಳನ್ನು ಒಳ್ಳೆಯವರಾಗಿ ಬೆಳೆಸಿದರೆ, ಅದರ ಪ್ರಯೋಜನ ಮುಖ್ಯವಾಗಿ ಲಭಿಸುವುದು ಅವರ ಹೆತ್ತವರಿಗಾಗಿರುತ್ತದೆ. ಮಕ್ಕಳು ಸ್ವೇಚ್ಛಾಚಾರಿಗಳು, ದುಷ್ಟರು ಆಗಿ ಮಾರ್ಪಟ್ಟರೆ ಅದರ ಸಂಕಷ್ಟ(ಪಾಪ)ವನ್ನು ಪ್ರಥಮವಾಗಿ ಅನುಭವಿಸಬೇಕಾಗಿರುವುದು ಕೂಡ ಹೆತ್ತವರೇ ಆಗಿರುತ್ತಾರೆ. ಸಂತಾನಗಳು ಕೆಲವರ ಪಾಲಿಗೆ ಕಣ್ಣಿನ ತಂಪಾದರೆ, ಮತ್ತೆ ಕೆಲವರ ಪಾಲಿಗೆ ಮುಳ್ಳಿನ ಕಿರೀಟದಂತಿರುತ್ತಾರೆ.

ಉತ್ತಮ ಶಿಕ್ಷಣ ತರಬೇತಿಯನ್ನು ನೀಡಿ ಮಕ್ಕಳನ್ನು ಧರ್ಮದ ಬಗ್ಗೆ ಅರಿವುಳ್ಳವರಾಗಿ ಮಾರ್ಪಡಿಸುವುದು ಹೆತ್ತವರ ಜವಾಬ್ದಾರಿಯಾಗಿದೆ. ಪ್ರವಾದಿ(ಸ) ಹೇಳಿದ್ದಾರೆ, أَكْرِمُوا أَوْلَادَكُمْ وَأَحْسِنُوا أَدَبَهُمْ ನೀವು ಮಕ್ಕಳಿಗೆ ಅಗತ್ಯ ಪರಿಗಣನೆ ನೀಡಬೇಕು. ಅವರ ವರ್ತನೆಗಳನ್ನು ತಿದ್ದಿ ಸರಿಪಡಿಸಬೇಕು.[1] ತಿರ್ಮಿದಿ ಉದ್ಧರಿಸಿರುವ ಇನ್ನೊಂದು ಪ್ರವಾದಿ ವಚನ ಈ ರೀತಿ ಇದೆ: مَا نَحَلَ وَالِدٌ وَلَدًا مِنْ نُحْلٍ أَفْضَلَ مِنْ أَدَبٍ حَسَنٍ 'ಉತ್ತಮ ಶಿಕ್ಷಣ ತರಬೇತಿಗಿಂತ ಶ್ರೇಷ್ಠವಾದ ಯಾವುದೇ ಉಡುಗೊರೆಯನ್ನು ಯಾವ ಮಾತಾಪಿತರೂ ತಮ್ಮ ಮಕ್ಕಳಿಗೆ ನೀಡಲು ಸಾಧ್ಯವಿಲ್ಲ.'[2]

ಮಕ್ಕಳೊಂದಿಗಿನ ಜವಾಬ್ದಾರಿಗಳಲ್ಲಿ ಕೊರತೆಯನ್ನುಂಟು ಮಾಡುವವರು ತಮ್ಮ ಮೇಲೆ ಹಾಗೂ ಸಮಾಜದ ಮೇಲೂ ಅಕ್ರಮವೆಸಗಿದಂತಾಗುತ್ತದೆ. ಕೆಟ್ಟ ಅಭ್ಯಾಸಗಳನ್ನು ಬೆಳೆಸಿಕೊಂಡ ಮಕ್ಕಳು (ತಲೆಮಾರು) ಇಡೀ ಊರಿಗೇ ಕಂಟಕವಾಗಿ ಮಾರ್ಪಡುತ್ತಾರೆ. ಕೆಟ್ಟ ವ್ಯಕ್ತಿಗಳ ಹೆಚ್ಚಳವು ಸಮಾಜದ ನೈತಿಕತೆಯನ್ನು ದುರ್ಬಲಗೊಳಿಸಿಬಿಡುತ್ತದೆ. ಅತಿಕ್ರಮಗಳು ಹೆಚ್ಚಲು ದುಷ್ಕೃತ್ಯಗಳು ವರ್ಧಿಸಲು ಇದು ಕಾರಣವಾಗುತ್ತದೆ. ಮಕ್ಕಳನ್ನು ಬಾಲ್ಯದಿಂದಲೇ ಉತ್ತಮ ಸದಾಚಾರ ಮತ್ತು ಧಾರ್ಮಿಕ ಮೌಲ್ಯಗಳನ್ನು ನೀಡಿ ಬೆಳೆಸ ಬೇಕು ಎಂಬುದನ್ನು ಇಸ್ಲಾಮ್ ಬಹಳ ಒತ್ತು ಕೊಟ್ಟು ಪ್ರಸ್ತಾಪಿಸಿರುವುದು ಇದೇ ಕಾರಣಕ್ಕಾಗಿದೆ.

ಮಕ್ಕಳ ಕೆಟ್ಟ ಸ್ವಭಾವ ಮತ್ತು ಸಂಸ್ಕಾರಹೀನತೆಯ ಬಗ್ಗೆ ದೂರುವ ಹೆತ್ತವರು, ಮೊತ್ತಮೊದಲು ತಮ್ಮ ಜವಾಬ್ದಾರಿ ನಿರ್ವಹಣೆಯಲ್ಲಿ ಎಲ್ಲಿ ಕೊರತೆಗಳಾಗಿವೆ ಎಂಬುದರ ಕುರಿತು ಆಲೋಚಿಸಬೇಕಾಗಿದೆ. ಮಕ್ಕಳೊಂದಿಗಿರುವ ನಮ್ಮ ಕರ್ತವ್ಯಗಳನ್ನು ತಾವು ನಿರ್ವಹಿಸಿದ್ದೇವೆಯೋ ಇಲ್ಲವೋ ಎಂಬುದರ ಕುರಿತು ಪುನರಾಲೋಚನೆ ನಡೆಸಬೇಕಾಗಿದೆ. ಒಂದು ಚಾರಿತ್ರಿಕ ಘಟನೆ ಹೀಗಿದೆ: ಒಮ್ಮೆ ಖಲೀಫ ಉಮರ್(ರ)ರ ಬಳಿ ಮಗನ ಬಗ್ಗೆ ದೂರುಗಳೊಂದಿಗೆ ಒಬ್ಬ ವ್ಯಕ್ತಿ ಬಂದರು. ಅವರು ಹೀಗೆ ಹೇಳಿದರು:

ಅಮೀರುಲ್ ಮೂಮಿನೀನ್, ನನ್ನ ಮಗನು ನನಗೆ ಉಪದ್ರ ಮತ್ತು ಕಷ್ಟ ನೀಡುತ್ತಿದ್ದಾನೆ. ಉಮರ್(ರ) ಆ ವ್ಯಕ್ತಿಯ ಮಗನನ್ನು ಕರೆಸಿದರು. ಬಳಿಕ ಮಾತಾಪಿತ ರೊಂದಿಗಿರುವ ಅವನ ಕರ್ತವ್ಯಗಳ ಬಗ್ಗೆ ತಿಳಿಸಿ, ಅವರನ್ನು ಉಪದ್ರವಿಸಿದರೆ ಭವಿಷ್ಯದಲ್ಲಿ ಸಂಭವಿಸಲಿರುವುದರ ಕುರಿತು ನೆನಪಿಸಿದರು. ಆಗ ಅವನು ಪ್ರಶ್ನಿಸಿದ: ಅಮೀರುಲ್ ಮೂಮಿನೀನ್, ಒಬ್ಬ ತಂದೆಗೆ ತನ್ನ ಮಕ್ಕಳ ಮೇಲೆ ಏನಾದರೂ ಹೊಣೆಗಾರಿಕೆಗಳಿವೆಯೇ? ಉಮರ್(ರ) ಇವೆಯೆಂದರು. ಅವು ಯಾವುವು ಎಂದು ಆತ ಕೇಳಿದಾಗ, ಉಮರ್(ರ) ಹೇಳಿದರು: أَنْ يَنْتَقِيَ أُمَّهُ، وَيُحَسِّنَ إِسْمَهُ، وَيُعَلِّمَهُ الْكِتَابَ ಅವನಿಗೆ ಉತ್ತಮ ತಾಯಿಯನ್ನು ನೀಡುವುದು, ಮಗುವಿಗೆ ಉತ್ತಮ ಹೆಸರನ್ನಿಡು ವುದು, ಧಾರ್ಮಿಕ ಗ್ರಂಥಗಳನ್ನು ಕಲಿಸುವುದು ಇತ್ಯಾದಿ. ಅವನು ಹೇಳಿದ:

يَا أَمِيرَ الْمُؤْمِنِينَ، إِنَّ أَبِي لَمْ يَفْعَلْ شَيْئًا مِنْ ذٰلِكَ، أَمَّا أُمِّي فَإِنَّهَا زِنْجِيَّةٌ كَانَتْ لِمَجُوسِيٍّ،
وَقَدْ سَمَّانِي جُعَلًا، وَلَمْ يُعَلِّمْنِي مِنَ الْكِتَابِ حَرْفًا وَاحِدًا

'ಅಮೀರುಲ್ ಮೂಮಿನೀನ್. ಈ ಕರ್ತವ್ಯಗಳಲ್ಲಿ ಒಂದನ್ನು ಕೂಡ ನನ್ನ ತಂದೆ ಯವರು ನಿರ್ವಹಿಸಲಿಲ್ಲ, ನನ್ನ ತಾಯಿ ಓರ್ವ ಅಗ್ನಿ ಆರಾಧಕಳ ಕೈ ಕೆಳಗೆ ಬೆಳೆದ ಗುಲಾಮ ಹೆಣ್ಣು. ಜುಅ್‌ಲ (ಕಪ್ಪು ಮಿಡತೆ) ಎಂಬುದು ಅವರು ನನಗೆ ಇಟ್ಟ ಹೆಸರು. ಅಲ್ಲಾಹನ ಗ್ರಂಥದ ಒಂದಕ್ಷರವನ್ನೂ ನನಗೆ ತಂದೆಯವರು ಕಲಿಸಿಕೊಡಲಿಲ್ಲ.' ಉಮರ್(ರ) ರೋಷಾಕುಲರಾಗಿ ಅನ್ಯಾಯ ಮಾಡಿದ ತಂದೆಯ ಕಡೆಗೆ ತಿರುಗಿದರು:

جِئْتَ إِلَيَّ تَشْكُوا عُقُوقَ ابْنِكَ، وَقَدْ عَقَقْتَهُ قَبْلَ اَنْ يَعُقَّكَ، وَأَسَأْتَ إِلَيْهِ قَبْلَ أَنْ يُسِيئَ إِلَيْكَ

'ಮಗನು ಉಪದ್ರವಿಸುತ್ತಿದ್ದಾನೆ ಎಂಬ ದೂರಿನೊಂದಿಗೆ ನೀವು ನನ್ನ ಬಳಿಗೆ ಬಂದಿರುವಿರಲ್ಲವೇ? ವಾಸ್ತವದಲ್ಲಿ ಅವನು ನಿಮ್ಮನ್ನು ಉಪದ್ರವಿಸುವುದಕ್ಕಿಂತ ಮೊದಲು ನೀವು ಅವನನ್ನು ಉಪದ್ರವಿಸಿರುವಿರಿ. ಅವನು ನಿಮ್ಮೊಂದಿಗೆ ಕೆಟ್ಟ ರೀತಿ ಯಲ್ಲಿ ವ್ಯವಹರಿಸುವುದಕ್ಕಿಂತ ಮೊದಲು ನೀವು ಅವನೊಂದಿಗೆ ಕೆಟ್ಟ ರೀತಿಯಲ್ಲಿ ವರ್ತಿಸಿರುವಿರಿ.'[3]

ಒಬ್ಬ ವ್ಯಕ್ತಿಯ ಮರಣಾನಂತರವೂ ಅವನ ಪ್ರಯೋಜನಕ್ಕೆ ಬರುವ ಸತ್ಕರ್ಮಗಳ ಪೈಕಿ ಸಚ್ಚಾರಿತ್ರ್ಯವಂತರಾದ ಮಕ್ಕಳು ಸೇರಿದ್ದಾರೆ ಎಂಬುದಾಗಿ ಆರಂಭದ ಹದೀಸ್ ವಚನವು ಮನದಟ್ಟು ಮಾಡುತ್ತದೆ. ಮಕ್ಕಳ ನೈತಿಕತೆಯೆಡೆಗೆ ಯಾವುದೇ ಶ್ರದ್ಧೆ ವಹಿಸದೆ, ಅವರನ್ನು ಸ್ವೇಚ್ಛಾಚಾರಿಗಳಾಗಿ, ಧಿಕ್ಕಾರಿಗಳಾಗಿ ಬೆಳೆಯಲು ಬಿಡುವ

ಹೆತ್ತವರನ್ನು ಪರೋಕ್ಷವಾಗಿ ವಿಮರ್ಶಿಸುವ ಕೆಲಸವನ್ನು ಪ್ರವಾದಿ(ಸ) ಈ ಮೂಲಕ ಮಾಡಿರುತ್ತಾರೆ. ಅಬೂ ಹುರೈರಾ(ರ) ವರದಿ ಮಾಡಿರುವ ಒಂದು ಪ್ರವಾದಿವಚನವು ಹೀಗಿದೆ:

إِذَا مَاتَ ابْنُ آدَمَ انْقَطَعَ عَمَلُهُ إِلَّا مِنْ ثَلَاثَةٍ: صَدَقَةٍ جَارِيَةٍ، أَوْ عِلْمٍ يُنْتَفَعُ بِهِ، أَوْ وَلَدٍ صَالِحٍ يَدْعُولَهُ

ಒಬ್ಬನು ಮರಣ ಹೊಂದುವುದರೊಂದಿಗೆ ಅವನ ಎಲ್ಲ ಕರ್ಮಗಳು ಕೊನೆಗೊಳ್ಳುತ್ತವೆ. ಮೂರು ವಿಷಯಗಳು ಬಾಕಿಯುಳಿಯುತ್ತವೆ. ಶಾಶ್ವತವಾಗಿ ಉಳಿಯುವ ದಾನ, ಉಪಕಾರಕ್ಕೆ ಬರುವ ವಿದ್ಯೆ, ತನಗಾಗಿ ಪ್ರಾರ್ಥಿಸುವ ಸತ್ಕರ್ಮಿಗಳಾದ ಮಕ್ಕಳು.[4]

ಇಮಾಮ್ ತಬ್ರಾನಿಯವರು ಔಸತ್‌ನಲ್ಲಿ ಉದ್ಧರಿಸಿರುವ ಪ್ರವಾದಿವಚನ ಈ ವಿಷಯವನ್ನು ಇನ್ನೊಂದು ರೀತಿಯಲ್ಲಿ ಪ್ರಸ್ತುತಪಡಿಸಿದೆ:

يَتْبَعُ الرَّجُلَ مِنَ الْحَسَنَاتِ يَوْمَ الْقِيَامَةِ أَمْثَالُ الْجِبَالِ، فَيَقُولُ: أَنَّى هٰذَا؟ فَيُقَالُ: بِاسْتِغْفَارِ وَلَدِكَ لَكَ!

ಅಂತ್ಯದಿನದಂದು ಒಬ್ಬ ವ್ಯಕ್ತಿಯು ಬರುವರು. ಅವರ ಜೊತೆ ಪರ್ವತಗಳೆತ್ತರದ ಸತ್ಕರ್ಮಗಳಿರುವುದು. ಆಶ್ಚರ್ಯಚಕಿತರಾಗಿ ಅವರು ಪ್ರಶ್ನಿಸುವರು, ಈ ಕರ್ಮಗಳು ಅದು ಹೇಗೆ ನನ್ನ ಜೊತೆ ಬಂದುವು? ಅವರೊಂದಿಗೆ ಹೇಳಲಾಗುವುದು, ನಿನ್ನ ಮಕ್ಕಳು ನಿನಗಾಗಿ ಮಾಡುವ ಪ್ರಾರ್ಥನೆಯ ಫಲವಾಗಿ ಇದು ನಿನಗೆ ಸಿಕ್ಕಿರುತ್ತದೆ.[5]

---

1. ಇಬ್ನುಮಾಜ: 3671.
2. ಘಾರ್ಮಿದಿ: 1952.
3. ತರ್ಬಿಯತುಲ್ ಔಲಾದ್, ಭಾಗ: 1, ಪುಟ: 128.
4. ಮುಸ್ಲಿಮ್: 1631, ಅಬುದಾವೂದ್: 2880, ಬುಖಾರಿ – ಅದಬುಲ್ ಮುಫ್ರದ್: 38.
5. ತಬ್ರಾನಿ – ಔಸತ್: 1915.

30. ದಾಂಪತ್ಯ: ಕರ್ತವ್ಯಗಳು ಮತ್ತು ಪ್ರತಿಫಲಗಳು

عَنْ أَبِي سَعِيدٍ الخُضْرِيِّ رَضِيَ اللّٰهُ عَنْهُ قَالَ: قَالَ رَسُولُ اللّٰهِ ﷺ: إِنَّ الرَّجُلَ إِذَا نَظَرَ إِلَى امْرَأَتِهِ وَنَظَرَتْ إِلَيْهِ نَظَرَ اللّٰهُ تَعَالَى إِلَيْهِمَا نَظْرَةً رَحْمَةً، فَإِذَا أَخَذَ بِكَفِّهَا تَسَاقَطَتْ ذُنُوبُهُمَا مِنْ خِلَالِ أَصَابِعِهِمَا

ಅಬೂ ಸಈದ್ ಖುದ್ರಿ(ರ) ವರದಿ ಮಾಡಿರುತ್ತಾರೆ. ಪ್ರವಾದಿ(ಸ) ಹೇಳಿರುವರು, ಒಬ್ಬ ಪುರುಷ ತನ್ನ ಪತ್ನಿಯನ್ನು ಮತ್ತು ಅವಳು ಆತನನ್ನು ಪರಸ್ಪರ ನೋಡಿದರೆ, ಅವರಿಬ್ಬರ ಮೇಲೂ ಅಲ್ಲಾಹನ ಕರುಣೆಯು ವರ್ಷಿಸುವುದು. ಅವನು ತನ್ನ ಪತ್ನಿಗೆ ಹಸ್ತಲಾಘವ ನೀಡಿದರೆ, ಪಾಪಗಳು ಅವರ ಕೈಬೆರಳು ಗಳೆಡೆಯಿಂದ ಉದುರಿ ಬೀಳುವುದು.*

ದಾಂಪತ್ಯ ಜೀವನದಲ್ಲಿ ಪತಿ-ಪತ್ನಿಯರ ಮಧ್ಯೆ ಇರಬೇಕಾದ ಪ್ರೀತಿ, ಕಾರುಣ್ಯದ ವರ್ತನೆಯೆಡೆಗೆ ಈ ಪ್ರವಾದಿವಚನವು ನಮ್ಮ ಗಮನ ಸೆಳೆಯುತ್ತದೆ. ದಾಂಪತ್ಯದಷ್ಟು ಪವಿತ್ರ ಮತ್ತು ಆಹ್ಲಾದಕರವಾದ ಇನ್ನೊಂದು ಸಂಬಂಧ ಮನುಷ್ಯ ಜೀವನದಲ್ಲಿ ಇಲ್ಲ. ಪ್ರಪಂಚದ ಸೃಷ್ಟಿಕರ್ತನು ತನ್ನ ಸೃಷ್ಟಿಗಳಲ್ಲೇ ಶ್ರೇಷ್ಠರಾದ ಮನುಷ್ಯರಿಗಾಗಿ ನಿರ್ಮಿಸಿಟ್ಟ ಆನಂದಸಾಗರವಿದಾಗಿದೆ. ಪವಿತ್ರ ಕುರ್‌ಆನ್ ಹೇಳುತ್ತದೆ, 'ಅವನು ನಿಮಗಾಗಿ ನಿಮ್ಮ ವರ್ಗದಿಂದಲೇ ಜೋಡಿಗಳನ್ನು ಸೃಷ್ಟಿಸಿ, ನೀವು ಅವರ ಬಳಿ ಪ್ರಶಾಂತಿಯನ್ನು ಪಡೆಯುವಂತೆ ಮಾಡಿದುದು ಮತ್ತು ನಿಮ್ಮ ನಡುವೆ ಪ್ರೇಮ ಮತ್ತು ಅನುಕಂಪವನ್ನುಂಟು ಮಾಡಿದುದೂ ಅವನ ನಿದರ್ಶನಗಳಲ್ಲೊಂದಾಗಿದೆ. ನಿಶ್ಚಯವಾಗಿಯೂ ವಿವೇಚಿಸುವವರಿಗೆ ಇದರಲ್ಲಿ ಅನೇಕ ನಿದರ್ಶನಗಳಿವೆ.' (ಅರ್ರೂಮ್: 21)

---

* ಇಮಾಮ್ ಸುಯೂತಿಯವರು ಜಾಮಿಉಸ್ಸಗೀರ್‌ನಲ್ಲಿ ಉಲ್ಲೇಖಿಸಿರುವರು. ಇದರ ಆಗಮನ ಶ್ರೇಣಿಯು ಸಹೀಹ್ ಆಗಿದೆಯೆಂದು ಅವರೇ ಹೇಳಿರುವರು. (ಜಾಮಿಉಸ್ಸಗೀರ್, ಹದೀಸ್: 1977)

ಪತಿ–ಪತ್ನಿಯರು ಪರಸ್ಪರ ಶ್ರದ್ಧೆ ವಹಿಸಿದರೆ ಮಾತ್ರ ದಾಂಪತ್ಯ ಜೀವನವು ಸಂತೋಷದಾಯಕವಾಗುತ್ತದೆ. ಪತ್ನಿಯೊಂದಿಗೆ ಗೌರವದಿಂದ ವರ್ತಿಸಲು ಪತಿ ಮತ್ತು ಪತಿಯೊಂದಿಗೆ ಗೌರವಯುತವಾಗಿ ವ್ಯವಹರಿಸಲು ಪತ್ನಿಯು ಗಮನ ನೀಡಬೇಕು. ಆಗ ಮಾತ್ರ ದಾಂಪತ್ಯ ಜೀವನವು ಸುದೃಢ ಮತ್ತು ಸಂತೋಷದಾಯಕವಾಗಿ ಪರಿಣಮಿಸುತ್ತದೆ. ಅಲ್ಲಾಹ್ ಹೇಳುತ್ತಾನೆ: ಪುರುಷರಿಗೆ ಸ್ತ್ರೀಯರ ಮೇಲೆ ಹಕ್ಕಿರುವಂತೆಯೇ ಸ್ತ್ರೀಯರಿಗೂ ಪುರುಷರ ಮೇಲೆ ನ್ಯಾಯೋಚಿತ ಹಕ್ಕು ಇದೆ. (ಅಲ್ ಬಕರ: 228) ನೀವು ಅವರೊಂದಿಗೆ ಉತ್ತಮ ರೀತಿಯಲ್ಲಿ ಜೀವನ ನಡೆಸಿರಿ. (ಅನ್ನಿಸಾ: 19) ವಿದಾಯ ಹಜ್ಜ್ ಪ್ರವಚನದಲ್ಲಿ ಪ್ರವಾದಿ ಮುಹಮ್ಮದ್(ಸ)ರು ಈ ರೀತಿ ನೆನಪಿಸಿರುವರು:

أَلَا وَاسْتَوْصُوا بِالنِّسَاءِ خَيْرًا، فَإِنَّمَا هُنَّ عَوَانٌ عِنْدَكُم، لَيْسَ تَمْلِكُونَ مِنْهُنَّ شَيْئًا... أَلَا إِنَّ لَكُمْ عَلَى نِسَائِكُمْ حَقًّا، وَلِنِسَائِكُمْ عَلَيْكُمْ حَقًّا

ತಿಳಿಯಿರಿ. ಪತ್ನಿಯರೊಂದಿಗೆ ಅತ್ಯುತ್ತಮ ರೀತಿಯಲ್ಲಿ ವರ್ತಿಸಬೇಕೆಂಬ ನನ್ನ ಆದೇಶವನ್ನು ನೀವು ಸ್ವೀಕರಿಸಿಕೊಳ್ಳಿರಿ. ಅವರು ನಿಮ್ಮ ಜೊತೆಗಿರುವ ನಿಮ್ಮ ಆಶ್ರಿತರಾಗಿದ್ದಾರೆ. ಇದರ ಹೊರತು ನಿಮಗೆ ಅವರ ಮೇಲೆ ಯಾವ ಅಧಿಕಾರವೂ ಇಲ್ಲ. ನಿಮಗೆ ನಿಮ್ಮ ಪತ್ನಿಯರ ಮೇಲೆ ಕೆಲವು ಹಕ್ಕುಗಳಿವೆ ಮತ್ತು ನಿಮ್ಮ ಪತ್ನಿಯರಿಗೂ ನಿಮ್ಮ ಮೇಲೆ ಕೆಲವು ಹಕ್ಕುಗಳಿವೆ.[1]

ಒಬ್ಬರು ಪ್ರವಾದಿವರ್ಯರೊಡನೆ(ಸ) ಪ್ರಶ್ನಿಸಿದರು: يَا رَسُولَ اللهِ، مَا حَقُّ زَوْجَةِ أَحَدِنَا عَلَيْهِ؟ 'ಅಲ್ಲಾಹನ ಪ್ರವಾದಿಗಳೇ, ನಮ್ಮ ಪತ್ನಿಯರಿಗೆ ನಮ್ಮಿಂದ ಸಿಗ ಬೇಕಾದ ಹಕ್ಕುಗಳು ಯಾವುವು?' ಪ್ರವಾದಿ(ಸ) ಹೇಳಿದರು:

أَنْ تَطْعَمَهَا إِذَا طَعِمْتَ، وَتَكْسُوهَا إِذَا كْتَسَيْتَ، وَلَا تَضْرِبِ الْوَجْهَ، وَلَا تُقَبِّحْ، وَلَا تَهْجُرْ إِلَّا فِي الْبَيْتِ

'ನೀನು ನಿನಗಾಗಿ ಬಯಸುವುದನ್ನೇ ಅವಳಿಗೂ ಬಯಸಬೇಕು. ನೀನು ವಸ್ತ್ರ ಧರಿಸಿದರೆ, ಅವಳಿಗೂ ವಸ್ತ್ರ ಉಡಿಸಬೇಕು. ಮುಖಕ್ಕೆ ಹೊಡೆಯುವುದಾಗಲಿ, ಅಸಭ್ಯ ಮಾತುಗಳನ್ನಾಡುವುದಾಗಲಿ ಸಲ್ಲದು. ಮನೆಯ ಹೊರತು ಹೊರಗೆಲ್ಲೂ ಅವಳೊಂದಿಗೆ ಜಗಳಾಡಬಾರದು.'[2]

ಪ್ರವಾದಿವರ್ಯರು(ಸ) ತಮ್ಮ ಪತ್ನಿಯರೊಂದಿಗೆ ಬಹಳ ಕರುಣೆಯಿಂದ ಮತ್ತು ಪ್ರೀತಿಯಿಂದ ವ್ಯವಹರಿಸುತ್ತಿದ್ದರು. ಅವರು ಹೀಗೆ ಹೇಳುತ್ತಿದ್ದರು:

خَيْرُكُمْ خَيْرُكُمْ لِأَهْلِهِ وَأَنَا خَيْرُكُمْ لِأَهْلِي

ನಿಮ್ಮ ಪೈಕಿ ಅತ್ಯುತ್ತಮರು ತಮ್ಮ ಪತ್ನಿಯರೊಂದಿಗೆ ಅತ್ಯುತ್ತಮವಾಗಿ ವರ್ತಿಸುವವರಾಗಿದ್ದಾರೆ. ನಾನು ನನ್ನ ಪತ್ನಿಯರೊಂದಿಗೆ ಅತ್ಯುತ್ತಮ ರೀತಿಯಲ್ಲಿ ವರ್ತಿಸುವವನಾಗಿದ್ದೇನೆ.[3]

ಪತ್ನಿಯರ ಅಗತ್ಯ ಮತ್ತು ಇಷ್ಟವನ್ನು ಅರಿತುಕೊಂಡು ಅವರ ಮನಸ್ಸಿಗೆ ಸಂತೋಷವನ್ನುಂಟು ಮಾಡುವ ವಾತಾವರಣವನ್ನು ಸೃಷ್ಟಿಸಲು ಪ್ರವಾದಿ(ಸ) ಪ್ರಜ್ಞಾಪೂರ್ವಕ ಪ್ರಯತ್ನಿಸುತ್ತಿದ್ದರು. ಪತ್ನಿಯರ ಜೊತೆಗಿರುವಾಗ ಅವರ ಮಾನಸಿಕತೆಗೆ ಸರಿಸಮಾನವಾಗಿ ವ್ಯವಹರಿಸುವುದಕ್ಕೆ ಗಮನ ನೀಡುತ್ತಿದ್ದರು. ಹಾಸ್ಯ, ವಿನೋದ, ನಕ್ಕು ನಲಿದು ಸಂತೋಷ ಪಡಲು ಸಮಯ ಮೀಸಲಿಡುತ್ತಿದ್ದರು. ಅನಸ್(ರ) ಹೇಳುತ್ತಾರೆ:

كَانَ رَسُولُ اللهِ ﷺ أَفْكَهُ النَّاسِ مَعَ نِسَائِهِ

ಪ್ರವಾದಿ(ಸ) ಜನರ ಪೈಕಿ ಪತ್ನಿಯರೊಂದಿಗೆ ಅತ್ಯಧಿಕ ಹಾಸ್ಯ ವಿನೋದಗಳಲ್ಲಿ ತಲ್ಲೀನರಾಗಿರುತ್ತಿದ್ದ ವ್ಯಕ್ತಿಯಾಗಿದ್ದರು.[4]

ಆಯಿಶಾ(ರ)ರೊಂದಿಗೆ ಹಲವು ಬಾರಿ ಓಟದ ಸ್ಪರ್ಧೆಯನ್ನು ಏರ್ಪಡಿಸಿದ್ದರು. ಒಮ್ಮೆ ಪ್ರವಾದಿ(ಸ) ಜಯಿಸಿದರೆ, ಇನ್ನು ಕೆಲವೊಮ್ಮೆ ಆಯಿಶಾ(ರ) ಜಯಿಸುತ್ತಿದ್ದರು. ಒಮ್ಮೆ ಇತಿಯೋಪಿಯದಿಂದ ಬಂದ ಕೆಲವರು ಮದೀನದ ಮಸೀದಿಯಲ್ಲಿ ಕವಾಯತುಗಳನ್ನು ನಡೆಸುತ್ತಿದ್ದಾಗ ಅದನ್ನು ನೋಡಲು ಪ್ರವಾದಿ(ಸ) ಆಯಿಶಾ(ರ)ರನ್ನು ಕರೆದುಕೊಂಡು ಹೋಗಿದ್ದರು. ತನ್ನ ಗಲ್ಲವನ್ನು ಪ್ರವಾದಿಯವರ(ಸ) ಹೆಗಲ ಮೇಲಿಟ್ಟು ಆಯಾಸವಾಗುವ ವರೆಗೆ ಆ ಕವಾಯತನ್ನು ವೀಕ್ಷಿಸಿದ ಬಗ್ಗೆ ಆಯಿಶಾ(ರ) ಆ ಬಳಿಕ ಹೇಳುತ್ತಿದ್ದರು. ಈ ಘಟನೆಯನ್ನು ನೆನಪಿಸುತ್ತಾ ಅವರು ಹೇಳುತ್ತಾರೆ: فَاقْدِرُوا قَدْرَ الْجَارِيَةِ الْحَدِيثَةِ السِّنِّ، الْحَرِيصَةِ عَلَى اللَّهْوِ 'ಆದುದರಿಂದ ಸಣ್ಣ ಪ್ರಾಯದ ವಿನೋದವನ್ನು ಪ್ರೀತಿಸುವ ಸ್ತ್ರೀಯರಿಗೆ ಅರ್ಹವಾದುದನ್ನು ನೀಡಬೇಕು.'[5]

ಆಟ-ವಿನೋದಗಳಲ್ಲಿ ಪಾಲ್ಗೊಳ್ಳಲು ಮತ್ತು ಅದನ್ನು ಆಸ್ವದಿಸಲು ಪತ್ನಿಯರಿಗೆ ಅನುಮತಿಯನ್ನು ನೀಡಬೇಕು ಎಂಬುದು ದಾಂಪತ್ಯದಲ್ಲಿ ಭದ್ರತೆ ಮತ್ತು ಸೌಹಾರ್ದತೆ ನೆಲೆನಿಲ್ಲಲು ಸಹಾಯಕವಾಗುತ್ತದೆ. ಪ್ರವಾದಿ(ಸ) ಹೇಳಿರುವರು:

يَنْبَغِي لِلرَّجُلِ أَنْ يَكُونَ فِي أَهْلِهِ مِثْلَ الصَّبِيِّ، فَإِذَا الْتَمَسُوا مَا عِنْدَهُ وُجِدَ رَجُلاً

'ಪುರುಷನು ತನ್ನ ಪತ್ನಿ-ಮಕ್ಕಳೊಂದಿಗಿರುವಾಗ ಒಂದು ಮಗುವಿನಂತೆ

ವರ್ತಿಸಲಿ. ಆದರೆ ಅವನ ಪೌರುಷವೇನೆಂದು ಅವರು ನೋಡಬಯಸಿದಾಗ ಅವನೊಬ್ಬ ಪುರುಷನಂತೆ ವರ್ತಿಸಲಿ.'[6]

ತನ್ನನ್ನು ವಿಮರ್ಶಿಸಲು ಮತ್ತು ಟೀಕಿಸಲು ಕೂಡ ಪ್ರವಾದಿಯವರು(ಸ) ತಮ್ಮ ಪತ್ನಿಯರಿಗೆ ಸ್ವಾತಂತ್ರ್ಯವನ್ನು ನೀಡಿದ್ದರು. ಏಕಪಕ್ಷೀಯವಾಗಿ ಆದೇಶಗಳನ್ನು ಹೊರಡಿಸುವ ಮತ್ತು ಅದನ್ನು ಅನುಸರಿಸಬೇಕೆಂದು ಪತ್ನಿಯರನ್ನು ಒತ್ತಾಯಪಡಿಸುವ ಕಠಿಣ ಸ್ವಭಾವದ ವ್ಯಕ್ತಿಯಾಗಿರಲಿಲ್ಲ. ಯಾವುದಾದರು ಟೀಕೆಯು ಬಂದರೆ ಅದನ್ನು ಗೌರವದಿಂದ ಸ್ವೀಕರಿಸುತ್ತಿದ್ದರು.

ಒಮ್ಮೆ ಪ್ರವಾದಿ(ಸ) ಮತ್ತು ಆಯಿಶಾ(ರ)ರ ಮಧ್ಯೆ ಸಣ್ಣ ಜಗಳವಾಯಿತು. ಕೋಪದ ಆವೇಶದಲ್ಲಿ ಆಯಿಶಾ(ರ): وَأَنْتَ الَّذِي تَزْعُمُ أَنَّكَ نَبِيٌّ؟ 'ಅಲ್ಲಾಹನ ಪ್ರವಾದಿಯೆಂದು ವಾದಿಸುವ ವ್ಯಕ್ತಿ ನೀವೇ?' ಎಂದು ಪ್ರಶ್ನಿಸಿದರು. ಇದನ್ನು ಕೇಳಿದ ಪ್ರವಾದಿಯವರು(ಸ) ಸಹನೆ ಮತ್ತು ವಿವೇಕದಿಂದ ಮುಗುಳ್ನಕ್ಕರು.[7]

ಪ್ರವಾದಿ(ಸ) ಹೇಳುತ್ತಿದ್ದರು: إِنِّي لَأَعْرِفُ غَضَبَكِ وَرِضَاكِ 'ಆಯಿಶಾ! ನೀನು ಯಾವಾಗ ನನ್ನನ್ನು ಇಷ್ಟಪಡುತ್ತೀ ಮತ್ತು ಯಾವಾಗ ಕೋಪಿಸಿಕೊಂಡಿದ್ದೀ ಎಂಬುದು ನನಗೆ ತಿಳಿಯುತ್ತದೆ.' ಅವರು ಪ್ರಶ್ನಿಸಿದರು: وَكَيْفَ تَعْرِفُ ذَاكَ يَا رَسُولَ اللهِ؟ 'ಯಾ ರಸೂಲಲ್ಲಾಹ್(ಸ)! ಅದು ಹೇಗೆ?' ಆಗ ಪ್ರವಾದಿ(ಸ) ಹೇಳಿದರು:

إِنَّكِ إِذَا كُنْتِ رَاضِيَةً قُلْتِ: بَلَى وَرَبِّ مُحَمَّدٍ! وَإِذَا كُنْتِ سَاخِطَةً قُلْتِ: لَا وَرَبِّ إِبْرَاهِيمَ

'ನನ್ನೊಂದಿಗೆ ಪ್ರೀತಿಯಿದ್ದಾಗ ಮುಹಮ್ಮದ್(ಸ)ರ ಪ್ರಭುವಿನಾಣೆ ಸತ್ಯ ಎಂದು ಹೇಳುತ್ತೀ. ನನ್ನೊಂದಿಗೆ ಕೋಪಿಸಿಕೊಂಡಿದ್ದರೆ, ಇಬ್ರಾಹೀಮರ(ಅ) ಪ್ರಭುವಿನಾಣೆ ಸತ್ಯ ಎಂದು ನೀನು ಹೇಳುತ್ತೀ.' ಆಯಿಶಾ(ರ) ನಕ್ಕು ಹೇಳಿದರು: أَجَلْ، لَسْتُ أُهَاجِرُ إِلَّا اسْمَكَ 'ನಾನು ಜಗಳಾಡಿದ್ದು ನಿಮ್ಮ ಹೆಸರಿನೊಂದಿಗೆ ಅಲ್ಲವೇ? ನಿಮ್ಮೊಂದಿಗೆ ನಾನೆಂದೂ ಜಗಳವಾಡಿಲ್ಲ.'[8]

ಪತಿಗೆ ಪತ್ನಿಯೊಂದಿಗೆ ಇರುವಂತೆ ಪತ್ನಿಗೂ ಪತಿಯೊಂದಿಗೆ ಹಕ್ಕು ಮತ್ತು ಕರ್ತವ್ಯಗಳಿವೆ. ಪ್ರವಾದಿ(ಸ) ಹೇಳಿರುವರು:

إِذَا صَلَّتِ الْمَرْأَةُ خَمْسَهَا، وَصَامَتْ شَهْرَهَا، وَحَفِظَتْ فَرْجَهَا، وَأَطَاعَتْ زَوْجَهَا، قِيلَ لَهَا: اُدْخُلِي الْجَنَّةَ مِنْ أَيِّ أَبْوَابِ الْجَنَّةِ شِئْتِ

ಐದು ಹೊತ್ತಿನ ನಮಾಝನ್ನು ನಿರ್ವಹಿಸುವ, ರಮಝಾನ್ ತಿಂಗಳ ಉಪವಾಸ ವ್ರತವನ್ನು ಆಚರಿಸುವ, ತನ್ನ ಚಾರಿತ್ರ್ಯವನ್ನು ಕಾಪಾಡುವ ಜೊತೆಗೆ ಪತಿಯ ಅನುಸರಣೆಯನ್ನು ಮಾಡುವ ಸ್ತ್ರೀಯರೊಂದಿಗೆ ಅಂತ್ಯ ದಿನದಂದು, 'ನಿನಗೆ ಇಷ್ಟ ವಿರುವ ಬಾಗಿಲಿನ ಮೂಲಕ ಸ್ವರ್ಗವನ್ನು ಪ್ರವೇಶಿಸು ಎಂದು ಹೇಳಲಾಗುವುದು.''

ಕ್ಷುಲ್ಲಕವೆಂದು ಕಾಣುವ ಕೆಲಸಗಳು ಕೂಡ ದಾಂಪತ್ಯ ಜೀವನದಲ್ಲಿ ಬಹಳ ಪ್ರಮುಖವಾಗಿರುತ್ತದೆ. ಆರ್ದ್ರತೆಯಿಂದ ಕೂಡಿದ ಒಂದು ನೋಟ, ಸ್ನೇಹಪೂರ್ವಕ ಸ್ಪರ್ಶ, ಸ್ವಲ್ಪ ಉತ್ತಮವಾದ ಮಾತುಗಳು ಅನೇಕ ಬಾರಿ ದಾಂಪತ್ಯ ಜೀವನವನ್ನು ಸಂಪೂರ್ಣ ಆನಂದಭರಿತ ಮತ್ತು ಸಂತೋಷದಾಯಕವಾಗಿಸಬಲ್ಲುದು. ಒಂದು ಮಾತಿನ, ಒಂದು ನೋಟದ, ಒಂದು ಸ್ಪರ್ಶದ ಕೊರತೆಯಿಂದ ಅನೇಕ ಸಮಸ್ಯೆಗಳು ಉಂಟಾಗಬಹುದು. ಸಂಗಾತಿಯೆಡೆಗೆ ಹರಿಸುವ ಒಂದು ಪ್ರಣಯದ ಮಂದಹಾಸವು ಅನೇಕ ಸಂದರ್ಭಗಳಲ್ಲಿ ಸಮಸ್ಯೆಗಳ ಸರಮಾಲೆಯನ್ನೇ ಇಲ್ಲವಾಗಿಸಬಹುದು. ಆದು ದರಿಂದ ಪತಿ-ಪತ್ನಿಯರು ಪರಸ್ಪರರನ್ನು ಅರಿತ ಒಂದು ನೋಟವೂ ಕೂಡ ದೇವನ ಕಾರುಣ್ಯಕ್ಕೆ ಕಾರಣವಾಗಬಲ್ಲುದು ಎಂಬುದಾಗಿ ಪ್ರವಾದಿ(ಸ) ಹೇಳಿರುವರು. ಅದರ ಜೊತೆಗೆ ಪ್ರೀತಿಯನ್ನು ಪ್ರಕಟಿಸಬೇಕು. ಅದು ಮನಸ್ಸಿನಲ್ಲಿದ್ದರೆ ಸಾಲದು ಎಂಬ ಒಂದು ಸಂದೇಶವು ಕೂಡ ಈ ಹದೀಸ್‌ನಲ್ಲಿದೆ.

---

1. ಇಬ್ನುಮಾಜ: 1851, ತಿರ್ಮಿದಿ: 1163.
2. ಅಬೂದಾವೂದ್: 2142, ಇಬ್ನುಮಾಜ: 1850, ಹಾಕಿಮ್: 2/187.
3. ತಿರ್ಮಿದಿ: 3895, ಇಬ್ನುಮಾಜ: 1977, ಹಾಕಿಮ್: 4/173/
4. ಬಸ್ಸಾರ್.
5. ಬುಖಾರಿ; 5236, ಮುಸ್ಲಿಮ್; 2061, ನಸಾಈ: 1594, ಅಹ್ಮದ್: 6/86
6. ಇಹ್ಯಾಉ ಉಲೂಮುದ್ದೀನ್, ಭಾಗ; 2, ಪುಟ: 44.
7. ಅಬೂ ಯಅ್‌ಲಾ - ಮುಸ್ನದ್, ಅಬೂ ಶೈಖ್ - ಕಿತಾಬುಲ್ ಅಂಫಾಲ್)
8. ಬುಖಾರಿ, ಮುಸ್ಲಿಮ್.
9. ಅಹ್ಮದ್: 1/191, ತಬ್ರಾನಿ: ಔಸತ್.

31. ಕುಟುಂಬ ಜೀವನ ಸಂತಸಭರಿತವಾಗಿಸಲು...

عَنْ عَائِشَةَ رَضِيَ اللّٰهُ عَنْهَا قَالَتْ: قَالَ رَسُولُ اللّٰهِ ﷺ: إِنَّ أَكْمَلَ الْمُؤْمِنِينَ إِيْمَانًا أَحْسَنُهُمْ خُلُقًا وَأَلْطَفُهُمْ بِأَهْلِهِ

ಆಯಿಶಾ(ರ) ವರದಿ ಮಾಡಿರುತ್ತಾರೆ. ಪ್ರವಾದಿ(ಸ) ಹೇಳಿರುವರು: ಸತ್ಯ ವಿಶ್ವಾಸಿಗಳ ಪೈಕಿ ಅತಿಹೆಚ್ಚು ವಿಶ್ವಾಸ ಹೊಂದಿದವರು ಅವರ ಪೈಕಿ ಅತಿ ಹೆಚ್ಚು ಸದ್ಗುಣ ಸಂಪನ್ನರಾಗಿರುವರು ಮತ್ತು ಕುಟುಂಬದೊಂದಿಗೆ ಅತ್ಯುತ್ತಮ ವಾಗಿ ವರ್ತಿಸುವವರಾಗಿದ್ದಾರೆ.*

ವಿಶ್ವಾಸವು ಮನುಷ್ಯನ ಜೀವನದಲ್ಲಿ ಉಂಟು ಮಾಡಬೇಕಾದ ಶ್ರೇಷ್ಠ ಗುಣಗಳ ಬಗ್ಗೆ ಈ ಪ್ರವಾದಿವಚನದಲ್ಲಿದೆ. ಈಮಾನ್ ಎಂದರೆ ಕೆಲವರು ಭಾವಿಸಿರುವಂತೆ ಕೇವಲ ಕೆಲವು ಅಭೌತಿಕವಾದ ವಿಷಯಗಳನ್ನು ನಂಬುವುದರ ಹೆಸರಲ್ಲ. ಕೆಲವು ವಿಷಯಗಳ ಮೇಲೆ ವಿಶ್ವಾಸವಿರಿಸುವುದು ಕ್ಷುಲ್ಲಕ ವಿಷಯವಲ್ಲ. ಬದಲಾಗಿ ಈಮಾನ್ ಎಂಬುದು ಸತ್ಯವಿಶ್ವಾಸಿಯ ಸ್ವಭಾವ, ಗುಣಗಳು, ವರ್ತನೆಗಳು, ವ್ಯವಹಾರಗಳು, ಜೊತೆಗೆ ಸಂಪೂರ್ಣ ಜೀವನವನ್ನೇ ಬದಲಾಯಿಸುವ ವಿಷಯವಾಗಿದೆ. ಬೀಜದ ಗುಣಗಳು ಮರ, ರೆಂಬೆ, ಕೊಂಬೆ, ಹೂ, ಹಣ್ಣುಗಳಲ್ಲಿ ಕಾಣಿಸುವ ಹಾಗೆ ವಿಶ್ವಾಸದ ಗುಣಗಳು ಜೀವನದ ಸಮಗ್ರ ವ್ಯವಹಾರಗಳಲ್ಲಿ ಪ್ರಕಟಗೊಳ್ಳುತ್ತವೆ. ಹೀಗಾದಾಗ ಮಾತ್ರ ಈಮಾನ್ ಅರ್ಥಪೂರ್ಣ ಮತ್ತು ಮಹತ್ವವುಳ್ಳದ್ದಾಗುತ್ತದೆ.

ಸದ್ಗುಣ ಸಂಪನ್ನತೆ ಎಂಬುದು ವಿಶ್ವಾಸವು ಪ್ರಕಟಗೊಳ್ಳುವ ಗುಣಗಳ ಪೈಕಿ

* ಇಮಾಮ್ ತಿರ್ಮಿದಿ: 2612, ಹಾಕಿಮ್: 1/53, ಅಹ್ಮದ್: 6/47 ಮುಂತಾದವರು ಉಲ್ಲೇಖಿಸಿರುವ ಈ ಪ್ರವಾದಿವಚನದ ವರದಿಯ ಪರಂಪರೆಯು ಇಮಾಮ್ ಬುಖಾರಿಯವರ ಮತ್ತು ಇಮಾಮ್ ಮುಸ್ಲಿಮ್‌ರವರ ಹದೀಸ್ ಸ್ವೀಕಾರಾರ್ಹತೆಗೆ ಇರುವ ಮಾನದಂಡಗಳ ಪ್ರಕಾರ ಪ್ರಬಲವಾಗಿದೆ ಎಂದು ಹಾಕಿಮ್ ಅಭಿಪ್ರಾಯ ಪಡುತ್ತಾರೆ.

ಒಂದಾಗಿದೆ. ಜನರನ್ನು ಸದಾಚಾರ ಪ್ರಜ್ಞೆಯುಳ್ಳವರಾಗಿ ಮಾರ್ಪಡಿಸುವುದು ಧರ್ಮದ ಮೂಲ ಉದ್ದೇಶವಾಗಿದೆ. ಇದೇ ಗುರಿಯನ್ನು ಉದ್ದೇಶವಾಗಿಟ್ಟುಕೊಂಡು ಆರಾಧನಾ ಕರ್ಮಗಳನ್ನು ಮತ್ತು ವಿಶ್ವಾಸ ಅನುಷ್ಠಾನಗಳನ್ನು ಕಡ್ಡಾಯಗೊಳಿಸಲಾಗಿದೆ. إِنَّمَا بُعِثْتُ لِأُتَمِّمَ مَكَارِمَ الأَخْلَاقِ 'ಸಚ್ಚಾರಿತ್ರ್ಯದ ಪೂರ್ತೀಕರಣಕ್ಕಾಗಿ ನಾನು ನಿಯೋಗಿಸಲ್ಪಟ್ಟಿದ್ದೇನೆ' ಎಂದು ಪ್ರವಾದಿ(ಸ) ತಮ್ಮನ್ನು ಸ್ವತಃ ಪರಿಚಯಿಸಿಕೊಂಡಿದ್ದಾರೆ.[1]

ಸದ್ಗುಣ ಸಂಪನ್ನತೆಯ ಮಹತ್ವವನ್ನು ಚಿತ್ರಿಸುವ ಅನೇಕ ಪ್ರವಾದಿವಚನಗಳಿವೆ. ಇಮಾಮ್ ತಿರ್ಮಿದಿ ವರದಿ ಮಾಡಿರುತ್ತಾರೆ:

مَا مِنْ شَيْءٍ يُوْضَعُ فِي الْمِيْزَانِ أَثْقَلُ مِنْ حُسْنِ الْخُلُقِ، وَإِنَّ صَاحِبَ حُسْنِ الْخُلُقِ لَيَبْلُغُ بِهِ دَرَجَةَ صَاحِبِ الصَّوْمِ وَالصَّلَاةِ

'ಅಂತ್ಯ ದಿನದಂದು ಸತ್ಯವಿಶ್ವಾಸಿಯ ತಕ್ಕಡಿಯಲ್ಲಿ ಸದ್ಗುಣದಷ್ಟು ಭಾರವುಳ್ಳ ಯಾವುದೇ ವಿಷಯವಿರಲಾರದು. ಹೀಗೆ ಸದ್ಗುಣಸಂಪನ್ನ ವ್ಯಕ್ತಿ ತನ್ನ ಸ್ವಭಾವದ ಕಾರಣದಿಂದ ಉಪವಾಸಿಗನ ಮತ್ತು ನಮಾಝಿಯ ಪದವಿಯನ್ನು ತಲುಪುತ್ತಾನೆ.'[2]

ಅಬ್ದುಲ್ಲಾ ಬಿನ್ ಅಮ್ರ್(ರ) ಹೇಳುತ್ತಾರೆ:

أَنَّهُ سَمِعَ رَسُولَ اللهِ ﷺ يَقُولُ: أَلَا أُخْبِرُكُمْ بِأَحَبِّكُمْ إِلَيَّ، وَأَقْرَبِكُمْ مِنِّي مَجْلِسًا يَوْمَ الْقِيَامَةِ؟ فَأَعَادَهَا مَرَّتَيْنِ أَوْ ثَلَاثًا، قَالُوا: نَعَمْ يَا رَسُولَ اللهِ، قَالَ: أَحْسَنُكُمْ خُلُقًا

ಒಮ್ಮೆ ಪ್ರವಾದಿ(ಸ) ಪ್ರಶ್ನಿಸಿದರು: ನಿಮ್ಮ ಪೈಕಿ ಅಂತ್ಯದಿನದಂದು ನನಗೆ ಅತ್ಯಧಿಕ ಪ್ರೀತಿಪಾತ್ರರು ಮತ್ತು ನನ್ನ ಸಾಮಿಪ್ಯ ಗಳಿಸುವವರು ಯಾರೆಂದು ನಾನು ನಿಮಗೆ ಹೇಳಿಕೊಡಲೇ? ಎರಡು ಮೂರು ಬಾರಿ ಈ ಪ್ರಶ್ನೆಯನ್ನು ಪುನರಾವರ್ತಿಸಿದರು. ಅನುಯಾಯಿಗಳು ಹೇಳಿದರು, 'ಅಲ್ಲಾಹನ ಪ್ರವಾದಿಗಳೇ, ಹೇಳಿರಿ.' ಪ್ರವಾದಿ(ಸ) ಹೇಳಿದರು, 'ನಿಮ್ಮ ಪೈಕಿ ಅತ್ಯುತ್ತಮ ಗುಣ ಸ್ವಭಾವವುಳ್ಳವರು ಎಲ್ಲರನ್ನೂ ಮೀರಿ ನಿಲ್ಲುವರು.'[3]

إِنَّ الْعَبْدَ لَيَبْلُغُ بِحُسْنِ خُلُقِهِ عَظِيْمَ دَرَجَاتِ الآخِرَةِ، وَشَرَفَ الْمَنَازِلِ، وَإِنَّهُ لَضَعِيْفُ الْعِبَادَةِ، وَإِنَّهُ لَيَبْلُغُ بِسُوْءِ خُلُقِهِ أَسْفَلَ دَرَجَةٍ فِي جَهَنَّمَ

ಅನಸ್(ರ) ವರದಿ ಮಾಡಿರುತ್ತಾರೆ: ಆರಾಧನೆಗಳ ವಿಷಯದಲ್ಲಿ ಅಲ್ಪ ಸ್ವಲ್ಪ ಕುಂದು ಕೊರತೆಗಳು ಸಂಭವಿಸುವವರಾಗಿದ್ದರೂ ದೇವನ ಸದ್ಗುಣಸಂಪನ್ನನಾದ

ದಾಸನು ಅಂತ್ಯ ದಿನದಂದು ಉನ್ನತ ಸ್ಥಾನಮಾನ ಗಿಟ್ಟಿಸಿಕೊಳ್ಳುವನು. ಆದರೆ ಕೆಟ್ಟ ಸ್ವಭಾವದ ಕಾರಣದಿಂದ ಕೆಲವರು ನರಕದ ಅಡಿಭಾಗಕ್ಕೆ ಎಸೆಯಲ್ಪಡುವರು.[4]

ಈಮಾನ್ ಸತ್ಯವಿಶ್ವಾಸಿಯಲ್ಲಿ ಉಂಟು ಮಾಡುವ ಸ್ವಭಾವ ಸಂಸ್ಕರಣೆಯ ಪ್ರಯೋಜನ ಪ್ರಪ್ರಥಮವಾಗಿ ಲಭಿಸಬೇಕಾದುದು ಅವನ ಕುಟುಂಬಕ್ಕಾಗಿರುತ್ತದೆ. ಆದ್ದರಿಂದಲೇ ಸದ್ಗುಣದ ಬಗ್ಗೆ ಹೇಳಿದ ಕೂಡಲೇ ಕುಟುಂಬದೊಂದಿಗೆ ಅತ್ಯುತ್ತಮ ರೀತಿಯಲ್ಲಿ, ಪ್ರೀತಿ-ವಾತ್ಸಲ್ಯದೊಂದಿಗೆ ವರ್ತಿಸಬೇಕೆಂದು ಪ್ರವಾದಿವರ್ಯರು(ಸ) ನೆನಪಿಸಿರುವರು.

ಹೊರ ಜಗತ್ತಿನಲ್ಲಿ ಆದರ್ಶ ಪುರುಷರು, ಕ್ರಾಂತಿಕಾರಿಗಳು, ಬದಲಾವಣೆ ತಂದ ವರು ಎನಿಸಿಕೊಂಡ ಕೆಲವರಿದ್ದಾರೆ. ಆದರೆ ಅವರು ತಮ್ಮ ಪತ್ನಿಯರು, ಮಕ್ಕಳು ಮತ್ತು ಕುಟುಂಬದವರೊಂದಿಗೆ ಅತಿ ನಿಕೃಷ್ಟವಾಗಿ ವ್ಯವಹರಿಸುತ್ತಾರೆ. ಪ್ರಸ್ತುತ ಪ್ರವಾದಿವಚನವು ಜೀವನದ ಈ ವೈರುಧ್ಯಗಳನ್ನು ವಿಮರ್ಶಿಸುತ್ತಾ ನೀಡಿರುವ ಕಠಿಣ ಎಚ್ಚರಿಕೆಯಂತಿದೆ.

ಪ್ರವಾದಿ ಮುಹಮ್ಮದ್(ಸ)ರ ಜೀವನವು ಕುಟುಂಬದವರೊಂದಿಗೆ ಅತ್ಯುತ್ತಮ ವಾಗಿ ವ್ಯವಹರಿಸಿರುವುದಕ್ಕೆ ಉತ್ತಮ ಉದಾಹರಣೆಯಾಗಿದೆ. ತನ್ನ ಕುಟುಂಬದವರ ಎಲ್ಲ ಹಕ್ಕುಗಳನ್ನೂ ಅವರು ಪೂರ್ತಿಗೊಳಿಸಿಕೊಡುತ್ತಾರೆ. ಪ್ರವಾದಿವರ್ಯರು(ಸ) ತಮ್ಮ ಪತ್ನಿಯರೊಂದಿಗೆ ಹಾಸ್ಯ-ವಿನೋದಗಳಲ್ಲಿ, ತಮಾಷೆಯ ಮಾತುಕತೆಗಳಲ್ಲಿ ಒಟ್ಟು ಸೇರಿ ನಗುವವರಾಗಿದ್ದರು. ಪ್ರವಾದಿ(ಸ) ಹೀಗೆ ಹೇಳುತ್ತಿದ್ದರು:

أَكْمَلُ الْمُؤْمِنِينَ إِيمَانًا أَحْسَنُهُمْ خُلُقًا، وَخِيَارُكُمْ خِيَارُكُمْ لِنِسَائِهِمْ

ಸತ್ಯವಿಶ್ವಾಸಿಗಳ ಪೈಕಿ ಅತಿ ಹೆಚ್ಚು ಈಮಾನ್ ಇರುವವರು ಅವರಲ್ಲಿ ಅತಿ ಹೆಚ್ಚು ಸದ್ಗುಣ ಸಂಪನ್ನರಾಗಿರುವರು. ನಿಮ್ಮ ಪೈಕಿ ಅತ್ಯುತ್ತಮರು ತಮ್ಮ ಪತ್ನಿಯರ ಜೊತೆ ಅತ್ಯುತ್ತಮ ರೀತಿಯಲ್ಲಿ ವರ್ತಿಸುವವರಾಗಿರುವರು.[5]

ಪತ್ನಿಯರನ್ನು ಹೊಡೆಯುವುದು, ಪೀಡಿಸುವುದು, ಉಪದ್ರವಿಸುವುದು ಮುಂತಾದವುಗಳನ್ನು ಮಾಡುವವರು ಸಂಸ್ಕಾರವಿಲ್ಲದವರು ಎಂಬುದಾಗಿ ಪ್ರವಾದಿ ಯವರು(ಸ) ಹೇಳಿರುವರು. ಅವರು(ಸ) ಈ ರೀತಿ ಹೇಳಿರುವರು:

عَلَامَ يَجْلِدُ أَحَدُكُمُ امْرَأَتَهُ جَلْدَ الْعَبْدِ؟! وَلَعَلَّهُ يُضَاجِعُهَا مِنْ آخِرِ يَوْمِهِ؟

ನಿಮ್ಮ ಪೈಕಿ ಒಬ್ಬರು ಪತ್ನಿಯನ್ನು ಗುಲಾಮರಿಗೆ ಹೊಡೆಯುವಂತೆ ಹೊಡೆದು,

ಅಂದು ರಾತ್ರಿ ಆಕೆಯೊಂದಿಗೆ ಸಹಶಯನ ಮಾಡುವಿರೋ? ಯಾವ ರೀತಿಯ ವೈರುಧ್ಯವಿದು?'

ಪತ್ನಿಯರ ಜೊತೆ ಪ್ರವಾದಿ ಮುಹಮ್ಮದ್(ಸ)ರ ಕರುಣೆ ತುಂಬಿದ ವರ್ತನೆಯ ಕುರಿತು ಇಮಾಮ್ ಇಬ್ನು ಕಯ್ಯಿಮ್‌ರವರು 'ಅತ್ಯುತ್ಕೃಷ್ಟವಾದ ಸಹವಾಸ, ಅತಿ ಉದಾರವಾದ ವರ್ತನೆ' ಎಂದು ಬಣ್ಣಿಸಿರುವರು. ಆಯಿಶಾ(ರ)ರೊಂದಿಗೆ ಆಟವಾಡಲಿಕ್ಕಾಗಿ ಅವರು ಅನ್ಸಾರಿ ಹೆಣ್ಣುಮಕ್ಕಳನ್ನು ಕಳುಹಿಸಿ ಕೊಡುತ್ತಿದ್ದರು. ಆಯಿಶಾ(ರ) ಏನನ್ನಾದರೂ ಬಯಸಿದರೆ, ಅದು ಅಪ್ರಿಯವಾದುದಲ್ಲವೆಂದಾದರೆ ಪೂರ್ತಿಗೊಳಿಸಿ ಕೊಡುತ್ತಿದ್ದರು. ಆಯಿಶಾ(ರ) ಏನಾದರೂ ಕುಡಿಯುತ್ತಿದ್ದರೆ, ಅದೇ ಪಾತ್ರೆಯನ್ನು ಕೇಳಿ ಪಡೆದು ಅವರು ತುಟಿ ತಾಗಿಸಿದ್ದ ಸ್ಥಳದಿಂದಲೇ ಪ್ರವಾದಿ(ಸ) ತುಟಿಯಿರಿಸಿ ಕುಡಿಯುತ್ತಿದ್ದರು. ಆಯಿಶಾ(ರ) ಮಾಂಸದ ತುಂಡನ್ನು ಕಚ್ಚಿದ್ದರೆ, ಅದನ್ನು ಕೇಳಿ ಪಡೆದು ಅವರು ಕಚ್ಚಿದ್ದ ಸ್ಥಳದಿಂದಲೇ ಕಚ್ಚಿ ತಿನ್ನುತ್ತಿದ್ದರು. ಆಯಿಶಾ(ರ)ರ ಮಡಿಲಲ್ಲಿ ತಲೆ ಇಟ್ಟು ಮಲಗುತ್ತಿದ್ದರು. ಅವರ ಬಳಿ ಕುಳಿತು ಕುರ್‌ಆನ್ ಪಠಿಸುತ್ತಿದ್ದರು. ಅವರು ಋತುಮತಿಯಾಗಿರುವ ದಿನಗಳಲ್ಲಿ ಬಟ್ಟೆಯನ್ನು ಗಟ್ಟಿಯಾಗಿ ಬಿಗಿದು ಕಟ್ಟುವಂತೆ ಆದೇಶಿಸಿ ಅವರ ಜೊತೆ ಒಂದೇ ಹಾಸಿಗೆಯಲ್ಲಿ ಮಲಗುತ್ತಿದ್ದರು. ಉಪವಾಸದಿಂದಿದ್ದರೂ ಆಯಿಶಾ(ರ)ರನ್ನು ಚುಂಬಿಸುತ್ತಿದ್ದರು. 'ನಿಮ್ಮ ಪೈಕಿ ಅತ್ಯುತ್ತಮನು ತನ್ನ ಪತ್ನಿಯೊಂದಿಗೆ ಉದಾರತೆಯಿಂದ ವರ್ತಿಸುವವನಾಗಿದ್ದಾನೆ. ನಾನು ನನ್ನ ಪತ್ನಿಯೊಂದಿಗೆ ಅತ್ಯುತ್ತಮ ರೀತಿಯಲ್ಲಿ ವರ್ತಿಸುತ್ತೇನೆ' ಎಂದು ಪ್ರವಾದಿವರ್ಯರು(ಸ) ಹೇಳುತ್ತಿದ್ದರು.

ಅಸರ್ ನಮಾಝ್‌ನ ಬಳಿಕ ಅವರು ಎಲ್ಲ ಪತ್ನಿಯರನ್ನು ಭೇಟಿಯಾಗುತ್ತಿದ್ದರು. ಅವರ ಬಳಿ ಕುಳಿತು ಕುಶಲ ವಿಚಾರಿಸುತ್ತಿದ್ದರು. ರಾತ್ರಿಯಾದಾಗ ಸರದಿ ಪ್ರಕಾರ ಯಾವ ಮನೆಯಲ್ಲಿ ತಂಗಬೇಕೋ ಅಲ್ಲಿಗೆ ಹೋಗುತ್ತಿದ್ದರು. ಆಯಿಶಾ(ರ) ಹೇಳುತ್ತಾರೆ:

كَانَ لَا يُفَضِّلُ بَعْضَنَا عَلَى بَعْضٍ فِي مُكْثِهِ عِنْدَهُنَّ فِي الْقَسْمِ، وَقَلَّ يَوْمٌ إِلَّا كَانَ يَطُوفُ عَلَيْنَا جَمِيعًا، فَيَدْنُوا مِنْ كُلِّ امْرَأَةٍ مِنْ غَيْرِ مَسِيسٍ حَتَّى يَبْلُغَ الَّتِي هُوَ فِي نَوْبَتِهَا، فَيَبِيتُ عِنْدَهَا

ಪ್ರವಾದಿ(ಸ) ರಾತ್ರಿ ಯಾರ ಮನೆಯಲ್ಲಿ ತಂಗಬೇಕೆನ್ನುವ ವಿಷಯದಲ್ಲಿ ಪತ್ನಿಯರ ಮಧ್ಯೆ ತಾರತಮ್ಯ ಮಾಡುತ್ತಿರಲಿಲ್ಲ. ನಮ್ಮನ್ನು ಸಂದರ್ಶಿಸದ ದಿನಗಳು

ಬಹಳ ಅಪರೂಪ. ಅವರು ಪ್ರತಿಯೊಬ್ಬರ ಬಳಿ ಬರುತ್ತಾರೆ. ಆದರೆ ದೈಹಿಕ ಸಂಬಂಧ ಬೆಳೆಸುವುದಿಲ್ಲ, ಆ ದಿನ ಯಾರ ಮನೆಯಲ್ಲಿ ತಂಗಬೇಕೆಂದು ಸರದಿ ಪ್ರಕಾರ ನಿರ್ಧರಿತವಾಗಿರುತ್ತದೋ ಆ ಮನೆಯಲ್ಲಿ ರಾತ್ರಿ ತಂಗುತ್ತಿದ್ದರು.[7]

ಪ್ರವಾದಿಯವರ(ಸ) ಉತ್ಕೃಷ್ಟ ಸ್ವಭಾವದ ಕುರಿತು ಆಯಿಶಾ(ರ) ಒಮ್ಮೆ ಈ ರೀತಿ ಹೇಳಿರುವರು: مَا ضَرَبَ رَسُولُ اللهِ ﷺ شَيْئًا قَطُّ بِيَدِهِ، وَلاَ امْرَأَةً وَلاَ خَادِمًا 'ಪ್ರವಾದಿ ವರ್ಯರು(ಸ) ಜೀವನದಲ್ಲೆಂದೂ ತಮ್ಮ ಕೈಯಿಂದ ಯಾರನ್ನೂ ಹೊಡೆದಿಲ್ಲ. ಪತ್ನಿಯರನ್ನೋ ಆಳುಗಳನ್ನೋ ಹೊಡೆದಿಲ್ಲ.[8]

ಪ್ರವಾದಿಯವರ(ಸ) ಸೇವಕರಾಗಿದ್ದ ಅನಸ್(ರ) ಹೇಳುತ್ತಾರೆ:

لَقَدْ خَدَمْتُ رَسُولَ اللهِ ﷺ عَشَرَ سِنِيْنَ، فَمَا قَالَ لِي قَطُّ: أُفٍّ، وَلاَ قَالَ لِي لِشَيْئٍ فَعَلْتُهُ: لِمَ فَعَلْتُهُ؟ وَلاَ لِشَيْئٍ لَمْ أَفْعَلْهُ: أَلاَ فَعَلْتَ كَذَا؟

'ಹತ್ತು ವರ್ಷಗಳ ವರೆಗೆ ನಾನು ಪ್ರವಾದಿಯವರ(ಸ) ಪರಿಚಾರಕನಾಗಿದ್ದೆ. ಒಮ್ಮೆಯಾದರೂ ಅವರು ನನ್ನೊಂದಿಗೆ ಛೆ ಎಂದಿಲ್ಲ. ನಾನು ಮಾಡಿದ ಕೆಲಸ ಬಗ್ಗೆ ನೀನೇಕೆ ಹೀಗೆ ಮಾಡಿದೆ? ಎಂದೋ ನಾನು ಮಾಡದೆ ಇದ್ದ ಕೆಲಸದ ಬಗ್ಗೆ ನೀನೇಕೆ ಇದನ್ನು ಮಾಡಲಿಲ್ಲ? ಎಂದೋ ಪ್ರಶ್ನಿಸಿರಲಿಲ್ಲ.'[9]

ಪ್ರವಾದಿಯವರ(ಸ) ಜೀವನವನ್ನು ಅತಿ ಸಮೀಪದಿಂದ ನೋಡಿದ ಅವರ ಸ್ವಭಾವ ಚಾರಿತ್ರ್ಯವನ್ನು ಇತರರಿಗಿಂತ ಹೆಚ್ಚು ಅನುಭವಿಸಿರುವ ಇಬ್ಬರು ವ್ಯಕ್ತಿಗಳು ಅವರ(ಸ) ಬಗ್ಗೆ ನೀಡಿದ ಸಾಕ್ಷ್ಯವಿದು.

---

1. ಅಹ್ಮದ್: 2/381, ಹಾಕಿಮ್: 2/613. 2. ತಿರ್ಮಿದಿ: 2003.
3. ಅಹ್ಮದ್: 2/217-218, ಇಬ್ನು ಹಿಬ್ಬಾನ್: 485.
4. ತಬ್ರಾನಿ, ಹೈತಮಿ – ಮಜ್‌ಮಉಸ್ಸವಾಇದ್: 8/25.
5. ತಿರ್ಮಿದಿ: 1162, ಅಹ್ಮದ್: 2/250, ಅಬೂದಾವೂದ್: 4682, ಇಬ್ನು ಹಿಬ್ಬಾನ್: 4/64, ಹಾಕಿಮ್: 1/3.
6. ಬುಖಾರಿ: 8/542, ಮುಸ್ಲಿಮ್: 2855, ಅಹ್ಮದ್: 4/17.
7. ಇಬ್ನುಮಾಜ: 2135, ಝಾದುಲ್ ಮುಆದ್, ಭಾಗ: 1, ಪುಟ: 78.
8. ಮುಸ್ಲಿಮ್: 2328, ಅಹ್ಮದ್: 6/32, 281.
9. ಮುಸ್ಲಿಮ್: 2330, 2309, ಬುಖಾರಿ: 6/420-421.

32. ನಿಜವಾದ ಶತ್ರುಗಳು

عَنْ ابْنِ مَالِكٍ الْأَشْعَرِي رَضِيَ اللهُ عَنْهُ، قَالَ: قَالَ رَسُولُ اللهِ ﷺ: لَيْسَ عَدُوُّكَ الَّذِي إِنْ قَتَلْتَهُ كَانَ لَكَ نُورًا، وَإِنْ قَتَلَكَ دَخَلْتَ الْجَنَّةَ، وَلَكِنْ أَعْدَى عَدُوٍّ لَكَ الَّذِي خَرَجَ مِنْ صُلْبِكَ، ثُمَّ أَعْدَى عَدُوٍّ لَكَ مَالُكَ الَّذِي مَلَكَتْ يَمِينُكَ

ಇಬ್ನು ಮಾಲಿಕ್ ಅಲ್ ಅಶ್‌ಅರಿ(ರ) ವರದಿ ಮಾಡಿರುತ್ತಾರೆ. ಪ್ರವಾದಿ ವರ್ಯರು(ಸ) ಹೀಗೆಂದಿರುವರು: ನೀನು ವಧಿಸಿದರೆ ನಿನಗೆ ಪ್ರಕಾಶವಾಗಿ ಮಾರ್ಪಡುವ, ನಿನ್ನನ್ನು ವಧಿಸಿದರೆ ನಿನಗೆ ಸ್ವರ್ಗ ಲಭಿಸಲಿಕ್ಕೆ ಕಾರಣ ವಾಗುವವನು ನಿನ್ನ ನಿಜವಾದ ಶತ್ರುವಲ್ಲ. ಬದಲಾಗಿ ನಿನ್ನ ಬೆನ್ನಿನಿಂದ ಹೊರಟ, ನಿನಗೆ ಜನಿಸಿದ ನಿನ್ನ ಸಂತಾನವೇ ನಿನ್ನ ಅತಿ ದೊಡ್ಡ ಶತ್ರು. ಆ ಬಳಿಕ ನಿನ್ನ ಅತಿದೊಡ್ಡ ಶತ್ರು, ನೀನು ಕೈವಶ ಮಾಡಿಕೊಂಡಿರುವ ನಿನ್ನ ಸಂಪತ್ತಾಗಿದೆ.*

ಸಂಪತ್ತು ಮತ್ತು ಸಂತಾನಗಳು ಅಲ್ಲಾಹನು ನೀಡಿದ ಮಹಾ ಅನುಗ್ರಹ ಗಳಾಗಿವೆ. ಅವುಗಳ ಬಗ್ಗೆ ವ್ಯಾಮೋಹವು ಮನುಷ್ಯನ ಪ್ರಕೃತಿಯಲ್ಲಿಯೆ ಅಡಕ ವಾಗಿದೆ. ಸಂಪಾದಿಸ ಬೇಕು ಮತ್ತು ಸಂತಾನಗಳುಂಟಾಗಬೇಕು ಎಂದು ಬಯಸದವ ರಾರೂ ಇರುವುದಿಲ್ಲ. ಹೆಚ್ಚು ಕಡಿಮೆ ಎಲ್ಲರಲ್ಲಿಯೂ ಈ ವಿಕಾರ ವಿಚಾರಗಳು ಇದ್ದೇ ಇರುತ್ತವೆ. ಈ ಐಹಿಕ ಜೀವನವನ್ನು ಸುಂದರ ಮತ್ತು ವರ್ಣಮಯವಾಗಿ ನೆಲೆನಿಲ್ಲಿಸು ವಲ್ಲಿ ಈ ಜನ್ಮಸಿದ್ಧ ಆಕಾಂಕ್ಷೆಗಳಿಗೆ ಬಹಳ ದೊಡ್ಡ ಸ್ಥಾನವಿದೆ. ಅಲ್ಲಾಹನು ಹೇಳುತ್ತಾನೆ,

---

* ತಬ್ರಾನಿ – ಮುಅ್‌ಜಮುಲ್ ಕಬೀರ್: 3445, ಸುಯೂತಿ ಜಾಮಿಉಸ್ಸಗೀರ್: 7608 ಮುಂತಾದವರು ಈ ಹದೀಸ್ ಉದ್ಧರಿಸಿರುವರು. ಇಮಾಮ್ ಸುಯೂತಿ ಈ ಹದೀಸ್ ಹಸನ್ (ಪ್ರಬಲವಾದುದು) ಎಂದು ಸಾಕ್ಷಿ ನುಡಿಯುತ್ತಾರೆ.

'ಈ ಸೊತ್ತು ಮತ್ತು ಈ ಸಂತತಿಗಳು ಕೇವಲ ಲೌಕಿಕ ಜೀವನದ ಕ್ಷಣಿಕ ಸೊಬಗು ಮಾತ್ರ.' (ಅಲ್ ಕಹ್ಫ್: 46) 'ಜನರಿಗೆ ಇಂದ್ರಿಯ- ಅಭಿಲಾಷೆಗಳಾದ ಸ್ತ್ರೀಯರು, ಮಕ್ಕಳು, ಚಿನ್ನ-ಬೆಳ್ಳಿಗಳ ರಾಶಿ, ಆಯ್ದ ಕುದುರೆಗಳು, ಜಾನುವಾರುಗಳು ಮತ್ತು ಕೃಷಿಭೂಮಿ ಇವುಗಳನ್ನು ಅತ್ಯಾಕರ್ಷಕವಾಗಿ ಮಾಡಲಾಗಿದೆ. ಆದರೆ ಇವೆಲ್ಲ ಇಹ ಲೋಕದ ಕೆಲವೇ ದಿನಗಳ ಜೀವನ ಸಾಧನಗಳು. ಯಥಾರ್ಥದಲ್ಲಿ ಅತ್ಯುತ್ತಮ ವಾಸ ಸ್ಥಳವಂತು ಅಲ್ಲಾಹನ ಬಳಿಯಲ್ಲಿದೆ.' (ಆಲಿ ಇಮ್ರಾನ್: 14)

ಸಂಪತ್ತನ್ನು ಸಂಪಾದಿಸುವುದಕ್ಕೆ ಅಥವಾ ಸಂತತಿಗಳಿರುವುದಕ್ಕೆ ಇಸ್ಲಾಮಿನಲ್ಲಿ ವಿರೋಧವಿಲ್ಲ. ಅವುಗಳೇ ಜೀವನದ ಪರಮ ಪ್ರಧಾನ ಲಕ್ಷ್ಯವಾಗಿ ಬಿಡುವುದು ಮತ್ತು ಇತರೆಲ್ಲ ವಿಷಯಗಳನ್ನು ಮರೆತು, ಕೇವಲ ಅವುಗಳಿಗಾಗಿ ಮಾತ್ರ ಜೀವಿಸುವುದನ್ನು ಧರ್ಮವು ವಿರೋಧಿಸುತ್ತದೆ. ಧನ ಸಂಪಾದನೆಯೋ ಜೀವನದ ಪರಮ ಲಕ್ಷ್ಯವಾಗಿ ಮಾರ್ಪಟ್ಟ ವ್ಯಕ್ತಿಯ ಜೀವನದಲ್ಲಿ, ಯಾವ ರೀತಿಯಿಂದಲಾದರೂ ಹಣ ಸಂಪಾದಿಸುವುದಕ್ಕೇ ಅವನ ಪ್ರಯತ್ನ ಮೀಸಲಾಗಿರುತ್ತದೆ. ಆ ವಿಷಯದಲ್ಲಿ ಒಳಿತು-ಕೆಡುಕುಗಳನ್ನು ಅವನು ಪರಿಗಣಿಸುವುದಿಲ್ಲ. ಸಂಪಾದನೆಯ ಮಾರ್ಗವು ಧರ್ಮನಿಷಿದ್ಧವೋ ಧರ್ಮ ಬದ್ಧವೋ ಎಂಬುದನ್ನು ಕೂಡ ನೋಡುವುದಿಲ್ಲ, ಹಣ ಸಂಪಾದಿಸುವುದು ಮಾತ್ರ ಅವನ ಗುರಿಯಾಗಿ ಬಿಡುತ್ತದೆ. ಅದಕ್ಕೆ ತೊಂದರೆಯೊಡ್ಡುವ ಎಲ್ಲವನ್ನೂ ಎದುರಿಸಿ ಹಿಮ್ಮೆಟ್ಟಿಸಲು ಅವನು ಪ್ರಯತ್ನಿಸುವನು. ಸದಾಚಾರ, ನೈತಿಕತೆ ಎಲ್ಲವೂ ಸಂಪೂರ್ಣವಾಗಿ ನಾಶವಾಗಿ ಬಿಡುತ್ತದೆ. ಪ್ರವಾದಿ(ಸ) ಹೇಳಿರುವರು:

تَعِسَ عَبْدُ الدِّينَارِ وَعَبْدُ الدِّرْهَمِ وَعَبْدُ الْخَمِيصَةِ، إِنْ أُعْطِيَ رَضِيَ، وَإِنْ لَمْ يُعْطَ سَخِطَ، تَعِسَ وَانْتَكَسَ، وَإِذَا شِيكَ فَلَا انْتَقَشَ

'ದೀನಾರ್, ದಿರ್ಹಮ್‌ಗಳ ದಾಸನು ನಾಶ ಹೊಂದುವನು. ಏನಾದರೂ ದೊರೆತರೆ ಅವನು ಸಂತೋಷಪಡುವನು. ಸಿಗದೆ ಹೋದರೆ ಕೋಪಿಸಿಕೊಳ್ಳುವನು. ಅವನು ನಾಶಹೊಂದುವನು. ಅವನ ಕರ್ಮಗಳೆಲ್ಲವೂ ತಲೆಕೆಳಗಾಗಿ ಬೀಳುವುದು ಮತ್ತು ಒಂದು ಮುಳ್ಳು ತಾಗಿದರೂ ಅದನ್ನು ನೀಗಿಸಲು ಯಾರೂ ಸಿಗದೆ ಪ್ರಯಾಸ ಪಡುವನು.'[1]

ಸಂತಾನಗಳು ಕೂಡ ಇದೇ ರೀತಿಯಾಗಿದೆ. ಅಲ್ಲಾಹನ ಪ್ರೀತಿಗಿಂತ ಮಕ್ಕಳ ಮೇಲಿನ ಪ್ರೀತಿ ಮತ್ತು ಸುಖ ಸೌಕರ್ಯಕ್ಕೆ ಹೆಚ್ಚು ಮಹತ್ವ ನೀಡುವಾಗ, ಮಕ್ಕಳು ಶತ್ರುಗಳಾಗಿ ಮಾರ್ಪಡುವರು. ಮಕ್ಕಳ ಬಗ್ಗೆ ಇರುವ ಅತಿಯಾದ ಮೋಹವು ಮಾತಾಪಿತರನ್ನು ಮಕ್ಕಳ ದಾಸರಾಗಿಸಿ ಬಿಡುತ್ತದೆ. ಧರ್ಮಬದ್ಧ, ನಿಷಿದ್ಧ ಎಂದು ಪರಿಗಣಿಸದೆ

ಅವರ ಇಷ್ಟಾನಿಷ್ಟಗಳಿಗೆ ಜತೆ ನೀಡಲು ಅವರನ್ನು ಅದು ಪ್ರೇರೇಪಿಸುತ್ತದೆ. ದೇವನ ಮಾರ್ಗದಿಂದ ದೂರ ಸರಿಯಲು ನಿಷಿದ್ಧ ಮಾರ್ಗಗಳನ್ನು ಅನುಸರಿಸಲು ಇದು ಕಾರಣವಾಗುತ್ತದೆ. ಪ್ರವಾದಿವರ್ಯರು(ಸ) ಹೇಳಿರುವರು:

يَأْتِي زَمَانٌ عَلَى أُمَّتِي يَكُونُ فِيْهِ هَلَاكُ الرَّجُلِ عَلَى يَدِ زَوْجِهِ وَوَلَدِهِ، يُعَيِّرَانِهِ بِالْفَقْرِ، فَيَرْكَبُ مَرَاكِبَ السُّوءِ، فَيَهْلِكُ

'ನನ್ನ ಸಮುದಾಯಕ್ಕೆ ಒಂದು ಕಾಲವು ಬರುವುದು. ಅಂದು ಒಬ್ಬ ವ್ಯಕ್ತಿ ಅವನ ಪತ್ನಿ ಮಕ್ಕಳ ಕಾರಣದಿಂದಾಗಿ ನಾಶ ಹೊಂದುವನು. ದಾರಿದ್ರ್ಯದ ಕಾರಣದಿಂದಾಗಿ ಅವರು ಅವನನ್ನು ಉಪದ್ರವಿಸುತ್ತಿರುವರು. ಹೀಗೆ ನಿಷಿದ್ಧ ಮಾರ್ಗವನ್ನು ಅನುಸರಿಸಲು ಅವನು ನಿರ್ಬಂಧಿತನಾಗುವನು. ಹೀಗೆ ನಾಶಹೊಂದುವನು.'[2]

ಅಬೂಹುರೈರಾ(ರ)ರಿಂದ ವರದಿ. ಪ್ರವಾದಿವರ್ಯರು(ಸ) ಹೇಳಿರುವರು:

يَأْتِي عَلَى النَّاسِ زَمَانٌ، لَا يَسْلَمُ لِذِي دِيْنٍ دِيْنَهُ إِلَّا مَنْ هَرَبَ بِدِيْنِهِ مِنْ شَاهِقٍ إِلَى شَاهِقٍ، وَمِنْ جُحْرٍ إِلَى جُحْرٍ، فَإِذَا كَانَ ذَلِكَ لَمْ تُنَلِ الْمَعِيْشَةُ إِلَّا بِسَخَطِ اللهِ، فَإِذَا كَانَ ذَلِكَ كَذَلِكَ كَانَ هَلَاكُ الرَّجُلِ عَلَى يَدَيْ زَوْجَتِهِ وَوَلَدِهِ، فَإِنْ لَمْ يَكُنْ لَهُ زَوْجَةٌ وَلَا وَلَدٌ كَانَ هَلَاكُهُ عَلَى يَدَيْ أَبَوَيْهِ، فَإِنْ لَمْ يَكُنْ لَهُ أَبَوَانِ كَانَ هَلَاكُهُ عَلَى يَدَيْ قَرَابَتِهِ أَوِ الْجِيْرَانِ، قَالُوا: كَيْفَ ذَلِكَ يَا رَسُولَ اللهِ؟ قَالَ: يُعَيِّرُوْنَهُ بِضِيْقِ الْمَعِيْشَةِ، فَعِنْدَ ذَلِكَ يُوْرِدُ نَفْسَهُ الْمَوَارِدَ الَّتِي يُهْلِكُ فِيْهَا نَفْسَهُ

'ಒಂದು ಕಾಲ ಬರಲಿಕ್ಕಿರುವುದು. ಅಂದು ವ್ಯಕ್ತಿ ದೀನ್ ಕೈ ಬಿಟ್ಟು ಹೋಗದಿರಲು ಗುಡ್ಡದಿಂದ ಗುಡ್ಡಕ್ಕೆ, ಸುರಂಗದಿಂದ ಸುರಂಗಕ್ಕೆ ಓಡಿಕೊಂಡಿರುವನು. ಅಲ್ಲಾಹನ ಕೋಪ ಸಂಪಾದಿಸಿಕೊಂಡಲ್ಲದೆ, ಜೀವನಾಧಾರ ಗಳಿಸಲು ಅಂದು ಯಾರಿಗೂ ಸಾಧ್ಯ ವಾಗದ ಪರಿಸ್ಥಿತಿ ಬಂದು ಬಿಡುವುದು. ಹೀಗೆ ಒಂದು ಕಾಲವು ಬಂದು ಬಿಟ್ಟರೆ, ವ್ಯಕ್ತಿಯು ತನ್ನ ಪತ್ನಿ-ಮಕ್ಕಳ ಕಾರಣದಿಂದ ನಾಶ ಹೊಂದುವನು. ಪತ್ನಿ-ಮಕ್ಕಳಿಲ್ಲದವ ನಾಗಿದ್ದರೆ, ಮಾತಾಪಿತರ ಕಾರಣದಿಂದಾಗಿ ಅವನು ನಾಶ ಹೊಂದುವನು. ಮಾತಾಪಿತ ರಿಲ್ಲದವನಾಗಿದ್ದರೆ, ಸಂಬಂಧಿಕರು ಮತ್ತು ನೆರೆಹೊರೆಯವರ ಕಾರಣದಿಂದಾಗಿ ನಾಶ ಹೊಂದುವನು.' ಸಹಾಬಿಗಳು ಕೇಳಿದರು, 'ಅಲ್ಲಾಹನ ಪ್ರವಾದಿಗಳೇ, ಹೀಗೇಕೆ ಸಂಭವಿಸುತ್ತದೆ?' ಪ್ರವಾದಿ(ಸ) ಹೇಳಿದರು, 'ಜೀವನದ ಸುಖ- ಸೌಲಭ್ಯಗಳ ಕಾರಣ ದಿಂದಾಗಿ ಅವರು ಅವನನ್ನು ಪ್ರಯಾಸಪಡಿಸುತ್ತಿರುವರು. ಹೀಗೆ ಅವನು ಸ್ವತಃ ನಾಶ

ಹೊಂದುವ ರೀತಿಯಲ್ಲಿರುವ ಕೆಡುಕುಗಳನ್ನು ಮಾಡಲು ಆರಂಭಿಸುವನು.'[3]

ಕುಟುಂಬದ ಪ್ರೇರಣೆಯಿಂದ ಕೆಡುಕುಗಳಲ್ಲಿ ತೊಡಗಿದ ಅದೆಷ್ಟೋ ಜನರಿದ್ದಾರೆ. ಪತ್ನಿ–ಮಕ್ಕಳ ಇಷ್ಟಾನಿಷ್ಟಕ್ಕೆ ಬಲಿಬಿದ್ದು ಅಲ್ಲಾಹನನ್ನೂ ಪರಲೋಕವನ್ನೂ ಮರೆತುಬಿಟ್ಟವರು. ಅಂತ್ಯದಿನದಂದು ಇಂತಹ ವ್ಯಕ್ತಿಗಳ ಪರಿಣಾಮವನ್ನು ಪ್ರವಾದಿವಚನವೊಂದು ಈ ರೀತಿ ಚಿತ್ರಿಸುತ್ತದೆ: يُؤتَى بِرَجُلٍ يَوْمَ الْقِيَامَةِ، فَيُقَالُ: أَكَلَ عِيَالُهُ حَسَنَاتِهِ! ಅಂತ್ಯದಿನದಂದು ಒಬ್ಬ ವ್ಯಕ್ತಿಯನ್ನು ಕರೆತರಲಾಗುವುದು ಮತ್ತು 'ಇವನ ಒಳಿತುಗಳನ್ನೆಲ್ಲ ಇವನ ಕುಟುಂಬವು ತಿಂದು ಮುಗಿಸಿದೆ ಎಂದು ಅವನ ಬಗ್ಗೆ ಹೇಳಲಾಗುವುದು.'[4]

ಮನುಷ್ಯನ ವೈಯಕ್ತಿಕ ಜೀವನದಲ್ಲಿ ಸಂಪತ್ತು ಮತ್ತು ಸಂತಾನಗಳು ಜೊತೆ ಸೇರಿ ನಿರ್ಮಿಸುವ ಅಪಾಯಕಾರಿಯಾದ ಖೆಡ್ಡಾದ ಬಗ್ಗೆ ಅರಿತಿರಬೇಕೆಂದು ಆರಂಭದಲ್ಲಿ ಪ್ರಸ್ತಾಪಿಸಿದ ಪ್ರವಾದಿವಚನವು ನೆನಪಿಸುತ್ತದೆ. ಸಂಪತ್ತು ಮತ್ತು ಸಂತಾನಗಳು ಪ್ರತ್ಯಕ್ಷವಾಗಿ ಮನುಷ್ಯನ ಶತ್ರುಗಳಲ್ಲ. ಮಾತ್ರವಲ್ಲ, ಈ ಲೋಕದಲ್ಲಿ ಅವರು ಮನುಷ್ಯನ ಅತಿ ಸಮೀಪದ ಮಿತ್ರರು ಮತ್ತು ಆಪ್ತ ಸಹಾಯಕರು ಕೂಡ ಆಗಿರುವರು. ಆದರೆ ಅವರೊಂದಿಗಿನ ಅಮಿತವಾದ ಮೋಹವು ಒಬ್ಬನ ಧಾರ್ಮಿಕ ಪ್ರಜ್ಞೆ ಮತ್ತು ನೈತಿಕ ಗುಣಗಳನ್ನು ಸರ್ವನಾಶ ಮಾಡಲು ಕೆಲವು ಸಂದರ್ಭಗಳಲ್ಲಿ ಕಾರಣವಾಗಿ ಬಿಡುತ್ತದೆ. ಇದರ ತಾತ್ಪರ್ಯವೇನೆಂದರೆ, ಇಂತಹ ಸಂದರ್ಭಗಳಲ್ಲಿ ಅವುಗಳು ಮಿತ್ರನ ವೇಷ ಧರಿಸಿದ ಶತ್ರುಗಳಾಗಿರುತ್ತಾರೆ. ನಾನು ನಿನ್ನ ಶತ್ರುವೆಂದು ಘೋಷಿಸಿ ನಮ್ಮನ್ನು ಮುಖಾಮುಖಿ ಯಾಗುವವರನ್ನು ಎದುರಿಸಲು ಎಲ್ಲರಿಗೂ ಸುಲಭವಾಗಿ ಸಾಧ್ಯವಾಗುತ್ತದೆ. ಆದರ ಮಿತ್ರನ ವೇಷ ಧರಿಸಿ, ಗೆಳೆತನ ನಟಿಸಿ ಬರುವ ಕಪಟಿ ಮಿತ್ರನನ್ನು ಗುರುತಿಸುವುದು ಹೇಗೆ? ಪವಿತ್ರ ಕುರ್‌ಆನ್ ನಮಗೆ ಈ ರೀತಿ ಎಚ್ಚರಿಕೆ ನೀಡುತ್ತದೆ: 'ಸತ್ಯವಿಶ್ವಾಸಿಗಳೇ, ನಿಮ್ಮ ಪತ್ನಿಯರಲ್ಲಿ ಮತ್ತು ನಿಮ್ಮ ಮಕ್ಕಳಲ್ಲಿ ಕೆಲವರು ನಿಮ್ಮ ಶತ್ರುಗಳಿದ್ದಾರೆ. ಅವರ ಬಗ್ಗೆ ಜಾಗರೂಕರಾಗಿರಿ ಮತ್ತು ನೀವು ಕ್ಷಮಿಸಿದರೆ, ಕಡೆಗಣಿಸಿದರೆ ಹಾಗೂ ಮನ್ನಿಸಿದರೆ ಅಲ್ಲಾಹನು ಮಹಾ ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ. ನಿಮ್ಮ ಸಂಪತ್ತು ಮತ್ತು ಸಂತತಿಗಳು ಒಂದು ಪರೀಕ್ಷೆಯಾಗಿದೆ. ಅತ್ಯುನ್ನತ ಪ್ರತಿಫಲವಂತು ಅಲ್ಲಾಹನ ಬಳಿಯಲ್ಲೇ ಇದೆ.' **(ಅತ್ತಗಾಬುನ್: 14–15)**

---

1) ಬುಖಾರಿ: 2886. **2)** ಆಲೂಸಿ – ರೂಹುಲ್ ಮಆನಿ: 15/186. **3)** ಬೈಹಕಿ – ಕಿತಾಬುಝ್ಝುಹ್ದ್: 439, ಮುಂದಿರಿ: 3/444. **4)** ಆಲೂಸಿ – ರೂಹುಲ್ ಮಆನಿ: 15/187.

33. ಕುಟುಂಬ ಸಂಬಂಧವನ್ನು ಜೋಡಿಸಿರಿ

عَنْ عَبْدِ الرَّحْمَانِ بْنِ عَوْفٍ رَضِيَ اللَّهُ عَنْهُ، قَالَ: سَمِعْتُ رَسُولَ اللَّهِ ﷺ يَقُولُ: قَالَ اللَّهُ عَزَّ وَجَلَّ: أَنَا اللَّهُ، وَأَنَا الرَّحْمَانُ، خَلَقْتُ الرَّحِمَ، وَشَقَقْتُ لَهَا إِسْمًا مِنْ إِسْمِي، فَمَنْ وَصَلَهَا وَصَلْتُهُ وَمَنْ قَطَعَهَا قَطَعْتُهُ

ಅಬ್ದುರ್ರಹ್ಮಾನ್ ಬಿನ್ ಔಫ್(ರ)ರಿಂದ ವರದಿ. ಪ್ರವಾದಿವರ್ಯರು(ಸ) ಹೇಳಿರುವರು: ಅಲ್ಲಾಹನು ಹೇಳಿರುತ್ತಾನೆ- ನಾನು ಅಲ್ಲಾಹ್. ಪರಮ ಕರುಣಾಮಯಿ. ನಾನು ಕುಟುಂಬವನ್ನು ಸೃಷ್ಟಿಸಿರುವೆನು. ನನ್ನ ಹೆಸರುಗಳ ಪೈಕಿ ಒಂದನ್ನು ಅದಕ್ಕೆ ನೀಡಿರುವೆನು. ಆದುದರಿಂದ ಕುಟುಂಬ ಸಂಬಂಧ ವನ್ನು ಜೋಡಿಸಿಕೊಂಡವನೊಂದಿಗೆ ನಾನು ಸಂಬಂಧವಿರಿಸುವೆ. ಅದನ್ನು ಮುರಿದು ಬಿಡುವವನೊಂದಿಗೆ ನಾನು ಸಂಬಂಧ ಕಡಿದುಕೊಳ್ಳುವೆನು.*

ಸಮೂಹ ಜೀವಿಯಾದ ಮನುಷ್ಯ ಒಬ್ಬಂಟಿಗನಾಗಿ ಬದುಕಲಾರ. ಪ್ರತಿಯೊಬ್ಬ ಮನುಷ್ಯನ ಸುತ್ತಲೂ ಹಲವು ರೀತಿಯ ಸಂಬಂಧಗಳು ಬೆಸೆದುಕೊಂಡಿರುತ್ತವೆ. ಮಾತಾಪಿತರು, ಪತ್ನಿಯರು, ಮಕ್ಕಳು, ಕುಟುಂಬ ಹೀಗೆ ಲಕ್ಕವಿಲ್ಲದಷ್ಟು ಸಂಬಂಧ ಗಳು. ಒಬ್ಬ ಸತ್ಯವಿಶ್ವಾಸಿಗೆ ಇವರೊಂದಿಗೆಲ್ಲ ಹಕ್ಕು ಮತ್ತು ಕರ್ತವ್ಯಗಳಿವೆ. ಅಲ್ಲಾಹನ ಹಕ್ಕು ಮತ್ತು ತನ್ನ ಹಕ್ಕಿನ ಬಳಿಕ ಧರ್ಮದಲ್ಲಿ ಅತಿ ಹೆಚ್ಚು ಮಹತ್ವವಿರುವುದು ಈ ಸಂಬಂಧಗಳಿಗಾಗಿದೆ. ಮೇಲೆ ಪ್ರಸ್ತಾಪಿಸಲಾದ ಪ್ರವಾದಿವಚನವು ಈ ವಾಸ್ತವಿಕತೆ ಯನ್ನು ನೆನಪಿಸುತ್ತದೆ.

---

* ಇಮಾಮ್ ಬುಖಾರಿ – ಅದಬುಲ್ ಮುಫ್ರದ್: 53, ಅಬೂದಾವುದ್: 1694, ತಿರ್ಮಿದಿ: 1907, ಅಹ್ಮದ್: 1/191, 194; ಇಬ್ನು ಹಿಬ್ಬಾನ್: 443 ಮುಂತಾದವರು ಉಲ್ಲೇಖಿಸಿರುವರು. ಇದರ ವರದಿಯ ಪರಂಪರೆಯು ಪ್ರಬಲವಾಗಿದೆಯೆಂದು ಇಮಾಮ್ ತಿರ್ಮಿದಿ ಸಾಕ್ಷಿ ನುಡಿದಿದ್ದಾರೆ.

ಕುಟುಂಬ ಸಂಬಂಧದ ಪ್ರಾಮುಖ್ಯತೆಯನ್ನು ಅಲ್ಲಾಹ್ ಬಣ್ಣಿಸಿರುವುದು ಹೀಗೆ: ಜನರೇ, ನೀವು ನಿಮ್ಮ ಪಾಲಕ ಪ್ರಭುವನ್ನು ಭಯಪಡಿರಿ. ಅವನು ನಿಮ್ಮನ್ನು ಒಂದು ಜೀವದಿಂದ ಸೃಷ್ಟಿಸಿದನು. ಅದೇ ಜೀವದಿಂದ ಅದರ ಜೋಡಿಯನ್ನು ಉಂಟು ಮಾಡಿದನು ಮತ್ತು ಅವೆರಡರಿಂದ ಅನೇಕಾನೇಕ ಸ್ತ್ರೀ–ಪುರುಷರನ್ನು ಲೋಕದಲ್ಲಿ ಹಬ್ಬಿಸಿದನು. ನೀವು ಯಾರ ಹೆಸರೆತ್ತಿ ಪರಸ್ಪರ ಹಕ್ಕು ಬಾಧ್ಯತೆಗಳನ್ನು ಕೇಳುತ್ತೀರೋ ಆ ಅಲ್ಲಾಹನನ್ನು ಭಯಪಡಿರಿ. ಕುಟುಂಬ ಸಂಬಂಧಗಳನ್ನು ಕೆಡಿಸಬೇಡಿರಿ. ಅಲ್ಲಾಹ್ ನಿಮ್ಮ ಮೇಲೆ ಮೇಲ್ನೋಟವನ್ನಿರಿಸಿಕೊಂಡಿರುವನೆಂಬುದನ್ನು ಚೆನ್ನಾಗಿ ಅರಿತುಕೊಳ್ಳಿರಿ. **(ಅನ್ನಿಸಾ: 1)**

ಕುಟುಂಬ ಸಂಬಂಧವನ್ನು ಮುರಿಯುವವರನ್ನು ಮತ್ತು ಭೂಮಿಯಲ್ಲಿ ಕ್ಷೋಭೆ ಹರಡುವವರನ್ನು ಅಲ್ಲಾಹನು ಈ ರೀತಿ ಎಚ್ಚರಿಸಿರುವನು: ನೀವು ವಿಮುಖರಾಗಿ ಬಿಟ್ಟರೆ, ಭೂಮಿಯಲ್ಲಿ ಪುನಃ ಕ್ಷೋಭೆಯನ್ನು ಉಂಟು ಮಾಡುವ ಹಾಗೂ ಪರಸ್ಪರ ಕತ್ತು ಕೊಯ್ಯುವ ಹೊರತು ನಿಮ್ಮಿಂದ ಬೇರೇನನ್ನಾದರೂ ನಿರೀಕ್ಷಿಸಬಹುದೇ? ಅಲ್ಲಾಹನು ಶಪಿಸಿರುವುದು ಹಾಗೂ ಕಿವುಡರನ್ನಾಗಿಯೂ ಕುರುಡರನ್ನಾಗಿಯೂ ಮಾಡಿ ಬಿಟ್ಟಿರುವುದು ಇವರನ್ನೇ. **(ಮುಹಮ್ಮದ್: 22-23)**

ಮಕ್ಕಾ ಕಾಘಟ್ಟದಲ್ಲಿ ಸಂದೇಶ ಪ್ರಚಾರದ ಆರಂಭದಲ್ಲಿಯೇ ಕುಟುಂಬ ಸಂಬಂಧದ ಮಹತ್ವದ ಕುರಿತು ಪ್ರವಾದಿ(ಸ) ಬಹಳ ಗೌರವದಿಂದ ಪ್ರಸ್ತಾಪಿಸಿರುವರು. ಅಮ್ರ್ ಬಿನ್ ಅಬಸ(ರ) ಹೇಳುತ್ತಾರೆ: ಅಜ್ಞಾನ ಕಾಲದಲ್ಲಿ ಮಕ್ಕಾದಲ್ಲಿ ಓರ್ವ ಪ್ರವಾದಿ ಬಂದಿರುವರೆಂದು ಮತ್ತು ಅವರು ಕೆಲವು ವಿಷಯಗಳನ್ನು ಹೇಳುತ್ತಿರುವರೆಂದು ತಿಳಿದ ಕೂಡಲೇ ಅವರನ್ನು ಕಾಣಲಿಕ್ಕೆಂದು ವಾಹನವನ್ನೇರಿ ಅಲ್ಲಿಗೆ ತಲುಪಿದೆ. ಪ್ರವಾದಿಯವರು ಅಂದು ರಹಸ್ಯವಾಗಿ ಜನರನ್ನು ಸನ್ಮಾರ್ಗದೆಡೆಗೆ ಆಹ್ವಾನಿಸುತ್ತಿದ್ದರು. ನಾನು ವೇಷ ಮರೆಸಿ, ಅಡಗಿಕೊಂಡು ಉಪಾಯದಿಂದ ಅವರ ಬಳಿ ತಲುಪಿದೆ. ಬಳಿಕ ಪ್ರಶ್ನಿಸಿದೆ: ತಾವು ಯಾರು? ಆ ವ್ಯಕ್ತಿ ಹೇಳಿದರು: ಪ್ರವಾದಿ. ನಾನು ಪ್ರಶ್ನಿಸಿದೆ: ಪ್ರವಾದಿ ಎಂದರೆ? ಅವರು ಹೇಳಿದರು: ಅಲ್ಲಾಹನು ನನ್ನನ್ನು ಜನರೆಡೆಗೆ ಪ್ರವಾದಿಯಾಗಿ ಕಳುಹಿಸಿರುವನು. ನಾನು ಪ್ರಶ್ನಿಸಿದೆ: ಯಾವ ಸಂದೇಶದೊಂದಿಗೆ ಅಲ್ಲಾಹನು ನಿಮ್ಮನ್ನು ಕಳುಹಿಸಿಕೊಟ್ಟಿರುವನು? ಅವರು ಹೇಳಿದರು:

أَرْسَلَنِي بِصِلَةِ الْأَرْحَامِ وَكَسْرِ الْأَوْثَانِ، وَأَنْ يُوَحَّدَ اللّٰهُ لَا يُشْرِكُ بِهِ شَيْئًا

'ಕುಟುಂಬ ಸಂಬಂಧವನ್ನು ಜೋಡಿಸಲು, ವಿಗ್ರಹಗಳನ್ನು ನೀಗಿಸಲು, ಅಲ್ಲಾಹನೊಂದಿಗೆ ಯಾರನ್ನೂ ಸಹಭಾಗಿಗಳಾಗಿ ಮಾಡದಿರಲು ಮತ್ತು ಅವನ ಏಕತ್ವವನ್ನು

ಸ್ಥಾಪಿಸಲಿಕ್ಕಾಗಿ ಅಲ್ಲಾಹನು ನನ್ನನ್ನು ಪ್ರವಾದಿಯಾಗಿ ನಿಯೋಗಿಸಿರುವನು.'[1]

ಇಮಾಮ್ ನವವಿ(ರ) ವಿವರಿಸುತ್ತಾರೆ:

هٰذَا فِيْهِ دَلَالَةٌ ظَاهِرَةٌ عَلَى الْحَثِّ عَلَى صِلَةِ الْأَرْحَامِ، لِأَنَّ النَّبِيَّ ﷺ قَرَنَهَا بِالتَّوْحِيْدِ، وَلَمْ يَذْكُرْ لَهُ جُزْئِيَّاتِ الْأُمُورِ، وَإِنَّمَا ذَكَرَ مُهِمَّهَا، وَبَدَأَ بِالصِّلَةِ

'ಕುಟುಂಬ ಸಂಬಂಧವನ್ನು ಜೋಡಿಸುವುದಕ್ಕೆ ಧರ್ಮ ನೀಡಿರುವ ಪ್ರೇರಣೆ ಮತ್ತು ಪ್ರೋತ್ಸಾಹಕ್ಕೆ ಈ ಹದೀಸ್‌ನಲ್ಲಿ ಸ್ಪಷ್ಟವಾದ ಆಧಾರಗಳಿವೆ. ಏಕೆಂದರೆ ಪ್ರವಾದಿ ಯವರು(ಸ) ಕುಟುಂಬ ಸಂಬಂಧವನ್ನು ಏಕದೇವತ್ವದೊಂದಿಗೆ ಸೇರಿಸಿ ಹೇಳುತ್ತಾರೆ. ಧರ್ಮದಲ್ಲಿರುವ ಇತರ ವಿಷಯಗಳ ಬಗ್ಗೆ ಪ್ರಸ್ತಾಪಿಸದೆ ಕೇವಲ ಕುಟುಂಬ ಸಂಬಂಧದ ಮಹತ್ವವನ್ನು ಮಾತ್ರ ಸ್ಮರಿಸಿರುವುದು, ಅದನ್ನೇ ಪ್ರಪ್ರಥಮವಾಗಿ ವಿಶ್ಲೇಷಣೆ ನಡೆಸಿರುವುದನ್ನು ನೋಡಬಹುದಾಗಿದೆ.'[2]

ರೋಮನ್ ಸಾಮ್ರಾಜ್ಯದ ಅರಮನೆಯಲ್ಲಿ ಪ್ರವಾದಿವರ್ಯರ(ಸ) ಕುರಿತು ಅಬೂ ಸುಫಿಯಾನ್ ಮತ್ತು ಹರ್ಕ್ಯುಲಿಸ್ ನಡೆಸಿದ ಸಂಭಾಷಣೆಯ ವೇಳೆ, 'ಅವರು ನಿಮ್ಮೊಂದಿಗೆ ಏನನ್ನು ಆದೇಶಿಸುತ್ತಾರೆ?' ಎಂಬ ಹರ್ಕ್ಯುಲಿಸ್‌ನ ಪ್ರಶ್ನೆಗೆ, ಅಬೂ ಸುಫಿಯಾನ್ ನೀಡಿರುವ ಉತ್ತರ ಈ ರೀತಿ ಇದೆ:

يَقُولُ: اُعْبُدُوا اللّٰهَ وَحْدَهُ وَلَا تُشْرِكُوا بِهِ شَيْئًا، وَاتْرُكُوا مَا يَقُولُ آبَاؤُكُم، وَيَأْمُرُنَا بِالصَّلَاةِ وَالزَّكَاةِ وَالْعَفَافِ وَالصِّلَةِ

'ಏಕೈಕನಾದ ಅಲ್ಲಾಹನನ್ನು ಮಾತ್ರ ಭಯಪಡಿರಿ. ಅವನೊಂದಿಗೆ ಯಾರನ್ನೂ ಸಹಭಾಗಿಗಳನ್ನಾಗಿ ಮಾಡಬೇಡಿರಿ. ಇದನ್ನೆಲ್ಲ ಅವರು ನಮಗೆ ಉಪದೇಶಿಸುತ್ತಾರೆ. ಅದರ ಜೊತೆಗೆ ನಮಾಝ್ ನಿರ್ವಹಿಸಲು, ಝಕಾತ್ ನೀಡಲು, ಸದ್ಗುಣಗಳನ್ನು ಪಾಲಿಸಲು ಮತ್ತು ಕುಟುಂಬ ಸಂಬಂಧವನ್ನು ಜೋಡಿಸಲು ನಮಗೆ ಆದೇಶಿಸುತ್ತಾರೆ.'[3]

ಇಸ್ಲಾಮಿನ ಪ್ರಕಾರ ಎಲ್ಲ ಸಂಬಂಧಗಳಿಗಿಂತ ಮಿಗಿಲಾದುದು ಧರ್ಮಾಧಾರಿತ ಸಂಬಂಧವಾಗಿದೆ. ಆದರೆ ಧಾರ್ಮಿಕ ಭಿನ್ನತೆಯು ಇದ್ದರೂ ಕುಟುಂಬ ಸಂಬಂಧಿಕ ರೊಂದಿಗೆ ಅತ್ಯುತ್ತಮ ರೀತಿಯಲ್ಲಿ ವರ್ತಿಸಬೇಕೆಂದು ಇಸ್ಲಾಮ್ ಬಯಸುತ್ತದೆ. 'ಆದರೆ ಅವರು ನಿನಗೆ ತಿಳಿಯದುದನ್ನು ನನ್ನೊಂದಿಗೆ ಸಹಭಾಗಿಯಾಗಿ ಮಾಡ ಬೇಕೆಂದು ನಿನ್ನ ಮೇಲೆ ಒತ್ತಡ ಹಾಕಿದರೆ ಅವರ ಮಾತನ್ನು ಎಷ್ಟು ಮಾತ್ರಕ್ಕೂ ಕೇಳಬೇಡ. ಈ ಲೋಕದಲ್ಲಿ ಅವರೊಂದಿಗೆ ಸದ್ವರ್ತನೆ ಮಾಡುತ್ತಿರು' (ಲುಕ್ಮಾನ್: 15)

ಎಂಬ ಆದೇಶವು ಈ ಉಪದೇಶದ ಭಾಗವಾಗಿದೆ. ಅಬ್ದುಲ್ಲಾ ಬಿನ್ ಅಮ್ರ್ ಬಿನ್ ಆಸ್(ರ) ಹೇಳುತ್ತಾರೆ:

سَمِعْتُ النَّبِيَّ جِهَارًا غَيْرَ سِرٍّ يَقُولُ: إِنَّ آلَ أَبِي فُلَانٍ لَيْسُوا بِأَوْلِيَائِي، إِنَّمَا وَلِيِّيَ اللَّهُ وَصَالِحُ الْمُؤْمِنِينَ، وَلَكِنْ لَهُمْ رَحِمٌ، أَبُلُّهَا بِبِلَالِهَا

'ಪ್ರವಾದಿ ಮುಹಮ್ಮದ್(ಸ)ರು ಒಮ್ಮೆ ಜೋರಾಗಿ ಹೇಳುವುದನ್ನು ನಾನು ಕೇಳಿಸಿಕೊಂಡೆ, ಇಂತಿಂತಹ ಕುಟುಂಬದಲ್ಲಿ ನನ್ನ ಸಹಾಯಕರಿಲ್ಲ, ನನ್ನ ಸಹಾಯಕರು ಸಚ್ಚಾರಿತ್ರ್ಯವಂತರಾದ ಸತ್ಯವಿಶ್ವಾಸಿಗಳು ಮಾತ್ರ. ಆದರೆ ಇಂತಿಂತಹ ವ್ಯಕ್ತಿಯೊಂದಿಗೆ ನನಗೆ ಕುಟುಂಬ ಸಂಬಂಧವಿದೆ. ನಾನದನ್ನು ಮುಂದುವರಿಸಿಕೊಂಡು ಹೋಗುತ್ತೇನೆ.'[4]

ಕುಟುಂಬ ಸಂಬಂಧವನ್ನು ಕಡಿದುಕೊಳ್ಳುವುದು ಬಹಳ ದೊಡ್ಡ ಪಾಪವಾಗಿದೆ. ಈ ಕಾರಣವಾಗಿ ದೇವಕಾರುಣ್ಯವು ತಡೆಯಲ್ಪಡುವುದು ಮತ್ತು ಕರ್ಮಗಳು ಮೌಲ್ಯ ಹೀನವಾಗುವುದು. ಅಬೂಹುರ್ರೈರಾ(ರ)ರಿಂದ ವರದಿ. ಪ್ರವಾದಿ(ಸ) ಹೇಳಿರುವರು:

إِنَّ أَعْمَالَ بَنِي آدَمَ تُعْرَضُ كُلَّ خَمِيسٍ لَيْلَةَ الْجُمْعَةِ، فَلَا يُقْبَلُ عَمَلُ قَاطِعِ رَحِمٍ

'ಮನುಷ್ಯನ ಸಕಲ ಕರ್ಮಗಳು ಪ್ರತಿ ಶುಕ್ರವಾರ ರಾತ್ರಿ ಅಲ್ಲಾಹನ ಮುಂದೆ ಪ್ರದರ್ಶಿಸಲ್ಪಡುವುದು. ಆದರೆ ಕುಟುಂಬ ಸಂಬಂಧವನ್ನು ಕಡಿದುಕೊಂಡ ವ್ಯಕ್ತಿಯ ಯಾವುದೇ ಕರ್ಮವು ಸ್ವೀಕರಿಸಲ್ಪಡಲಾರದು.'[5]

ಅಬ್ದುಲ್ಲಾ ಬಿನ್ ಅಬೀ ಔಫ್(ರ) ಹೇಳುತ್ತಾರೆ. ಒಮ್ಮೆ ನಾವು ಪ್ರವಾದಿಯವರೊಂದಿಗೆ ಒಂದು ಸಭೆಯಲ್ಲಿ ಕುಳಿತಿದ್ದೆವು. ಆಗ ಪ್ರವಾದಿ(ಸ) ಹೇಳಿದರು: لَا يُجَالِسُنَا الْيَوْمَ قَاطِعُ رَحِمٍ 'ಕುಟುಂಬ ಸಂಬಂಧವನ್ನು ಕಡಿದುಕೊಂಡವನು ಈ ಸಭೆಯಲ್ಲಿ ಕುಳಿತುಕೊಳ್ಳಬಾರದು.' ಆಗ ಸಭೆಯಲ್ಲಿದ್ದ ಒಬ್ಬ ವ್ಯಕ್ತಿ ಎದ್ದು ಹೋದರು. ಆ ವ್ಯಕ್ತಿಗೆ ತಮ್ಮ ತಾಯಿಯ ಸಹೋದರಿಯೊಂದಿಗೆ ಮನಸ್ತಾಪವಿತ್ತು. ಅವರು ಆ ಮಹಿಳೆಯ ಬಳಿಗೆ ಹೋಗಿ ಅದನ್ನು ಸರಿಪಡಿಸಿಕೊಂಡರು. ಬಳಿಕ ಹಿಂದಿರುಗಿದರು. ಆಗ ಪ್ರವಾದಿ(ಸ) ಹೇಳಿದರು: إِنَّ الرَّحْمَةَ لَا تَنْزِلُ عَلَى قَوْمٍ فِيهِمْ قَاطِعُ رَحِمٍ 'ಕುಟುಂಬ ಸಂಬಂಧವನ್ನು ಕಡಿದುಕೊಂಡ ವ್ಯಕ್ತಿ ಇರುವ ಸಭೆಯಲ್ಲಿ ಅಲ್ಲಾಹನ ಕರುಣೆ ಇರುವುದಿಲ್ಲ. ಆದ ಕಾರಣ ನಾನು ಆ ರೀತಿ ಹೇಳಿದೆ.'[6]

ಪ್ರಮುಖ ಸಹಾಬಿಯಾದ ಅಬ್ದುಲ್ಲಾ ಬಿನ್ ಮಸ್‌ಊದ್(ರ) ಬೆಳಗಿನ ನಮಾಝಿನ ಬಳಿಕ ನಡೆಸುವ ತರಗತಿಯಲ್ಲಿ ಸಾಮೂಹಿಕ ಪ್ರಾರ್ಥನೆ ಮಾಡುವ

ಸಂದರ್ಭದಲ್ಲಿ ಕುಟುಂಬ ಸಂಬಂಧ ಕಡಿದುಕೊಂಡ ವ್ಯಕ್ತಿಗಳಿದ್ದರೆ ಎದ್ದು ಹೋಗಬೇಕೆಂದು ಆದೇಶಿಸುತ್ತಿದ್ದರು. ಅವರು ಹೀಗೆ ಹೇಳುತ್ತಿದ್ದರು:

أُنْشِدُ اللَّهَ قَاطِعَ رَحِمٍ لَمَا قَامَ عَنَّا، فَإِنَّا نُرِيْدُ أَنْ نَدْعُوَ رَبَّنَا، وَإِنَّ أَبْوَابَ السَّمَاءِ مُرْتَجَةٌ دُونَ قَاطِعِ رَحِمٍ

ಅಲ್ಲಾಹನ ಮೇಲೆ ಆಣೆ ಹಾಕಿ ನಾನು ಆದೇಶಿಸುತ್ತಿದ್ದೇನೆ. ಕುಟುಂಬ ಸಂಬಂಧವನ್ನು ಕಡಿದುಕೊಂಡವರು ನಮ್ಮ ಪೈಕಿ ಇದ್ದರೆ, ಎದ್ದು ಹೋಗಲಿ. ಏಕೆಂದರೆ ಅಲ್ಲಾಹನೊಂದಿಗೆ ಪ್ರಾರ್ಥಿಸಬೇಕೆಂಬುದು ನನ್ನ ಉದ್ದೇಶ. ಕುಟುಂಬ ಸಂಬಂಧವನ್ನು ಕಡಿದುಕೊಂಡವನ ಮುಂದೆ ಆಕಾಶದ ಬಾಗಿಲುಗಳು ಮುಚ್ಚಲ್ಪಡುವುದು.[7]

ಕುಟುಂಬ ಸಂಬಂಧವನ್ನು ಜೋಡಿಸುವುದು ಎಂಬ ಧರ್ಮದ ಆದೇಶದ ಉದ್ದೇಶ ನನಗೆ ಸಹಾಯ ಮಾಡುವವರೊಂದಿಗೆ ಮತ್ತು ನನ್ನೊಂದಿಗೆ ಉತ್ತಮ ರೀತಿಯಲ್ಲಿ ವರ್ತಿಸುವವರೊಂದಿಗೆ ತಿರುಗಿ ಉತ್ತಮ ರೀತಿಯಲ್ಲಿ ವ್ಯವಹರಿಸುವುದು ಎಂದಲ್ಲ. ತನ್ನೊಂದಿಗೆ ಜಗಳ ಕಾಯುವ ಮತ್ತು ಸಂಬಂಧ ಕಡಿದುಕೊಳ್ಳುವ ವ್ಯಕ್ತಿಗಳೊಂದಿಗೂ ಉತ್ತಮ ರೀತಿಯಲ್ಲಿ ವರ್ತಿಸಬೇಕೆಂಬುದು ಇದರ ಹಿಂದಿರುವ ಉದ್ದೇಶ. ಪ್ರವಾದಿ ಮುಹಮ್ಮದ್(ಸ)ರು ಹೇಳಿರುವರು:

لَيْسَ الْوَاصِلُ بِالْمُكَافِئِ، وَلَكِنَّ الْوَاصِلَ الَّذِي إِذَا قُطِعَتْ رَحِمُهُ وَصَلَهَا

'ನನ್ನೊಂದಿಗೆ ಉತ್ತಮ ರೀತಿಯಲ್ಲಿ ವರ್ತಿಸಿದರೆ ನಾನೂ ಉತ್ತಮ ರೀತಿಯಲ್ಲಿ ವರ್ತಿಸುವೆನು ಎಂಬುದಾಗಿ ಭಾವಿಸುವವರು ನಿಜವಾದ ಸಂಬಂಧವನ್ನು ಜೋಡಿಸುವವರಲ್ಲ. ಬದಲಾಗಿ ಸಂಬಂಧ ಕಡಿದುಕೊಂಡವ ರೊಂದಿಗೆ ಸಂಬಂಧವನ್ನು ಪುನಃ ಜೋಡಿಸುವವರೇ ನಿಜವಾದ ಸಂಬಂಧವನ್ನು ಜೋಡಿಸುವವರು.'[8]

ರಹಮ್ (ಕುಟುಂಬ ಸಂಬಂಧ) ರಹ್ಮಾನ್ (ಕರುಣಾಮಯಿ) ಎಂಬ ಪದದಿಂದ ಹುಟ್ಟಿಕೊಂಡಿದೆ ಎಂದೂ ಕುಟುಂಬ ಸಂಬಂಧವನ್ನು ಉತ್ತಮ ಪಡಿಸುವುದರಿಂದ ಮಾತ್ರ ಅಲ್ಲಾಹನ ಪ್ರೀತಿ ಮತ್ತು ಕರುಣೆ ಲಭ್ಯವಾಗಲು ಸಾಧ್ಯ ಎಂಬುದಾಗಿ ಆರಂಭದಲ್ಲಿ ಪ್ರಸ್ತಾಪಿಸಿದ ಹದೀಸ್ ವಚನವು ನಮಗೆ ಕಲಿಸಿ ಕೊಡುತ್ತದೆ.

---

1) ಮುಸ್ಲಿಮ್: 1927, ಹಾಕಿಮ್: 4/149. 2) ಮಿನ್‌ಹಾಜ್, ಭಾಗ: 5-6, ಪುಟ: 355. 3) ಬುಖಾರಿ. 4) ಬುಖಾರಿ, ಮುಸ್ಲಿಮ್. 5) ಅಹ್ಮದ್: 2/484. 6) ತಬ್ರಾನಿ, ಅಸ್ಬಹಾನಿ – ತರ್ಗೀಬ್: 2290. 7) ತಬ್ರಾನಿ, ಹೈತಮಿ – ಮಜ್ಮಉಸ್ಸವಾಇದ್: 8/151. 8) ಬುಖಾರಿ: 5991, ಅಬೂದಾವೂದ್: 1697, ತಿರ್ಮಿದಿ: 1908.

34. ನೆರೆಹೊರೆಯವರ ಹಕ್ಕುಗಳು

عَنْ عَمْرُو بْنِ شُعَيْبٍ رَضِيَ اللّٰهُ عَنْهُ، قَالَ: عَنِ النَّبِيِّ ﷺ قَالَ: "مَنْ أَغْلَقَ بَابَهُ دُونَ جَارِهِ مَخَافَةً عَلَى أَهْلِهِ وَمَالِهِ، فَلَيْسَ ذَلِكَ بِمُؤْمِنٍ، وَلَيْسَ بِمُؤْمِنٍ مَنْ لَمْ يَأْمَنْ جَارُهُ بَوَائِقَهُ، أَتَدْرِي مَا حَقُّ الْجَارِ؟ إِذَا اسْتَعَانَكَ أَعَنْتَهُ، وَإِذَا اسْتَقْرَضَكَ أَقْرَضْتَهُ، وَإِذَا افْتَقَرَ عُدْتَ عَلَيْهِ، وَإِذَا مَرِضَ عُدْتَهُ، وَإِذَا أَصَابَهُ خَيْرٌ هَنَّأْتَهُ، وَإِذَا أَصَابَتْهُ مُصِيبَةٌ عَزَّيْتَهُ، وَإِذَا مَاتَ اتَّبَعْتَ جَنَازَتَهُ، وَلَا تَسْتَطِلْ عَلَيْهِ بِالْبُنْيَانِ فَتَحْجُبَ عَنْهُ الرِّيحَ إِلَّا بِإِذْنِهِ، وَلَا تُؤْذِهِ بِقُتَارِ رِيحِ قِدْرِكَ إِلَّا أَنْ تَغْرِفَ لَهُ مِنْهَا، وَإِنْ اِشْتَرَيْتَ فَاكِهَةً فَأَهْدِ لَهُ، فَإِنْ لَّمْ تَفْعَلْ فَأَدْخِلْهَا سِرًّا، وَلَا يَخْرُجُ بِهَا وَلَدُكَ لِيَغِيْظَ بِهَا وَلَدَهُ"

ಅಮ್ರ್ ಬಿನ್ ಶುಐಬ್(ರ)ರಿಂದ ವರದಿ. ಪ್ರವಾದಿ(ಸ) ಹೇಳಿರುವರು: ತನ್ನ ಕುಟುಂಬ ಮತ್ತು ಸಂಪತ್ತಿಗೆ ನಷ್ಟವಾಗಬಹುದೆಂದು ಭಯಪಟ್ಟು, ನೆರೆಹೊರೆಯವರಿಗೆ ಬಾಗಿಲು ಮುಚ್ಚಿದರೆ, ಅಂತಹ ವ್ಯಕ್ತಿಗಳು ಸತ್ಯವಿಶ್ವಾಸಿಗಳಲ್ಲ. ಯಾರ ಉಪಟಳದಿಂದ ನೆರೆಹೊರೆಯವರು ಸುರಕ್ಷಿತ ರಲ್ಲವೋ ಅವರು ಸತ್ಯವಿಶ್ವಾಸಿಗಳಲ್ಲ. ನೆರೆಮನೆಯವರ ಹಕ್ಕುಗಳು ಏನೆಂದು ನಿಮಗೆ ತಿಳಿದಿದೆಯೇ? ಅವನು ನಿನ್ನೊಂದಿಗೆ ಸಹಾಯ ಕೇಳಿದರೆ, ನೀನು ಸಹಾಯ ಮಾಡಬೇಕು. ಸಾಲ ಕೇಳಿದರೆ ಕೊಡಬೇಕು. ಅವನು ಬಹಳ ಅಗತ್ಯವುಳ್ಳವನಾಗಿದ್ದರೆ ಅವನಿಗದನ್ನು ಬಿಟ್ಟು ಬಿಡಬೇಕು. ರೋಗಿಯಾದರೆ ಸಂದರ್ಶನ ಮಾಡಬೇಕು. ಏನಾದರೂ ಒಳಿತು ಸಂಭವಿಸಿದರೆ ಅವನಿಗೆ ಶುಭಾಶಯ

ಹೇಳಬೇಕು. ಸಂಕಷ್ಟಗಳು ಎದುರಾದರೆ ಸಮಾಧಾನ ಪಡಿಸಬೇಕು. ಮರಣ ಸಂಭವಿಸಿದರೆ, ಮೃತದೇಹದೊಂದಿಗೆ ಹೋಗಬೇಕು. ಅವನ ಅನುಮತಿ ಯಿಲ್ಲದೆ ನಿನ್ನ ಕಟ್ಟಡವನ್ನು ಮೇಲಕ್ಕೇರಿಸಿ ಅವನ ಮನೆಗೆ ಬರುವ ಗಾಳಿ, ಬೆಳಕನ್ನು ತಡೆಯಬಾರದು. ನಿನ್ನ ಪದಾರ್ಥದಿಂದ ಅವನಿಗೆ ಏನೂ ನೀಡದೆ, ಕೇವಲ ಅದರ ಪರಿಮಳದಿಂದ ಅವರಿಗೆ ತೊಂದರೆ ನೀಡಬಾರದು. ನೀನು ಏನಾದರೂ ಹಣ್ಣು ಹಂಪಲು ಖರೀದಿಸಿದರೆ, ಒಂದು ಪಾಲು ಅವರಿಗೂ ನೀಡಬೇಕು. ಅದು ಸಾಧ್ಯವಿಲ್ಲವೆಂದಾದರೆ ಮನೆಯಲ್ಲಿ ಅದನ್ನು ಯಾರಿಗೂ ಕಾಣದಂತೆ ಇಡಿರಿ. ಅದನ್ನು ತೆಗೆದುಕೊಂಡು ನಿಮ್ಮ ಮಕ್ಕಳು ಹೊರಗೆ ಹೋದರೆ ಅವರ ಮಕ್ಕಳು ಅದನ್ನು ನೋಡಿ ಸಂಕಟ ಪಡಬಹುದು.*

ಸತ್ಯವಿಶ್ವಾಸಿಗೆ ನೆರೆಹೊರೆಯ ವ್ಯಕ್ತಿಗಳೊಂದಿಗಿರುವ ಹಕ್ಕು-ಬಾಧ್ಯತೆಗಳ ಬಗ್ಗೆ ವಿವರಿಸಿರುವ ಪ್ರವಾದಿವಚನವಿದು. ನೆರೆಹೊರೆಯ ಸಂಬಂಧಕ್ಕೆ ಇಸ್ಲಾಮ್ ನೀಡುವ ಮಹತ್ವವನ್ನು ಮನವರಿಕೆ ಮಾಡಿಕೊಳ್ಳಲು ಈ ಒಂದು ವಚನ ಸಾಕಾಗುವುದು.

ಸಾಮೂಹಿಕ ಜೀವನದಲ್ಲಿ ಅತಿ ಹೆಚ್ಚು ಪ್ರಯೋಜನಕ್ಕೆ ಬರುವವರು ನೆರೆಹೊರೆ ಯವರಾಗಿದ್ದಾರೆ. ಅವರೊಂದಿಗೆ ಅತ್ಯುತ್ತಮ ರೀತಿಯಲ್ಲಿ ವರ್ತಿಸಬೇಕು. ಅನಗತ್ಯ ಶತ್ರುತ್ವ, ಕೋಪ, ದ್ವೇಷಗಳನ್ನು ಅವರೊಂದಿಗೆ ಇಟ್ಟು ಬೆಳೆಸಬಾರದು. ಪವಿತ್ರ ಕುರ್‌ಆನ್ ಅಲ್ಲಾಹನ ದಾಸ್ಯಾರಾಧನೆ ಮಾಡಬೇಕು, ಬಹುದೇವವಿಶ್ವಾಸವನ್ನು ತೊರೆ ಯಬೇಕು ಎಂದು ಆಜ್ಞಾಪಿಸಿದ ಬಳಿಕ ಸಂಬಂಧಿಕರು ಮತ್ತು ಸಂಬಂಧಿಕರಲ್ಲದ ನೆರೆ ಯವರೊಂದಿಗೆ ಒಳ್ಳೆಯ ರೀತಿಯ ಸಂಬಂಧವನ್ನು ಹೊಂದಿರಬೇಕು (ಅನ್ನಿಸಾ: 36) ಎಂದು ಆದೇಶಿಸುತ್ತದೆ. ಸಾಮೂಹಿಕ ಜೀವನದಲ್ಲಿ ವಿಶ್ವಾಸದಂತೆಯೇ ಸಂಬಂಧ ಗಳಿಗೂ ಬಹಳ ಮಹತ್ವವಿರುವುದರಿಂದಲೇ ಹೀಗೆ ಹೇಳಲಾಗಿದೆ. ಇಮಾಮ್ ಬುಖಾರಿ ಮತ್ತು ಮುಸ್ಲಿಮ್ ಉದ್ಧರಿಸಿರುವ ಪ್ರವಾದಿವಚನವೊಂದು ಹೀಗಿದೆ: مَا زَالَ جِبْرِيلُ عَلَيْهِ السَّلَامُ يُوْصِينِي بِالْجَارِ حَتَّى ظَنَنْتُ أَنَّهُ سَيُوَرِّثُهُ 'ಜಿಬ್ರೀಲರು ನಿರಂತರವಾಗಿ ನನ್ನ

* ಇಮಾಮ್ ಖರಾಯಿತಿ ಅಮ್ರ್ ಬಿನ್ ಶುಐಬ್(ರ)ರಿಂದ, ತಬ್ರಾನಿ ಮುಆವಿಯ ಬಿನ್ ಹಯದ(ರ) ರಿಂದ, ಅಬೂ ಶೈಖ್ ಮುಆದ್ ಬಿನ್ ಜಬಲ್(ರ)ರಿಂದ ಅಸ್ಬಹಾನಿ ಅಬೂ ಹುರೈರ(ರ)ರಿಂದ ವಿವಿಧ ವರದಿಯ ಶ್ರೇಣಿಯ ಮೂಲಕ ಈ ಪ್ರವಾದಿವಚನವನ್ನು ಉದ್ಧರಿಸಿರುವರು. ಪ್ರತಿಯೊಂದು ವರದಿಯ ಶ್ರೇಣಿಯಲ್ಲಿಯೂ ದುರ್ಬಲ ಭಾಗಗಳಿದ್ದರೂ ವರದಿಯ ಆಧಿಕ್ಯ ಹದೀಸ್‌ಗೆ ಬಲ ನೀಡುತ್ತದೆಯೆಂಬುದು ಇಮಾಮ್ ಇಬ್ನು ಹಜರ್ ಅಸ್ಕಲಾನಿ (ಫತ್ಹುಲ್ ಬಾರಿ, ಬಾಗ: 10, ಪುಟ: 460) ಹಾಫಿಝ್ ಮುಂದಿರಿ (ಅತ್ತರ್‌ಗೀಬ್ ವತ್ತರ್‌ಹೀಬ್, ಭಾಗ: 3, ಪುಟ: 358) ಮುಂತಾದವರು ಅಭಿಪ್ರಾಯ ಪಡುತ್ತಾರೆ.

ಬಳಿ ನೆರೆಯವರೊಂದಿಗಿನ ಸಂಬಂಧದ ಕುರಿತು ಪ್ರಸ್ತಾಪಿಸುತ್ತಿದ್ದರು. ಇದಾದ ಬಳಿಕ ವಾರೀಸು ಸೊತ್ತಿನಲ್ಲಿಯೂ ಅವರನ್ನು ಪಾಲುದಾರರನ್ನಾಗಿ ಮಾಡಬೇಕಾಗುತ್ತದೋ ಎಂದು ನಾನು ಭಾವಿಸಿದೆ.'[1]

ಇತಿಹಾಸ ಪ್ರಸಿದ್ಧವಾದ ಹಜ್ಜತುಲ್ ವಿದಾದ (ವಿದಾಯ ಹಜ್ಜ್‌ನ) ಸಂದರ್ಭದ ಭಾಷಣದಲ್ಲಿಯೂ ಪ್ರವಾದಿ ಮುಹಮ್ಮದ್(ಸ)ರು ನೆರೆಹೊರೆಯ ಸಂಬಂಧದ ಕುರಿತು ಪ್ರಸ್ತಾಪಿಸಿದ್ದರು. ಅಬೂ ಉಮಾಮತುಲ್ ಬಾಹಿಲಿ(ರ) ಹೇಳುತ್ತಾರೆ:

سَمِعْتُ رَسُولَ اللهِ ﷺ وَهُوَ عَلَى نَاقَتِهِ الْجَدْعَاءِ فِي حَجَّةِ الْوَدَاعِ، يَقُولُ: "أُوصِيكُمْ بِالْجَارِ" حَتَّى أَكْثَرَ، فَقُلْتُ: إِنَّهُ يُوَرِّثُهُ!

ಕಿವಿ ಹರಿದ ಒಂಟೆಯೊಂದರ ಮೇಲೆ ಕುಳಿತ ಪ್ರವಾದಿ ಮುಹಮ್ಮದ್(ಸ)ರು ಜನರನ್ನುದ್ದೇಶಿಸಿ ಈ ರೀತಿ ಹೇಳುತ್ತಿದ್ದರು, 'ನೆರೆಹೊರೆಯವರ ವಿಷಯದಲ್ಲಿ ನಾನು ನಿಮ್ಮನ್ನು ಎಚ್ಚರಿಸುತ್ತಿದ್ದೇನೆ.' ಇದನ್ನೇ ಪುನಃ ಪುನಃ ಪುನರಾವರ್ತಿಸಿ ಹೇಳಿದರು. ಆ ವೇಳೆ ನಾನು ಹೇಳಿದೆ, 'ನೆರೆಹೊರೆಯವರಿಗೆ ವಾರೀಸು ಸೊತ್ತಿನಲ್ಲಿಯೂ ಪಾಲು ನೀಡಬೇಕೆಂದು ನಮ್ಮೊಂದಿಗೆ ಆದೇಶಿಸುತ್ತಾರೇನೋ!'[2]

ಇಸ್ಲಾಮಿನ ಪ್ರಕಾರ ಅಲ್ಲಾಹನೊಂದಿಗೆ ಮತ್ತು ಅಂತಿಮ ದಿನದ ಮೇಲೆ ಇರುವ ವಿಶ್ವಾಸದ ಸಂಪೂರ್ಣತೆಯ ರೂಪವಾಗಿ ನೆರೆಹೊರೆಯವರೊಂದಿಗಿನ ಉತ್ತಮ ಸಂಬಂಧವನ್ನು ಪರಾಮರ್ಶಿಸಲಾಗಿದೆ. ನೆರೆಹೊರೆಯವರನ್ನು ದ್ವೇಷಿಸುವವರು ಮತ್ತು ತೊಂದರೆ ನೀಡುವವರು ಯಾವ ಕಾರಣಕ್ಕೂ ಸ್ವರ್ಗ ಪ್ರವೇಶಕ್ಕೆ ಅರ್ಹರಾಗುವುದಿಲ್ಲವೆಂದು ಪ್ರವಾದಿವಚನಗಳ ಮೂಲಕ ಎಚ್ಚರಿಕೆ ನೀಡಲಾಗಿದೆ.

ಪ್ರವಾದಿವರ್ಯರು(ಸ) ಹೇಳಿದರು: لَا يَدْخُلُ الْجَنَّةَ مَنْ لَا يَأْمَنُ جَارُهُ بَوَائِقَهُ 'ಯಾರ ಉಪಟಳದಿಂದ ನೆರೆಹೊರೆಯವರು ನಿರ್ಭೀತರಾಗಿಲ್ಲವೋ ಅಂತಹವರು ಸ್ವರ್ಗ ಪ್ರವೇಶಿಸುವುದಿಲ್ಲ.'[3]

ಅಬೂ ಹುರೈರಾ(ರ) ವರದಿ ಮಾಡಿರುತ್ತಾರೆ:

أَنَّ رَسُولَ اللهِ ﷺ قَالَ: وَاللهِ لَا يُؤْمِنُ، وَاللهِ لَا يُؤْمِنُ، وَاللهِ لَا يُؤْمِنُ- قِيلَ: مَنْ يَا رَسُولَ اللهِ؟ قَالَ: اَلَّذِي لَا يَأْمَنُ جَارُهُ بَوَائِقَهُ

ಪ್ರವಾದಿ(ಸ) ಮೂರು ಬಾರಿ 'ಅವನು ಸತ್ಯವಿಶ್ವಾಸಿ ಅಲ್ಲ' ಎಂದು ಹೇಳಿದರು.

ಒಬ್ಬರು ಪ್ರಶ್ನಿಸಿದರು: ಪ್ರವಾದಿಗಳೇ, ಯಾರು? ಪ್ರವಾದಿ(ಸ) ಹೇಳಿದರು: ಯಾರ ಉಪಟಳದಿಂದ ನೆರೆಹೊರೆಯವರು ಸುರಕ್ಷಿತರಲ್ಲವೋ ಅವರು.[4]

ನೆರೆಹೊರೆಯವರನ್ನು ಉಪದ್ರವಿಸುವುದು ಮಾತ್ರವಲ್ಲ, ಉಪಕಾರ ಮಾಡದಿರುವುದು ಕೂಡ ಪಾಪವಾಗಿದೆ. ಸತ್ಯವಿಶ್ವಾಸಿಗಳೆಂದರೆ ಇತರರನ್ನು ಪರಿಗಣಿಸದೆ ತನ್ನಷ್ಟಕ್ಕೆ ಸಂಕುಚಿತವಾದಿಗಳಾಗಿರುವವರಲ್ಲ. ತನ್ನಂತೆಯೇ ತನ್ನ ನೆರೆಯವರನ್ನೂ ಪ್ರೀತಿಸಬೇಕಾದವರು. ಉಪಟಳದ ಭೀತಿಯಿದ್ದರೂ ಕೂಡ ನೆರೆಮನೆಯವನಿಗೆ ಮನೆ ಬಾಗಿಲನ್ನು ಮುಚ್ಚಬಾರದು ಎಂದು ಪ್ರವಾದಿ(ಸ) ಹೇಳಿರುವರು:

كَمْ مِنْ جَارٍ مُتَعَلِّقٍ بِجَارِهِ يَوْمَ الْقِيَامَةِ، يَقُولُ: يَا رَبِّ، هٰذَا أَغْلَقَ بَابَهُ دُونِي، فَمَنَعَ مَعْرُوفَهُ

ಅಂತ್ಯದಿನದಂದು ಎಷ್ಟೋ ಮಂದಿ ತಮ್ಮ ನೆರೆಮನೆಯವರೊಂದಿಗೆ ದೇವನ ಸನ್ನಿಧಿಯಲ್ಲಿ ಹಾಜರಾಗುವರು. ನೆರೆಮನೆಯವನು ಹೇಳುವನು: ನನ್ನ ಪ್ರಭೂ! ಇವನು ನನ್ನ ಮುಂದೆ ಬಾಗಿಲನ್ನು ಮುಚ್ಚಿಬಿಡುತ್ತಿದ್ದನು ಮತ್ತು ಯಾವ ಉಪಕಾರವನ್ನೂ ಮಾಡುತ್ತಿರಲಿಲ್ಲ.[5]

ವ್ಯಕ್ತಿಯ ಒಳಿತು ಮತ್ತು ಜೀವನದ ಪಾವಿತ್ರ್ಯತೆಯ ಬಗ್ಗೆ ತೀರ್ಮಾನಿಸುವಲ್ಲಿ ನೆರೆ ಮನೆಯವನ ಮಾತು ಅಂತಿಮವಾಗಿರುತ್ತದೆ ಎಂದೂ ಪ್ರವಾದಿಯವರು(ಸ) ಎಚ್ಚರಿಸಿ ರುವರು. ಸಹಜೀವಿಗಳೊಂದಿಗೆ ಕೆಟ್ಟ ರೀತಿಯಲ್ಲಿ ವ್ಯವಹರಿಸಿದ ವ್ಯಕ್ತಿ ಎಷ್ಟು ದೊಡ್ಡ ಭಕ್ತನೂ ಪರಿಶುದ್ಧನೂ ಆಗಿದ್ದರೂ ದೇವನ ಸನ್ನಿಧಿಯಲ್ಲಿ ಬೆಲೆ ಇಲ್ಲದಂತವನಾಗುವನು. ಇಬ್ನು ಮಸ್‌ಊದ್(ರ) ಹೇಳಿರುವರು:

قَالَ رَجُلٌ لِلنَّبِيِّ ﷺ: كَيْفَ لِي أَنْ أَعْلَمَ إِذَا أَحْسَنْتُ أَوْ إِذَا أَسَأْتُ؟ فَقَالَ النَّبِيُّ ﷺ: إِذَا سَمِعْتَ جِيرَانَكَ يَقُولُونَ: قَدْ أَحْسَنْتَ فَقَدْ أَحْسَنْتَ، وَإِذَا سَمِعْتَ يَقُولُونَ: قَدْ أَسَأْتَ فَقَدْ أَسَأْتَ

ಒಬ್ಬರು ಪ್ರವಾದಿವರ್ಯರ(ಸ) ಸನ್ನಿಧಿಗೆ ಬಂದು ಪ್ರಶ್ನಿಸಿದರು: 'ನಾನು ಒಳಿತು ಮಾಡುವವನೋ ಕೆಡುಕು ಮಾಡುವವನೋ ಎಂದು ಹೇಗೆ ತಿಳಿದುಕೊಳ್ಳಬಹುದು? ಪ್ರವಾದಿ(ಸ) ಹೇಳಿದರು: ನಿನ್ನ ನೆರೆಮನೆಯವನು ನೀನು ಒಳಿತು ಮಾಡುವವನೆಂದು ಹೇಳಿದರೆ ನೀನು ಒಳಿತನ್ನು ಮಾಡುವವನಾಗಿರುವಿ ಅಥವಾ ಅವನು ನೀನು ಕೆಡುಕು ಮಾಡುವವನೆಂದು ಹೇಳಿದರೆ ನೀನು ಕೆಡುಕು ಮಾಡುವವನು ಎಂದು ಅರ್ಥ.'[6]

ನೆರೆಹೊರೆಯವರೊಂದಿಗಿನ ಸಂಬಂಧದ ವಿಷಯದಲ್ಲಿ ಬಹಳ ಕ್ಷುಲ್ಲಕವೆಂದು ನಾವು ಪರಿಗಣಿಸುವ ವಿಷಯಗಳ ಬಗ್ಗೆಯೂ ಪ್ರವಾದಿ(ಸ) ಮಾತನಾಡಿದ್ದಾರೆ. ನೆರೆ

ಮನೆಯವರ ಅನುಮತಿಯಿಲ್ಲದೆ ನಿಮ್ಮ ಕಟ್ಟಡವನ್ನು ಎತ್ತರಕ್ಕೇರಿಸಿ, ಅವರ ಮನೆಗೆ ಗಾಳಿ ಬೆಳಕು ಬಾರದಂತೆ ತಡೆಯುವುದರಿಂದ ಹಿಡಿದು, ಏನಾದರೂ ಆಹಾರ ತಯಾರಿಸಿ ಅದರ ಪರಿಮಳದಿಂದ ನೆರೆಮನೆಯವರಿಗೆ ಆಸೆ ಉಂಟಾಗುವಂತೆ ಮಾಡುವ ವಿಷಯಗಳ ವರೆಗೆ ಪ್ರತಿಯೊಂದರ ಕುರಿತೂ ಪ್ರವಾದಿ(ಸ) ಹೇಳಿರುತ್ತಾರೆ.

ಹಿರಿಯರ ದ್ವಿಮುಖ ನೀತಿಯ ಬಗ್ಗೆ ಮಕ್ಕಳಿಗೆ ಯಾವುದೇ ಅರಿವಿರುವುದಿಲ್ಲ. ಅವರ ಮಧ್ಯೆ ಕುಬೇರ–ಕುಚೇಲರ ವ್ಯತ್ಯಾಸವಿಲ್ಲ. ಸಿರಿವಂತರ ಮನೆಯ ಸಿಹಿತಿಂಡಿಗಳು ತಮಗೂ ಲಭ್ಯವಾಗಬೇಕೆಂದು ಬಡ ಮಕ್ಕಳು ಬಯಸುತ್ತಾರೆ. ಇದು ಸಿಗದೆ ಹೋದಾಗ ಅವರ ಮುಗ್ಧ ಮನಸ್ಸು ನೋಯುತ್ತದೆ. ಇದನ್ನು ತಪ್ಪಿಸಲು ನೀವು ಹಣ್ಣುಗಳನ್ನು ಖರೀದಿಸಿ ತಂದರೆ ಅದರ ಒಂದು ಪಾಲು ನೆರೆಮನೆಯವರಿಗೆ ನೀಡಬೇಕೆಂದು ಆದೇಶಿಸಲಾಗಿದೆ. ಇದು ಸಾಧ್ಯವಿಲ್ಲ ಎಂದಾದರೆ, ಕನಿಷ್ಠ ಅದನ್ನು ರಹಸ್ಯವಾಗಿ ಇರಿಸಬೇಕೆಂದು ಪ್ರವಾದಿ(ಸ) ಹೇಳಿಕೊಟ್ಟಿರುವರು. ಪ್ರಮುಖ ಸಹಾಬಿಯಾದ ಅಬೂದರ್ ಗಿಫ್ಫಾರಿಯವರಿಗೆ(ರ) ಪ್ರವಾದಿಯವರು(ಸ) ಈ ರೀತಿ ಉಪದೇಶಿಸಿರುವರು:

يَا أَبَا ذَرٍّ إِذَا طَبَخْتَ مَرَقَةً، فَأَكْثِرْ مَاءَهَا، وَتَعَاهَدْ جِيرَانَكَ

ಅಬೂದರ್! ನೀನು ಪದಾರ್ಥ ಬೇಯಿಸಿದರೆ ಅದಕ್ಕೆ ಸ್ವಲ್ಪ ಹೆಚ್ಚು ನೀರು ಸೇರಿಸಿಯಾದರೂ ನೆರೆಮನೆಯವರಿಗೆ ನೀಡಬೇಕು.[7]

---

1. ಬುಖಾರಿ: 6014, ಮುಸ್ಲಿಮ್: 2624, ಮುಸ್ಲಿಮ್: 2624, ತಿರ್ಮಿದಿ: 1942, ಅಬೂದಾವುದ್: 5151, ಇಬ್ನುಮಾಜ: 3673, ಇಬ್ನುಹಿಬ್ಬಾನ್: 512.
2. ತಬ್ರಾನಿ, ಮಜ್ಮಉಸ್ಸವಾಇದ್: 8/165.
3. ಮುಸ್ಲಿಮ್: 46.
4. ಬುಖಾರಿ: 6016, ಅಹ್ಮದ್: 2/288.
5. ಬುಖಾರಿ: ಅದಬುಲ್ ಮುಫ್ರದ್: 111, ಅಸ್ಬಹಾನಿ: ಅತ್ತರ್ಗೀಬ್ ವತ್ತರ್ಹೀಬ್: 848.
6. ಇಬ್ನುಮಾಜ.
7. ಮುಸ್ಲಿಮ್: 4/2025.

35. ಒಳ್ಳೆಯ ಮತ್ತು ಕೆಟ್ಟ ಗೆಳೆಯರು

عَنْ أَبِي مُوسَى الْأَشْعَرِي رَضِيَ اللَّهُ عَنْهُ، عَنِ النَّبِيِّ ﷺ قَالَ: "مَثَلُ الْجَلِيسِ الصَّالِحِ وَالسُّوْءِ كَحَامِلِ الْمِسْكِ وَنَافِخِ الْكِيرِ، فَحَامِلُ الْمِسْكِ إِمَّا أَنْ يُحْذِيَكَ، وَإِمَّا أَنْ تَبْتَاعَ مِنْهُ، وَإِمَّا أَنْ تَجِدَ مِنْهُ رِيحًا طَيِّبَةً، وَنَافِخُ الْكِيرِ إِمَّا أَنْ يَحْرِقَ ثِيَابَكَ، وَإِمَّا أَنْ تَجِدَ رِيحًا خَبِيثَةً

ಅಬೂ ಮೂಸಾ ಅಶ್‌ಅರಿ(ರ) ವರದಿ ಮಾಡಿರುತ್ತಾರೆ. ಒಳ್ಳೆಯ ಮತ್ತು ಕೆಟ್ಟ ಗೆಳೆಯರ ಉದಾಹರಣೆಯು ಕಸ್ತೂರಿ ಮಾರುವವನು ಮತ್ತು ಒಲೆಯಲ್ಲಿ ಊದುವವನಂತೆ (ಕಮ್ಮಾರನಂತೆ) ಇರುತ್ತದೆ. ಕಸ್ತೂರಿ ಮಾರುವವನ ಸಹವಾಸದಲ್ಲಿ ಅವನು ನಿಮಗೆ ಕಸ್ತೂರಿಯನ್ನು ನೀಡಬಹುದು ಅಥವಾ ನೀವು ಅವನಿಂದ ಅದನ್ನು ಖರೀದಿಸಬಹುದು ಅಥವಾ ಅದರ ಪರಿಮಳವಾದರೂ ನಿಮಗೆ ಸಿಗುವುದು. ಆದರೆ ಕಮ್ಮಾರನು ನಿಮ್ಮ ಬಟ್ಟೆಯನ್ನು ಸುಟ್ಟುಬಿಡಬಹುದು ಅಥವಾ ಅದರ ದುರ್ಗಂಧವನ್ನು ನಿಮಗೆ ಅನುಭವಿಸಬೇಕಾಗಿ ಬರುವುದು.*

ಗೆಳೆತನ ಎಂಬುದು ಒಬ್ಬ ಮನುಷ್ಯನ ಜೀವನದಲ್ಲಿ ಅತಿಹೆಚ್ಚು ಪ್ರಬಾವವನ್ನುಂಟು ಮಾಡುವ ವಿಷಯವಾಗಿದೆ. ಒಬ್ಬ ವ್ಯಕ್ತಿಯ ಸ್ವಭಾವವನ್ನು ರೂಪೀಕರಿಸುವಲ್ಲಿ, ವ್ಯಕ್ತಿತ್ವ ನಿರ್ಮಾಣದಲ್ಲಿ ಗೆಳೆತನ ನಿರ್ವಹಿಸುವ ಪಾತ್ರ ಬಹಳ ನಿರ್ಣಾಯಕವಾದುದಾಗಿದೆ. ಒಳ್ಳೆಯ ಗೆಳೆಯರ ಸಾಂಗತ್ಯದಲ್ಲಿ ಜೀವಿಸುತ್ತಿರುವಾಗ ಒಳ್ಳೆಯ ಗುಣಸ್ವಭಾವಗಳು, ಅಭ್ಯಾಸಗಳು ಬೆಳೆಯುತ್ತವೆ. ಕೆಟ್ಟವರ ಸಂಗದಲ್ಲಿ ಬಿದ್ದರೆ, ಅವರ ಸ್ವಭಾವಗಳು ಮತ್ತು ಜೀವನ ರೀತಿಗಳು ಲಭಿಸುತ್ತವೆ. ಪ್ರವಾದಿ(ಸ) ಹೇಳಿರುವರು:

* ಇಮಾಮ್ ಬುಖಾರಿ: 2101, ಮುಸ್ಲಿಮ್: 2628 ಮುಂತಾದವರು ಉದ್ಧರಿಸಿರುವ ಪ್ರಬಲ ಹದೀಸ್.

اَلْمَرْأُ عَلَى دِيْنِ خَلِيْلِهِ، فَالْيَنْظُرْ أَحَدُكُمْ مَنْ يُخَالِلُ

'ಮನುಷ್ಯನು ಅವನ ಗೆಳೆಯನ ಧರ್ಮದಲ್ಲಿರುತ್ತಾನೆ. ಆದುದರಿಂ ಯಾರೊಂದಿಗೆ ಗೆಳೆತನ ಬೆಳೆಸಬೇಕೆಂಬುದರ ಬಗ್ಗೆ ಅವನು ಆಲೋಚಿಸಲಿ.'[1]

ಒಳ್ಳೆಯ ಮತ್ತು ಕೆಟ್ಟ ಗೆಳೆತನದ ಕುರಿತು ಬಹಳ ಸುಂದರವಾದ ಉದಾಹರಣ ನೀಡಿದ ಪ್ರವಾದಿವಚನವಿದು. ಒಳ್ಳೆಯ ಗೆಳೆಯನನ್ನು ಸುತ್ತಮುತ್ತಲೂ ಸುಗಂಧ ಪಸರಿಸುವ ಕಸ್ತೂರಿ ಮಾರಾಟಗಾರನಿಗೆ ಹೋಲಿಸಲಾಗಿದೆ. ಅವನನ್ನು ಯಾರೂ ಇಷ್ಟ ಪಡದೆ ಇರುವುದಿಲ್ಲ. ಅವರ ಉಪಸ್ಥಿತಿಯನ್ನು ಎಲ್ಲರೂ ಇಷ್ಟಪಡುತ್ತಾರೆ. ಸದ್ಗುಣ ಸಂಪನ್ನರು, ಕೆಟ್ಟವ್ಯಕ್ತಿಗಳು, ಅಪರಾಧಿಗಳು, ಸದ್ಭಕ್ತರು ಎಲ್ಲರೂ ಒಂದೇ ರೀತಿಯಲ್ಲಿ ಅವರನ್ನು ಪ್ರೀತಿಸುತ್ತಾರೆ. ಯಾವಾಗಲೂ ಸುಗಂಧ ಮಾತ್ರ ಅವರಿಂದ ಹೊ ಹೊಮ್ಮುತ್ತಿರುತ್ತದೆ.

ಅತ್ಯುತ್ತಮ ನೈತಿಕತೆ ಮತ್ತು ಸದ್ಗುಣ ಉಳ್ಳವರು ಈ ಕಸ್ತೂರಿ ಮಾರಾಟಗಾ ನಂತೆ ಇರುತ್ತಾರೆ. ಸದ್ಗುಣ ಸಂಪನ್ನತೆ ಮತ್ತು ಸಚ್ಚಾರಿತ್ರ್ಯದಿಂದ ಅವರು ತಮ್ಮ ಸುತ್ತ ಮುತ್ತಲಿರುವ ಎಲ್ಲರಿಗೂ ಸುಗಂಧವನ್ನು ಹರಡುತ್ತಾರೆ. ಅವರ ಗೆಳೆತನ ಸಂಪಾದಿಸುವ ಭಾಗ್ಯ ದೊರೆತರೆ ಅವರ ವ್ಯಕ್ತಿತ್ವದಲ್ಲಿ ಅನಿರ್ವಚನೀಯ ಸುಗಂಧವನ್ನು ಅನುಭವಿಸಲು ಸಾಧ್ಯ ವಾಗುತ್ತದೆ. ಒಮ್ಮೆ ಪ್ರವಾದಿವರ್ಯರು(ಸ) ಒಳ್ಳೆಯ ಗೆಳೆಯರ ಕುರಿತು ಈ ರೀತಿ ಹೇಳಿರುವರು:

مَثَلُ الْأَخَوَيْنِ إِذَا الْتَقَا مَثَلُ الْيَدَيْنِ، تَغْسِلُ إِحْدَاهُمَا الأُخْرَى، وَمَا الْتَقَى مُؤْمِنَانِ قَطُّ إِلَّا أَفَادَ اللّٰهُ أَحَدَهُمَا مِنْ صَاحِبِهِ خَيْرًا

'ಇಬ್ಬರು ಗೆಳೆಯರು ಎರಡು ಕೈಗಳಂತೆ. ಒಂದು ಇನ್ನೊಂದನ್ನು ಶುದ್ಧಗೊಳಿ ಸಲು ಸಹಾಯ ಮಾಡುತ್ತಿರುತ್ತದೆ. ವಿಶ್ವಾಸಿಗಳಾದ ಇಬ್ಬರು ಪರಸ್ಪರ ಸಂಪರ್ಕಿಸುವಾಗ ಒಬ್ಬರಿಂದ ಇನ್ನೊಬ್ಬರಿಗೆ ಏನಾದರೊಂದು ಒಳಿತನ್ನು ಅಲ್ಲಾಹನು ನೀಡದ ಇರುವುದಿಲ್ಲ.'[2]

ಕೆಟ್ಟ ಗೆಳೆಯರು ಒಲೆಯಲ್ಲಿ ಊದುವವರಂತೆ. ಒಲೆಯಲ್ಲಿ ಊದುವಾಗ ಸದಾ ಬೆಂಕಿಯು ಹೊರ ಹೊಮ್ಮುತ್ತಿರುತ್ತದೆಯಲ್ಲವೇ? ಜಾಗರೂಕತೆಯನ್ನು ಪಾಲಿಸದ ಯಾರಿಗೂ ಅವನ ಬಳಿ ಹೋಗಿ ಕುಳಿತುಕೊಳ್ಳಲು ಸಾಧ್ಯವಿಲ್ಲ. ಇಲ್ಲವಾದಲ್ಲಿ ಬಟ್ಟೆಯು ಸುಡಬಹುದು. ದೇಹಕ್ಕೆ ಬೆಂಕಿ ತಾಗಿ ಬೊಬ್ಬೆಗಳಾಗಬಹುದು. ಸುಗಂಧಕ್ಕೆ ಬದಲಾಗಿ

ದುರ್ಗಂಧವು ಹೊರಹೊಮ್ಮುತ್ತಿರುವುದು. ಯಾರೂ ಅಲ್ಲಿ ಹೋಗಿ ಕುಳಿತುಕೊಳ್ಳಲು ಇಷ್ಟಪಡುವುದಿಲ್ಲ. ಕೆಟ್ಟ ಗೆಳೆಯರು ಇದೇ ರೀತಿ ಇರುತ್ತಾರೆ. ಅವನೊಂದಿಗೆ ಗೆಳೆತನ ಬೆಳೆಸುವವರ ಜೀವನ ಮತ್ತು ಸಚ್ಚಾರಿತ್ರ್ಯವನ್ನೆಲ್ಲ ತನ್ನ ದುರ್ವರ್ತನೆಯೆಂಬ ಬೆಂಕಿಯಿಂದ ಕರಟಿಬಿಡುವನು. ದುರ್ಗಂಧ ಮತ್ತು ಮಾಲಿನ್ಯವನ್ನು ಸದಾ ಇತರರಿಗೆ ಪಸರಿಸುತ್ತಿರುವನು. ಇಂತಹ ವ್ಯಕ್ತಿಗಳ ಗೆಳೆತನ ಬೆಳೆಸುವಾಗ ಬಹಳ ಜಾಗರೂಕರಾಗಿರಬೇಕೆಂದು ಪ್ರವಾದಿ(ಸ) ಎಚ್ಚರಿಸಿರುವರು.

ಅಬೂದರ್ರ್ ಗಿಫ್ಫಾರಿ(ರ) ವರದಿ ಮಾಡಿರುವ ಪ್ರವಾದಿವಚನವೊಂದು ಹೀಗಿದೆ:

اَلْوَحْدَةُ خَيْرٌ مِنْ جَلِيْسِ السُّوْءِ، وَالْجَلِيْسُ الصَّالِحِ خَيْرٌ مِنَ الْوَحْدَةِ، وَإِمْلَاءُ الْخَيْرِ خَيْرٌ
مِنَ السُّكُوتِ وَالسُّكُوتُ خَيْرٌ مِنْ إِمْلَاءِ الشَّرِّ

'ಕೆಟ್ಟ ಗೆಳೆತನಕ್ಕಿಂತ ವ್ಯಕ್ತಿ ಒಬ್ಬಂಟಿಗನಾಗಿರುವುದು ಉತ್ತಮ. ಸಚ್ಚರಿತ ಗೆಳೆಯರ ಸಹವಾಸವು ಒಬ್ಬಂಟಿಗನಾಗಿರುವುದಕ್ಕಿಂತ ಉತ್ತಮವಾಗಿದೆ. ಒಳ್ಳೆಯ ಮಾತುಕತೆಗಳು ಮೌನಕ್ಕಿಂತ ಉತ್ತಮ. ಮೌನವು ಕೆಟ್ಟ ಮಾತುಕತೆಗಳಿಗಿಂತ ಉತ್ತಮ.'[3]

ಗೆಳೆಯರನ್ನು ಆಯ್ದುಕೊಳ್ಳುವಾಗ ಪಾಲಿಸಬೇಕಾದ ಜಾಗರೂಕತೆಯ ಬಗ್ಗೆ ಇಮಾಮ್ ಜಅ್‌ಫರ್ ಸಾದಿಕ್(ರ) ಹೇಳಿರುವುದು ಹೀಗೆ – ಸುಳ್ಳು ಹೇಳುವ, ಬುದ್ಧಿ ಹೀನ, ಜಿಪುಣ, ಹೇಡಿ, ದುರ್ನಡತೆಯವರು ಮುಂತಾದವರೊಂದಿಗೆ ನೀನು ಗೆಳೆತನ ಬೆಳೆಸಬಾರದು. ಸುಳ್ಳು ಹೇಳುವವನು ನಿನ್ನನ್ನು ವಂಚಿಸುವನು. ಮರುಭೂಮಿಯ ಮರೀಚಿಕೆಯಂತೆ ಅವರಿರುತ್ತಾರೆ. ಹತ್ತಿರವಿರುವುದನ್ನು ದೂರವಾಗಿಸಿ ದೂರದಲ್ಲಿರುವುದನ್ನು ಹತ್ತಿರವಾಗಿಸಿ ತೋರಿಸುವರು. ಬುದ್ಧಿಹೀನರಿಂದ ನಿನಗೆ ಯಾವ ಉಪಕಾರವೂ ಆಗುವುದಿಲ್ಲ. ಉಪಕಾರ ಮಾಡಲು ಹೊರಟರೂ ಅದು ಕೊನೆಯಲ್ಲಿ ಉಪದ್ರವವಾಗಿ ಬಿಡುವುದು. ಹೇಡಿಯು ಅತ್ಯಂತ ನಿರ್ಣಾಯಕ ಪರಿಸ್ಥಿತಿಯಲ್ಲಿ ನಿನಗೆ ಕೈಕೊಟ್ಟು ಹೋಗುವನು. ಜಿಪುಣನು ನಿನಗೆ ಅವನ ಅಗತ್ಯ ಬೀಳುವ ಸಮಯದಲ್ಲಿ ನಿನ್ನೊಂದಿಗೆ ಸಂಬಂಧವನ್ನು ಕಡಿದುಕೊಳ್ಳುವನು. ದುರ್ನಡತೆಯವನು ಒಂದು ಹೊತ್ತಿನ ಆಹಾರಕ್ಕೆ ಅಥವಾ ನಿಕೃಷ್ಟವಾದ ಬೆಲೆಗೆ ನಿನ್ನನ್ನೇ ಮಾರಿ ಬಿಡಲೂ ಹಿಂಜರಿಯಲಾರನು.

ಗೆಳೆತನದ ಬಗ್ಗೆ ಖಲೀಫಾ ಮಾಮೂನ್ ಈ ರೀತಿ ಹೇಳಿರುವರು: ಗೆಳೆಯರಲ್ಲಿ ಮೂರು ವಿಧ. ಒಂದು ವಿಭಾಗವು ಆಹಾರದಂತೆ, ಅದಿಲ್ಲದೆ ಯಾರಿಗೂ ಜೀವಂತವಿರಲು ಸಾಧ್ಯವಿಲ್ಲ. ಎರಡನೆಯ ವಿಭಾಗ ರೋಗಕ್ಕೆ ಔಷಧದಂತೆ. ಅವಶ್ಯಕತೆ ಇದ್ದಾಗ ಮಾತ್ರ ಉಪಯೋಗಿಸಬಹುದು. ಸದಾ ಅವರ ಅಗತ್ಯ ಬೀಳುವುದಿಲ್ಲ. ಇನ್ನೊಂದು

ವಿಭಾಗ ರೋಗದಂತೆ. ಅವರ ಸಾನಿಧ್ಯವನ್ನು ಯಾರೂ ಇಷ್ಟಪಡುವುದಿಲ್ಲ. ಅದಕ್ಕೆ ಬಲಿ ಬಿದ್ದರೆ ಶರೀರವೇ ಅಲ್ಲೋಲಕಲ್ಲೋಲವಾಗುತ್ತದೆ.

ಸಂಕ್ಷಿಪ್ತವಾಗಿ ಸದ್ಗುಣ ಸಂಪನ್ನರಾದ ಜನರೊಂದಿಗೆ ಸೇರಿ ಜೀವಿಸಬೇಕು. ದೇವನ ಸ್ಮರಣೆಯಿಂದ, ಅವನ ಆರಾಧನೆಯಿಂದ, ಇಸ್ಲಾಮಿನ ಮೌಲ್ಯಗಳಿಂದ ದೂರ ಗೊಳಿಸುವ ಗೆಳೆತನ ನಷ್ಟದ ವ್ಯಾಪಾರವಾಗಿದೆ. ಧಾರ್ಮಿಕತೆಯುಳ್ಳ ಎಷ್ಟೋ ವ್ಯಕ್ತಿಗಳನ್ನು ಕೆಟ್ಟ ಗೆಳೆತನವು ನಾಶಪಡಿಸಿಬಿಟ್ಟಿದೆ. ಗೆಳೆಯರ ಪ್ರೇರಣೆಯಿಂದ ಕೆಟ್ಟ ಅಭ್ಯಾಸಗಳಿಗೆ ಬಲಿಬಿದ್ದ ಅದೆಷ್ಟೋ ಜನರಿದ್ದಾರೆ. ಕೆಟ್ಟ ಗೆಳೆತನವು ನರಕಕ್ಕೆ ತಲುಪಿಸಿದ ವ್ಯಕ್ತಿಯ ವಿಲಾಪವನ್ನು ಕುರ್‌ಆನ್ ಚಿತ್ರಿಸುತ್ತದೆ, 'ಆ ದಿನ ಅಕ್ರಮಿಯು ತನ್ನ ಕೈಗಳನ್ನು ಕಚ್ಚಿಕೊಳ್ಳುವನು ಮತ್ತು ಅಕಟಾ! ನಾನು ಪ್ರವಾದಿಯೊಂದಿಗೆ ಸಹಕರಿಸುತ್ತಿದ್ದರೆ, ಅಯ್ಯೋ ನನ್ನ ದುರ್ದೆಸೆಯೇ! ಅಕಟಾ! ನಾನು ಆ ವ್ಯಕ್ತಿಯನ್ನು ಮಿತ್ರನಾಗಿ ಮಾಡಿಕೊಳ್ಳದಿರುತ್ತಿದ್ದರೆ, ಅವನ ದುರ್ಬೋಧನೆಗೆ ಮರುಳಾಗಿ ನನ್ನ ಬಳಿಗೆ ಬಂದಿದ್ದ ಸದ್ಬೋಧನೆಯನ್ನು ನಾನು ಸ್ವೀಕರಿಸಲಿಲ್ಲ ಎನ್ನುವನು.' **(ಅಲ್ ಫುರ್ಕಾನ್: 27-29)**

---

1. ಅಬೂದಾವೂದ್: 4833, ತಿರ್ಮಿದಿ: 2378, ಹಾಕಿಮ್: 4/171.
2. ದೈಲಮಿ - ಮುಸ್ನದ್.
3. ಹಾಕಿಮ್ - ಮನಾಕಿಬ್, ಬೈಹಕಿ, ಖರಾಇತಿ ಮಕಾರಿಮುಲ್ ಅಖ್ಲಾಕ್: 708.

36. ಸಂಬಂಧಗಳನ್ನು ಸರಿಪಡಿಸಿಕೊಳ್ಳಿರಿ

عَنْ أَبِي الدَّرْدَاءِ رَضِيَ اللَّهُ عَنْهُ، قَالَ: قَالَ رَسُولُ اللَّهِ ﷺ: أَلَا أُخْبِرُكُمْ بِأَفْضَلَ مِنْ دَرَجَةِ الصِّيَامِ وَالصَّلَاةِ وَالصَّدَقَةِ؟ قَالُوا: بَلَى، قَالَ: إِصْلَاحُ ذَاتِ الْبَيْنِ، فَإِنَّ فَسَادَ ذَاتِ الْبَيْنِ هِيَ الْحَالِقَةُ!

ಅಬೂದರ್ದಾ(ರ) ವರದಿ ಮಾಡಿರುತ್ತಾರೆ. ಪ್ರವಾದಿ(ಸ) ಪ್ರಶ್ನಿಸಿದರು: ಉಪವಾಸ, ನಮಾಝ್ ಮತ್ತು ದಾನಧರ್ಮಕ್ಕಿಂತ ವಿಶಿಷ್ಟವಾದ ಒಂದು ಕೆಲಸವನ್ನು ನಾನು ನಿಮಗೆ ತಿಳಿಸಿಕೊಡಲೇ? ಸಂಗಾತಿಗಳು ಹೇಳಿದರು: ಆಗಬಹುದು. ಪ್ರವಾದಿ(ಸ) ಹೇಳಿದರು: ಪರಸ್ಪರ ಸಂಬಂಧಗಳನ್ನು ಸರಿ ಪಡಿಸಿಕೊಳ್ಳಲು ಪ್ರಯತ್ನಿಸಿರಿ. ನಿಶ್ಚಯವಾಗಿಯೂ ಜನರ ಮಧ್ಯೆ ಉಂಟಾ ಗುವ ಛಿದ್ರತೆಯು ಎಲ್ಲವನ್ನೂ ಸರ್ವನಾಶ ಮಾಡಿ ಬಿಡುವುದು.*

ಸೌಹಾರ್ದಯುತವಾದ ಒಂದು ಸಮಾಜದ ನಿರ್ಮಾಣಕ್ಕೆ ಬಲಿಷ್ಠ ಸಂಬಂಧಗಳು ಅನಿವಾರ್ಯವಾಗಿವೆ. ಸಂಬಂಧಗಳು ದುರ್ಬಲಗೊಂಡರೆ, ಸಮಾಜವೇ ದುರ್ಬಲ ವಾಗುವುದು. ಆದುದರಿಂದ ಸಮಾಜದಲ್ಲಿ ಪ್ರತಿಯೊಂದು ಸಂಬಂಧವನ್ನು (ಅವು ಗಳೆಷ್ಟೇ ಕ್ಷುಲ್ಲಕವಾಗಿದ್ದರೂ) ಬಿರುಕು, ಛಿದ್ರತೆ ಬರದ ರೀತಿಯಲ್ಲಿ ಸಂರಕ್ಷಿಸುವುದು ಸಮಾಜದ ಪ್ರತಿಯೊಬ್ಬರ ಕರ್ತವ್ಯವಾಗಿರುತ್ತದೆ. ಇದರ ಪ್ರಾಮುಖ್ಯತೆಯನ್ನು ಮೇಲಿನ ಪ್ರವಾದಿ ವಚನವು ಸ್ಪಷ್ಟೀಕರಿಸುತ್ತದೆ.

ಪರಸ್ಪರ ಸಂಬಂಧಗಳನ್ನು ಸರಿಪಡಿಸಲು ಪ್ರಯತ್ನಿಸುವುದು ನಮಾಝ್,

* ಇಮಾಮ್ ತಿರ್ಮಿದಿ; 2509, ಅಬೂದಾವೂದ್: 4919, ಅಹ್ಮದ್: 6/444, ಇಬ್ನು ಹಿಬ್ಬಾನ್: 5070 ಮುಂತಾದವರು ಈ ಪ್ರವಾದಿವಚನವನ್ನು ಉದ್ಧರಿಸಿರುವರು. ಇದರ ವರದಿಯ ಪರಂಪರೆಯು ಸಹೀಹ್ ಆಗಿದೆಯೆಂದು ಇಮಾಮ್ ತಿರ್ಮಿದಿ ಸಾಕ್ಷಿ ಹೇಳುತ್ತಾರೆ. (ಸುನನುತ್ತಿರ್ಮಿದಿ, ಭಾಗ: 4, ಪುಟ: 664)

ಉಪವಾಸ ಮತ್ತಿತರ ಆರಾಧನಾ ಕರ್ಮಗಳಿಗಿಂತ ಶ್ರೇಷ್ಠವಾಗಿದೆ. ಆರಾಧನೆಗಳೆಂದರೆ ಅಲ್ಲಾಹನು ಮನುಷ್ಯರ ಮೇಲೆ ಕಡ್ಡಾಯಗೊಳಿಸಿರುವ ಕರ್ಮಗಳಾಗಿರುತ್ತವೆ. ವ್ಯಕ್ತಿ ಮತ್ತು ಸಮಾಜದ ಉನ್ನತಿ ಮತ್ತು ಅಭಿವೃದ್ಧಿ ಇದರ ಹಿಂದಿರುವ ಉದ್ದೇಶಗಳಾಗಿವೆ. ಆದರೆ ನಮಾಝ್ ಮತ್ತಿತರ ಆರಾಧನಾ ಕರ್ಮಗಳನ್ನು ನಿರ್ವಹಿಸಬೇಕಿದ್ದರೆ, ವ್ಯಕ್ತಿ ಮತ್ತು ಸಮಾಜ ನೆಲೆನಿಂತಿರಬೇಕು. ಅದರ ನೆಲೆನಿಲ್ಲುವಿಕೆಯು ಸಂಬಂಧಗಳ ಮಧ್ಯೆ ಇರುವ ಒಗ್ಗಟ್ಟು ಮತ್ತು ಐಕ್ಯದ ಮೇಲೆ ನೆಲೆ ನಿಂತಿರುತ್ತದೆ. ಪರಸ್ಪರ ಜಗಳ ಕಾಯುವ, ಹೊಡೆದಾಡಿಕೊಳ್ಳುವ ಜನರು ಇರುವಲ್ಲಿ ಒಂದು ಆರೋಗ್ಯಪೂರ್ಣ ಸಮಾಜ ನೆಲೆ ನಿಲ್ಲಲು ಹೇಗೆ ತಾನೇ ಸಾಧ್ಯ? ಸ್ವಂತ ಸಹೋದರನೊಂದಿಗೆ ದ್ವೇಷ ಹಗೆತನ ಬೆಳೆಸಿ ಕೊಂಡಿರುವ ವ್ಯಕ್ತಿಯು ದೇವನ ಮುಂದೆ ನಿಷ್ಕಳಂಕತೆಯಿಂದ ಕೈ ಮೇಲೆತ್ತಿ ಪ್ರಾರ್ಥಿ ಸಲು ಸಾಧ್ಯವೇ? ಧರ್ಮದಲ್ಲಿ ಆರಾಧನೆಗಳಿಗಿಂತ ಐಕ್ಯತೆಗೆ ಹೆಚ್ಚು ಪ್ರಾಮುಖ್ಯತೆ ಯಿರುವುದು ಈ ಕಾರಣದಿಂದಾಗಿರುತ್ತದೆ. ಪ್ರವಾದಿವರ್ಯರು(ಸ) ಹೇಳಿರುವರು: أَفْضَلُ الصَّدَقَةِ إِصْلَاحُ ذَاتِ الْبَيْنِ 'ದಾನಧರ್ಮಗಳಲ್ಲಿ ಅತಿಶ್ರೇಷ್ಠವಾದುದು ಭಿನ್ನತೆ ಯಿರುವ ಎರಡು ವ್ಯಕ್ತಿಗಳ ಮಧ್ಯೆ ಸಾಮರಸ್ಯವನ್ನುಂಟು ಮಾಡುವುದಾಗಿದೆ.'[1]

ಅಬೂ ಅಯ್ಯೂಬ್(ರ) ಹೇಳುತ್ತಾರೆ. ಪ್ರವಾದಿ(ಸ) ಒಂದು ದಿನ ನನಗೆ ಹೀಗೆ ಉಪದೇಶ ನೀಡಿದರು:

يَا أَبَا أَيُّوبٍ، أَلَا أَدُلُّكَ عَلَى صَدَقَةٍ يُحِبُّهَا اللهُ وَرَسُولُهُ؟ تُصْلِحُ بَيْنَ النَّاسِ إِذَا تَبَاغَضُوا وَتَفَاسَدُوا

'ಓ ಅಯ್ಯೂಬ್, ಅಲ್ಲಾಹ್ ಮತ್ತು ಅವನ ರಸೂಲರು ಅತಿ ಹೆಚ್ಚು ಇಷ್ಟಪಡುವ ಒಂದು ದಾನಧರ್ಮದ ಕುರಿತು ನಾನು ನಿಮಗೆ ಹೇಳಿಕೊಡಲೇ? ಪರಸ್ಪರ ಭಿನ್ನತೆಯನ್ನು ಇಟ್ಟುಕೊಂಡು ದ್ವೇಷವನ್ನು ಬೆಳೆಸುತ್ತಿರುವ ಜನರ ಮಧ್ಯೆ ಐಕ್ಯತೆ ಯನ್ನುಂಟು ಮಾಡಲು ಶ್ರಮಿಸುವುದಾಗಿದೆ.'[2]

ಸುಳ್ಳು ಹೇಳುವುದನ್ನು ಧರ್ಮವು ಬಹಳ ಕಠಿಣ ಪದಗಳಲ್ಲಿ ನಿಷೇಧಿಸಿದೆ. ಆದರೆ ಜನರ ಮಧ್ಯೆ ಸೌಹಾರ್ದ ಮತ್ತು ಐಕ್ಯವನ್ನುಂಟು ಮಾಡುವುದಕ್ಕಾಗಿ ಒಬ್ಬ ವ್ಯಕ್ತಿಗೆ ಸುಳ್ಳು ಹೇಳಬೇಕಾಗಿ ಬಂದರೆ ಆ ವ್ಯಕ್ತಿ ತಪ್ಪಿತಸ್ಥನಲ್ಲ[3] ಎಂದು ಪ್ರವಾದಿ(ಸ) ನೆನಪಿಸಿರುವರು. ಇನ್ನೊಂದು ಸಂದರ್ಭದಲ್ಲಿ ಪ್ರವಾದಿ(ಸ) ಹೇಳಿದರು:

كُلُّ الْكَذِبِ يُكْتَبُ عَلَى ابْنِ آدَمَ إِلَّا فِي ثَلَاثٍ: رَجُلٌ يَكْذِبُ فِي إِصْلَاحٍ مَا بَيْنَ النَّاسِ،
أَوْ يَكْذِبُ امْرَأَتَهُ، أَوْ يَكْذِبُ فِي خَدِيعَةِ حَرْبٍ

'ಮೂರು ಸಂದರ್ಭವನ್ನು ಹೊರತುಪಡಿಸಿ, ಮನುಷ್ಯನು ಹೇಳುವ ಪ್ರತಿಯೊಂದು ಸುಳ್ಳನ್ನು ದಾಖಲಿಸಿಡಲಾಗುವುದು. ಜನರ ಮಧ್ಯೆ ಐಕ್ಯವನ್ನುಂಟು ಮಾಡಲಿಕ್ಕಾಗಿ ಹೇಳುವ ಸುಳ್ಳು, ಪತ್ನಿಯನ್ನು ತೃಪ್ತಿಪಡಿಸಲು ಪತಿ ಹೇಳುವ ಸುಳ್ಳು, ಯುದ್ಧ ಸಂದರ್ಭದಲ್ಲಿ ಯುದ್ಧ ತಂತ್ರಗಳ ಭಾಗವಾಗಿ ಹೇಳುವ ವಿಷಯಗಳು.'[4]

ಅಬೂ ಕಾಹಿಲ್(ರ) ಹೇಳುತ್ತಾರೆ. ಪ್ರವಾದಿಯವರ(ರ) ಇಬ್ಬರು ಸಂಗಾತಿಗಳ ಮಧ್ಯೆ ಸ್ವಲ್ಪ ಅಸಮಾಧಾನವಿತ್ತು. ಹಾಗೆ ಅವರು ಜಗಳಾಡಿದರು. ಅವರ ಮಧ್ಯೆ ಸಂಧಾನವನ್ನುಂಟು ಮಾಡಲಿಕ್ಕಾಗಿ ನಾನು ಒಬ್ಬರ ಬಳಿಗೆ ಹೋಗಿ ಹೇಳಿದೆ, 'ನಿನಗೇನಾಗಿದೆ? ನಿನ್ನ ಗೆಳೆಯ ನಿನ್ನನ್ನು ಹೊಗಳುವುದನ್ನು ಮತ್ತು ನಿನಗಾಗಿ ಪ್ರಾರ್ಥಿಸುವುದನ್ನು ನಾನು ಕೇಳಿದ್ದೇನೆ.' ಬಳಿಕ ಎರಡನೆಯವನ ಬಳಿಗೆ ಹೋಗಿಯೂ ಇದೇ ರೀತಿ ಹೇಳಿದೆ. ಹೀಗೆ ಅವರ ಮಧ್ಯೆ ಜಗಳ ನಿಂತಿತು. ಅವರು ಮೊದಲಿನಂತೆಯೇ ಮತ್ತೆ ಗೆಳೆಯರಾದರು. ಬಳಿಕ ನಾನು ಯೋಚಿಸಿದೆ. ನಾನೇಕೆ ಹೀಗೆ ಮಾಡಿದೆ? ಅವರ ಮಧ್ಯೆ ಸಾಮರಸ್ಯವನ್ನುಂಟು ಮಾಡಲಿಕ್ಕಾಗಿ ನಾನು ಇಲ್ಲದ ವಿಷಯವನ್ನು ಸೃಷ್ಟಿಸಿ ಹೇಳಿ ನನ್ನನ್ನೇ ನಾನು ನಾಶಕ್ಕೊಳಪಡಿಸಿಬಿಟ್ಟೆ. ಬಳಿಕ ನಾನು ಪ್ರವಾದಿಯವರ(ಸ) ಬಳಿ ಹೋಗಿ ವಿಷಯವನ್ನು ತಿಳಿಸಿದೆ. ಆಗ ಅವರು(ಸ) ಹೇಳಿದರು:

يَا أَبَا كَاهِلٍ، أَصْلِحْ بَيْنَ النَّاسِ، وَلَوْ بِكَذَا وَكَذَا، يَعْنِي الْكَذِبَ!

'ಅಬೂ ಕಾಹಿಲ್, ಜನರ ಮಧ್ಯೆ ಜಗಳ ನಿಲ್ಲಿಸಲಿಕ್ಕಾಗಿ ಅಲ್ಲವೇ ನೀನು ಪ್ರಯತ್ನಿಸುತ್ತಿರುವುದು. ಅದಕ್ಕಾಗಿ ಸುಳ್ಳು ಹೇಳಿದರೂ ಸರಿ.'[5]

ಬಿನ್ನತೆ ಮತ್ತು ಶಿಥಿಲತೆಯನ್ನು ಪ್ರವಾದಿ(ಸ) ಹೀಗೆ ಬಣ್ಣಿಸಿದ್ದಾರೆ: ಸೌಹಾರ್ದತೆ ಇಲ್ಲದಿರುವುದು ಒಂದು ಚೂರಿಯಂತೆ. ಇಲ್ಲಿ ಕೂದಲು ಕತ್ತರಿಸುವ ಚೂರಿಯನ್ನು ಉದ್ದೇಶವಾಗಿ ಹೇಳಲಾಗಿಲ್ಲ, ಧರ್ಮವನ್ನೇ ಕತ್ತರಿಸಿ ಬಿಡುವ ಚೂರಿಯದು. ಪವಿತ್ರ ಕುರ್‌ಆನ್ ಈ ರೀತಿ ನೆನಪಿಸುತ್ತದೆ, 'ಪರಸ್ಪರ ಜಗಳಾಡಬೇಡಿರಿ. ಅನ್ಯಥಾ ನಿಮ್ಮಲ್ಲಿ ದೌರ್ಬಲ್ಯ ಉಂಟಾಗುವುದು ಮತ್ತು ನೀವು ಬೀರುಗಳಾಗಿ ಬಿಡುವಿರಿ. ಸಹನೆಯಿಂದ ವರ್ತಿಸಿರಿ. ಅಲ್ಲಾಹನು ಸಹನಶೀಲರೊಂದಿಗಿದ್ದಾನೆ.' (ಅನ್‌ಫಾಲ್: 46)

---

1) ತಬ್ರಾನಿ, ಬಸ್ಸಾರ್ – ಮಜ್ಮಉಸ್ಸವಾಇದ್: 8/80. **2)** ತಬ್ರಾನಿ, ಅಸ್ಬಹಾನಿ – ತರ್ಗೀಬ್: 179. **3)** ಬುಖಾರಿ: 2692, ಮುಸ್ಲಿಮ್: 2605, ಅಬೂದಾವೂದ್: 4920. **4)** ಅಹ್ಮದ್: 6/459, ತಿರ್ಮಿದಿ: 2003, ಇಬ್ನು ಅಬೀ ಶೈಬ – ಮುಸನ್ನಫ್: 9: 84–85, ತಬ್ರಾನಿ ಕಬೀರ್: 420. **5)** ತಬ್ರಾನಿ ಕಬೀರ್: 927.

37. ಅಸೂಯೆ ಮತ್ತು ಗೆಳೆತ

عَنْ الزُّبَيْرِ رَضِيَ اللَّهُ عَنْهُ، أَنَّ رَسُولَ اللهِ ﷺ قَالَ: دَبَّ إِلَيْكُمْ دَاءُ الْأُمَمِ
بْلُكُمْ الْحَسَدُ وَالبَغْضَاءُ، وَالْبُغْضَاءُ هِيَ الحَالِقَةُ، أَمَا إِنِّي لَا أَقُولُ تَحْلِقُ
لشَّعْرَ، وَلَاكِنْ تَحْلِقُ الدِّيْنَ

ಝುಬೈರ್(ರ) ವರದಿ ಮಾಡಿರುತ್ತಾರೆ. ಪ್ರವಾದಿ(ಸ) ಹೇಳಿರುವರು: ನಿಮ್ಮ ಪೂರ್ವಜರ ಸಮೂಹಕ್ಕೆ ಬಾಧಿಸಿದ್ದ ಅಸೂಯೆ ಮತ್ತು ಹಗೆತನದ ರೋಗವು ನಿಮಗೂ ಪಸರಿಸಿದೆ. ಹಗೆತನ ಎಲ್ಲವನ್ನೂ ಬೋಳಿಸಿಬಿಡುತ್ತದೆ. ತಲೆಗೂದಲು ಬೋಳಿಸುವ ಕುರಿತಲ್ಲ ನಾನು ಹೇಳುತ್ತಿರುವುದು. ಇದಕ್ಕೆ ಬದಲಾಗಿ ಧರ್ಮವನ್ನೇ ಬೋಳಿಸಿ ಬಿಡುವವರ ಕುರಿತು ಹೇಳುತ್ತಿದ್ದೇನೆ.*

ಅಸೂಯೆ, ಹಗೆತನ ಹೃದಯದಲ್ಲಿ ಮೊಳೆತು ಬೆಳೆಯುವ ವಿನಾಶಕಾರಿಯಾ ವಿಷವೃಕ್ಷಗಳಾಗಿವೆ. ಶರೀರದಿಂದ ಶಕ್ತಿಯನ್ನು ಗಳಿಸಿ ಶರೀರವನ್ನೇ ನಾಶಪಡಿಸಿ ಬಿಡು ವವುಗಳು. ಎಂದಿಗೂ ವಾಸಿಯಾಗದ ಎರಡು ಹುಣ್ಣುಗಳಂತೆ. ವ್ಯಕ್ತಿ ಮತ್ತು ಸಮಾ ವನ್ನು ಅದು ಏಕರೀತಿಯಲ್ಲಿ ಪೀಡಿಸುತ್ತದೆ. ಇವುಗಳ ದುರ್ಗಂಧದಿಂದಾಗಿ ಭದ್ರವಾ ರುವ ಸಾಮೂಹಿಕ ಸಂಬಂಧಗಳು ಶಿಥಿಲವಾಗಬಹುದು. ಸಮೀಪದವರನ್ನು ದೂ ವಾಗಿಸಲು, ದೂರವಿರುವವರನ್ನು ಇನ್ನಷ್ಟು ದೂರಕ್ಕೆ ಅಟ್ಟಲು ಅಸೂಯೆ ಮತ್ತು ಹ ತನಕ್ಕೆ ಸಾಧ್ಯವಿದೆ.

ಇತರರ ಉನ್ನತಿಯನ್ನು ಸಹಿಸದಿರುವುದು, ಅವರ ನಾಶವನ್ನು ಬಯಸುವುದ

* ಇಮಾಮ್ ತಿರ್ಮಿದಿ: 2510, ಬಸ್ಸಾರ್ - ಕಶ್‌ಫುಲ್ ಅಸ್ತಾರ್: 2002, ಬೈಹಕಿ - ಶುಅಬುಲ ಈಮಾನ್: 8747, ಹೈತಮಿ - ಮಜ್ಮಉಸ್ಸವಾಇದ್: 8/30, ಮುಂದಿರೀ, ತರ್ಗಿಬ್: 425 ಮುಂತಾದವರು ಈ ಹದೀಸ್ ಉದ್ಧರಿಸಿರುವರು. ಇದರ ವರದಿಯ ಪರಂಪರೆ ಜಯ್ಯ (ಪ್ರಬಲವಾದುದು) ಎಂದು ಹಾಫಿಝ್ ಹೈತಮಿ, ಮುಂದಿರಿ ಮುಂತಾದವರು ಸಾಕ್ಷ್ಯ ನುಡಿಯುತ್ತಾರೆ

ಅಸೂಯೆ. ಅಸೂಯೆ ಮತ್ತು ಹಗೆತನ ಪರಸ್ಪರ ಸಂಬಂಧವನ್ನು ಹೊಂದಿದೆ. ಒಂದು ಇನ್ನೊಂದರ ಉಪ ಉತ್ಪನ್ನದಂತೆ ಮತ್ತು ಅನಿವಾರ್ಯವಾದುದಾಗಿದೆ. ಅಸೂಯೆ ಹಗೆತನವನ್ನೂ ಹಗೆತನವು ಅಸೂಯೆಯನ್ನೂ ಉಂಟು ಮಾಡುತ್ತಿರುತ್ತದೆ. ಅಸೂಯೆ ಇರುವವರು ಇತರರ ಯಾವುದೇ ಒಳಿತನ್ನು ಒಪ್ಪದೇ ಇರುವಂತಹ ಮನಸ್ಸಿನವ ರಾಗಿರುತ್ತಾರೆ. ತನ್ನ ಗೆಳೆಯನ ಒಳಿತುಗಳೆಲ್ಲ ನಾಶವಾಗಬೇಕೆಂದು ಅವನು ಸದಾ ಬಯಸುತ್ತಿರುವನು. ಆದುದರಿಂದ ಅಸೂಯೆಯಿರುವವರು ಒಂದು ನಿಮಿಷವೂ ಸುಮ್ಮನಿರುವುದಿಲ್ಲ. ಇತರರ ಕುಂದುಕೊರತೆಗಳನ್ನು ಕಂಡು ಹಿಡಿದು ಅದನ್ನು ಎಲ್ಲರೊ ಡನೆಯೂ ಹೇಳಿಕೊಂಡು ಪ್ರಚಾರಪಡಿಸುವುದಕ್ಕಾಗಿ ಬಹಳ ಸಮಯ ವ್ಯಯಿಸುತ್ತಾರೆ. ಚಾಡಿ ಮತ್ತು ಪರದೂಷಣೆಯು ಅವರ ಖಾಯಂ ಉದ್ಯೋಗ. ಅಸೂಯೆಪಡುವ ವನು ತನಗೆ ಯಾರ ಬಗ್ಗೆ ಅಸೂಯೆ ಇದೆಯೋ ಅವರ ಸರ್ವನಾಶಕ್ಕಾಗಿ ಹೇಗಾದರೂ ಪ್ರಯತ್ನಿಸುತ್ತಿರುವನು. ಹಗೆತನ, ದ್ವೇಷ ಮತ್ತು ಅಸಹನೆ ಅವರ ಹೃದಯಗಳಲ್ಲಿ ಒಟ್ಟು ಸೇರಿರುತ್ತದೆ. ದೇವನ ಆಜ್ಞೆಯನ್ನು ಉಲ್ಲಂಘಿಸಲು ಮತ್ತು ತನ್ನ ಗೆಳೆಯನ ವಿರುದ್ಧ ಕೆಟ್ಟಮಾರ್ಗಗಳನ್ನು ಅನುಸರಿಸಲು ಇದು ಕಾರಣವಾಗಿ ಬಿಡುತ್ತದೆ. ಹೀಗೆ ಅದು ವ್ಯಕ್ತಿ ಮತ್ತು ಸಮೂಹದ ನೈತಿಕತೆಯನ್ನೇ ನಾಶಪಡಿಸಿಬಿಡುತ್ತದೆ. ಪ್ರವಾದಿವರ್ಯರು(ಸ) ಹೀಗೆ ಹೇಳಿರುವರು:

إِيَّاكُمْ وَالْحَسَدَ فَإِنَّ الْحَسَدَ يَأْكُلُ الْحَسَنَاتِ كَمَا تَأْكُلُ النَّارُ الْحَطَبَ

'ನೀವು ಅಸೂಯೆಯ ಬಗ್ಗೆ ಜಾಗರೂಕರಾಗಿರಿ. ಏಕೆಂದರೆ ಬೆಂಕಿಯು ಕಟ್ಟಿಗೆ ಯನ್ನು ತಿಂದು ಮುಗಿಸುವಂತೆ ಅಸೂಯೆಯು ಒಳಿತುಗಳನ್ನೆಲ್ಲ ಸಂಪೂರ್ಣ ತಿಂದು ಮುಗಿಸುತ್ತದೆ.'[1]

ಮುಲಾವಿಯಾ(ರ) ಹೇಳುತ್ತಾರೆ:

لَيْسَ فِيْ خِصَالِ الشَّرِّ أَعْدَلُ مِنَ الْحَسَدِ، يَقْتُلُ الْحَاسِدَ قَبْلَ أَنْ يَصِلَ إِلَى الْمَحْسُودِ

'ದುರ್ಗುಣಗಳ ಪೈಕಿ ಅಸೂಯೆಯಷ್ಟು ನ್ಯಾಯ ಪಾಲಿಸುವಂತಹದ್ದು ಇನ್ನೊಂದಿಲ್ಲ. ಯಾರ ಕುರಿತು ಅಸೂಯೆಯನ್ನು ಬೆಳೆಸುತ್ತೇವೋ ಅವನಿಗೆ ಅದು ತಲುಪುವ ಮುನ್ನವೇ ಅಸೂಯೆಯನ್ನು ಹೊಂದಿದ ವ್ಯಕ್ತಿಯನ್ನು ಅದು ನಾಶ ಪಡಿಸುತ್ತದೆ.'[2]

ಕಾರಣವಿಲ್ಲದೆ ಇತರರ ಬಗ್ಗೆ ಅಸೂಯೆಯನ್ನು ಹೊಂದಿರುವುದರ ನಿರರ್ಥಕತೆಯ ಬಗ್ಗೆ ಇಮಾಮ್ ಹಸನ್ ಬಸರಿ(ರ) ಈ ರೀತಿ ಹೇಳಿರುವರು:

يَاابْنَ آدَمَ، لِمَ تَحْسُدُ أَخَاكَ؟ فَإِنْ كَانَ الَّذِي أَعْطَاهُ لِكَرَامَتِهِ عَلَيْهِ، فَلِمَ تَحْسُدُ مَنْ أَكْرَمَهُ اللَّهُ؟
وَإِنْ كَانَ غَيْرَ ذَلِكَ فَلِمَ تَحْسُدُ مَنْ مَصِيْرُهُ إِلَى النَّارِ

'ಮನುಷ್ಯಾ! ನೀನು ನಿನ್ನ ಸಹೋದರನ ಬಗ್ಗೆ ಅಸೂಯೆ ಪಡುವುದು ಏಕೆ? ಅಲ್ಲಾಹನು ಅವನನ್ನು ಅನುಗ್ರಹಿಸಿರುವುದು ಅವನೊಂದಿಗಿರುವ ಗೌರವದಿಂದಾಗಿದ್ದರೆ ಅಲ್ಲಾಹನು ಗೌರವಿಸಿರುವ ವ್ಯಕ್ತಿಯೊಂದಿಗೆ ನೀನೇಕೆ ಅಸೂಯೆ ತೋರುವೆ? ಒಂದು ವೇಳೆ ಅಲ್ಲಾಹನು ಅವನನ್ನು ಗೌರವಿಸಿಲ್ಲವೆಂದಾದರೆ, ಅವನ ನರಕ ಪ್ರವೇಶಕ್ಕೆ ನಿನ್ನ ಅಸೂಯೆಯಿಂದ ಏನಾಗಬೇಕಿದೆ?'[3]

ಎಲ್ಲ ಕೆಡುಕುಗಳ ಮೂಲ ಕಾರಣ ಅಸೂಯೆ, ಹಗೆತನ, ದ್ವೇಷ ಮತ್ತು ಕೋಪವಾಗಿದೆ. ಸತ್ಯವಿಶ್ವಾಸಿಗಳು ಇಂತಹ ದುರ್ಗುಣಗಳು ಬಂದು ಸೇರಿಕೊಳ್ಳುತ್ತಿವೆಯೇ ಎಂದು ಪ್ರತಿನಿಮಿಷ ನಿರಂತರ ಆತ್ಮಾವಲೋಕನ ನಡೆಸಬೇಕು. ಈಮಾನನ್ನೇ (ವಿಶ್ವಾಸವನ್ನೇ) ಸರ್ವನಾಶ ಮಾಡಿಬಿಡುವ ಈ ಸಾಮೂಹಿಕ ವಿಪತ್ತಿನ ಬಗ್ಗೆ ಅತಿ ಎಚ್ಚರಿಕೆ ವಹಿಸಬೇಕೆಂದು ಈ ಹದೀಸ್ ನಮ್ಮಿಂದ ಬಯಸುತ್ತದೆ.

---

1. ಅಬೂದಾವೂದ್: 4903, ಬೈಹಕಿ - ಶುಅ್‌ಬುಲ್ ಈಮಾನ್: 6608.
2. ಅದಬುದ್ದುನ್ಯಾ ವದ್ದೀನ್, ಪುಟ: 176.
3. ಇಹ್ಯಾಉ ಉಲೂಮುದ್ದೀನ್, ಭಾಗ: 3, ಪುಟ: 201.

38. ಅಹಂಕಾರವೇ ಆಪತ್ತು

عَنْ أَبِي سَلَمَةَ رَضِيَ اللَّهُ عَنْهُ قَالَ: الْتَقَى عَبْدُ اللَّهِ بْنِ عُمَرَ وَعَبْدُ اللَّهِ بْنِ عَمْرٍو رَضِيَ اللَّهُ عَنْهُمْ عَلَى الْمَرْوَةِ، فَتَحَدَّثَا، ثُمَّ مَضَى عَبْدُ اللَّهِ بْنِ عَمْرٍو وَبَقِيَ عَبْدُ اللَّهِ بْنِ عُمَرَ يَبْكِي، فَقَالَ لَهُ رَجُلٌ: مَا يُبْكِيكَ يَا أَبَا عَبْدِ الرَّحْمَانِ؟ قَالَ: هَذَا يَعْنِي عَبْدَ اللَّهِ بْنِ عَمْرٍو زَعَمَ أَنَّهُ سَمِعَ رَسُولَ اللَّهِ ﷺ يَقُولُ: مَنْ كَانَ فِي قَلْبِهِ مِثْقَالُ حَبَّةٍ مِنْ خَرْدَلٍ مِنْ كِبْرٍ كَبَّهُ اللَّهُ تَعَالَى لِوَجْهِهِ فِي النَّارِ

ಅಬೂ ಸಲಮ(ರ) ವರದಿ ಮಾಡಿರುತ್ತಾರೆ. ಒಮ್ಮೆ ಅಬ್ದುಲ್ಲಾ ಬಿನ್ ಉಮರ್ ಮತ್ತು ಅಬ್ದುಲ್ಲಾ ಬಿನ್ ಅಮ್ರ್ ಮರ್ವಾ ಬೆಟ್ಟದಲ್ಲಿ ಪರಸ್ಪರ ಭೇಟಿಯಾದರು. ಅವರು ಮಾತನಾಡುತ್ತಿದ್ದರು. ಬಳಿಕ ಅಬ್ದುಲ್ಲಾ ಬಿನ್ ಅಮ್ರ್ ಎದ್ದು ಹೋದರು. ಇಬ್ನು ಉಮರ್ ಅಲ್ಲೇ ಕುಳಿತು ಅಳತೊಡಗಿದರು. ಒಬ್ಬರು ಪ್ರಶ್ನಿಸಿದರು, 'ಅಬೂ ಅಬ್ದುರ್ರಹ್ಮಾನ್, ನೀವೇಕೆ ಅಳುತ್ತಿರುವಿರಿ?' ಇಬ್ನು ಉಮರ್(ರ) ಹೇಳಿದರು, 'ಯಾರ ಹೃದಯದಲ್ಲಾದರೂ ಸಾಸಿವೆ ಕಾಳಿನಷ್ಟು ಅಹಂಕಾರವಿದ್ದರೂ ಆ ಕಾರಣಕ್ಕಾಗಿ ಅಂತಹ ವ್ಯಕ್ತಿಯನ್ನು ನರಕಕ್ಕೆ ಅಧೋಮುಖವಾಗಿ ಅಲ್ಲಾಹನು ತಳ್ಳಿಬಿಡುವನೆಂದು ಪ್ರವಾದಿ(ಸ) ಹೇಳಿರುವುದಾಗಿ ಅಬ್ದುಲ್ಲಾ ಬಿನ್ ಅಮ್ರ್ ನನ್ನೊಂದಿಗೆ ಹೇಳುತ್ತಿದ್ದರು. ಅದು ನನ್ನನ್ನು ಅಳುವಂತೆ ಮಾಡಿತು.'*

* ಇಮಾಮ್ ಅಹ್ಮದ್: 2/215, ತಬ್ರಾನಿ ಕಬೀರ್, ಇಬ್ನು ಅಬೀ ಶೈಬ: 9/89 ಮುಂತಾದವರು ಈ ಹದೀಸ್‌ವಚನವನ್ನು ಉದ್ಧರಿಸಿರುವರು. ಇದರ ವರದಿಯ ಪರಂಪರೆಯು ಇಮಾಮ್ ಬುಖಾರಿಯವರ ಮತ್ತು ಮುಸ್ಲಿಮ್‌ರವರ ಹದೀಸ್ ಸ್ವೀಕಾರಾರ್ಹತೆಯ ಮಾನದಂಡಗಳ ಪ್ರಕಾರ ಸಹೀಹ್ ಆಗಿದೆಯೆಂದು ಪ್ರಮುಖ ಹದೀಸ್ ವಿದ್ವಾಂಸರಾದ ಶುಐಬ್ ಅಲ್ ಅರ್ನವೂತ್ ಸಾಕ್ಷಿ ನುಡಿದಿದ್ದಾರೆ.

ಸತ್ಯವಿಶ್ವಾಸಿಯನ್ನು ಸ್ವರ್ಗಪ್ರವೇಶದಿಂದ ತಡೆಯುವ, ಒಳಿತುಗಳ ಬುಡವನ್ನೇ ಕತ್ತರಿಸಿ ಹಾಕುವ ದುರ್ಗುಣಗಳಲ್ಲಿ ಬಹಳ ಮುಖ್ಯವಾದುದು ಅಹಂಕಾರವಾಗಿದೆ. ಇತರರಿಗಿಂತ ತಾನು ಶ್ರೇಷ್ಠನೆಂದು ಭಾವಿಸಿಕೊಳ್ಳುವುದು, ತನ್ನ ಸುತ್ತಮುತ್ತಲಿನವರು ತನಗಿಂತ ಕಡಿಮೆಯವರು ಎಂದು ತಿಳಿಯುವುದಾಗಿದೆ. ಜನರನ್ನು ಕಡೆಗಣಿಸಲು ಮತ್ತು ವಾಸ್ತವಿಕತೆಗಳನ್ನು ನಿರಾಕರಿಸಲು ಅಹಂಕಾರವೇ ಕಾರಣವಾಗಿರುತ್ತದೆ. ಪ್ರವಾದಿವರ್ಯರು(ಸ) ಹೀಗೆ ಹೇಳಿರುವರು: الْكِبْرُ بَطَرُ الْحَقِّ وَغَمْطُ النَّاسِ ಸತ್ಯವನ್ನು ನಿಷೇಧಿಸುವುದು, ಜನರನ್ನು ಕಡೆಗಣಿಸುವುದೇ ಅಹಂಕಾರವಾಗಿದೆ.[1]

ವ್ಯಕ್ತಿ ಎಷ್ಟೇ ಉತ್ತಮನಾಗಿದ್ದರೂ ಅಹಂಕಾರವಿದ್ದರೆ ಅದವನನ್ನು ನಾಶಗೊಳಿಸಿ ಬಿಡುವುದು. ಅವನಿಗಿರುವ ಆರ್ಥಿಕ, ಶಾರೀರಿಕ, ಧಾರ್ಮಿಕ ವಿಶೇಷತೆಗಳು ತನ್ನನ್ನು ಇತರರಿಗಿಂತ ಭಿನ್ನವೆಂದು ತಿಳಿಯುವುದಕ್ಕೆ ಪ್ರೇರಕವಾಗಿರಬಹುದು. ಇನ್ನು ಅದೇ ವಿಶೇಷತೆ ಇತರರಲ್ಲೂ ಕಂಡರೆ, ಅಹಂಕಾರಿಯು ಅವರನ್ನು ತನ್ನ ಎದುರಾಳಿಗಳೆಂದೂ ಶತ್ರುಗಳೆಂದೂ ಭಾವಿಸುತ್ತಾನೆ. ಇತರರ ಬಗ್ಗೆ ತುಚ್ಛವಾಗಿ ಮಾತನಾಡುವುದಕ್ಕೆ, ಅವರ ಬಗ್ಗೆ ಕೆಟ್ಟ ಅಭಿಪ್ರಾಯವನ್ನು ತಾಳುವುದಕ್ಕೆ ಇದು ಪ್ರೇರಕವಾಗಬಲ್ಲುದು. ತನ್ನ ಕರ್ಮಗಳ ಬಗ್ಗೆ ಚಿಂತಿಸದೆ, ಇತರರು ಏನು ಮಾಡುತ್ತಿದ್ದಾರೆ ಎಂಬುದನ್ನೇ ಇಂತಹ ವ್ಯಕ್ತಿಗಳು ಗಮನಿಸುತ್ತಿರುತ್ತಾರೆ. ಇಸ್ಲಾಮ್ ನಿಷೇಧಿಸಿರುವ ಆತ್ಮಪ್ರಶಂಸೆ, ಪರನಿಂದೆ, ಪರದೂಷಣೆ, ಚಾಡಿ, ಅಸೂಯೆ ಮುಂತಾದ ಎಲ್ಲ ಸ್ವಭಾವದೋಷಗಳು ಆ ವ್ಯಕ್ತಿಯಲ್ಲಿ ಮೇಳೈಸಿಕೊಂಡಿರುತ್ತದೆ. ಮಾತುಕತೆ, ಚಿಂತನೆ, ವರ್ತನೆ, ವ್ಯವಹಾರಗಳಲ್ಲೆಲ್ಲ ತೊರಿಕೆ ಮತ್ತು ದುರಭಿಮಾನವು ನಿರಂತರ ಪ್ರಕಟವಾಗುತ್ತಿರುತ್ತದೆ. ಆತ್ಮಸಂಸ್ಕರಣೆಯ ಎಲ್ಲ ಬಾಗಿಲುಗಳು ಶಾಶ್ವತವಾಗಿ ಮುಚ್ಚಲ್ಪಟ್ಟು, ಇನ್ನಷ್ಟು ಕೆಟ್ಟ ಕೆಲಸಗಳನ್ನು ಮಾಡಲು ಇದು ಕಾರಣವಾಗಬಲ್ಲುದು. ಅಹಂಕಾರವು ವ್ಯಕ್ತಿಯನ್ನು ನಾಶಪಡಿಸುವುದು ಮತ್ತು ನರಕಕ್ಕೆ ತಲುಪಿಸುವುದು ಇದೇ ರೀತಿಯಾಗಿರುತ್ತದೆ. ಪ್ರವಾದಿ(ಸ) ಹೇಳಿರುವರು:

لَا يَدْخُلُ الْجَنَّةَ مَنْ كَانَ فِي قَلْبِهِ مِثْقَالُ ذَرَّةٍ مِنْ كِبْرٍ

'ಯಾರದಾದರೂ ಹೃದಯದಲ್ಲಿ ಅಣುಗಾತ್ರದಷ್ಟು ಅಹಂಕಾರವಿದ್ದರೆ, ಅವನು ಸ್ವರ್ಗವನ್ನು ಪ್ರವೇಶಿಸಲಾರನು.'[2]

ಸಮಾಜದಲ್ಲಿ ಬಹಳ ಮಂದಿಯಲ್ಲಿ ವಿಶೇಷವಾಗಿ ನಾಯಕರು ಮತ್ತು ವಿದ್ವಾಂಸರುಗಳಲ್ಲಿ ಸಣ್ಣ ಪ್ರಮಾಣದಲ್ಲಿ ಅಥವಾ ಹೆಚ್ಚಿನ ಪ್ರಮಾಣದಲ್ಲಿ ಅಹಂಕಾರವು ಕಂಡುಬರುತ್ತದೆ. ಆದಮರ ಮುಂದೆ ಸಾಷ್ಟಾಂಗವೆರಗುವುದರಿಂದ ಇಬ್ಲೀಸನನ್ನು

ತಡೆದುದು 'ನಾನು ದೊಡ್ಡವನು' ಎಂಬ ಅಹಂಕಾರವಾಗಿತ್ತು. ಈ ಪ್ರಕಾರ ಪ್ರಪಂಚದ ಪ್ರಥಮ ಅಪರಾಧ ಅಹಂಕಾರವಾಗಿದೆ. ಅಲ್ಲಾಹನು ಈ ರೀತಿ ಹೇಳಿರುವುದಾಗಿ ಪ್ರವಾದಿವರ್ಯರು(ಸ) ಹೇಳಿರುವರು:

الْكِبْرِيَاءُ رِدَائِيْ، وَالْعَظَمَةُ إِزَارِيْ، فَمَنْ نَازَعَنِيْ وَاحِدًا مِنْهُمَا قَذَفْتُهُ فِي النَّارِ

'ಅಹಂಕಾರವು ನನ್ನ ಉಡುಪು ಮತ್ತು ಗಾಂಭೀರ್ಯವು ನನ್ನ ಮೇಲುವಸ್ತ್ರವಾಗಿದೆ. ಯಾರಾದರೂ ಅದನ್ನು ನನ್ನಿಂದ ಕಸಿದು ಸ್ವಯಂ ಧರಿಸಲು ಶ್ರಮಿಸಿದರೆ, ನಾನವನನ್ನು ಕಡ್ಡಾಯವಾಗಿ ನರಕಕ್ಕೆ ತಳ್ಳುವೆನು.'[3]

ಅಲೀ(ರ) ಹೇಳಿರುವರು. ಒಮ್ಮೆ ಪ್ರವಾದಿ(ಸ) ಕೆಲವು ವ್ಯಕ್ತಿಗಳೊಂದಿಗೆ ನಡೆದುಕೊಂಡು ಹೋಗುತ್ತಿದ್ದರು. ಅವರ ಪೈಕಿ ಒಬ್ಬ ವ್ಯಕ್ತಿ ದುಬಾರಿ ಸುಗಂಧವನ್ನು ಪೂಸಿದ್ದರು. ಪ್ರವಾದಿಯವರು(ಸ) ಅವರನ್ನು ಕಡೆಗಣಿಸಿ ಇತರರಿಗೆ ಸಲಾಮ್ ಹೇಳಿದರು. ಆ ವ್ಯಕ್ತಿ ಪ್ರಶ್ನಿಸಿದ: يَا رَسُوْلَ اللهِ أَعْرَضْتَ عَنِّيْ ؟ 'ಅಲ್ಲಾಹನ ಸಂದೇಶವಾಹಕರೇ, ತಾವೇಕೆ ನನ್ನನ್ನು ಕಡೆಗಣಿಸಿದಿರಿ?' ಪ್ರವಾದಿ(ಸ) ಹೇಳಿದರು: بَيْنَ عَيْنَيْكَ جَمْرَةٌ 'ನಿನ್ನ ಎರಡು ಕಣ್ಣುಗಳ ಮಧ್ಯೆ ಒಂದು ಅಗ್ನಿಯ ಜ್ವಾಲೆಯನ್ನು ನಾನು ಕಾಣುತ್ತಿರುವೆ.'[4] ಅಹಂಕಾರ ಮತ್ತು ದುರಭಿಮಾನದ ಚಿಹ್ನೆಗಳು ಆ ವ್ಯಕ್ತಿಯ ಮುಖದಲ್ಲಿ ಗೋಚರಿಸಿದ ಕಾರಣ ಪ್ರವಾದಿವರ್ಯರು(ಸ) ಆ ವ್ಯಕ್ತಿಯನ್ನು ಅವಗಣಿಸಿದ್ದರು ಮತ್ತು ಈ ರೀತಿ ಎಚ್ಚರಿಕೆಯನ್ನು ನೀಡಿದರು.

ಅನಸ್(ರ) ವರದಿ ಮಾಡಿರುವ ಇನ್ನೊಂದು ಚಾರಿತ್ರಿಕ ಘಟನೆ ಹೀಗಿದೆ– ಪ್ರವಾದಿಯವರ(ಸ) ಕಾಲದಲ್ಲಿ ಅತ್ಯುತ್ತಮ ಗುಣಸಂಪನ್ನನಾದ ವ್ಯಕ್ತಿಯೊಬ್ಬರಿದ್ದರು. ಜನರು ಆ ವ್ಯಕ್ತಿಯ ಸ್ವಬಾವ ಮತ್ತು ಒಳಿತುಗಳ ಬಗ್ಗೆ ಪ್ರವಾದಿಯವರ(ಸ) ಬಳಿ ಬಂದು ಹೊಗಳುತ್ತಿದ್ದರು. ಒಮ್ಮೆ ಆ ವ್ಯಕ್ತಿ ಸಭೆಗೆ ಆಗಮಿಸಿದಾಗ ಒಬ್ಬ ವ್ಯಕ್ತಿ ಹೀಗೆ ಹೇಳಿದ: يَا رَسُوْلَ اللهِ، هَذَا الَّذِيْ ذَكَرْنَاهُ لَكَ 'ಪ್ರವಾದಿಗಳೇ, ನಾವು ತಮ್ಮೊಂದಿಗೆ ಹೇಳುತ್ತಿದ್ದುದು ಇದೇ ವ್ಯಕ್ತಿಯ ಕುರಿತಾಗಿತ್ತು.' ಪ್ರವಾದಿ(ಸ) ಆ ವ್ಯಕ್ತಿಯನ್ನು ನೋಡಿ ಹೇಳಿದರು: إِنِّيْ أَرَى فِيْ وَجْهِهِ سُفْعَةً مِنَ الشَّيْطَانِ 'ಪೈಶಾಚಿಕವಾದ ಒಂದು ಗುರುತನ್ನು ನಾನು ಆ ವ್ಯಕ್ತಿಯ ಮುಖದಲ್ಲಿ ಕಾಣುತ್ತಿದ್ದೇನೆ.' ಆ ಬಳಿಕ ಪ್ರವಾದಿವರ್ಯರು(ಸ) ಆ ವ್ಯಕ್ತಿಯೊಡನೆ ಕೇಳಿದರು: أَسْئَلُكَ بِاللهِ حَدَّثَتْكَ نَفْسُكَ: أَنْ لَيْسَ فِي الْقَوْمِ أَفْضَلُ مِنْكَ ؟ 'ಅಲ್ಲಾಹನನ್ನು ಸಾಕ್ಷಿ ನಿಲ್ಲಿಸಿ ನಾನು ನಿಮ್ಮೊಂದಿಗೆ ಪ್ರಶ್ನಿಸುತ್ತಿರುವೆನು. ಜನರ ಪೈಕಿ ನನ್ನಷ್ಟು ಶ್ರೇಷ್ಠರು ಬೇರೆ ಯಾರೂ ಇಲ್ಲವೆಂದು ನೀವು ನಿಮ್ಮ ಬಗ್ಗೆ ಭಾವಿಸುತ್ತಿರು

ವಿರಲ್ಲವೇ?' ಆ ವ್ಯಕ್ತಿ ಉತ್ತರಿಸಿದರು: نَعَمْ,اللَّهُمَّ 'ಯಾ ಅಲ್ಲಾಹ್! ಹೌದು.'[5]

ಕ್ಷುಲ್ಲಕವೆಂದು ನಾವು ಪರಿಗಣಿಸುವ ಇಂತಹ ಕೆಡುಕುಗಳನ್ನು ಎಷ್ಟು ಕಠಿಣವಾಗಿ ಪ್ರವಾದಿವರ್ಯರು(ಸ) ವಿರೋಧಿಸಿದ್ದರೆಂದು ಈ ಘಟನೆಯಿಂದ ನಮಗೆ ಮನವರಿಕೆ ಯಾಗುತ್ತದೆ. ಅಂತ್ಯದಿನದಂದು ಅಹಂಕಾರಿಗಳಿಗೆಂದು ಸಿದ್ಧಗೊಳಿಸಲ್ಪಟ್ಟಿರುವ ನಿಂದ್ಯತೆ ಮತ್ತು ನಿಕೃಷ್ಟತೆಯ ಪರಮಾವಧಿಯನ್ನು ವ್ಯಕ್ತಗೊಳಿಸುವ ಪ್ರವಾದಿವಚನ ಹೀಗಿದೆ:

يُحْشَرُ الْمُتَكَبِّرُونَ يَوْمَ الْقِيَامَةِ أَمْثَالَ الذَّرِّ فِي صُوَرِ الرِّجَالِ، يَغْشَاهُمُ الذُّلُّ مِنْ كُلِّ مَكَانٍ، يُسَاقُونَ إِلَى سِجْنٍ فِي جَهَنَّمَ، يُقَالُ لَهُ: بُولَسُ، تَعْلُوهُمْ نَارُ الْأَنْيَارِ يُسْقَوْنَ مِنْ عُصَارَةِ أَهْلِ النَّارِ طِينَةَ الْخَبَالِ

'ಅಂತ್ಯದಿನದಂದು ಸಣ್ಣ ಇರುವೆಗಳಂತಿರುವ ಮನುಷ್ಯ ರೂಪದಲ್ಲಿ ಅಹಂಕಾರಿ ಗಳು ಒಟ್ಟುಗೂಡಿಸಲ್ಪಡುವರು. ಎಲ್ಲ ದಿಕ್ಕುಗಳಿಂದಲೂ ಅಪಮಾನವು ಅವರನ್ನು ಆವರಿಸಿಕೊಂಡಿರುವುದು. 'ಬೂಲಸ್' ಎಂಬ ಹೆಸರುಳ್ಳ ನರಕದ ಒಂದು ಸೆರೆಮನೆಗೆ ಅವರನ್ನು ಅಟ್ಟಿಸಿಕೊಂಡು ಹೋಗಲಾಗುವುದು. ಮೇಲೆ ಮೇಲೇರುವ ಅಗ್ನಿಜ್ವಾಲೆ ಗಳು ಅವರನ್ನು ಮುಚ್ಚಿಬಿಡುವುದು. ನರಕವಾಸಿಗಳ ಶರೀರದಿಂದ ಹೊರಡುವ ದುರ್ಗಂಧಭರಿತ ನೀರನ್ನು ಅವರಿಗೆ ಕುಡಿಸಲಾಗುವುದು.'[6]

---

1. ಮುಸ್ಲಿಮ್: 91, ತಿರ್ಮಿದಿ: 1999, ಹಾಕಿಮ್: 1/26.
2. ಮುಸ್ಲಿಮ್: 91, ತಿರ್ಮಿದಿ: 1999, ಹಾಕಿಮ್: 1/26.
3. ಅಬೂದಾವೂದ್: 4090, ಇಬ್ನುಮಾಜ: 4174, ಇಬ್ನುಹಿಬ್ಬಾನ್: 5642.
4. ಬುಖಾರಿ: ಅದಬುಲ್ ಮುಫ್ರದ್: 1020.
5. ಅಹ್ಮದ್, ದಾರುಕುತ್ನಿ, ಬಸ್ಸಾರ್.
6. ತಿರ್ಮಿದಿ: 2492, ಬುಖಾರಿ: ಅದಬುಲ್ ಮುಫ್ರದ್: 557, ಅಹ್ಮದ್: 2/178.

39. ಮಾತನಾಡುವಾಗ ಎಚ್ಚರ ವಹಿಸುವುದು

عَنْ أَبِي هُرَيْرَةَ رَضِيَ اللَّهُ عَنْهُ، عَنِ النَّبِيِّ ﷺ قَالَ: "إِنَّ الْعَبْدَ لَيَتَكَلَّمُ بِالْكَلِمَةِ مِنْ رِضْوَانِ اللَّهِ، لاَ يُلْقِي لَهَا بَالاً، يَرْفَعُهُ اللَّهُ بِهَا دَرَجَاتٍ، وَإِنَّ الْعَبْدَ لَيَتَكَلَّمُ بِالْكَلِمَةِ مِنْ سَخَطِ اللَّهِ، لاَ يُلْقِي لَهَا بَالاً، يَهْوِي بِهَا فِي جَهَنَّمَ"

ಅಬೂಹುರೈರಾ(ರ) ವರದಿ ಮಾಡಿರುತ್ತಾರೆ. ಪ್ರವಾದಿ(ಸ) ಹೇಳಿದರು: ಒಬ್ಬ ದಾಸ ಆಯಾಚಿತವಾಗಿ ಅಲ್ಲಾಹನಿಗೆ ಇಷ್ಟವುಳ್ಳ ಒಂದು ಮಾತನ್ನು ಹೇಳುವನು. ಆ ಕಾರಣಕ್ಕಾಗಿ ಅಲ್ಲಾಹನು ಅವನ ಸ್ಥಾನಮಾನವನ್ನು ಉನ್ನತಿಗೇರಿಸುವನು. ಒಬ್ಬ ದಾಸ ಎಚ್ಚರಿಕೆ ವಹಿಸದೆ ಅಲ್ಲಾಹನ ಕೋಪಕ್ಕೆ ಕಾರಣ ವಾಗುವಂತಹ ಒಂದು ಮಾತನ್ನು ಹೇಳುತ್ತಾನೆ. ಆ ಕಾರಣದಿಂದ ಅವನು ನರಕಕ್ಕೆ ತಲುಪುವನು.*

ನಾಲಗೆಯಲ್ಲಿ ಸಿಹಿ ಮತ್ತು ಕಹಿಗಳಿವೆ. ಬಹಳ ಜಾಗರೂಕತೆಯಿಂದ ಬಳಸಿದರೆ ಹೃದಯಗಳನ್ನು ವಶೀಕರಿಸಲು ಮತ್ತು ಸಂಬಂಧಗಳನ್ನು ಹೆಚ್ಚು ಸುದೃಢಗೊಳಿಸಲು ಅದಕ್ಕೆ ಸಾಧ್ಯವಿದೆ. ಅದೇ ವೇಳೆ ಬಹಳ ಗಾಢವಾದ ಸಂಬಂಧವನ್ನೂ ಕ್ಷಣಮಾತ್ರದಲ್ಲಿ ಕಡಿದು ಬಿಡಲು, ಸಾಮರಸ್ಯವನ್ನು ನಾಶಪಡಿಸುವ ಸಾಮರ್ಥ್ಯವೂ ನಾಲಗೆಗಿದೆ.

ನಮ್ಮ ನಾಲಗೆ ಎರಡು ಅಲಗುಗಳು ಹರಿತವಾಗಿರುವ ಒಂದು ಚೂರಿಯಂತಿದೆ. ಇದನ್ನು ಒಳಿತಿಗಾಗಿ ಬಳಸಿ ಯಶಸ್ಸನ್ನು ಗಳಿಸಲು, ಅದೇ ರೀತಿ ಕೆಟ್ಟ ಕೆಲಸಗಳಿಗೆ ಬಳಸಿ ಸೋಲನ್ನು ಅನುಭವಿಸಲು ಸಾಧ್ಯವಿದೆ. ಜಾಗರೂಕತೆಯಿಂದ ಬಳಸದೆ ಇದ್ದರೆ ನಾಲಗೆಯೇ ವ್ಯಕ್ತಿಯನ್ನು ಸ್ವರ್ಗದಿಂದ ತಪ್ಪಿಸಲೂ ನರಕಕ್ಕೆ ತಳ್ಳಲು ಪರ್ಯಾಪ್ತವಾಗ

* ಬುಖಾರಿ: 6478, ಹಾಕಿಮ್: 4/597, ಮಾಲಿಕ್ – ಮುಅತ್ತಾ: 2/985, ಬೈಹಕಿ, ಶುಅ್‌ಬುಲ್ ಈಮಾನ್: 4832 ಮುಂತಾದವರು ಉಲ್ಲೇಖಿಸಿರುವರು. ಸಹೀಹುಲ್ ಬುಖಾರಿಯ ಮಾತುಗಳಿವು.

ಬಲ್ಲದು ಎಂದು ಮೇಲೆ ಉದ್ಧರಿಸಿರುವ ಪ್ರವಾದಿವಚನದಿಂದ ತಿಳಿದು ಬರುತ್ತದೆ.

ಬಾಯಿಗೆ ಬಂದದ್ದನ್ನೆಲ್ಲ ಮಾತನಾಡುತ್ತಿರುವುದು ಸತ್ಯವಿಶ್ವಾಸಿಗಳ ಸ್ವಭಾವವಲ್ಲ. ಮಾತು ಎಷ್ಟು ಕ್ಷುಲ್ಲಕವಾಗಿದ್ದರೂ ಅವುಗಳು ದಾಖಲಿಸಲ್ಪಡುತ್ತವೆ ಮತ್ತು ಅದರ ಬಗ್ಗೆ ದೇವನ ಸನ್ನಿಧಿಯಲ್ಲಿ ವಿಚಾರಣೆ ನಡೆಯಲಿದೆ. ಸ್ವರ್ಗ, ನರಕವನ್ನು ತೀರ್ಮಾನಿಸುವಲ್ಲಿಯೂ ಇದಕ್ಕೆ ನಿರ್ಣಾಯಕ ಪಾತ್ರವಿದೆ ಎಂದು ಅರಿತುಕೊಂಡವನಾಗಿದ್ದಾನೆ ಸತ್ಯವಿಶ್ವಾಸಿ. ಆದ ಕಾರಣದಿಂದಲೇ ಬಹಳ ಎಚ್ಚರಿಕೆಯಿಂದಲೇ ಅವನು ಮಾತನಾಡುತ್ತಾನೆ. ಪವಿತ್ರ ಕುರ್‌ಆನ್ ಹೇಳುತ್ತದೆ: 'ಸತ್ಯವಿಶ್ವಾಸಿಗಳೇ, ಅಲ್ಲಾಹನನ್ನು ಭಯಪಡಿಸಿ ಮತ್ತು ಸರಿಯಾದ ಮಾತನ್ನೇ ಹೇಳಿರಿ. ಅಲ್ಲಾಹ್ ನಿಮ್ಮ ಕರ್ಮಗಳನ್ನು ಸರಿಪಡಿಸುವನು ಮತ್ತು ನಿಮ್ಮ ಅಪರಾಧಗಳನ್ನು ಕ್ಷಮಿಸುವನು.' **(ಅಲ್ ಅಹ್‌ಝಾಬ್: 70-71)**

ಸಚ್ಚಾರಿತ್ರ್ಯದ ಪರಿಪೂರ್ಣತೆಗಾಗಿ ನಿಯೋಗಿಸಲ್ಪಟ್ಟ ಪ್ರವಾದಿವರ್ಯರ(ಸ) ಮಾತುಕತೆಯ ವಿಧಾನದ ಬಗ್ಗೆ ಅವರ ಪತ್ನಿ ಆಯಿಶಾ(ರ) ಹೀಗೆ ಹೇಳುತ್ತಾರೆ:

إِنَّ رَسُولَ اللهِ ﷺ لَمْ يَكُنْ يَسْرُدُ الْحَدِيثَ كَسَرْدِكُمْ، كَانَ يُحَدِّثُ حَدِيثًا لَوْ عَدَّهُ الْعَادُّ لأَحْصَاهُ!

ಅಲ್ಲಾಹನ ಸಂದೇಶವಾಹಕರು ನಿಮ್ಮಂತೆ ನಿರಂತರವಾಗಿ ಮಾತನಾಡುತ್ತಿರುವ ವ್ಯಕ್ತಿಯಾಗಿರಲಿಲ್ಲ. ಅವರ ಮಾತುಗಳನ್ನು ಯಾರಾದರೂ ಎಣಿಸಬಯಸುವುದಾದರೆ ಎಣಿಸಲು ಸಾಧ್ಯವಾಗುತ್ತಿತ್ತು.[1]

ನಾಲಗೆಯನ್ನು ಬಹಳ ಎಚ್ಚರಿಕೆಯಿಂದ ಬಳಸಬೇಕು. ಒಂದು ವೇಳೆ ಎಚ್ಚರ ತಪ್ಪಿದರೆ ಅಂತ್ಯದಿನದಂದು ಪರಾಜಿತರಾಗಬೇಕಾದೀತು ಎಂದು ಪ್ರವಾದಿಯವರು(ಸ) ತಮ್ಮ ಅನುಯಾಯಿಗಳನ್ನು ಎಚ್ಚರಿಸುತ್ತಿದ್ದರು. ಒಮ್ಮೆ ಪ್ರವಾದಿ(ಸ) ಹೇಳಿದರು:

إِنَّ الرَّجُلَ لَيَدْنُو مِنَ الْجَنَّةِ حَتَّى مَا يَكُونَ بَيْنَهُ وَبَيْنَهَا إِلَّا قِيدُ رُمْحٍ فَيَتَكَلَّمُ بِالْكَلِمَةِ فَيَتَبَاعَدُ مِنْهَا أَبْعَدَ مِنْ صَنْعَاءِ!

'ಒಬ್ಬ ವ್ಯಕ್ತಿ (ಸತ್ಕರ್ಮಗಳಿಂದ) ಸ್ವರ್ಗಕ್ಕೆ ಸಮೀಪವಾಗುತ್ತಿರುವನು. ಆ ವ್ಯಕ್ತಿ ಮತ್ತು ಸ್ವರ್ಗದ ಮಧ್ಯೆ ಕೇವಲ ಒಂದು ಕಂಬದ ಆಳತೆಯಷ್ಟು ದೂರ ಮಾತ್ರ ಬಾಕಿಯುಳಿದಿರುತ್ತದೆ. ಹೀಗಿರುವಾಗ ಆ ವ್ಯಕ್ತಿ ಒಂದು ಮಾತನ್ನಾಡಿದನು ಮತ್ತು ಆ ಮಾತಿನ ಕಾರಣದಿಂದಾಗಿ 'ಸನ್‌ಆ' ಇರುವ ಸ್ಥಳಕ್ಕಿಂತಲೂ ದೂರದ ಅಂತರವುಳ್ಳ ಸ್ಥಳಕ್ಕೆ ಆ ವ್ಯಕ್ತಿ ತಲುಪಿಬಿಡುವನು.'[2]

ಕೆಲವು ಮಾತುಗಳು ಸಮಾಜದಲ್ಲಿ ಮುಗಿಯದ ಕಲಹ ಮತ್ತು ಜಗಳಕ್ಕೆ

ಕಾರಣವಾಗಿ ಬಿಡುತ್ತವೆ. ಇದಕ್ಕೆ ವಿಪರೀತವಾದುದೂ ಸಂಭವಿಸಬಹುದು. ಒಂದು ಉತ್ತಮ ಮಾತು ಇಡೀ ಸಮಾಜವನ್ನು ಉತ್ತೇಜಿಸುತ್ತಾ, ಒಳಿತನ್ನು ಮಾಡುವ ಅನೇಕ ದ್ವಾರಗಳನ್ನು ತೆರೆಯಲು ಕಾರಣವಾಗಬಹುದು. ಕೋಪ ದ್ವೇಷಗಳನ್ನು ಮರೆತು ಜನರನ್ನು ಒಟ್ಟು ಸೇರಿಸಲು ಪ್ರೀತಿಯ ಕೆಲವು ಮಾತುಗಳು ಸಾಕಾಗುತ್ತದೆ. ಸಮಾಜ ದಲ್ಲಿ ಒಳಿತಿನ ಕೆಲಸಕ್ಕೆ ಪ್ರೇರಕವಾಗುವ ಕೆಲವು ಉತ್ತಮ ಮಾತುಗಳು ಆ ವ್ಯಕ್ತಿಗೆ ಉಪಕಾರಪ್ರದವಾಗಿ ಮಾರ್ಪಡಬಹುದು. ಕೆಟ್ಟ ಕೆಲಸಗಳಿಗೆ ಪ್ರಚೋದನೆ ನೀಡುವ ಮಾತುಗಳನ್ನಾಡಿದರೆ, ಅದನ್ನಾಡಿದ ವ್ಯಕ್ತಿಯ ಮೇಲೆ ಕೆಟ್ಟ ರೀತಿಯ ಪ್ರಭಾವ ಉಂಟು ಮಾಡಬಹುದು. ಪ್ರವಾದಿ ಮುಹಮ್ಮದ್(ಸ)ರು ಹೇಳಿರುವರು:

إِنَّ الرَّجُلَ لَيَتَكَلَّمُ بِالْكَلِمَةِ مِنْ رِضْوَانِ اللَّهِ مَا كَانَ يَظُنُّ أَنْ تَبْلُغَ مَا بَلَغَتْ يَكْتُبُ اللَّهُ تَعَالَى لَهُ بِهَا رِضْوَانَهُ إِلَى يَوْمِ يَلْقَاهُ، وَإِنَّ الرَّجُلَ لَيَتَكَلَّمُ بِالْكَلِمَةِ مِنْ سَخَطِ اللَّهِ مَا كَانَ يَظُنُّ أَنْ تَبْلُغَ يَكْتُبُ اللَّهُ لَهُ بِهَا سَخَطَهُ إِلَى يَوْمِ يَلْقَاهُ

ಒಬ್ಬ ವ್ಯಕ್ತಿ ಅಲ್ಲಾಹನಿಗೆ ಸಂಪ್ರೀತಿಯುಂಟಾಗುವಂತಹ ಒಂದು ಮಾತನ್ನು ಹೇಳು ವನು. ಅದರ ಪರಿಣಾಮದ ಬಗ್ಗೆ ಅವನು ಚಿಂತಿಸಿರುವುದಿಲ್ಲ. ಆದರೂ ಆ ಮಾತಿನ ಕಾರಣದಿಂದಾಗಿ ಆ ವ್ಯಕ್ತಿಯು ಅಲ್ಲಾಹನನ್ನು ಭೇಟಿಯಾಗುವ ವರೆಗೆ ಅಲ್ಲಾಹನಿಂದ ಸಂಪ್ರೀತನಾದ ವ್ಯಕ್ತಿ ಎಂದು ದಾಖಲಿಸಲ್ಪಡುವನು. ಇನ್ನೊಬ್ಬ ವ್ಯಕ್ತಿ ಅಲ್ಲಾಹನಿಗೆ ಇಷ್ಟವಿಲ್ಲದ ಒಂದು ಮಾತನ್ನು ಹೇಳುವನು.ಅದರ ಪರಿಣಾಮದ ಬಗ್ಗೆ ಅವನು ಚಿಂತನೆ ನಡೆಸಿರುವುದಿಲ್ಲ. ಆದರೂ ಆ ಮಾತಿನ ಕಾರಣದಿಂದಾಗಿ ಅಲ್ಲಾಹ ನನ್ನು ಭೇಟಿಯಾಗುವ ವರೆಗೆ ಅಲ್ಲಾಹನ ಕೋಪಕ್ಕೆ ಪಾತ್ರನಾದ ವ್ಯಕ್ತಿ ಎಂದು ದಾಖಲಿ ಸಲ್ಪಡುವನು.[3]

ಉಮರ್ ಬಿನ್ ಅಬ್ದುಲ್ ಅಝೀಝ್(ರ) ತಮ್ಮ ಬಗ್ಗೆ ಈ ರೀತಿ ಹೇಳಿರುತ್ತಾರೆ: إِنِّي لَأَدَعُ كَثِيرًا مِنَ الْكَلَامِ مَخَافَةَ الْمُبَاهَاةِ 'ಹೊಗಳಿಕೆ ಅಥವಾ ಆತ್ಮಪ್ರಶಂಸೆ ಬಂದು ಬಿಡು ವುದೋ ಎಂದು ಹೆದರಿ ನಾನು ಹೆಚ್ಚಿನ ಮಾತುಕತೆಗಳನ್ನು ಬಿಟ್ಟು ಬಿಡುತ್ತೇನೆ.'[4]

ವಿದ್ವಾಂಸರಾಗಿದ್ದ ಹಾತಿಮುಲ್ ಅಸ್ವಮ್ ಹೇಳುತ್ತಾರೆ:

إِنِّي لَا أُحِبُّ أَنْ أَتَكَلَّمَ كَلِمَةً قَبْلَ أَنْ أَسْتَعِدَّ جَوَابَهَا لِلَّهِ، فَإِذَا قَالَ اللَّهُ تَعَالَى لِي يَوْمَ الْقِيَامَةِ: لِمَ قُلْتَ كَذَا؟! قُلْتُ: يَارَبِّ، لِكَذَا

'ಅಲ್ಲಾಹನಿಗೆ ನೀಡಬೇಕಾದ ಉತ್ತರವನ್ನು ಕಂಡುಹಿಡಿಯದೆ ನಾನು ಯಾವ

ಮಾತನ್ನೂ ಆಡುವುದಿಲ್ಲ. ಅಂತ್ಯದಿನದಂದು ಅಲ್ಲಾಹನು ನೀನೇಕೆ ಹೀಗೆ ಹೇಳಿದೆ ಎಂದು ನನ್ನೊಂದಿಗೆ ಪ್ರಶ್ನಿಸುವನು. ಆಗ ನಾನು, ಪ್ರಭೂ, ಈ ಕಾರಣಕ್ಕಾಗಿ ಎಂದು ಉತ್ತರಿಸುವಂತಾಗಬೇಕು.'[5]

ಮಾತನಾಡುವಾಗ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಮತ್ತು ಪಾಲಿಸಬೇಕಾದ ಮುಂಜಾಗರೂಕತೆಗಳ ಬಗ್ಗೆ ವಿದ್ವಾಂಸರಾದ ಹಸನ್ ಬಸ್ರೀ(ರ) ಹೀಗೆ ವಿವರಿಸಿರುತ್ತಾರೆ:

إِنَّ لِسَانَ الْحَكِيمِ مِنْ وَرَاءِ قَلْبِهِ، فَإِذَا أَرَادَ أَنْ يَقُولَ يَرْجِعُ إِلَى قَلْبِهِ، فَإِنْ كَانَ لَهُ قَالَ،
وَإِنْ كَانَ عَلَيْهِ أَمْسَكَ، وَإِنَّ الْجَاهِلَ قَلْبُهُ فِي طَرَفِ لِسَانِهِ، لَا يَرْجِعُ إِلَى الْقَلْبِ،
فَمَا أُتِيَ عَلَى لِسَانِهِ تَكَلَّمَ بِهِ

'ಬುದ್ಧಿವಂತ ವ್ಯಕ್ತಿಯ ನಾಲಗೆ ಆತನ ಹೃದಯದ ಹಿಂದಿರುವುದು. ಮಾತನಾಡಲು ಆರಂಭಿಸುವಾಗ ವ್ಯಕ್ತಿ ಹೃದಯದೊಂದಿಗೆ ಅನುಮತಿ ಕೇಳುವನು. ಅನುಮತಿ ದೊರೆತರೆ ಮಾತನಾಡುವನು. ಅನ್ಯಥಾ ಮೌನವಾಗಿರುವನು. ಅವಿವೇಕಿಯ ಹೃದಯ ಅವನ ನಾಲಗೆಯ ತುದಿಯಲ್ಲಿರುತ್ತದೆ. ಅವನು ಹೃದಯದೆಡೆಗೆ ತಿರುಗಿಯೂ ನೋಡುವುದಿಲ್ಲ. ನಾಲಗೆಗೇನು ತೋಚುತ್ತದೋ ಅದನ್ನೇ ಹೇಳಿಬಿಡುತ್ತಾನೆ.'[6]

ಸಂಕ್ಷಿಪ್ತದಲ್ಲಿ, ವ್ಯಕ್ತಿಯು ನಾಲಗೆಯನ್ನು ಹೇಗೆ ಬಳಸುತ್ತಾನೆ ಎಂಬುದು ವ್ಯಕ್ತಿಯ ಇಹ–ಪರಗಳ ಜಯಾಪಜಯಗಳನ್ನು ನಿರ್ಣಯಿಸುವ ಬಹಳ ಪ್ರಮುಖ ವಿಷಯವಾಗಿದೆ. ಅಷ್ಟೊಂದು ಗಮನ ನೀಡದೆ ನಾವು ಹೇಳಿಬಿಟ್ಟ ಮಾತುಗಳು ಕೂಡ ನಮ್ಮ ಧರ್ಮ ಮತ್ತು ಇಹಜೀವನದ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂಬುದನ್ನು ಮೇಲಿನ ಪ್ರವಾದಿವಚನಗಳಲ್ಲಿ ನಾವು ನೋಡಿದೆವು.

مَنْ كَانَ يُؤْمِنُ بِاللهِ وَالْيَوْمِ الآخِرِ فَالْيَقُلْ خَيْرًا أَوْ لِيَصْمُتْ

ಅಲ್ಲಾಹ್ ಮತ್ತು ಅಂತಿಮ ದಿನದ ಮೇಲೆ ವಿಶ್ವಾಸವಿರಿಸುವ ವ್ಯಕ್ತಿ ಮಾತನಾಡಿದರೆ ಒಳ್ಳೆಯ ಮಾತನ್ನಾಡಲಿ, ಇಲ್ಲವಾದರೆ ಮೌನವಾಗಿರಲಿ[7] ಎಂಬ ಪ್ರಸಿದ್ಧವಾದ ಪ್ರವಾದಿವಚನವನ್ನು ಇದರೊಂದಿಗೆ ಸೇರಿಸಿ ಓದಬೇಕು.

---

1) ಬುಖಾರಿ, ಮುಸ್ಲಿಮ್, ತಿರ್ಮಿದಿ, ಅಬುದಾವೂದ್, ಅಹ್ಮದ್. **2)** ಅಹ್ಮದ್: 4/64, ಇಬ್ನು ಅಬಿದ್ದುನ್ಯಾ – ಸೂಮತ್: 430, ಅಸ್ಬಹಾನಿ: 2362. **3)** ಮಾಲಿಕ್: 2/985, ತಿರ್ಮಿದಿ; 2391, ಇಬ್ನು ಮಾಜ: 3969, ಇಬ್ನು ಹಿಬ್ಬಾನ್: 287, ಹಾಕಿಮ್: 1/45. **4)** ತಹಕಾತ್ ಬಿನ್ ಸಅದ್: 5/368. **5)** ತಾರೀಖ್ ಬಗ್ದಾದ್: 8/245. **6)** ಅಝ್ಝುಹ್ದ್, ಇಬ್ನು ಮುಬರಕ್: 389. **7)** ಬುಖಾರಿ: 6/36, ಮುಸ್ಲಿಮ್: 48

40. ವ್ಯಭಿಚಾರಕ್ಕಿಂತಲೂ ದೊಡ್ಡ ಪಾಪ

عَنْ أَبِي هُرَيْرَةَ رَضِيَ اللّٰهُ عَنْهُ قَالَ: جَاءَ مَاعِزُ بْنِ مَالِكٍ الأَسْلَمِيُ فَرَجَمَهُ النَّبِيُّ ﷺ عِنْدَ الرَّابِعَةِ، فَمَرَّ رَسُوْلُ اللّٰهِ ﷺ وَمَعَهُ نَفَرٌ مِنْ أَصْحَابِهِ، فَقَالَ رَجُلٌ مِنْهُمْ: إِنَّ هَذَا لَخَائِنٌ، أَتَى النَّبِيَّ مِرَارًا، كُلُّ ذَلِكَ يَرُدُّهُ، حَتَّى قُتِلَ كَمَا يُقْتَلُ الْكَلْبُ! فَسَكَتَ عَنْهُمُ النَّبِيُّ حَتَّى مَرَّ بِجِيْفَةِ حِمَارٍ شَائِلَةٍ رِجْلِهِ، فَقَالَ: كُلَا مِنْ هَذَا. قَالَا: مِنْ جِيْفَةِ حِمَارٍ، يَا رَسُوْلَ اللّٰهِ؟ قَالَ فَالَّذِي نِلْتُمَا مِنْ عِرْضِ أَخِيْكُمَا آنِفًا أَكْثَرُ وَالَّذِي نَفْسُ مُحَمَّدٍ بِيَدِهِ! إِنَّهُ فِي نَهْرٍ مِنْ أَنْهَارِ الْجَنَّةِ يَتَغَمَّسُ.

ಅಬೂ ಹುರೈರಾ(ರ)ರಿಂದ ವರದಿ. ಅಸ್ಲಮ್ ಗೋತ್ರದ ಮಾಇಝ್ ಬಿನ್ ಮಲಿಕ್(ರ) ಪ್ರವಾದಿಯವರ(ಸ) ಸನ್ನಿಧಿಯಲ್ಲಿ ಬಂದು ವ್ಯಭಿಚಾರಕ್ಕೆ ಇರುವ ಶಿಕ್ಷೆಯನ್ನು ತನ್ನ ಮೇಲೆ ಜಾರಿಗೊಳಿಸಬೇಕೆಂದು ನಾಲ್ಕು ಬಾರಿ ಪುನರಾವರ್ತಿಸಿ ಹೇಳಿದಾಗ, ಪ್ರವಾದಿಯವರು(ಸ) ಅವರಿಗೆ ಕಲ್ಲೆಸೆದು ಕೊಲ್ಲುವ ಶಿಕ್ಷೆಯನ್ನು ವಿಧಿಸಿದರು. ಕೆಲವು ದಿನಗಳ ಬಳಿಕ ಪ್ರವಾದಿ ಮುಹಮ್ಮದ್(ಸ) ಮತ್ತು ಕೆಲವು ಅನುಯಾಯಿಗಳು (ಮಾಇಝ್‌ಗೆ ಶಿಕ್ಷೆ ವಿಧಿಸಲ್ಪಟ್ಟ ಪ್ರದೇಶದ ಮೂಲಕ) ನಡೆದು ಕೊಂಡು ಹೋಗುತ್ತಿದ್ದರು. ಒಬ್ಬ ವ್ಯಕ್ತಿ ಹೇಳಿದ: ಈ ವ್ಯಕ್ತಿ ಎಂತಹ ಬುದ್ಧಿಹೀನ. ಹಲವು ಬಾರಿ ಪ್ರವಾದಿಯವರ(ಸ) ಬಳಿಗೆ ಬಂದಿದ್ದರು. ಪ್ರವಾದಿಯವರು(ಸ) ಅವರನ್ನು ಹಿಂದಕ್ಕೆ ಕಳುಹಿಸಿದ್ದರು. ಆದರೂ ಒಂದು ನಾಯಿ ಕೊಲ್ಲಲ್ಪಡುವಂತೆ ಕೊಲ್ಲಲ್ಪಟ್ಟರು. ಇದನ್ನು ಕೇಳಿ ಪ್ರವಾದಿಯವರು(ಸ) ಮೌನ ಪಾಲಿಸಿದರು. ಸ್ವಲ್ಪ ಮುಂದೆ ಹೋದಾಗ ಸತ್ತು ಉಬ್ಬಿಕೊಂಡು ಬಿದ್ದಿದ್ದ, ಕೈಕಾಲುಗಳು ಎದ್ದು

ನಿಂತಿದ್ದ ಒಂದು ಕತ್ತೆಯ ಶವದ ಸಮೀಪ ತಲುಪಿದರು. ಪ್ರವಾದಿ(ಸ) ಹೇಳಿದರು, 'ನೀವು ಇಬ್ಬರು ಇದನ್ನು ತಿನ್ನಿರಿ.' ಅವರು ಪ್ರಶ್ನಿಸಿದರು, 'ಈ ಕತ್ತೆಯ ಶವವನ್ನೇ?' ಪ್ರವಾದಿ(ಸ) ಹೇಳಿದರು, 'ಹೌದು. ನೀವು ಸ್ವಲ್ಪ ಹೊತ್ತು ಮುಂಚೆ ನಿಮ್ಮ ಸಹೋದರನ ಅಭಿಮಾನಕ್ಕೆ ಧಕ್ಕೆಯುಂಟಾಗುವಂತಹ ಮಾತುಗಳನ್ನಾಡಿರುವುದು, ಈ ಸತ್ತ ಪ್ರಾಣಿಯ ಮಾಂಸ ತಿನ್ನುವುದಕ್ಕಿಂತಲೂ ಗುರುತರವಾದ ಪಾಪವಾಗಿದೆ. ಮುಹಮ್ಮದ್‌ನ ಪ್ರಾಣ ಯಾರ ಕೈಯಲ್ಲಿದೆಯೋ ಅವನಾಣೆ. ನಿಶ್ಚಯವಾಗಿಯೂ ಮಾಇಝ್ ಸ್ವರ್ಗದ ನದಿಗಳ ಪೈಕಿ ಒಂದು ನದಿಯಲ್ಲಿ ಈಜಾಡುತ್ತಿರಬಹುದು.'*

ಇಸ್ಲಾಮ್ ಕಠಿಣವಾಗಿ ನಿಷೇಧಿಸಿರುವ ಮಹಾಪಾಪಗಳ ಪೈಕಿ ವ್ಯಭಿಚಾರವು ಒಂದಾಗಿದೆ. ಆದರೆ ವ್ಯಭಿಚಾರಕ್ಕಿಂತಲೂ ಕಠಿಣವಾಗಿ ಧರ್ಮವು ನಿಷೇಧಿಸಿರುವ ಇನ್ನೂ ಕೆಲವು ಪಾಪಗಳಿವೆ. ಪರದೂಷಣೆ ಅವುಗಳ ಪೈಕಿ ಪ್ರಮುಖವಾದುದು. ಮೇಲಿನ ಪ್ರವಾದಿವಚನವು ಈ ವಿಷಯದ ಬಗ್ಗೆ ನಮ್ಮ ಗಮನವನ್ನು ಸೆಳೆಯುತ್ತದೆ. ಪವಿತ್ರ ಕುರ್‌ಆನ್ ಹೇಳುತ್ತದೆ: 'ಸತ್ಯವಿಶ್ವಾಸಿಗಳೇ ಹೆಚ್ಚಿನ ಗುಮಾನಿಗಳಿಂದ ದೂರವಿರಿ. ನಿಶ್ಚಯವಾಗಿಯೂ ಕೆಲವು ಗುಮಾನಿಗಳು ಪಾಪವಾಗಿವೆ. ದೋಷಾನ್ವೇಷಣೆ ಮಾಡದಿರಿ. ನಿಮ್ಮಲ್ಲಿ ಯಾರೂ ಯಾರ ಬಗ್ಗೆಯೂ ಪರದೂಷಣೆ ಮಾಡಬಾರದು. ನಿಮ್ಮಲ್ಲಿ ಯಾರಾದರೂ ತನ್ನ ಮೃತ ಸಹೋದರನ ಮಾಂಸ ತಿನ್ನುವುದನ್ನು ಇಷ್ಟಪಡುವನೇ? ನೀವು ಸ್ವತಃ ಇದನ್ನು ಅಸಹ್ಯ ಪಡುತ್ತೀರಿ. ಅಲ್ಲಾಹನನ್ನು ಭಯಪಡಿರಿ. ಅಲ್ಲಾಹ್ ಪಶ್ಚಾತ್ತಾಪ ಸ್ವೀಕರಿಸುವವನೂ ಕರುಣಾನಿಧಿಯೂ ಆಗಿರುತ್ತಾನೆ.' (ಅಲ್ ಹುಜುರಾತ್: 12)

ಇತರರ ತಪ್ಪು, ಕೊರತೆಗಳ ಬಗ್ಗೆ ಅವರಿಗಿಷ್ಟವಿಲ್ಲದ ರೀತಿಯಲ್ಲಿ ಹೇಳುವುದು ಪರದೂಷಣೆಯಾಗಿದೆ. ಸಮಾಜದ ಹೆಚ್ಚಿನ ಜನರಲ್ಲಿ ಈ ಕೆಟ್ಟ ಅಭ್ಯಾಸವು ಕಂಡು ಬರುತ್ತದೆ. ಧರ್ಮದ ಬಗ್ಗೆ ಅತಿಯಾದ ಒಲವುಳ್ಳ ವ್ಯಕ್ತಿಗಳಲ್ಲಿಯೂ ಪರ ದೂಷಣೆಯ ಸ್ವಭಾವವನ್ನು ಕಾಣಬಹುದು. ವ್ಯಭಿಚಾರದಂತಹ ಮಹಾಪಾಪದ ಬಗ್ಗೆ ಎಚ್ಚರಿಕೆ ವಹಿಸುವವರು ಕೂಡ ಪರದೂಷಣೆಯನ್ನು ಕ್ಷುಲ್ಲಕ ಮತ್ತು ನಿಸ್ಸಾರವಾಗಿ ಪರಿಗಣಿಸುತ್ತಾರೆ. ಅಬೂ ಸಈದ್ ಖುದ್ರೀ(ರ) ವರದಿ ಮಾಡಿರುವ ಪ್ರವಾದಿವಚನ ಹೀಗಿದೆ:

* ಇಮಾಮ್ ಬುಖಾರಿ – ಅದಬುಲ್ ಮುಫ್ರದ್: 737, ಬೈಹಕಿ – ಶುಅ್‌ಬುಲ್ ಈಮಾನ್: 9657, ಇಬ್ನು ಹಿಬ್ಬಾನ್: 4383, ಅಬೂದಾವೂದ್: 4428 ಮುಂತಾದವರು ಈ ಪ್ರವಾದಿವಚನವನ್ನು ವರದಿ ಮಾಡಿರುತ್ತಾರೆ. ಇದರ ವರದಿಯ ಪರಂಪರೆಯು ಜಯ್ಯಿದ್ (ಸರಿಯಾದುದು) ಎಂದು ಅಲ್ಲಾಮಾ ಇರಾಕಿ, ಸಹೀಹ್ ಆಗಿದೆ ಎಂದು ಝುಬೈದ್ ಸಾಕ್ಷಿ ಹೇಳಿರುತ್ತಾರೆ. (ಇತ್‌ಹಾಫ್, ಭಾಗ: 8, ಪುಟ: 292)

قَالَ رَسُولُ اللهِ ﷺ: الْغِيبَةُ أَشَدُّ مِنَ الزِّنَا، قَالُوا: يَا رَسُولَ اللهِ وَكَيْفَ الْغِيبَةُ أَشَدُّ مِنَ الزِّنَا؟ قَالَ: إِنَّ الرَّجُلَ لَيَزْنِي فَيَتُوبُ، فَيَتُوبُ اللهُ عَلَيْهِ، وَإِنَّ صَاحِبَ الْغِيبَةِ لَا يُغْفَرُ لَهُ حَتَّى يَغْفِرَهَا لَهُ صَاحِبُهُ

ಪ್ರವಾದಿ(ಸ) ಹೇಳಿರುವರು: ಪರದೂಷಣೆಯು ವ್ಯಭಿಚಾರಕ್ಕಿಂತಲೂ ದೊಡ್ಡ ಪಾಪವಾಗಿದೆ. ಜನರು ಪ್ರಶ್ನಿಸಿದರು: ಅಲ್ಲಾಹನ ಪ್ರವಾದಿಗಳೇ, ಪರದೂಷಣೆಯು ವ್ಯಭಿಚಾರಕ್ಕಿಂತಲೂ ದೊಡ್ಡ ಕೆಡುಕು ಆಗುವುದು ಹೇಗೆ? ಪ್ರವಾದಿ(ಸ) ಉತ್ತರಿಸಿದರು: ಒಬ್ಬ ವ್ಯಕ್ತಿ ವ್ಯಭಿಚಾರ ಮಾಡಿದ ಬಳಿಕ ಪಶ್ಚಾತ್ತಾಪ ಪಟ್ಟರೆ ಅಲ್ಲಾಹನು ಅವನ ಪಶ್ಚಾತ್ತಾಪ ಸ್ವೀಕರಿಸುವನು. ಆದರೆ ಪರದೂಷಣೆಯನ್ನು ಯಾರ ಬಗ್ಗೆ ಮಾಡಲಾಗಿದೆಯೋ, ಆ ವ್ಯಕ್ತಿ ಕ್ಷಮಿಸುವ ವರೆಗೆ ಅಲ್ಲಾಹನು ಕ್ಷಮಿಸುವುದಿಲ್ಲ.[1]

ವ್ಯಕ್ತಿಯ ಅಭಿಮಾನಕ್ಕೆ ಧಕ್ಕೆ ತರುವುದನ್ನು ಬಹಳ ಪ್ರಮುಖ ಕೆಡುಕೆಂದು ಇಸ್ಲಾಮ್ ಪರಿಗಣಿಸುತ್ತದೆ. ಅದು ಒಬ್ಬ ವ್ಯಕ್ತಿಯನ್ನು ಕೊಲ್ಲುವುದಕ್ಕಿಂತಲೂ ದೊಡ್ಡ ಪಾಪವಾಗಿದೆ. ಪರದೂಷಣೆಯನ್ನು ಪವಿತ್ರ ಕುರ್‌ಆನ್ ಮೃತ ಸಹೋದರನ ಶವದ ಮಾಂಸ ತಿನ್ನುವು ದಕ್ಕೆ ಹೋಲಿಸುತ್ತದೆ. ಪ್ರವಾದಿ(ಸ) ಹೇಳಿರುವರು:

مَنْ أَكَلَ لَحْمَ أَخِيهِ فِي الدُّنْيَا قُرِّبَ لَهُ يَوْمَ الْقِيَامَةِ فَيُقَالُ لَهُ: كُلْهُ مَيْتًا كَمَا أَكَلْتَهُ حَيًّا، فَيَأْكُلُهُ وَيَكْلَحُ وَيَصِيحُ

ಇಹಲೋಕ ಜೀವನದಲ್ಲಿ ತನ್ನ ಸಹೋದರನ ಬಗ್ಗೆ ಪರದೂಷಣೆ ಮಾಡಿ ಅವನ ಮಾಂಸವನ್ನು ತಿಂದು ಜೀವಿಸಿದ ವ್ಯಕ್ತಿಯ ಮುಂದೆ ಅಂತ್ಯದಿನದಂದು ಆ ಶರೀರವನ್ನು ಹಾಜರು ಪಡಿಸಲಾಗುವುದು. ಅವನೊಡನೆ ಹೀಗೆ ಹೇಳಲಾಗುವುದು– ಈ ಮೃತ ಶರೀರವನ್ನು ತಿನ್ನು. ಹಿಂದೆ ನೀನು ಇದನ್ನು ಜೀವಂತ ತಿಂದಿದ್ದಿಯಲ್ಲವೇ? ಹೀಗೆ ವ್ಯಕ್ತಿ ಅದನ್ನು ತಿನ್ನಲು ನಿರ್ಬಂಧಿತನಾಗುವನು. ಅಸಹ್ಯವೆನಿಸಿ ಅವನು ಮುಖ ಸಿಂಡರಿಸುವನು ಮತ್ತು ಆರ್ತನಾದಗೈಯುವನು.[2]

ಒಮ್ಮೆ ಅಮ್ರ್ ಬಿನ್ ಆಸ್(ರ) ತಮ್ಮ ಕೆಲವು ಸ್ನೇಹಿತರೊಂದಿಗೆ ಯಾತ್ರೆ ಹೋಗುತ್ತಿದ್ದರು. ದಾರಿಮಧ್ಯೆ ಸತ್ತು ಬಿದ್ದಿದ್ದ ಒಂದು ಕತ್ತೆಯ ಸಮೀಪದಿಂದ ಹಾದು ಹೋದರು. ಆಗ ಅವರು ಹೇಳಿದರು:

وَاللهِ لَأَنْ يَأْكُلَ أَحَدُكُمْ هَذَا حَتَّى يَمْلَأَ بَطْنَهُ، خَيْرٌ لَهُ مِنْ أَنْ يَأْكُلَ لَحْمَ رَجُلٍ مُسْلِمٍ

ಪರದೂಷಣೆ ಮಾಡಿ ಒಬ್ಬ ಮುಸ್ಲಿಮನ ಮಾಂಸ ತಿನ್ನುವುದಕ್ಕಿಂತ ಈ ಕತ್ತೆಯ ಮಾಂಸವನ್ನು ಹೊಟ್ಟೆ ತುಂಬಾ ತಿನ್ನುವುದು ಲೇಸು.[3]

ಮಿಅ್‌ರಾಜ್ ರಾತ್ರಿಯ ಒಂದು ಘಟನೆಯ ಕುರಿತು ಪ್ರವಾದಿವರ್ಯರು(ಸ) ಈ ರೀತಿ ವಿವರಿಸಿರುವರು:

لَمَّا عُرِجَ بِي، مَرَرْتُ بِقَوْمٍ، لَهُمْ أَظْفَارٌ مِنْ نُحَاسٍ، يَخْمِشُونَ وُجُوهَهُمْ وَصُدُورَهُمْ، فَقُلْتُ: مَنْ هَؤُلَاءِ يَا جِبْرِيلُ؟ قَالَ: هَؤُلَاءِ الَّذِينَ يَأْكُلُونَ لُحُومَ النَّاسِ، وَيَقَعُونَ فِي أَعْرَاضِهِمْ

'ಮಿಅ್‌ರಾಜ್ ಯಾತ್ರೆಯ ವೇಳೆ ನಾನು ಜನರ ಗುಂಪಿನ ಸಮೀಪದಿಂದ ಹಾದು ಹೋದೆ. ಅವರಿಗೆ ಲೋಹದ ಉಗುರುಗಳಿದ್ದುವು. ಅವುಗಳ ಮೂಲಕ ಅವರು ತಮ್ಮ ಮುಖ ಮತ್ತು ಎದೆಯನ್ನು ಪರಚಿಕೊಳ್ಳುತ್ತಿದ್ದರು. ಇದು ಯಾರೆಂದು ನಾನು ಜಿಬ್ರೀಲ್(ಅ)ರಲ್ಲಿ ಪ್ರಶ್ನಿಸಿದೆ. ಜನರ ಬಗ್ಗೆ ಪರದೂಷಣೆ ಮಾಡಿ ಅವರ ಅಭಿಮಾನಕ್ಕೆ ಧಕ್ಕೆಯನ್ನುಂಟು ಮಾಡಿದವರು ಎಂದು ಜಿಬ್ರೀಲ್(ಅ) ಉತ್ತರಿಸಿದರು.'[4]

ಸ್ವತಃ ತಮ್ಮ ಕೊರತೆ ಮತ್ತು ದೌರ್ಬಲ್ಯಗಳ ಕುರಿತು ಆಲೋಚಿಸುತ್ತಿರುವುದು ಪರದೂಷಣೆಯಿಂದ ರಕ್ಷಣೆ ಹೊಂದಲಿಕ್ಕಿರುವ ಒಂದು ಅತ್ಯುತ್ತಮ ದಾರಿಯಾಗಿದೆ. ತನ್ನ ಕುಂದು-ಕೊರತೆಗಳು ಯಾವುದು ಎಂದು ತಿಳಿದುಕೊಂಡ ವ್ಯಕ್ತಿ, ಇತರರ ಕುಂದು-ಕೊರತೆಗಳನ್ನು ಹುಡುಕುತ್ತಾ ನಡೆಯುವುದಿಲ್ಲ ಮತ್ತು ಅದನ್ನು ಪ್ರಚಾರ ಮಾಡುವ ಕೆಲಸವನ್ನೂ ಮಾಡುವುದಿಲ್ಲ. ಪ್ರವಾದಿ(ಸ) ಹೇಳಿರುವರು:

طُوبَى لِمَنْ شَغَلَهُ عَيْبُهُ عَنْ عُيُوبِ النَّاسِ!

'ತನ್ನ ಕುಂದು-ಕೊರತೆಗಳನ್ನು ಹುಡುಕುತ್ತಾ ನಡೆದು ಆ ಕಾರಣದಿಂದ ಜನರ ಕುಂದು ಕೊರತೆಗಳನ್ನು ಮರೆತು ಬಿಟ್ಟ ವ್ಯಕ್ತಿಗೆ ಶುಭವಾಗಲಿ.'[5]

ಇಬ್ನು ಅಬ್ಬಾಸ್(ರ) ಹೇಳುತ್ತಾರೆ:

إِذَا أَرَدْتَ أَنْ تَذْكُرَ عُيُوبَ صَاحِبِكَ فَاذْكُرْ عُيُوبَكَ

'ನಿನ್ನ ಗೆಳೆಯನ ಕುಂದು-ಕೊರತೆಗಳನ್ನು ಹೇಳಬೇಕೆನಿಸಿದರೆ, ನಿನ್ನ ಕುಂದು-ಕೊರತೆಗಳ ಬಗ್ಗೆ ಆಲೋಚಿಸು.'[6]

ಇತರರ ಬಗ್ಗೆ ಒಳ್ಳೆಯ ವಿಷಯಗಳನ್ನು ಮಾತ್ರ ಹೇಳಬಹುದು ಎಂಬುದರ ಬಗ್ಗೆಯು ಆರಂಭದ ಹದೀಸ್ ವಚನ ಬೆಳಕು ಚೆಲ್ಲುತ್ತದೆ. ವ್ಯಭಿಚಾರವೆಸಗಿದ ಬಳಿಕ ಶಿಕ್ಷೆಯನ್ನು ಕೇಳಿ ಪಡೆದ ವ್ಯಕ್ತಿಯಾಗಿದ್ದರು ಮಾಇಝ್(ರ). ಹಾಗಿದ್ದರೂ ಪ್ರವಾದಿಯವರು(ಸ) ಅವರ ಬಗ್ಗೆ ಒಳ್ಳೆಯ ವಿಷಯವನ್ನು ಮಾತ್ರ ಹೇಳುತ್ತಾರೆ. ಸ್ವರ್ಗದ

ನದಿಗಳಲ್ಲಿ ಅವರು ಸಂತೋಷದಿಂದ ಈಜಾಡುತ್ತಿರಬಹುದು ಎಂಬ ಶುಭವಾರ್ತೆಯನ್ನು ನೀಡುತ್ತಾರೆ. ಅವರಿಗಾಗಿ ಪ್ರಾರ್ಥಿಸುತ್ತಾರೆ ಮತ್ತು ಅವರ ಜನಾಝಾ ನಮಾಝ್ ನಿರ್ವಹಿಸುತ್ತಾರೆ. ಪ್ರವಾದಿ(ಸ) ಹೇಳುತ್ತಾರೆ:

اِسْتَغْفِرُوْا لِمَاعِزِ بْنِ مَالِكٍ، لَقَدْ تَابَ تَوْبَةً لَوْ قُسِّمَتْ بَيْنَ أُمَّةٍ لَوَسِعَتْهُمْ!

'ನೀವು ಮಾಇಝ್‌ರಿಗಾಗಿ ಕ್ಷಮಾ ಪ್ರಾರ್ಥನೆ ನಡೆಸಿರಿ. ಬಹಳ ಶ್ರೇಷ್ಠ ಪಶ್ಚಾತ್ತಾಪವನ್ನು ಅವರು ಮಾಡಿದ್ದರು. ಒಂದು ಸಂಪೂರ್ಣ ಸಮುದಾಯಕ್ಕೆ ಹಂಚಬಹುದಾದಷ್ಟು ಪ್ರಮಾಣದಲ್ಲಿತ್ತದು.'[7]

ಏನಾದರೂ ತಪ್ಪು ಕೆಲಸವನ್ನು ಮಾಡಿದ ವ್ಯಕ್ತಿಯನ್ನು ಅವರು ಪಶ್ಚಾತ್ತಾಪ ಪಟ್ಟು ಮರಳಿದ್ದರೂ ಅವರನ್ನು ಸಂಶಯದ ದೃಷ್ಟಿಯಿಂದ ನೋಡುವ ಚಾಳಿ ಕೆಲವರಿಗೆ ಇರುತ್ತದೆ. ಅದನ್ನು ಕೂಡ ಆರಂಭದ ಪ್ರವಾದಿವಚನವು ತಿದ್ದುತ್ತದೆ. ಒಬ್ಬ ವ್ಯಕ್ತಿ ಒಂದು ಅಪರಾಧವೆಸಗಿದರೆ, ಆ ಬಳಿಕ ಜೀವನಪೂರ್ತಿ ಆ ವ್ಯಕ್ತಿಯನ್ನು ಅದೇ ದೃಷ್ಟಿ ಯಿಂದ ನೋಡಲಾಗುತ್ತದೆ. ಅಲ್ಲಾಹನು ಕ್ಷಮಿಸಿದರೂ ಅವರು ಕ್ಷಮಿಸಿ ಬಿಡಲು ಸಿದ್ಧರಿಲ್ಲ. ಇದು ವಿಶ್ವಾಸದ ಚೈತನ್ಯಕ್ಕೆ ಹೊಂದಿಕೊಳ್ಳುವ ಒಂದು ವಿಶೇಷ ಮಾನಸಿಕ ಅವಸ್ಥೆ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾದ ಅಗತ್ಯವಿಲ್ಲ ತಾನೇ? (التَّائِبُ مِنَ الذَّنْبِ كَمَنْ لَا ذَنْبَ لَهُ) 'ತಪ್ಪು ಕೆಲಸಗಳನ್ನು ಮಾಡಿ ಆ ಬಳಿಕ ಪಶ್ಚಾತ್ತಾಪ ಪಟ್ಟವರ ಅವಸ್ಥೆಯು ತಪ್ಪು ಮಾಡದವರಂತೆ ಆಗಿರುತ್ತದೆ' ಎಂಬುದು ಧರ್ಮದ ಸಂದೇಶವಾಗಿದೆ.[8]

---

1. ಬೈಹಕಿ – ಶುಅ್‌ಬುಲ್ ಈಮಾನ್: 6741, ಇಬ್ನು ಅಬಿದ್ದುನ್ಯಾ – ಸೂಮ್ತ್: 164, ತಬ್ರಾನಿ – ಔಸತ್, ಮಿಷ್ಕಾತುಲ್ ಮಸಾಬೀಹ್: 4874.
2. ತಬ್ರಾನಿ – ಔಸಾತ್, ಇಬ್ನು ಅಬಿದ್ದುನ್ಯಾ – ಗೀಬತ್ತುವ್ವನಮೀಮತ್ತ್: 39, ಅಬೂ ಯಅ್‌ಲಾ ಫತ್‌ಹುಲ್ ಬಾರಿ; 10/485.
3. ಬುಖಾರಿ – ಅದಬುಲ್ ಮುಫ್ರದ್: 736, ಇಬ್ನು ಅಬಿದ್ದುನ್ಯಾ – ಸೂಮ್ತ್: 177.
4. ಅಹ್ಮದ್: 3/224, ಅಬೂದಾವೂದ್: 4878.
5. ಬೈಹಕಿ – ಶುಅ್‌ಬುಲ್ ಈಮಾನ್: 10563.
6. ಇಬ್ನು ಅಬಿದ್ದುನ್ಯಾ.
7. ಮುಸ್ಲಿಮ್.
8. ಇಬ್ನುಮಾಜ: 4250, ಬೈಹಕಿ: 7178, ತಬ್ರಾನಿ.

41. ಪರನಿಂದೆ ಮಾಡಬಾರದು, ಆಲಿಸಬಾರದು

عَنْ عَبْدِ اللَّهِ بْنِ مَسْعُودٍ رَضِيَ اللَّهُ عَنْهُ قَالَ: قَالَ رَسُولُ اللَّهِ ﷺ: "لَا يُبَلِّغُنِي أَحَدٌ مِنْ أَصْحَابِي عَنْ أَحَدٍ شَيْئًا، فَإِنِّي أُحِبُّ أَنْ أَخْرُجَ إِلَيْكُمْ وَأَنَا سَلِيمُ الصَّدْرِ

ಅಬ್ದುಲ್ಲಾ ಬಿನ್ ಮಸ್‌ಊದ್(ರ) ವರದಿ ಮಾಡಿರುತ್ತಾರೆ. ಪ್ರವಾದಿ(ಸ) ಹೇಳಿರುವರು: ನನ್ನ ಅನುಯಾಯಿಗಳ ಪೈಕಿ ಯಾರು ಯಾರ ಬಗ್ಗೆಯೂ ನನ್ನೊಂದಿಗೆ ದೂರು ಹೇಳಬಾರದು. ನಿಶ್ಚಯವಾಗಿಯೂ ನಾನು ನಿಮ್ಮ ಬಳಿ ಬಂದು ಭೇಟಿಯಾಗುವಾಗ ಹೃದಯ ಶುದ್ಧವಾಗಿರುವ ರೂಪದಲ್ಲಿ ಭೇಟಿಯಾಗಲು ಬಯಸುತ್ತೇನೆ.*

ಪ್ರವಾದಿ(ಸ) ಕೇವಲ ಓರ್ವ ಉಪದೇಶಕ ಅಥವಾ ಶುಭವಾರ್ತೆ ನೀಡುವ ವ್ಯಕ್ತಿ ಮಾತ್ರ ಆಗಿರಲಿಲ್ಲ. ಇತರರಲ್ಲಿ ಇರಬೇಕೆಂದು ಬಯಸುವ ಎಲ್ಲ ಸದ್ಗುಣಗಳನ್ನು ಸ್ವ ಜೀವನದಲ್ಲಿ ಪಾಲಿಸಿ ತೋರಿಸಿ ಕೊಟ್ಟಿದ್ದರು. ಅತ್ಯುತ್ಕೃಷ್ಟ ಗುಣಸ್ವಭಾವಗಳ ಒಡೆಯ ರಾಗಿದ್ದ ಪ್ರವಾದಿಯವರದ್ದು ಮಾದರಿಯೋಗ್ಯ ವ್ಯಕ್ತಿತ್ವವಾಗಿತ್ತು. ಸಚ್ಚಾರಿತ್ರ್ಯದ ಪೂರ್ತೀಕರಣಕ್ಕಾಗಿ ನನ್ನನ್ನು ನಿಯೋಗಿಸಲಾಗಿದೆ (إِنَّمَا بُعِثْتُ لِأُتَمِّمَ صَالِحَ الْأَخْلَاقِ) ಎಂಬುದಾಗಿ ಪ್ರವಾದಿವರ್ಯರು(ಸ) ಸ್ವತಃ ಹೇಳಿರುವರು.[1] ದೇವಸಂದೇಶವಾಹಕರ ಅತ್ಯುತ್ಕೃಷ್ಟ ಗುಣಸ್ವಭಾವ ವಿಶೇಷತೆಯೆಡೆಗೆ ಗಮನ ಸೆಳೆಯುವ ಪ್ರವಾದಿವಚನವು ಈ ಮೇಲೆ ಉದ್ಧರಿಸಲ್ಪಟ್ಟಿದೆ.

ಇತರರ ಬಗ್ಗೆ ಅವರಿಗಿಷ್ಟವಿಲ್ಲದ ರೀತಿಯಲ್ಲಿ ಪ್ರಸ್ತಾಪಿಸುವುದೇ ಪರನಿಂದೆ ಯಾಗಿದೆ. ಇಸ್ಲಾಮ್ ಬಹಳ ಕಠಿಣವಾಗಿ ಈ ಕೆಡುಕನ್ನು ವಿಮರ್ಶಿಸುತ್ತದೆ. ಮರಣ

* ಇಮಾಮ್ ಅಬುದಾವೂದ್: 4860, ತಿರ್ಮಿದಿ: 3896, ಅಹ್ಮದ್: 1/396, ಬೈಹಕಿ – ಸುನನ್: 8/166–167 ಮುಂತಾದವರು ಉದ್ಧರಿಸಿರುವರು. ಇದರ ಪರಂಪರೆಯ ಶ್ರೇಣಿಯು ಹಸನ್ ಆಗಿದೆಯೆಂದು ವಿದ್ವಾಂಸರಾದ ಶೈಖ್ ಅಹ್ಮದ್ ಶಾಕಿರ್ ಸಾಕ್ಷಿ ನುಡಿಯುತ್ತಾರೆ.

ಹೊಂದಿದ ವ್ಯಕ್ತಿಯ ಮೃತ ಶರೀರವನ್ನು ತಿನ್ನುವುದಕ್ಕೆ ಸಮಾನವೆಂದು (49: 12) ಪವಿತ್ರ ಕುರ್‌ಆನ್ ಈ ಕೆಡುಕನ್ನು ಪರಿಗಣಿಸುತ್ತದೆ. ಪರನಿಂದೆಯ ಮಾತುಗಳನ್ನು ಹೇಳುವುದು ಮಾತ್ರವಲ್ಲ, ಕೇಳುವುದನ್ನು ಕೂಡ ಇಸ್ಲಾಮ್ ವಿರೋಧಿಸಿದೆ. ಇಬ್ನು ಉಮರ್(ರ) ಹೇಳುತ್ತಾರೆ: نَهَى رَسُولُ اللهِ ﷺ عَنِ الْغِيبَةِ، وَعَنْ الإِسْتِمَاعِ إِلَى الْغِيبَةِ 'ಪರನಿಂದೆ ಮಾಡುವುದನ್ನು ಮತ್ತು ಅದನ್ನು ಆಲಿಸುವುದನ್ನು ಪ್ರವಾದಿಯವರು(ಸ) ಏಕಪ್ರಕಾರವಾಗಿ ನಿಷೇಧಿಸಿದ್ದಾರೆ.'[2]

نَزِّهْ سَمْعَكَ عَنِ إِسْتِمَاعِ الْخَنَا كَمَا تُنَزِّهُ لِسَانَكَ عَنِ الْقَوْلِ بِهِ، فَإِنَّ الْمُسْتَمِعَ شَرِيكُ الْقَائِلِ

ಅಮ್ರ್ ಬಿನ್ ಉತ್ಬಾ(ರ) ಹೇಳಿರುವರು, 'ಅನಗತ್ಯ ಮಾತುಗಳಿಂದ ನಿಮ್ಮ ನಾಲಗೆಯನ್ನು ಸಂರಕ್ಷಿಸುವಂತೆ ಅನಗತ್ಯ ಮಾತುಗಳನ್ನು ಆಲಿಸುವುದರಿಂದ ನಿಮ್ಮ ಕಿವಿಗಳನ್ನೂ ಸಂರಕ್ಷಿಸಿಕೊಳ್ಳಿ. ಏಕೆಂದರೆ ಕೆಟ್ಟ ಮಾತುಗಳನ್ನು ಆಡುವವನೊಂದಿಗೆ ಅದನ್ನು ಆಲಿಸುವವನು ಕೂಡ ಆ ಕೆಡುಕಿನಲ್ಲಿ ಸಹಭಾಗಿಯಾಗಿ ಬಿಡುವನು.'[3]

ಪರನಿಂದೆಯನ್ನು ಮಾಡುವುದು ಮತ್ತು ಅದನ್ನು ಆಲಿಸುವುದು ಎರಡೂ ಒಂದೇ ರೀತಿಯಲ್ಲಿ ಕೆಡುಕಾಗಿದೆ ಎಂಬುದನ್ನು ಸಾಬೀತುಪಡಿಸುವ ಚಾರಿತ್ರಿಕ ಘಟನೆಯೊಂದಿದೆ. ಅನಸ್(ರ) ಹೇಳುತ್ತಾರೆ: ಒಮ್ಮೆ ಅಬೂಬಕರ್(ರ) ಮತ್ತು ಉಮರ್(ರ) ರವರು ಪ್ರವಾದಿ ಮುಹಮ್ಮದ್(ಸ)ರೊಂದಿಗೆ ಪ್ರಯಾಣದಲ್ಲಿದ್ದರು. ಅವರ ಜೊತೆ ಆಹಾರ ತಯಾರಿಸಲು ಮತ್ತಿತರ ಕೆಲಸಗಳಲ್ಲಿ ಸಹಾಯ ಮಾಡಲು ಓರ್ವ ಸಹಾಯಕನಿದ್ದನು. ಒಂದು ದಿನ ಅಬೂಬಕರ್(ರ) ಮತ್ತು ಉಮರ್(ರ) ನಿದ್ರೆಯಿಂದ ಎಚ್ಚೆತ್ತಾಗ ಆ ಸಹಾಯಕನು ಇನ್ನೂ ನಿದ್ರಿಸುತ್ತಿದ್ದನು. ಇದನ್ನು ಕಂಡು ಅವರಲ್ಲಿ ಒಬ್ಬರು 'ಈ ವ್ಯಕ್ತಿಗೆ ಒಳ್ಳೆಯ ನಿದ್ರಿಸುವ ಸ್ವಭಾವ' ಎಂದು ಹೇಳಿದರು. ಆ ಬಳಿಕ ಅವರೆಲ್ಲರೂ ಒಟ್ಟಿಗೆ ಆಹಾರ ಸೇವಿಸಲು ಕುಳಿತಾಗ ಪ್ರವಾದಿಯವರು(ಸ) ಸ್ವಲ್ಪ ಪದಾರ್ಥ ಬೇಕೆಂದರು. ಬಳಿಕ ಹೀಗೆ ಹೇಳಿದರು: 'ನೀವಿಬ್ಬರೂ ಆಹಾರದೊಂದಿಗೆ ಪದಾರ್ಥವನ್ನೆಲ್ಲ ಸೇವಿಸಿ ಆಯಿತಲ್ಲ.' ಅವರು ಕೇಳಿದರು: 'ನಾವು ಯಾವಾಗ ಪದಾರ್ಥ ಬಳಸಿದ್ದು?' ಪ್ರವಾದಿ(ಸ) ಹೇಳಿದರು:

بِلَحْمِ أَخِيكُمَا، وَالَّذِي نَفْسِي بِيَدِهِ، إِنِّي لَأَرَى لَحْمَهُ بَيْنَ ثَنَايَاكُمَا!

'ನೀವಿಬ್ಬರೂ ಸ್ವಲ್ಪ ಸಮಯದ ಹಿಂದೆ ನಿಮ್ಮ ಸಹೋದರನ ನ್ಯೂನತೆಯನ್ನು ಪ್ರಸ್ತಾಪಿಸುತ್ತಿದ್ದಾಗಲೇ ನೀವು ಅವನ ಮಾಂಸವನ್ನು ತಿಂದಿದ್ದೀರಿ. ನನ್ನ ಆತ್ಮ ಯಾರ

ಅಧೀನದಲ್ಲಿದೆಯೋ ಅವನಾಣೆ. ನೀವಿಬ್ಬರೂ ನಿಮ್ಮ ಸಹೋದರನ ಮಾಂಸ ತಿಂದಿರುವುದರ ಕುರುಹನ್ನು ನಿಮ್ಮ ಮುಂದಿನ ಹಲ್ಲುಗಳಲ್ಲಿ ನಾನು ಕಾಣುತ್ತಿದ್ದೇನೆ.' ಅವರು ಹೇಳಿದರು, 'ಪ್ರವಾದಿಯವರೇ, ತಾವು ನಮಗಾಗಿ ಅಲ್ಲಾಹನೊಡನೆ ಪ್ರಾರ್ಥಿಸಿರಿ.' ಪ್ರವಾದಿ(ಸ) ಹೇಳಿದರು, 'ನೀವಿಬ್ಬರೂ ಆ ಸೇವಕನನ್ನು ಭೇಟಿಯಾಗಿ ಅವನೊಂದಿಗೆ ನಿಮಗಾಗಿ ಪ್ರಾರ್ಥಿಸಲು ಕೇಳಿಕೊಳ್ಳಿರಿ. ಅದು ನಿಮ್ಮ ಪಾಲಿಗೆ ಉತ್ತಮ.'[4]

ಇಮಾಮ್ ಗಝ್ಝಾಲಿ(ರ) ಈ ಘಟನೆಯ ಕುರಿತು ಹೀಗೆ ಹೇಳುತ್ತಾರೆ:

فَانْظُرْ كَيْفَ جَمَعَهُمَا، وَكَانَ الْقَائِلُ أَحَدَهُمَا، وَالآخَرُ مُسْتَمِعٌ، فَجَمَعَ بَيْنَهُمَا، فَالْمُسْتَمِعِ لَا يَخْرُجَ مِنْ إِثْمِ الْغِيْبَةِ إِلَّا أَنْ يَنْكَرَ بِلِسَانِهِ أَوْ بِقَلْبِهِ

'ಇಲ್ಲಿ ನೋಡಿ, ಸಂಗಾತಿಯ ಬಗ್ಗೆ ಅವನ ನ್ಯೂನತೆಯ ಕುರಿತು ಪ್ರಸ್ತಾಪಿಸಿದ್ದು ಒಬ್ಬ ವ್ಯಕ್ತಿ ಮಾತ್ರ. ಆದರೆ ಇನ್ನೊಬ್ಬರು ಅದನ್ನು ಕೇಳುವ ಕೆಲಸವನ್ನು ಮಾತ್ರ ಮಾಡಿದ್ದಾರೆ. ಆದರೂ ಪ್ರವಾದಿ ಮುಹಮ್ಮದ್(ಸ)ರು ಇಬ್ಬರನ್ನು ಈ ಅಪರಾಧದಲ್ಲಿ ಸಮಾನ ಪಾಲುದಾರರನ್ನಾಗಿ ಮಾಡಿದ್ದಾರೆ. ಇದರ ಅರ್ಥವೇನೆಂದರೆ, ಪರನಿಂದೆಗೆ ಕಿವಿಗೊಡುವ ವ್ಯಕ್ತಿ ತನ್ನ ಹೃದಯ ಅಥವಾ ನಾಲಗೆಯ ಮೂಲಕ ನಿಷೇಧಿಸುವುದಿಲ್ಲವೆಂದಾದರೆ, ಹೇಳಿದ ವ್ಯಕ್ತಿಯಂತೆಯೇ ಆಲಿಸಿದ ವ್ಯಕ್ತಿಯೂ ಈ ಅಪರಾಧದಲ್ಲಿ ಸಹಭಾಗಿ ಎನಿಸಿ ಕೊಳ್ಳುತ್ತಾನೆ.'[5]

ಸಹೋದರನ ಬಗ್ಗೆ ಕೆಟ್ಟ ಮಾತುಗಳನ್ನು ಹೇಳುವುದನ್ನು ಆಲಿಸುವಾಗ ಸತ್ಯವಿಶ್ವಾಸಿಯು ಅದರಲ್ಲಿ ಸೇರುವುದಾಗಲಿ, ಅವರ ಜೊತೆ ನಿಲ್ಲುವುದಾಗಲಿ ಮಾಡಬಾರದು. ಬದಲಾಗಿ ಸಹೋದರನ ಸ್ವಾಭಿಮಾನವನ್ನು ಸ್ವಂತ ಅಭಿಮಾನವೆಂದು, ಅದರ ಮೇಲೆ ನಡೆಯುವ ಆಕ್ರಮಣವು ಸ್ವಂತದ ಮೇಲೆ ನಡೆಯುವ ಆಕ್ರಮಣವೆಂದು ಅವನು ಪರಿಗಣಿಸಬೇಕಿದೆ. ಇದು ವಿಶ್ವಾಸವು ಬಯಸುವ ಸಾಹೋದರ್ಯ ಸಂಬಂಧಕ್ಕೆ ಇರುವ ಅನಿವಾರ್ಯ ಬೇಡಿಕೆಯಾಗಿದೆ. ಪ್ರವಾದಿ(ಸ) ಹೇಳಿರುವರು:

مَا مِنْ إِمْرِئٍ مُسْلِمٍ يَخْذُلُ اِمْرَءً مُسْلِمًا فِي مَوْضِعٍ تُنْهَكُ فِيْهِ حُرْمَتُهُ وَيُنْتَقَصُ فِيْهِ مِنْ عِرْضِهِ، إِلَّا خَذَلَهُ اللهُ فِي مَوْطِنٍ يُحِبُّ فِيْهِ نَصْرَتَهُ، وَمَا مِنْ إِمْرِئٍ مُسْلِمٍ يَنْصُرُ مُسْلِمًا فِي مَوْضِعٍ يُنْتَقَصُ فِيْهِ مِنْ عِرْضِهِ وَيُنْتَهَكُ فِيْهِ مِنْ حُرْمَتِهِ، إِلَّا نَصَرَهُ اللهُ فِي مَوْطِنٍ يُحِبُّ فِيْهِ نُصْرَتَهُ

'ಒಬ್ಬ ಮುಸ್ಲಿಮನ ಅಭಿಮಾನದ ಮೇಲೆ ಆಕ್ರಮಣ ನಡೆದು, ಅವನ ಗೌರವಕ್ಕೆ

ಹಾನಿಯುಂಟಾಗುವ ಸಂದರ್ಭದಲ್ಲಿ ಅವನನ್ನು ಕೈ ಬಿಡುವ ಮುಸ್ಲಿಮನನ್ನು, ಅವನಿಗೆ ಅತಿ ಹೆಚ್ಚು ಸಹಾಯದ ಅಗತ್ಯ ಬೀಳುವಾಗ ಅಲ್ಲಾಹನು ಅವನ ಕೈ ಬಿಡುವನು. ಒಬ್ಬ ಮುಸ್ಲಿಮನ ಅಭಿಮಾನದ ಮೇಲೆ ಆಕ್ರಮಣ ನಡೆದಾಗ, ಅವನ ಗೌರವಕ್ಕೆ ಹಾನಿ ಯುಂಟಾದಾಗ ಅವನಿಗೆ ಸಹಾಯ ಮಾಡುವ ವ್ಯಕ್ತಿಗೆ, ಅವನಿಗೆ ಅತಿಯಾದ ಸಹಾಯ ಅಗತ್ಯ ಬಿದ್ದಾಗ ಅಲ್ಲಾಹನು ಸಹಾಯ ಮಾಡುವನು.[6]

ಅನಸ್(ರ) ವರದಿ ಮಾಡಿರುವ ಇನ್ನೊಂದು ಪ್ರವಾದಿವಚನ ಹೀಗಿದೆ:

مَنْ اغْتِيبَ عِنْدَهُ أَخُوهُ فَلَمْ يَنْصُرْهُ وَهُوَ يَسْتَطِيعُ نَصْرَهُ، أَدْرَكَهُ اثْمُهُ فِي الدُّنْيَا وَالآخِرَةِ

'ಸಹೋದರನ ಬಗ್ಗೆ ಪರನಿಂದೆ ಮಾಡುವುದನ್ನು ಆಲಿಸುತ್ತಿರುವಾಗ ಅದನ್ನು ತಡೆಯಲು ಸಾಧ್ಯವಿದ್ದೂ ತಡೆಯದಂತಹ ವ್ಯಕ್ತಿಯು ಅದರ ಪಾಪವನ್ನು ಎರಡೂ ಲೋಕಗಳಲ್ಲಿ ಅನುಭವಿಸಬೇಕಾಗಿ ಬರುವುದು.'[7]

ಇತರರ ತಪ್ಪುಗಳ ಬಗ್ಗೆ ಹೇಳಿ ಪ್ರಚಾರ ಮಾಡುವಂತಹವರ ಮಾತನ್ನು ಆಲಿಸ ದಿರುವುದು, ಅಂತಹ ಕೆಡುಕುಗಳು ಸಮಾಜದಲ್ಲಿ ಹಬ್ಬುವುದರಿಂದ ತಡೆಯಲಿಕ್ಕಿರುವ ಉತ್ತಮ ಮಾರ್ಗವಾಗಿದೆ. ಆಲಿಸಲು ಜನರಿದ್ದಾರೆ ಎಂಬುದು ಅನೇಕ ಸಂದರ್ಭಗಳಲ್ಲಿ ಪರನಿಂದೆಯಂತಹ ಕೆಡುಕಿನಲ್ಲಿ ಮುಳುಗಲು ಪ್ರೇರಣೆ ನೀಡುವಂತಹ ವಿಷಯ ವಾಗಿದೆ. ಅಂತಹ ಮಾತುಗಳನ್ನು ಆಲಿಸಲು ಜನರಿಲ್ಲದೆ ಹೋದಾಗ ಸ್ವಾಭಾವಿಕವಾಗಿ ಪರನಿಂದೆ ಮಾಡುತ್ತಾ ತಿರುಗುವವರೂ ಸಮಾಜದಿಂದ ಅಳಿದು ಹೋಗುವರು. ಇತರರ ಕುಂದು ಕೊರತೆಗಳ ಬಗ್ಗೆ ನನ್ನ ಮುಂದೆ ಹೇಳಬಾರದು ಎಂದು ಪ್ರವಾದಿ ಯವರು(ಸ) ಬಹಳ ಕಠಿಣವಾಗಿ ಹೇಳಿರುವುದರ ಕಾರಣವೂ ಇದುವೇ ಆಗಿದೆ.

ಪರದೂಷಣೆ ಮತ್ತಿತರ ಕೆಡುಕುಗಳ ಮೂಲಕ ಜನರ ಮಧ್ಯೆ ಸೃಷ್ಟಿಸಲ್ಪಡುವ ಅನಗತ್ಯ ಪೂರ್ವಾಗ್ರಹಗಳು ಮನುಷ್ಯ ಸಂಬಂಧ ಮುರಿದು ಹೋಗಲಿಕ್ಕಿರುವ ಪ್ರಮುಖ ಕಾರಣಗಳ ಪೈಕಿ ಒಂದಾಗಿದೆ. ಕೊರತೆ ನ್ಯೂನತೆಗಳಿಲ್ಲದ ಯಾವನೇ ವ್ಯಕ್ತಿ ಜಗತ್ತಿನಲ್ಲಿಲ್ಲ. ಈ ವಾಸ್ತವಿಕತೆಯ ಬಗ್ಗೆ ಅರಿತುಕೊಂಡು, ಅದನ್ನು ಒಪ್ಪಿಕೊಂಡು ಮುಂದಕ್ಕೆ ಸಾಗುವಾಗ ಪರಸ್ಪರ ಸಂಬಂಧಗಳು ಉತ್ತಮ ರೀತಿಯಲ್ಲಿ ಮುಂದುವರಿ ಯುತ್ತದೆ. ಆದರೆ ಒಬ್ಬರ ಕುಂದು ಕೊರತೆಗಳನ್ನೇ ಪರ್ವತವಾಗಿಸುವುದು ಮತ್ತು ಅದನ್ನು ಇನ್ನೊಬ್ಬನ ಕಿವಿಗೆ ಹಾಕುವುದು ಮಾಡುವಾಗ, ಸಾಮೂಹಿಕ ಜೀವನದಲ್ಲಿ ಅನಿವಾರ್ಯವಾಗಿ ಉಂಟಾಗ ಬೇಕಾದ ಪರಸ್ಪರ ವಿಶ್ವಾಸ ಮತ್ತು ಆದರ ಭಾವವು ಹೃದಯದಿಂದ ಹೊರಟು ಹೋಗುತ್ತವೆ. ಇದರ ಜೊತೆಗೆ ಜನರು ಪರಸ್ಪರರನ್ನು

ಸಂಶಯದ ದೃಷ್ಟಿಯಿಂದ ನೋಡಲು ಆರಂಭಿಸುತ್ತಾರೆ. ಹಾಗಾದಾಗ ಕ್ಷುಲ್ಲಕ ತಪ್ಪುಗಳು ಕೂಡ ಬಹಳ ಗಂಭೀರ ಪಾಪಗಳಾಗಿ ಅನುಭವಕ್ಕೆ ಬರುವುದು. ಇದರಿಂದ ಸಂಬಂಧಗಳು ಕೆಟ್ಟು ಭಿನ್ನವಾಗಿ ಬಿಡುತ್ತದೆ. ನ್ಯೂನತೆಗಳ ಬಗ್ಗೆ ಎಂದೂ ಪ್ರಸ್ತಾಪಿಸಲೇ ಬಾರದು ಎಂದು ಹೇಳಿರುವುದರ ಮುಖ್ಯ ಕಾರಣ ಇದುವೇ ಆಗಿರುತ್ತದೆ.

ಈ ಮೇಲೆ ಪ್ರಸ್ತಾಪಿಸಿದ ಪ್ರವಾದಿವಚನಕ್ಕೆ ಸಂಬಂಧಿಸಿದ ಒಂದು ಚಾರಿತ್ರಿಕ ಘಟನೆಯನ್ನು ಇಬ್ನು ಮಸ್‌ಊದ್(ರ) ವಿವರಿಸಿರುವರು. ಒಮ್ಮೆ ಪ್ರವಾದಿಯವರು(ಸ) ಸ್ವಲ್ಪ ಹಣವನ್ನು ಜನರ ಮಧ್ಯೆ ವಿತರಿಸಿದರು. ಕೆಲವರು ಈ ಬಗ್ಗೆ ಅಸಹನೆ ಹೊಂದಿದ್ದರು. ಒಬ್ಬರು ಹೇಳಿದರು, 'ಅಲ್ಲಾಹನಾಣೆ! ಪ್ರವಾದಿಯವರು(ಸ) ಹಣವನ್ನು ವಿತರಿಸುವಾಗ ಅಲ್ಲಾಹನ ಸಂಪ್ರೀತಿ ಮತ್ತು ಪರಲೋಕ ಮೋಕ್ಷವನ್ನು ಆಗ್ರಹಿಸಲಿಲ್ಲ.' ಇಬ್ನು ಮಸ್‌ಊದ್(ರ) ಹೇಳಿದರು: ನಾನು ಈ ವಿಷಯವನ್ನು ಪ್ರವಾದಿವರ್ಯರ(ಸ) ಬಳಿ ಹೋಗಿ ಹೇಳಿದೆ, 'ಪ್ರವಾದಿಗಳೇ, ಅನುಯಾಯಿಗಳ ತಪ್ಪುಗಳ ಬಗ್ಗೆ ಪ್ರಸ್ತಾಪಿಸಬಾರದೆಂದು ತಾವು ಹೇಳಿರುವಿರಲ್ಲವೇ? ಆದರೂ ನಾನು ಹೇಳುತ್ತಿರುವೆ. ಇಂತಿಂತಹ ವ್ಯಕ್ತಿ ತಮ್ಮ ಬಗ್ಗೆ ಈ ರೀತಿ ಹೇಳುತ್ತಿರುವುದನ್ನು ನಾನು ಆಲಿಸಿದೆ. ತಾವು ಅವರ ಬಗ್ಗೆ ಕ್ರಮ ಕೈಗೊಳ್ಳಬೇಕು.' ಪ್ರವಾದಿಯವರ(ಸ) ಮುಖ ವಿವರ್ಣವಾಯಿತು. ಬಳಿಕ ಹೇಳಿದರು:

دَعْنِي عَنْكَ، فَقَدْ أُوذِيَ مُوسَى بِأَكْثَرَ مِنْ هَذَا، فَصَبَرَ

'ನನ್ನನ್ನು ತೊರೆದು ಹೋಗು. ನಿಶ್ಚಯವಾಗಿಯೂ ಮೂಸಾ(ಅ)ರು ಇದಕ್ಕಿಂತಲೂ ಹೆಚ್ಚಾಗಿ ಉಪದ್ರವಿಸಲ್ಪಟ್ಟಿದ್ದರು. ಆದರೂ ಅವರು ಸಹನೆಯನ್ನು ಕೈಗೊಂಡಿದ್ದರು.'[8]

ತಮಗೆ ನೇರವಾಗಿ ಸಂಬಂಧಪಟ್ಟ ವಿಷಯದಲ್ಲಿ ಇದು ಪ್ರವಾದಿಯವರ(ಸ) ನಿಲುವಾಗಿತ್ತು. ಹಾಗಾದರೆ ಇತರರ ವಿಷಯದಲ್ಲಿ, ಇತರರ ತಪ್ಪುಗಳ ಬಗ್ಗೆ ಪ್ರಸ್ತಾಪಿಸಿದರೆ ಅದನ್ನು ಆಲಿಸಲು ಅವರು ಹೇಗೆ ತಾನೇ ಇಷ್ಟಪಟ್ಟಾರು?

---

1) ಅಹ್ಮದ್: 2/381, ಹಾಕಿಮ್: 2/613. 2) ತಬ್ರಾನಿ. 3) ಇಬ್ನು ಅಬಿದ್ದುನ್ಯಾ. 4) ಖರಾಯಿತಿ – ಮಸವಿಉಲ್ ಅಖ್‌ಲಾಕ್. 5) ಇಹ್ಯಾಉ ಉಲೂಮುದೀನ್, ಭಾಗ: 3, ಪುಟ: 146. 6) ಅಬೂದಾವೂದ್: 4884, ಅಹ್ಮದ್: 4/30, ಇಬ್ನು ಅಬಿದ್ದುನ್ಯಾ, ಗೀಬತ್ ವ ನಮೀಮತ್: 104, ಬೈಹಕಿ – ಸುನನ್: 8/167–168. 7) ಅಸ್ಬಹಾನಿ – ತರ್ಗೀಬ್: 2207, ಬಾಗವಿ – ಶರಹುಸ್ಸುನ್ನ: 13/07, ಇಬ್ನು ಅಬಿದ್ದುನ್ಯಾ ಗೀಬತ್ ವ ನಮೀಮ: 106. 8) ತಿರ್ಮಿದಿ: 3896, ಅಹ್ಮದ್: 1/396.

42. ಸ್ವರ್ಗ ತಡೆಯಲ್ಪಡುವ ಎರಡು ಕೆಡುಕುಗಳು

عَنْ أَنَسٍ رَضِيَ اللَّهُ عَنْهُ، قَالَ: اُسْتُشْهِدَ رَجُلٌ مِنَّا يَوْمَ أُحُدٍ، فَوُجِدَ عَلَى بَطْنِهِ صَخْرَةٌ مَرْبُوطَةٌ مِنَ الْجُوعِ، فَمَسَحَتْ أُمُّهُ التُّرَابَ عَنْ وَجْهِهِ وَقَالَتْ هَنِيئًا لَكَ يَا بُنَيَّ الْجَنَّةُ! فَقَالَ النَّبِيُّ ﷺ: مَا يُدْرِيكِ؟ لَعَلَّهُ كَانَ يَتَكَلَّمُ فِيمَا لَا يَعْنِيهِ، وَيَمْنَعُ مَالَا يَضُرُّهُ!

ಅನಸ್(ರ) ಹೇಳುತ್ತಾರೆ. ಉಹುದ್ ಯುದ್ಧದಲ್ಲಿ ನಮ್ಮ ಜೊತೆಗಿದ್ದ ಒಬ್ಬ ವ್ಯಕ್ತಿ ಹುತಾತ್ಮರಾದರು. ಹಸಿವನ್ನು ಸಹಿಸದೆ ಆ ವ್ಯಕ್ತಿ ಹೊಟ್ಟೆಯ ಮೇಲೆ ಕಲ್ಲುಗ್ಗಳನ್ನು ಕಟ್ಟಿರುವುದು ಕಂಡು ಬಂತು. ಅವರ ಮಾತೆ ಅವರ ಮುಖದ ಮೇಲಿದ್ದ ಮಣ್ಣನ್ನು ತೊಡೆದು ಹಾಕಿದ ಬಳಿಕ ಈ ರೀತಿ ಹೇಳಿದರು: ಪ್ರೀತಿಯ ಮಗನೇ, ಸಂತೋಷಪಡು. ನಿನಗೆ ಸ್ವರ್ಗವಿದೆ. ಇದನ್ನು ಆಲಿಸಿದ ಪ್ರವಾದಿ(ಸ) ಹೇಳಿದರು: ನಿಮಗೆ ಏನು ಗೊತ್ತು? ಒಂದು ವೇಳೆ ಅವನು ಅನಗತ್ಯ ಮಾತುಗಳನ್ನು ಆಡಿರಬಹುದು. ತನಗೆ ಉಪದ್ರವಕಾರಿ ಯಲ್ಲದ್ದನ್ನು ತಡೆದಿರಬಹುದು.*

'ಹುತಾತ್ಮತೆ' ಎಂಬುದು ಬಹಳ ಹಿರಿದಾದ ಪ್ರತಿಫಲವು ವಾಗ್ದಾನ ಮಾಡಲ್ಪಟ್ಟ ಒಂದು ಶ್ರೇಷ್ಠ ಕರ್ಮವಾಗಿದೆ. ಸತ್ಯವಿಶ್ವಾಸಿಗಳ ಪಾಲಿಗೆ ಜೀವನದಲ್ಲಿ ಅದಕ್ಕಿಂತ ಮಹತ್ತಾದ ಇನ್ನೊಂದು ಕರ್ಮವಿಲ್ಲ. ಆರಾಧನೆಗಳಾಗಿದ್ದರೂ ಬೇರೆ ಯಾವ ಪುಣ್ಯ ಕೆಲಸಗಳಾಗಿದ್ದರೂ ಅದು ಯಾವುದೂ ರಕ್ತಸಾಕ್ಷಿತ್ವಕ್ಕೆ ಸಮಾನವಾಗಲಾರದು. ಜೀವನ

* ಇಬ್ನು ಅಬಿದ್ದುನ್ಯಾ – ಸುಮತ್ತ್: 109, ಅಬೂ ಯಅ್‌ಲಾ: 4017 ಮುಂತಾದವರು ಈ ಪದಗಳ ಮೂಲಕ ತಿರ್ಮಿದಿ: 2316 ಸಣ್ಣ ವ್ಯತ್ಯಾಸಗಳೊಂದಿಗೆ ಉದ್ಧರಿಸಿರುವರು. ಶೈಖ್ ನಾಸಿರುದ್ದೀನ್ ಅಲ್ಬಾನಿ – ಸಹೀಹುತ್ತರ್ಗೀಬ್ ವತ್ತರ್‌ಹೀಬ್‌ನಲ್ಲಿ ಇದನ್ನು ಸೇರಿಸಿ, ಈ ಹದೀಸ್ ಹಸನುಲ್ ಲಿಗ್ಯೆರಿಹಿ ಆಗಿದೆಯೆಂದು ಸಾಕ್ಷಿ ನುಡಿದಿದ್ದಾರೆ. (ಸಹೀಹುತ್ತರ್ಗೀಬು ವತ್ತರ್ಹೀಬ್, ಹದೀಸ್ ಸಂಖ್ಯೆ: 2883)

ನೀಡಿದ ಸೃಷ್ಟಿಕರ್ತನ ಮುಂದೆ ಜೀವನವನ್ನೇ ಸಮರ್ಪಿಸುವುದು, ತ್ಯಾಗ ಮತ್ತು ಸಮರ್ಪಣಾಭಾವದ ಪರಾಕಾಷ್ಠೆಯಾಗಿದೆ. ಆದರೆ ಹುತಾತ್ಮತೆಯಿಂದಲೂ ಪರಿಹಾರ ವಾಗದ ಬಹಳ ಗಂಭೀರವಾಗಿ ಪರಿಗಣಿಸಬೇಕಾದ ಕೆಲವು ಕೆಡುಕುಗಳಿವೆ. ಇವುಗಳ ಬಗ್ಗೆ ಈ ಮೇಲಿನ ಪ್ರವಾದಿವಚನವು ನಮಗೆ ನೆನಪಿಸುತ್ತದೆ.

ಅನಗತ್ಯ ಮಾತುಕತೆಗಳು ಅವುಗಳಲ್ಲಿ ಒಂದನೆಯದು. ಅನಗತ್ಯವಾಗಿ ಮಾತನಾಡುವುದು ಎಂಬುದು ಸಮಾಜದಲ್ಲಿ ಸಾಮಾನ್ಯವಾಗಿ ಕಂಡು ಬರುವ ಒಂದು ಕೆಟ್ಟ ಚಾಳಿಯಾಗಿದೆ. ಅಗತ್ಯ, ಅನಗತ್ಯ ವಿಷಯಗಳೆಂಬ ನಿಯಂತ್ರಣವಿಲ್ಲದೆ ಸದಾ ಏನಾದರೂ ಮಾತನ್ನಾಡುತ್ತಾ ಇರುವವರಿದ್ದಾರೆ. ಮಾತುಗಳ ಮಹತ್ವದ ಬಗ್ಗೆಯಾಗಲಿ, ಅದು ಸಮಾಜದ ಮೇಲೆ ಉಂಟು ಮಾಡುವ ಪರಿಣಾಮದ ಕುರಿತಾಗಲಿ ಅವರಿಗೆ ಪ್ರಜ್ಞೆ ಇರುವುದಿಲ್ಲ. ಸದಾ ಏನಾದರೊಂದನ್ನು ಮಾತನಾಡುತ್ತಿರುವುದೇ ಅವರ ಉದ್ಯೋಗ ವಾಗಿರುತ್ತದೆ. ಇಂತಹ ವ್ಯಕ್ತಿಗಳನ್ನು ನಾಲಗೆಯನ್ನು ಸದಾ ಹೊರಕ್ಕೆ ಚಾಚಿರುವವರು ಎಂದು ಪ್ರಾಣಿಗಳೊಂದಿಗೆ ಹೋಲಿಸಿದ್ದಾರೆ. ಪ್ರವಾದಿ(ಸ) ಹೇಳುತ್ತಾರೆ:

إِنَّ اللهَ يَبْغَضُ الْبَلِيْغَ مِنَ الرِّجَالِ الَّذِيْ يَتَخَلَّلُ بِلِسَانِهِ كَمَا يَتَخَلَّلُ الْبَاقِرَةُ بِلِسَانِهَا

'ದನಗಳು ಮೆಲುಕು ಹಾಕುತ್ತಿರುವಂತೆ ಸದಾ ನಾಲಗೆಯಿಂದ ಏನನ್ನಾದರೂ ಹೇಳುತ್ತಿರುವವರೊಂದಿಗೆ ನಿಶ್ಚಯವಾಗಿಯೂ ಅಲ್ಲಾಹನು ಕೋಪಿಸಿಕೊಳ್ಳುತ್ತಾನೆ.'[1]

ಇಸ್ಲಾಮ್ ಎಚ್ಚರಿಸಿರುವ ಅನೇಕ ಕೆಟ್ಟ ಕೃತ್ಯಗಳಿಗೆ ಅನಗತ್ಯ ಮಾತುಕತೆಯು ತೆರೆದ ಬಾಗಿಲಿನಂತಿದೆ. ಅನಗತ್ಯ ಮಾತುಕತೆಗಳು ಎಲ್ಲ ರೀತಿಯ ಕ್ಷೋಭೆಗೆ ಕಾರಣ ವಾಗುತ್ತದೆ. ಪ್ರವಾದಿ(ಸ) ಹೇಳಿರುವರು:

مَنْ كَثُرَ كَلَامُهُ كَثُرَ سَقَطُهُ، وَمَنْ كَثُرَ سَقَطُهُ كَثُرَتْ ذُنُوبُهُ، وَمَنْ كَثُرَتْ ذُنُوبُهُ كَانَتِ النَّارُ أَوْلَى بِهِ

'ಯಾರು ಮಾತನಾಡುವುದನ್ನು ಹೆಚ್ಚಿಸುವರೋ, ಅವರ ತಪ್ಪುಗಳು ಹೆಚ್ಚಾಗು ವುದು. ತಪ್ಪುಗಳು ಹೆಚ್ಚಿದರೆ, ಪಾಪಗಳೂ ಹೆಚ್ಚಾಗುವುದು. ಪಾಪಗಳಲ್ಲಿ ಮುಳುಗಿರುವವರು ನರಕವಾಸಿಗಳಾಗಿ ಬಿಡುವರು.'[2]

ಒಮ್ಮೆ ಒಬ್ಬ ವ್ಯಕ್ತಿ ಪ್ರವಾದಿ ಮುಹಮ್ಮದ್(ಸ)ರ ಬಳಿ ಬಂದು ನಿರಂತರವಾಗಿ ಮಾತನಾಡಲಾರಂಭಿಸಿದ. ಅವನ ಮಾತಿನಿಂದ ಅಸಹನೆಗೊಳಗಾದ ಪ್ರವಾದಿ(ಸ) ಪ್ರಶ್ನಿಸಿದರು: كَمْ دُوْنَ لِسَانِكَ مِنْ بَابٍ ؟ 'ನಿಮ್ಮ ನಾಲಗೆಗೆ ಎಷ್ಟು ತಡೆಗಳಿವೆ?' ಅವರು ಉತ್ತರಿಸಿದರು: أَسْنَانِي وَشَفَتَايَ 'ನನ್ನ ಹಲ್ಲುಗಳು ಮತ್ತು ತುಟಿಗಳು.' ಆಗ

ಪ್ರವಾದಿ(ಸ) ಪ್ರಶ್ನಿಸಿದರು: أَمَا كَانَ فِي ذَلِكَ مَا يَرُدُّ كَلَامُكَ 'ಹಾಗಾದರೆ ಅವುಗಳಿಗೇಕೆ ನಿಮ್ಮ ಮಾತನ್ನು ನಿಯಂತ್ರಿಸಲು ಸಾಧ್ಯವಾಗುತ್ತಿಲ್ಲ?'[3]

ಸದಾ ಬಾಯಾಡಿಸುತ್ತಿರುವ ಮಾತುಪ್ರಿಯರಾದ ಸಂಸ್ಕಾರಹೀನ ಜನರನ್ನು ಪ್ರವಾದಿಯವರು(ಸ) ದ್ವೇಷಿಸುತ್ತಿದ್ದರು. ಅವರು ಹೇಳುತ್ತಿದ್ದರು:

إِنَّ أَحَبَّكُمْ إِلَيَّ وَأَقْرَبَكُمْ مِنِّي فِي الآخِرَةِ مَحَاسِنُكُمْ أَخْلَاقًا وَإِنَّ أَبْغَضَكُمْ إِلَيَّ وَأَبْعَدَكُمْ مِنِّي فِي الآخِرَةِ أَسْوَؤُكُمْ أَخْلَاقًا الثَّرْثَارُونَ، الْمُتَفَيْهِقُونَ، الْمُتَشَدِّقُونَ

'ಪರಲೋಕದಲ್ಲಿ ನಿಮ್ಮ ಪೈಕಿ ಸದ್ಗುಣ ಸಂಪನ್ನ ವ್ಯಕ್ತಿಗಳು ನನಗೆ ಅತಿ ಸಮೀಪ ದಲ್ಲಿ ಉಪಸ್ಥಿತರಿರುವರು. ನನಗೆ ಅತಿ ಹೆಚ್ಚು ಇಷ್ಟವಿಲ್ಲದ ಜನರು ನನ್ನಿಂದ ಬಹಳ ದೂರ ಉಳಿಯುವವರು ಅತಿಯಾಗಿ ಮಾತನಾಡುವವರು, ಅಹಂಕಾರಿಗಳು ಮತ್ತು ಕೃತಕತೆಯನ್ನುಂಟು ಮಾಡಿ ಮಾತನಾಡುವ ನಿಕೃಷ್ಟ ಸ್ವಭಾವಿಗಳಾಗಿರುವರು.'[4]

ಸ್ವರ್ಗವು ತಡೆಯಲ್ಪಡುವ ಎರಡನೆಯ ವಿಭಾಗ ಸ್ವಂತಕ್ಕೆ ಉಪದ್ರವವನ್ನು ಉಂಟು ಮಾಡದೆ ಕೆಲಸಗಳನ್ನು ತಡೆಯುವವರಾಗಿರುವರು. ಜನರಿಗೆ ಉಪಕಾರ ಮಾಡುವ ಕೆಲಸಗಳಿಂದ ಉದ್ದೇಶಪೂರ್ವಕವಾಗಿ ದೂರ ಉಳಿಯುವವರು ಎಂಬುದು ಇದರ ಅರ್ಥವಾಗಿದೆ. ಇತರರಿಗೆ ಮಾಡಿ ಕೊಡುವುದರಿಂದ ತನಗಾಗಲಿ, ತನ್ನ ಕುಟುಂಬಕ್ಕಾಗಲಿ ಯಾವುದೇ ರೀತಿಯ ನಷ್ಟವನ್ನು ಉಂಟು ಮಾಡದ, ತನ್ನ ಸಂಪತ್ತಿನಲ್ಲಿಯೂ ಯಾವುದೇ ಕೊರತೆಯನ್ನು ಉಂಟು ಮಾಡದ ಸಣ್ಣ ಸಣ್ಣ ಉಪಕಾರಗಳು. ಪವಿತ್ರ ಕುರ್‌ಆನ್ ಇದರ ಬಗ್ಗೆ 'ಮಾಊನ್' ಎಂದು ಹೇಳಿದೆ. (ಅಲ್ ಮಾಊನ್: 7)

ಇದು ಇತರರಿಗೆ ಮಾಡುವ ಸಣ್ಣ ಪುಟ್ಟ ಉಪಕಾರಗಳಾಗಿವೆ. ಸಾಮೂಹಿಕ ಜೀವನದಲ್ಲಿ, ಅದೆಷ್ಟು ಸಣ್ಣ ಉಪಕಾರವಾಗಿದ್ದರೂ ಸರಿ. ಬಹಳ ಪ್ರಾಧಾನ್ಯತೆಯಿದೆ. ನಾವು ತಾತ್ಸಾರದಿಂದ ನೋಡುವ ಇಂತಹ ಕೆಲಸಗಳೇ ಜನರ ಮಧ್ಯೆ ಇರುವ ಪರಸ್ಪರ ಸಂಬಂಧವನ್ನು ದೃಢಪಡಿಸಿ ನೆಲೆನಿಲ್ಲಿಸುತ್ತದೆ. ಒಮ್ಮೆ ಮುಸ್ಲಿಮ್ ಸ್ತ್ರೀಯರನ್ನು ಉದ್ದೇಶಿಸಿ ಪ್ರವಾದಿ(ಸ) ಈ ರೀತಿ ಹೇಳಿರುವರು:

يَا نِسَاءَ الْمُسْلِمَاتِ، لَا تَحْقِرَنَّ جَارَةٌ لِجَارَتِهَا وَلَوْ فِرْسِنَ شَاةٍ

'ಮುಸ್ಲಿಮ್ ಸ್ತ್ರೀಯರೇ, ನಿಮ್ಮ ಪೈಕಿ ಯಾರು ಕೂಡ ನಿಮ್ಮ ನೆರೆಹೊರೆಯವರಿಗೆ ನೀಡುವ ಯಾವುದೇ ದಾನವನ್ನು ತಾತ್ಸಾರದಿಂದ ಕಾಣಬಾರದು. ಆಡಿನ ಒಂದು ಗೊರಸಾದರೂ ಸರಿ.'[5]

ಇತರರಿಗಾಗಿ ಇಷ್ಟು ಸಣ್ಣ ಉಪಕಾರವನ್ನೂ ಮಾಡಲು ಬಯಸದ ಸ್ವಂತದ ಬಗ್ಗೆ ಮಾತ್ರ ಚಿಂತಿಸಿ, ಸದಾ ಏನನ್ನಾದರೂ ಮಾತನಾಡುತ್ತಾ ಜೀವನ ಸಾಗಿಸುವ ವ್ಯಕ್ತಿಗಳನ್ನು ಸಮಾಜದಲ್ಲಿ ಕಾಣಬಹುದಾಗಿದೆ. ಅವರು ಎಷ್ಟೇ ಆರಾಧನೆಗಳನ್ನು, ಸತ್ಕರ್ಮಗಳನ್ನು ಮಾಡಿದರೂ ದೇವನ ಸನ್ನಿಧಿಯಲ್ಲಿ ಅವನ ಕರುಣೆಗೆ ಮತ್ತು ಅನುಗ್ರಹಕ್ಕೆ ಅರ್ಹರಾಗಲು ಸಾಧ್ಯವಿಲ್ಲ ಎಂಬುದನ್ನು ಬಹಳ ತಾಕೀತಿನೊಂದಿಗೆ ಈ ಮೇಲಿನ ಹದೀಸ್ ಪ್ರತಿಪಾದಿಸುತ್ತದೆ.

---

1. ತಿರ್ಮಿದಿ: 2853, ಅಬೂದಾವೂದ್: 5005, ಅಹ್ಮದ್: 6543.
2. ತಬ್ರಾನಿ - ಔಸಾತ್.
3. ಇಬ್ನು ಅಬಿದ್ದುನ್ಯಾ - ಸುಮ್ತ್: 93
4. ತಿರ್ಮಿದಿ: 2018, ಅಹ್ಮದ್: 4/193, ಇಬ್ನು ಹಿಬ್ಬಾನ್: 486.
5. ಬುಖಾರಿ: 2566, ಮುಸ್ಲಿಮ್: 1030.

43. ಕೆಟ್ಟ ಕೃತ್ಯಗಳನ್ನು ಬಹಿರಂಗಪಡಿಸದಿರಿ

عَنِ ابْنِ مَسْعُودٍ رَضِيَ اللّٰهُ عَنْهُ قَالَ: إِنِّي لَأَذْكُرُ أَوَّلَ رَجُلٍ قَطَعَهُ رَسُولُ اللّٰهِ ﷺ، أُتِيَ بِسَارِقٍ فَأَمَرَ بِقَطْعِهِ، فَكَأَنَّمَا أُسِفَ وَجْهُ رَسُولِ اللّٰهِ ﷺ رَمَادًا، فَقَالُوا: يَا رَسُولَ اللّٰهِ، كَأَنَّكَ كَرِهْتَ قَطْعَهُ؟ قَالَ: وَمَا يَمْنَعُنِي! لَا تَكُونُوا أَعْوَانًا لِلشَّيْطَانِ عَلَىٰ أَخِيكُمْ إِنَّهُ لَا يَنْبَغِي لِإِمَامٍ إِذَا انْتَهَى إِلَيْهِ حَدٌّ إِلَّا أَنْ يُقِيمَهُ، إِنَّ اللّٰهَ عَفُوٌّ، يُحِبُّ الْعَفْوَ: وَلْيَعْفُوا وَلْيَصْفَحُوا أَلَا تُحِبُّونَ أَنْ يَغْفِرَ اللّٰهُ لَكُمْ، وَاللّٰهُ غَفُورٌ رَحِيمٌ

ಅಬ್ದುಲ್ಲಾ ಬಿನ್ ಮಸ್‌ಊದ್(ರ) ವರದಿ ಮಾಡಿರುತ್ತಾರೆ. ಪ್ರವಾದಿ ಮುಹಮ್ಮದ್(ಸ)ರವರು ಆರಂಭದಲ್ಲಿ ಕೈಕಡಿದ ವ್ಯಕ್ತಿಯ ಬಗ್ಗೆ ನನಗೆ ನೆನಪಿದೆ. ಒಮ್ಮೆ ಒಬ್ಬ ಕಳ್ಳನನ್ನು ಪ್ರವಾದಿಯವರ ಸನ್ನಿಧಿಯಲ್ಲಿ ಹಾಜರು ಪಡಿಸಲಾಯಿತು. ಪ್ರವಾದಿ(ಸ) ಅವರ ಕೈ ಕಡಿಯಲು ಆದೇಶಿಸಿದರು. ಆಗ ಪ್ರವಾದಿಯವರ(ಸ) ಮುಖ ದುಃಖದಲ್ಲಿ ಮುಳುಗಿರುವಂತೆ ಬಾಡಿ ಹೋಗಿತ್ತು. ಕೆಲವರು ಪ್ರಶ್ನಿಸಿದರು: ಅಲ್ಲಾಹನ ಪ್ರವಾದಿಗಳೇ, ಅವರ ಕೈ ಕಡಿಯುವುದನ್ನು ತಾವು ದ್ವೇಷಿಸುತ್ತಿರುವಂತೆ ಕಾಣುತ್ತಿದೆಯಲ್ಲ. ಪ್ರವಾದಿ(ಸ) ಹೇಳಿದರು: ಹೌದು. ನಾನು ಹೇಗೆ ಅದನ್ನು ಇಷ್ಟಪಡಲಿ? ನೀವು ನಿಮ್ಮ ಸಹೋದರನ ಮುಂದೆ ಶೈತಾನನಿಗೆ ಸಹಾಯ ಮಾಡುವವ ರಾಗಬಾರದು. ಶಿಕ್ಷಾರ್ಹವಾದ ಅಪರಾಧಗಳನ್ನು ಎಸಗಿದ ವ್ಯಕ್ತಿಯನ್ನು ನ್ಯಾಯಾಧೀಶರ ಮುಂದೆ ಕರೆತಂದರೆ, ಅವರಿಗೆ ಶಿಕ್ಷೆಯನ್ನು ಜಾರಿಗೊಳಿ ಸದೆ ನಿರ್ವಾಹವಿರುವುದಿಲ್ಲ. ಆದರೆ ಅಲ್ಲಾಹನು ಕ್ಷಮಿಸುವವನು. ಕ್ಷಮಿ ಸುವುದನ್ನು ಇಷ್ಟಪಡುವವನು. ಆ ಬಳಿಕ ಪವಿತ್ರ ಕುರ್‌ಆನಿನ ಈ

ಸೂಕ್ತವನ್ನು ಪಠಿಸಿದರು- ಜನರು ಅವರನ್ನು ಕ್ಷಮಿಸಿ ಬಿಡಬೇಕು ಮತ್ತು ಮನ್ನಿಸಬೇಕು. ಅಲ್ಲಾಹನು ನಿಮ್ಮನ್ನು ಕ್ಷಮಿಸಬೇಕೆಂದು ನೀವು ಇಚ್ಛಿಸುವುದಿಲ್ಲವೇ? ಅಲ್ಲಾಹ್ ಅತ್ಯಂತ ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ. (ಪವಿತ್ರ ಕುರ್‌ಆನ್: 24: 22)*

ಒಮ್ಮೆ ಅಬ್ದುಲ್ಲಾ ಬಿನ್ ಮಸ್‌ಊದ್(ರ)ರ ಮುಂದೆ ಓರ್ವ ಮದ್ಯಪಾನಿಯನ್ನು ಕರೆತರಲಾಯಿತು. ಅವರು ಹೇಳಿದರು: هَذَا نَشْوَانٌ ಇವನು ಕುಡಿದು ಅಮಲಿನಲ್ಲಿದ್ದಾನೆ. ಇಬ್ನು ಮಸ್‌ಊದ್(ರ)ರವರು ಜನರೊಡನೆ ಅವನ ಮುಖ ಮತ್ತು ಬಾಯಿಯನ್ನು ಮೂಸಿ ನೋಡುವಂತೆ ಹೇಳಿದರು. ಮದ್ಯಪಾನಿ ಎಂದು ದೃಢವಾದಾಗ ಶಿಕ್ಷೆಯನ್ನು ಜಾರಿ ಗೊಳಿಸಲು ಆದೇಶವಿತ್ತರು. ಬಳಿಕ ಆ ಮದ್ಯಪಾನಿಯನ್ನು ಕರೆತಂದ ವ್ಯಕ್ತಿಗೆ ಈ ರೀತಿ ಉಪದೇಶಿಸಿದರು:

مَا أَدَّبْتَ، فَأَحْسَنْتَ الأَدَبَ، وَلَا سَتَرْتَ الْحُرْمَةَ، إِنَّهُ يَنْبَغِي لِلإِمَامِ إِذَا انْتَهَى إِلَيْهِ حَدٌّ أَنْ
يُقِيمَهُ، وَإِنَّ اللَّهَ عَفُوٌّ يُحِبُّ الْعَفْوَ وَلْيَعْفُو وَلْيَصْفَحُو

'ನೀವು ಈ ವ್ಯಕ್ತಿಯ ವಿಷಯದಲ್ಲಿ ಶಿಷ್ಟಾಚಾರ ಪಾಲಿಸಲಿಲ್ಲ. ಅಪರಾಧಗಳನ್ನು ಅಡಗಿಸಲಿಲ್ಲ. ನ್ಯಾಯಾಧೀಶರ ಮುಂದೆ ಅಪರಾಧಿಯನ್ನು ಹಾಜರುಪಡಿಸಿದರೆ, ಶಿಕ್ಷೆಯನ್ನು ಜಾರಿಗೊಳಿಸದೆ ನಿರ್ವಾಹವಿಲ್ಲ. ಅಲ್ಲಾಹನು ಕ್ಷಮಿಸುವವನಾಗಿದ್ದಾನೆ. ಆದುದರಿಂದ ಜನರು ಪರಸ್ಪರರನ್ನು ಕ್ಷಮಿಸಬೇಕು ಮತ್ತು ಮನ್ನಿಸಬೇಕು.' ಬಳಿಕ ಇಬ್ನು ಮಸ್‌ಊದ್(ರ) ಈ ಮೇಲಿನ ಪ್ರವಾದಿವಚನವನ್ನು ಜನರಿಗೆ ಕೇಳಿಸಿದರು.[1]

ಸಾಮೂಹಿಕ ಜೀವನದಲ್ಲಿ ಪಾಲಿಸಬೇಕಾದ ಶಿಷ್ಟಾಚಾರಗಳ ಕುರಿತು ಈ ಪ್ರವಾದಿವಚನದಲ್ಲಿವೆ. ಪ್ರತಿಯೊಬ್ಬ ವ್ಯಕ್ತಿಯ ಗೌರವ ಮತ್ತು ವ್ಯಕ್ತಿತ್ವವನ್ನು ಇಸ್ಲಾಮ್ ಎತ್ತಿಹಿಡಿಯುತ್ತದೆ. ಉದ್ದೇಶಪೂರ್ವಕವಾಗಿ ಯಾರಾದರೂ ಅಭಿಮಾನವನ್ನು ಹಾನಿಗೊಳಿಸಲು, ವ್ಯಕ್ತಿತ್ವಕ್ಕೆ ಚ್ಯುತಿಯನ್ನುಂಟು ಮಾಡಲು ಧರ್ಮವು ಯಾರಿಗೂ ಅನುಮತಿ ನೀಡುವುದಿಲ್ಲ. ಕೆಟ್ಟ ಕೆಲಸಗಳನ್ನು ಬಹಿರಂಗಪಡಿಸದಿರಲು ಇಸ್ಲಾಮ್ ಸತ್ಯವಿಶ್ವಾಸಿಗಳಿಗೆ ಆದೇಶಿಸುತ್ತದೆ. ಪ್ರವಾದಿವರ್ಯರು(ಸ) ಹೀಗೆ ಹೇಳಿರುವರು:

* ಹಾಕಿಮ್: 8216, ಅಹ್ಮದ್: 3711, ತಬ್ರಾನಿ – ಕಬೀರ್: 8572, ಬೈಹಕಿ–ಸುನನುಲ್ ಕುಬ್ರಾ: 8/326, ಅಬೂ ಯಅ್‌ಲಾ: 1/231, ಖರಾಯಿತಿ – ಮಕಾರಿಮುಲ್ ಅಖ್‌ಲಾಕ್: 415 ಮುಂತಾದವರು ಉದ್ಧರಿಸಿರುವ ಈ ಪ್ರವಾದಿವಚನದ ವರದಿಯ ಪರಂಪರೆಯು ಸಹೀಹ್ ಆಗಿದೆಯೆಂದು ಹಾಕಿಮ್ ಅಭಿಪ್ರಾಯಪಡುತ್ತಾರೆ.

مَنْ سَتَرَ عَلٰى مُسْلِمٍ سَتَرَهُ اللّٰهُ فِي الدُّنْيَا وَالآخِرَةِ

ಒಬ್ಬ ವ್ಯಕ್ತಿಯ ಕುಂದು ಕೊರತೆಗಳನ್ನು ಯಾರಾದರೂ ರಹಸ್ಯವಾಗಿಟ್ಟು ಕೊಳ್ಳುವುದಾದರೆ, ಅಲ್ಲಾಹನು ಅವನ ಕುಂದು ಕೊರತೆಗಳನ್ನು ಇಹ-ಪರಲೋಕಗಳಲ್ಲಿ ರಹಸ್ಯವಾಗಿಡುವನು.[2]

مَنْ عَلِمَ مِنْ أَخِيْهِ سَيِّئَةً فَسَتَرَهَا سَتَرَ اللّٰهُ عَلَيْهِ يَوْمَ الْقِيَامَة

ತನ್ನ ಗೆಳೆಯನಿಂದ ಸಂಭವಿಸಿದ ಒಂದು ತಪ್ಪನ್ನು ಒಬ್ಬನು ತಿಳಿದು ಅದನ್ನು ರಹಸ್ಯವಾಗಿಟ್ಟರೆ, ಅಂತ್ಯದಿನದಂದು ಅಲ್ಲಾಹನು ಅವನ ನ್ಯೂನತೆಗಳನ್ನು ಜನರಿಂದ ಅಡಗಿಸಿಡುವನು.[3]

ಒಂದು ಚಾರಿತ್ರಿಕ ಘಟನೆ ಈ ರೀತಿ ಇದೆ: ಒಂದು ರಾತ್ರಿ ಉಮರ್(ರ)ರವರು ಮದೀನದಲ್ಲಿ ಸಂಚರಿಸುತ್ತಿದ್ದರು. ಆಗ ಸ್ತ್ರೀಪುರುಷರಿಬ್ಬರು ವ್ಯಭಿಚಾರವೆಸಗುತ್ತಿರು ವುದು ಅವರ ಕಣ್ಣಿಗೆ ಬಿತ್ತು. ಬೆಳಗಾದಾಗ ಉಮರ್(ರ) ಜನರನ್ನು ಬರಹೇಳಿ ಪ್ರಶ್ನಿಸುತ್ತಾರೆ:

أَرَأَيْتُمْ لَوْ أَنَّ إِمَامًا رَأَى رَجُلاً وَامْرَأَةً عَلٰى فَاحِشَةٍ فَأَقَامَ عَلَيْهِمَا الْحَدَّ، مَا كُنْتُمْ فَاعِلِيْن ؟

'ನಿಮ್ಮ ಖಲೀಫರಿಗೆ ರಾತ್ರಿ ವೇಳೆ ಒಬ್ಬ ಸ್ತ್ರೀ ಮತ್ತು ಪುರುಷ ವ್ಯಭಿಚಾರವೆಸಗುತ್ತಿರುವುದು ಕಾಣಸಿಕ್ಕಿತು. ಅವರ ಮೇಲೆ ಶಿಕ್ಷೆ ಜಾರಿಗೊಳಿಸುವುದಾದರೆ, ಆ ಬಗ್ಗೆ ನಿಮ್ಮ ಅಭಿಪ್ರಾಯವೇನು?' ಜನರ ಪೈಕಿ ಕೆಲವರು, 'ತಾವು ಈ ಪ್ರದೇಶದ ಆಡಳಿತಗಾರ. ಆದುದರಿಂದ ಇತರ ಸಾಕ್ಷ್ಯಗಳನ್ನು ಹುಡುಕಬೇಕಾದ ಅಗತ್ಯವಿಲ್ಲ. ಶಿಕ್ಷೆಯನ್ನು ಜಾರಿಗೊಳಿಸಬಹುದು' ಎಂದರು. ಆಗ ಅಲೀ(ರ) ಎದ್ದು ನಿಂತು ಹೀಗೆ ಹೇಳಿದರು:

لَيْسَ ذٰلِكَ لَكَ، إِذًا يُقَامُ عَلَيْكَ الْحَدُّ، إِنَّ اللّٰهَ لَمْ يَعْمَلْ عَلٰى هٰذَا الأَمْرِ أَقَلَّ مِنْ أَرْبَعَةِ شُهُوْدٍ

'ನೀವು ಹಾಗೆ ಮಾಡಬಾರದು. ನೀವು ಹಾಗೆ ಮಾಡಿದರೆ ನಾವು ನಿಮ್ಮ ವಿರುದ್ಧ ಶಿಕ್ಷೆ ಜಾರಿಗೊಳಿಸಬೇಕಾಗಿ ಬರುವುದು. ಏಕೆಂದರೆ ವ್ಯಭಿಚಾರಿಗೆ ಶಿಕ್ಷೆ ಜಾರಿಗೊಳಿಸಬೇಕಿದ್ದರೆ, ನಾಲ್ಕು ಸಾಕ್ಷಿಗಳು ಬೇಕು ಎಂಬುದು ಅಲ್ಲಾಹನ ಆಜ್ಞೆಯಾಗಿದೆ. ಅದನ್ನು ಉಲ್ಲಂಘಿಸಬಾರದು.'

ಉಮರ್(ರ)ರವರು ಅಲಿಯವರ(ರ) ಮಾತುಗಳನ್ನು ಸ್ವೀಕರಿಸಿದರು. ಜನರೊಂದಿಗೆ ಅಲ್ಲಿಂದ ಚದುರಿ ಹಿಂತಿರುಗುವಂತೆ ಆದೇಶಿಸಿದರು.[4]

ಇಮಾಮ್ ಗಝ್ಝಾಲಿ ಇದನ್ನು ವಿವರಿಸುತ್ತಾ ಹೀಗೆ ಬರೆದಿದ್ದಾರೆ:

هَذَا مِنْ أَعْظَمِ الأَدِلَّةِ عَلَى طَلَبِ الشَّرْعِ لِسَتْرَةِ الْفَوَاحِشِ، فَإِنَّ أَفْحَشُهَا الزِّنَا

'ತಪ್ಪುಗಳನ್ನು ಅಡಗಿಸಬೇಕು ಎಂಬುದನ್ನು ತಿಳಿಸುವ ಒಂದು ಮಹತ್ವಪೂರ್ಣ ಘಟನೆ ಇದಾಗಿದೆ. ಏಕೆಂದರೆ ವ್ಯಭಿಚಾರವೆಂಬುದು ಕೆಡುಕುಗಳ ಪೈಕಿ ಬಹಳ ಕೆಟ್ಟದು.'[5]

'ನಿಮ್ಮ ಗೆಳೆಯನ ವಿರುದ್ಧ ಶೈತಾನನಿಗೆ ಸಹಾಯ ಮಾಡಬಾರದು' ಎಂಬ ಎಚ್ಚರಿಕೆಯೂ ಗಮನಾರ್ಹವಾಗಿದೆ. ಇತರರ ತಪ್ಪುಗಳನ್ನು ಕಂಡು ಹಿಡಿದು ಅವರನ್ನು ಶಿಕ್ಷಿಸಬೇಕೆಂದು, ಅದನ್ನು ಪುಣ್ಯಕಾರ್ಯವೆಂದು ತಿಳಿದುಕೊಂಡು ಅದೇ ಆವೇಶದಿಂದ ಹೊರಟು ಬರುವ ವ್ಯಕ್ತಿಗಳು ಸದಾ ನೆನಪಿನಲ್ಲಿಡಬೇಕಾದ ಪ್ರವಾದಿವಚನವಿದು.

ಇತರರ ತಪ್ಪುಗಳನ್ನು ಹುಡುಕಿ ಅವರ ಮಾನವನ್ನು ಸಮಾಜದ ಮಧ್ಯೆ ಹರಾಜು ಹಾಕುವುದು ನಿಜವಾಗಿ ಪುಣ್ಯಕಾರ್ಯವಲ್ಲ. ಈ ಕೆಲಸವನ್ನು ಯಾರಿಗೂ ನಿರ್ವಹಿಸ ಬಹುದು. ಆದರೆ ಅವರನ್ನು ಅಪರಾಧ ಕೃತ್ಯಗಳಿಂದ ತಡೆಯುವುದು, ಒಳಿತಿನ ಮಾರ್ಗದಲ್ಲಿ ನಿಲ್ಲುವಂತೆ ಮಾಡುವುದು ಸ್ವಲ್ಪ ಪರಿಶ್ರಮ ಬಯಸುವ ಕೆಲಸವಾಗಿದೆ. ಬಹಳ ಶ್ರದ್ಧೆ ಮತ್ತು ಗಮನವನ್ನು ಇದಕ್ಕೆ ನೀಡಬೇಕಾಗುವುದು. ಇಸ್ಲಾಮಿನ ಸಂದೇಶ ಪ್ರಚಾರಕರು ಸಂಸ್ಕರಣೆಯ ಈ ವಿಧಾನವನ್ನು ತಮ್ಮದಾಗಿಸಿ ಕೊಳ್ಳಬೇಕು.

ಅಲ್ಲಾಹನು ಕ್ಷಮಿಸುವವನು ಮತ್ತು ಕ್ಷಮಿಸುವುದನ್ನು ಇಷ್ಟಪಡುವವನು. ಆದು ದರಿಂದ ನೀವು ಪರಸ್ಪರರನ್ನು ಕ್ಷಮಿಸಿಬಿಡಿರಿ ಎಂದು ಪ್ರವಾದಿ(ಸ) ಬೋಧಿಸಿದ್ದಾರೆ. ಇತರರ ತಪ್ಪುಗಳನ್ನು ಹೇಳಿ ಪ್ರಚಾರ ಮಾಡುವವರಲ್ಲಿ ಹೆಚ್ಚಿನವರು ಅಲ್ಲಾಹನ ಕ್ಷಮೆ ಯನ್ನು ನಿರೀಕ್ಷಿಸದವರಾಗಿರಲಿಕ್ಕಿಲ್ಲ. ಆರಾಧನಾ ಕರ್ಮಗಳನ್ನು ಕ್ರಮಬದ್ಧವಾಗಿ ನಿರ್ವಹಿಸುವವರು ಮತ್ತು ಇತರರಿಗಿಂತ ಹೆಚ್ಚು ಪರಿಶುದ್ಧರೂ ಆಗಿರುವರು. ಆದರೂ ಸಾಮೂಹಿಕ ಜೀವನದಲ್ಲಿ ಸಹಕಾರ್ಯಕರ್ತರೊಂದಿಗೆ ಪಾಲಿಸಬೇಕಾದ ಶಿಷ್ಟಾಚಾರಗಳ ಬಗ್ಗೆ ಅವರು ಪ್ರಜ್ಞಾವಂತರಾಗಿರಬೇಕೆಂದೇನಿಲ್ಲ. ಅವರೊಂದಿಗೆ 'ಅಲ್ಲಾಹನು ನಿಮ್ಮನ್ನು ಕ್ಷಮಿಸಬೇಕೆಂದು ನೀವು ಬಯಸುವುದಿಲ್ಲವೇ? ಹಾಗಿದ್ದರೆ ನೀವು ಕೂಡ ಜನರನ್ನು ಕ್ಷಮಿಸಿ ಬಿಡಿರಿ' ಎಂದು ಪ್ರವಾದಿ(ಸ) ನಮಗೆ ನೆನಪಿಸಿಕೊಟ್ಟಿರುವರು.

---

1. ತಫ್ಸೀರುಲ್ ಅಬಿ ಹತಿಮ್: 15105.
2. ಮುಸ್ಲಿಮ್: 2699, ಅಬೂದಾವೂದ್: 4948, ತಿರ್ಮಿದಿ: 1930, ಇಬ್ನು ಮಾಜ: 225.
3. ತಬ್ರಾನಿ – ಕಬೀರ್ – ಔಸತ್. 4. ಖರಾಯಿತಿ ಮಕಾರಿಮುಲ್ ಅಖ್‌ಲಾಕ್: 397.
5. ಇಹ್ಯಾಉ ಉಲೂಮುದ್ದೀನ್: 2/200.

ಅಇಉ

44. ಅಭಿಮಾನಕ್ಕೆ ಕುಂದುಂಟಾಗಬಾರದು

عَنْ عَبْدِ اللهِ بْنِ مَسْعُوْدٍ رَضِيَ اللهُ عَنْهُ: عَنِ النَّبِي ﷺ قَالَ: الرِّبَا ثَلَاثَةٌ وَسَبْعُوْنَ بَابًا، أَيْسَرُهَا مِثْلُ أَنْ يَنْكِحَ الرَّجُلُ أُمَّهُ، وَإِنَّ أَرْبَى الرِّبَى عِرْضُ الرَّجُلُ الْمُسْلِمِ

ಅಬ್ದುಲ್ಲಾ ಬಿನ್ ಮಸ್‌ಊದ್ (ರ)ರಿಂದ ವರದಿ. ಪ್ರವಾದಿ(ಸ) ಹೇಳಿರುವರು: ಬಡ್ಡಿಗೆ 73ರಷ್ಟು ಬಾಗಿಲುಗಳಿವೆ. ಅದರಲ್ಲಿ ಕ್ಷುಲ್ಲಕವಾದುದು ತನ್ನ ತಾಯಿಯನ್ನು ವಿವಾಹ ಮಾಡಿಕೊಳ್ಳುವುದಕ್ಕೆ ಸಮಾನವಾಗಿದೆ. ಆದರೆ ಅತ್ಯಂತ ಗುರುತರವಾದ 'ಬಡ್ಡಿ' ಒಬ್ಬ ಮುಸ್ಲಿಮ್ ಸಹೋದರನ ಆತ್ಮಾಭಿಮಾನಕ್ಕೆ ಕುಂದುಂಟು ಮಾಡುವುದಾಗಿದೆ.*

ಆತ್ಮಾಭಿಮಾನವೆಂಬುದು ಬಹಳ ಅಮೂಲ್ಯವಾದುದಾಗಿದೆ, ಹಣ ಖರ್ಚು ಮಾಡಿದರೂ ಬಲ ಪ್ರಯೋಗಿಸಿದರೂ ಯಾರಿಗೂ ಅದನ್ನು ಗಳಿಸಲು ಸಾಧ್ಯವಿಲ್ಲ. ಜೀವನದಲ್ಲಿ ಹಲವು ವಿಷಯಗಳನ್ನು ಬಲಿ ನೀಡಿ ದೀರ್ಘಕಾಲದ ತ್ಯಾಗ ಪರಿಶ್ರಮಗಳಿಂದ ಗಳಿಸಬಹುದಾಗಿದೆ. ಇದನ್ನು ಮುಂದಿಟ್ಟುಕೊಂಡು ಒಬ್ಬ ವ್ಯಕ್ತಿಯನ್ನು ಸಮಾಜವು ಗೌರವಿಸುವುದು ಮತ್ತು ಆಧರಿಸುವುದು. ಆತ್ಮಾಭಿಮಾನವು ನಷ್ಟವಾದರೆ ಒಂಟಿತನ ಅನುಭವವಾಗುತ್ತದೆ. ಬಳಿಕ ಸಮಾಜದಲ್ಲಿ ಜೀವಿಸಲು ಅಸಾಧ್ಯವೆನಿಸುತ್ತದೆ. ಆದುದರಿಂದ ಆತ್ಮಾಬಿಮಾನವನ್ನು ಸಂರಕ್ಷಿಸಲಿಕ್ಕಾಗಿ ಜೀವನವನ್ನು ತ್ಯಜಿಸಲೂ ಜನರು ತಯಾರಿರುತ್ತಾರೆ.

* ಇಮಾಮ್ ಹಾಕಿಮ್ ಮುಸ್ತದ್‌ರಕ್‌ನಲ್ಲಿ ಈ ಮೇಲೆ ಹೇಳಿದ ಪದಗಳೊಂದಿಗೆ (2/38) ಇಮಾಮ್ ತಬ್ರಾನಿ ಬೈಹಕಿ, ಇಬ್ನು ಅಬಿದುನ್‌ಯಾ ಮುಂತಾದವರು ಸ್ವಲ್ಪ ವ್ಯತ್ಯಾಸಗಳೊಂದಿಗೆ ಈ ಪ್ರವಾದಿ ವಚನವನ್ನು ವರದಿ ಮಾಡಿರುತ್ತಾರೆ, ಇದರ ವರದಿ ಪರಂಪರೆಯು ಇಮಾಮ್ ಬುಖಾರಿಯವರ ಮುಸ್ಲಿಮ್‌ನ ಹದೀಸ್ ಆಗಮನ ಮಾನದಂಡಗಳ ಪ್ರಕಾರ ಸಹೀಹ್ ಆಗಿದೆಯೆಂದು, ಹಾಕಿಮ್, ದಹಬಿ ಮುಂತಾದವರು ಅಭಿಪ್ರಾಯ ಪಡುತ್ತಾರೆ.

ಇಸ್ಲಾಮ್ ಆತ್ಮಾಭಿಮಾನಕ್ಕೆ ಬಹಳ ಮಹತ್ವ ನೀಡುತ್ತದೆ. ರಕ್ತ ಮತ್ತು ಸಂಪತ್ತಿನಂತೆ ಅಭಿಮಾನವೂ ಬಹಳ ಪವಿತ್ರವೆಂದು ಅದು ನೆನಪಿಸುತ್ತದೆ. ಇತರರ ಸಂಪತ್ತನ್ನು ಕಬಳಿಸುವ ಅಥವಾ ಜೀವ ತೆಗೆಯುವ ಅಧಿಕಾರ ಯಾರಿಗೂ ಇಲ್ಲ ಅಂತೆಯೇ ಅಭಿಮಾನಕ್ಕೆ ಧಕ್ಕೆ ಉಂಟು ಮಾಡುವ ಮತ್ತು ವ್ಯಕ್ತಿತ್ವಕ್ಕೆ ಚ್ಯುತಿಯನ್ನುಂಟು ಮಾಡುವ ಅಧಿಕಾರವೂ ಇಲ್ಲ. ವಿದಾಯ ಹಜ್ಜ್‌ನ ಸಂದರ್ಭದಲ್ಲಿ ಪ್ರವಾದಿ ಮುಹಮ್ಮದ್(ಸ) ಈ ವಿಷಯನ್ನು ಪ್ರತ್ಯೇಕವಾಗಿ ಪ್ರಸ್ತಾಪಿಸಿರುವರು.

ಅಬೂಬಕರ್(ರ) ವರದಿ ಮಾಡಿರುತ್ತಾರೆ:

أَنَّ رَسُولَ اللّٰهِ ﷺ قَالَ فِيْ خُطْبَتِهِ فِيْ حَجَّةِ الْوَدَاعِ: إِنَّ دِمَائَكُمْ وَأَمْوَالَكُمْ وَأَعْرَاضَكُمْ حَرَامٌ عَلَيْكُمْ كَحُرْمَةِ يَوْمِكُمْ هٰذَا، فِيْ شَهْرِكُمْ هٰذَا، فِيْ بَلَدِكُمْ هٰذَا

ವಿದಾಯ ಹಜ್ಜ್ ಪ್ರವಚನದಲ್ಲಿ ಪ್ರವಾದಿ(ಸ) ಈ ರೀತಿ ಹೇಳಿದರು, 'ನಿಶ್ಚಯವಾಗಿಯೂ ಈ ದಿನ ತಿಂಗಳು ಮತ್ತು ನಗರವು ಪವಿತ್ರವೂ ನಿಷಿದ್ಧವೂ ಆಗಿರುವಂತೆ ನಿಮ್ಮ ಸಂಪತ್ತು ಮತ್ತು ಮಾನವೂ ನಿಷಿದ್ಧವಾಗಿದೆ.'[1]

ಅಭಿಮಾನಕ್ಕೆ ಕುಂದುಂಟು ಮಾಡುವುದು ಬಹಳ ಗಂಭೀರವಾದ ಪಾತಕವಾಗಿದೆ. ಎಲ್ಲರಿಗೂ ಅವರವರ ಗೌರವವನ್ನು ಧರ್ಮವು ನೀಡಿದೆ. ಪರಿಹಾಸ್ಯ ಮಾಡುವುದು, ಪರದೂಷಣೆ, ಗುಮಾನಿ, ಅಡ್ಡ ಹೆಸರಿಡುವುದು, ರಹಸ್ಯಾನ್ವೇಷಣೆ, ಪರನಿಂದೆ ಮುಂತಾದವುಗಳಿಂದ ಆರಂಭಿಸಿ ಅನೇಕ ಕೆಡುಕುಗಳನ್ನು ಪವಿತ್ರ ಕುರ್‌ಆನ್ ಬಹಳ ಕಠಿಣ ಶಬ್ದಗಳಲ್ಲಿ ವಿಮರ್ಶಿಸಿದೆ. ವ್ಯಕ್ತಿಯ ಗೌರವ ಮತ್ತು ಅಭಿಮಾನಕ್ಕೆ ಯಾವುದೇ ಚ್ಯುತಿ ಬಾರದಂತೆ ಸಂರಕ್ಷಿಸಲು ಹೀಗೆ ಮಾಡಲಾಗಿದೆ.

ಸಮಾಜದಲ್ಲಿ ಅಪರಾಧಿಗಳಿಗೆ ಕೂಡ ಇಸ್ಲಾಮ್ ಈ ಹಕ್ಕನ್ನು ನೀಡಿದೆ. ಒಮ್ಮೆ ಉಕ್ಬಾ ಬಿನ್ ಆಮಿರ್(ರ)ರ ಮುಂದೆ ಒಬ್ಬ ವ್ಯಕ್ತಿ ಬಂದು ಹೇಳಿದರು, 'ನನಗೆ ಕೆಲವು ನೆರೆಹೊರೆಯವರಿದ್ದಾರೆ. ಮದ್ಯಪಾನಿಗಳಾಗಿರುವ ಅವರನ್ನು ಕಾನೂನಿನ ಕೈಕೆಳಗೆ ಒಪ್ಪಿಸಬೇಕೆಂದು ನಾನು ಇಚ್ಛಿಸಿರುವೆ ತಮ್ಮ ಅಭಿಪ್ರಾಯವೇನು?' ಉಕ್ಬಾ ಹೇಳಿದರು, ' ನೀವು ಹಾಗೆ ಮಾಡಬಾರದು ಅವರಿಗೆ ಉಪದೇಶ ಮಾಡಿ, ದೇವನ ಶಿಕ್ಷೆಯ ಬಗ್ಗೆ ಅವರಿಗೆ ಎಚ್ಚರಿಕೆ ನೀಡಿರಿ.' ಆ ವ್ಯಕ್ತಿ ಹೇಳಿದರು, 'ನಾನು ಅವರನ್ನು ಅದರಿಂದ ತಡೆಯುತ್ತೇನೆ ಆದರೂ ಅವರು ಮದ್ಯಪಾನ ಮಾಡುವುದನ್ನು ಮುಂದುವರಿಸಿದರು. ಇನ್ನು ಅಧಿಕಾರಿಗಳಿಗೆ ತಿಳಿಸುವುದಲ್ಲದೇ ಅನ್ಯ ಮಾರ್ಗವಿಲ್ಲ.' ಆಗ ಉಕ್ಬಾ ಹೇಳಿದರು,

وَيْحَكَ! لَا تَفْعَلْ، فَإِنِّي سَمِعْتُ رَسُولَ اللَّهِ ﷺ يَقُولُ: مَنْ سَتَرَ عَوْرَةً فَكَأَنَّمَا اسْتَحْيَا مَوْءُودَةً فِي قَبْرِهَا

'ನಿನಗೆ ನಾಶ, ನೀನು ಹಾಗೆ ಮಾಡಬಾರದು. ಪ್ರವಾದಿ(ಸ) ಹೀಗೆ ಹೇಳಿರುವುದನ್ನು ನಾನು ಕೇಳಿದ್ದೇನೆ: ಒಬ್ಬ ವ್ಯಕ್ತಿ ಇತರರ ಕುಂದು ಕೊರತೆಗಳನ್ನು ಮುಚ್ಚಿಟ್ಟರೆ, ಒಬ್ಬ ಹೆಣ್ಣು ಮಗಳಿಗೆ ಜೀವನ ನೀಡಿದುದಕ್ಕೆ ಸಮಾನವಾಗಿದೆ.'[2]

ಬಡ್ಡಿಯು ಬಹಳ ದೊಡ್ಡ ಪಾಪವಾಗಿದೆ. ಬಡ್ಡಿಯ ಮೂಲಕ ಇತರರ ಸಂಪತ್ತನ್ನು ಅನ್ಯಾಯವಾಗಿ ಕಬಳಿಸಿದಂತೆ ಆಗುತ್ತದೆ. ಅಲ್ಲಾಹು ಮತ್ತು ಅವನ ಪ್ರವಾದಿಯವರು ಬಡ್ಡಿಯ ವಿರುದ್ಧ ಯುದ್ಧ ಘೋಷಿಸಿರುವರು. ಏಳು ಮಹಾಪಾಪ ಗಳ ಪೈಕಿ ಅದು ಒಂದೆಂದು ಸಾರಲಾಗಿದೆ.

ಪ್ರವಾದಿ ವಚನದ ಆರಂಭದಲ್ಲಿ ಬಡ್ಡಿಗೆ ಅನೇಕ ಕವಾಟಗಳಿರುವುದಾಗಿಯೂ ಅದರಲ್ಲಿ ಬಹಳ ಕ್ಷುಲ್ಲಕವಾದುದು ತನ್ನ ಮಾತೆಯನ್ನು ವಿವಾಹವಾಗುವಷ್ಟು ಕೆಟ್ಟ ದೆಂದು ಹೇಳುತ್ತದೆ. ಹಣವನ್ನು ವ್ಯಕ್ತಿಗೆ ಸಂಪಾದಿಸಬಹುದು, ಒಂದು ವೇಳೆ ನಷ್ಟ ಸಂಭವಿಸಿದರೂ ಮರಳಿ ಗಳಿಸಬಹುದು. ಬಡ್ಡಿಯನ್ನು ಸ್ವೀಕರಿಸಿದವನಿಗೆ, ಕೊಟ್ಟವ ನೊಂದಿಗೆ ಏನಾದರೂ ಮನಸ್ತಾಪವುಂಟಾದರೆ, ಅದನ್ನು ಹಿಂತಿರುಗಿಸಿ ಸಮಸ್ಯೆಯನ್ನು ಪರಿಹರಿಸಿಕೊಳ್ಳಬಹುದು. ಆದರೆ ಆತ್ಮಾಭಿಮಾನದ ವಿಷಯ ಹಾಗಲ್ಲ. ನಷ್ಟವಾದರೆ ಅದನ್ನು ಅಷ್ಟು ಸುಲಭದಲ್ಲಿ ಮರಳಿ ಗಳಿಸಲು ಸಾಧ್ಯವಿಲ್ಲ. ಶರೀರಕ್ಕಾಗುವ ಗಾಯಕ್ಕಿಂತ ಆಳವಾಗಿ ಆತ್ಮಭಿಮಾನಕ್ಕೆ ಉಂಟಾಗುವ ಗಾಯವು ನೋವನ್ನುಂಟು ಮಾಡುತ್ತದೆ. ಆದ್ದದರಿಂದ ಆತ್ಮಾಭಿಮಾನಕ್ಕೆ ಚ್ಯುತಿ ಬರಿಸುವುದನ್ನು ಅತಿ ಗಂಭೀರ ವಾದ ಬಡ್ಡಿ ಎಂದು ಪ್ರವಾದಿ(ಸ) ಹೇಳಿರುವರು. ಇದೇ ವಿಷಯವನ್ನೊಳಗೊಂಡ ಇನ್ನೊಂದು ಪ್ರವಾದಿವಚನ ಹೀಗಿದೆ- ಇಬ್ನು ಅಬ್ಬಾಸ್(ರ) ವರದಿ ಮಾಡಿರುವರು. ಪ್ರವಾದಿ(ಸ) ಹೇಳಿದರು:

إِنَّ الرِّبَا نَيِّفٌ وَسَبْعُونَ بَابًا، أَهْوَنُهُنَّ بَابًا مِنَ الرِّبَا مِثْلُ مَنْ أَتَى أُمَّهُ فِي الْإِسْلَامِ، وَدِرْهَمٌ مِنَ الرِّبَا أَشَدُّ مِنْ خَمْسٍ وَثَلَاثِينَ زَنْيَةً وَأَشَدُّ الرِّبَى وَأَرْبَى الرِّبَا وَأَخْبَثُ الرِّبَى انْتِهَاكُ عِرْضِ الْمُسْلِمِ وَانْتِهَاكُ حُرْمَتِهِ

'ಬಡ್ಡಿಗೆ ಎಪ್ಪತ್ತಕ್ಕಿಂತಲೂ ಅಧಿಕ ಶಾಖೆಗಳಿವೆ. ಅದರಲ್ಲಿ ಬಹಳ ಕ್ಷುಲ್ಲಕವಾದುದು ತನ್ನ ತಾಯಿಯೊಂದಿಗೆ ವ್ಯಭಿಚಾರವೆಸಗಿದಷ್ಟು ಗುರುತರವಾಗಿದೆ. ಬಡ್ಡಿಯಿಂದ ವ್ಯಕ್ತಿ

ಸಂಪಾದಿಸಿದ ಒಂದು ದಿರ್ಹಮ್ ಮೂವತ್ತೈದು ಬಾರಿ ವ್ಯಭಿಚಾರವೆಸಗಿದಷ್ಟು ದೊಡ್ಡ ಪಾಪವಾಗಿದೆ. ಆದರೆ ಇವೆಲ್ಲಕಿಂತ್ತಲೂ ದೊಡ್ಡ ಕೆಡುಕು ಮತ್ತು ಕಠಿಣವಾದ ಬಡ್ಡಿ ಎಂದರೆ ಒಬ್ಬ ಮುಸ್ಲಿಮನು ಇನ್ನೊಬ್ಬನ ಅಭಿಮಾನಕ್ಕೆ ದಕ್ಕೆಯುಂಟು ಮಾಡುವುದು ಮತ್ತು ಗೌರವಕ್ಕೆ ಹಾನಿಯನ್ನುಂಟು ಮಾಡುವುದಾಗಿದೆ.'[3]

ಮಹಾಪಾಪಗಳಾದ ಬಡ್ಡಿ, ವ್ಯಭಿಚಾರ ಮತ್ತು ನಾವು ಕ್ಷುಲ್ಲಕವೆಂದು ಪರಿಗಣಿಸುವ ಇತರರ ಅಭಿಮಾನಕ್ಕೆ ಧಕ್ಕೆಯನ್ನುಂಟು ಮಾಡುವ ವಿಷಯವನ್ನು ಪರಸ್ಪರ ಹೋಲಿಕೆ ಮಾಡಿರುವ ಪ್ರವಾದಿ ವಚನಗಳು ನಮ್ಮನ್ನು ಹಿಡಿದು ಕುಲುಕುವಂತಿದೆ.

---

1. ಬುಖಾರಿ: ಮುಸ್ಲಿಮ್ 1679

2. ಅಬೂದಾವೂದ್: 4892, ನಸಾಈ – ಕುಬ್ರಾ, ಇಬ್ನು ಹಿಬ್ಬಾನ್: 518 ಹಾಕಿಮ್: 4/384

3. ಬೈಹಕಿ – ಶುಅಬುಲ್ ಈಮಾನ್: 6715

45. ತಪ್ಪೆಸಗುವವರ ಬಗ್ಗೆಯೂ ಹಿತಚಿಂತನೆ

عَنْ أَبِي هُرَيْرَةَ رَضِيَ اللّٰهُ عَنْهُ، قَالَ: سَمِعْتُ رَسُولَ اللّٰهِ ﷺ يَقُولُ كَانَ رَجُلَانِ فِي بَنِي إِسْرَائِيلَ مُتَوَاخِيَيْنِ فَكَانَ أَحَدُهُمَا يُذْنِبُ، وَالْآخَرُ مُجْتَهِدٌ فِي الْعِبَادَةِ، فَكَانَ لَا يَزَالُ الْمُجْتَهِدُ يَرَى الْآخَرَ عَلَى ذَنْبٍ، فَيَقُولُ: أَقْصِرْ، فَوَجَدَهُ يَوْمًا عَلَى ذَنْبٍ، فَقَالَ لَهُ: أَقْصِرْ، فَقَالَ خَلِّنِي وَرَبِّي! أَبُعِثْتَ عَلَيَّ رَقِيبًا؟ فَقَالَ: وَاللّٰهِ، لَا يَغْفِرُ اللّٰهُ لَكَ، أَوْ لَا يُدْخِلُكَ اللّٰهُ الْجَنَّةَ، فَقَبَضَ أَرْوَاحَهُمَا، فَاجْتَمَعَا عِنْدَ رَبِّ الْعَالَمِينَ، فَقَالَ لِهَذَا الْمُجْتَهِدِ: كُنْتَ بِي عَالِمًا أَوْ أَكُنْتَ عَلَيَّ مَا فِي يَدَيَّ قَادِرًا؟ وَقَالَ لِلْمُذْنِبِ: اِذْهَبْ فَادْخُلِ الْجَنَّةَ بِرَحْمَتِي، وَقَالَ لِلْآخَرِ: اِذْهَبُوا بِهِ إِلَى النَّارِ! وَقَالَ أَبُو هُرَيْرَةَ: وَالَّذِي نَفْسِي بِيَدِهِ، لَتَكَلَّمَ بِكَلِمَةٍ أَوْبَقَتْ دُنْيَاهُ وَآخِرَتَهُ!

ಅಬೂ ಹುರೈರಾ(ರ)ರಿಂದ ವರದಿ. ಅಲ್ಲಾಹನ ಪ್ರವಾದಿಯವರು(ಸ) ಹೀಗೆ ಹೇಳಿರುವರು: ಇಸ್ರಾಈಲ್ಯರಲ್ಲಿ ಇಬ್ಬರು ಸಹೋದರರಿದ್ದರು ಒಬ್ಬ ವ್ಯಕ್ತಿ ಅಪರಾಧ ಕೃತ್ಯಗಳನ್ನು ಎಸಗುವವನಾಗಿದ್ದರೆ, ಇನ್ನೊಬ್ಬ ಸದಾ ಆರಾಧನೆಗಳಲ್ಲಿ ಮುಳುಗಿರುತ್ತಿದ್ದ ವ್ಯಕ್ತಿಯಾಗಿದ್ದನು. ಭಕ್ತಿಯಿರುವವನು ಇನ್ನೊಬ್ಬನನ್ನು ಸದಾ ಅಪರಾಧಿಯಂತೆ ಕಾಣುತಿದ್ದನು, ಅವನಿಗೆ ಉಪದೇಶಿಸುತ್ತಾ ಕೆಟ್ಟ ಕೃತ್ಯಗಳನ್ನು ಎಸಗುವುದನ್ನು ಬಿಟ್ಟುಬಿಡು ಆಗ ತಪ್ಪೆಸಗುವ ಸಹೋದರ ಹೀಗೆ ಹೇಳುತಿದ್ದನು, 'ನನಗೆ ಮತ್ತು ನನ್ನ ಸೃಷ್ಟಿಕರ್ತನಿಗೆ

ಸಂಬಂಧಪಟ್ಟ ವಿಷಯವಲ್ಲವೇ? ನೀನು ಬಿಟ್ಟುಬಿಡು, ನನ್ನ ಮೇಲ್ನೋಟಗಾರನಾಗಿ ನಿನ್ನನ್ನು ನೇಮಿಸಲಾಗಿದೆಯೇ?' ಆಗ ಭಕ್ತನು ಹೇಳಿದನು, 'ಅಲ್ಲಾಹನಾಣೆ ಅವನು ನಿನ್ನನ್ನೆಂದೂ ಕ್ಷಮಿಸಲಾರನು, ಒಮ್ಮೆಯೂ ನೀನು ಸ್ವರ್ಗಕ್ಕೆ ಪ್ರವೇಶಿಸಲಾರೆ.' ಪ್ರವಾದಿ(ಸ) ಹೇಳಿದರು: ಆ ಬಳಿಕ ಅವರಿಬ್ಬರ ಆತ್ಮವನ್ನು ಅಲ್ಲಾಹನು ವಶಪಡಿಸಿಕೊಂಡನು. ಹಾಗೆ ಅಲ್ಲಾಹನ ದರ್ಬಾರಿನಲ್ಲಿ ಅವರು ಹಾಜರಾದರು. ಅಲ್ಲಾಹನು ಆ ದೇವಭಕ್ತನೊಂದಿಗೆ ಈ ರೀತಿ ಪ್ರಶ್ನಿಸುತ್ತಾನೆ, 'ನನ್ನ ಬಗ್ಗೆ ನಿನಗೆ ಹೆಚ್ಚು ತಿಳಿದಿದೆಯೇ ಅಥವಾ ನನ್ನ ಅಧಿಕಾರದಲ್ಲಿ ನಿನಗೆ ಏನಾದರೂ ಪಾಲುದಾರಿಕೆ ಇದೆಯೇ?' ತಪ್ಪೆಸಗುತ್ತಿದ್ದ ಆ ವ್ಯಕ್ತಿಯಲ್ಲಿ ಅಲ್ಲಾಹನು ಹೇಳುವನು, 'ನನ್ನ ಕರುಣೆಯಿಂದ ಸ್ವರ್ಗದೊಳಗೆ ಪ್ರವೇಶಿಸು.' ದೇವಭಕ್ತನ ವಿಚಾರದಲ್ಲಿ ಅಲ್ಲಾಹನು ದೇವಚರರಿಗೆ ಹೀಗೆ ಆದೇಶವಿತ್ತನು, 'ಆ ವ್ಯಕ್ತಿಯನ್ನು ನೀವು ನರಕಕ್ಕೆ ಕೊಂಡೊಯ್ಯಿರಿ.' ಹದೀಸನ್ನು ಪ್ರಸ್ತಾಪಿಸಿದ ಬಳಿಕ ಅಬೂ ಹುರೈರಾ(ರ) ಹೇಳುತ್ತಾರೆ: ನನ್ನ ಆತ್ಮವು ಯಾರ ಕೈಯಲ್ಲಿದೆಯೋ ಅವನಾಣೆ ಒಬ್ಬ ವ್ಯಕ್ತಿ ಉಚ್ಚರಿಸುವ ಒಂದು ಮಾತು ಅವನ ಇಹಪರವನ್ನು ಅಡಿಮೇಲುಗೊಳಿಸಲು ಸಾಕಾಗಬಹುದು.*

ತಪ್ಪುಗಳನ್ನು ಎಸಗುವವರನ್ನು ವಿಮರ್ಶಿಸುವ ಮತ್ತು ತಿದ್ದುವ ಕರ್ತವ್ಯ ಸಮಾಜದಲ್ಲಿ ಪ್ರತಿಯೊಬ್ಬರಿಗಿದೆ. ದುಷ್ಕೃತ್ಯಗಳು ವ್ಯಾಪಕವಾಗಿ ಬೆಳೆಯುತ್ತಿರುವ ಇಂದಿನ ಕಾಲದಲ್ಲಿ ಇದು ಬಹಳ ಅಗತ್ಯವಾಗಿದೆ. ಇದು ವಿಶ್ವಾಸದ ಅನಿವಾರ್ಯ ಬೇಡಿಕೆಗಳಲ್ಲಿ ಒಂದಾಗಿದೆ. ಆದರೆ ಕೆಟ್ಟ ಕೆಲಸಗಳನ್ನು ಎಸಗುವ ವ್ಯಕ್ತಿಯನ್ನು ವಿಮರ್ಶಿಸುವಾಗ ತಿದ್ದುವಾಗ ಸತ್ಯವಿಶ್ವಾಸಿಗಳು ಪಾಲಿಸಬೇಕಾದ ಕೆಲವು ಶಿಷ್ಟಾಚಾರ ಮತ್ತು ಮರ್ಯಾದೆಗಳಿವೆ. ವ್ಯಕ್ತಿಯನ್ನು ಸಂಸ್ಕರಿಸುವ ಕೆಲಸವು ಫಲಪ್ರದವಾಗಬೇಕಾದರೆ ಅವುಗಳನ್ನು ಕಡ್ಡಾಯವಾಗಿ ಪಾಲಿಸಲೇ ಬೇಕು. ಈ ವಿಷಯಗಳನ್ನು ಬಹಳ ಗೌರವದೊಂದಿಗೆ ನೆನಪಿಸುವ ಕೆಲಸವನ್ನು ಈ ಮೇಲೆ ಉಲ್ಲೇಖಿಸಿರುವ ಪ್ರವಾದಿ ವಚನ ಮಾಡುತ್ತದೆ.

ತಪ್ಪುಗಳು ಮನುಷ್ಯ ಸಹಜವಾಗಿದೆ. ಯಾರು ಅದರಿಂದ ಮುಕ್ತರಲ್ಲ.

* ಅಬೂದಾವೂದ್: 4901, ಅಹ್ಮದ್: 2/323, ಬೈಹಕಿ – ಶುಹಬುಲ್ ಈಮಾನ್ 6689, ಮುಂತಾದವರು ಉಲ್ಲೇಖಿಸಿರುವರು. ಇದರ ಆಗಮನ ಶ್ರೇಣಿಯು ಸಹೀಹ್ ಆಗಿದೆಯೆಂದು ಶೇಕ್ ನಾಸೀರುದೀನ್ ಅಲ್ಬಾನಿ ಸಾಕ್ಷಿ ನುಡಿದಿದ್ದಾರೆ.

ಪಾಪಗಳಿಂದ ಪರಿಶುದ್ಧರಾದ ಪ್ರವಾದಿಗಳ ಹೊರತು ಎಲ್ಲಾ ಮನುಷ್ಯರೂ ಅಪರಾಧಿಗಳೇ. ಆದ್ದರಿಂದ ದುಷ್ಕೃತ್ಯದಲ್ಲಿ ನಿರತರಾಗಿರುವವರನ್ನು ಆಕ್ಷೇಪಿಸುವುದು, ಅವಹೇಳನ ಮಾಡುವುದು ಸಲ್ಲದು ಅವರು ಬಿದ್ದುಕೊಂಡಿರುವ ಕೆಡುಕಿನ ಕೂಪದಿಂದ ಹೊರಬರಲು ಹಿತಚಿಂತನೆ ಯೊಂದಿಗೆ ಅವರ ಮನ ಪರಿವರ್ತಿಸಲು ಪ್ರಯತ್ನಿಸಬೇಕಾಗಿದೆ. ಅವರಿಗಾಗಿ ಅಲ್ಲಾಹ ನೊಂದಿಗೆ ಹೃದಯಾಂತರಾಳದಿಂದ ಪ್ರಾರ್ಥಿಸುತ್ತಿರಬೇಕು. ಉಮರ್(ರ) ಹೇಳಿರುವರು:

إِذَا رَأَيْتُمْ أَخَاكُمْ زَلَّ زَلَّةً فَقَوِّمُوهُ وَسَدِّدُوهُ، وَادْعُوا اللهَ أَنْ يَتُوبَ عَلَيْهِ، وَيُرَاجِعَ بِهِ إِلَى التَّوْبَةِ،
وَلَا تَكُونُوا أَعْوَانًا لِلشَّيْطَانِ عَلَيْهِ

ನಿಮ್ಮ ಸಹೋದರನು ಯಾವುದಾದರೂ ದುಷ್ಕೃತ್ಯದಲ್ಲಿ ತೊಡಗಿದರೆ, ಅವನನ್ನು ಆ ಕೆಡುಕಿನಿಂದ ತಡೆಯಲು ಮತ್ತು ನೇರ ಮಾರ್ಗದಲ್ಲಿ ನಡೆಸಲು ನೀವು ಪರಿಶ್ರಮ ಪಡಬೇಕು, ಸಂಭವಿಸಿ ಹೋದ ತಪ್ಪಿನ ಬಗ್ಗೆ ಅವನ ಮನಸ್ಸಿನಲ್ಲಿ ಪಶ್ಚಾತ್ತಾಪದ ಭಾವನೆ ಮೂಡಲು ಮತ್ತು ಅವನನ್ನು ಕ್ಷಮಿಸಲು ನೀವು ಅಲ್ಲಾಹನಲ್ಲಿ ಪ್ರಾರ್ಥಿಸಬೇಕು, ಆದರೆ ನಿಮ್ಮ ಸಹೋದರನ ವಿರುದ್ಧ ಶೈತಾನನಿಗೆ ಸಹಾಯ ಮಾಡುವವರಾಗಬಾರದು.[1]

ಸತ್ಯವಿಶ್ವಾಸಿಗಳು ಪರಸ್ಪರ ದಯೆ ತೋರುವವರಾಗುತ್ತಾರೆ (48: 29) ಎಂಬ ಪವಿತ್ರ ಕುರ್‌ಆನಿನ ವಚನವನ್ನು ಇಬ್ನು ಅಬ್ಬಾಸ್(ರ) ಈ ರೀತಿ ವಿವರಿಸಿರುವರು:

يَدْعُو صَالِحُهُمْ لِطَالِحِهِمْ، وَطَالِحُهُمْ لِصَالِحِهِمْ، فَإِذَا نَظَرَ الطَّالِحُ إِلَى الصَّالِحِ مِنْ أُمَّةِ مُحَمَّدٍ ﷺ
قَالَ: اللَّهُمَّ بَارِكْ لَهُ فِيمَا قَسَمْتَ لَهُ مِنَ الْخَيْرِ وَثَبِّتْهُ عَلَيْهِ وَانْفَعْنَا بِهِ! وَإِذَا نَظَرَ الصَّالِحُ إِلَى الطَّالِحِ
قَالَ: اَللَّهُمَّ اهْدِهِ وَتُبْ عَلَيْهِ وَاغْفِرْ لَهُ عَثْرَتَهُ!

ಅವರಲ್ಲಿ ಸಜ್ಜನರು, ದುರ್ಜನರಿಗಾಗಿಯೂ ದುರ್ಜನರು, ಸಜ್ಜನರಿಗಾಗಿಯೂ ಪ್ರಾರ್ಥಿಸುತ್ತಿರುವವರು. ಮುಹಮ್ಮದ್(ಸ)ರ ಸಮುದಾಯದ ಒಬ್ಬ ಸದ್ಗುಣವಂತನನ್ನು ಕಂಡಾಗ ಅವರಲ್ಲಿರುವ ಕೆಟ್ಟ ವ್ಯಕ್ತಿ ಹೀಗೆ ಪ್ರಾರ್ಥಿಸುವನು: ಓ ಅಲ್ಲಾಹ್! ನೀನು ಇವನಿಗೆ ನೀಡಿರುವ ಒಳಿತುಗಳಿಂದ ಇವನನ್ನು ನೀನು ಅನುಗ್ರಹಿಸ ಬೇಕು ಮತ್ತು ಸನ್ಮಾರ್ಗದಲ್ಲಿ ದೃಢವಾಗಿ ನೆಲೆಗೊಳಿಸಬೇಕು, ಇವನ ಕರ್ಮಗಳ ಪ್ರಯೋಜನವು ನಮಗೂ ಲಭ್ಯವಾಗುವಂತೆ ಮಾಡಬೇಕು. ಕೆಡುಕುಗಳನ್ನು ಮಾಡುವ ವ್ಯಕ್ತಿಯನ್ನು ಕಂಡಾಗ ಒಳ್ಳೆಯ ವ್ಯಕ್ತಿ ಹೀಗೆ ಪ್ರಾರ್ಥಿಸುವನು: ಓ ಅಲ್ಲಾಹ್! ಇವನನ್ನು ನೇರ ಮಾರ್ಗದಲ್ಲಿ ಹಾಕು, ಇವನ ಪಶ್ಚಾತ್ತಾಪವನ್ನು ಸ್ವೀಕರಿಸು, ತಪ್ಪುಗಳನ್ನು ಮನ್ನಿಸಿಬಿಡು.[2]

ಒಮ್ಮೆ ಅಬೂದರ್ದಾ(ರ) ದಾರಿಯಲ್ಲಿ ನಡೆದುಕೊಂಡು ಹೋಗುತ್ತಿರುವಾಗ ವ್ಯಕ್ತಿಯೊಬ್ಬನನ್ನು ಜನರೆಲ್ಲಾ ಸೇರಿ ಕಠಿಣವಾಗಿ ಜರೆಯುತ್ತಿರುವುದನ್ನು ಕಂಡರು. ಅವರೊಂದಿಗೆ ಪ್ರಶ್ನಿಸಿದರು: ನಿಮ್ಮ ಒಬ್ಬ ಸಹೋದರ ಒಂದು ಬಾವಿಯಲ್ಲಿ ಬಿದ್ದಿರುವುದಾಗಿ ನೀವು ಕಲ್ಪಿಸಿಕೊಳ್ಳಿ. ಹಾಗಿದ್ದರೆ ನೀವು ಇವನೊಂದಿಗೆ ಹೇಗೆ ವರ್ತಿಸುತ್ತಿದ್ದಿರಿ? ಜನರು ಹೇಳಿದರು: ನಾವು ಅವನನ್ನು ಅದರಿಂದ ರಕ್ಷಿಸಲು ಪ್ರಯತ್ನಿಸುತ್ತಿದ್ದೆವು. ಆಗ ಅಬೂದರ್ದಾ(ರ) ಹೇಳಿದರು: ಹಾಗಾದರೆ ನೀವು ಇವನನ್ನು ಜರೆಯುದನ್ನು ನಿಲ್ಲಿಸಿರಿ ಮತ್ತು ಇವನ ಒಳಿತಿಗಾಗಿ ಪ್ರಾರ್ಥಿಸಿರಿ. ಜನರು ಪ್ರಶ್ನಿಸಿದರು: ಅಬೂದರ್ದಾ(ರ) ನಾವು ಅವನನ್ನು ದ್ವೇಷಿಸುವುದಕ್ಕೆ ವಿರೋಧವಿದೆಯೇ? ಅವರು ಹೇಳಿದರು: ನಾನು ಆ ವ್ಯಕ್ತಿಯ ಕೆಡುಕುಗಳನ್ನು ಮಾತ್ರ ದ್ವೇಷಿಸುತ್ತೇನೆ, ಅವನದನ್ನು ತೊರೆದ ಕೂಡಲೇ ಅವನು ನನ್ನ ಗೆಳೆಯನಾಗಿ ಬಿಡುವನು.[3]

ಒಳಿತನ್ನು ಆದೇಶಿಸುವುದು ಎಂಬ ಜವಾಬ್ದಾರಿಯನ್ನು ನಿರ್ವಹಿಸುವಾಗಲೂ ಇತರರ ಅಭಿಮಾನಕ್ಕೆ ಧಕ್ಕೆಯುಂಟು ಮಾಡಬಾರದು ಎಂಬ ಪಾಠವನ್ನು ಈ ಹದೀಸ್ ವಚನವು ನೀಡುತ್ತದೆ. ಪ್ರವಾದಿ(ಸ) ಹೇಳಿರುವರು:

وَيْلٌ لِلْمُتَأَلِّيْنَ مِنْ أُمَّتِيْ، اَلَّذِيْنَ يَقُوْلُوْنَ: فُلَانٌ فِيْ الْجَنَّةِ، وَفُلَانٌ فِيْ النَّارِ

ಈ ವ್ಯಕ್ತಿ ಸ್ವರ್ಗವಾಸಿ, ಈ ವ್ಯಕ್ತಿ ನರಕಕ್ಕೆ ಹೋಗುವವನು ಎಂದೆಲ್ಲ ನಿರ್ಣಯ ಪ್ರಕಟಿಸುವ ಸಮುದಾಯದ ಎಲ್ಲರಿಗೂ ನಾಶವಿದೆ.[4]

ಅಲ್ಲಾಹನ ಕರುಣೆ ಮತ್ತು ಉದಾರತೆ ಯಾರಿಗೆಲ್ಲ ಲಭಿಸುತ್ತದೆ ಮತ್ತು ಲಭಿಸುವುದಿಲ್ಲ ಎಂಬುದು ಯಾರಿಗೂ ತಿಳಿದಿಲ್ಲ. ಸ್ವರ್ಗಕ್ಕೆ ಹೋಗುವವರು ಮತ್ತು ನರಕಕ್ಕೆ ಹೋಗುವವರು ಯಾರೆಂಬುದು ಅಲ್ಲಾಹನಿಗೆ ಮಾತ್ರ ತಿಳಿದಿದೆ. ಸೃಷ್ಟಿಗಳಲ್ಲೇ ಶ್ರೇಷ್ಠರಾದ ಪ್ರವಾದಿಗಳಿಗೂ ಇದು ತಿಳಿದಿರಲಿಲ್ಲ. ಆದುದರಿಂದ ಒಮ್ಮೆ ಪ್ರವಾದಿ(ಸ) ಈ ರೀತಿ ನೆನಪಿಸಿರುವರು: وَاللهِ مَا أَدْرِيْ - وَأَنَا رَسُوْلُ اللهِ - مَا يُفْعَلُ بِيْ ! ಅಲ್ಲಾಹನಾಣೆ, ನಾನು ದೇವವಿಶ್ವಾಸಿಯಾಗಿದ್ದರೂ ಅಂತ್ಯ ದಿನದಂದು ನನಗೇನು ಸಂಭವಿಸಬಹುದು ಎಂಬುದು ನನಗೆ ತಿಳಿದಿಲ್ಲ.[5]

'ನೀನು ನರಕಕ್ಕೆ ಹೋಗುವೆ, ನಿನ್ನನ್ನು ಅಲ್ಲಾಹನು ಎಂದಿಗೂ ಕ್ಷಮಿಸಲಾರನು' ಎಂದೆಲ್ಲ ಇತರರ ಬಗ್ಗೆ ಹೇಳುವವರು, ಈ ಮೂಲಕ ಬಹಿರಂಗವಾಗಿ ಹೇಳದ ಕೆಲವು ವಿಷಯಗಳು ಇದರಲ್ಲಿ ಅಡಗಿಕೊಂಡಿವೆ ನೀನು ನರಕಕ್ಕೆ ಹೋಗುವವನು, ಪಾಪಿ ಮತ್ತು ನಾನು ಅಂತಹವನಲ್ಲ, ದೇವನ ಕರುಣೆ ಲಭಿಸುವವನು ಮತ್ತು ಸ್ವರ್ಗ

ಪ್ರವೇಶಕ್ಕೆ ಅರ್ಹತೆಯುಳ್ಳವನು ಆಗಿರುವೆ, ನನ್ನನ್ನು ಅನುಸರಿಸು, ನಾನೇ ನಿನಗೆ ಮಾದರಿ ಈ ಮನೋಭಾವ ಸತ್ಯವಿಶ್ವಾಸದ ಚೈತನ್ಯಕ್ಕೆ ಹೊಂದುವಂತಹದ್ದಲ್ಲ ಎಂಬು ದನ್ನು ಪ್ರತ್ಯೇಕವಾಗಿ ಹೇಳಬೇಕಾದ ಅಗತ್ಯವಿಲ್ಲ ಅಲ್ಲವೇ? ಉಮರ್(ರ) ಹೇಳಿ ರುವರು:

إِنَّ أَخْوَفَ مَا أَخَافُ عَلَيْكُمْ إِعْجَابُ الْمَرْءِ بِرَأْيِهِ، وَمَنْ قَالَ: أَنَا عَالِمٌ فَهُوَ جَاهِلٌ، وَمَنْ قَالَ: أَنَا فِي الْجَنَّةِ فَهُوَ فِي النَّارِ

'ವ್ಯಕ್ತಿ ತನ್ನ ಬಗ್ಗೆ ತಾನು ಪರಿಪೂರ್ಣವೆಂದು ಭಾವಿಸುವ ವಿಷಯದ ಬಗ್ಗೆ ನಾನು ಹೆಚ್ಚು ಭಯಪಡುತ್ತೇನೆ, ಯಾರಾದರೂ ತನ್ನನ್ನು ತಾನೆ ಪಂಡಿತನೆಂದು ತಿಳಿದುಕೊಂಡಿದ್ದರೆ, ಅವನು ಪಾಮರನಾಗಿದ್ದಾನೆ, ನಾನು ಸ್ವರ್ಗಕ್ಕೆ ಹೋಗುವವನು ಎಂದು ಯಾರಾದರೂ ಅಹಂಕಾರ ತೋರಿಸಿದರೆ, ಅವನು ನರಕಕ್ಕೆ ಅರ್ಹ ನಾಗುವನು.'[6]

---

1. ಬೈಹಕಿ – ಶುಹಬುಲ್ ಈಮಾನ್
2. ಇಹ್ಯಾ ಉಲೂಮುದ್ದೀನ್: ಭಾಗ: 2, ಪುಟ: 194
3. ಬೈಹಕಿ – ಶುಅ್‌ಬುಲ್ ಈಮಾನ್: 6691
4. ಬುಖಾರಿ – ಅತ್ತಾರಿಖ್, ಸುಯೂತಿ – ಜಾಮಿಉಸ್ಸಗೀರ್: 9650
5. ಬುಖಾರಿ: 1243
6. ಕನ್ಝುಲ್ ಉಮ್ಮಾಲ್: 8862

46. ಮುಚ್ಚಲ್ಪಡುವ ಸ್ವರ್ಗದ ಬಾಗಿಲುಗಳು

عَنِ الْحَسَنِ رَضِيَ اللّٰهُ عَنْهُ، قَالَ: قَالَ رَسُوْلُ اللّٰهِ ﷺ: إِنَّ الْمُسْتَهْزِئِيْنَ بِالنَّاسِ يُفْتَحُ لِأَحَدِهِمْ فِي الآخِرَةِ بَابٌ مِنَ الْجَنَّةِ، فَيُقَالُ لَهُ هَلُمَّ هَلُمَّ، فَيَجِيْءُ بِكَرْبِهِ وَغَمِّهِ، فَإِذَا جَاءَهُ أُغْلِقَ دُوْنَهُ، ثُمَّ يُفْتَحُ لَهُ بَابٌ آخَرُ، فَيُقَالُ لَهُ: هَلُمَّ، هَلُمَّ، فَيَجِيْءُ بِكَرْبِهِ وَغَمِّهِ، فَإِذَا جَاءَهُ أُغْلِقَ دُوْنَهُ، فَمَا يَزَالُ كَذَالِكَ حَتَّى إِنَّ أَحَدَهُمْ لَيُفْتَحُ لَهُ الْبَابُ مِنْ أَبْوَابِ الْجَنَّةِ، فَيُقَالُ لَهُ: هَلُمَّ، فَمَا يَأْتِيْهِ مِنَ الإِيَاسِ

ಹಸನ್(ರ)ರಿಂದ ವರದಿ. ಪ್ರವಾದಿ(ಸ) ಹೇಳಿರುವರು: ಅಪಹಾಸ್ಯ ಮಾಡುವವರಿಗಾಗಿ ಪರಲೋಕದಲ್ಲಿ ಸ್ವರ್ಗದ ಒಂದು ಬಾಗಿಲು ತೆರೆಯಲ್ಪಡುವುದು, ಅವರ ಪೈಕಿ ಒಬ್ಬನೊಂದಿಗೆ ಹೀಗೆ ಹೇಳಲಾಗುವುದು ಇಲ್ಲಿ ಬಾ ಸ್ವರ್ಗದೊಳಗೆ ಪ್ರವೇಶಿಸು. ಅವನು ಬಹಳ ಪ್ರಯಾಸಪಟ್ಟು, ಸಂಕಷ್ಟಗಳನ್ನೆಲ್ಲ ಸಹಿಸಿ ಅಲ್ಲಿಗೆ ತಲುಪುವನು. ಆಗ ಅವನ ಮುಂದೆಯೇ ಬಾಗಿಲು ಮುಚ್ಚಲ್ಪಡುವುದು. ಬಳಿಕ ಇನ್ನೊಂದು ಬಾಗಿಲು ತೆರೆಯಲ್ಪಡುವುದು ಅಲ್ಲಿಂದಲೂ ಕರೆ ಕೇಳಿ ಬರುವುದು ಇತ್ತ ಕಡೆ ಬನ್ನಿ. ಬಹಳ ಪ್ರಯಾಸಪಟ್ಟು ಅಲ್ಲಿಗೆ ತಲುಪುವನು. ಅಲ್ಲಿಗೆ ತಲುಪುವಾಗ ಆ ಬಾಗಿಲು ಕೂಡ ಮುಚ್ಚಲ್ಪಡುವುದು. ಇದು ಹೀಗೆಯೇ ಮುಂದುವರಿಯುವುದು, ಎಷ್ಟರವರೆಗೆಂದರೆ ಸ್ವರ್ಗದ ಬಾಗಿಲನ್ನು ತೆರೆದಿಟ್ಟು ಇತ್ತ ಬನ್ನಿರಿ ಎಂದು ಕರೆದುದು ಕೇಳಿಸಿದರೂ ಕೂಡ ನಿರಾಶೆಯಿಂದ ಅಲ್ಲಿಗೆ ಹೋಗಲಾರನು.*

* ಇಮಾಮ್ ಬೈಹಕಿ – ಶುಅ್‌ಬುಲ್ ಈಮಾನ್ 6757, ಮುಂದಿರಿ ಅತ್ತರ್ಗೀಬ್ ವತ್ತರ್ಹೀಬ್: 3/611, ಇಬ್ನು ಅಬಿದುನ್‌ಯಾ ಮುಂತಾದವರು ಉಲ್ಲೇಖಿಸಿರುವ ಮುರ್ಸಲ್ ಆಗಿರುವ (ತಾಬೀಗಳು

ಸಹೋದರ ಸಂಬಂಧವನ್ನು ಮುರಿಯುವ, ಮನುಷ್ಯ ಸಂಬಂಧಗಳನ್ನು ಶಿಥಿಲ ಗೊಳಿಸುವ ದುಃಸ್ವಭಾವಗಳ ಪೈಕಿ ಅಪಹಾಸ್ಯವೂ ಒಂದಾಗಿದೆ. ಇತರರು ತನಗಿಂತ ಕೆಳಗಿನವರು ಮತ್ತು ಬೆಲೆಯಿಲ್ಲದವರು ಎಂದು ಪರಿಗಣಿಸಿ ಜನರ ಮಧ್ಯೆ ಅವರ ತಪ್ಪು ಗಳನ್ನು, ಕುಂದು ಕೊರತೆಗಳನ್ನು ಬಹಿರಂಗವಾಗಿ ಹೇಳಿ ಅವಹೇಳನ ಮಾಡುವುದೇ ಅಪಹಾಸ್ಯ. ಅಪಹಾಸ್ಯ ಕೇವಲ ನಾಲಗೆಯಿಂದಲೇ ಆಗಬೇಕೆಂದಿಲ್ಲ, ಇತರರನ್ನು ಗೇಲಿ ಮಾಡುವುದು, ಕೆಟ್ಟ ಸಂಜ್ಞೆಗಳನ್ನು ಪ್ರಕಟಿಸುವುದು, ಇತರರ ಮಾತು-ವೇಷ ದಾರಣೆ, ರೂಪ ಮತ್ತು ಕೆಲಸ ಮುಂತಾದವುಗಳನ್ನು ಜನರು ನಗಿಸಲಿಕ್ಕಾಗಿ ಅನುಕರಣೆ ಮಾಡಿ ತೋರಿಸುವುದು ಹೀಗೆ ಅಪಹಾಸ್ಯದ ಅನೇಕ ವಿಧಗಳಿವೆ. ಇಸ್ಲಾಮ್ ಇವು ಗಳನ್ನು ಬಹಳ ಗಂಭೀರವಾಗಿ ಪರಿಗಣಿಸಿ, ಕಠಿಣವಾಗಿ ನಿಷೇದಿಸುತ್ತದೆ.

ಅಲ್ಲಾಹನು ಹೇಳುತ್ತಾನೆ: 'ಸತ್ಯವಿಶ್ವಾಸಿಗಳೇ, ಪುರುಷರು ಇತರ ಪುರುಷರನ್ನು ಅಪಹಾಸ್ಯ ಮಾಡಬಾರದು, ಅವರ ನಿಮಗಿಂತ ಉತ್ತಮರಿರಲೂ ಬಹುದು ಮತ್ತು ಇತರ ಸ್ತ್ರೀಯರು ಇತರ ಸ್ತ್ರೀಯರನ್ನು ಅಪಹಾಸ್ಯ ಮಾಡಬಾರದು, ಅವರು ಇವರಿ ಗಿಂತ ಉತ್ತಮರಿರಲೂ ಬಹುದು. ಪರಸ್ಪರರನ್ನು ನಿಂದಿಸಬೇಡಿರಿ ಮತ್ತು ಒಬ್ಬರು ಇನ್ನೊಬ್ಬರನ್ನು ಅಡ್ಡ ಹೆಸರಿನಿಂದ ಕರೆಯಬೇಡಿರಿ, ಸತ್ಯವಿಶ್ವಾಸ ಸ್ವೀಕರಿಸಿದ ಬಳಿಕ ಕರ್ಮಭ್ರಷ್ಟತೆಯಲ್ಲಿ ಹೆಸರು ಗಳಿಸುವುದು ಬಹಳ ಕೆಟ್ಟದು, ಈ ನಿಲುಮೆಯನ್ನು ತೊರೆಯದವರು ಅಕ್ರಮಿಗಳಾಗಿರುವರು.' **(ಅಲ್ ಹುಜುರಾತ್ 49: 11)**

ಮಾತು ಮತ್ತು ವರ್ತನೆಯ ಮೂಲಕ ಇತರರನ್ನು ಅಪಹಾಸ್ಯ ಮಾಡುವವರಿಗೆ ಪವಿತ್ರ ಕುರ್‌ಆನ್ ಎಚ್ಚರಿಕೆ ನೀಡಿದೆ, 'ಜನರನ್ನು ಮೂದಲಿಸುವ ಮತ್ತು (ಬೆನ್ನ ಹಿಂದೆ) ದೂಷಿಸುವ ಅಭ್ಯಾಸವಿರುವ ಪ್ರತಿಯೊಬ್ಬನಿಗೂ ವಿನಾಶವಿದೆ. ಅವನು ಸಂಪತ್ತನ್ನು ಸಂಗ್ರಹಿಸಿದನು ಮತ್ತು ಅದನ್ನು ಎಣಿಸಿ ಎಣಿಸಿ ಇಟ್ಟನು, ಅವನ ಸಂಪತ್ತು ಶಾಶ್ವತವಾಗಿ ಅವನ ಬಳಿಯಲ್ಲೇ ಇರುವುದೆಂದು ಅವನು ಭಾವಿಸುತ್ತಾನೆ, ಖಂಡಿತ ಇಲ್ಲ, ಅವನು ಪುಡಿಗಟ್ಟಿ ಬಿಡುವ ಸ್ಥಳಕ್ಕೆ ಎಸೆಯಲ್ಪಡುವನು.' **(ಪವಿತ್ರ ಕುರ್‌ಆನ: 104: 1-4)**

ಮನುಷ್ಯನು ಗೌರವಾರ್ಹನೆನಿಸಿಕೊಳ್ಳುವುದು ದೇವಭಯ ಮತ್ತು ಸದ್ಗುಣ ಸಂಪನ್ನತೆ ಅವನಲ್ಲಿ ಮೇಳೈಸಿದಾಗ ಸಂಪತ್ತು ಕುಟುಂಬ ಲೌಕಿಕವಾದ ಇತರ ಅನುಗ್ರಹ ಗಳು ಶ್ರೇಷ್ಠತೆಯ ಮಾನದಂಡಗಳಲ್ಲ, ನಿಮ್ಮ ಪೈಕಿ ಅತ್ಯಧಿಕ ಧರ್ಮನಿಷ್ಟನೇ ವಾಸ್ತವ

ಪ್ರವಾದಿಯವರಿಂದ ನೇರವಾಗಿ ಉದ್ಧರಿಸಿರುವ) ಪ್ರವಾದಿ ವಚನವಿದು. ಇದರ ಆಗಮನ ಶ್ರೇಣಿಯು ಹಸನ್ ಆಗಿದೆಯೆಂದು ಮುಹಿಯ್ಯುದ್ದೀನ್ ದಿಲ್‌ಮಸ್ತು, ಸಮೀರ್ ಅಹ್ಮದುಲ್ ಅತ್ತಾರ್ ಯೂಸುಫ್ ಅಲೀ ಬದವಿ ಮುಂತಾದವರು ಸಾಕ್ಷಿ ನುಡಿದಿದ್ದಾರೆ.

ದಲ್ಲಿ ಅಲ್ಲಾಹನ ಬಳಿ ಅತೀ ಹೆಚ್ಚು ಗೌರವಕ್ಕೆ ಪಾತ್ರನು (ಪವಿತ್ರ ಕುರ್‌ಆನ್: 49: 13) ಎಂದು ಪವಿತ್ರ ಕುರ್‌ಆನ್ ನೆನಪಿಸುತ್ತದೆ.

ಈ ಮೂಲಭೂತವಾದ ವಾಸ್ತವಿಕತೆಯನ್ನು ಮರೆತವರೇ ಇತರರನ್ನು ಅಪಹಾಸ್ಯ ಮಾಡುತ್ತಾರೆ. ಅವರ ಪ್ರಕಾರ ಗೌರವದ ಮಾನದಂಡಗಳು ಬೇರೆಯೇ ಆಗಿರುತ್ತದೆ. ಆದುದರಿಂದ ಅವುಗಳಿಲ್ಲದ ಕಾರಣ ನೀಡಿ ಕೆಲವರು ಇತರರನ್ನು ನಿಕೃಷ್ಟರಂತೆ ಕಾಣುತ್ತಾರೆ, ಕೀಳಾಗಿ ಪರಿಗಣಿಸುತ್ತಾರೆ. ಆಯಿಶಾ(ರ) ಹೇಳಿದರು: ಒಮ್ಮೆ ನಾನು ಪ್ರವಾದಿಯವರ(ಸ) ಸನ್ನಿದಿಯಲ್ಲಿ ಒಬ್ಬ ವ್ಯಕ್ತಿಯ ಅಂಗಹೀನತೆಯನ್ನು ಅನುಕರಿಸಿ ತೋರಿಸಿದೆ. ಆಗ ಪ್ರವಾದಿ(ಸ) ಹೇಳಿದರು: مَا أُحِبُّ أَنِّي حَكَيْتُ إِنْسَانًا، وَإِنَّ لِي كَذَا وَكَذَا 'ಒಬ್ಬ ವ್ಯಕ್ತಿಯನ್ನು ಹೀಗೆ ಅನುಕರಿಸಿ ತೋರಿಸುವುದನ್ನು ನಾನು ಇಷ್ಟಪಡುವು ದಿಲ್ಲ, ನನಗೆ ಇದರಿಂದ ಎಷ್ಟು ಪ್ರಯೋಜನ ಸಿಗುವುದಾದರೂ ಸರಿ.'[1]

ಪ್ರತಿಯೊಬ್ಬರಿಗೂ ಅವರದೇ ಆದ ಗೌರವ ಮತ್ತು ಅಭಿಮಾನವಿರುತ್ತದೆ. ಅದರಲ್ಲಿ ಅನ್ಯಾಯವಾಗಿ ಹಸ್ತಕ್ಷೇಪ ನಡೆಸಲು, ನಾಶಪಡಿಸಲು ಯಾರಿಗೂ ಅಧಿಕಾರವಿಲ್ಲ. ಕಠಿಣ ಶತ್ರುಗಳಿಗೂ ಧರ್ಮವು ಈ ಹಕ್ಕನ್ನು ನೀಡಿದೆ. ಆದುದರಿಂದ ತಪ್ಪು ಕೆಲಸದ ಹೆಸರಿನಲ್ಲೂ ಯಾರನ್ನೂ ಅಪಹಾಸ್ಯ ಮಾಡಬಾರದೆಂದು ಪ್ರವಾದಿ(ಸ) ಆದೇಶಿಸಿರುವರು, ಅವರು ಹೀಗೆ ಹೇಳಿದರು: مَنْ عَيَّرَ أَخَاهُ بِذَنْبٍ لَمْ يَمُتْ حَتَّى يَعْمَلَهُ 'ತಪ್ಪೆಸಗಿದ ಕಾರಣಕ್ಕೆ ಒಬ್ಬ ಸಹೋದರನನ್ನು ಅಪಹಾಸ್ಯ ಮಾಡಿದರೆ ಆ ಅಪಹಾಸ್ಯ ಮಾಡಿದ ವ್ಯಕ್ತಿ ಅದೇ ತಪ್ಪನ್ನು ಪುನರಾವರ್ತಿಸುವವರೆಗೆ ಅಲ್ಲಾಹನು ಅವನಿಗೆ ಮರಣ ನೀಡುವುದಿಲ್ಲ.'[2]

ಅಪಹಾಸ್ಯದ ನಿಜವಾದ ಕಾರಣ ಗರ್ವ ಮತ್ತು ಅಹಂಕಾರವಾಗಿದೆ. ನಾನು ಇತರರಿಗಿಂತ ಉತ್ತಮನು ಎಂಬ ಅಹಂಕಾರದಿಂದಾಗಿ ಅಪಹಾಸ್ಯವು ಜನ್ಮ ತಾಳುತ್ತದೆ. ಅಹಂಕಾರ ಎಷ್ಟು ದೊಡ್ಡ ಕೆಡುಕು ಎಂಬುದನ್ನು ವಿವರಿಸಬೇಕಾದ ಅಗತ್ಯವಿಲ್ಲ; ಅಲ್ಲವೇ? ಪ್ರವಾದಿ(ಸ) ಹೇಳಿರುವರು: لَا يَدْخُلُ الْجَنَّةَ مَنْ كَانَ فِي قَلْبِهِ مِثْقَالُ ذَرَّةٍ مِنْ كِبْرٍ 'ಹೃದಯದಲ್ಲಿ ಅಣುತೂಕದಷ್ಟು ಅಹಂಕಾರವಿರುವವನು ಸ್ವರ್ಗವನ್ನು ಪ್ರವೇಶಿಸಲಾರನು.'[3]

ಇತರರನ್ನು ನಗಿಸಲಿಕ್ಕಾಗಿ, ಸಂತೋಷಪಡಿಸಲಿಕ್ಕಾಗಿ ಅನ್ಯರನ್ನು ಪರಿಹಾಸ್ಯ ಮಾಡುವವರಿದ್ದಾರೆ, ಕೇವಲ ತಮಾಷೆಗಾಗಿ ಮಾಡುವ ಈ ಕೆಲಸ ನಿಧಾನವಾಗಿ ಒಂದು ಅಭ್ಯಾಸವಾಗಿ ಬೆಳೆಯುತ್ತದೆ.

ಇಂತಹ ವ್ಯಕ್ತಿಗಳ ಬಗ್ಗೆ ಪ್ರವಾದಿ(ಸ) ಈ ರೀತಿ ಹೇಳಿದರು:

إِنَّ الْعَبْدَ لَيَقُولُ الْكَلِمَةَ، لَا يَقُولُهَا إِلَّا لِيُضْحِكَ بِهَا أَهْلَ الْمَجْلِسِ، يَهْوِي بِهَا فِي النَّارِ أَبْعَدَ مَا بَيْنَ السَّمَاءِ وَالأَرْضِ، وَإِنَّ الرَّجُلَ لَيَزِلُّ عَنْ لِسَانِهِ أَشَدَّ مِمَّا يَزِلُّ عَنْ قَدَمَيْهِ

'ದೇವನ ದಾಸನು ಒಂದು ಮಾತನ್ನು ಹೇಳುವನು. ಆ ಮಾತಿನ ಮೂಲಕ ಇತರರನ್ನು ನಗಿಸುವುದು ಮಾತ್ರ ಅವನ ಉದ್ದೇಶವಾಗಿತ್ತು. ಆದರೆ ಅವನ ಈ ಮಾತಿನ ಕಾರಣದಿಂದಾಗಿ ಆಕಾಶ ಭೂಮಿಗಳಷ್ಟು ವಿಶಾಲವಾದ ನರಕಕ್ಕೆ ಹೋಗ ಬೇಕಾಗಿ ಬರುವುದು. ನಿಶ್ಚಯವಾಗಿಯೂ ಮನುಷ್ಯನು ಕಾಲು ಜಾರಿ ಬೀಳುವು ದಕ್ಕಿಂತ ಶೀಘ್ರವಾಗಿ ನಾಲಗೆ ಜಾರಿ ಬೀಳುತ್ತಿರುವನು.'[4]

ಒಮ್ಮೆ ಪ್ರವಾದಿಪತ್ನಿ ಆಯಿಶಾ(ರ) ತನ್ನ ಸವತಿಯಾದ ಸಫಿಯ್ಯ(ರ)ರ ಬಗ್ಗೆ حَسْبُكَ مِنْ صَفِيَّةَ كَذَا وَكَذَا، إِنَّهَا قَصِيرَة 'ಸಫಿಯ್ಯರಲ್ಲಿ ಇಂತಿಂತಹ ದೈಹಿಕ ನ್ಯೂನತೆ ಗಳಿಲ್ಲವೆ?' ಎಂದು ಆಕ್ಷೇಪಿಸುವ ರೀತಿಯಲ್ಲಿ ಹೇಳಿದರು. ಆಗ ಪ್ರವಾದಿ(ಸ) ಈ ರೀತಿ ಹೇಳಿದರು: يَا عَائِشَةُ، لَقَدْ قُلْتِ كَلِمَةً لَوْ مُزِجَتْ بِمَاءِ الْبَحْرِ لَمَزَجَتْهُ! 'ಆಯಿಶಾ! ನೀನು ಹೇಳಿದ ಮಾತುಗಳನ್ನು ಒಂದು ಸಮುದ್ರದಲ್ಲಿ ಹಾಕಿದರೆ ಆ ನೀರು ಸಂಪೂರ್ಣ ಕಲುಷಿತವಾಗುತ್ತಿತ್ತು.'[5]

ಇಹಲೋಕದಲ್ಲಿ ಇತರರನ್ನು ಅಪಹಾಸ್ಯ ಮಾಡಿ ಜೀವಿಸುತ್ತಿರುವವರು ಪರಲೋಕ ಜೀವನದಲ್ಲಿ ಅತ್ಯಂತ ಕಠಿಣ ಅಪಹಾಸ್ಯಕ್ಕೆ ಒಳಗಾಗುವವರು ಎಂಬುದನ್ನು ಆರಂಭದಲ್ಲಿ ನೀಡಿದ ಪ್ರವಾದಿವಚನವು ಮನವರಿಕೆ ಮಾಡಿಕೊಡುತ್ತದೆ. ಅಪಹಾಸ್ಯ ಎಂಬುದು ಅಲ್ಲಾಹನ ದೃಷ್ಟಿಯಲ್ಲಿ ದ್ವೇಷಿಸಲ್ಪಟ್ಟ ಕೆಲಸ ಎಂಬುದು ಇದರಿಂದ ಮನವರಿಕೆ ಮಾಡಬಹುದು.

---

1. ಅಬೂದಾವೂದ್: 4875, ತಿರ್ಮಿದಿ: 2504, ಅಹ್ಮದ್: 6/189
2. ತಿರ್ಮಿದಿ: 2505
3. ಮುಸ್ಲಿಮ್: 91, ಅಬೂದಾವೂದ್: 4091, ತಿರ್ಮಿದಿ: 1999
4. ಬೈಹಕಿ- ಶುಹಬುಲ್ ಈಮಾನ್: 4832
5. ಅಬೂದಾವೂದ್: 4875, ತಿರ್ಮದಿ: 2504, ಅಹ್ಮದ್: 6/189

47. ನರಕಾಗ್ನಿಯೆಡೆಗೆ ಒಂದು ಇಣುಕು ನೋಟ

عَنْ ابْنِ عَبَّاسٍ رَضِيَ اللَّهُ عَنْهُ، قَالَ: خَطَبَ رَسُولُ اللَّهِ ﷺ خُطْبَةً، أَسْمَعَ الْعَوَاتِقَ فِي خُدُورِهِنَّ، فَقَالَ: يَا مَعْشَرَ مَنْ آمَنَ بِلِسَانِهِ وَلَمْ يَدْخُلِ الْإِيمَانُ قَلْبَهُ ! لاَ تُؤْذُوا الْمُؤْمِنِينَ، وَلاَ تَتْبَعُوا عَوْرَاتِهِمْ ، فَإِنَّهُ مَنْ يَتْبَعْ عَوْرَةَ أَخِيهِ يَتَّبِعُ اللَّهُ عَوْرَتَهُ، وَمَنْ يَتَّبِعِ اللَّهُ عَوْرَتَهُ يَفْضَحْهُ وَلَوْ فِي جَوْفِ بَيْتِهِ!

ಇಬ್ನು ಅಬ್ಬಾಸ್(ರ) ಹೇಳುತ್ತಾರೆ. ಪ್ರವಾದಿ ಮುಹಮ್ಮದ್(ಸ)ರು ಒಮ್ಮೆ ಒಂದು ಭಾಷಣ ಮಾಡಿದರು. ಮನೆಯೊಳಗಿರುವ ಸ್ತ್ರೀಯರು ಕೂಡ ಅದನ್ನು ಆಲಿಸುತ್ತಿದ್ದರು. (ಅಂದರೆ ಅಷ್ಟೊಂದು ಜೋರಾದ ಧ್ವನಿಯಲ್ಲಿ) ಪ್ರವಾದಿ(ಸ) ಹೇಳಿದರು, 'ಹೃದಯದೊಳಕ್ಕೆ ಈಮಾನ್ ಪ್ರವೇಶಿಸದ, ಕೇವಲ ನಾಲಗೆಯ ಮೂಲಕ ವಿಶ್ವಾಸವಿರಿಸಿದವರೇ! ನೀವು ಸತ್ಯವಿಶ್ವಾಸಿಗಳನ್ನು ಉಪದ್ರವಿಸಬಾರದು. ಅವರ ರಹಸ್ಯಗಳನ್ನು ಹುಡುಕಿಕೊಂಡು ನಡೆಯಬಾರದು. ಏಕೆಂದರೆ ಯಾರು ತನ್ನ ಸಹೋದರನ ರಹಸ್ಯಗಳನ್ನು ಬಹಿರಂಗಪಡಿಸುತ್ತಾನೋ, ಅಲ್ಲಾಹನು ಅವನ ರಹಸ್ಯಗಳನ್ನು ಬಹಿರಂಗಪಡಿಸುವನು. ಯಾರದಾದರೂ ರಹಸ್ಯವನ್ನು ಅಲ್ಲಾಹನು ಬೇಧಿಸಿದರೆ ಅವನನ್ನು ಅಲ್ಲಾಹನು ನಿಂದನೆಗೆ ಅರ್ಹಗೊಳಿಸುವನು. ಅವನು ತನ್ನ ಮನೆ ಯೊಳಗೆ ಅಡಗಿಕೊಂಡಿದ್ದರೂ ಸರಿ.'*

* ತಬ್ರಾನಿ – ಕಬೀರ್; 11444, ತಿರ್ಮಿದಿ: 2032, ಇಬ್ನು ಹಿಬ್ಬಾನ್: 5733, ಅಹ್ಮದ್: 4/420, ಅಬೂದಾವೂದ್: 4880, ಅಬೂ ಯಅ್‌ಲಾ: 1675 ಮುಂತಾದವರು ವರದಿ ಮಾಡಿದ್ದಾರೆ. ಹದೀಸ್ ಸಹೀಹ್ ಆಗಿದೆ ಎಂದು ಶೈಖ್ ನಾಸಿರುದ್ದೀನ್ ಅಲ್ಬಾನಿ ಸಾಕ್ಷಿ ಹೇಳುತ್ತಾರೆ. (ಸಹೀಹ್ ಜಾಮಿಉಸ್ಸಗೀರ್, ಭಾಗ: 2, ಪುಟ: 1322)

ಸಾಮೂಹಿಕ ಸಂಬಂಧಗಳನ್ನು ಶಿಥಿಲಗೊಳಿಸುವ, ಸಾಹೋದರ್ಯ ಸಂಬಂಧಗಳನ್ನು ದುರ್ಬಲಗೊಳಿಸುವ ದುರ್ಗುಣಗಳ ಪೈಕಿ ರಹಸ್ಯವನ್ನು ಹುಡುಕುವುದು ಬಹಳ ಪ್ರಧಾನವಾದುದಾಗಿದೆ. ಇತರರ ರಹಸ್ಯಗಳನ್ನು, ಕೊರತೆಗಳನ್ನು ಹುಡುಕುತ್ತಾ ನಡೆಯುವ ಆಸಕ್ತಿ ಇವರಿಗಿರುತ್ತದೆ. ಇಸ್ಲಾಮ್ ಈ ಪಾಪವನ್ನು ಕಠಿಣವಾಗಿ ನಿಷೇಧಿಸಿದೆ: 'ಸತ್ಯವಿಶ್ವಾಸಿಗಳೇ, ಹೆಚ್ಚಿನ ಗುಮಾನಿಗಳಿಂದ ದೂರವಿರಿ. ನಿಶ್ಚಯವಾಗಿಯೂ ಕೆಲವು ಗುಮಾನಿಗಳು ಪಾಪವಾಗಿವೆ. ದೋಷಾನ್ವೇಷಣೆ ಮಾಡದಿರಿ. **(ಅಲ್ ಹುಜುರಾತ್: 12)**

ಇತರರ ರಹಸ್ಯಗಳನ್ನು ಅರಿಯಲು ಪ್ರಯತ್ನಿಸುವವರು, ಇಬ್ಬರು ಪರಸ್ಪರ ಮಾತನಾಡುತ್ತಿರುವಾಗ ಅವರ ಮಾತಿಗೆ ಕಿವಿಗೊಡುವುದು, ಜನರ ಖಾಸಗಿ ಪತ್ರಗಳನ್ನು ಓದುವುದು, ಮರೆಯಲ್ಲಿ ನಿಂತು ಇತರರ ನ್ಯೂನತೆಗಳನ್ನು ಕಂಡು ಹಿಡಿಯಲು ಪ್ರಯತ್ನಿಸುವುದು ಹೀಗೆ ದೋಷಾನ್ವೇಷಣೆಯ ಹಲವಾರು ರೂಪ ಮತ್ತು ವಿಧಾನಗಳಿವೆ. ಇಸ್ಲಾಮ್ ಇವುಗಳನ್ನೆಲ್ಲ ನಿಷೇಧಿಸಿದೆ ಮತ್ತು ಗಂಭೀರವಾದ ಪಾಪಕೃತ್ಯವೆಂದು ಪರಿಗಣಿಸಿದೆ. ಪ್ರವಾದಿಯವರು(ಸ) ಹೇಳಿರುವರು:

مَنِ اسْتَمَعَ إِلَى حَدِيْثِ قَوْمٍ وَهُمْ لَهُ كَارِهُوْنَ صُبَّ فِيْ أُذُنَيْهِ الآنُكُ يَوْمَ الْقِيَامَةِ

'ಇತರರು ಆಲಿಸಬಾರದೆಂದು ಭಾವಿಸುವ ಜನರ ಮಾತುಗಳನ್ನು ಕದ್ದಾಲಿಸುವ ವ್ಯಕ್ತಿಗಳ ಕಿವಿಗೆ ಅಂತ್ಯದಿನದಂದು ಸೀಸವನ್ನು ಕರಗಿಸಿ ಸುರಿಯಲಾಗುವುದು.'[1]

ಅನುಮತಿ ಇಲ್ಲದೆ ಇತರರ ಖಾಸಗಿ ಪತ್ರಗಳನ್ನು ಓದುವವರ ಕುರಿತು ಪ್ರವಾದಿಯವರು(ಸ) ಹೀಗೆ ಹೇಳಿರುವರು: مَنْ نَظَرَ فِيْ كِتَابِ أَخِيْهِ بِغَيْرِ إِذْنِهِ فَإِنَّمَا يَنْظُرُ فِي النَّارِ 'ಅನುಮತಿ ಇಲ್ಲದೆ ತನ್ನ ಸಹೋದರನ ಖಾಸಗಿ ಪತ್ರಗಳೆಡೆಗೆ ಇಣುಕಿ ನೋಡುವುದು ವಾಸ್ತವದಲ್ಲಿ ನರಕದೆಡೆಗೆ ಇಣುಕಿ ನೊಡುವುದಕ್ಕೆ ಸಮಾನವಾಗಿದೆ.'[2]

ಇತರರ ಮನೆಯೊಳಗೆ ಅವರ ಅನುಮತಿ ಇಲ್ಲದೆ ಇಣುಕಿ ನೋಡುವುದರ ಬಗ್ಗೆಯೂ ಪ್ರವಾದಿಯವರು(ಸ) ವಿಮರ್ಶಿಸಿರುವರು. ಪ್ರವಾದಿ(ಸ) ಹೇಳಿದರು: مَنِ اطَّلَعَ فِيْ بَيْتِ قَوْمٍ بِغَيْرِ إِذْنِهِمْ فَقَدْ حَلَّ لَهُمْ أَنْ يَفْقَؤُا عَيْنَهُ 'ಅನುಮತಿಯಿಲ್ಲದೆ ಇತರರ ಮನೆಯೊಳಗೆ ಇಣುಕಿ ನೋಡುವ ವ್ಯಕ್ತಿಯ ಕಣ್ಣಿಗೆ ಏನನ್ನಾದರೂ ಎಸೆದು ಗಾಯಗೊಳಿಸಲು ಮನೆಯ ಯಜಮಾನನಿಗೆ ಅನುಮತಿ ಇದೆ.'[3]

ಅನಸ್(ರ) ಹೇಳಿರುವರು. ಒಮ್ಮೆ ಓರ್ವ ವ್ಯಕ್ತಿ ಪ್ರವಾದಿಯವರ(ಸ) ಮನೆಯೊಳಗೆ ಬಾಗಿಲಿನ ಸಂದಿಯ ಮೂಲಕ ನೋಡುತ್ತಿರುವುದು ಪ್ರವಾದಿಯವರ(ಸ)

ಗಮನಕ್ಕೆ ಬಂತು. ಆಗ ಅವರ ಕೈಯಲ್ಲೊಂದು ಬಾಣವಿತ್ತು. ಅದನ್ನು ಅವನ ಕಣ್ಣಿಗೆ ಚುಚ್ಚುವ ರೀತಿಯಲ್ಲಿ ಪ್ರವಾದಿ(ಸ) ಮುಂದೆ ಬಂದರು. ಆಗ ಆ ವ್ಯಕ್ತಿ ಅಲ್ಲಿಂದ ದೂರ ಸರಿದನು. ಪ್ರವಾದಿ(ಸ) ಹೇಳಿದರು: أَمَا إِنَّكَ لَوْ ثَبَتَّ عَلَيْكَ لَفَقَأْتُ عَيْنَكَ 'ನೀನು ಅಲ್ಲಿಯೇ ನಿಂತಿದ್ದರೆ ನಾನು ನಿನ್ನ ಕಣ್ಣುಗಳನ್ನು ಘಾಸಿಗೊಳಿಸಿ ಬಿಡುತ್ತಿದ್ದೆ.'[4]

ವ್ಯಕ್ತಿಗಳೊಂದಿಗೆ ಮಾತ್ರವಲ್ಲ, ಸರಕಾರದೊಂದಿಗೂ ಅನಗತ್ಯ ರಹಸ್ಯ ಅನ್ವೇಷಣೆ ಮಾಡಬಾರದೆಂದು ಇಸ್ಲಾಮ್ ಆದೇಶಿಸುತ್ತದೆ. ಅಡಗಿಸಲ್ಪಟ್ಟಿರುವ ನ್ಯೂನತೆಗಳನ್ನು ಕಂಡು ಹಿಡಿಯಲು ಅಧಿಕಾರಿಗಳಿಗೂ ಅಧಿಕಾರವಿಲ್ಲ. ಒಮ್ಮೆ ಒಬ್ಬ ವ್ಯಕ್ತಿಯನ್ನು ಜನರು ಅಬ್ದುಲ್ಲಾ ಬಿನ್ ಮಸ್‌ಊದ್(ರ)ರ ಮುಂದೆ ಹಾಜರುಪಡಿಸಿದರು. ಜನರು ಹೇಳಿದರು: هَذَا فُلَانٌ تَقْطُرُ لِحْيَتُهُ خَمْرًا 'ಇವನು ಮದ್ಯಪಾನಿ. ಇವನ ರೋಮ ರೋಮಗಳಿಂದಲೂ ಮದ್ಯವು ತೊಟ್ಟಿಕ್ಕುತ್ತಿದೆ.' ಆದರೆ ಇಬ್ನು ಮಸ್‌ಊದ್(ರ) ಅವನನ್ನು ಶಿಕ್ಷಿಸಲು ಬಯಸಲಿಲ್ಲ. ಅವರು ಹೇಳಿದರು:

إِنَّا قَدْ نُهِينَا عَنِ التَّجَسُّسِ وَلَكِنْ إِنْ يَظْهَرْ لَنَا شَيْءٌ نَأْخُذْ بِهِ

'ದೋಷಾನ್ವೇಷಣೆಯನ್ನು ಅಲ್ಲಾಹನು ನಿಷೇಧಿಸಿರುವನು. ಸ್ಪಷ್ಟವಾಗಿ ಅಪರಾಧ ಕೃತ್ಯವನ್ನು ಎಸಗುವುದನ್ನು ನೋಡಿದ್ದರೆ ಮಾತ್ರ ನಮಗೆ ಶಿಕ್ಷಿಸಲು ಅಧಿಕಾರವಿದೆ.'[5]

ಅಬ್ದುರ್ರಹ್ಮಾನ್ ಬಿನ್ ಔಫ್(ರ) ಹೇಳುತ್ತಾರೆ. ಒಂದು ರಾತ್ರಿ ನಾನು ಉಮರ್(ರ)ರೊಂದಿಗೆ ಮದೀನದ ಬೀದಿಯಲ್ಲಿ ಸಂಚರಿಸುತ್ತಿದ್ದೆ. ಆಗ ಒಂದು ಮನೆಯಲ್ಲಿ ದೀಪ ಉರಿಯುತ್ತಿತ್ತು. ನಾವು ಆ ಮನೆಯ ಬಳಿಗೆ ಹೋದೆವು. ಅದರ ಮುಂಬಾಗಿಲು ಮುಚ್ಚಲ್ಪಟ್ಟಿತ್ತು. ಒಳಗಿನಿಂದ ಮಾತು ಮತ್ತು ಬೊಬ್ಬೆ ಕೇಳಿಸುತ್ತಿತ್ತು. ಉಮರ್(ರ) ನನ್ನ ಕೈ ಹಿಡಿದರು. ಬಳಿಕ ಪ್ರಶ್ನಿಸಿದರು, 'ಇದು ಯಾರ ಮನೆಯೆಂದು ನಿನಗೆ ತಿಳಿದಿದೆಯೇ?' ನಾನು ಇಲ್ಲವೆಂದೆ. ಅವರೆಂದರು, 'ಇದು ರಬೀಅ ಬಿನ್ ಉಮಯ್ಯನ ಮನೆ. ಅವನು ಮದ್ಯಪಾನ ಮಾಡಿರುವನು. ಹೇಳು ನಾವೇನು ಮಾಡೋಣ?' ನಾನು ಹೇಳಿದೆ, 'ಅಮೀರುಲ್ ಮೂಮಿನೀನ್, ಅಲ್ಲಾಹನು ನಿಷೇಧಿಸಿರುವ ಒಂದು ಕೆಲಸವನ್ನು ನಾವೀಗ ಮಾಡುತ್ತಿದ್ದೇವೆ. ನೀವು ಇತರರ ದೋಷಾನ್ವೇಷಣೆ ಮಾಡಬಾರದು ಎಂದು ಅಲ್ಲಾಹನು ನಮ್ಮೊಂದಿಗೆ ಆದೇಶಿಸಿರುವನು.' ಇದನ್ನು ಕೇಳಿದ ಉಮರ್(ರ) ಹೆಚ್ಚಿನ ಅನ್ವೇಷಣೆಗೆ ಮುಂದಾಗದೆ ಅಲ್ಲಿಂದಲೇ ಮರಳಿದರು.[6]

ಇಮಾಮ್ ಗಝ್ಝಾಲಿ ಈ ರೀತಿ ವಿವರಿಸುತ್ತಾರೆ:

هَذَا يَدُلُّ عَلَى وُجُوبِ السَّتْرِ وَتَرْكِ التَّتَبُّعِ

'ಜನರ ಕೊರತೆಗಳನ್ನು ಅಡಗಿಸ ಬೇಕು, ಅವರ ತಪ್ಪುಗಳನ್ನು ಹುಡುಕುತ್ತಾ ನಡೆಯಬಾರದು ಎಂಬುದಕ್ಕೆ ಈ ಘಟನೆ ಸಾಕ್ಷಿಯಾಗಿದೆ.'[7]

ಆರಂಭದಲ್ಲಿ ನೀಡಿದ ಪ್ರವಾದಿವಚನವು ಕೂಡ ಇದೇ ವಿಷಯವನ್ನು ಇನ್ನೊಂದು ರೀತಿಯಲ್ಲಿ ಮನವರಿಕೆ ಮಾಡಿಸುತ್ತದೆ. ಮಸೀದಿಗೆ ಬಾರದೆ ಮನೆಯಲ್ಲೇ ಉಳಿದು ಕೊಂಡ ಮಹಿಳೆಯರು ಕೂಡ ಕಿವಿಗೊಟ್ಟು ಕೇಳುವಷ್ಟು ಗಮನಾರ್ಹವಾದ ವಿಷಯದ ಕುರಿತು ಪ್ರವಾದಿಯವರು(ಸ) ಮಾತನಾಡುತ್ತಿದ್ದರು. ಹೃದಯದಲ್ಲಿ ವಿಶ್ವಾಸವಿಲ್ಲದೆ ಕೇವಲ ನಾಲಗೆಯ ಮೂಲಕ ವಿಶ್ವಾಸವನ್ನು ಪ್ರಕಟಿಸುವ ಮುಸ್ಲಿಮರೇ ಎಂದು ಅಭಿಸಂಬೋಧಿಸಿರುವುದು ವಿಶ್ವಾಸಿಯ ವ್ಯಕ್ತಿತ್ವದಲ್ಲಿ ಕಡ್ಡಾಯವಾಗಿ ಇರಲೇ ಬೇಕಾದ ಸ್ವಭಾವ ವಿಶೇಷತೆಯ ಬಗ್ಗೆ ಬೆಟ್ಟು ಮಾಡುತ್ತದೆ. ಜನರ ದೋಷಾನ್ವೇಷಣೆ ಮಾಡುತ್ತಾ ತಿರುಗುವ ದುರ್ಗುಣವು ಈಮಾನಿನ ಅಥವಾ ದೇವನಿಷ್ಠೆಯ ಗುರುತುಗಳಲ್ಲ. ಈಮಾನಿನ ಬಗ್ಗೆ ವಾದಿಸುವವರಲ್ಲಿ ಯಾವ ಕಾರಣಕ್ಕೂ ಈ ದುರ್ಗುಣಗಳು ಇರಬಾರದು ಅಥವಾ ಒಂದು ವೇಳೆ ಆ ದುರ್ಗುಣ ಅವರಲ್ಲಿದ್ದರೆ ಅದರರ್ಥ ಅವರ ಈಮಾನ್ ಅವರ ಸ್ವಭಾವ ಸಂಸ್ಕರಣೆಯಲ್ಲಿ ಯಾವ ಪ್ರಭಾವವನ್ನೂ ಬೀರಿಲ್ಲ.

ಇತರರ ತಪ್ಪುಗಳನ್ನು ಹುಡುಕಿ ನಡೆಯುವವರಲ್ಲಿ ಹೆಚ್ಚಿನವರು ಸ್ವಯಂ ಶ್ರೇಷ್ಠರು ಅಥವಾ ಪರಿಶುದ್ಧರು ಆಗಿರುವುದಿಲ್ಲ. ಸಮಾಜದಲ್ಲಿ ಕೆಲವರ ಬಗ್ಗೆ ಅವರಿಗಿರುವ ವಿರೋಧ ಮತ್ತು ದ್ವೇಷವು ಅವರು ಇತರರ ತಪ್ಪುಗಳನ್ನು ಹುಡುಕಲು ಮತ್ತು ಆ ಬಗ್ಗೆ ಹೇಳಲು ಪ್ರೇರೇಪಿಸುತ್ತದೆ. ಸ್ವತಃ ಮಾಡುವ ತಪ್ಪುಗಳ ಬಗ್ಗೆ ಅರಿಯದೇ ಇತರರ ಹಿಂದೆ ಹದ್ದಿನ ದೃಷ್ಟಿ ಇಟ್ಟುಕೊಂಡು ನಡೆಯುವವರು ಈ ವಿಷಯವನ್ನು ಬಹಳ ಗೌರವದೊಂದಿಗೆ ನೆನಪಿನಲ್ಲಿಟ್ಟುಕೊಳ್ಳಬೇಕು.

---

1. ಬುಖಾರಿ: 7042.
2. ಅಬೂದಾವೂದ್: 1485.
3. ಬುಖಾರಿ: 6888, ಮುಸ್ಲಿಮ್: 2158, ಅಬೂದಾವೂದ್: 5172, ನಸಾಈ: 8/61.
4. ನಸಾಈ: 8/60, ಬುಖಾರಿ: 6900, ಮುಸ್ಲಿಮ್: 2157, ಅಬೂದಾವೂದ್: 5171.
5. ಅಬೂದಾವೂದ್: 4890.
6. ಕರಾಇತಿ ಮಕಾರಿಮುಲ್ ಅಖ್‌ಲಾಕ್: 398, ದೂರುಲ್ ಮನ್ಸೂರ್: 7/567
7. ಇಹ್ಯಾಉ ಉಲೂಮುದ್ದೀನ್: 2/200.

48. ತಪ್ಪು ಕಲ್ಪನೆಗಳ ಬಗ್ಗೆ ಜಾಗರೂಕರಾಗಿರಿ

عَنْ أُمِّ الْمُؤْمِنِيْنَ صَفِيَّةَ بِنْتِ حُيَيٍّ رَضِيَ اللّٰهُ عَنْهَا، قَالَتْ: كَانَ النَّبِيُّ ﷺ مُعْتَكِفًا، فَأَتَيْتُهُ أَزُوْرُهُ لَيْلًا، فَحَدَّثْتُهُ، ثُمَّ قُمْتُ لِأَنْقَلِبَ، فَقَامَ مَعِي لِيَقْلِبَنِي، فَمَرَّ رَجُلَانِ مِنَ الْأَنْصَارِ رَضِيَ اللّٰهُ عَنْهُمَا، فَلَمَّا رَأَيَا النَّبِيَّ ﷺ أَسْرَعَا، فَقَالَ: عَلٰى رِسْلِكُمَا، إِنَّهَا صَفِيَّةُ بِنْتُ حُيَيٍّ، فَقَالَا: سُبْحَانَ اللّٰهِ! يَا رَسُولَ اللّٰهِ فَقَالَ: إِنَّ الشَّيْطَانَ يَجْرِي مِنِ ابْنِ آدَمَ مَجْرَى الدَّمِ وَإِنِّي خَشِيْتُ أَنْ يَقْذِفَ فِي قُلُوْبِكُمْ شَرًّا - أَوْ قَالَ شَيْئًا

ಸತ್ಯವಿಶ್ವಾಸಿಗಳ ಮಾತೆ ಸಫಿಯ್ಯ ವರದಿ ಮಾಡಿರುತ್ತಾರೆ. ಪ್ರವಾದಿ(ಸ) ಮಸೀದಿಯಲ್ಲಿ ಇಅ್‌ತಿಕಾಫ್‌ಗೆ ಕೂತಿರುವ ಒಂದು ರಾತ್ರಿ ನಾನು ಅವರನ್ನು ಭೇಟಿಯಾದೆ. ಆ ಬಳಿಕ ನಾನು ಹಿಂತಿರುಗುವಾಗ ನನ್ನನ್ನು ಬಿಡಲು ನನ್ನ ಜೊತೆ ಬಂದರು. ಆಗ ಅನ್ಸಾರ್‌ಗಳಲ್ಲಿ ಸೇರಿದ ಇಬ್ಬರು ಆ ದಾರಿಯ ಮೂಲಕ ನಡೆದುಕೊಂಡು ಹೋಗುತ್ತಿದ್ದರು. ಪ್ರವಾದಿಯವರನ್ನು(ಸ) ಕಂಡಾಗ ಅವರು ತಮ್ಮ ನಡಿಗೆಯ ವೇಗವನ್ನು ಹೆಚ್ಚಿಸಿದರು. ಆಗ ಪ್ರವಾದಿಯವರು(ಸ) ಅವರೊಂದಿಗೆ, 'ಅಲ್ಲಿಯೇ ನಿಲ್ಲಿ. ನನ್ನ ಜೊತೆಗಿರುವುದು ಹುಯಯ್ಯ್‌ರ ಮಗಳು ಸಫಿಯ್ಯ' ಎಂದರು. ಆಗ ಅವರು ಹೇಳಿದರು, 'ಸುಬ್‌ಹಾನಲ್ಲಾಹ್! ಅಲ್ಲಾಹನ ಪ್ರವಾದಿಗಳೇ, (ತಮ್ಮ ಬಗ್ಗೆ ಒಳಿತನ್ನಲ್ಲದೆ ಇನ್ನೇನನ್ನೂ ಭಾವಿಸಲಾರೆವು.)' ಅವರು(ಸ) ಹೇಳಿದರು, 'ನಿಶ್ಚಯವಾಗಿಯೂ ಪಿಶಾಚಿಯು ಮನುಷ್ಯನಲ್ಲಿ ರಕ್ತವು

ಸಂಚರಿಸುವಂತೆ ಸಂಚರಿಸುತ್ತದೆ. ನನ್ನ ಬಗ್ಗೆ ನಿಮ್ಮ ಹೃದಯದಲ್ಲಿ ಏನಾದರೂ ಸಂಶಯ ಅವನು ಉಂಟು ಮಾಡಿರಬಹುದೇ? (ಏನಾದರೂ ಎಂದು ಇನ್ನೊಂದು ವರದಿಯಲ್ಲಿದೆ) ಎಂದು ನಾನು ಹೆದರಿದೆ.'*

ತಪ್ಪುಕಲ್ಪನೆ ಮತ್ತು ಗುಮಾನಿ ಎಂಬುದು ಪರಸ್ಪರ ಸಂಬಂಧಗಳ ಮಧ್ಯೆ ಒಡಕನ್ನುಂಟು ಮಾಡುವ ಮಾರಕ ರೋಗಗಳಾಗಿವೆ. ವ್ಯಕ್ತಿಗಳ ಮಧ್ಯೆ ಇರಬೇಕಾದ ಪ್ರೀತಿ ಮತ್ತು ಗೌರವವನ್ನು, ಸಾಹೋದರ್ಯವನ್ನು ಇದು ನಾಶಗೊಳಿಸಿಬಿಡುತ್ತದೆ. ಇತರರ ಬಗ್ಗೆ ಕೆಟ್ಟ ಅಭಿಪ್ರಾಯ ತಾಳಲು, ನಿರಾಧಾರ ಆರೋಪಗಳನ್ನು ಪ್ರಚಾರಪಡಿಸಲು ಇದು ಕಾರಣವಾಗುತ್ತದೆ. ಅಲ್ಲಾಹನು ನಮ್ಮನ್ನು ಈ ರೀತಿ ಎಚ್ಚರಿಸಿರುವನು, 'ಸತ್ಯ ವಿಶ್ವಾಸಿಗಳೇ, ಹೆಚ್ಚಿನ ಗುಮಾನಿಗಳಿಂದ ದೂರವಿರಿ. ನಿಶ್ಚಯವಾಗಿಯೂ ಕೆಲವು ಗುಮಾನಿಗಳು ಪಾಪವಾಗಿದೆ.' (ಅಲ್ ಹುಜುರಾತ್: 12) ಪ್ರವಾದಿ(ಸ) ಹೇಳಿರುವರು:

إِيَّاكُمْ وَالظَّنَّ، فَإِنَّ الظَّنَّ أَكْذَبُ الْحَدِيثِ

'ಗುಮಾನಿಯ ಬಗ್ಗೆ ನೀವು ಎಚ್ಚರಿಕೆಯಿಂದಿರಿ. ನಿಶ್ಚಯವಾಗಿಯೂ ಊಹೆ ಮಾಡಿ ಹೇಳುವ ವಿಷಯವು ಅತಿದೊಡ್ಡ ಸುಳ್ಳಾಗಿದೆ.'[1]

ಇತರರ ಬಗ್ಗೆ ಸದಾ ಒಳ್ಳೆಯ ಭಾವನೆಯನ್ನು ಇಟ್ಟುಕೊಳ್ಳಬೇಕೆಂದು ಇಸ್ಲಾಮ್ ಕಲಿಸುತ್ತದೆ. ಸ್ಪಷ್ಟವಾದ ಕಾರಣ ಮತ್ತು ಆಧಾರಗಳಿಲ್ಲದೆ ಯಾರ ಬಗ್ಗೆಯೂ ಕೆಟ್ಟ ಭಾವನೆ ಇಟ್ಟುಕೊಳ್ಳಬಾರದು.

ಪ್ರವಾದಿ(ಸ) ಹೇಳಿರುವರು: حُسْنُ الظَّنِّ مِنْ حُسْنِ الْعِبَادَةِ 'ಒಳಿತನ್ನು ಭಾವಿಸುವುದು ಶ್ರೇಷ್ಠವಾದ ಆರಾಧನೆಗಳಲ್ಲಿ ಸೇರಿದೆ.'[2] إِذَا ظَنَنْتُمْ فَلَا تُحَقِّقُوا 'ಯಾರ ಬಗ್ಗೆಯಾದರೂ ಕೆಟ್ಟ ಅಭಿಪ್ರಾಯ ಉಂಟಾಗುವ ಸಾಧ್ಯತೆಯಿದ್ದರೆ, ಆ ಬಳಿಕ ಅದರ ಕುರಿತು ಹೆಚ್ಚು ಅನ್ವೇಷಣೆ ಮಾಡಲು ಪ್ರಯತ್ನಿಸಬಾರದು.'[3]

ಇತರರ ಬಗ್ಗೆ ಕೆಟ್ಟ ಅಭಿಪ್ರಾಯಗಳನ್ನು, ಪೂರ್ವಗ್ರಹಪೀಡಿತ ನಿಲುವುಗಳನ್ನು ಹೊಂದಿರುವುದು ಧರ್ಮ ಮತ್ತು ವಿಶ್ವಾಸವನ್ನು ನಾಶಗೊಳಿಸಿಬಿಡುತ್ತದೆ. ಆಯಿಶಾ(ರ) ವರದಿ ಮಾಡಿರುವ ಪ್ರವಾದಿವಚನ ಹೀಗಿದೆ:

لَا يَزَالُ الْمَسْرُوقُ فِي تُهْمَةٍ مَنْ هُوَ بَرِيءٌ، حَتَّى يَكُونَ أَعْظَمُ جُرْمًا مِنَ السَّارِقِ

* ಇಮಾಮ್ ಬುಖಾರಿ: 2039, ಮುಸ್ಲಿಮ್: 2175, ಅಬೂದಾವೂದ್, ಇಬ್ನುಮಾಜ, ಅಹ್ಮದ್: 3/156 ಮುಂತಾದವರು ಉಲ್ಲೇಖಿಸಿರುವರು. ಸಹೀಹ್ ಮುಸ್ಲಿಮ್‌ನಲ್ಲಿರುವ ವಚನಗಳು.

‘ಒಬ್ಬ ವ್ಯಕ್ತಿಯಿಂದ ವಸ್ತುವೇನಾದರೂ ಕಳೆದು ಹೋದರೆ, ಅವನು ಇತರರ ಬಗ್ಗೆ ತಪ್ಪುಕಲ್ಪನೆಗಳನ್ನು ಇಟ್ಟುಕೊಳ್ಳಲಾರಂಭಿಸುವನು. ಹೀಗೆ ಕೊನೆಗೆ ಕದಿಯಲ್ಪಟ್ಟ ವ್ಯಕ್ತಿಯು ಕದ್ದ ವ್ಯಕ್ತಿಗಿಂತಲೂ ದೊಡ್ಡ ಅಪರಾಧಿಯಾಗಿ ಬಿಡುವನು.’[4]

ಜನರ ಬಗ್ಗೆ ಅಪನಂಬಿಕೆಯನ್ನು ಇಟ್ಟುಕೊಳ್ಳಬಾರದು ಎಂಬ ರೀತಿಯಲ್ಲಿಯೇ, ಅವರಿಗೆ ಅಪನಂಬಿಕೆ ಉಂಟಾಗುವ ರೀತಿಯಲ್ಲಿ ವರ್ತಿಸಬಾರದು ಎಂಬುದು ಕೂಡ ಬಹಳ ಮುಖ್ಯವಾಗಿದೆ ಜನರು ತಮ್ಮ ಬಗ್ಗೆ ಅಪನಂಬಿಕೆ ತಾಳುವಂತಹ ಪರಿಸರ ಮತ್ತು ವರ್ತನೆಗಳಿಂದ ದೂರ ಉಳಿಯುವುದು ಸತ್ಯವಿಶ್ವಾಸಿಗಳ ಕರ್ತವ್ಯವಾಗಿದೆ. ಆರಂಭದ ಪ್ರವಾದಿವಚನವು ಈ ವಿಷಯವನ್ನು ಒಳಗೊಂಡಿದೆ.

ಸೃಷ್ಟಿಗಳಲ್ಲಿಯೇ ಶ್ರೇಷ್ಠರಾದ ಪ್ರವಾದಿಯವರು(ಸ) ಅನ್ಯಸ್ತ್ರೀಯರ ಜೊತೆ ರಾತ್ರಿ ಒಬ್ಬಂಟಿಯಾಗಿ ಹೋಗುತ್ತಿದ್ದಾರೆ ಎಂಬುದನ್ನು ಪ್ರವಾದಿಯ ಕಠಿಣ ಶತ್ರುಗಳು ಕೂಡ ನಂಬಲು ಸಾಧ್ಯವಿರಲಿಲ್ಲ. ಹಾಗಿದ್ದರೂ ಇಬ್ಬರು ವ್ಯಕ್ತಿಗಳು ರಸ್ತೆಯಲ್ಲಿ ವೇಗವಾಗಿ ಹೋಗುವುದನ್ನು ಗಮನಿಸಿ, ‘ನಿಲ್ಲಿ, ಇದು ನನ್ನ ಪತ್ನಿ ಸಫಿಯ್ಯ’ ಎಂದು ಅವರಿಗೆ ಜೋರಾಗಿ ತಿಳಿಸುತ್ತಾರೆ. ಕೇಳುಗರಲ್ಲಿ ಇದು ಆಶ್ಚರ್ಯವನ್ನುಂಟು ಮಾಡುವುದು ಸ್ವಾಭಾವಿಕ. ಪ್ರವಾದಿಯವರು(ಸ) ಅವರೊಡನೆ ಹೇಳಿದರು, ‘ನಿಮ್ಮೊಳಗೆ ಪಿಶಾಚಿಯು ನನ್ನ ಬಗ್ಗೆ ಏನಾದರೂ ಸಂಶಯವನ್ನು ಉಂಟು ಮಾಡಬಹುದು ಎಂದು ನಾನು ಭಯ ಪಡುತ್ತೇನೆ.’ ಉಮರ್(ರ) ಹೇಳುತ್ತಾರೆ:

مَنْ أَقَامَ نَفْسَهُ مَقَامَ التُّهَمِ فَلَا يَلُومَنَّ مَنْ أَسَاءَ بِهِ الظَّنَّ

‘ಅಪನಂಬಿಕೆಗೀಡಾಗುವಂತಹ ವಾತಾವರಣದಲ್ಲಿ ಇರುವ ವ್ಯಕ್ತಿಯ ಬಗ್ಗೆ ಯಾರಾದರೂ ತಪ್ಪಾಗಿ ನಿರ್ಧಾರ ತಾಳಿದರೆ ಆ ಬಗ್ಗೆ ಅವರನ್ನು ಆಕ್ಷೇಪಿಸಬಾರದು.’[5]

ಒಮ್ಮೆ ಓರ್ವ ವ್ಯಕ್ತಿ ಸ್ತ್ರೀಯೊಬ್ಬಳ ಜೊತೆ ದಾರಿಯಲ್ಲಿ ಚಕ್ಕಂದವಾಡುತ್ತಿದ್ದನು. ಇದನ್ನು ಗಮನಿಸಿದ ಉಮರ್(ರ) ಆ ವ್ಯಕ್ತಿಯನ್ನು ಹೊಡೆಯಲು ಮುಂದಾದರು. ಆಗ ವ್ಯಕ್ತಿಯು: يَا أَمِيرَ الْمُؤْمِنِينَ، إِنَّهَا امْرَأَتِي ‘ಅಮೀರುಲ್ ಮೂಮಿನೀನ್, ಇದು ನನ್ನ ಪತ್ನಿ’ ಎಂದನು. ಆಗ ಉಮರ್(ರ) ಕೇಳಿದರು: هَلَّا حَيْثُ لَا يَرَاكَ أَحَدٌ مِنَ النَّاسِ ‘ಹಾಗಾದರೆ ನೀನು ಈ ಕೆಲಸವನ್ನು ಯಾರಿಗೂ ಕಾಣದ ಸ್ಥಳದಲ್ಲಿ ಹೋಗಿ ಮಾಡ ಬಾರದೇ?’[6]

ತನ್ನ ಬಗ್ಗೆ ಅಪನಂಬಿಕೆ ತಾಳುವಂತಹ ಸಂದರ್ಭಗಳನ್ನು ಸೃಷ್ಟಿಸಬಾರದು ಎಂಬುದನ್ನು ಈ ಘಟನೆಯು ನಮಗೆ ಮನವರಿಕೆ ಮಾಡಿಸುತ್ತದೆ.

ಇಮಾಮ್ ಗಝ್ಝಾಲಿಯವರು ಈ ರೀತಿ ಸ್ಪಷ್ಟೀಕರಣ ನೀಡಿದ್ದಾರೆ:

وَمِنْ حُقُوقِ الْمُسْلِمِ: أَنْ يَتَّقِيَ مَوَاضِعَ التُّهَمِ صِيَانَةً لِقُلُوبِ النَّاسِ عَنْ سُوءِ الظَّنِّ، وَلِأَلْسِنَتِهِمْ عَنِ الْغِيبَةِ، فَإِنَّهُمْ إِذَا عَصَوُا اللهَ بِذِكْرِهِ، وَكَانَ هُوَ السَّبَبُ فِيهِ كَانَ شَرِيكًا.

'ಇತರರು ತನ್ನ ಬಗ್ಗೆ ಅಪನಂಬಿಕೆ ಹೊಂದುವಂತೆ ವರ್ತಿಸದೆ ಇರುವುದು ಮತ್ತು ಜನರು ತಮ್ಮ ಬಗ್ಗೆ ಕೆಟ್ಟ ರೀತಿಯಲ್ಲಿ ಮಾತನಾಡುವಂತೆ ವರ್ತಿಸದೆ ಇರುವುದು ಒಬ್ಬ ಮುಸ್ಲಿಮನ ಕರ್ತವ್ಯವಾಗಿದೆ. ಈ ಕಾರಣದಿಂದಾಗಿ ಅಪನಂಬಿಕೆ ಸೃಷ್ಟಿಯಾಗುವಂತಹ ಸಂದರ್ಭಗಳಿಂದ ದೂರ ಉಳಿಯುವುದಕ್ಕೆ ಪ್ರಯತ್ನಿಸಬೇಕು. ಜನರು ವ್ಯಕ್ತಿಯ ಬಗ್ಗೆ ಕೆಟ್ಟ ಅಭಿಪ್ರಾಯ ತಾಳಲು ಅವನ ವರ್ತನೆಗಳು ಕಾರಣವಾಗಿಬಿಟ್ಟರೆ, ಅವರು ಮಾಡುವ ಕೆಡುಕಿನಲ್ಲಿ ಆ ವ್ಯಕ್ತಿಯೂ ಸಮಾನ ಪಾಲುದಾರನೆನಿಸಿಕೊಳ್ಳುವನು.'[7]

---

1. ಬುಖಾರಿ: 6064, ಮುಸ್ಲಿಮ್: 2563, ಅಬೂದಾವೂದ್: 4917, ತಿರ್ಮಿದಿ: 1988.
2. ಅಬೂದಾವೂದ್: 4993, ಇಬ್ನು ಹಿಬ್ಬಾನ್: 632.
3. ಇಬ್ನುಮಾಜ.
4. ಬೈಹಕಿ – ಶುಅಬುಲ್ ಈಮಾನ್: 6707.
5. ಖರಾಯಿತಿ – ಮಕಾರಿಮುಲ್ ಅಖ್‌ಲಾಕ್.
6. ದಹಬಿ, ಮನಾಕೀಬು ಉಮರ್.
7. ಇಹ್ಯಾಉ ಉಲೂಮುದ್ದೀನ್, ಭಾಗ: 2, ಪುಟ: 201.

49. ಒಳಿತನ್ನು ಕಾಣುವ ಕಣ್ಣುಗಳು

نْ عُمَرَ بْنِ الخَطَّابِ رَضِيَ اللّٰهُ عَنْهُ: أَنَّ رَجُلًا كَانَ عَلَى عَهْدِ النَّبِيِّ ﷺ، كَانَ
سْمُهُ عَبْدُ اللّٰهِ، وَكَانَ يُضْحِكُ رَسُولَ اللّٰهِ، وَكَانَ النَّبِيُّ قَدْ جَلَدَهُ فِي الشَّرَابِ،
أُتِيَ بِهِ يَوْمًا، فَأَمَرَ بِهِ فَجُلِدَ، فَقَالَ رَجُلٌ مِنَ الْقَوْمِ: اَللّٰهُمَّ الْعَنْهُ! مَا أَكْثَرَ
مَا يُؤْتَى بِهِ! فَقَالَ النَّبِيُّ ﷺ: لَا تَلْعَنُوهُ، فَوَاللّٰهِ مَا عَلِمْتُ أَنَّهُ يُحِبُّ اللّٰهَ وَرَسُولَهُ

ಉಮರ್ ಬಿನ್ ಖತ್ತಾಬ್(ರ) ವರದಿ ಮಾಡಿರುತ್ತಾರೆ. ಪ್ರವಾದಿ ಮುಹಮ್ಮದ್(ಸ)ರ ಕಾಲದಲ್ಲಿ ಅಬ್ದುಲ್ಲಾ ಎಂಬ ಹೆಸರಿನ ಒಬ್ಬ ವ್ಯಕ್ತಿಯಿದ್ದ. ತಮಾಷೆ ಮಾತುಗಳನ್ನಾಡಿ ಅವನು ಪ್ರವಾದಿಯವರನ್ನು(ಸ) ನಗಿಸುತ್ತಿದ್ದ. ಮದ್ಯಪಾನ ಮಾಡಿದ ಕಾರಣಕ್ಕೆ ಒಮ್ಮೆ ಪ್ರವಾದಿಯವರು(ಸ) ಅವನನ್ನು ಹೊಡೆದಿದ್ದರು. ಒಮ್ಮೆ ಆ ವ್ಯಕ್ತಿಯನ್ನು ಕರೆತಂದು ಶಿಕ್ಷೆ ಜಾರಿಗೊಳಿಸಿದಾಗ ಒಬ್ಬರು ಹೀಗೆಂದರು, 'ಅಲ್ಲಾಹನೇ, ಇವನನ್ನು ಶಪಿಸಿಬಿಡು. ಎಷ್ಟು ಬಾರಿ ಈ ಕೆಡುಕಿನ ಕಾರಣಕ್ಕಾಗಿ ಇವನು ಶಿಕ್ಷಿಸಲ್ಪಡುತ್ತಿದ್ದಾನೆ.' ಇದನ್ನು ಆಲಿಸಿದ ಪ್ರವಾದಿ(ಸ) ಹೇಳಿದರು, 'ನೀವು ಅವನಿಗೆ ಶಾಪ ಹಾಕಬಾರದು. ಅಲ್ಲಾಹ ನಾಣೆ, ಅಲ್ಲಾಹನನ್ನು ಮತ್ತು ಪ್ರವಾದಿಯನ್ನು ಈ ವ್ಯಕ್ತಿ ಎಷ್ಟು ಪ್ರೀತಿಸುತ್ತಿದ್ದಾನೆ ಎಂಬುದು ನನಗೆ ತಿಳಿದಿದೆ.'*

ಸಾಮೂಹಿಕ ಜೀವನದಲ್ಲಿ ವ್ಯಕ್ತಿಗಳು ಪರಸ್ಪರ ಬೆಳೆಸಿಕೊಳ್ಳಬೇಕಾದ ಶಿಷ್ಟಾಚಾರಗಳ ಬಗ್ಗೆ ಈ ಪ್ರವಾದಿವಚನವು ಬೆಳಕು ಚೆಲ್ಲುತ್ತದೆ. ಎಲ್ಲ ಮನುಷ್ಯರಲ್ಲಿ ಒಳಿತು ಕೆಡುಕುಗಳಿವೆ. ಕೆಡುಕಿನ ಬಗ್ಗೆ ವಿರೋಧ ಮತ್ತು ಸದ್ಗುಣಗಳ ಬಗ್ಗೆ ಆಸಕ್ತಿ ಎಲ್ಲರಲ್ಲೂ

* ಇಮಾಮ್ ಬುಖಾರಿ: 6780 ಉದ್ಧರಿಸಿರುವ ಪ್ರಬಲ ಹದೀಸ್.

ಜನ್ಮತಃ ಇರುತ್ತದೆ. ವ್ಯಕ್ತಿಯ ಸಹವಾಸಗಳಿಗೆ ಅನುಗುಣವಾಗಿ ಈ ಪೈಕಿ ಒಂದು ಗುಣವು ಇನ್ನೊಂದಕ್ಕಿಂತ ಮಿಗಿಲಾಗಿಬಿಡುತ್ತದೆ. ಮನಸ್ಸಿನಲ್ಲಿ ಅದುವೇ ದೃಢವಾಗಿ ನೆಲೆಗೊಳ್ಳುತ್ತದೆ. ಕೇವಲ ಒಳಿತನ್ನು ಮಾತ್ರ ಮಾಡುವವರಿರುವುದಿಲ್ಲ. ಅದೇ ರೀತಿ ಕೇವಲ ಕೆಡುಕನ್ನು ಮಾತ್ರ ಮಾಡುವವರಿರುವುದಿಲ್ಲ. ಪ್ರವಾದಿ(ಸ) ಹೇಳಿರುವರು:

كُلُّ ابْنِ آدَمَ خَطَّاءٌ، وَخَيْرُ الْخَطَّائِيْنَ التَّوَّابُوْنَ

'ಆದಮನ ಎಲ್ಲ ಮಕ್ಕಳೂ ತಪ್ಪೆಸಗುವವರಾಗಿದ್ದಾರೆ. ಅವರ ಪೈಕಿ ಅತಿಶ್ರೇಷ್ಠ ವ್ಯಕ್ತಿಗಳು ತಪ್ಪು ಸಂಭವಿಸಿದರೆ ಪಶ್ಚಾತ್ತಾಪ ಪಟ್ಟು ಮರಳುವವರಾಗಿರುತ್ತಾರೆ.'[1]

ಕೆಡುಕನ್ನು ಮಾಡುವವರ ಬಗ್ಗೆಯೂ ಸಮಾಜಕ್ಕೆ ಕೆಲವು ಜವಾಬ್ದಾರಿಗಳಿವೆ. ಕೆಡುಕುಗಳು ಸಂಭವಿಸುವಂತಹ ವಾತಾವರಣವನ್ನು ಇಲ್ಲವಾಗಿಸುವುದು ಅವುಗಳ ಪೈಕಿ ಒಂದನೆಯದಾಗಿದೆ. ಕೆಡುಕಿನಲ್ಲಿ ಮುಳುಗಿರುವ ವ್ಯಕ್ತಿಯ ಕೈ ಹಿಡಿದು ಅದರಿಂದ ಹೊರ ಬರಲು ಸಹಾಯ ಮಾಡುವ ಹೊಣೆಗಾರಿಕೆಯೂ ಜನರಿಗಿದೆ. ಪ್ರವಾದಿ(ಸ) ಹೇಳಿರುವರು: أُنْصُرْ أَخَاكَ ظَالِمًا أَوْ مَظْلُومًا ನಿನ್ನ ಸಹೋದರನು ಮರ್ದಿತನಾಗಿದ್ದರೂ ಮರ್ದಕನಾಗಿದ್ದರೂ ನೀನು ಅವನಿಗೆ ಸಹಾಯ ಮಾಡಬೇಕು. ಜನರು ಪ್ರಶ್ನಿಸಿದರು: يَا رَسُوْلَ اللهِ، هٰذَا نَنْصُرُهُ مَظْلُوْمًا، فَكَيْفَ نَنْصُرُهُ ظَالِمًا ؟ ಮರ್ದಿತನಿಗೆ ನಾವು ಸಹಾಯ ಮಾಡುತ್ತೇವೆ. ಆದರೆ ಮರ್ದಕನಿಗೆ ಸಹಾಯ ಮಾಡುವುದು ಹೇಗೆ? ಪ್ರವಾದಿ(ಸ) ಹೇಳಿದರು: تَأْخُذُ فَوْقَ يَدِهِ ಅಕ್ರಮಿಯು ಆಕ್ರಮವೆಸಗುವಾಗ ಅವನ ಕೈ ಹಿಡಿದು ಅವನನ್ನು ಆ ಕೆಲಸದಿಂದ ತಡೆಯುವ ಮೂಲಕ.[2]

ಕೆಡುಕನ್ನು ಮಾಡುವವರನ್ನು ದ್ವೇಷಿಸುವುದಾಗಲಿ, ಶಪಿಸುವುದಾಗಲಿ ಸಲ್ಲದು. ಅವರು ನಾವು ಪ್ರತ್ಯೇಕ ಗಮನ ಮತ್ತು ಕಾಳಜಿಯನ್ನು ನೀಡಬೇಕಾದ ಜನರಾದ್ದಾರೆ. ಆದುದರಿಂದ ಶತ್ರುಗಳಿಗೆ ಶಾಪ ಹಾಕಲು ಪ್ರವಾದಿಯವರೊಂದಿಗೆ(ಸ) ವಿನಂತಿಸಿದಾಗ ಅವರು ಹೀಗೆಂದರು: إِنِّي لَمْ أُبْعَثْ لَعَّانًا، وَإِنَّمَا بُعِثْتُ رَحْمَةً! 'ಜನರನ್ನು ಶಪಿಸಲಿಕ್ಕಾಗಿ ನನ್ನನ್ನು ನೇಮಿಸಲಾಗಿಲ್ಲ. ಅವರಿಗೆ ಕರುಣೆಯಾಗಿ ನನ್ನನ್ನು ನಿಯೋಗಿಸಲಾಗಿದೆ.'[3]

ಯಝೀದ್ ಬಿನ್ ಅಸಮ್ ವರದಿ ಮಾಡಿರುತ್ತಾರೆ. ಸಿರಿಯದ ಓರ್ವ ವ್ಯಕ್ತಿ ಪ್ರತಿದಿನ ಉಮರ್(ರ)ರನ್ನು ಭೇಟಿಯಾಗುತ್ತಿದ್ದನು. ಕೆಲವು ದಿನ ಅವನು ಕಾಣಿಸದಿದ್ದಾಗ ಉಮರ್(ರ) ಅವನ ಬಗ್ಗೆ ಪ್ರಶ್ನಿಸಿದರು. ಅವನು ಮದ್ಯಪಾನಿಯಾಗಿ ಮಾರ್ಪಟ್ಟಿರುವ ಕಾರಣ ತಮ್ಮನ್ನು ಭೇಟಿಯಾಗಲು ಬರುತ್ತಿಲ್ಲವೆಂದು ಜನರು ತಿಳಿಸಿದರು. ಉಮರ್(ರ) ಆ ವ್ಯಕ್ತಿಗೆ ಈ ರೀತಿ ಪತ್ರ ಬರೆದರು: ಉಮರ್ ಬಿನ್

ಖತ್ತಾಬ್‌ರಿಂದ, ನಿಮ್ಮ ಮೇಲೆ ಅಲ್ಲಾಹನ ರಕ್ಷಣೆ ಮತ್ತು ಶಾಂತಿಯಿರಲಿ. ಅಲ್ಲಾಹನಿಗೆ ಸರ್ವಸ್ತುತಿ. ಅವನು ಪಾಪಗಳನ್ನು ಕ್ಷಮಿಸುವವನು ಮತ್ತು ಪಶ್ಚಾತ್ತಾಪ ಸ್ವೀಕರಿಸುವವನಾಗಿರುತ್ತಾನೆ. ಕಠಿಣವಾಗಿ ಶಿಕ್ಷಿಸುವವನೂ ಮಹತ್ತಾದ ಅನುಗ್ರಹಗಳನ್ನು ನೀಡುವವನೂ ಆಗಿದ್ದಾನೆ. ಅವನಲ್ಲದೆ ಅನ್ಯ ಆರಾಧ್ಯರಿಲ್ಲ. ಎಲ್ಲರಿಗೂ ಅವನ ಬಳಿಗೇ ಮರಳಿ ಹೋಗಬೇಕಾಗಿದೆ. ಆ ವ್ಯಕ್ತಿ ಪ್ರಜ್ಞಾವಸ್ಥೆಯಲ್ಲಿರುವಾಗ ಈ ಪತ್ರ ನೀಡಬೇಕು ಎಂದು ಉಮರ್(ರ) ಆದೇಶಿಸಿದರು. ತಮ್ಮ ಸಂಗಾತಿಗಳೊಂದಿಗೆ ಹೀಗೆಂದರು, 'ನಿಮ್ಮ ಸಹೋದರನಿಗಾಗಿ ಅವನ ಪಶ್ಚಾತ್ತಾಪ ಸ್ವೀಕರಿಸಲ್ಪಡಲು ಅಲ್ಲಾಹನೊಂದಿಗೆ ಪ್ರಾರ್ಥಿಸಿರಿ.' ಉಮರ್(ರ)ರ ಪತ್ರ ಆ ವ್ಯಕ್ತಿ ಪುನಃ ಪುನಃ ಓದುತ್ತಿದ್ದರು. ಅಲ್ಲಾಹನ ಶಿಕ್ಷೆಯ ಬಗ್ಗೆ ಅವರು ನನ್ನನ್ನು ಎಚ್ಚರಿಸಿರುವರು ಹಾಗೂ ಪಾಪವನ್ನು ಮನ್ನಿಸುವವನೆಂಬ ಶುಭವಾರ್ತೆಯನ್ನೂ ನೀಡಿರುವರು ಎನ್ನುತ್ತಾ ಅತ್ತರು. ಸಂಭವಿಸಿದುದರ ಬಗ್ಗೆ ಸಂಕಟಪಟ್ಟರು ಮತ್ತು ಮದ್ಯಪಾನವನ್ನು ತ್ಯಜಿಸಿದರು. ಆ ವ್ಯಕ್ತಿ ಪಶ್ಚಾತ್ತಾಪ ಪಟ್ಟ ವಿಷಯ ತಿಳಿಸಿದ ಉಮರ್(ರ) ಹೀಗೆಂದರು, 'ನೀವು ಹೀಗೆಯೇ ಮಾಡಬೇಕು. ನಿಮ್ಮ ಪೈಕಿ ಒರ್ವ ಸಹೋದರನಿಂದ ತಪ್ಪು ಸಂಭವಿಸಿದರೆ ಅಥವಾ ದಾರಿಗೆಟ್ಟರೆ ಅವನನ್ನು ತಿದ್ದಿ ಒಳಿತಿನ ಮಾರ್ಗದಲ್ಲಿ ದೃಢವಾಗಿ ನಿಲ್ಲುವಂತೆ ಮಾಡಿರಿ. ಸಹೋದರನ ಪಶ್ಚಾತ್ತಾಪ ಸ್ವೀಕರಿಸಲ್ಪಡಲು ಅಲ್ಲಾಹನೊಂದಿಗೆ ಪ್ರಾರ್ಥಿಸಿರಿ. ಎಂದಿಗೂ ನೀವು ಆ ಸಹೋದರನನ್ನು ಶೈತಾನನಿಗೆ ಒಪ್ಪಿಸಲು ಸಹಾಯಕರಾಗಿ ವರ್ತಿಸಕೂಡದು.'[4]

ಕೆಡುಕಿನಲ್ಲಿ ಬಿದ್ದು ಹೋದ ವ್ಯಕ್ತಿಯನ್ನು ಯಾವ ರೀತಿಯಲ್ಲಿ ಕೈ ಹಿಡಿದು ಅದರಿಂದ ಪಾರು ಮಾಡಬಹುದೆಂಬುದನ್ನು ಈ ಘಟನೆ ಮನವರಿಕೆ ಮಾಡಿಸುತ್ತದೆ. ಪ್ರವಾದಿ(ಸ) ಹೇಳಿರುವರು:

أَرْبَعٌ مِنْ حُقُوقِ الْمُسْلِمِينَ عَلَيْكَ: أَنْ تُعِينَ مُحْسِنَهُمْ، وَأَنْ تَسْتَغْفِرَ لِمُذْنِبِهِمْ، وَأَنْ تَدْعُوَ لِمُدْبِرِهِمْ، وَأَنْ تُحِبَّ تَائِبَهُمْ

'ಮುಸ್ಲಿಮನಿಗೆ ನಾಲ್ಕು ವಿಷಯಗಳು ನಿನ್ನಿಂದ ಲಭ್ಯವಾಗಬೇಕು. ಅವನಲ್ಲಿ ಏನಾದರೂ ಒಳಿತು ಕಂಡರೆ ಅವನಿಗೆ ಸಹಾಯ ಮಾಡುವುದು. ಕೆಡುಕು ಮಾಡುತ್ತಿರುವ ವರಿಗಾಗಿ ಪಾಪವಿಮೋಚನೆಯ ಪ್ರಾರ್ಥನೆ ಮಾಡುವುದು. ಹಿಂದಿರುಗುವವರಿಗಾಗಿ ಪ್ರಾರ್ಥಿಸುವುದು. ಪಶ್ಚಾತ್ತಾಪಪಟ್ಟು ಮರಳುವವರನ್ನು ಪ್ರೀತಿಸುವುದು.'[5]

ಜನರಲ್ಲಿ ಕೇವಲ ಕೆಡುಕುಗಳನ್ನು ಮಾತ್ರ ಕಾಣುವವರು ಮತ್ತು ಒಳಿತನ್ನು ಕಡೆಗಣಿಸುವವರಿಗೆ ಈ ಪ್ರವಾದಿವಚನದಲ್ಲಿ ಪಾಠಗಳಿವೆ. ಎಲ್ಲ ಮನುಷ್ಯರಲ್ಲಿಯೂ

ಸದ್ಗುಣ ಮತ್ತು ದುರ್ಗುಣಗಳಿರುತ್ತವೆ. ಸಮೂಹದಲ್ಲಿ ಸಂಸ್ಕರಣೆಯಾಗಬೇಕೆಂದು ಬಯಸುವವರು ಜನರಲ್ಲಿರುವ ದುರ್ಗುಣಗಳ ಬದಲಿಗೆ ಒಳಿತುಗಳನ್ನು ಕಾಣಬೇಕು. ಜನರಲ್ಲಿರುವ ಒಳಿತುಗಳನ್ನು ಗುರುತಿಸಲು ಮತ್ತು ಅದನ್ನು ಇನ್ನಷ್ಟು ಹೆಚ್ಚಿಸಲು ಪ್ರಯತ್ನಿಸುವ ಬಗ್ಗೆ ಸಂದೇಶಪ್ರಚಾರಕ ಗಮನ ನೀಡಬೇಕು. ಹದೀಸಿನಲ್ಲಿ ಪ್ರಸ್ತಾಪಿಸಲ್ಪಟ್ಟ ಮದ್ಯಪಾನಿಯು ಪ್ರವಾದಿಯವರನ್ನು ಬಹಳ ಪ್ರೀತಿಸುತ್ತಿದ್ದನು. ಪ್ರವಾದಿಯವರಿಗಾಗಿ ಸಿಹಿತಿಂಡಿಗಳನ್ನು ಕೂಡ ತಂದು ಕೊಡುತ್ತಿದ್ದನು ಎಂಬುದಾಗಿ ಹದೀಸಿನಲ್ಲಿ ಬಂದಿದೆ. ವಿರಾಮದ ವೇಳೆಯಲ್ಲಿ ಪ್ರವಾದಿಯವರ(ಸ) ಬಳಿ ಬಂದು ತಮಾಷೆಯ ಮಾತುಗಳನ್ನಾಡಿ ನಗಿಸುತ್ತಿದ್ದುದೂ ಪ್ರವಾದಿಯವರೊಂದಿಗೆ ಆ ವ್ಯಕ್ತಿಗಿದ್ದ ಪ್ರೀತಿಯ ಕಾರಣದಿಂದಾಗಿತ್ತು. ಮದ್ಯಪಾನಿಯಾಗಿದ್ದರೂ ಆ ವ್ಯಕ್ತಿಯಲ್ಲಿದ್ದ ಒಳ್ಳೆಯ ಗುಣಗಳನ್ನು ಅರಿತು ಅವುಗಳನ್ನು ಗೌರವಿಸುವ ಕೆಲಸವನ್ನು ಪ್ರವಾದಿಯವರು(ಸ) ಮಾಡಿದರು. ಅದರ ಮೂಲಕ ಆ ವ್ಯಕ್ತಿಯಲ್ಲಿದ್ದ ಎಲ್ಲ ದುರಭ್ಯಾಸಗಳನ್ನು ಚಿಕಿತ್ಸೆ ನೀಡಿ ಗುಣಪಡಿಸಲು ಸಾಧ್ಯ ಎಂಬುದನ್ನು ಪ್ರವಾದಿಯವರು(ಸ) ಕಲಿಸಿರುವರು. ಕೆಡುಕುಗಳನ್ನು ಮಾಡುವವರಲ್ಲಿರುವ ಒಳಿತುಗಳನ್ನು ಅಂಗೀಕರಿಸಲು ಇತರರು ಸಿದ್ಧರಾದಾಗ ಅದು ಆ ವ್ಯಕ್ತಿಗೆ ಕೆಡುಕಿನಿಂದ ದೂರ ಉಳಿಯಲು ಬಹಳ ಪ್ರಬಲವಾದ ಪ್ರೇರಕ ಶಕ್ತಿಯಾಗಿ ಮಾರ್ಪಡುವುದರಲ್ಲಿ ಸಂಶಯವಿಲ್ಲ.

---

1. ಅಹ್ಮದ್: 3/198, ತಿರ್ಮಿದಿ: 2901, ಇಬ್ನುಮಾಜ: 4251, ಹಾಕಿಮ್: 4/244.
2. ಬುಖಾರಿ: 2444.
3. ಮುಸ್ಲಿಮ್: 2599.
4. ಇಬ್ನು ಕಸೀರ್, ಭಾಗ: 4, ಪುಟ: 70.
5. ದೆಹ್ಲವಿ - ಮುಸ್ನದ್.

50. ಮಣ್ಣು ಎಸೆಯಬೇಕಾದ ದುರ್ಗುಣ

عَنْ هُمَامِ بْنِ الْحَارِثِ رَضِيَ اللَّهُ عَنْهُ: أَنَّ رَجُلاً جَعَلَ يَمْدَحُ عُثْمَانَ، فَعَمِدَ الْمِقْدَادُ، فَجَثَا عَلَى رُكْبَتَيْهِ، فَجَعَلَ يَحْثُوا فِي وَجْهِهِ الْحَصْبَاءَ، فَقَالَ لَهُ عُثْمَانُ مَا شَأْنُكَ؟ فَقَالَ: إِنَّ رَسُولَ اللَّهِ ﷺ قَالَ: إِذَا رَأَيْتُمُ الْمَدَّاحِينَ فَاحْثُوا فِي وُجُوهِهِمُ التُّرَابَ

ಹುಮಾಮ್ ಬಿನ್ ಹಾರಿಸ್(ರ)ರಿಂದ ವರದಿ. ಒಬ್ಬರು ಉಸ್ಮಾನ್(ರ)ರ ಬಗ್ಗೆ ಪ್ರಶಂಸೆಯ ಮಾತುಗಳನ್ನಾಡುತ್ತಿದ್ದರು. ಆಗ ಮಿಕ್ದಾದ್(ರ) ಅಲ್ಲಿಗೆ ಬಂದು, ಮೊಣಕಾಲೂರಿದರು ಮತ್ತು ಉಸ್ಮಾನ್(ರ)ರನ್ನು ಹೊಗಳುತ್ತಿದ್ದ ವ್ಯಕ್ತಿಯ ಮುಖಕ್ಕೆ ಮರಳನ್ನು ತೆಗೆದು ಎಸೆಯತೊಡಗಿದರು. ಉಸ್ಮಾನ್(ರ) ಪ್ರಶ್ನಿಸಿದರು, 'ಏನಾಯಿತು?' ಆಗ ಮಿಕ್ದಾದ್(ರ) ಹೇಳಿದರು, 'ಮುಖಸ್ತುತಿ ಮಾಡುವವನ ಮುಖಕ್ಕೆ ಮಣ್ಣನ್ನು ಎಸೆಯಬೇಕೆಂದು ಪ್ರವಾದಿಯವರು(ಸ) ಹೇಳಿರುವರು.'*

ಮುಖಸ್ತುತಿಯನ್ನು ಇಷ್ಟಪಡದವರು ಯಾರೂ ಇರುವುದಿಲ್ಲ. ಇತರರ ಬಗ್ಗೆ ಕಠಿಣವಾದ ವಿಮರ್ಶೆಯನ್ನು ನಡೆಸುವವರು, ಟೀಕಿಸುವವರು ಕೂಡ ತನ್ನ ಬಗ್ಗೆ ಜನರು ಸದಾ ಒಳ್ಳೆಯದನ್ನೇ ಹೇಳುತ್ತಿರಬೇಕೆಂದು ಬಯಸುವರು. ಸ್ವಾಭಾವಿಕವಾಗಿ ಇದು ತಪ್ಪಲ್ಲ. ಆದರೆ ಇತರರು ತನ್ನನ್ನು ಸದಾ ಹೊಗಳುತ್ತಿರಬೇಕು, ನನ್ನನ್ನು ಯಾರೂ ವಿಮರ್ಶಿಸಬಾರದು, ಟೀಕಿಸಬಾರದು, ನಾನು ಟೀಕೆ–ವಿಮರ್ಶೆಗೆ ಅತೀತನೆಂದು ಯಾರಾದರೂ ಭಾವಿಸುತ್ತಿದ್ದರೆ, ಅದು ಅವನ ನಾಶದ ಆರಂಭವಾಗುತ್ತದೆ.

* ಇಮಾಮ್ ಬುಖಾರಿ – ಅದಬುಲ್ ಮುಫ್ರದ್: 340, ಮುಸ್ಲಿಮ್: 3002/69 ಮುಂತಾದವರು ಉಲ್ಲೇಖಿಸಿರುವ ಪ್ರಮುಖ ಪ್ರವಾದಿವಚನವಿದು.

ಜನರಿಂದ ಅತಿಯಾದ ಹೊಗಳಿಕೆ ಮತ್ತು ಪ್ರಶಂಸೆಯನ್ನು ಮಾತ್ರ ಆಲಿಸುತ್ತಿರುವ ವ್ಯಕ್ತಿ ತನ್ನ ಬಗ್ಗೆ ಒಳ್ಳೆಯದನ್ನು ಮಾತ್ರ ಭಾವಿಸುತ್ತಿರುತ್ತಾನೆ. ತನ್ನ ಕುಂದು-ಕೊರತೆ ಮತ್ತು ದೌರ್ಬಲ್ಯಗಳ ಕುರಿತು ಅವನೆಂದೂ ಆಲೋಚಿಸುವುದಿಲ್ಲ. ತನ್ನಲ್ಲಿವೆ ಎಂದು ಜನರು ಸದಾ ಪ್ರಶಂಸಿಸಿ ಹೇಳುವ ಒಳಿತುಗಳು ಮತ್ತು ಸದ್ಗುಣಗಳ ಬಗ್ಗೆ ಅವನು ಸದಾ ಚಿಂತಿಸುತ್ತಿರುತ್ತಾನೆ. ನಾನೇನು ಕೆಟ್ಟ ವ್ಯಕ್ತಿಯಲ್ಲ, ಜನರು ನನ್ನನ್ನು ಪ್ರಶಂಸಿಸುತ್ತಿರುವುದರಿಂದ ಶ್ರೇಷ್ಠಗುಣಗಳುಳ್ಳ ಮಹಾ ವ್ಯಕ್ತಿ ತಾನೆಂದು ಅವನಿಗೆ ಭಾಸವಾಗುತ್ತದೆ. ಆತ್ಮಾವಲೋಕನದ ಬಾಗಿಲುಗಳು ಮುಚ್ಚಲ್ಪಟ್ಟು, ಆತ್ಮಸಂಸ್ಕರಣೆಯ ಮಾರ್ಗಗಳು ಇಲ್ಲವಾಗಲು ಇದು ಕಾರಣವಾಗುತ್ತದೆ. ಹೀಗೆ ವ್ಯಕ್ತಿಯ ಅಧಃಪತನವು ಆರಂಭವಾಗುತ್ತದೆ. ಅಬೂಬಕರ್(ರ) ವರದಿ ಮಾಡಿರುವ ಪ್ರವಾದಿವಚನ ಹೀಗಿದೆ:

أَثْنَى رَجُلٌ عَلَى رَجُلٍ عِنْدَ النَّبِيِّ ﷺ، فَقَالَ: "وَيْلَكَ قَطَعْتَ عُنُقَ أَخِيكَ" ثَلَاثًا، "مَنْ كَانَ مِنْكُمْ مَادِحًا لَا مَحَالَةَ، فَلْيَقُلْ: أَحْسِبُ فُلَانًا، وَاللَّهُ حَسِيبُهُ، إِنْ كَانَ يُرَى أَنَّهُ كَذَالِكَ، وَلَا يُزَكِّيْ عَلَى اللَّهِ أَحَدًا"

ಪ್ರವಾದಿಯವರ(ಸ) ಸನ್ನಿಧಿಯಲ್ಲಿ ಒಬ್ಬ ವ್ಯಕ್ತಿ ಇನ್ನೊಬ್ಬನ ಕುರಿತು ಹೊಗಳಿಕೆಯ ಮಾತುಗಳನ್ನಾಡಿದ. ಆಗ ಪ್ರವಾದಿ(ಸ) ಹೇಳಿದರು, 'ನಿನಗೆ ನಾಶ! ನೀನು ನಿನ್ನ ಸಹೋದರನ ಕತ್ತು ಕೊಯ್ದಿರುವೆ.' ಮೂರು ಬಾರಿ ಈ ಮಾತನ್ನು ಪುನರಾವರ್ತಿಸಿದರು. ಬಳಿಕ ಹೇಳಿದರು, 'ಒಬ್ಬ ವ್ಯಕ್ತಿಯ ಬಗ್ಗೆ ಏನಾದರೂ ಪ್ರಶಂಸಿಸಬೇಕೆಂಬ ಅನಿವಾರ್ಯ ಸಂದರ್ಭದಲ್ಲಿ ನೀನು, ನಾನು ಅವನನ್ನು ಈ ರೀತಿ ಅರಿತಿರುವೆ. ಹೆಚ್ಚು ತಿಳಿದವನು ಅಲ್ಲಾಹನು ಎಂದು ಮಾತ್ರ ಹೇಳಬೇಕು. ಆ ವ್ಯಕ್ತಿ ಹಾಗಿರುವನೆಂದು ಅವರಿಗೆ ಗೊತ್ತಾಗಬೇಕು. ಆದರೆ ಅಲ್ಲಾಹನ ಹೊರತು ಬೇರೆ ಯಾರನ್ನೂ ಸ್ತುತಿಸಬಾರದು.'[1]

ಒಬ್ಬ ವ್ಯಕ್ತಿಯನ್ನು ಇನ್ನೊಬ್ಬನು ಅವನಿಗೆ ಕೇಳಿಸುವಂತೆ ಪ್ರಶಂಸಿಸುವುದನ್ನು ಉಮರ್(ರ) ಕೇಳಿಸಿಕೊಂಡರು. ಆಗ ಅವರು ಹೀಗೆಂದರು: عَقَرْتَ الرَّجُلَ عَقَرَكَ اللَّهُ! 'ನೀನು ಅವರನ್ನು ನಾಶ ಮಾಡಿಬಿಟ್ಟೆ, ಅಲ್ಲಾಹನು ನಿನ್ನನ್ನೂ ನಾಶಗೊಳಿಸಲಿ.'[2]

ಸ್ವಾರ್ಥ ಮತ್ತು ಕಾಪಟ್ಯವು ಎಲ್ಲ ಪ್ರಶಂಸೆಗಳ ಮೂಲವಾಗಿರುತ್ತದೆ. ಪ್ರವಾದಿಯವರು(ಸ) ಈ ದುರ್ಗುಣಗಳನ್ನು ಬಹಳ ಕಠಿಣವಾಗಿ ವಿಮರ್ಶಿಸಿರುವರು. ಒಮ್ಮೆ ಈ ರೀತಿ ಹೇಳಿದರು:

إِذَا مُدِحَ الفَاسِقُ غَضِبَ الرَّبُّ تَعَالَى، وَاهْتَزَّلَهُ الْعَرْشُ

'ಅನ್ಯಾಯ ಮಾಡುವ ವ್ಯಕ್ತಿ ಪ್ರಶಂಸಿಸಲ್ಪಡುವಾಗ, ಅಲ್ಲಾಹನು ಕುಪಿತನಾಗುವನು ಮತ್ತು ಅವನ ಸಿಂಹಾಸನವು ನಡುಗುವುದು.'[3]

ಸ್ವಯಂ ಕುಂದುಕೊರತೆಗಳ ಬಗ್ಗೆ, ದೌರ್ಬಲ್ಯಗಳ ಬಗ್ಗೆ ಅರಿತುಕೊಳ್ಳುವುದು ಮುಖಸ್ತುತಿಯೆಂಬ ಅಪಘಡದಿಂದ ರಕ್ಷಿಸಲ್ಪಡಲಿಕ್ಕಿರುವ ಮಾರ್ಗವಾಗಿದೆ. ನಾನು ಯಾರೆಂಬ ಬಗ್ಗೆ ಸರಿಯಾಗಿ ಅರಿತ ವ್ಯಕ್ತಿ ಜನರ ಹುಸಿ ಪ್ರಶಂಸೆಗೆ ಬಲಿಬೀಳುವುದಿಲ್ಲ. ಪ್ರಶಂಸೆಗಿಂತ ತನ್ನ ಬಗೆಗಿನ ವಿಮರ್ಶೆಯನ್ನೇ ಆ ವ್ಯಕ್ತಿ ಸ್ವಾಗತಿಸುತ್ತಾನೆ. ಮುಖಸ್ತುತಿಯಿಂದ ಉಂಟಾಗುವ ತೊಂದರೆಗಳಿಗಾಗಿ ಅವರು ಅಲ್ಲಾಹನೊಂದಿಗೆ ನಿರಂತರ ಪ್ರಾರ್ಥಿಸುತ್ತಿರುವರು. ಒಮ್ಮೆ ಅಲೀಯವರನ್ನು(ರ) ಯಾರೋ ಅತಿಯಾಗಿ ಪ್ರಶಂಸಿಸಿದುದನ್ನು ಆಲಿಸಿದ ಅವರು ಈ ರೀತಿ ಪ್ರಾರ್ಥಿಸಿದರು:

اللّٰهُمَّ اغْفِرْلِيْ مَالَا يَعْلَمُوْنَ وَلَا تُؤَاخِذْنِيْ بِمَا يَقُوْلُوْنَ, وَاجْعَلْنِيْ خَيْرًا مِمَّا يَظُنُّوْنَ

'ಅಲ್ಲಾಹನೇ ಅವರಿಗೆ ತಿಳಿದಿಲ್ಲದ ವಿಷಯಗಳನ್ನು ನೀನು ನನಗೆ ಕ್ಷಮಿಸಿಬಿಡಬೇಕು. ಅವರು ಹೇಳಿದ ಕಾರಣಕ್ಕಾಗಿ ನೀನು ನನ್ನನ್ನು ಶಿಕ್ಷಿಸಬಾರದು; ಅವರು ಭಾವಿಸಿರುವುದಕ್ಕಿಂತ ನನ್ನನ್ನು ಹೆಚ್ಚು ಉತ್ತಮನಾಗಿ ಮಾರ್ಪಡಿಸು.'[4]

ಸುಫ್ಯಾನ್ ಬಿನ್ ಉಯೈಯ್ನಾ(ರ) ಹೇಳುತ್ತಾರೆ: لَا يَضُرُّ الْمَدْحُ مَنْ عَرَفَ نَفْسَهُ 'ನಾನು ಯಾರು ಎಂದು ಸ್ವಯಂ ಮನವರಿಕೆ ಮಾಡಿಕೊಂಡಿರುವ ವ್ಯಕ್ತಿಗೆ ಮುಖಸ್ತುತಿ ತೊಂದರೆಯನ್ನುಂಟು ಮಾಡುವುದಿಲ್ಲ.'[5]

ಉಮರ್(ರ)ರವರು ಜನರೊಂದಿಗೆ ಒಂದು ಸಭೆಯಲ್ಲಿ ಕುಳಿತಿದ್ದರು. ಆಗ ರಬೀಅ ಗೋತ್ರದ ಪ್ರಮುಖ ನಾಯಕ ಜಾರುದ್ ಬಿನ್ ಮುಂದಿರ್ ಅಲ್ಲಿಗೆ ಬಂದರು. ಜನರು ಹೇಳಿದರು: هَذَا سَيِّدُ رَبِيْعَةِ 'ರಬೀಅ ಗೋತ್ರದ ನಾಯಕರಿವರು.' ಆ ವ್ಯಕ್ತಿ ಬಳಿ ತಲುಪಿದಾಗ ಉಮರ್(ರ) ತನ್ನ ಚಾಟಿಯಿಂದ ಒಂದು ಏಟನ್ನು ಕೊಟ್ಟರು. ಆಗ ಅವರು ಪ್ರಶ್ನಿಸಿದರು: مَالِيْ وَمَالَكَ يَا أَمِيْرَ الْمُؤْمِنِيْنَ ؟ 'ಅಮೀರುಲ್ ಮೂಮಿನೀನ್, ನಾನು ತಮಗೇನು ಮಾಡಿದೆ?' ಆಗ ಉಮರ್(ರ) ಹೇಳಿದರು:

أَمَا سَمِعْتَهَا؟ لَقَدْ خَشِيْتُ أَنْ يُخَالِطَ قَلْبَكَ مِنْهَا شَيْءٌ!

'ಜನರು ನಿಮ್ಮ ಬಗ್ಗೆ ಹೇಳುತ್ತಿರುವುದನ್ನು ಆಲಿಸಲಿಲ್ಲವೇ? ಅದರಲ್ಲಿ ಏನಾದರೂ ನಿಮ್ಮ ಹೃದಯದೊಳಗೆ ಪ್ರವೇಶಿಸಿಬಿಟ್ಟೀತು ಎಂದು ನಾನು ಭಯಪಟ್ಟೆ.'[6]

ವಿದ್ವಾಂಸರಾಗಿದ್ದ ಮಾಲಿಕ್ ಬಿನ್ ದೀನಾರ್(ರ)ರನ್ನು ಅವರ ಪತ್ನಿ ಯಾವುದೋ

ವಿಷಯಕ್ಕೆ ಕಠಿಣವಾಗಿ ವಿಮರ್ಶಿಸುತ್ತಿದ್ದರು. ಜೊತೆಗೆ ಜನರಿಗೆ ತೋರಿಸಲಿಕ್ಕಾಗಿ ಕೆಲಸ ಮಾಡುವವ ಎಂಬ ಅರ್ಥ ಬರುವ 'ಮುರಾಇ' ಎಂದೂ ಕರೆದರು. ಅದಕ್ಕೆ ಮುಗುಳ್ನಗುತ್ತಾ ಅವರು ನೀಡಿದ ಉತ್ತರ ಹೀಗಿತ್ತು, 'ಇಷ್ಟು ಕಾಲ ಬಸ್ರಾದಲ್ಲಿ ಜೀವನ ಕಳೆದಿದ್ದರೂ ಜನರಿಗೆ ಸಿಗದ ನನ್ನ ಹೆಸರು ನಿನಗೆ ಹೇಗೆ ಸಿಕ್ಕಿತು?' ವಿಮರ್ಶೆಯನ್ನು ಕ್ರಿಯಾತ್ಮಕವಾಗಿ ಸ್ವೀಕರಿಸುವ ವಿಧಾನವನ್ನು ಇದು ಕಲಿಸುತ್ತದೆ.

ಮುಖಸ್ತುತಿ ಮಾಡುವವರೊಂದಿಗೆ ಯಾವ ರೀತಿ ವರ್ತಿಸಬೇಕು ಎಂದು ಆರಂಭದ ಹದೀಸಿನಲ್ಲಿ ಹೇಳಲಾಗಿದೆ. 'ಮುಖಕ್ಕೆ ಮಣ್ಣು ಎಸೆಯಬೇಕು' ಎಂಬ ಪ್ರಯೋಗದಿಂದ ಈ ದುರ್ಗುಣವನ್ನು ಪ್ರವಾದಿ(ಸ) ಎಷ್ಟರ ಮಟ್ಟಿಗೆ ದ್ವೇಷಿಸುತ್ತಿದ್ದರು ಎಂಬುದು ಮನದಟ್ಟಾಗುತ್ತದೆ.

---

1. ಬುಖಾರಿ: 10/397-398, ಮುಸ್ಲಿಮ್: 3000.
2. ಬುಖಾರಿ - ಅದಬುಲ್ ಮುಫ್ರದ್: 335.
3. ಬೈಹಕಿ - ಶುಅ್‌ಬುಲ್ ಈಮಾನ್, ಇಬ್ನು ಅಬಿದ್ದುನ್ಯಾ - ಸುರ್ವತ್, ಅಬೂ ಯಅ್‌ಲಾ.
4. ಇಬ್ನು ಅಬಿದ್ದುನ್ಯಾ.
5. ಇಬ್ನು ಅಬಿದ್ದುನ್ಯಾ.
6. ಇಬ್ನು ಅಬಿದ್ದುನ್ಯಾ.

51. ವಿಚಾರಣೆಯಿಲ್ಲದೆ ಸ್ವರ್ಗಕ್

عَنْ أَنَس بْنِ مَالِكٍ رَضِيَ اللّٰهُ عَنْهُ، أَنَّ النَّبِيَّ ﷺ قَالَ: إِذَا وَقَفَ الْعِبَادُ لِلْحِسَابِ جَاءَ قَوْمٌ وَاضِعِي سُيُوفِهِمْ عَلٰى رِقَابِهِمْ، تَقْطُرُ دَمًا! فَازْدَحَمُوا عَلٰى بَابِ الْجَنَّةِ، فَقِيْلَ: مَنْ هٰـؤُلَاءِ؟ قِيلَ: الشُّهَدَاءُ، كَانُوا اِحْيَاءً مَرْزُوقِيْنَ، ثُمَّ نَادَى مُنَادٍ: لِيَقُمْ مَنْ أَجْرُهُ عَلَى اللّٰهِ فَـالْيَدْخُلِ الْجَنَّةَ، ثُمَّ نَادَى الثَّانِيَةَ! لِيَقُمْ مَنْ أَجْرُهُ عَلَى اللّٰهِ فَالْيَدْخُلِ الْجَنَّةَ، قَالَ: وَمَنْ ذَالَّـذِيْ أَجْرُهُ عَلَى اللّٰهِ ؟ قَالَ: الْعَافُوْنَ عَنِ النَّاسِ! ثُمَّ نَادَى الثَّالِثَةَ: لِيَقُمْ مَنْ أَجْرُهُ عَلَى اللّٰهِ فَالْيَدْخُلِ الْجَنَّةَ، فَقَامَ كَذَا وَكَذَا أَلْفًا، فَدَخَلُوْهَا بِغَيْرِ حِسَابٍ!

ಅನಸ್ ಬಿನ್ ಮಾಲಿಕ್(ರ)ರಿಂದ ವರದಿ. ಪ್ರವಾದಿ(ಸ) ಹೇಳಿರುವರು: ಅಂತ್ಯದಿನದಂದು ಜನರು ವಿಚಾರಣೆಗಾಗಿ ನಿಲ್ಲುವಾಗ, ಒಂದು ವಿಭಾಗದ ಜನರು ಕತ್ತಿನ ಹಿಂಭಾಗದಲ್ಲಿ ಚೂರಿ ಹಾಕಲ್ಪಟ್ಟ ಸ್ಥಿತಿಯಲ್ಲಿ ರಕ್ತ ಹರಿಸುತ್ತಾ ಬರುವರು. ಅವರು ಬಹಳ ಶೀಘ್ರವಾಗಿ ಸ್ವರ್ಗದ ಬಾಗಿಲಿನ ಮೂಲಕ ಒಳ ಪ್ರವೇಶಿಸುವರು. ಯಾರಿವರು ಎಂಬ ಪ್ರಶ್ನೆಗೆ 'ರಕ್ತಸಾಕ್ಷಿಗಳು, ಅವರು ದೇವನ ಸನ್ನಿಧಿಯಲ್ಲಿ ಜೀವಂತರಾಗಿದ್ದರು ಮತ್ತು ಎಲ್ಲ ಅನುಕೂಲತೆಗಳು ಅವರಿಗೆ ಲಭಿಸುತ್ತಿತ್ತು' ಎಂಬ ಉತ್ತರ ಲಭಿಸುತ್ತದೆ. ಆ ಬಳಿಕ ಓರ್ವರು ಹೀಗೆ ಘೋಷಿಸುವರು, 'ಅಲ್ಲಾಹನ ಬಳಿ ಪ್ರತಿಫಲಾರ್ಹರಾದ ವ್ಯಕ್ತಿಗಳು ಮುಂದೆ ಬನ್ನಿ. ಸ್ವರ್ಗದೊಳಗೆ ಪ್ರವೇಶಿಸಿರಿ.' ಎರಡನೆಯ ಬಾರಿಯೂ 'ಅಲ್ಲಾಹನ ಬಳಿ ಪ್ರತಿಫಲಕ್ಕೆ ಅರ್ಹರಾದವರು ಮುಂದೆ ಬನ್ನಿ. ಸ್ವರ್ಗ

ದೊಳಗೆ ಪ್ರವೇಶಿಸಿರಿ' ಎಂದು ಕೂಗಿ ಕರೆಯಲಾಗುವುದು. ಅನಸ್(ರ) ಪ್ರಶ್ನಿಸುತ್ತಾರೆ, 'ಅಲ್ಲಾಹನ ಬಳಿ ಪ್ರತಿಫಲಾರ್ಹರಾದ ಇವರು ಯಾರು?' ಪ್ರವಾದಿ(ಸ) ಹೇಳಿದರು, 'ಜನರನ್ನು ಕ್ಷಮಿಸುವ ಗುಣವುಳ್ಳವರು. ಅವರನ್ನು ಮೂರನೆಯ ಬಾರಿ ಕೂಗಿ ಕರೆಯಲಾಗುವುದು, ದೇವಸನ್ನಿಧಿಯಲ್ಲಿ ಪ್ರತಿಫಲಕ್ಕೆ ಅರ್ಹರಾದವರು ಮುಂದೆ ಬನ್ನಿ, ಸ್ವರ್ಗದೊಳಗೆ ಪ್ರವೇಶಿಸಿರಿ. ಹೀಗೆ ನಾಲ್ಕು ದಿಕ್ಕುಗಳಿಂದ ಸಾವಿರಾರು ಜನರು ಮುಂದೆ ಬಂದು ವಿಚಾರಣೆಯಿಲ್ಲದೆ ಸ್ವರ್ಗದೊಳಗೆ ಪ್ರವೇಶಿಸುವರು.'*

ಅಂತ್ಯದಿನದ ವಿಚಾರಣೆ ಬಹಳ ಭಯಾನಕವಾಗಿರುತ್ತದೆ. ವಿಶ್ವಾಸಿಯಾಗಿದ್ದರೂ ಅಲ್ಲದಿದ್ದರೂ ಯಾರಿಗೂ ಭಯವಿಹ್ವಲರಾಗಿಯಲ್ಲದೆ ದೇವನ ಆಸ್ಥಾನದಲ್ಲಿ ನಿಲ್ಲಲು ಸಾಧ್ಯವಿಲ್ಲ. ಅಲ್ಲಾಹನ ವಿಚಾರಣೆಯನ್ನು ನೆನಪಿಸುತ್ತಾ ಆ ದಿನ ಎಲ್ಲರೂ ಬಹಳ ಭಯ ಭೀತರಾಗಿರುವರು. ಇದನ್ನು ಪವಿತ್ರ ಕುರ್‌ಆನ್, 'ಭಯದ ಭಯಾನಕತೆಯಿಂದಾಗಿ ಜನರ ಹೃದಯಗಳು ಅವರ ಗಂಟಲಿಗೇರುವುದು' (ಅಲ್ ಮೂಮಿನ್: 18) ಮತ್ತು 'ಮಕ್ಕಳನ್ನು ವೃದ್ಧರಾಗಿ ಮಾಡಿ ಬಿಡುವಂತಹ ಆ ದಿನ' (ಅಲ್ ಮುಝ್ಝಮ್ಮಿಲ್: 17) ಎಂದು ಬಣ್ಣಿಸಿದೆ.

ಅಂತ್ಯದಿನದ ಈ ಅತಿಭಯಾನಕ ಮತ್ತು ಸಂಕಷ್ಟಭರಿತವಾದ ವಿಚಾರಣೆಯಿಂದ ಅಪೂರ್ವವೆಂಬಂತೆ ಅಲ್ಲಾಹನ ಕೆಲವು ದಾಸರಿಗೆ ರಕ್ಷಣೆ ಮತ್ತು ವಿಮೋಚನೆ ದೊರೆಯುತ್ತದೆ. ಈ ಹದೀಸಿನಲ್ಲಿ ಇಂತಹ ವ್ಯಕ್ತಿಗಳ ಬಗ್ಗೆ ಮಾಹಿತಿ ನೀಡಲಾಗಿದೆ. ದೇವನ ಸನ್ನಿಧಿಯಲ್ಲಿ ಯಾವುದೇ ವಿಚಾರಣೆಯನ್ನು ಎದುರಿಸಬೇಕಾಗಿಲ್ಲದವರು. ಪ್ರಶ್ನೋತ್ತರಗಳು, ಸ್ವರ್ಗ ಪ್ರವೇಶಕ್ಕೆ ಸುದೀರ್ಘ ಸಮಯ ಕಾದು ನಿಲ್ಲಬೇಕಾದ ಪರಿಸ್ಥಿತಿ ಇವುಗಳಲ್ಲಿ ಯಾವುದನ್ನೂ ಅವರು ಎದುರಿಸಬೇಕಾಗಿಲ್ಲ. ನೇರವಾಗಿ ಸ್ವರ್ಗವನ್ನು ಪ್ರವೇಶಬಹುದು. ಒಬ್ಬ ಸತ್ಯವಿಶ್ವಾಸಿಗೆ ಇದಕ್ಕಿಂತ ಹೆಚ್ಚಿನ ಸೌಭಾಗ್ಯ ಯಾವುದಿರಲು ಸಾಧ್ಯ?

ದೇವನ ಮಾರ್ಗದಲ್ಲಿ ಜೀವನ ಮುಗಿಸಿ ಹುತಾತ್ಮರಾದ ವ್ಯಕ್ತಿಗಳ ಕುರಿತು ಪ್ರವಾದಿ(ಸ) ಪ್ರಥಮವಾಗಿ ಹೇಳಿರುವರು. ಅಲ್ಲಾಹನ ಮಾರ್ಗದಲ್ಲಿ ವಿಶ್ವಾಸಕ್ಕಾಗಿ ಮಾಡುವ ಜೀವತ್ಯಾಗವಾಗಿದೆ ಹುತಾತ್ಮತೆ. ಇದಕ್ಕಿಂತ ಶ್ರೇಷ್ಠವಾದ ಇನ್ನೊಂದು ಕರ್ಮವಿಲ್ಲ. ಪ್ರವಾದಿವರ್ಯರು(ಸ) ಹೀಗೆ ಹೇಳಿರುವರು:

---

* ಇಮಾಮ್ ತಬ್ರಾನಿ – ಔಸಾತ್, ಹೈತಮಿ ಮಜ್ಮಉಸ್ಸವಾಇದ್: 5/295 ಮುಂತಾದವರು ಉಲ್ಲೇಖಿಸಿರುವ ಇದರ ವರದಿ ಪರಂಪರೆಯು ಹಸನ್ ಆಗಿದೆ ಎಂದು ಮುಂದಿರಿ ಅಭಿಪ್ರಾಯ ಪಡುತ್ತಾರೆ. (ಅತ್ತರ್ಗೀಬು ವತ್ತರ್ಹೀಬ್, ಭಾಗ: 3, ಪುಟ: 309)

مَا مِنْ أَحَدٍ مِنْ أَهْلِ الْجَنَّةِ يَسُرُّهُ أَنْ يَرْجِعَ إِلَى الدُّنْيَا غَيْرُ الشَّهِيْدِ، فَإِنَّهُ يُحِبُّ أَنْ يَرْجِعَ إِلَى الدُّنْيَا، يَقُوْلُ حَتَّى أُقْتَلَ عَشَرَ مَرَّاتٍ فِيْ سَبِيْلِ اللهِ مِمَّا يَرَى مِمَّا أَعْطَاهُ مِنَ الْكَرَامَةِ

ಸ್ವರ್ಗವಾಸಿಗಳ ಪೈಕಿ ಯಾರಾದರೂ ಭೂಮಿಗೆ ಮರಳಿ ಬರಲು ಬಯಸುವುದಿಲ್ಲ. ಹುತಾತ್ಮರು ಇದಕ್ಕೆ ಹೊರತಾಗಿದ್ದಾರೆ. ತನಗೆ ನೀಡಲ್ಪಟ್ಟ ಅನುಗ್ರಹಗಳ ಕುರಿತು ಅರಿವಿರುವ ಕಾರಣ, ಇಹಲೋಕಕ್ಕೆ ಮರಳಿ ಬಂದು, ಹತ್ತು ಬಾರಿ ಅಲ್ಲಾಹನ ಮಾರ್ಗದಲ್ಲಿ ಪುನಃ ವಧಿಸಲ್ಪಡಬೇಕೆಂದು ಅವರು ಬಯಸುತ್ತಾರೆ.[1]

ಉಬಾದ ಬಿನ್ ಸಾಮಿತ್(ರ) ವರದಿ ಮಾಡಿರುವ ಒಂದು ಪ್ರವಾದಿವಚನದಲ್ಲಿ ಹುತಾತ್ಮರಿಗೆ ಸಿಗುವ ಅನುಗ್ರಹಗಳ ಕುರಿತು ವಿವರಣೆಯಿದೆ:

إِنَّ لِلشَّهِيْدِ عِنْدَ اللهِ سَبْعَ خِصَالٍ أَنْ يُغْفَرَ لَهُ فِيْ أَوَّلِ دُفْعَةٍ مِنْ دَمِهِ وَيُرَى مَقْعَدَهُ مِنَ الْجَنَّةِ، وَيُحَلَّى حُلَّةَ الْإِيمَانِ، وَيُجَارَ مِنْ عَذَابِ الْقَبْرِ، وَيَأْمَنَ مِنَ الْفَزَعِ الْأَكْبَرِ، وَيُوضَعَ عَلَى رَأْسِهِ تَاجُ الْوَقَارِ الْيَاقُوتَةُ مِنْهُ خَيْرٌ مِنَ الدُّنْيَا وَمَا فِيْهَا، وَيُزَوَّجَ ثِنْتَيْنِ وَسَبْعِيْنَ زَوْجَةً مِنَ الْحُوْرِ الْعِيْنِ، وَيُشَفَّعَ فِيْ سَبْعِيْنَ إِنْسَانًا مِنْ أَقَارِبِهِ

ನಿಶ್ಚಯವಾಗಿಯೂ ಹುತಾತ್ಮರಿಗೆ ಅಲ್ಲಾಹನ ಬಳಿ ಏಳು ವಿಶೇಷತೆಗಳಿವೆ. ಅವನ ರಕ್ತವು ನೆಲಕ್ಕೆ ಪ್ರಥಮವಾಗಿ ಬೀಳುವ ಸಂದರ್ಭದಲ್ಲೇ ಅವನ ಎಲ್ಲ ಪಾಪಗಳು ಕ್ಷಮಿಸಲ್ಪಟ್ಟು ಸ್ವರ್ಗದಲ್ಲಿ ಅವನಿಗಿರುವ ಸ್ಥಳವು ಕಾಣಿಸತೊಡಗುವುದು. ಈಮಾನಿನ (ವಿಶ್ವಾಸದ) ಉಡುಪನ್ನು ಅವನಿಗೆ ಉಡಿಸಲಾಗುವುದು. ಗೋರಿಯ ಶಿಕ್ಷೆಯಿಂದ ರಕ್ಷಣೆ ಸಿಗುವುದು. (ವಿಚಾರಣೆ ದಿನದ) ಬಹಳ ದೊಡ್ಡ ಭಯದಿಂದ ಮುಕ್ತಿ ಲಭಿಸುವುದು. ಇಹಲೋಕ ಮತ್ತು ಅದರ ಎಲ್ಲ ಒಳಿತುಗಳಿಗಿಂತ ಶ್ರೇಷ್ಠವಾದ ರತ್ನದಿಂದ ರಚಿಸಲ್ಪಟ್ಟ ಬಹಳ ಘನತೆಯುಳ್ಳ ಕಿರೀಟವನ್ನು ಅವನಿಗೆ ತೊಡಿಸಲಾಗುವುದು. ಎಪ್ಪತ್ತೆರಡು ಸ್ವರ್ಗದ ಕನ್ಯೆಯರನ್ನು ವಿವಾಹ ಮಾಡಿಸಿ ಕೊಡಲಾಗುವುದು. ಸಮೀಪದ ಸಂಬಂಧಿಗಳ ಪೈಕಿ ಎಪ್ಪತ್ತು ಜನರ ಪರವಾಗಿ ಶಿಫಾರಸ್ಸು ಮಾಡಲು ಅವಕಾಶ ನೀಡಲಾಗುವುದು.[2]

ಕತ್ತಿನ ಹಿಂಭಾಗದಲ್ಲಿ ಚೂರಿಗಳು ಹಾಕಲ್ಪಟ್ಟ ಸ್ಥಿತಿಯಲ್ಲಿ ರಕ್ತವನ್ನು ಹರಿಸಿಕೊಂಡು ಅಂತ್ಯದಿನದಂದು ಹುತಾತ್ಮರು ಹಾಜರಾಗುವರು. ಅದು ಅಲ್ಲಾಹನು ಅವರಿಗೆ ನೀಡುವ ವಿಶೇಷ ಗೌರವ ಮತ್ತು ಪರಿಗಣನೆಯಾಗಿರುವುದು. ತಾವು ದೇವನ ಮಾರ್ಗದಲ್ಲಿ ಜೀವ ತ್ಯಾಗ ಮಾಡಿದವರು. ಇತರರಿಗಿಂತ ತಾವು ಬಹಳ ಶ್ರೇಷ್ಠರು

ಎಂದು ಈ ಮೂಲಕ ಅವರು ಸ್ವಯಂ ತೋರ್ಪಡಿಸಿಕೊಳ್ಳುತ್ತಿರುವರು. ಪ್ರವಾದಿ(ಸ) ಹೀಗೆ ಹೇಳಿರುವರು:

لَا يُكْلَمُ أَحَدٌ فِي سَبِيلِ اللهِ - وَاللهُ أَعْلَمُ بِمَنْ يُكْلَمُ فِي سَبِيلِهِ - إِلَّا جَاءَ يَوْمَ الْقِيَامَةِ وَجُرْحُهُ يَثْعَبُ، اللَّوْنُ لَوْنُ دَمٍ وَالرِّيحُ رِيحُ مِسْكٍ

'ಅಲ್ಲಾಹನ ಮಾರ್ಗದಲ್ಲಿ ಯಾರೂ ಇರಿತಕ್ಕೊಳಗಾಗುವುದಿಲ್ಲ, ಯಾರು ಅಲ್ಲಾಹನ ಮಾರ್ಗದಲ್ಲಿ ಇರಿತಕ್ಕೊಳಗಾಗುತ್ತಾರೆಂಬುದನ್ನು ಅಲ್ಲಾಹನೇ ಚೆನ್ನಾಗಿ ಬಲ್ಲನು. ಅಂತ್ಯ ದಿನದಂದು ತನ್ನ ಇರಿತದಲ್ಲಿ ರಕ್ತವನ್ನು ಹರಿಸುತ್ತಾ ಆ ವ್ಯಕ್ತಿ ಮುಂದೆ ಬರುವನು. ಅದರ ಬಣ್ಣವು ರಕ್ತದ್ದಾಗಿರುವುದು. ವಾಸನೆ ಕಸ್ತೂರಿಯದ್ದಾಗಿರುವುದು.'[3]

ಅಂತ್ಯ ದಿನದಂದು ವಿಚಾರಣೆಯಿಲ್ಲದೆ ಸ್ವರ್ಗಕ್ಕೆ ಪ್ರವೇಶಿಸುವ ಇನ್ನೊಂದು ವಿಭಾಗ ಜನರ ತಪ್ಪುಗಳನ್ನು ಕ್ಷಮಿಸುವಂತಹ ವ್ಯಕ್ತಿಗಳದ್ದಾಗಿರುವುದು. ಅವರು ಜನರೊಂದಿಗೆ ಒಡನಾಡುವಾಗ ಸಂಭವಿಸುವ ಕುಂದುಕೊರತೆಗಳನ್ನು ಕ್ಷಮಿಸುವವರು ಮತ್ತು ಸಹಿಸಿಕೊಳ್ಳುವವರು ಆಗಿರುವರು. ನನ್ನ ಹಾಗೆಯೇ ಇತರರಲ್ಲಿಯೂ ಅನೇಕ ಸ್ವಭಾವ ವೈಕಲ್ಯಗಳು ಇರುತ್ತವೆ, ಕುಂದು ಕೊರತೆಗಳು ಸಂಭವಿಸುತ್ತವೆ ಎಂಬುದನ್ನು ಅರ್ಥಮಾಡಿ ಕೊಂಡು ಜನರಿಂದ ಸಂಭವಿಸುವ ಸ್ವಭಾವದೋಷಗಳನ್ನು ಮನ್ನಿಸುವ ಸನ್ಮನಸ್ಸು ತೋರಿಸು ವವರು. ಅಂತ್ಯದಿನದಂದು ಹುತಾತ್ಮರೊಂದಿಗೆ ಇವರೂ ಸ್ವರ್ಗವನ್ನು ಪ್ರವೇಶಿಸುವರೆಂದು ಪ್ರವಾದಿಯವರು(ಸ) ತಿಳಿಸಿರುವರು. ಕ್ಷಮಾಗುಣವು ಎಷ್ಟು ಶ್ರೇಷ್ಠವಾದ ಗುಣವಿಶೇಷತೆ ಎಂಬುದನ್ನು ಇದರಿಂದ ನಮಗೆ ಗ್ರಹಿಸಬಹುದು.

ಸತ್ಯವಿಶ್ವಾಸಿಗಳ ಗುಣವಿಶೇಷಗಳಲ್ಲೊಂದಾದ ಕ್ಷಮಾಗುಣವನ್ನು ಪ್ರಸ್ತಾಪಿಸುತ್ತಾ ಪವಿತ್ರ ಕುರ್‌ಆನಿನಲ್ಲಿ, 'ಅವರು ಜನರನ್ನು ಕ್ಷಮಿಸಿಬಿಡುವವರು' (ಆಲಿ ಇಮ್ರಾನ್:134) ಎಂದು ಹೇಳಲಾಗಿದೆ. ಮರೆಯುವ ಮತ್ತು ಮನ್ನಿಸುವ ಸಾಮರ್ಥ್ಯವು ಮನುಷ್ಯನನ್ನು ಶ್ರೇಷ್ಠನನ್ನಾಗಿಸುತ್ತದೆ. ಜನರ ತಪ್ಪುಗಳನ್ನು ಮನಸ್ಸಿನಲ್ಲಿಟ್ಟು ನಡೆಯುವವನು ಶ್ರೇಷ್ಠನಲ್ಲ, ಬದಲಾಗಿ ಕ್ಷಮಿಸಿಬಿಡುವವನು ಶ್ರೇಷ್ಠನೆನಿಸಿಕೊಳ್ಳುವನು. ಕ್ಷಮಾಗುಣವು ಪ್ರವಾದಿ ಯವರ(ಸ) ಗುಣವಿಶೇಷತೆಗಳ ಪೈಕಿ ಒಂದಾಗಿತ್ತು. ಅಬ್ದುಲ್ಲಾ ಬಿನ್ ಮಸ್‌ಊದ್(ರ) ಹೇಳುತ್ತಾರೆ:

كَأَنِّي أَنْظُرُ إِلَى رَسُولِ اللهِ ﷺ يَحْكِي نَبِيًّا مِنَ الْأَنْبِيَاءِ ضَرَبَهُ قَوْمُهُ فَأَدْمَوْهُ، وَهُوَ يَمْسَحُ الدَّمَ عَنْ وَجْهِهِ يَقُولُ: اَللّٰهُمَّ اغْفِرْ لِقَوْمِي فَإِنَّهُمْ لَا يَعْلَمُونَ

ಸ್ವಂತ ಜನತೆಯಿಂದಲೇ ಘಾಸಿಗೊಳಿಸಲ್ಪಟ್ಟ ಓರ್ವ ಪ್ರವಾದಿಯ ಕಥೆಯನ್ನು ಪ್ರವಾದಿಯವರು(ಸ) ನಮ್ಮೊಂದಿಗೆ ಹೇಳಿದ್ದನ್ನು ನಾನು ಸದಾ ನೆನಪಿಸುತ್ತೇನೆ. ತನ್ನ ಮುಖದಲ್ಲಿ ಒಸರುತ್ತಿದ್ದ ರಕ್ತವನ್ನು ಒರೆಸುತ್ತಾ ಆ ಪ್ರವಾದಿ(ಅ) ಹೀಗೆ ಪ್ರಾರ್ಥಿಸುತ್ತಿದ್ದರು, 'ಅಲ್ಲಾಹನೇ, ಈ ಜನರನ್ನು ನೀನು ಕ್ಷಮಿಸಿಬಿಡಬೇಕು. ಅವರು ಅರಿವಿಲ್ಲದೆ ಹೀಗೆ ಮಾಡುತ್ತಿದ್ದಾರೆ.'[4]

ಅಮ್ರ್ ಬಿನ್ ಶುಐಬ್(ರ) ವರದಿ ಮಾಡಿರುವ ಪ್ರವಾದಿವಚನ ಹೀಗಿದೆ- ಪ್ರವಾದಿ(ಸ) ಹೇಳಿರುವರು:

إِذَا جَمَعَ اللَّهُ الْخَلاَئِقَ نَادَى مُنَادٍ أَيْنَ أَهْلُ الْفَضْلِ ؟ فَيَقُوْمُ نَاسٌ وَهُمْ يَسِيْرٌ، فَيَنْطَلِقُوْنَ سِرَاعًا إِلَى الْجَنَّةِ، فَتَتَلَقَّاهُمُ الْمَلاَئِكَةُ، فَيَقُوْلُوْنَ: إِنَّا نَرَاكُمْ سِرَاعًا إِلَى الْجَنَّةِ، فَمَنْ أَنْتُمْ ؟ فَيَقُوْلُوْنَ: نَحْن أَهْلُ الْفَضْلِ، فَيَقُوْلُوْنَ: وَمَا فَضْلُكُمْ ؟ فَيَقُوْلُوْنَ: كُنَّا إِذَا ظُلِمْنَا صَبَرْنَا، وَإِذَا أُسِيْءَ إِلَيْنَا حَلُمْنَا، فَيُقَالُ لَهُمْ: أُدْخُلُوا الْجَنَّةَ فَنِعْمَ أَجْرُ الْعَامِلِيْن

ಅಲ್ಲಾಹನು ಸೃಷ್ಟಿಗಳನ್ನೆಲ್ಲ ಒಟ್ಟು ಸೇರಿಸುವ ಒಂದು ದಿನ ಒಬ್ಬ ಕೂಗುವವನು 'ಎಲ್ಲಿದ್ದಾರೆ ಗೌರವಾರ್ಹ ವ್ಯಕ್ತಿಗಳು' ಎಂದು ಕರೆ ನೀಡುವನು. ಆಗ ಕೆಲವು ವ್ಯಕ್ತಿಗಳು ಮುಂದಕ್ಕೆ ಬರುವರು. ವೇಗವಾಗಿ ಸ್ವರ್ಗದೊಳಗೆ ಪ್ರವೇಶಿಸುವರು. ದೇವಚರರು ಅವರನ್ನು ಭೇಟಿಯಾಗಿ, 'ನೀವು ಯಾರು? ಬಹಳ ವೇಗವಾಗಿ ನೀವೆಲ್ಲರೂ ಸ್ವರ್ಗವನ್ನು ಪ್ರವೇಶಿಸುತ್ತಿರುವುದನ್ನು ನಾವು ನೋಡುತ್ತಿದ್ದೇವೆ' ಎಂದು ವಿಚಾರಿಸುವರು. ಆಗ ಅವರು, 'ನಾವು ವಿಶೇಷ ವ್ಯಕ್ತಿಗಳು' ಎಂದು ಉತ್ತರಿಸುವರು. ದೇವಚರರು, 'ನಿಮ್ಮ ವಿಶೇಷತೆಯೇನು?' ಎಂದು ಪ್ರಶ್ನಿಸುವರು. 'ಜನರು ನಮ್ಮ ಮೇಲೆ ಅಕ್ರಮ ವೆಸಗಿದಾಗ ನಾವು ಅವರನ್ನು ಕ್ಷಮಿಸಿದೆವು. ಜನರು ನಮ್ಮೊಂದಿಗೆ ಅವಿವೇಕತನದಿಂದ ವರ್ತಿಸಿದಾಗ ನಾವು ವಿವೇಕದೊಂದಿಗೆ ವ್ಯವಹರಿಸಿದೆವು' ಎಂದು ಅವರು ಉತ್ತರಿಸುವರು. ಆಗ ಅವರೊಂದಿಗೆ, 'ನೀವು ಸ್ವರ್ಗದೊಳಕ್ಕೆ ಹೋಗಿರಿ. ಹೀಗೆ ವರ್ತಿಸುವವರಿಗೆ ಇರುವ ಪ್ರತಿಫಲ ಎಷ್ಟು ಉತ್ತಮವಿರುವುದು' ಎಂದು ಹೇಳಲಾಗುವುದು.[5]

ಈ ಮೇಲಿನ ಪ್ರವಾದಿವಚನದಲ್ಲಿ ಕ್ಷಮಿಸುವವರನ್ನು ಹುತಾತ್ಮರ ಜೊತೆಗೇ ಪರಿಗಣಿಸಲಾಗಿದೆ ಎಂಬುದು ಬಹಳ ಗಮನಾರ್ಹ ವಿಷಯವಾಗಿದೆ. ಹುತಾತ್ಮತೆ ಮತ್ತು ಕ್ಷಮಾಗುಣಕ್ಕೆ ಬಹಳ ಸೂಕ್ಷ್ಮವಾದ ಕೆಲವು ಸಾಮ್ಯತೆಗಳಿರುವುದರಿಂದಾಗಿ ಹೀಗೆ ಮಾಡಲಾಗಿದೆ. ಹುತಾತ್ಮ ವ್ಯಕ್ತಿ ಶತ್ರುಗಳ ವಿರುದ್ಧ ಆಯುಧಗಳನ್ನು ಎತ್ತುವಾಗ,

ಕ್ಷಮಾಗುಣ ವಿರುವವನು ತನ್ನ ಒಳಗಿನ ಕೋಪಾಗ್ನಿಯ ಬೆಂಕಿಯ ವಿರುದ್ಧ ಆಯುಧ ನೆತ್ತುತ್ತಾನೆ. ಹುತಾತ್ಮನು ಜೀವತ್ಯಾಗ ಮಾಡಲು ಸಿದ್ಧನಾಗುವಾಗ, ಕ್ಷಮಾಗುಣ ಇರುವವನು ಇತರ ರೊಂದಿಗಿರುವ ದ್ವೇಷ, ವೈರತ್ವ ಮತ್ತು ಹಗೆತನವನ್ನು ತ್ಯಜಿಸಲು ಸಿದ್ಧನಾಗುತ್ತಾನೆ. ಯೋಧನು ಶತ್ರುವನ್ನು ಸೋಲಿಸುತ್ತಾನಾದರೆ, ಕ್ಷಮಿಸುವವನು ಸ್ವತಃ ತನ್ನನ್ನೇ ಶರಣಾಗಿಸು ತ್ತಾನೆ. ಹುತಾತ್ಮರಂತೆಯೇ ಕ್ಷಮಾಗುಣವಿರುವ ವ್ಯಕ್ತಿ ಗಳನ್ನೂ ವಿಚಾರಣೆಯಿಲ್ಲದೆ ಸ್ವರ್ಗಕ್ಕೆ ಕಳುಹಿಸಲಿಕ್ಕಿರುವ ಕಾರಣ, ಇವರೀರ್ವರಲ್ಲಿರುವ ಈ ಸಮಾನ ಗುಣಗಳೇ ಆಗಿರುತ್ತವೆ. ಪ್ರವಾದಿವರ್ಯರು(ಸ) ಹೀಗೆ ಹೇಳಿರುವರು: إِرْحَمُوا تُرْحَمُوا وَاغْفِرُوا يُغْفَرْ لَكُمْ 'ನೀವು ಜನರೊಂದಿಗೆ ಕರುಣೆ ತೋರಿಸಿ. ಹಾಗಿದ್ದಲ್ಲಿ ಅಲ್ಲಾಹನೂ ನಿಮ್ಮ ಮೇಲೆ ಕರುಣೆ ತೋರಿಸುವನು. ನೀವು ಇತರರನ್ನು ಕ್ಷಮಿಸಿ ಬಿಡಿರಿ. ಹಾಗಾದರೆ ಅಲ್ಲಾಹನು ನಿಮ್ಮನ್ನು ಕ್ಷಮಿಸುವನು.'[6]

---

1. ತಿರ್ಮಿದಿ: 1661, ಬುಖಾರಿ: 2817, ಮುಸ್ಲಿಮ್: 109, 1877.
2. ಅಹ್ಮದ್: 4/131, ಇಬ್ನುಮಾಜ: 2799, ತಿರ್ಮಿದಿ: 1663, ತಬ್ರಾನಿ, ಬಸ್ಸಾರ್.
3. ಬುಖಾರಿ: 2803, ಮುಸ್ಲಿಮ್: 1876, ತಿರ್ಮಿದಿ: 1656.
4. ಬುಖಾರಿ: 3477, ಮುಸ್ಲಿಮ್: 1792.
5. ಅಸ್ಬಹಾನಿ ತರ್ಗೀಬ್: 2374.
6. ಅಹ್ಮದ್: 2/165, 219, ತಬ್ರಾನಿ.

52. ಲಜ್ಜೆಯ ಪಾಠಗಳು

عَنْ عَبْدِ اللّٰهِ بْنُ مَسْعُوْدٍ رَضِيَ اللّٰهُ عَنْهُ، قَالَ: قَالَ رَسُوْلُ اللّٰهِ ﷺ: "إِسْتَحْيُوْا مِنَ اللّٰهِ حَقَّ الْحَيَاءِ" قُلْنَا: يَا نَبِيَّ اللّٰهِ، إِنَّا لَنَسْتَحْيِيْ وَالْحَمْدُ لِلّٰهِ، قَالَ: "لَيْسَ ذَاكَ، وَلٰكِنِ الْإِسْتِحْيَاءُ مِنَ اللّٰهِ حَقَّ الْحَيَاءِ: أَنْ تَحْفَظَ الرَّأْسَ وَمَا وَعَى، وَتَحْفَظَ الْبَطْنَ وَمَا حَوَى، وَلْتَذْكُرِ الْمَوْتَ وَالْبِلَى، وَمَنْ أَرَادَ الْآخِرَةَ تَرَكَ زِيْنَةَ الدُّنْيَا، فَمَنْ فَعَلَ ذٰلِكَ فَقَدِ اسْتَحْيَا مِنَ اللّٰهِ حَقَّ الْحَيَاءِ"

ಅಬ್ದುಲ್ಲಾ ಬಿನ್ ಮಸ್‌ಊದ್(ರ)ರಿಂದ ವರದಿ. ಪ್ರವಾದಿ(ಸ) ಹೇಳಿರುವರು: ಅಲ್ಲಾಹನ ಮುಂದೆ ಯಾವ ರೀತಿಯಲ್ಲಿ ಲಜ್ಜಿತರಾಗಬೇಕೋ ಆ ರೀತಿಯಲ್ಲಿ ನೀವು ಲಜ್ಜಿತರಾಗಿರಿ. ನಾವು ಕೇಳಿದೆವು: ಅಲ್ಲಾಹನ ಸಂದೇಶ ವಾಹಕರೇ! ಅಲ್ಲಾಹನಿಗೆ ಸ್ತುತಿ. ನಾವು ಲಜ್ಜೆಯುಳ್ಳವರಲ್ಲವೇ? ಪ್ರವಾದಿಯವರು(ಸ) ಹೇಳಿದರು: ಹಾಗಲ್ಲ, ಅಲ್ಲಾಹನ ಮುಂದೆ ಸರಿಯಾಗಿ ಲಜ್ಜೆಯನ್ನು ಪ್ರಕಟಿಸುವ ಕುರಿತು ನಾನು ನಿಮ್ಮನ್ನು ಉಪದೇಶಿಸುತ್ತಿದ್ದೇನೆ. ನಿಮ್ಮ ಮನಸ್ಸು ಮತ್ತು ಮನಸ್ಸಿನೊಳಗಿರುವುದನ್ನು, ನಿಮ್ಮ ಹೊಟ್ಟೆ ಮತ್ತು ಹೊಟ್ಟೆಯೊಳಗಿರುವುದನ್ನು ನೀವು ಬಹಳ ಎಚ್ಚರಿಕೆಯಿಂದ ನಿರ್ವಹಿಸಬೇಕು. ಮರಣ ಮತ್ತು ನಾಶ ಹೊಂದುವ ಬಗ್ಗೆ ಸದಾ ನೆನಪಿಸುತ್ತಿರಬೇಕು. ಪರಲೋಕವನ್ನು ನಿರೀಕ್ಷಿಸುವವರು ಇಹಲೋಕದ ಆಡಂಬರಗಳನ್ನು ನಿರ್ಲಕ್ಷಿಸುತ್ತಾರೆ. ಹೀಗೆ ಮಾಡುವವರು ಅಲ್ಲಾಹನ ಸನ್ನಿಧಿಯಲ್ಲಿ ಸರಿಯಾದ ರೂಪದಲ್ಲಿ ಲಜ್ಜೆಯನ್ನು ಹೊಂದಿದವರಾಗಿದ್ದಾರೆ.*

'ಲಜ್ಜೆ' ಎಂಬುದು ಮನುಷ್ಯನನ್ನು ನೀಚಕೃತ್ಯಗಳಿಂದ ತಡೆಯುವ ಮತ್ತು

ಉತ್ತಮ ಕೆಲಸಗಳಲ್ಲಿ ವ್ಯಸ್ತರಾಗುವಂತೆ ಮಾಡುವ ಶ್ರೇಷ್ಠಗುಣವಾಗಿದೆ. ಇದು ಇತರ ಜೀವಿಗಳಿಂದ ಮನುಷ್ಯನನ್ನು ಭಿನ್ನವಾಗಿಸುವ ಒಂದು ಗುಣವಾಗಿದೆ. ಲಜ್ಜೆ ಎಂಬುದು ಜನ್ಮದತ್ತವಾಗಿ ಎಲ್ಲರಲ್ಲಿಯೂ ಇರುತ್ತದೆ. ಕೆಡುಕಿನಿಂದ ದೂರ ಉಳಿಯುವ ಮನಸ್ಸು, ಒಳಿತಿನ ಬಗ್ಗೆ ಆಸಕ್ತಿ ಮುಂತಾದವುಗಳು ಲಜ್ಜೆಯ ಕಾರಣದಿಂದ ಉಂಟಾಗುವ ಪರಿಣಾಮಗಳಾಗಿವೆ.

ಲಜ್ಜೆ ಎಂಬುದು ವಿಶ್ವಾಸ ಮತ್ತು ಸದ್ಗುಣಗಳ ಕಾವಲುಗಾರನಂತೆ ಕೆಲಸ ಮಾಡುತ್ತದೆ. ಲಜ್ಜೆ ಇಲ್ಲದವರಿಗೆ ದೇವವಿಶ್ವಾಸವನ್ನು ದೃಢವಾಗಿ ಅಪ್ಪಿಕೊಳ್ಳಲು ಮತ್ತು ನೈತಿಕತೆಯನ್ನು ಪಾಲಿಸಲು ಸಾಧ್ಯವಾಗುವುದಿಲ್ಲ. ಪ್ರವಾದಿ(ಸ) ಹೇಳಿರುವರು:

اَلْحَيَاءُ وَالْإِيمَانُ قُرَنَاءُ جَمِيعًا، فَإِذَا رُفِعَ أَحَدُهُمَا رُفِعَ الْآخَرُ

ಲಜ್ಜೆ ಮತ್ತು ಸತ್ಯವಿಶ್ವಾಸ ಪರಸ್ಪರ ಸಂಬಂಧಿಗಳಾಗಿವೆ. ಆದುದರಿಂದ ಆ ಪೈಕಿ ಒಂದು ನಾಶವಾದರೆ ಇನ್ನೊಂದು ನಾಶ ಹೊಂದುವುದು.[1]

ಲಜ್ಜೆಯ ಅಭಾವದಿಂದ ವ್ಯಕ್ತಿಯ ನೈತಿಕತೆಯು ಹೇಗೆ ನಾಶ ಹೊಂದುತ್ತದೆ ಎಂಬುದನ್ನು ಇಬ್ನು ಉಮರ್(ರ) ವರದಿ ಮಾಡಿರುವ ಪ್ರವಾದಿವಚನದಿಂದ ತಿಳಿಯ ಬಹುದು. ಅದು ಹೀಗಿದೆ:

إِنَّ اللّٰهَ عَزَّوَجَلَّ إِذَا أَرَادَ أَنْ يُهْلِكَ عَبْدًا نَزَعَ مِنْهُ الْحَيَاءَ، فَإِذَا نُزِعَ مِنْهُ الْحَيَاءُ لَمْ تَلْقَهُ إِلَّا مَقِيتًا مُمَقَّتًا، فَإِذَا لَمْ تَلْقَهُ إِلَّا مَقِيتًا مُمَقَّتًا نُزِعَتْ مِنْهُ الْأَمَانَةُ، فَإِذَا نُزِعَتْ مِنْهُ الْأَمَانَةُ لَمْ تَلْقَهُ إِلَّا خَائِنًا مُخَوَّنًا، فَإِذَا لَمْ تَلْقَهُ إِلَّا خَائِنًا مُخَوَّنًا نُزِعَتْ مِنْهُ الرَّحْمَةُ، فَإِذَا نُزِعَتْ مِنْهُ الرَّحْمَةُ لَمْ تَلْقَهُ إِلَّا رَجِيمًا مُلَعَّنًا، فَإِذَا لَمْ تَلْقَهُ إِلَّا رَجِيمًا مُلَعَّنًا نُزِعَتْ مِنْهُ رِبْقَةُ الْإِسْلَامِ

'ಅಲ್ಲಾಹನು ಒಬ್ಬ ದಾಸನನ್ನು ಇಷ್ಟಪಡದಿದ್ದರೆ, ಅವನಲ್ಲಿ ಲಜ್ಜೆಯು ಇಲ್ಲವಾಗುವುದು. ಲಜ್ಜೆಯು ಹೊರಟು ಹೋದರೆ ಆ ಬಳಿಕ ಅಂತಹ ವ್ಯಕ್ತಿಯನ್ನು ದ್ವೇಷಿಸುವವನು ಮತ್ತು ದ್ವೇಷಿಸಲ್ಪಡುವವನಾಗಿ ಹೊರತು ನೋಡಲು ಸಾಧ್ಯವಿಲ್ಲ. ಓರ್ವ

* ಇಮಾಮ್ ತಿರ್ಮಿದಿ: 2458, ಅಹ್ಮದ್: 1/387, ಬೈಹಕಿ – ಶುಅ್‌ಬುಲ್ ಈಮಾನ್: 7730, ಹಾಕಿಮ್: 4/323, ತಬ್ರಾನಿ – ಕಬೀರ್: 2/246, ಖರಾಯಿತಿ ಮಖಾರಿಮುಲ್ ಅಖ್ಲಾಕ್: 90 ಮುಂತಾದವರು ಈ ಹದೀಸನ್ನು ಉಲ್ಲೇಖಿಸಿದ್ದಾರೆ. ಇದರ ವರದಿ ಪರಂಪರೆಯು ಪ್ರಬಲವಾಗಿದೆ ಎಂದು ಪ್ರಮುಖ ಹದೀಸ್ ವಿದ್ವಾಂಸರಾದ ನಾಸಿರುದ್ದೀನ್ ಅಲ್‌ಬಾನಿ ಸಾಕ್ಷ್ಯ ನುಡಿಯುತ್ತಾರೆ. (ಸಹೀಹುಲ್ ಜಾಮಿಉಸ್ಸಗೀರ್ – ಹದೀಸ್ ಸಂಖ್ಯೆ: 935)

ವ್ಯಕ್ತಿ ದ್ವೇಷಿಸುವವನು ಮತ್ತು ದ್ವೇಷಿಸಲ್ಪಡುವವನಾಗಿ ಮಾರ್ಪಟ್ಟರೆ, ಅವನಿಂದ ಜವಾಬ್ದಾರಿಕೆಯ ಪ್ರಜ್ಞೆಯು ಹೊರಟು ಹೋಗುವುದು. ಜವಾಬ್ದಾರಿಕೆಯ ಪ್ರಜ್ಞೆಯು ಇಲ್ಲವಾಗಿಬಿಟ್ಟರೆ, ಅವನು ವಂಚಿಸುವವನು ಮತ್ತು ವಂಚಿಸಲ್ಪಡುವವನಾಗಿ ಬಿಡುವನು. ವಂಚಿಸುವವನು ಮತ್ತು ವಂಚಿಸಲ್ಪಡುವವನಾಗಿ ಮಾರ್ಪಟ್ಟರೆ, ಅಂತಹ ವ್ಯಕ್ತಿಯಲ್ಲಿ ಕಾರುಣ್ಯವು ನಷ್ಟ ಹೊಂದುವುದು. ಕರುಣೆಯು ನಷ್ಟವಾಗಿ ಬಿಡುವುದರೊಂದಿಗೆ ಶಪಿಸಲ್ಪಡುವವನಾಗಿ ಮಾರ್ಪಡುವನು. ಶಪಿಸಲ್ಪಟ್ಟವನಾಗಿ ಬಿಟ್ಟಾಗ, ಇಸ್ಲಾಮಿನ ಪಾಶವು ಅವನ ಕೊರಳಿನಿಂದ ಕಳಚಿ ಹೋಗುವುದು.'[2]

ದಾರವು ತುಂಡಾಗಿ ಬಿಟ್ಟರೆ ಮುತ್ತುಗಳೆಲ್ಲವೂ ಚದುರಿ ಹೋಗುವಂತೆ, ಲಜ್ಜೆಯು ಕಳೆದು ಹೋದರೆ ವ್ಯಕ್ತಿಯ ಒಳಿತುಗಳೆಲ್ಲವೂ ಛಿದ್ರವಾಗಿಬಿಡುವುದು. ಕೆಟ್ಟ ಕೆಲಸಗಳನ್ನು ಮಾಡುವಾಗ ಉಂಟಾಗುವ ಅರೋಚಕತೆಯು ಇದರಿಂದ ಇಲ್ಲವಾಗಿ ಬಿಡುವುದು. ಪ್ರವಾದಿ(ಸ) ಹೇಳಿರುವರು:

إِنَّ مِمَّا أَدْرَكَ النَّاسُ مِنْ كَلَامِ النُّبُوَّةِ الْأُوْلَى: إِذَا لَمْ تَسْتَحِ فَاصْنَعْ مَا شِئْتَ

'ನಿಮ್ಮಲ್ಲಿ ಲಜ್ಜೆ ಇಲ್ಲದೆ ಹೋದಾಗ ನಿಮಗಿಷ್ಟ ಬಂದಂತೆ ಮಾಡಿರಿ ಎಂಬುದು ಗತ ಪ್ರವಾದಿಗಳಿಂದ ಜನರಿಗೆ ದೊರೆತ ಬೋಧನೆಗಳ ಪೈಕಿ ಒಂದಾಗಿದೆ.'[3]

ವಾಸ್ತವದಲ್ಲಿ ಲಜ್ಜೆ ಎಂದರೇನು ಎಂಬುದನ್ನು ಪ್ರಥಮ ಹದೀಸ್ ಸ್ಪಷ್ಟಪಡಿಸುತ್ತದೆ. ಹಲವರು ತಪ್ಪಾಗಿ ತಿಳಿದಿರುವಂತೆ, ಜನರಿಂದ ದೂರ ಉಳಿದು ಯಾವುದಾದರೂ ಏಕಾಂತದಲ್ಲಿ ಒಬ್ಬಂಟಿಗನಾಗಿ, ನಾಚಿಕೆಯ ಮುದ್ದೆಯಾಗಿ ಉಳಿಯುವುದರ ಹೆಸರಲ್ಲ. ಬದಲಾಗಿ ಲಜ್ಜೆ ಎಂಬುದು ಜೀವನದ ಎಲ್ಲ ವಿಷಯಗಳನ್ನೂ ಒಳಗೊಂಡ, ಜೀವನದಷ್ಟೇ ವಿಶಾಲವಾದ ಮಹತ್ವವುಳ್ಳ ಒಂದು ಸ್ವಭಾವ ವಿಶೇಷತೆಯಾಗಿದೆ. ದೇಹ ಮತ್ತು ಅದರ ಸರ್ವ ಅಂಗಾಂಗಗಳನ್ನು ಎಲ್ಲ ರೀತಿಯ ಕೆಡುಕುಗಳಿಂದಾಗಿ ತಡೆದು ನಿಲ್ಲಿಸಲು ಈ ಸ್ವಭಾವಕ್ಕೆ ಸಾಧ್ಯವಾಗಬೇಕು. ಮನಸಾ ವಾಚಾ ಕರ್ಮಣಾ ಅಲ್ಲಾಹನ ಆಜ್ಞೆಗಳಿಗೆ ವಿರುದ್ಧವಾಗಿ ಯಾವುದೇ ಕೆಲಸವನ್ನು ಮಾಡದೆ, ಮರಣದ ಬಗ್ಗೆ ಮತ್ತು ಪರಲೋಕದ ಬಗ್ಗೆ ಗಾಢವಾಗಿ ಚಿಂತನೆ ನಡೆಸುತ್ತಾ ಜೀವನವನ್ನು ಕ್ರಮಬದ್ಧಗೊಳಿಸಲು ಈ ಲಜ್ಜೆಯ ಸ್ವಭಾವವು ಪ್ರೇರಕವಾಗಿ ಮಾರ್ಪಡಬೇಕು. ಇದುವೇ ಸರಿಯಾದ ಅರ್ಥದಲ್ಲಿ ಇಸ್ಲಾಮ್ ಬಯಸುವ ಲಜ್ಜೆಯಾಗಿದೆ.

'ತಲೆ ಮತ್ತು ಅದು ಒಳಗೊಂಡಿರುವುದನ್ನು ಸಂರಕ್ಷಿಸಿಕೊಳ್ಳಿ' ಎಂದು ಹೇಳಿರುವುದರ ಅರ್ಥ ಕಣ್ಣು, ಕಿವಿಯಿಂದ ಆರಂಭಿಸಿ ಎಲ್ಲ ವಿಚಾರ-ವಿಕಾರಗಳ ಬಗ್ಗೆ, ಎಲ್ಲ

ವಿಷಯಗಳಲ್ಲೂ ದೇವನ ಆಜ್ಞೆಗೆ ವಿಧೇಯವಾಗಿಸಿಕೊಳ್ಳುವುದು ಎಂದಾಗಿದೆ. ತಲೆ ಎಂಬುದು ಶರೀರದ ಪ್ರಮುಖ ಅಂಗವಾಗಿದೆಯಲ್ಲವೇ? ಪಂಚೇಂದ್ರಿಯಗಳ ಪೈಕಿ ನಾಲ್ಕು ಕೂಡ ಇದರಲ್ಲೇ ಅಡಕವಾಗಿದೆ. ಅವುಗಳನ್ನು ಸಂಪೂರ್ಣವಾಗಿ ದೇವನ ಮಾರ್ಗದಲ್ಲಿ ತಡೆದು ನಿಲ್ಲಿಸಲು ಮತ್ತು ಕೆಡುಕುಗಳಿಂದ ದೂರ ಉಳಿಯಲು ಲಜ್ಜೆಯ ಗುಣದಿಂದ ಸಾಧ್ಯವಾಗುತ್ತದೆ.

ಹೊಟ್ಟೆ ಮತ್ತು ಅದು ಒಳಗೊಂಡಿರುವುದನ್ನು ಸಂರಕ್ಷಿಸಿಕೊಳ್ಳಿರಿ ಎಂದರೆ ನಿಷಿದ್ಧ ಆಹಾರಗಳಿಂದ, ನಿಷಿದ್ಧವಾದ ಸಂಪತ್ತಿನಿಂದ ಜಠರವನ್ನು ಸುರಕ್ಷಿತವಾಗಿಟ್ಟುಕೊಳ್ಳಬೇಕು. ಸತ್ಯವಿಶ್ವಾಸಿ ತನ್ನ ಆರ್ಥಿಕ ಜೀವನದಲ್ಲಿ ಕಟ್ಟುನಿಟ್ಟಾಗಿ ಪಾಲಿಸಬೇಕಾದ ಜಾಗರೂಕತೆಯ ಬಗ್ಗೆ ಇದು ಬೆಟ್ಟು ಮಾಡುತ್ತದೆ. ಸಂಕ್ಷಿಪ್ತವಾಗಿ, ಜೀವನದುದ್ದಕ್ಕೂ ಪಾಲಿಸಬೇಕಾದ ನೈತಿಕತೆ ಮತ್ತು ಮೌಲ್ಯಗಳ ಸಮಾಹಾರವೇ ಇಸ್ಲಾಮ್ ಬಯಸುವ ಲಜ್ಜೆ ಎಂಬ ಗುಣ.

اَلْحَيَاءُ شُعْبَةٌ مِنَ الْإِيْمَانِ ಲಜ್ಜೆಯು ಸತ್ಯವಿಶ್ವಾಸದ ಅರ್ಧಾಂಶವಾಗಿದೆ,[4] اَلْحَيَاءُ لَا يَأْتِي إِلَّا بِخَيْرٍ ಲಜ್ಜೆಯು ಒಳಿತನ್ನಲ್ಲದೆ ಬೇರೇನನ್ನೂ ಉಂಟು ಮಾಡುವುದಿಲ್ಲ[5] ಎಂದೆಲ್ಲ ಹೇಳುವಾಗ ವಾಸ್ತವದಲ್ಲಿ ಇಸ್ಲಾಮ್ ಬಯಸುವುದು ಇದೇ ಲಜ್ಜೆಯನ್ನಾಗಿದೆ. ಪ್ರವಾದಿಯವರು(ಸ) ಹೇಳುತ್ತಾರೆ: لِكُلِّ دِيْنٍ خُلُقٌ, وَخُلُقُ الْإِسْلَامِ الْحَيَاءُ ಎಲ್ಲ ಧರ್ಮಗಳಿಗೂ ಒಂದು ಸ್ವಭಾವವಿದೆ. ಇಸ್ಲಾಮಿನ ಸ್ವಭಾವವು ಲಜ್ಜೆಯಾಗಿದೆ.[6]

---

1. ಹಾಕಿಮ್: 1/22, ಬೈಹಕಿ - ಶುಅ್‌ಬುಲ್ ಈಮಾನ್: 7726, ತಬ್ರಾನಿ - ಔಸಾತ್.

2. ಇಬ್ನುಮಾಜ: 4054, ಮುಂದಿರಿ: 3898.

3. ಬುಖಾರಿ: 6120.

4. ಬುಖಾರಿ: 9, ಮುಸ್ಲಿಮ್: 35, ಅಬೂದಾವೂದ್: 4676, ತಿರ್ಮಿದಿ: 2614, ನಸಾಈ: 8/110, ಇಬ್ನುಮಾಜ: 57.

5. ಬುಖಾರಿ: 6117, ಮುಸ್ಲಿಮ್; 37.

6. ಇಬ್ನು ಮಾಜ: 4181, ಮಾಲಿಕ್ ಮುಅತ್ತಾ; 2/905.

53. ಪ್ರಾಮಾಣಿಕತೆ ಇಲ್ಲವಾಗುವ ಕಾಲ

عَنْ حُذَيْفَةَ رَضِيَ اللّٰهُ عَنْهُ، قَالَ: حَدَّثَنَا رَسُولُ اللّٰهِ ﷺ: "أَنَّ الأَمَانَةَ نَزَلَتْ فِي جَذْرِ قُلُوبِ الرِّجَالِ، ثُمَّ نَزَلَ الْقُرْآنُ، فَعَلِمُوا مِنَ الْقُرْآنِ وَعَلِمُوا مِنَ السُّنَّةِ" ثُمَّ حَدَّثَنَا عَنْ رَفْعِ لْأَمَانَةِ، فَقَالَ:" يَنَامُ الرَّجُلُ النَّوْمَةَ، فَتُقْبَضُ الْأَمَانَةُ مِنْ قَلْبِهِ، فَيَظَلُّ أَثَرُهَا مِثْلَ الوَكْتِ، ثُمَّ يَنَامُ النَّوْمَةَ، فَتُقْبَضُ الأَمَانَةُ مِنْ قَلْبِهِ، فَيَظَلُّ أَثَرُهَا مِثْلَ الْمَجْلِ، كَجَمْرٍ دَحْرَجْتَهُ عَلَى رِجْلِكَ، فَنَفِطَ، فَتَرَاهُ مُنْتَبِرًا، وَلَيْسَ فِيهِ شَيْءٌ، فَيُصْبِحُ النَّاسُ يَتَبَايَعُونَ، لَا يَكَادُ أَحَدٌ يُؤَدِّي الأَمَانَةَ حَتَّى يُقَالَ: إِنَّ فِي بَنِي فُلَانٍ رَجُلاً أَمِينًا، حَتَّى يُقَالَ لِلرَّجُلِ: مَا أَجْلَدَهُ! مَا أَظْرَفَهُ! مَا أَعْقَلَهُ! وَمَا فِي قَلْبِهِ مِثْقَالُ حَبَّةٍ مِنْ خَرْدَلٍ مِنْ إِيمَانٍ"

ಹುದೈಫಾ(ರ)ರಿಂದ ವರದಿ. ಪ್ರವಾದಿಯವರು(ಸ) ನಮ್ಮೊಂದಿಗೆ ಹೀಗೆ ಹೇಳಿದರು: ಪ್ರಾಮಾಣಿಕತೆ ಮನುಷ್ಯನ ಹೃದಯದ ಅಡಿ ಭಾಗದಲ್ಲಿ ಸ್ಥಾನ ಹೊಂದಿರುವಂತಹದ್ದಾಗಿದೆ. ಆಮೇಲೆ ಪವಿತ್ರ ಕುರ್‌ಆನ್ ಅವತೀರ್ಣ ವಾದ ಬಳಿಕ ಅದರಿಂದ ಮತ್ತು ಪ್ರವಾದಿಚರ್ಯೆಯಿಂದ ಜನರು ಅದನ್ನು ಕಲಿತರು. ಮುಂದುವರಿಯುತ್ತಾ ಪ್ರವಾದಿವರ್ಯರು(ಸ) ನಮ್ಮೊಂದಿಗೆ ಪ್ರಾಮಾಣಿಕತೆಯು ಇಲ್ಲವಾಗುವುದರ ಕುರಿತು ಮಾತನಾಡಿದರು. ಅವರು ಹೇಳಿದರು, 'ಒಬ್ಬ ವ್ಯಕ್ತಿಯು ನಿದ್ರಿಸುತ್ತಿರುವಾಗ ಅವನ ಹೃದಯ ದಿಂದ ಪ್ರಾಮಾಣಿಕತೆಯು ನೀಗಿಸಲ್ಪಡುವುದು. ಬೆಂಕಿಯ ಉರಿಯಿಂದ

ಉಂಟಾಗುವ ಬೊಬ್ಬೆಗಳಿಂದ ಸೃಷ್ಟಿಯಾಗುವ ಕಲೆಗಳಂತೆ ಅದರ ಗುರುತು ಮಾತ್ರ ಬಾಕಿಯುಳಿಯುವುದು. ಅವರು ಪುನಃ ನಿದ್ರಿಸುವಾಗ ಉಳಿದ ಪ್ರಾಮಾಣಿಕತೆಯೂ ತೆಗೆದು ಹಾಕಲ್ಪಡುವುದು. ಆ ಬಳಿಕ ಕಾಲಿನ ಮೇಲೆ ಬೆಂಕಿಯ ಕಿಡಿಯು ಬಿದ್ದು ಉಂಟಾಗುವ ಗಾಯದಂತೆ ಅದು ಬಾಕಿಯುಳಿಯುವುದು. ಅದು ತುಂಬಿಕೊಂಡಿರುವಂತೆ ಕಾಣಿಸುವುದು. ಆದರೆ ಅದರೊಳಗೆ ಏನೂ ಇರುವುದಿಲ್ಲ. ಜನರು ಕ್ರಯ-ವಿಕ್ರಯ ನಡೆಸುತ್ತಿರುವರು. ಯಾರೂ ಪ್ರಾಮಾಣಿಕತೆ ತೋರುವುದಿಲ್ಲ. ಅಂತಹ ಸಂದರ್ಭದಲ್ಲಿ ಜನರು ಆಶ್ಚರ್ಯದಿಂದ ಹೀಗೆ ಹೇಳುವರು- ಇಂತಹ ಒಂದು ಕುಟುಂಬದಲ್ಲಿ ಪ್ರಾಮಾಣಿಕ ವ್ಯಕ್ತಿಯಿದ್ದಾನೆ. ಅವನೆಷ್ಟು ಧೈರ್ಯವಂತ, ವಿವೇಕವಂತ ಮತ್ತು ಬುದ್ಧಿವಂತ. ಆದರೆ ಆ ವ್ಯಕ್ತಿಯ ಹೃದಯದಲ್ಲಿ ಸಾಸಿವೆ ಕಾಳಿನಷ್ಟೂ ಪ್ರಾಮಾಣಿಕತೆ ಇರುವುದಿಲ್ಲ.'*

'ಅಮಾನತ್' ಎಂಬ ಪದಕ್ಕೆ ವಿಶಾಲವಾದ ಅರ್ಥಗಳಿವೆ. ಪ್ರಾಮಾಣಿಕತೆ, ಸತ್ಯಸಂಧತೆ ಎಂಬುದು ಅಮಾನತ್‌ನ ಭಾಷಾರ್ಥಗಳಾಗಿವೆ. ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಗೆ ವಿಶ್ವಾಸದ ಮೇಲೆ ವಹಿಸುವ ಎಲ್ಲ ಹೊಣೆಗಾರಿಕೆಗಳನ್ನು ಅಮಾನತ್ ಎಂದು ಹೇಳುತ್ತೇವೆ. ಅಮಾನತನ್ನು ನೀತಿಯೊಂದಿಗೆ ಪಾಲಿಸಬೇಕು. ವಿಶ್ವಾಸದ್ರೋಹ ಮಾಡಬಾರದು ಎಂದೆಲ್ಲ ಪವಿತ್ರ ಕುರ್‌ಆನ್ ಎಚ್ಚರಿಸುತ್ತದೆ. (ಅಲ್ ಅನ್‌ಫಾಲ್: 27)

ವಿಶ್ವಾಸಿ ಪ್ರಾಮಾಣಿಕನಾಗಿರಬೇಕು ಎಂಬುದು ವಿಶ್ವಾಸದ ಅನಿವಾರ್ಯ ಬೇಡಿಕೆಗಳಲ್ಲೊಂದಾಗಿದೆ. ಈಮಾನ್ (ವಿಶ್ವಾಸ), ಅಮಾನತ್ (ಪ್ರಾಮಾಣಿಕತೆ) ಒಂದೇ ಪದದಿಂದ ಹೊರಟವುಗಳು. ಸತ್ಯವನ್ನು ಅಂಗೀಕರಿಸಿ, ಅದಕ್ಕಾಗಿಯೇ ಜೀವಿಸುವ ವ್ಯಕ್ತಿ ಕಾಪಟ್ಯ ತೋರಲು ಮತ್ತು ವಂಚಿಸಲು ಹೇಗೆ ತಾನೇ ಸಾಧ್ಯ? ವಿಶ್ವಾಸಘಾತಕತನ, ಕಳ್ಳತನ, ಮೋಸ ಮುಂತಾದವುಗಳು ಸತ್ಯವಿಶ್ವಾಸಕ್ಕೆ ತೀರಾ ವಿರುದ್ಧವಾದವುಗಳಾಗಿವೆ ಎಂದು ಪ್ರವಾದಿಯವರು(ಸ) ಕಲಿಸಿರುವರು. ಅನಸ್(ರ) ಹೇಳಿರುವರು:

مَا خَطَبَنَا رَسُولُ اللهِ ﷺ إِلَّا قَالَ: "لَا إِيمَانَ لِمَنْ لَا أَمَانَةَ لَهُ، وَلَا دِينَ لِمَنْ لَا عَهْدَ لَهُ"

ಪ್ರವಾದಿವರ್ಯರು(ಸ) ನಮ್ಮ ಮುಂದೆ ಮಾಡುತ್ತಿದ್ದ ಪ್ರತಿಯೊಂದು ಉಪನ್ಯಾಸದಲ್ಲಿಯೂ ಈ ರೀತಿ ನೆನಪಿಸುತ್ತಿದ್ದರು, 'ತಿಳಿಯಿರಿ. ಪ್ರಾಮಾಣಿಕತೆ ಇಲ್ಲದ ವಿಶ್ವಾಸವಿಲ್ಲ, ವಚನ ಪಾಲಿಸದವನಿಗೆ ಧರ್ಮವಿಲ್ಲ.'[1]

---

* ಇಮಾಮ್ ಬುಖಾರಿ: 7086, ಮುಸ್ಲಿಮ್: 143 ಮುಂತಾದವರು ಉಲ್ಲೇಖಿಸಿರುವ ಪ್ರಬಲ ಹದೀಸ್.

ಪ್ರಾಮಾಣಿಕತೆಯ ಬಗ್ಗೆ ಬಹಳ ಪ್ರಾಮುಖ್ಯವಾದ ವಿಷಯವನ್ನು ಆರಂಭದ ಹದೀಸ್ ಕಲಿಸಿಕೊಡುತ್ತದೆ. ಪ್ರಾಮಾಣಿಕತೆಯೆಂಬುದು ಮನುಷ್ಯನ ಹೃದಯದಲ್ಲಿ ಮೊದಲೇ ಸ್ಥಾನ ಪಡೆದ ಒಂದು ವಿಷಯವಾಗಿದೆ. ಪವಿತ್ರ ಕುರ್‌ಆನ್ ಮತ್ತು ಪ್ರವಾದಿ ಚರ್ಯೆಯಿಂದ ಜನರು ಅದರ ವಾಸ್ತವಿಕ ವಿವರಣೆಗಳನ್ನು ಮನದಟ್ಟು ಮಾಡಿಕೊಳ್ಳುತ್ತಿದ್ದರು. ಪ್ರಾಮಾಣಿಕತೆಯನ್ನು ಒಳಗೊಂಡಂತೆ ಎಲ್ಲ ಸದ್ಗುಣ, ನೈತಿಕ ಮೌಲ್ಯಗಳು ಮನುಷ್ಯ ಪ್ರಕೃತಿಗೆ ಅಪರಿಚಿತವೋ ಅಜ್ಞಾತವೋ ಅಲ್ಲ. ಅವುಗಳು ಮನುಷ್ಯರಿಗೆ ಹೆಚ್ಚು ಪರಿಚಿತವಾದುದು. ಅವನ ಸೃಷ್ಟಿಯಲ್ಲೇ ಇರುವಂತಹ ಒಂದು ಉದಾತ್ತ ಮೌಲ್ಯವಾಗಿದೆ. ಜನರಿಗೆ ತಿಳಿದಿಲ್ಲದಂತಹ ವಿಷಯಗಳನ್ನು ಹೊಸತಾಗಿ ಕಲಿಸಲು ಪ್ರವಾದಿಗಳು ಬಂದುದಲ್ಲ. ಒಳಿತು ಮತ್ತು ಪರಿಶುದ್ಧತೆಯ ಬಗ್ಗೆ ಮನುಷ್ಯನ ನೈಸರ್ಗಿಕ ಪ್ರಕೃತಿಗೆ ಪೂರಕವಾದ ವಿಷಯಗಳನ್ನು ಉದ್ದೀಪನಗೊಳಿಸುವುದು ಮಾತ್ರ ಅವರ ಹೊಣೆಗಾರಿಕೆಯಾಗಿತ್ತು. ಒಳಿತನ್ನು ಸೂಚಿಸಲು 'ಮಅ್‌ರೂಫ್' (ಪರಿಚಿತ) ಎಂಬ ಪದ ಮತ್ತು ಕೆಡುಕನ್ನು ಸೂಚಿಸಲು 'ಮುಂಕರ್' (ಅಪರಿಚಿತ) ಎಂಬ ಪದವನ್ನು ಪವಿತ್ರ ಕುರ್‌ಆನ್ ಬಳಸಿರುವುದು ಈ ಕಾರಣದಿಂದಾಗಿದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಧರ್ಮವು ಜನರಿಂದ ಬಯಸುವ ಎಲ್ಲ ನೈತಿಕ ಮೌಲ್ಯಗಳು ಮನುಷ್ಯನ ಪ್ರಕೃತಿ ಸ್ವಯಂ ಬಯಸುವಂತಹವುಗಳಾಗಿವೆ. ಪ್ರಕೃತಿಯ ಉದ್ದೇಶವನ್ನು ಧರ್ಮವು ಪೂರ್ತಿಗೊಳಿಸುತ್ತದೆ ಎಂಬುದು ಇದರಿಂದ ಮನವರಿಕೆಯಾಗುತ್ತದೆ.

ಹದೀಸಿನ ಎರಡನೆಯ ಭಾಗದಲ್ಲಿ ಪ್ರಾಮಾಣಿಕತೆಯು ಕಳೆದು ಹೋಗುವುದರ ಬಗ್ಗೆ ಹೇಳಲಾಗಿದೆ. ಒಂದು ಸ್ವಭಾವವು ವ್ಯಕ್ತಿಯಿಂದ ಒಮ್ಮೆಲೆ ಅಳಿದು ಹೋಗುವುದಿಲ್ಲ. ಕ್ರಮೇಣ ಅದು ಸಂಭವಿಸುತ್ತದೆ. ಕೆಟ್ಟ ಕೆಲಸಗಳು ಸಂಭವಿಸದಿರಲು ಆರಂಭದಲ್ಲಿಯೇ ಜಾಗರೂಕತೆಯನ್ನು ಪಾಲಿಸಬೇಕೆಂದು ಹೇಳಿರುವುದು ಈ ಕಾರಣಕ್ಕಾಗಿದೆ. ಪ್ರಾಮಾಣಿಕತೆಯು ಇದೇ ರೀತಿಯಾಗಿದೆ. ಅದನ್ನು ರಕ್ಷಿಸಲು ಜಾಗರೂಕತೆ ವಹಿಸುವುದಿಲ್ಲ ಎಂದಾದರೆ, ಬಹಳ ವೇಗವಾಗಿ ಅದು ಕೈಬಿಟ್ಟು ಹೋಗುವುದು. ಕೇವಲ ನಿದ್ರಿಸಿ ಎದ್ದೇಳುವಷ್ಟು ಸಮಯ ಮಾತ್ರ ಅದಕ್ಕೆ ಸಾಕಾಗುತ್ತದೆ. ಅಷ್ಟರ ವೇಳೆಗೆ ವ್ಯಕ್ತಿ ಕಪಟಿ ಮತ್ತು ವಿಶ್ವಾಸದ್ರೋಹಿಯಾಗಿ ಮಾರ್ಪಟ್ಟಿರುವನು.

ಪ್ರಾಮಾಣಿಕತೆ ಇಲ್ಲವಾದ ಬಳಿಕ ಹೃದಯದಲ್ಲಿ ಬಾಕಿ ಉಳಿಯುವ ಒಳಿತಿನ ಗುರುತುಗಳನ್ನು ಬೆಂಕಿ ತಾಗಿದ ಬಳಿಕ ಉಂಟಾಗುವ ಗಾಯದ ಕಲೆಗೆ ಪ್ರವಾದಿ(ಸ) ಹೋಲಿಸಿದ್ದಾರೆ. ಹೊರಗೆ ನೋಡುವಾಗ ಅದು ತುಂಬಿಕೊಂಡಂತೆ ಕಂಡರೂ ವಾಸ್ತವದಲ್ಲಿ ಅದರೊಳಗೆ ಏನೂ ಇರುವುದಿಲ್ಲ. ಪ್ರಾಮಾಣಿಕರು ಸತ್ಯವಂತರು ಎಂದು

ಜನರು ಭಾವಿಸಿರುವ ಶ್ರೇಷ್ಠವ್ಯಕ್ತಿಗಳು ಕೂಡ ಹೊರ ಭಾಗದಲ್ಲಿ ತುಂಬಿಕೊಂಡಿರುವ ಬಲೂನುಗಳಂತೆ ಕಪಟಿಗಳಾಗಿ ಬಿಡುವರೆಂದು ಹದೀಸ್ ವಿವರಿಸುತ್ತದೆ. ಮೋಸ, ವಂಚನೆ, ಭ್ರಷ್ಟಾಚಾರ ತುಂಬಿ ತುಳುಕುವ ಸಮಾಜದಲ್ಲಿ ಅಲ್ಪವಾದರೂ ಪ್ರಾಮಾಣಿಕತೆ ಯನ್ನು ಕಾಪಾಡಿಕೊಂಡಿರುವ ವ್ಯಕ್ತಿಗಳ ಬಗ್ಗೆ ಜನರು ಅದ್ಭುತವೆಂಬಂತೆ ಮಾತನಾಡು ವರು. ಈ ಕಾಲದಲ್ಲಿ ಇಂತಹ ವ್ಯಕ್ತಿಗಳಿರುವರೋ! ಎಂದು ಅವರು ಉದ್ಗರಿಸುವರು. ಆದರೆ ಯಾರ ಬಗ್ಗೆ ಅವರು ಪ್ರಾಮಾಣಿಕರು ಮತ್ತು ಸತ್ಯ ಸಂಧರು ಎಂದು ಭಾವಿಸಿ ಕೊಂಡಿರುವರೋ ಅವರು ಕೂಡ ವಿಶ್ವಾಸಕ್ಕೆ ಅರ್ಹರೋ, ಸತ್ಯಸಂಧರೋ ಆಗಿರುವು ದಿಲ್ಲ. ಪ್ರವಾದಿವರ್ಯರು(ಸ) ಹೀಗೆ ಹೇಳಿರುವರು:

خَيْرُكُمْ قَرْنِي، ثُمَّ الَّذِيْنَ يَلُوْنَهُمْ، ثُمَّ يَكُوْنُ بُعْدَهُمْ قَوْمٌ يَشْهَدُوْنَ، وَلَايُسْتَشْهَدُوْنَ، وَيَخُوْنُوْنَ وَلَا يُؤْتَمَنُوْنَ، وَيَنْذِرُوْنَ وَلَا يُوْفُوْنَ، وَيَظْهَرُ فِيْهِ السِّمَنِ.

'ನಿಮ್ಮ ಪೈಕಿ ಅತ್ಯುತ್ತಮರು ನನ್ನ ಕಾಲದಲ್ಲಿರುವವರಾಗಿದ್ದಾರೆ. ಆ ಬಳಿಕ ಅದರ ನಂತರ ಬರುವವರು. ಅವರು ಸಾಕ್ಷಿ ಹೇಳುವರು. ಆದರೆ ಯಾರೂ ಅವರಿಂದ ಸಾಕ್ಷ್ಯ ವನ್ನು ಬಯಸುವುದಿಲ್ಲ. ಅವರು ವಂಚಿಸುವರು, ವಚನ ಪಾಲಿಸಲಾರರು, ಪ್ರತಿಜ್ಞೆ ಯನ್ನು ಮಾಡಿದರೂ ಅದನ್ನು ಪೂರ್ತಿಗೊಳಿಸುವುದಿಲ್ಲ. ನೋಡಲು ಅವರು ಯೋಗ್ಯ ವ್ಯಕ್ತಿಗಳಂತೆ ಕಂಡು ಬರುವರು.'[2]

ಪ್ರಾಮಾಣಿಕತೆಯು ಅತಿ ಹೆಚ್ಚು ಪ್ರಕಟವಾಗುವುದು ಮನುಷ್ಯರ ಪರಸ್ಪರ ಆರ್ಥಿಕ ವ್ಯವಹಾರದಲ್ಲಿ. ಆದರಲ್ಲಿ ಮೋಸ ಮಾಡುವುದು ಬಹಳ ಗಂಭೀರವಾದ ಅಪರಾಧವಾಗಿದೆ. ಅಬ್ದುಲ್ಲಾ ಬಿನ್ ಮಸ್ಊದ್(ರ) ಹೇಳಿರುವರು:

اَلْقَتْلُ فِيْ سَبِيْلِ اللّٰهِ يُكَفِّرُ الذُّنُوْبَ كُلَّهَا إِلَّا الأَمَانَةَ، يُؤْتَى الْعَبْدُ يَوْمَ الْقِيَامَةِ وَإِنْ قُتِلَ فِيْ سَبِيْلِ اللّٰهِ، فَيُقَالُ: أَدِّ أَمَانَتَكَ، فَيَقُوْلُ أَيْ رَبِّي، كَيْفَ وَقَدْ ذَهَبَتْ الدُّنْيَا؟ فَيُقَالُ: انْطَلِقُوْا بِهِ إِلَى الْهَاوِيَةِ، فَيَنْطَلِقُ بِهِ إِلَى الْهَاوِيَةِ، وَتُمَثَّلُ لَهُ أَمَانَتُهُ كَهَيْئَتِهَا يَوْمَ دُفِعَتْ إِلَيْهِ، فَيَرَاهَا فَيَعْرِفُهَا، وَيَهْوِيْ فِيْ أَثَرِهَا حَتَّى يُدْرِكَهَا، فَيَحْمِلُهَا عَلَى مَنْكِبَيْهِ، حَتَّى إِذَا ظَنَّ أَنَّهُ خَارِجٌ زَلَّتْ عَنْ مَنْكِبَيْهِ، فَهُوَ يَهْوِيْ فِيْ أَثَرِهَا أَبَدَ الآبِدِيْنَ، ثُمَّ قَالَ: الصَّلَاةُ أَمَانَةٌ، وَالْوَضُوْءُ أَمَانَةٌ، وَالْوَزْنُ أَمَانَةٌ، وَالْكَيْلُ أَمَانَةٌ، وَأَشْيَاءُ عَدَّدَهَا، وَأَشَدُّ ذٰلِكَ الْوَدَائِعُ

ಅಪ್ರಮಾಣಿಕತೆಯ ವ್ಯವಹಾರವನ್ನು ಹೊರತು ಪಡಿಸಿ, ದೇವಮಾರ್ಗದಲ್ಲಿ

ಹುತಾತ್ಮರಾದವರ ಎಲ್ಲ ಪಾಪಗಳು ಕ್ಷಮಿಸಲ್ಪಡುವುದು. ಅಂತ್ಯದಿನದಂದು ಆ ರೀತಿಯ ಒಬ್ಬ ವ್ಯಕ್ತಿ ಕಾಣಿಸಿಕೊಳ್ಳುವನು. ಅವನು ದೇವನ ಮಾರ್ಗದಲ್ಲಿ ಕೊಲ್ಲಲ್ಪಟ್ಟವನಾಗಿರುವನು. ಅವನೊಂದಿಗೆ ಪ್ರಾಮಾಣಿಕತೆಯನ್ನು ಪಾಲಿಸಿ ಪೂರ್ತಿಗೊಳಿಸಲು ಅಲ್ಲಾಹನು ಆಜ್ಞಾಪಿಸುವನು. ಆ ವ್ಯಕ್ತಿ ಹೇಳುವನು, 'ದೇವನೇ, ಇಹಲೋಕ ಜೀವನ ಕೊನೆಗೊಂಡಿತಲ್ಲವೇ? ಇನ್ನು ನಾನು ಅದನ್ನು ಹೇಗೆ ಪೂರ್ತಿಗೊಳಿಸಲಿ?' ಆಗ ನರಕಕ್ಕೆ ಕೊಂಡೊಯ್ಯಲು ಆದೇಶಿಸಲಾಗುವುದು. ಇಹಲೋಕದಲ್ಲಿ ಜನರು ತನ್ನ ಮೇಲೆ ನಂಬಿಕೆಯಿರಿಸಿ ನೀಡಿದ ಎಲ್ಲ ಸಂಪತ್ತನ್ನು ನರಕದಲ್ಲಿ ಅದೇ ರೂಪದಲ್ಲಿ ಅವನು ಕಾಣುವನು. ಸುರಕ್ಷಿತನಾಗಿಬಿಟ್ಟೆ ಎಂದು ಭಾವಿಸಿ ಅವುಗಳನ್ನೆಲ್ಲ ಸಂಗ್ರಹಿಸಿ ನರಕದಿಂದ ಹೊರ ಬರಲು ಶ್ರಮಿಸುವನು. ಆದರೆ ಅವುಗಳು ಅವನ ಬಾಹುಗಳಿಂದ ಬಿದ್ದು ಬಿಡುವುದು. ಪುನಃ ಅವನು ಅದನ್ನು ಎತ್ತಿಕೊಳ್ಳಲು ಶ್ರಮಿಸುವನು. ಆಗಲೂ ಅದು ಕೆಳಗೆ ಬೀಳುವುದು. ಹೀಗೆ ಆ ವ್ಯಕ್ತಿ ಶಾಶ್ವತವಾಗಿ ನರಕದಲ್ಲಿ ವಾಸವಾಗಿರಬೇಕಾಗಿ ಬರುವುದು. ಇಬ್ನು ಮಸ್‌ಊದ್(ರ) ಮುಂದುವರಿಸುತ್ತಾರೆ: ತಿಳಿದಿರಲಿ. ಎಲ್ಲವೂ ಅಮಾನತ್ ಆಗಿದೆ. ನಮಾಝ್ ಅಮಾನತ್ ಆಗಿದೆ. ವುಝೂ ಅಮಾನತ್ ಆಗಿದೆ. ಅಳತೆ-ತೂಕವು ಅಮಾನತ್ ಆಗಿದೆ. ಬಹಳ ಪ್ರಾಮುಖ್ಯವಾದ ಅಮಾನತ್ ಜನರು ನಂಬಿಕೆಯಿರಿಸಿ ನೀಡಿದ ಸಂಪತ್ತಾಗಿದೆ.[3]

ಅಮಾನತನ್ನು (ವಿಶ್ವಸ್ಥತೆಯನ್ನು) ಪಾಲಿಸಲಿಲ್ಲವೆಂಬ ಕಾರಣಕ್ಕೆ ಹುತಾತ್ಮರ ಗತಿ ಹೀಗಾಗುವುದಿದ್ದರೆ, ಇತರರ ಅವಸ್ಥೆ ಏನಾಗಿರಬಹುದು? ಪ್ರವಾದಿ(ಸ) ಹೇಳಿದರು:

لِكُلِّ غَادِرٍ لِوَاءٌ يَوْمَ الْقِيَامَةِ، يُرْفَعُ بِقَدْرِ غَدْرِهِ، أَلَا وَلَا غَادِرَ أَعْظَمُ غَدْرًا مِنْ أَمِيرِ عَامَّةٍ.

'ಎಲ್ಲ ವಂಚಕರಿಗೂ ಅಂತ್ಯದಿನದಂದು ಒಂದೊಂದು ಧ್ವಜವನ್ನು ನೀಡಲಾಗುವುದು. ವಂಚನೆಯ ಪ್ರಮಾಣಕ್ಕೆ ಅನುಸಾರ ಅದರ ಎತ್ತರವಿರುವುದು. ತಿಳಿದಿರಲಿ, ನಾಯಕನ ವಂಚನೆಗಿಂತ ಕೆಟ್ಟದಾದ ಅಪ್ರಮಾಣಿಕತೆ ಬೇರೊಂದಿಲ್ಲ.'[4]

---

1. ಅಹ್ಮದ್: 3/135, ಬಸ್ಸಾರ್: 1000, ತಬ್ರಾನಿ – ಔಸಾತ್.
2. ಬುಖಾರಿ: 6428, ಮುಸ್ಲಿಮ್: 2535.
3. ಬೈಹಕಿ – ಶುಅಬುಲ್ ಈಮಾನ್: 5266, ಅಹ್ಮದ್.
4. ಬುಖಾರಿ: 3188, ಮುಸ್ಲಿಮ್: 1738.

54. ಜ್ಯೋತಿಷಿಗಳನ್ನು ಭೇಟಿಯಾಗುವವರು

عَنْ صَفِيَّةَ، عَنْ بَعْضِ أَزْوَاجِ النَّبِيِّ ﷺ، عَنِ النَّبِيِّ ﷺ قَالَ: مَنْ أَتَى عَرَّافًا فَسَأَلَهُ عَنْ شَيْئٍ لَمْ تُقْبَلْ لَهُ صَلاَةُ أَرْبَعِينَ لَيْلَةً

ಸಫಿಯ್ಯ(ರ) ವರದಿ ಮಾಡಿರುತ್ತಾರೆ. ಒಬ್ಬ ವ್ಯಕ್ತಿ ಜ್ಯೋತಿಷಿಯನ್ನು ಭೇಟಿಯಾಗಿ ಯಾವುದಾದರೂ ವಿಷಯದ ಬಗ್ಗೆ ಅವರೊಂದಿಗೆ ಕೇಳಿದರೆ, ಆ ಬಳಿಕ ಆ ವ್ಯಕ್ತಿಯಿಂದ ನಲ್ವತ್ತು ದಿನಗಳ ತನಕ ನಮಾಝುನ್ನು ಅಲ್ಲಾಹ್ ಸ್ವೀಕರಿಸುವುದಿಲ್ಲ.*

ಅದೃಶ್ಯ ಜ್ಞಾನವು ಕೇವಲ ಅಲ್ಲಾಹನಿಗೆ ಮಾತ್ರ ಸೀಮಿತವಾಗಿದೆ. ಸೃಷ್ಟಿಗಳ ಪೈಕಿ ಯಾರಿಗೂ ಅದರಲ್ಲಿ ಯಾವುದೇ ಪಾಲುದಾರಿಕೆಯಿಲ್ಲ. ದೃಶ್ಯ-ಅದೃಶ್ಯಗಳನ್ನು, ರಹಸ್ಯ-ಬಹಿರಂಗಗಳನ್ನು ಒಂದೇ ರೀತಿ ಅರಿಯುವವನು ಅಲ್ಲಾಹನು ಮಾತ್ರ. ಪ್ರವಾದಿಗಳಿಗೆ, ಮಹಾತ್ಮರಿಗೆ, ದೇವಸಾಮಿಪ್ಯ ಲಭ್ಯವಿರುವ ದೇವಚರರಿಗೆ ಯಾರಿಗೂ ಅಲ್ಲಾಹನ ಬಳಿ ಇರುವ ಈ ಜ್ಞಾನ ಮತ್ತು ಸಾಮರ್ಥ್ಯವಿಲ್ಲ. ಪವಿತ್ರ ಕುರ್‌ಆನ್ ಇದನ್ನು ಈ ರೀತಿ ಸ್ಪಷ್ಟಪಡಿಸಿದೆ, 'ಇವರೊಡನೆ ಹೇಳಿರಿ, ಭೂಮಿ-ಆಕಾಶಗಳಲ್ಲಿ ಪರೋಕ್ಷ ಜ್ಞಾನವುಳ್ಳವರು ಅಲ್ಲಾಹನ ಹೊರತು ಯಾರೂ ಇಲ್ಲ.' (ಅನ್ನಮ್ಲ್: 65) 'ಪರೋಕ್ಷದ ಬೀಗದ ಕೈಗಳು ಅವನ ವಶದಲ್ಲೇ ಇವೆ. ಅವುಗಳನ್ನು ಅವನ ಹೊರತು ಇನ್ನಾರೂ ಅರಿಯರು. ನೆಲ-ಜಲಗಳಲ್ಲಿರುವುದೆಲ್ಲವೂ ಅವನು ತಿಳಿದಿರುತ್ತಾನೆ. ಮರದಿಂದ ಉದುರುವ ಒಂದು ಎಲೆಯ ಹಾಗೂ ಭೂಮಿಯ ಅಂಧಕಾರಗಳಲ್ಲಿ ಹುದುಗಿರುವ ಒಂದು ಧಾನ್ಯದ ಬಗೆಗೂ ಅವನಿಗೆ ತಿಳಿಯದೆ ಇಲ್ಲ.' (ಅಲ್ ಅನ್‌ಆಮ್: 59)

ಅಲ್ಲಾಹನಿಗೆ ಇರುವಂತಹ ಜ್ಞಾನ, ಸಾಮರ್ಥ್ಯ ಸೃಷ್ಟಿಗಳಿಗೂ ಇದೆಯೆಂದು

* ಇಮಾಮ್ ಮುಸ್ಲಿಮ್: 2230, ಅಹ್ಮದ್: 4/68 ಮುಂತಾದವರು ಉಲ್ಲೇಖಿಸಿರುವ ಪ್ರಬಲ ಹದೀಸ್.

ವಿಶ್ವಾಸವಿರಿಸುವುದನ್ನು ಇಸ್ಲಾಮ್ ಕಠಿಣವಾಗಿ ನಿಷೇಧಿಸಿದೆ. ಇದು ದೇವಸಹಭಾಗಿತ್ವ (ಶಿರ್ಕ್) ಮತ್ತು ಸತ್ಯನಿಷೇಧ (ಕುಫ್ರ್) ಆಗಿದೆ. ಇದನ್ನು ಧರ್ಮವು ಯಾವುದೇ ರೀತಿಯಲ್ಲಿ ಒಪ್ಪಿಕೊಳ್ಳುವುದಿಲ್ಲ. ಪರೋಕ್ಷ ಜ್ಞಾನವು ಸೃಷ್ಟಿಗಳಿಗೆ ಇದೆಯೆಂದು ನಂಬುವುದು ಅಲ್ಲಾಹನನ್ನು ಮತ್ತು ಸೃಷ್ಟಿಗಳನ್ನು ಸಮೀಕರಿಸುವುದಾಗಿದೆ.

ಸೃಷ್ಟಿಗಳ ಪೈಕಿ ಶ್ರೇಷ್ಠರಾದ ಪ್ರವಾದಿಗಳೊಂದಿಗೂ ಈ ರೀತಿ ಹೇಳುವಂತೆ ಪವಿತ್ರ ಕುರ್‌ಆನ್ ಹೇಳುತ್ತದೆ, 'ಓ ಪೈಗಂಬರರೇ, ಇವರೊಡನೆ ಹೀಗೆ ಹೇಳಿರಿ: ನನ್ನ ಸ್ವಂತ ಹಿತಾಹಿತಗಳ ಅಧಿಕಾರ ನನಗಿಲ್ಲ. ಅಲ್ಲಾಹ್ ಯಾವುದನ್ನು ಇಚ್ಛಿಸುತ್ತಾನೋ ಅದು ಆಗುತ್ತದೆ ಮತ್ತು ನನಗೆ ಪರೋಕ್ಷ ಜ್ಞಾನವಿರುತ್ತಿದ್ದರೆ ನಾನು ಅನೇಕ ಲಾಭಗಳನ್ನು ನನಗಾಗಿ ಒದಗಿಸಿಕೊಳ್ಳುತ್ತಿದ್ದೆ ಮತ್ತು ನನಗೆಂದೂ ಹಾನಿ ತಟ್ಟುತ್ತಿರಲಿಲ್ಲ. ನನ್ನ ಮಾತಿನ ಮೇಲೆ ವಿಶ್ವಾಸವಿರಿಸುವವರಿಗೆ ನಾನು ಕೇವಲ ಎಚ್ಚರಿಕೆ ಕೊಡುವವನೂ ಸುವಾರ್ತೆ ನೀಡುವವನೂ ಆಗಿರುತ್ತೇನೆ.' **(ಅಲ್ ಅಅ್‌ರಾಫ್: 187)**

ಭವಿಷ್ಯದ ವಿಷಯಗಳನ್ನು ತಿಳಿಯಲು, ರೋಗಗಳನ್ನು, ದುರಂತಗಳನ್ನು ಇಲ್ಲವಾಗಿಸಲು ಮತ್ತಿತರ ಉದ್ದೇಶಗಳೊಂದಿಗೆ ಜ್ಯೋತಿಷಿಗಳನ್ನು, ಸಿದ್ಧಿಗಳನ್ನು, ವಲೀಗಳನ್ನು ಭೇಟಿಯಾಗುವವರು ಇಂತಹ ಕೆಲಸಗಳನ್ನು ಮಾಡುವ ಮೂಲಕ ತಮ್ಮ ವಿಶ್ವಾಸ ಮತ್ತು ಕರ್ಮಗಳನ್ನು ಸ್ವತಃ ನಾಶಪಡಿಸಿಕೊಳ್ಳುತ್ತಿರುವರು. ಅಲ್ಲಾಹನ ಮುಂದೆ ಮಾತ್ರ ಸಾಷ್ಟಾಂಗವೆರಗುವ, ಅವನನ್ನು ಮಾತ್ರ ಕರೆದು ಪ್ರಾರ್ಥಿಸುವ ಒಬ್ಬನಿಗೆ ತನ್ನಂತೆಯೇ ದೌರ್ಬಲ್ಯಗಳು ಮತ್ತು ನ್ಯೂನತೆಗಳು ಇರುವ ಇನ್ನೊಂದು ಸೃಷ್ಟಿಯ ಮುಂದೆ ಭಯಭಕ್ತಿಯೊಂದಿಗೆ ತಲೆ ಬಾಗಲು ಮತ್ತು ಸಮಸ್ಯೆಗಳನ್ನು ಹೇಳಿಕೊಳ್ಳಲು ಹೇಗೆ ತಾನೇ ಸಾಧ್ಯ? ಅಲ್ಲಾಹನು ಮಾತ್ರ ಸರ್ವಶ್ರೇಷ್ಠನೆಂದು, ಅಲ್ಲಾಹನಲ್ಲದೆ ಇತರ ಆರಾಧ್ಯರಿಲ್ಲ ವೆಂದು ಪ್ರತಿದಿನ ಹೇಳುತ್ತಿರುವ ಒಬ್ಬ ವ್ಯಕ್ತಿಗೆ ಹೇಗೆ ತಾನೇ ಒಂದು ನಿಮಿಷಕ್ಕಾದರೂ ಇತರರ ದಿವ್ಯತ್ವವನ್ನು ಅಂಗೀಕರಿಸಲು ಸಾಧ್ಯವಾಗುತ್ತದೆ? ಅಥವಾ ಸಾಧ್ಯವಾಗುತ್ತದೆ ಎಂದಾದರೆ ಅದರರ್ಥ ಆ ವ್ಯಕ್ತಿಯ ದೇವನ ಮೇಲಿನ ವಿಶ್ವಾಸ ಕೇವಲ ಒಂದು ಅವಕಾಶವಾದ ಮತ್ತು ಕಾಪಟ್ಯವಾಗಿದೆ. ಅವರು ನಿರ್ವಹಿಸುವ ಆರಾಧನೆಗಳು ಖಂಡಿತ ವಾಗಿಯೂ ನಿಷ್ಫಲವಾಗುತ್ತದೆ.

'ನಲ್ವತ್ತು ದಿನಗಳ ನಮಾಝ್ ಸ್ವೀಕರಿಸಲ್ಪಡುವುದಿಲ್ಲ' ಎಂದು ಹೇಳಿರುವುದರ ಅರ್ಥ ಯಾವ ಕರ್ಮವೂ ಸ್ವೀಕರಿಸಲ್ಪಡುವುದಿಲ್ಲ ಎಂದಾಗಿದೆ. ಕಾರಣವೇನೆಂದರೆ ನಮಾಝ್ ಒಬ್ಬ ವ್ಯಕ್ತಿಯಿಂದ ನಿರ್ವಹಿಸಲ್ಪಡುವ ಪ್ರಥಮ ಆರಾಧನಾ ಕರ್ಮ

ವಾಗಿದೆ. ಅದುವೇ ಸ್ವೀಕರಿಸಲ್ಪಡುವುದಿಲ್ಲವೆಂದಾದರೆ ಬೇರೆ ಯಾವ ಕರ್ಮವೂ ಸ್ವೀಕರಿಸಲ್ಪಡುವುದಿಲ್ಲ. ಇನ್ನೊಂದರ್ಥದಲ್ಲಿ ಇಸ್ಲಾಮಿನ ಪರಿಧಿಯೊಳಗೆ ಒಬ್ಬನಿಗಿರುವ ಪಾಲುದಾರಿಕೆಯೇ ಈ ಮೂಲಕ ರದ್ದಾಗಿ ಬಿಡುತ್ತದೆ ಎಂಬುದು ನಮಾಝ್ ಸ್ವೀಕರಿ ಸಲ್ಪಡುವುದಿಲ್ಲ ಎಂಬು ದರ ಅರ್ಥವಾಗಿದೆ. ಪ್ರವಾದಿ(ಸ) ಹೇಳಿರುವರು:

مَنْ أَتَى عَرَّافًا أَوْ كَاهِنًا, فَصَدَّقَهُ بِمَا يَقُولُ, فَقَدْ كَفَرَ بِمَا أُنْزِلَ عَلَى مُحَمَّدٍ

'ಯಾರಾದರೂ ಜ್ಯೋತಿಷಿಯನ್ನು ಸಂಪರ್ಕಿಸಿ, ಅವನು ಹೇಳುವುದರ ಮೇಲೆ ವಿಶ್ವಾಸವಿರಿಸಿದರೆ, ಅವರು ಈ ಮುಹಮ್ಮದನಿಗೆ ಅವತೀರ್ಣವಾದುದರಲ್ಲಿ ಅವಿಶ್ವಾಸ ತಾಳುವವರಾಗಿದ್ದಾರೆ.'[1]

ಇನ್ನೊಂದು ಸಂದರ್ಭದಲ್ಲಿ ಪ್ರವಾದಿವರ್ಯರು(ಸ) ಹೀಗೆ ನೆನಪಿಸಿರುವರು:

مَنْ أَتَى كَاهِنًا فَسَأَلَهُ عَنْ شَيْءٍ حُجِبَتْ عَنْهُ التَّوْبَةُ أَرْبَعِينَ لَيْلَةً, فَإِنْ صَدَّقَهُ بِمَا قَالَ كَفَرَ

'ಜ್ಯೋತಿಷಿಗಳನ್ನು ಸಮೀಪಿಸಿ ಅವರೊಂದಿಗೆ ವಿಷಯಗಳನ್ನು ಕೇಳುವವರ ನಲ್ವತ್ತು ದಿನಗಳ ಪಶ್ಚಾತ್ತಾಪ ತಡೆಹಿಡಿಯಲ್ಪಡುತ್ತದೆ. ಅದರ ಮೇಲೆ ವಿಶ್ವಾಸ ತಾಳಿದರೆ, ಸತ್ಯನಿಷೇಧಿಯಾಗಿಬಿಡುವನು.'[2]

ಜ್ಯೋತಿಷಿಗಳು, ಮಹಾತ್ಮರು ಮುಸ್ಲಿಮರಾಗಿದ್ದರೆ, ಅವರನ್ನು ಭೇಟಿಯಾಗ ಬಹುದೆಂದೂ ಮುಸ್ಲಿಮೇತರರಾಗಿದ್ದರೆ ಮಾತ್ರ ಹೋಗುವುದಕ್ಕೆ ವಿರೋಧವಿದೆ ಯೆಂದೂ ಕೆಲವರು ತಪ್ಪಾಗಿ ತಿಳಿದುಕೊಂಡಿದ್ದಾರೆ. ಇದು ಸರಿಯಲ್ಲ. ಏಕೆಂದರೆ ಪರೋಕ್ಷದ ಜ್ಞಾನ ವಿದೆಯೆಂದು ಹೇಳಿಕೊಳ್ಳುವ ಎಲ್ಲರಿಗೂ ಬಳಸಲಾಗುವ ಒಂದು ಪದವಾಗಿದೆ ಅರ್ರಾಫ್ (عَرَّاف). ಅಂತಹ ವ್ಯಕ್ತಿಗಳು ಸಿದ್ಧಿಗಳೋ, ಔಲಿಯಾಗಳೋ, ದೇವಮಾನವರೋ ಯಾರೇ ಆಗಿದ್ದರೂ ಅವರನ್ನು ಸಂದರ್ಶಿಸುವುದು ನಿಷಿದ್ಧವಾಗಿದೆ. ಕರ್ಮಗಳು ಬೆಲೆ ಇಲ್ಲದಾಗಿ ಬಿಡುವ ಗುರುತರವಾದ ಅಕ್ರಮವಾಗಿದೆ.

---

1. ತಿರ್ಮಿದಿ: 135, ಅಬೂದಾವೂದ್: 3904, ಹಾಕಿಮ್: 1/8, ಅಹ್ಮದ್: 2/408.

2. ತಬ್ರಾನಿ – ಕಬೀರ್: 22/169.

55. ನರಕವನ್ನು ಖರೀದಿಸುವವರು

عَنْ أَبِي هُرَيْرَةَ رَضِيَ اللَّهُ عَنْهُ، قَالَ: قَالَ رَسُولُ اللَّهِ ﷺ: إِنَّ الرَّجُلَ لَيَعْمَلُ بِعَمَلِ أَهْلِ الْخَيْرِ سَبْعِينَ سَنَةً فَإِذَا أَوْصَى حَافَ فِي وَصِيَّتِهِ فَيُخْتَمُ لَهُ بِشَرِّ عَمَلِهِ فَيَدْخُلُ النَّارَ، وَإِنَّ الرَّجُلَ لَيَعْمَلُ بِعَمَلِ أَهْلِ الشَّرِّ سَبْعِينَ سَنَةً فَيَعْدِلُ فِي وَصِيَّتِهِ فَيُخْتَمُ لَهُ بِخَيْرِ عَمَلِهِ فَيَدْخُلُ الْجَنَّةَ

ಅಬೂ ಹುರೈರಾ(ರ)ರಿಂದ ವರದಿ. ಪ್ರವಾದಿ(ಸ) ಹೇಳಿರುವರು: ಒಬ್ಬ ವ್ಯಕ್ತಿಯು ಎಪ್ಪತ್ತು ವರ್ಷಗಳ ಕಾಲ ಒಳ್ಳೆಯ ಕೆಲಸಗಳನ್ನು ಮಾಡುತ್ತಾ ಜೀವಿಸುತ್ತಾನೆ. ಆ ಬಳಿಕ ವಸಿಯ್ಯತ್ ಮಾಡುವಾಗ ಅದರಲ್ಲಿ ಅನ್ಯಾಯ ವೆಸಗುತ್ತಾನೆ. ಹೀಗೆ ವ್ಯಕ್ತಿಯ ಜೀವನ ಆ ದುಷ್ಕೃತ್ಯದೊಂದಿಗೆ ಕೊನೆಗೊಂಡು ಅದರ ಮೂಲಕ ಆ ವ್ಯಕ್ತಿ ನರಕಕ್ಕೆ ಪ್ರವೇಶಿಸಲ್ಪಡುವನು. ಇನ್ನೋರ್ವ ವ್ಯಕ್ತಿ ಎಪ್ಪತ್ತು ವರ್ಷಗಳ ಕಾಲ ದುಷ್ಕೃತ್ಯಗಳನ್ನು ಎಸಗುತ್ತಾ ಜೀವಿಸುತ್ತಿರುವನು. ಆ ಬಳಿಕ ನ್ಯಾಯ ಸಮ್ಮತ ರೀತಿಯಲ್ಲಿ ವಸಿಯ್ಯತ್ ಮಾಡುವನು. ಹೀಗೆ ಆ ವ್ಯಕ್ತಿಯ ಜೀವನವು ಸತ್ಕರ್ಮದಲ್ಲಿ ಕೊನೆಗೊಳ್ಳುವುದು. ಈ ಕಾರಣ ದಿಂದಾಗಿ ಅವನು ಸ್ವರ್ಗವಾಸಿಯಾಗುವನು.*

ಒಬ್ಬ ವ್ಯಕ್ತಿ ತನ್ನ ಅಧೀನದಲ್ಲಿರುವವರಿಗೆ ನೀಡುವ ಗೌರವಪೂರ್ಣ ಉಪದೇಶ ನಿರ್ದೇಶಗಳಿಗೆ ಅರಬಿ ಭಾಷೆಯಲ್ಲಿ 'ವಸಿಯ್ಯತ್' ಎಂದು ಹೇಳುತ್ತಾರೆ. ಮರಣಾಸನ್ನ ವ್ಯಕ್ತಿ ತನ್ನ ಮರಣದ ಬಳಿಕ ಯಾವ ರೀತಿ ತನ್ನ ಸಂಪತ್ತನ್ನು ವಿನಿಯೋಗಿಸಬೇಕು,

* ತಿರ್ಮಿದಿ: 2118, ಅಬೂದಾವೂದ್: 2868, ಇಬ್ನುಮಾಜ: 2704 ಮುಂತಾದವರು ಪದಗಳ ವ್ಯತ್ಯಾಸಗಳೊಂದಿಗೆ ಈ ಪ್ರವಾದಿವಚನವನ್ನು ಉಲ್ಲೇಖಿಸಿರುವರು. ಇದರ ವರದಿ ಪರಂಪರೆಯು ಪ್ರಬಲವಾಗಿದೆ ಎಂದು ಶೈಖ್ ಅಹ್ಮದ್ ಶಾಕಿರ್ ಅಭಿಪ್ರಾಯ ಪಟ್ಟಿದ್ದಾರೆ.

ಇತರರಿಗೆ ಪಾಲು ಮಾಡಬೇಕು ಎಂದು ಮುಂತಾಗಿ ನೀಡುವ ಉಪದೇಶವು ಸಾಂಕೇತಿಕ ಭಾಷೆಯಲ್ಲಿ 'ವಸಿಯ್ಯತ್' ಎನಿಸುತ್ತದೆ. ಪವಿತ್ರ ಕುರ್‌ಆನ್ ಹೇಳುತ್ತದೆ: ನಿಮ್ಮಲ್ಲಾರಿಗಾದರೂ ಮರಣದ ಸಮಯ ಸನ್ನಿಹಿತವಾದರೆ ಮತ್ತು ಅವನು ಸಂಪತ್ತು ಬಿಟ್ಟು ಹೋಗುತ್ತಿದ್ದರೆ, ಮಾತಾಪಿತರಿಗೂ ನೆಂಟರಿಷ್ಟರಿಗೂ ಸರ್ವವಿಧಿತ ರೀತಿಯಲ್ಲಿ ವಸಿಯ್ಯತ್ (ಉಯಿಲು) ಮಾಡುವುದು ನಿಮ್ಮ ಮೇಲೆ ಕಡ್ಡಾಯಗೊಳಿಸಲಾಗಿದೆ. ಇದು ಧರ್ಮ ನಿಷ್ಠರ ಮೇಲಿನ ಬಾಧ್ಯತೆಯಾಗಿದೆ. (ಅಲ್ ಬಕರ: 180) ಪ್ರವಾದಿ(ಸ) ಹೇಳಿರುವರು:

مَا حَقُّ امْرِئٍ مُسْلِمٍ لَهُ شَيْءٌ يُوصِي فِيهِ يَبِيتُ فِيهِ لَيْلَتَيْنِ إِلَّا وَوَصِيَّتُهُ مَكْتُوبَةٌ عِنْدَهُ

'ವಸಿಯ್ಯತ್ ಮಾಡುವಂತಹ ಸಾಕಷ್ಟು ವಿಷಯಗಳಿದ್ದು, ತನ್ನ ವಸಿಯ್ಯತನ್ನು ಬರೆದಿಡದೆ ಎರಡು ರಾತ್ರಿಗಳನ್ನು ಕಳೆಯಲು ಮುಸ್ಲಿಮನಿಗೆ ಅವಕಾಶವಿಲ್ಲ.'[1]

ಇಬ್ನು ಉಮರ್(ರ) ಹೇಳುತ್ತಾರೆ:

مَا مَرَّتْ عَلَيَّ لَيْلَةٌ مُنْذُ سَمِعْتُ رَسُولَ اللهِ ﷺ يَقُولُ ذٰلِكَ إِلَّا وَعِنْدِي وَصِيَّتِي مَكْتُوبَةٌ

'ಪ್ರವಾದಿಯವರಿಂದ(ಸ) ಈ ಮಾತುಗಳನ್ನು ಆಲಿಸಿದ ನಂತರ ವಸಿಯ್ಯತನ್ನು ಬರೆದಿಡದೆ ಒಂದು ರಾತ್ರಿಯನ್ನು ಕೂಡ ನಾನು ಕಳೆದಿಲ್ಲ.'[2]

ವಾರೀಸು ಸೊತ್ತಿನಲ್ಲಿ ನಿಯಮ ಪ್ರಕಾರ ಸೊತ್ತು ಸಿಗದೆ ಇರುವ ಸಂಬಂಧಿಕರಿಗೆ, ದರಿದ್ರರಿಗೆ, ಅನಾಥರಿಗೆ ಹೀಗೆ ಸಮಾಜದ ಪ್ರತ್ಯೇಕ ಗಮನದ ಅರ್ಹತೆಯುಳ್ಳ, ಸಂಕಷ್ಟ ದಲ್ಲಿರುವವರ ಸಂರಕ್ಷಣೆ ಮತ್ತು ಸುರಕ್ಷತೆಯನ್ನು ದೃಢೀಕರಿಸುವುದು ಎಂಬುದು ವಸಿಯ್ಯತನ್ನು ನಿಯಮವಾಗಿಸಿರುವುದರ ಉದ್ದೇಶವಾಗಿದೆ.

ನಿಯಮ ಪ್ರಕಾರ ವಾರೀಸು ಸೊತ್ತಿನಲ್ಲಿ ಪಾಲು ಲಭಿಸುವ ಒಬ್ಬ ವ್ಯಕ್ತಿಯು ಸಮಾಜದಲ್ಲಿ ಬಹಳ ದರಿದ್ರ ಮತ್ತು ಹೆಚ್ಚಿನ ಸಂಪತ್ತಿನ ಅಗತ್ಯವುಳ್ಳವನಾಗಿದ್ದರೆ, ಇಂತಹ ವ್ಯಕ್ತಿಗಾಗಿ ಇತರ ವಾರೀಸುದಾರರ ಅನುಮತಿಯೊಂದಿಗೆ ವಸಿಯ್ಯತ್ ಮಾಡುವುದರಲ್ಲಿ ತಪ್ಪಿಲ್ಲ. ಪ್ರವಾದಿ(ಸ) ಹೇಳಿರುವರು:

لَا وَصِيَّةَ لِوَارِثٍ إِلَّا أَنْ يُجِيزَ الْوَرَثَةُ

'ಇತರ ವಾರೀಸು ದಾರರು ತೃಪ್ತಿ ಹೊಂದಿರುವ ಹೊರತು, ವಾರೀಸುದಾರ ನಿಗಾಗಿ ವಸಿಯ್ಯತ್ ಮಾಡುವುದು ಧರ್ಮಸಮ್ಮತವಲ್ಲ.'[3]

ಒಟ್ಟು ಸಂಪತ್ತಿನ ಮೂರನೆಯ ಒಂದು ಭಾಗಕ್ಕೆ ಮಾತ್ರ ವಸಿಯ್ಯತ್

ಮಾಡುವುದಕ್ಕೆ ಅವಕಾಶವಿದೆ. ಇದಕ್ಕಿಂತ ಹೆಚ್ಚಾಗಿ ವಸಿಯ್ಯತ್ ಮಾಡುವುದು ಪಾಪ ಮತ್ತು ನಿಯಮ ಬಾಹಿರವಾಗಿದೆ. ಸಂಪೂರ್ಣ ಸಂಪತ್ತನ್ನು ದಾನವಾಗಿ ನೀಡಲು ಅನುಮತಿ ಕೇಳಿ ಬಂದ ವ್ಯಕ್ತಿಯೊಡನೆ ಪ್ರವಾದಿ(ಸ) ಹೀಗೆ ಹೇಳಿರುವರು:

الثُّلُثُ، وَالثُّلُثُ كَثِيرٌ، إِنَّكَ أَنْ تَذَرَ وَرَثَتَكَ أَغْنِيَاءَ خَيْرٌ مِنْ أَنْ تَذَرَهُمْ عَالَةً يَتَكَفَّفُونَ النَّاسَ

'ಮೂರರಲ್ಲಿ ಒಂದು ಪಾಲನ್ನು ಮಾತ್ರ ದಾನ ಮಾಡಿರಿ. ತನ್ನ ವಾರೀಸುದಾರರನ್ನು ಜನರ ಮುಂದೆ ಯಾಚಿಸುವವರಾಗಿ ಬಿಟ್ಟಗಲುವುದಕ್ಕಿಂತ ಅವರನ್ನು ಸಂಪನ್ನರಾಗಿ ಬಿಟ್ಟಗ್ಗಲುವುದು ಒಳ್ಳೆಯದು.'[4]

ಒಬ್ಬರು ವಾರೀಸುದಾರರ ಒಪ್ಪಿಗೆಯೊಂದಿಗೆ ಹೆಚ್ಚು 'ವಸಿಯ್ಯತ್' ಮಾಡಿದರೆ, ಅದನ್ನು ಪಾಲಿಸಲು ಅಥವಾ ಅದನ್ನು ಬದಲಿಸಲು ಅನಂತರ ಬರುವವರಿಗೆ ಅವಕಾಶವಿರುತ್ತದೆ. ಪವಿತ್ರ ಕುರ್‌ಆನ್ ಹೇಳುತ್ತದೆ, 'ಆದರೆ ಉಯಿಲು ಮಾಡಿದವನು ಅರಿತೋ ಅರಿಯದೆಯೋ ಹಕ್ಕುಚ್ಯುತಿ ಮಾಡಿರುವನೆಂಬ ಆಶಂಕೆಯಿದ್ದು ಸಂಬಂಧ ಪಟ್ಟವರೊಂದಿಗೆ ಅದನ್ನು ಸರಿಪಡಿಸಿಕೊಂಡರೆ ಅವನ ಮೇಲೆ ಯಾವ ಪಾಪವೂ ಇಲ್ಲ, ನಿಶ್ಚಯವಾಗಿಯೂ ಅಲ್ಲಾಹ್ ಕ್ಷಮಿಸುವವನೂ ಕರುಣಾನಿಧಿಯೂ ಆಗಿರುತ್ತಾನೆ.' **(ಅಲ್ ಬಕರ: 182)**

'ವಸಿಯ್ಯತ್'ನ ನಿಯಮಗಳ ಕುರಿತು ಇರುವ ಅಜ್ಞಾನದ ಕಾರಣದಿಂದಾಗಿ ವಾರೀಸುಧಾರರಿಗೆ ಮತ್ತು ಇತರರಿಗೆ ತಮ್ಮ ಸಂಪತ್ತನ್ನು ತಮಗಿಷ್ಟ ಬಂದಂತೆ ಬರೆದಿಟ್ಟು ಮರಣ ಹೊಂದುವವರಿದ್ದಾರೆ. ಅಂತಹ ವ್ಯಕ್ತಿಗಳು ತಮಗೆ ಹೆಚ್ಚು ಪ್ರೀತಿಪಾತ್ರರಾಗಿರುವವರಿಗೆ ಸಂಪೂರ್ಣ ಸಂಪತ್ತನ್ನು ವಸಿಯ್ಯತ್ ಮಾಡಿಬಿಡುವರು. ಇಲ್ಲದಿದ್ದರೆ ಪಾಲು ಮಾಡುವುದರಲ್ಲಿ ಅನ್ಯಾಯ ಮಾಡುವರು. ಹೀಗೆ ತನ್ನ ವಾರೀಸುದಾರರ ಮಧ್ಯೆ ಶತ್ರುತ್ವ ಮತ್ತು ಭಿನ್ನತೆಗಳ ಬೀಜವನ್ನು ಬಿತ್ತುವರು. ಇಸ್ಲಾಮಿನ ವಾರೀಸು ನಿಯಮಗಳ ಸ್ಫೂರ್ತಿಯನ್ನೇ ಬುಡಮೇಲುಗೊಳಿಸಲು ಅವರ ವಸಿಯ್ಯತ್ ಕಾರಣವಾಗಿಬಿಡುತ್ತದೆ.

ವಾಸ್ತವದಲ್ಲಿ ಈ ಮೂಲಕ ಅವರು ಅಲ್ಲಾಹನೊಂದಿಗೆ ಮತ್ತು ಅವನ ನಿಯಮಗಳೊಂದಿಗೆ ಬಹಳ ದೊಡ್ಡ ಅಕ್ರಮವನ್ನೆಸಗುತ್ತಾರೆ. ಏಕೆಂದರೆ ಅಲ್ಲಾಹನು ಬಹಳ ಸ್ಪಷ್ಟವಾಗಿ ನಿರ್ಣಯಿಸಿರುವ ವಾರೀಸು ಸೊತ್ತಿನ ನಿಯಮಗಳನ್ನು ದುರ್ಬಲಗೊಳಿಸಲು ಅಥವಾ ಬದಲಾಯಿಸಲು ಯಾರಿಗೂ ಅಧಿಕಾರವಿಲ್ಲ. ಹೀಗೆ ಮಾಡುವುದು ದೇವನ ನಿಯಮಗಳಿಗೆ ವಿರುದ್ಧವಾದ ನಡೆ ಮತ್ತು ಬಹಳ ದೊಡ್ಡ ಅಪರಾಧವಾಗಿದೆ.

ವಾರಿಸು ಸೊತ್ತಿನ ನಿಯಮಗಳನ್ನು ವಿವರಿಸುತ್ತಾ ಪವಿತ್ರ ಕುರ್‌ಆನ್ ಈ ರೀತಿ ಹೇಳುತ್ತದೆ, 'ಇವು ಅಲ್ಲಾಹನು ನಿಶ್ಚಯಿಸಿದ ಮೇರೆಗಳು. ಅಲ್ಲಾಹನ ಮತ್ತು ಅವನ ಸಂದೇಶವಾಹಕನ ಅನುಸರಣೆ ಮಾಡುವವನಿಗೆ ತಳಭಾಗದಲ್ಲಿ ಕಾಲುವೆಗಳು ಹರಿಯುತ್ತಿರುವ ಸ್ವರ್ಗೋದ್ಯಾನಗಳಲ್ಲಿ ಅಲ್ಲಾಹ್ ಪ್ರವೇಶ ಕೊಡುವನು. ಅವನು ಆ ಸ್ವರ್ಗೋದ್ಯಾನಗಳಲ್ಲಿ ಸದಾ ವಾಸಿಸುತ್ತಿರುವನು ಮತ್ತು ಇದೇ ಅಮೋಘ ವಿಜಯವಾಗಿದೆ. ಅಲ್ಲಾಹನ ಹಾಗೂ ಅವನ ಸಂದೇಶವಾಹಕನ ಆಜ್ಞೋಲ್ಲಂಘನೆ ಮಾಡುವವನನ್ನು ಮತ್ತು ಅವನು ನಿರ್ಣಯಿಸಿಕೊಟ್ಟ ಮೇರೆಗಳನ್ನು ಮೀರುವವನನ್ನು ಅಲ್ಲಾಹನು ನರಕಾಗ್ನಿಗೆ ತಳ್ಳುವನು. ಅದರಲ್ಲಿ ಅವನು ಸದಾಕಾಲವಿರುವನು ಮತ್ತು ಅವನಿಗೆ ನಿಂದನಾತ್ಮಕ ಶಿಕ್ಷೆ ಇದೆ.' **(ಅನ್ನಿಸಾ: 13-14)**

ವಸಿಯ್ಯತ್‌ನ ನಿಯಮ ಮತ್ತು ಅನ್ಯಾಯದ ಬಗ್ಗೆ ಆರಂಭದ ಹದೀಸ್ ತಿಳಿಸುತ್ತದೆ. ಮರಣಾಸನ್ನನಾದ ವೇಳೆಯಲ್ಲಿ ವಸಿಯ್ಯತಿನಲ್ಲಿ ತೋರಿಸುವ ಒಂದು ಅಕ್ರಮದ ಕಾರಣದಿಂದ ಜೀವನಪೂರ್ತಿ ಸತ್ಕರ್ಮಗಳನ್ನು ಮಾಡಿ ಜೀವಿಸಿದವರು ಕೂಡ ನರಕವಾಸಿಗಳಾಗಿ ಬಿಡುವರು ಎಂದು ಪ್ರವಾದಿಯವರು(ಸ) ಎಚ್ಚರಿಸುವರು. ಇಬ್ನು ಅಬ್ಬಾಸ್(ರ) ವರದಿ ಮಾಡಿರುವ ಒಂದು ಪ್ರವಾದಿವಚನ ಹೀಗಿದೆ:

الإِضْرَارُ فِي الْوَصِيَّةِ مِنَ الْكَبَائِرِ

'ದೋಷಪೂರಿತವಾದ ವಸಿಯ್ಯತ್ ಮಹಾಪಾಪಗಳಲ್ಲೊಂದಾಗಿದೆ.'[5]

ವಾರೀಸು ನಿಯಮಗಳನ್ನು ಸರಿಯಾಗಿ ತಿಳಿಯದಿರುವ ಕಾರಣದಿಂದಾಗಿ ಅನೇಕ ಸಂದರ್ಭಗಳಲ್ಲಿ ದೋಷಪೂರ್ಣವಾದ ವಸಿಯ್ಯತ್‌ಗಳು ಉಂಟಾಗುತ್ತವೆ. ವಾರೀಸು ನಿಯಮಗಳನ್ನು ಕಲಿಯುವುದು ಇದಕ್ಕಿರುವ ಪರಿಹಾರವಾಗಿದೆ. ಪ್ರವಾದಿ(ಸ) ಈ ರೀತಿ ಹೇಳಿರುವರು:

تَعَلَّمُوا الْفَرَائِضَ وَعَلِّمُوهَا، فَإِنَّهُ نِصْفُ الْعِلْمِ، وَهُوَ يُنْسَى وَهُوَ أَوَّلُ شَيْءٍ يُنْتَزَعُ مِنْ أُمَّتِي

'ವಾರೀಸು ಸೊತ್ತು ವಿತರಣೆಯ ಕುರಿತು ನೀವು ಕಲಿಯಬೇಕು. ಅದು ಜ್ಞಾನದ ಅರ್ಧಾಂಶವಾಗಿದೆ. ಇದು ಕಳೆದು ಹೋಗುವ ಸಾಧ್ಯತೆಯಿದೆ. ನನ್ನ ಸಮುದಾಯದಿಂದ ತೆಗೆದು ಹಾಕಲ್ಪಡುವ ಒಂದನೆಯ ವಿಷಯವೂ ಇದುವೇ ಆಗಿರುವುದು.'[6]

ಇಬ್ನು ಮಸ್‌ಊದ್(ರ) ವರದಿ ಮಾಡಿರುವ ಹದೀಸ್‌ನಲ್ಲಿ ಈ ವಿಷಯಗಳಿವೆ:

تَعَلَّمُوا الْفَرَائِضَ وَعَلِّمُوهُ النَّاسَ، فَإِنِّي امْرُؤٌ مَقْبُوضٌ، وَإِنَّ الْعِلْمَ سَيُقْبَضُ حَتَّى

يَخْتَلِفَ الإِثْنَانِ فِيْ الْفَرِيْضَةِ فَلاَ يَجِدَانِ أَحَدًا يَفْصِلُ بَيْنَهُمَا

'ನೀವು ವಾರೀಸು ಹಕ್ಕಿನ ನಿಯಮಗಳನ್ನು ಕಲಿಯಬೇಕು ಮತ್ತು ಕಲಿಸಬೇಕು. ನಿಶ್ಚಯವಾಗಿಯೂ ನಾನು ಮರಣ ಹೊಂದುವ ವ್ಯಕ್ತಿ. ಜ್ಞಾನವು ಕಳೆದುಹೋಗುತ್ತದೆ. ಹೀಗೆ ವಾರೀಸು ಹಕ್ಕಿನ ನಿಯಮದ ಕುರಿತು ಇಬ್ಬರು ವ್ಯಕ್ತಿಗಳು ಚರ್ಚೆ ನಡೆಸಿ, ಅವರಿಗೆ ಸರಿಯಾದ ನಿಯಮಗಳನ್ನು ಮನವರಿಕೆ ಮಾಡಿಸಿಕೊಡುವವರು ಇಲ್ಲದಾಗುವ ಸಮಯ ಬರಲಿಕ್ಕಿದೆ.'[7]

---

1. ಬುಖಾರಿ: 2738, ಮುಸ್ಲಿಮ್: 1627.
2. ಬುಖಾರಿ: 2738, ಮುಸ್ಲಿಮ್: 1627.
3. ದಾರುಕುತ್ನಿ: 4252.
4. ಬುಖಾರಿ: 1295, ಮುಸ್ಲಿಮ್: 4185.
5. ನಸಾಈ: 11092, ದಾರುಕುತ್ನಿ: 4249.
6. ಇಬ್ನುಮಾಜ: 2719, ದಾರುಕುತ್ನಿ: 4014.
7. ಹಾಕಿಮ್: 4/333, ಅಬೂಯಅ್‌ಲಾ: 5028, ಬಸ್ಸಾರ್ – ಮುಸ್ನದ್: 974.

56. ಸರ್ವಾಧಿಕಾರ ಮತ್ತು ನೈತಿಕ ಅಧಃಪತನ

عَنْ أَبِي هُرَيْرَةَ رَضِيَ اللَّهُ عَنْهُ قَالَ: قَالَ رَسُوْلُ اللَّهِ ﷺ: صِنْفَانِ مِنْ أَهْلِ النَّارِ لَمْ أَرَهُمَا: قَوْمٌ مَعَهُمْ سِيَاطٌ كَأَذْنَابِ الْبَقَرِ، يَضْرِبُوْنَ بِهَا النَّاسَ، وَنِسَاءٌ كَاسِيَاتٌ، عَارِيَاتٌ، مُمِيْلَاتٌ، مَائِلَاتٌ، رُؤُوْسُهُنَّ كَأَسْنِمَةِ الْبُخْتِ الْمَائِلَةِ، لَا يَدْخُلْنَ الْجَنَّةَ وَلَا يَجِدْنَ رِيْحَهَا، وَإِنَّ رِيْحَهَا لَيُوْجَدُ مِنْ مَسِيْرَةِ كَذَا وَكَذَا

ಅಬೂಹುರೈರಾ(ರ)ರಿಂದ ವರದಿ. ಪ್ರವಾದಿ(ಸ) ಹೇಳಿರುವರು: ಎರಡು ವಿಭಾಗದ ಜನರು ನರಕವಾಸಿಗಳಾಗುವರು. ನಾನು ಅವರನ್ನು ಕಂಡಿಲ್ಲ. ಹಸುವಿನ ಬಾಲದಂತಹ ಚಾಟಿಯನ್ನು ಸದಾ ಹಿಡಿದು ನಡೆಯುತ್ತಿರುವ ಒಂದು ವಿಭಾಗದ ಜನರು. ಅವರು ಜನರನ್ನು ಹೊಡೆಯುತ್ತಿರುವರು. ವಸ್ತ್ರ ಧರಿಸಿದ, ನಗ್ನರಾದ, ವೈಯಾರ ತೋರುವ, ಅತ್ತಿತ್ತ ಓಲಾಡುವ ಒಂಟೆಯ ಡುಬ್ಬದಂತಿರುವ ತಲೆಗಳಿರುವ ಸ್ತ್ರೀಯರು. ಅವರು ಸ್ವರ್ಗವನ್ನು ಪ್ರವೇಶಿಸ ಲಾರರು. ಅದರ ಸುಗಂಧವನ್ನೂ ಅನುಭವಿಸಲಾರರು. ಅದರ ಸುಗಂಧವು ಬಹಳ ದೂರದ ವರೆಗೆ ಹಬ್ಬಿರುತ್ತದೆ.*

ಸರ್ವಾಧಿಕಾರ ಮತ್ತು ನೈತಿಕ ಅಧಃಪತನವು ಯಾವ ಸಮಾಜವನ್ನು ಕೂಡ ಕಾಡಬಹುದಾದ ಬಹಳ ಗಂಭೀರವಾದ ಸಾಮಾಜಿಕ ದುರಂತವಾಗಿದೆ. ಸ್ವತಂತ್ರವಾಗಿ ಆಲೋಚಿಸಲಿಕ್ಕಿರುವ ಮತ್ತು ವ್ಯವಹರಿಸಲಿಕ್ಕಿರುವ ಮನುಷ್ಯನ ಮೂಲಭೂತ ಹಕ್ಕನ್ನು

* ಇಮಾಮ್ ಮುಸ್ಲಿಮ್: 2128, ಅಹ್ಮದ್, ಮಾಲಿಕ್, ಮುಅತ್ತಾ: 2/913, ಬೈಹಕಿ ಶುಅ್‌ಬುಲ್ ಈಮಾನ್: 5357, ಇಬ್ನು ಹಿಬ್ಬಾನ್: 7461, ಅಬೂ ಯಅ್‌ಲಾ: 6684 ಮುಂತಾದವರು ಪ್ರಬಲವಾಗಿ ಉಲ್ಲೇಖಿಸಿರುವರು. ಮುಸ್ನದ್ ಅಬೀ ಯಅ್‌ಲಾದಲ್ಲಿ ನನ್ನ ಸಮುದಾಯಕ್ಕೆ ಸೇರಿದ ಎರಡು ವಿಭಾಗಗಳು ಎಂದು ಹೇಳಿಕೊಂಡು ಈ ಹದಿಸ್ ಆರಂಭವಾಗುತ್ತದೆ.

ಸರ್ವಾಧಿಕಾರವು ಕಿತ್ತುಕೊಳ್ಳುತ್ತದೆ. ನಾವು ತೀರ್ಮಾನಿಸಿದ ಪ್ರಕಾರವೇ ಜನರು ಜೀವನ ನಡೆಸಬೇಕು ಎಂಬ ಆದೇಶ; ಅದನ್ನು ವಿರೋಧಿಸುವ, ಪ್ರತಿಭಟಿಸುವ ಎಲ್ಲರನ್ನೂ ಬಹಳ ಕಠಿಣವಾಗಿ ನಿಯಂತ್ರಿಸುವ ಕ್ರಮಗಳನ್ನು ಕೈಗೊಳ್ಳುವುದು ಸರ್ವಾಧಿಕಾರ ಇರುವಲ್ಲಿ ಕಂಡು ಬರುತ್ತದೆ. ತಪ್ಪನ್ನು ವಿಮರ್ಶಿಸಲು, ಪ್ರಶ್ನಿಸಲು ಕೂಡ ಇಂತಹ ಸ್ಥಳಗಳಲ್ಲಿ ಅವಕಾಶವಿರುವುದಿಲ್ಲ. ಆಡಳಿತ ನಡೆಸುವವರು ಏನನ್ನು ಬಯಸುತ್ತಾರೋ ಅದುವೇ ನಿಯಮ. ಅವರಿಗೆ ಕೆಟ್ಟದೆಂದು ತೋರುವುದೆಲ್ಲವೂ ನಿಯಮ ಬಾಹಿರ.

ಹಸುವಿಗೆ ಬಾಲವಿರುವಂತೆ ಸರ್ವಾಧಿಕಾರಿಗಳಿಗೆ ಅವರ ಬಳಿ ಮರ್ದನಕ್ಕೆ ಬಳಸುವ ಉಪಕರಣಗಳಿರುತ್ತವೆ. ಸದಾ ಅದು ಅವರ ಜೊತೆಯಲ್ಲೇ ಇರುತ್ತದೆ. ಕೈಯಲ್ಲಿ ಚಾಟಿಗಳಿರುವ ಕಾರಣದಿಂದ ಎಲ್ಲರೂ ಅವರನ್ನು ಅನುಸರಿಸುತ್ತಾರೆ. ಯಾರೂ ಎದುರು ಮಾತನಾಡುವುದಿಲ್ಲ. ಅದನ್ನು ಕೆಳಗಿರಿಸಿದರೆ, ತಮ್ಮ ಅಧಿಕಾರ ಮತ್ತು ಆಡಳಿತ ಕೈತಪ್ಪಿ ಹೋಗುವುದೆಂದು ಅವರಿಗೆ ಚೆನ್ನಾಗಿ ತಿಳಿದಿರುತ್ತದೆ. ಈ ಕಾರಣದಿಂದಾಗಿಯೇ ಲೋಕದಾದ್ಯಂತ ಇರುವ ಸರ್ವಾಧಿಕಾರಿಗಳು ತಮ್ಮ ಪ್ರಜೆಗಳನ್ನು ಮರ್ದನಕ್ಕೆ ಒಳಪಡಿಸು ತ್ತಾರೆ. ಇಂದಿನ ಸಮಾಜವು ಎದುರಿಸುತ್ತಿರುವ ಬಹಳ ಪ್ರಮುಖವಾದ ವಿಷಮ ಪರಿಸ್ಥಿತಿಯೆಡೆಗೆ ಈ ಪ್ರವಾದಿವಚನವು ಬೆಟ್ಟು ಮಾಡುತ್ತದೆ.

ಹದೀಸ್‌ನ ಎರಡನೆಯ ಭಾಗದಲ್ಲಿ ಕೆಟ್ಟ ಸ್ತ್ರೀಯರ ಬಗ್ಗೆ ಹೇಳಲಾಗಿದೆ. ವಸ್ತ್ರ ಧರಿಸಿದರೂ ದೇಹದ ಉಬ್ಬು-ತಗ್ಗುಗಳು ಮತ್ತು ಸೌಂದರ್ಯವನ್ನು ಮರೆಮಾಚದವರು ವಸ್ತ್ರ ಧರಿಸಿಯೂ ನಗ್ನರಾಗಿರುವವರು ಎಂದು ಈ ಸ್ತ್ರೀಯರ ಕುರಿತು ಪ್ರವಾದಿಯವರು(ಸ) ಹೇಳಿರುವರು. ಮೋಹಕವಾಗಿ ನಕ್ಕು, ಬಾಗಿ ಬಳುಕುತ್ತಾ ಜನರ ಮಧ್ಯೆ ಅವರು ಸದಾ ಓಡಾಡುತ್ತಿರುವರು. ಇಂತಹ ಸ್ತ್ರೀಯರ ಕುರಿತಾಗಿ ಪ್ರವಾದಿಯವರು(ಸ) ಕಠಿಣವಾದ ಭಾಷೆ ಮತ್ತು ಶೈಲಿಯಲ್ಲಿ ವಿಮರ್ಶಿಸಿರುವರು. ಅಂತ್ಯದಿನದಂದು ಸ್ವರ್ಗದ ಸುಗಂಧ ಕೂಡ ಅವರಿಗೆ ಲಭಿಸಲಾರದೆಂದು ಪ್ರವಾದಿಯವರು(ಸ) ಎಚ್ಚರಿಸಿರುವರು.

ಅಂಗಾಂಗಗಳು ಗೋಚರಿಸುವಂತಹ ಪಾರದರ್ಶಕ ವಸ್ತ್ರಗಳನ್ನು ಧರಿಸುವುದು ನಿಷಿದ್ಧವಾಗಿದೆ. ಪರಪುರುಷರನ್ನು ವಶೀಕರಿಸುವ ಎಲ್ಲ ರೀತಿಯ ಸೌಂದರ್ಯ ಪ್ರದರ್ಶನಗಳಿಂದ ಸ್ತ್ರೀಯು ತನ್ನನ್ನು ತಡೆದಿರಿಸಿಕೊಳ್ಳಬೇಕು. ವಸ್ತ್ರಧಾರಣೆಯಂತೆಯೇ ಮಾತು ಮತ್ತು ನಡೆ-ನುಡಿಯೂ ಬಹಳ ಮುಖ್ಯವಾಗುತ್ತದೆ. ಅನ್ಯ ಪುರುಷರೊಂದಿಗೆ ಬಹಳ ಗೌರವದೊಂದಿಗೆ ಮಾತನಾಡಲಿಕ್ಕೆ ಮಾತ್ರ ಅವಕಾಶವಿದೆ.

ಪವಿತ್ರ ಕುರ್‌ಆನ್ ಸತ್ಯವಿಶ್ವಾಸಿನಿಯರಿಗೆ ಈ ರೀತಿ ನೆನಪಿಸುತ್ತದೆ: ನೀವು ಅಲ್ಲಾಹನನ್ನು ಭಯಪಡುವವರಾಗಿದ್ದರೆ, ಮಾನಸಿಕ ಕೇಡಿಗೊಳಗಾದ ವ್ಯಕ್ತಿಯು ಪ್ರಲೋಭನೆಗೊಳಗಾಗಿ ಬಿಡುವ ರೀತಿಯಲ್ಲಿ ಮೋಹಕ ದನಿಯಲ್ಲಿ ಮಾತನಾಡ ಬೇಡಿರಿ. ನಿಖರವಾಗಿ ಮಾತನಾಡಿರಿ. (ಅಲ್ ಅಹ್‌ಝಾಬ್: 32) ಅದೇ ರೀತಿ, ತಾವು ಮರೆಸಿಟ್ಟಿರುವಂತಹ ಅಲಂಕಾರದ ಅರಿವು ಜನರಿಗಾಗುವಂತೆ ತಮ್ಮ ಪಾದಗಳನ್ನು ನೆಲಕ್ಕೆ ಬಡಿಯುತ್ತಾ ನಡೆಯದಿರಲಿ (ಅನ್ನೂರ್: 31) ಎಂದು ನಡಿಗೆಯ ಕುರಿತು ಕೂಡ ಕುರ್‌ಆನ್ ವಿಮರ್ಶಿಸಿದೆ. ಪ್ರವಾದಿ(ಸ) ಹೇಳಿರುವರು:

أَيُّمَا امْرَأَةٍ اسْتَعْطَرَتْ فَمَرَّتْ عَلَى قَوْمٍ لِيَجِدُوا مِنْ رِيحِهَا، فَهِيَ زَانِيَة

'ಸುಗಂಧ ಲೇಪಿಸಿ, ಜನರು ಸುಗಂಧವನ್ನು ಗ್ರಹಿಸುವ ರೀತಿಯಲ್ಲಿ ಅವರ ನಡುವೆ ನಡೆದಾಡುವ ಸ್ತ್ರೀಯರು ವ್ಯಭಿಚಾರಿಣಿಯರಾಗಿದ್ದಾರೆ.'[1]

ಇನ್ನೊಂದು ಸಂದರ್ಭದಲ್ಲಿ ಪ್ರವಾದಿವರ್ಯರು(ಸ) ಹೀಗೆ ಹೇಳಿರುವರು:

لَا تُقْبَلُ صَلَاةٌ لِامْرَأَةٍ تَطَيَّبَتْ لِهَذَا الْمَسْجِدِ حَتَّى تَرْجِعَ, فَتَغْتَسِلَ غُسْلَهَا مِنَ الْجَنَابَةِ

'ಸುಗಂಧ ಪೂಸಿ ಮಸೀದಿಗೆ ಬರುವ ಸ್ತ್ರೀಯರ ನಮಾಝ್, ಅವರು ಮನೆಗೆ ಮರಳಿ ಜನಾಬತ್ ಸ್ನಾನ ಮಾಡುವ ವರೆಗೆ ಸ್ವೀಕರಿಸಲ್ಪಡಲಾರದು.'[2]

ವಸ್ತ್ರ ಧರಿಸಿದ ನಗ್ನ ಸ್ತ್ರೀಯರ ತಲೆಗಳನ್ನು ಒಂಟೆಯ ಡುಬ್ಬದೊಂದಿಗೆ ಹೋಲಿಸ ಲಾಗಿದೆ. ಬಹಳ ಅರ್ಥಪೂರ್ಣವಾದ ಉಪಮೆ. ಓರ್ವ ಆಧುನಿಕ ವಿದ್ವಾಂಸರು ಇದಕ್ಕೆ ನೀಡಿರುವ ವಿವರಣೆ ಹೀಗಿದೆ: ತಲೆಯ ಮಧ್ಯಭಾಗಕ್ಕೆ ಬರುವಂತೆ ಕೂದಲನ್ನು ಎತ್ತಿ ಕಟ್ಟುವುದರ ಬಗ್ಗೆ ಪ್ರವಾದಿಯವರು(ಸ) ಇಂತಹ ಸ್ತ್ರೀಯರನ್ನು ಒಂಟೆಯ ಡುಬ್ಬಕ್ಕೆ ಹೋಲಿಸಿರುವರು. ಇಂದು ಸ್ತ್ರೀಯರ ಕೂದಲ ಬಣ್ಣ ಬದಲಾಯಿಸಲು, ರೂಪಾಂತರ ಗೊಳಿಸಲು ಅನೇಕ ಬ್ಯೂಟಿ ಪಾರ್ಲರ್‌ಗಳು ವ್ಯಾಪಕವಾಗಿವೆಯಲ್ಲವೇ? ಈ ಕೆಲಸ ವನ್ನು ಮಾಡುವವರು ಅನೇಕ ಸಂದರ್ಭಗಳಲ್ಲಿ ಪುರುಷರಾಗಿರುವರು. ಇದಕ್ಕೆ ಬಹಳ ಖರ್ಚು ಕೂಡ ತಗಲುತ್ತದೆ. ಸ್ತ್ರೀಯರನ್ನು ಸುಂದರಿ, ಮನಮೋಹಕವಾಗಿಸಲು ಮತ್ತು ಹೆಚ್ಚು ಕೂದಲಿರುವಂತೆ ತೋರಿಸಲು ಹೀಗೆ ಮಾಡಲಾಗುತ್ತದೆ. ಅಲ್ಲಾಹನು ನೀಡಿರುವ ಪ್ರಕೃತಿದತ್ತ ಸಹಜ ಕೂದಲಿನ ಬಗ್ಗೆ ಅವರು ಸಂತೃಪ್ತರಲ್ಲ. ಆಧುನಿಕ ಕಾಲದಲ್ಲಿ ಚಾಲ್ತಿಗೆ ಬಂದಿರುವ ಈ ಕೃತಕ ಕೇಶಾಲಂಕಾರದ ಬಗ್ಗೆ ಅದೃಶ್ಯ ವಿಷಯ ಬಹಳ ಹಿಂದೆಯೇ ಪ್ರವಾದಿಯವರಿಗೆ(ಸ) ತಿಳಿದಿರುವಂತೆ ಕಂಡು ಬರುತ್ತದೆ.[3]

ರಾಜಕೀಯ ಸರ್ವಾಧಿಕಾರ ಮತ್ತು ನೈತಿಕ ಅಧಃಪತನದ ಕುರಿತು ಜೊತೆಯಾಗಿ ಹೇಳಿರುವುದು ಈ ಹದೀಸ್‌ನ ಇನ್ನೊಂದು ವಿಶೇಷತೆಯಾಗಿದೆ. ಜನರನ್ನು ದಮನಿಸಿಡಲು, ಸಾಮಾನ್ಯ ಸಮಸ್ಯೆಗಳಿಂದ ಅವರ ಗಮನವನ್ನು ತಿರುಗಿಸಲು ಎಲ್ಲ ಕಾಲಗಳಲ್ಲಿಯೂ ಸರ್ವಾಧಿಕಾರಿಗಳು ಲೈಂಗಿಕ ಅರಾಜಕತೆಯನ್ನು ಪ್ರೋತ್ಸಾಹಿಸಿರುವರು. ಮನರಂಜನೆ ಮತ್ತು ಕ್ರೀಡೆಯ ಹೆಸರಿನಲ್ಲಿ ಇದನ್ನು ಹರಡಲಾಗುತ್ತದೆ. ಆಧುನಿಕ ಲೋಕದ ಅಧಿಕಾರಿಗಳ ಈ ಕಾಪಟ್ಯ ನೀತಿಯ ಬಗ್ಗೆಯೂ ಈ ಪ್ರವಾದಿವಚನ ಎಚ್ಚರಿಸುತ್ತದೆ.

---

1. ನಸಾಈ: 8/153, ಅಬೂದಾವೂದ್: 4173, ತಿರ್ಮಿದಿ: 2786.
2. ಅಬೂದಾವೂದ್: 4174, ನಸಾಈ: 8/153, ಬೈಹಕಿ ಸುನನ್: 3/133-134.
3. ಅಲ್ ಹಲಾಲ್ ವಲ್ ಹರಾಮ್ ಫಿಲ್ ಇಸ್ಲಾಮ್: ಪುಟ: 84.

57. ಸಂಪತ್ತಿನ ಮೋಸ ಜಾಲಗಳು

عَنْ عَلِيِّ بِنْ أَبِي طَالِب رَضِيَ اللّٰهُ عَنْهُ، قَالَ: إِنَّا لَجُلُوسٌ مَعَ رَسُولِ اللّٰهِ ﷺ فِي الْـمَسْجِدِ إِذْ طَلَعَ مُصْعَبُ ابْنُ عُمَيْرٍ رَضِيَ اللّٰهُ عَنْهُ، مَا عَلَيْهِ إِلَّا بُرْدَةٌ لَهُ مَرْقُوعَةٌ بِفَرْوٍ، فَلَمَّا رَآهُ رَسُولُ اللّٰهِ ﷺ بَكَى لِلَّذِي كَانَ فِيْهِ مِنَ النِّعْمَةِ وَالَّذِي هُوَ الْيَوْمَ فِيْهِ، ثُمَّ قَالَ رَسُولُ اللّٰهِ ﷺ: "كَيْفَ بِكُمْ إِذَا غَدَا أَحَدُكُمْ فِي حُلَّةٍ وَرَاحَ فِي حُلَّةٍ، وَوُضِعَتْ بَيْنَ يَدَيْهِ صَفْحَةٌ وَرُفِعَتْ أُخْرَى، وَسَتَرْتُمْ بُيُوتَكُمْ كَمَا تُسْتَرُ الْكَعْبَةُ؟ قَالُوا: يَا رَسُوْلَ اللّٰهِ نَحْنُ يَوْمَئِذٍ خَيْرٌ مِنَّا الْيَوْمَ، نَتَفَرَّغُ لِلْعِبَادَةِ، وَنُكْفَى الْمُؤْنَةَ. فَقَالَ رَسُوْلُ اللّٰهِ ﷺ: لَأَنْتُمْ الْيَوْمَ خَيْرٌ مِنْكُمْ يَوْمَئِذٍ

ಅಲೀ(ರ) ಹೇಳುತ್ತಾರೆ. ನಾವು ಪ್ರವಾದಿಯವರೊಂದಿಗೆ(ಸ) ಮಸೀದಿಯಲ್ಲಿ ಕುಳಿತಿದ್ದೆವು. ಆಗ ಮುಸ್‌ಅಬ್ ಬಿನ್ ಉಮೈರ್(ರ) ನಮ್ಮ ಬಳಿಗೆ ಬಂದರು. ಚರ್ಮದಿಂದ ತಯಾರಿಸಿದ ಒಂದು ಹೊದಿಕೆಯ ಹೊರತು ಆ ವ್ಯಕ್ತಿಯ ಮೇಲೆ ಬೇರೇನಿರಲಿಲ್ಲ. ಇದನ್ನು ಕಂಡು ಪ್ರವಾದಿಯವರು(ಸ) ಆ ವ್ಯಕ್ತಿಯ ಹಿಂದಿನ ಸುಸ್ಥಿತಿಯನ್ನು ಈಗ ಇರುವ ಅವಸ್ಥೆಯನ್ನು ನೆನಪಿಸಿ ಅತ್ತು ಬಿಟ್ಟರು. ಆ ಬಳಿಕ ಪ್ರಶ್ನಿಸಿದರು: ನಿಮ್ಮ ಪೈಕಿ ಒಬ್ಬ ವ್ಯಕ್ತಿ ಹಗಲು ವೇಳೆ ಒಂದು ವಸ್ತ್ರ, ರಾತ್ರಿ ಬೇರೊಂದು ವಸ್ತ್ರ ಧರಿಸುತ್ತಿದ್ದು, ಎದುರಿನಿಂದ ಒಂದು ಆಹಾರದ ಬಟ್ಟಲನ್ನು ತೆರವುಗೊಳಿಸುವಾಗ ಅದರ ಸ್ಥಾನದಲ್ಲಿ ಇನ್ನೊಂದು ಸಿದ್ಧವಾಗಿರುವುದು. ನಿಮ್ಮ ಮನೆಗಳಿಗೆ ಕಅಬಾಲಯಕ್ಕೆ ಸಮಾನವಾದ ಪರದೆ ಮತ್ತು ಮರೆಯು ಬಂದು ಬಿಡುವ ಅವಸ್ಥೆಯ

ಕುರಿತು ನಿಮಗೆ ಏನನ್ನಿಸುತ್ತದೆ? ಅವರು ಹೇಳಿದರು: ಅದು ನಮ್ಮ ಪರಿಸ್ಥಿತಿ ಇಂದಿಗಿಂತ ಬಹಳ ಉತ್ತಮವಾಗಿರಬಹುದು. ಆರಾಧನೆಗಳಿಗಾಗಿ ನಮಗೆ ಸಮಯ ಸಿಗಬಹುದು. ಪ್ರವಾದಿ(ಸ) ಹೇಳಿದರು: ಇಲ್ಲ. ಅಂದಿನ ಪರಿಸ್ಥಿತಿಗಿಂತ ಇಂದಿನ ಪರಿಸ್ಥಿತಿಯೇ ನಿಮ್ಮ ಪಾಲಿಗೆ ಉತ್ತಮ.*

ಇಸ್ಲಾಮ್ ಒಂದು ಸಂತುಲಿತ ಜೀವನ ವ್ಯವಸ್ಥೆಯಾಗಿದೆ. ಲೌಕಿಕ ಸಂಪತ್ತು ಸೌಕರ್ಯಗಳನ್ನು ಅತಿ ಆಸಕ್ತಿಯೊಂದಿಗೆ ಸಂಗ್ರಹಿಸುವುದನ್ನು ಮತ್ತು ಅದರ ಬಗ್ಗೆ ತೀರಾ ಅನಾಸಕ್ತಿ ತಾಳುವುದನ್ನು ಇಸ್ಲಾಮ್ ಒಂದೇ ರೀತಿಯಲ್ಲಿ ನಿರುತ್ಸಾಹಿಸಿದೆ.

ಪರಲೋಕ ಮೋಕ್ಷಕ್ಕಾಗಿ ಇಹಲೋಕ ಜೀವನವನ್ನು ತ್ಯಜಿಸಬೇಕೆಂದು, ಇಹಲೋಕದ ಸಂಪತ್ಸೌಕರ್ಯಗಳಿಗಾಗಿ ಪರಲೋಕ ಜೀವನವನ್ನು ಮರೆತು ಜೀವಿಸಬೇಕೆಂದು ಧರ್ಮವು ಆದೇಶಿಸುವುದಿಲ್ಲ. ಈ ಎರಡೂ ಲೋಕದ ಬಗ್ಗೆ ನ್ಯಾಯಪೂರ್ಣವಾಗಿ ವ್ಯವಹರಿಸಬೇಕೆಂದು ಇಸ್ಲಾಮ್ ಕಲಿಸುತ್ತದೆ.

ಸಂಪತ್ತು ವಾಸ್ತವದಲ್ಲಿ ಒಂದು ಶಾಪ ಅಥವಾ ಕೇಡು ಅಲ್ಲ. ಲೌಕಿಕ ಜೀವನದಲ್ಲಿ ನೆಲೆನಿಲ್ಲಲು ಮತ್ತು ಮೇಲಕ್ಕೇರಲು ಅಲ್ಲಾಹನು ನಿಶ್ಚಯಿಸಿರುವ ಅನುಗ್ರಹಗಳಲ್ಲಿ ಅದು ಒಂದಾಗಿದೆ. ಅದನ್ನು ನಿರಾಕರಿಸಿದರೆ ವ್ಯಕ್ತಿ ಮತ್ತು ಸಮಾಜಕ್ಕೆ ಜೀವನ ದುರ್ಭರವೆನಿಸುತ್ತದೆ. ಎಲ್ಲ ಅನುಗ್ರಹಗಳೊಂದಿಗೂ ಪರೀಕ್ಷೆಯ ಇನ್ನೊಂದು ಮುಖವೂ ಜೊತೆಗೆ ಇರುತ್ತದೆಯಲ್ಲವೇ? ಇಹಲೋಕದ ಎಲ್ಲ ಅನುಗ್ರಹಗಳೂ ಒಂದಲ್ಲೊಂದು ಅರ್ಥದಲ್ಲಿ ಪರೀಕ್ಷೆಯಾಗಿವೆ. ಇಹಲೋಕ ಜೀವನವೇ ಒಂದು ಪರೀಕ್ಷೆಯಾಗಿದೆ. ಪವಿತ್ರ ಕುರ್‌ಆನ್ ಈ ರೀತಿ ನೆನಪಿಸುತ್ತದೆ, 'ನಿಮ್ಮನ್ನು ಪರೀಕ್ಷಿಸಿ ನಿಮ್ಮ ಪೈಕಿ ಯಾರು ಸತ್ಕರ್ಮವೆಸಗುವವನೆಂದು ನೋಡಲಿಕ್ಕಾಗಿ ಅವನು ಜೀವನವನ್ನೂ ಮರಣವನ್ನೂ ಆವಿಷ್ಕರಿಸಿದನು. ಅವನು ಪ್ರಬಲನೂ ಕ್ಷಮಾಶೀಲನೂ ಆಗಿರುತ್ತಾನೆ.' (ಅಲ್ ಮುಲ್ಕ್: 2)

ಸಂಪತ್ತು ಕೂಡ ಇದೇ ರೀತಿ ಅನುಗ್ರಹ ಮತ್ತು ಪರೀಕ್ಷೆಯಾಗಿದೆ. ಅಂತ್ಯದಿನದಂದು ಮನುಷ್ಯನ ಸೌಭಾಗ್ಯ-ದೌರ್ಭಾಗ್ಯಗಳು ತೀರ್ಮಾನಿಸಲ್ಪಡುವಾಗ ಸಂಪತ್ತಿನ ಬಗ್ಗೆ ಅವನ ನಿಲುವು ಏನಾಗಿತ್ತು ಎಂಬುದು ಕೂಡ ಬಹಳ ಪ್ರಾಮುಖ್ಯವಾಗುತ್ತದೆ. ಕುರ್‌ಆನ್ ಇದನ್ನು ಸ್ಪಷ್ಟೀಕರಿಸಿದೆ, 'ನಿಮ್ಮ ಸೊತ್ತುಗಳು ಮತ್ತು ನಿಮ್ಮ ಸಂತತಿಗಳು

---

* ಇಮಾಮ್ ತಿರ್ಮಿದಿ: 2476, ಅಬೂ ಯಅ್‌ಲಾ: 502 ಮುಂತಾದವರು ಉಲ್ಲೇಖಿಸಿರುವ ಪ್ರವಾದಿವಚನ ಇದಾಗಿದೆ. ಇದರ ವರದಿ ಪರಂಪರೆಯು ಹಸನ್ ಆಗಿದೆಯೆಂದು ತಿರ್ಮಿದಿ ಸಾಕ್ಷ್ಯ ನುಡಿದಿದ್ದಾರೆ. (ಸುನನುತ್ತಿರ್ಮಿದಿ: ಭಾಗ: 4/647)

ವಾಸ್ತವದಲ್ಲಿ ಪರೀಕ್ಷಾ ಸಾಧನಗಳೆಂದೂ ಪ್ರತಿಫಲ ನೀಡಲು ಅಲ್ಲಾಹನಲ್ಲಿ ಬೇಕಾದಷ್ಟು ಇದೆಯೆಂದೂ ತಿಳಿದುಕೊಳ್ಳಿರಿ.' (ಅಲ್ ಅನ್‌ಫಾಲ್: 28)

ಪ್ರವಾದಿ(ಸ) ಹೇಳಿರುತ್ತಾರೆ: إِنَّ لِكُلِّ أُمَّةٍ فِتْنَةً, وَفِتْنَةُ أُمَّتِي الْمَالُ 'ನಿಶ್ಚಯವಾಗಿಯೂ ಎಲ್ಲ ಸಮುದಾಯದವರಿಗೂ ಒಂದು ಪರೀಕ್ಷೆಯ ಸಾಧನವಿದೆ. ನನ್ನ ಸಮುದಾಯದ ಪರೀಕ್ಷೆಯ ಸಾಧನವು ಸಂಪತ್ತಾಗಿರುತ್ತದೆ.'[1]

ಸಂಪತ್ತು ಮತ್ತು ಸುಖ ಸೌಕರ್ಯಗಳು ಹಲವರ ವಿಶ್ವಾಸ ಮತ್ತು ನೈತಿಕತೆಯನ್ನು ನಾಶಗೊಳಿಸಿಬಿಡುತ್ತದೆ. ಸಂಪತ್ತು ವ್ಯಕ್ತಿಯ ಕೆಲಸ ಮಾಡುವ ಸಾಮರ್ಥ್ಯವನ್ನು ಉದ್ದೀಪನ ಗೊಳಿಸುವುದಲ್ಲ, ಬದಲಾಗಿ ಕೆಡಿಸಿಬಿಡಲು ಹಲವು ಸಂದರ್ಭಗಳಲ್ಲಿ ಕಾರಣವಾಗಿ ಬಿಡುತ್ತದೆ. ಪ್ರವಾದಿವರ್ಯರು(ಸ) ಹೀಗೆಂದಿದ್ದಾರೆ:

فَوَاللهِ، مَاالْفَقْرُ أَخْشٰى عَلَيْكُمْ، وَلَاكِنْ أَخْشٰى أَنْ تَبْسُطَ الدُّنْيَا عَلَيْكُمْ كَمَا بُسِطَتْ عَلٰى مَنْ
كَانَ قَبْلَكُمْ فَتَنَافَسُوهَا كَمَا تَنَافَسُوهَا، فَتُهْلِكَكُمْ كَمَا أَهْلَكَتْهُمْ

'ಅಲ್ಲಾಹನಾಣೆ! ನಿಮಗೆ ದಾರಿದ್ರ್ಯ ಬಂದು ಬಿಡಬಹುದೆಂದು ನನಗೆ ಭಯವಾಗುವುದಿಲ್ಲ. ನಿಮ್ಮ ಪೂರ್ವಿಕರಿಗೆ ಸಿಕ್ಕಂತಹ ಸಂಪತ್ಸಮೃದ್ಧಿ ನಿಮಗೂ ದೊರೆಯುವ ಬಗ್ಗೆ ನನಗೆ ಭಯವಾಗುತ್ತದೆ. ಹೀಗೆ ಅವರು ಸ್ಪರ್ಧಿಸಿದಂತೆ ನೀವೂ ಸ್ಪರ್ಧಿಸುವಿರಿ. ಅವರು ನಾಶವಾದಂತೆ ನೀವೂ ನಾಶವಾಗುವಿರಿ.'[2]

ಉಮರ್(ರ) ಹೇಳಿರುವರು: إِنَّ لِلْمَالِ ضَرَاوَةً كَضَرَاوَةِ الْخَمْرِ 'ಸಂಪತ್ತು ಒಂದು ಮಾದಕ ವಸ್ತುವಿನಂತೆ. ಮದ್ಯಕ್ಕೆ ಅಮಲಿರುವಂತೆ ಅದಕ್ಕೂ ಒಂದು ರೀತಿಯ ಅಮಲಿದೆ.'[3]

ಸಂಪತ್ತು ಅಲ್ಲಾಹನೊಂದಿಗಿನ ಸಂಬಂಧಕ್ಕೆ ಮಾತ್ರವಲ್ಲ, ಮನುಷ್ಯರ ಪರಸ್ಪರ ಸಂಬಂಧಗಳಲ್ಲೂ ಬಿರುಕನ್ನುಂಟು ಮಾಡುತ್ತದೆ. ಮುಸ್ಲಿಮ್ ಸೈನ್ಯವು ಇರಾಕನ್ನು ಜಯಿಸಿದ ಸಂದರ್ಭದಲ್ಲಿ ಅನೇಕ ಚಿನ್ನದ ಆಭರಣ ಮತ್ತಿತರ ವಸ್ತುಗಳು ಖಲೀಫಾ ಉಮರ್(ರ)ರ ಸನ್ನಿಧಿಯಲ್ಲಿ ಇಡಲ್ಪಟ್ಟಿತು. ಅದನ್ನು ನೋಡಿದ ಅವರು ಅಳತೊಡಗಿದರು. ಜನರು ಪ್ರಶ್ನಿಸಿದರು, 'ಅಮೀರುಲ್ ಮೂಮಿನೀನ್! ತಾವೇಕೆ ಅಳುತ್ತಿರುವಿರಿ? ಅಲ್ಲಾಹನು ತಮಗೆ ವಿಜಯವನ್ನು ದಯಪಾಲಿಸಿರುವನು. ಶತ್ರುಗಳನ್ನು ಪರಾಜಿತಗೊಳಿಸಿ, ಅದರ ಮೂಲಕ ಅಲ್ಲಾಹನು ತಮ್ಮ ಕಣ್ಣಿಗೆ ತಂಪನ್ನು ನೀಡಿಲ್ಲವೇ?' ಉಮರ್(ರ) ಹೇಳಿದರು:

سَمِعْتُ رَسُولَ اللهِ ﷺ يَقُولُ: لَا تُفْتَحُ الدُّنْيَا عَلَى أَحَدٍ إِلَّا أَلْقَى اللهُ عَزَّ وَجَلَّ بَيْنَهُمُ الْعَدَاوَةَ وَالْبَغْضَاءَ إِلَى يَوْمِ الْقِيَامَةِ وَأَنَا أُشْفِقُ مِنْ ذَلِكَ!

ಪ್ರವಾದಿಯವರು(ಸ) ಹೀಗೆ ಹೇಳುವುದನ್ನು ನಾನು ಕೇಳಿಸಿಕೊಂಡಿದ್ದೇನೆ, 'ಯಾವ ಸಮುದಾಯಕ್ಕೆ ಇಹಲೋಕವು ತೆರೆಯಲ್ಪಟ್ಟಿತೋ, ಅವರ ಮಧ್ಯೆ ಅಂತ್ಯ ದಿನದ ವರೆಗೆ ಮುಂದುವರಿಯುವ ಶತ್ರುತ್ವ ಮತ್ತು ದ್ವೇಷಭಾವನೆಯನ್ನು ಅಲ್ಲಾಹನು ಉಂಟು ಮಾಡದಿರುವುದಿಲ್ಲ, ನಮ್ಮ ವಿಷಯದಲ್ಲಿ ಪ್ರವಾದಿಗಳ ಈ ವಚನವು ಸಾಬೀತಾಗಿ ಬಿಡುತ್ತದೋ ಎಂದು ನನಗೆ ಭಯವಾಗುತ್ತಿದೆ.'[4]

ಸಂಪತ್ತು ಮತ್ತು ಸುಖ-ಸೌಲಭ್ಯಗಳು ಯಥೇಚ್ಛವಾಗಿ ಲಭ್ಯವಾದರೆ ಜೀವನ ದಲ್ಲಿ ಎಲ್ಲ ಸಮಸ್ಯೆಗಳು ಮುಗಿಯುತ್ತವೆ. ಆ ಬಳಿಕ ಅಲ್ಲಾಹನ ಮಾರ್ಗದಲ್ಲಿ ಸಮಾಧಾನ ದೊಂದಿಗೆ ಕೆಲಸ ಮಾಡಲು ಸಮಯ ಸಿಗುತ್ತದೆ ಎಂಬ ಕೆಲವರ ತಪ್ಪು ಕಲ್ಪನೆಯನ್ನು ಆರಂಭದ ಪ್ರವಾದಿವಚನವು ಹೋಗಲಾಡಿಸುತ್ತದೆ. ಸಂಪತ್ತು ಹೆಚ್ಚಾ ದಂತೆ ಆರಾಧನೆಗಳಿಗೆ ಹೆಚ್ಚು ಸಮಯ ವಿನಿಯೋಗಿಸುವುದಕ್ಕೆ ಬದಲಾಗಿ ಆರಾಧನೆ ಗಳಿಂದ ದೂರ ಉಳಿಯುವ ಸಾಧ್ಯತೆ ಹೆಚ್ಚಾಗಿರುತ್ತದೆ.

ಸಂಪತ್ತು ಓರ್ವ ವ್ಯಕ್ತಿಯನ್ನು ನಾಶಗೊಳಿಸುತ್ತದೆ ಎಂಬುದಕ್ಕೆ ಸಅಲಬ ಬಿನ್ ಹಾತಿಬ್‌ರ ಚರಿತ್ರೆಯು ಉತ್ತಮ ಉದಾಹರಣೆಯಾಗಿದೆ. ಒಂದು ಕಾಲದಲ್ಲಿ ಸಅಲಬ (حَمَامَةُ الْمَسْجِدِ) ಮಸೀದಿಯ ಪಾರಿವಾಳ ಎಂದು ಕರೆಯಲ್ಪಟ್ಟಿದ್ದ ಒಬ್ಬ ಶ್ರೇಷ್ಠ ವ್ಯಕ್ತಿಯಾಗಿದ್ದರು. ನಮಾಝ್‌ಗೆ, ಮತ್ತಿತರ ಕೆಲಸಗಳಿಗೆ ಕ್ರಮಬದ್ಧವಾಗಿ ಮಸೀದಿ ಯಲ್ಲಿ ಆ ವ್ಯಕ್ತಿ ಇರುತ್ತಿದ್ದ ಕಾರಣದಿಂದಾಗಿ ಅವರಿಗೆ ಆ ಹೆಸರು ಬಂದಿತ್ತು. ಉಟ್ಟ ಬಟ್ಟೆ ಕಳಚಿಟ್ಟರೆ ಉಡಲು ಬೇರೆ ವಸ್ತ್ರ ಇಲ್ಲದಷ್ಟು ದರಿದ್ರ ವ್ಯಕ್ತಿಯಾಗಿದ್ದರು ಸಅಲಬ. ಆದರೂ ದೇವನ ಮಾರ್ಗದಲ್ಲಿ ಸ್ಥಿರಚಿತ್ತತೆಯೊಂದಿಗೆ ದೃಢವಾಗಿ ನಿಂತರು. ಒಂದು ಹೊತ್ತಿನ ಸಾಮೂಹಿಕ ನಮಾಝ್ ಕೂಡ ತಪ್ಪಿ ಹೋಗದ ರೀತಿಯಲ್ಲಿ ಆರಾಧನೆಗಳನ್ನು ನಿಷ್ಠೆಯಿಂದ ಪಾಲಿಸುತ್ತಿದ್ದರು. ಅಬೂ ಉಮಾಮ(ರ) ಹೇಳುತ್ತಾರೆ: ಒಮ್ಮೆ ದಾರಿದ್ರ್ಯ ವನ್ನು ಸಹಿಸಲಾಗದೆ ಸಅಲಬ ಪ್ರವಾದಿಯವರ(ಸ) ಬಳಿಗೆ ಬಂದರು. ಅವರು ಹೀಗೆ ಹೇಳಿದರು, 'ಅಲ್ಲಾಹನ ಸಂದೇಶವಾಹಕರೇ, ನನಗೆ ಸ್ವಲ್ಪ ಸಂಪತ್ತು ಉಂಟಾಗಲು ನೀವು ಅಲ್ಲಾಹನೊಂದಿಗೆ ಪ್ರಾರ್ಥಿಸಿರಿ.' ಪ್ರವಾದಿ(ಸ) ಹೇಳಿದರು, 'ಸಅಲಬ, ಹೆಚ್ಚು ಸಂಪತ್ತುಂಟಾಗಿ ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸದಿರುವುದಕ್ಕಿಂತ ಅಲ್ಪ ಸಂಪತ್ತಿದ್ದು

ಅಲ್ಲಾಹನಿಗೆ ಕೃತಜ್ಞನಾಗಿರುವುದು ಹೆಚ್ಚು ಶ್ರೇಯಸ್ಕರ.' ಅವರು ಹೇಳಿದರು, 'ಪ್ರವಾದಿಗಳೇ, ನನಗೆ ಸಂಪತ್ತು ಸಿಕ್ಕಿದರೆ ನಾನು ಧಾರಾಳವಾಗಿ ದಾನಧರ್ಮ ಮಾಡುತ್ತೇನೆ. ಸಂಪತ್ತಿನ ಹಕ್ಕುಗಳನ್ನೆಲ್ಲ ಸರಿಯಾಗಿ ತೀರಿಸುವೆನು. ಆದುದರಿಂದ ನನಗಾಗಿ ಪ್ರಾರ್ಥಿಸಿರಿ.'.

ಅಬೂ ಉಮಾಮಾ(ರ) ಮುಂದುವರಿಯುತ್ತಾರೆ: ಸಅಲಬರಿಗಾಗಿ ಅಲ್ಲಾಹನ ಸಂದೇಶವಾಹಕರು(ಸ) ಪ್ರಾರ್ಥಿಸಿದರು. ಹೀಗೆ ಅವರ ಜೀವನದಲ್ಲಿ ಸುಭಿಕ್ಷೆಯುಂಟಾ ಯಿತು. ಅನೇಕ ಆಡು, ಕುರಿಗಳು ಅವರಿಗೆ ಸಿಕ್ಕಿದುವು. ಆರಂಭದಲ್ಲಿ ನಿಯಮಿತವಾಗಿ ಪ್ರವಾದಿಯವರನ್ನು(ಸ) ಭೇಟಿಯಾಗಲು ಬರುತ್ತಿದ್ದರು. ಆಡುಗಳು ಮರಿಗಳನ್ನು ಹಾಕಿದುವು. ಸಂಖ್ಯೆ ಹೆಚ್ಚಾಯಿತು. ಸಂಪತ್ತು ಅಧಿಕವಾಯಿತು. ಆಗ ಪ್ರವಾದಿ ಯವರ(ಸ) ಬಳಿಗೆ ಬರುವುದು ಕಡಿಮೆಯಾಗತೊಡಗಿತು. ಮಗ್ರಿಬ್ ಮತ್ತು ಇಶಾ ನಮಾಝಿಗೆ ಮಾತ್ರ ಮಸೀದಿಗೆ ಬರುತ್ತಿದ್ದರು. ಸಂಪತ್ತು ಇನ್ನೂ ಹೆಚ್ಚಿದಾಗ ಮದೀನದ ಹೊರಗೆ ತಮ್ಮ ನಿವಾಸವನ್ನು ಬದಲಿಸಿದರು ಮತ್ತು ಶುಕ್ರವಾರ ಮಾತ್ರ ಪ್ರವಾದಿಯವರನ್ನು(ಸ) ಭೇಟಿಯಾಗಲು ಬರಲಾರಂಭಿಸಿದರು. ಕೆಲವು ದಿನಗಳ ಬಳಿಕ ಅದೂ ಇಲ್ಲವಾಯಿತು. ನಮಾಝನ್ನು ಮುಗಿಸಿ ಸಹಾಬಿಗಳೊಂದಿಗೆ ಕುಳಿತಿರು ವಾಗ ಪ್ರವಾದಿಯವರು(ಸ) ಪ್ರಶ್ನಿಸಿದರು, 'ಸಅಲಬರಿಗೇನಾಯಿತು? ಇತ್ತೀಚೆಗೆ ಕಾಣಿಸುವುದೇ ಇಲ್ಲವಲ್ಲ.'

ಹೀಗಿರುವಾಗ ಝಕಾತ್ ಕಡ್ಡಾಯವೆಂಬ ಆದೇಶವಿರುವ ಪವಿತ್ರ ಕುರ್‌ಆನ್ ಸೂಕ್ತ ಅವತೀರ್ಣವಾಯಿತು. ಪ್ರವಾದಿಯವರು(ಸ) ಒಂದು ಪತ್ರದೊಂದಿಗೆ ತಮ್ಮ ಕೆಲಸಗಾರರನ್ನು ಸಅಲಬನ ಬಳಿಗೆ ಕಳುಹಿಸಿದರು. ಪತ್ರವನ್ನು ಓದಿದ ಬಳಿಕ ಸಅಲಬ ಅವರೊಂದಿಗೆ ಹೀಗೆ ಪ್ರಶ್ನಿಸಿದರು, 'ನಿಮಗೆ ಬೇರೆ ಯಾರ ಬಳಿಯಾದರೂ ಝಕಾತ್ ಸಂಗ್ರಹಿಸಲಿಕ್ಕಿದೆಯೇ? ಹಾಗಿದ್ದರೆ ಅದು ಮುಗಿಸಿ ಬನ್ನಿರಿ.' ಹೀಗೆ ಅವರು ಬೇರೆಯವರ ಬಳಿಯಲ್ಲೆಲ್ಲ ಝಕಾತನ್ನು ಸಂಗ್ರಹಿಸಿದ ಬಳಿಕ ಪುನಃ ಸಅಲಬನ ಬಳಿಗೆ ಬಂದರು. ಪ್ರವಾದಿಯವರ(ಸ) ಪತ್ರವನ್ನು ಓದಿದ ಸಅಲಬ ಹೇಳಿದರು, 'ಅಲ್ಲಾಹನಾಣೆ, ಇದು ದೊಡ್ಡ ಮೊತ್ತವೇ ಸರಿ. ನೀವು ಮರಳಿ ಹೋಗಿರಿ. ಈ ಬಗ್ಗೆ ನಾನು ಸ್ವಲ್ಪ ಆಲೋಚಿಸುತ್ತೇನೆ.'

ಅವರು ಪ್ರವಾದಿಯವರ(ಸ) ಬಳಿ ಹಿಂದಿರುಗಿದರು. ಆಗ ಈ ಕುರ್‌ಆನ್ ವಚನಗಳು ಅವತೀರ್ಣವಾದುವು, 'ಅವನು ತನ್ನ ಅನುಗ್ರಹದಿಂದ ನಮಗೇನಾದರೂ

ಕೊಟ್ಟರೆ ನಾವೂ ದಾನ ಮಾಡುವೆವೆಂದೂ ಸಜ್ಜನರಾಗಿ ಬಾಳುವೆವೆಂದೂ ಅಲ್ಲಾಹ ನೊಡನೆ ಕರಾರು ಮಾಡಿದವರೂ ಅವರಲ್ಲಿ ಕೆಲವರಿದ್ದಾರೆ. ಆದರೆ ಅಲ್ಲಾಹನು ತನ್ನ ಅನುಗ್ರಹದಿಂದ ಅವರನ್ನು ಸಂಪನ್ನರಾಗಿ ಮಾಡಿದಾಗ, ಅವರು ಜಿಪುಣತೆಗೆ ಇಳಿದರು ಮತ್ತು ತಮ್ಮ ಕರಾರಿನ ಗೊಡವೆಯೇ ಇಲ್ಲದಂತೆ ಅದರಿಂದ ವಿಮುಖರಾದರು. ಪರಿಣಾಮವಾಗಿ ಅವರು ಅಲ್ಲಾಹನೊಡನೆ ಮಾಡಿದ ಕರಾರುಭಂಗಕ್ಕಾಗಿಯೂ ಅವರು ಸುಳ್ಳು ಹೇಳಿದುದಕ್ಕಾಗಿಯೂ ಅಲ್ಲಾಹನು ಅವರ ಹೃದಯದಲ್ಲಿ ಕಾಪಟ್ಯವನ್ನು ಇರಿಸಿಬಿಟ್ಟನು. ಅದು ಅವರು ಅವನ ಸನ್ನಿಧಿಯಲ್ಲಿ ಹಾಜರಾಗುವ ವರೆಗೂ ಅವರ ಬೆನ್ನು ಬಿಡದು.' **(ಪವಿತ್ರ ಕುರ್‌ಆನ: 9: 75-77)**[5].

ಸಂಪತ್ತು ಮತ್ತು ಸುಖಾಡಂಬರಗಳು ಸಅಲಬರಂತಹ ವ್ಯಕ್ತಿಗಳನ್ನೇ ಸಂಪೂರ್ಣ ಬದಲಾಯಿಸಿಬಿಡುತ್ತದೆ ಎಂದಾದರೆ, ಇನ್ನೊಂದೆಡೆ ಸಂಪತ್ತಿನ ಸಮೃದ್ಧಿಯು ಜೀವನದ ತಾಳವನ್ನು ಕೆಡಿಸದಂತಹ ಸಹಾಬಿಗಳೂ ಇದ್ದರು. ಮುಸ್‌ಅಬ್ ಬಿನ್ ಉಮೈರ್(ರ) ಇವರ ಪೈಕಿ ಪ್ರಮುಖರಾಗಿರುವರು. ಬಹಳ ಶ್ರೀಮಂತಿಕೆಯಲ್ಲಿ ಅವರು ಜನಿಸಿದರು, ಶ್ರೀಮಂತಿಕೆಯಲ್ಲೇ ಬೆಳೆದರು. ಬೆಳಿಗ್ಗೆ ಧರಿಸಿದ ಬಟ್ಟೆಯನ್ನು ಬದಲಿಸಿ ಸಾಯಂಕಾಲ ಬೇರೆ ಬಟ್ಟೆ ಧರಿಸುತ್ತಿದ್ದರು. ಒಂದು ರೀತಿಯ ಆಹಾರ ಪದಾರ್ಥಗಳ ಪಾತ್ರೆ ತೆಗೆದ ಕೂಡಲೇ ಇನ್ನೊಂದು ರೀತಿಯ ಆಹಾರ ಸಿದ್ಧವಾಗಿ ಅವರ ಮುಂದೆ ಬರುತ್ತಿದ್ದಂತಹ ಸಂಪತ್ಸಮೃದ್ಧಿಯ ಕಾಲ. ಆದರೆ ಸತ್ಯಧರ್ಮದ ಆ ಕರೆಯನ್ನು ಆಲಿಸಿ, ದೇವನ ಮಾರ್ಗದಲ್ಲಿ ಇಳಿದು ಕೆಲಸ ಮಾಡಲು ಈ ಸಂಪತ್ಸೌಕರ್ಯಗಳು ಅವರಿಗೆ ತಡೆಯಾಗ ಲಿಲ್ಲ. ತಮ್ಮ ಕಾಲಿನಿಂದ ಅವುಗಳನ್ನೆಲ್ಲ ಅವರು ನೀಗಿಸಿ ಬಿಟ್ಟರು. ಲೌಕಿಕ ಜೀವನದ ಸುಖಲೋಲುಪತೆಯಿಂದ, ಭಯಭಕ್ತಿ ಮತ್ತು ವಿರಕ್ತಿಯ ಮಾರ್ಗಕ್ಕೆ ಅವರು ಇಳಿದು ನಡೆದರು. ಒಂದು ಕಾಲದಲ್ಲಿ ಮಕ್ಕಾದ ಅತಿ ಸುಂದರ, ಆರೋಗ್ಯವಂತ ಮತ್ತು ದೃಢ ಕಾಯನಾಗಿದ್ದ ಆ ಯುವಕ ಬಳಿಕ ಶರೀರವನ್ನು ಸಂಪೂರ್ಣವಾಗಿ ಮರೆಮಾಚಲು ಒಂದು ಹೊದಿಕೆ ಕೂಡ ಇಲ್ಲದ ರೀತಿಯಲ್ಲಿ ದರಿದ್ರರಾಗಿ ಬಿಟ್ಟರು. ಉಹುದ್ ಯುದ್ಧದಲ್ಲಿ ಹತಾತ್ಮರಾಗಿ ಪ್ರಾಣ ಹೊರಟು ಬಿದ್ದಿರುವ ಅವರ ಮೃತದೇಹವನ್ನು ನೋಡಿ ಪ್ರವಾದಿವರ್ಯರು(ಸ) ಹೀಗೆ ಹೇಳಿದರು:

لَقَدْ رَأَيْتُكَ بِمَكَّةَ، وَمَا بِهَا أَرَقُّ حُلَّةً، وَلَا أَحْسَنُ لِمَّةً مِنْكَ، ثُمَّ هَا أَنْتَ ذَا شَعِثُ الرَّأْسِ فِي بُرْدَةٍ!

'ಮಿಸ್‌ಅಬ್! ಮಕ್ಕಾದಲ್ಲಿ ನಾನು ನಿನ್ನನ್ನು ಕಂಡಿದ್ದೆ. ನಿನ್ನದಕ್ಕಿಂತ ಉತ್ತಮವಾದ ವಸ್ತ್ರವನ್ನು ಧರಿಸುವವರು, ನಿನಗಿಂತ ಸುಂದರವಾದ ತಲೆಗೂದಲಿರುವವರು

ಮಕ್ಕಾದಲ್ಲಿ ಬೇರೆ ಯಾರೂ ಇರಲಿಲ್ಲ. ಅದೇ ನೀನು ಈಗ ಹೊದಿಕೆಯ ಒಳಗೆ ಕೆದರಿದ ಕೂದಲಿನೊಂದಿಗೆ ಮಲಗಿರುವೆ,'[6]

ಮುಂದುವರಿಯುತ್ತಾ ಪ್ರವಾದಿಯವರು(ಸ) ಈ ಸೂಕ್ತವನ್ನು ಪಠಿಸಿರುವುದಾಗಿ ಉಬೈದ ಬಿನ್ ಉಮೈರ್(ರ) ವರದಿ ಮಾಡಿರುತ್ತಾರೆ, 'ಅಲ್ಲಾಹನೊಡನೆ ಮಾಡಿದ ಕರಾರನ್ನು ನಿಜವೆಂದು ಸಾಧಿಸಿ ತೋರಿಸಿದವರು ಸತ್ಯವಿಶ್ವಾಸ ಸ್ವೀಕಾರ ಮಾಡಿದವರಲ್ಲಿದ್ದಾರೆ. ಅವರಲ್ಲಿ ಕೆಲವರು ತಮ್ಮ ಪ್ರತಿಜ್ಞೆಯನ್ನು ಪೂರ್ತಿಗೊಳಿಸಿದರು. ಇನ್ನು ಕೆಲವರು ಸಮಯ ಕಾಯುತ್ತಿದ್ದಾರೆ. ಅವರು ತಮ್ಮ ನಿಲುಮೆಯಲ್ಲಿ ಏನೂ ಬದಲಾವಣೆ ಮಾಡಲಿಲ್ಲ.' **(ಅಲ್ ಅಹ್‌ಝಾಬ್: 23)**

---

1. ತಿರ್ಮಿದಿ: 2336, ಇಬ್ನು ಹಿಬ್ಬಾನ್: 3223, ಹಾಕಿಮ್: 4/318.
2. ಬುಖಾರಿ: 3159, ಮುಸ್ಲಿಮ್: 2961.
3. ಖುಲಫಾಉರ್ರಸೂಲ್ ಖಾಲಿಲದ್ ಮುಹಮ್ಮದ್ ಖಾಲಿದ್: 347.
4. ಅಹ್ಮದ್: 1/16, ಬಸ್ಸಾರ್: 3609, ಅಬೂ ಯಅ್‌ಲಾ ಅಲ್ ಕಬೀರ್.
5. ಬೈಹಕಿ – ಶುಅ್‌ಬುಲ್ ಈಮಾನ್: 4357, ತಬ್ರಾನಿ – ಕಬೀರ್: 8/7873.
6. ರಿಜಾಲು ಹೌಲರ್ರಸೂಲ್ – ಖಾಲಿದ್ ಮುಹಮ್ಮದ್ ಖಾಲಿದ್: 653.

58. ನಿಷಿದ್ಧವಾದ ದಿರ್ಹಮ್‌ಗಳು

عَنْ عَمْرُو بْنِ شُعَيْبٍ عَنْ أَبِيْهِ عَنْ جَدِّهِ، قَالَ: تَضَوَّرَ النَّبِيُّ ﷺ ذَاتَ لَيْلَةٍ فَقِيْلَ لَهُ: مَا أَسْهَرَكَ؟ قَالَ: "إِنِّي وَجَدْتُ تَمْرَةً سَاقِطَةً فَأَكَلْتُهَا، ثُمَّ ذَكَرْتُ تَمْرًا كَانَ عِنْدَنَا مِنْ تَمْرِ الصَّدَقَةِ، فَمَا أَدْرِي أَمِنْ ذَلِكَ كَانَتِ التَّمْرَةُ أَوْ مِنْ تَمْرِ أَهْلِي؟ فَذَلِكَ أَسْهَرَنِي!

ಅಮ್ರ್ ಬಿನ್ ಶುಐಬ್(ರ) ವರದಿ ಮಾಡಿರುತ್ತಾರೆ. ಒಂದು ದಿನ ಕಠಿಣ ವಾದ ಅಸ್ವಸ್ಥತೆಯ ಕಾರಣದಿಂದಾಗಿ ಪ್ರವಾದಿಯವರಿಗೆ(ಸ) ನಿದ್ರೆ ಬರ ಲಿಲ್ಲ. ಒಬ್ಬರು ಪ್ರಶ್ನಿಸಿದರು, 'ಪ್ರವಾದಿಗಳೇ, ನಿಮಗೇಕೆ ನಿದ್ರೆ ಬರಲಿಲ್ಲ?' ಅವರು ಹೇಳಿದರು, 'ಬಿದ್ದು ಸಿಕ್ಕಿದ ಒಂದು ಖರ್ಜೂರವನ್ನು ನಾನು ತಿಂದಿದ್ದೇನೆ. ಆ ಬಳಿಕ ನನಗೆ ನೆನಪಾಯಿತು. ನನ್ನ ಬಳಿ ಝಕಾತಿನ ಸೊತ್ತು ಒಳಗೊಂಡ ಖರ್ಜೂರವಿತ್ತು. ನಾನು ತಿಂದದ್ದು ಅದರಲ್ಲಿ ಸೇರಿದ ಖರ್ಜೂರವಾಗಿರಬಹುದೇ ಅಥವಾ ನನ್ನ ಕುಟುಂಬಕ್ಕೆ ಸೇರಿದ ಖರ್ಜೂರವೇ? ಈ ಚಿಂತೆಯಲ್ಲಿ ನನ್ನ ನಿದ್ರೆಯೇ ನಷ್ಟವಾಗಿ ಬಿಟ್ಟಿದೆ.'*

ಸಂಪತ್ತನ್ನು ಸಂಪಾದಿಸುವಾಗ, ಖರ್ಚು ಮಾಡುವಾಗ ದೇವನ ನಿಯಮ ನಿರ್ದೇಶನಗಳನ್ನು ಪಾಲಿಸಬೇಕು. ಮನಬಂದಂತೆ ಸಂಪತ್ತನ್ನು ಸಂಪಾದಿಸಲು ಮತ್ತು ಮನಸೋ ಇಚ್ಛೆ ಖರ್ಚು ಮಾಡಲು ಧರ್ಮವು ಯಾರಿಗೂ ಅನುಮತಿಯನ್ನು ನೀಡು ವುದಿಲ್ಲ. ಮನುಷ್ಯರೆಲ್ಲರನ್ನೂ ಸತ್ಯವಿಶ್ವಾಸಿಗಳನ್ನೂ ಈ ಬಗ್ಗೆ ಪವಿತ್ರ ಕುರ್‌ಆನ್ ಎಚ್ಚರಿಸಿದೆ. (ನೋಡಿರಿ: ಅಲ್ ಬಕರ: 168-172)

* ಫತ್‌ಹುಲ್ ಬಾರಿ: 4/344, ಇಹ್ಯಾಉ ಉಲೂಮುದ್ದೀನ್: 2/99, ಹಾಫಿಝ್ ಇರಾಕಿ ಹೇಳುತ್ತಾರೆ: ಇಮಾಮ್ ಅಹ್ಮದ್ ಪ್ರಬಲವಾದ ವರದಿ ಪರಂಪರೆಯೊಂದಿಗೆ ಈ ಪ್ರವಾದಿವಚನವನ್ನು ಉಲ್ಲೇಖಿಸಿರುತ್ತಾರೆ.

ಮಾತ್ರವಲ್ಲ, ಸಕಲ ಪ್ರವಾದಿಗಳನ್ನು ಒಟ್ಟಾಗಿ ಅಭಿಸಂಬೋಧಿಸಿ ಪವಿತ್ರ ಕುರ್‌ಆನ್ ಒಂದು ಕಡೆ ಮಾತ್ರ ನಿರ್ದೇಶನವನ್ನು ನೀಡಿದೆ. ಅದು ಸಂಪತ್ತಿನ ವಿಷಯದಲ್ಲಿ ಪಾಲಿಸಬೇಕಾದ ಶಿಸ್ತಿನ ಕುರಿತಾಗಿದೆ. ಅಲ್ಲಾಹನು ಸ್ಪಷ್ಟಪಡಿಸಿರುತ್ತಾನೆ, 'ಸಂದೇಶ ವಾಹಕರುಗಳೇ, ಶುದ್ಧ ವಸ್ತುಗಳನ್ನು ಉಣ್ಣಿರಿ ಮತ್ತು ಸತ್ಕರ್ಮಗಳನ್ನು ಮಾಡಿರಿ. ನಿಶ್ಚಯವಾಗಿಯೂ ನೀವು ಮಾಡುವುದೆಲ್ಲವನ್ನೂ ನಾನು ಚೆನ್ನಾಗಿ ಅರಿಯುತ್ತೇನೆ.'

(ಅಲ್ ಮೂಮಿನೂನ್: 51)

ಶದ್ದಾದ್ ಬಿನ್ ಔಸ್(ರ)ರಿಂದ ಸಹೋದರಿ ಉಮ್ಮು ಅಬ್ದುಲ್ಲಾ(ರ) ವರದಿ ಮಾಡಿರುತ್ತಾರೆ: ಒಮ್ಮೆ ಪ್ರವಾದಿಯವರಿಗೆ(ಸ) ಅನುಯಾಯಿಗಳು ಒಂದು ಲೋಟ ಹಾಲು ನೀಡಿದರು. مِنْ أَيْنَ لَكُمْ هَذَا؟ ನಿಮಗೆ ಇದು ಎಲ್ಲಿಂದ ಸಿಕ್ಕಿತು? ಎಂದು ಪ್ರವಾದಿ(ಸ) ಪ್ರಶ್ನಿಸಿದರು. ಅವರು ಹೇಳಿದರು: مِنَ الشَّاةِ ಈ ಆಡಿನಿಂದ ಕರೆದು ತೆಗೆಯಲಾಗಿದೆ. ಪುನಃ ಪ್ರಶ್ನಿಸಿದರು: مِنْ أَيْنَ لَكُمْ هَذِهِ الشَّاةُ؟ ಆ ಆಡನ್ನು ನೀವೆಲ್ಲಿಂದ ಖರೀದಿಸಿದ್ದಿರಿ? ಅವರು ಉತ್ತರಿಸಿದರು: مِنْ مَوْضِعِ كَذَا ಇಂತಹ ಸ್ಥಳದಿಂದ. ಆಗ ಪ್ರವಾದಿಯವರು(ಸ) ಆ ಹಾಲನ್ನು ಕುಡಿದರು ಮತ್ತು ಹೀಗೆಂದರು:

إِنَّا مَعَاشِرُ الْأَنْبِيَاءِ، أُمِرْنَا أَنْ لَا نَأْكُلَ إِلَّا طَيِّبًا وَلَا نَعْمَلَ إِلَّا صَالِحًا

'ಉತ್ತಮವಾದುದನ್ನು ಹೊರತು ಯಾವುದನ್ನೂ ತಿನ್ನಬಾರದು,. ಸತ್ಕರ್ಮಗಳಲ್ಲದ ಯಾವುದನ್ನೂ ಮಾಡಬಾರದು ಎಂದು ಪ್ರವಾದಿಗಳಾದ ನಮಗೆ ನಿರ್ದೇಶಿಸಲಾಗಿದೆ.'[1]

ಇನ್ನೊಂದು ಸಂದರ್ಭದಲ್ಲಿ ಪ್ರವಾದಿವರ್ಯರು(ಸ) ಹೀಗೆ ಹೇಳಿರುವರು:

إِنَّ اللهَ طَيِّبٌ، لَا يَقْبَلُ إِلَّا طَيِّبًا، وَإِنَّ اللهَ أَمَرَ الْمُؤْمِنِيْنَ بِمَا أَمَرَ بِهِ الْمُرْسَلِيْنَ، فَقَالَ: يَا أَيُّهَا الرُّسُلُ
كُلُوا مِنَ الطَّيِّبَاتِ وَاعْمَلُوا صَالِحًا إِنِّي بِمَا تَعْمَلُونَ عَلِيْمٌ (اَلْمُؤْمِنُون ٥١)
وَقَالَ: يَا أَيُّهَا الَّذِيْنَ آمَنُوا كُلُوا مِنَ الطَّيِّبَاتِ مَا رَزَقْنَاكُمْ (اَلْبَقَرَةُ ١٧٢)

'ಅಲ್ಲಾಹ್ ಪರಿಶುದ್ಧನು. ಪರಿಶುದ್ಧನ್ನಲ್ಲದೆ ಅವನು ಸ್ವೀಕರಿಸುವುದಿಲ್ಲ, ಪ್ರವಾದಿಗಳಿಗೆ ಆದೇಶಿಸಿರುವುದನ್ನೇ ಅವನು ಸತ್ಯವಿಶ್ವಾಸಿಗಳಿಗೂ ಆದೇಶಿಸಿದ್ದಾನೆ. ಸಂದೇಶ ವಾಹಕರುಗಳೇ! ಶುದ್ಧ ವಸ್ತುಗಳನ್ನು ಉಣ್ಣಿರಿ ಮತ್ತು ಸತ್ಕರ್ಮಗಳನ್ನು ಮಾಡಿರಿ. ನಿಶ್ಚಯ ವಾಗಿಯೂ ನೀವು ಮಾಡುವುದೆಲ್ಲವನ್ನೂ ನಾನು ಚೆನ್ನಾಗಿ ಅರಿಯುತ್ತೇನೆ.'

(ಅಲ್ ಮೂಮಿನೂನ್: 51)

'ಓ ಸತ್ಯವಿಶ್ವಾಸಿಗಳೇ, ನೀವು ನಿಜವಾಗಿಯೂ ಅಲ್ಲಾಹನ ದಾಸ್ಯ-ಆರಾಧನೆಯನ್ನೇ ಮಾಡುವವರಾದರೆ, ನಾವು ನಿಮಗೆ ಒದಗಿಸಿರುವ ಶುದ್ಧವಾದ ವಸ್ತುಗಳನ್ನು ನಿರಾತಂಕವಾಗಿ ಉಣ್ಣಿರಿ ಮತ್ತು ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸಿರಿ.' (ಅಲ್ ಬಕರ: 172)[2]

ನಮಾಝ್, ಉಪವಾಸ ವ್ರತ ಮತ್ತಿತರ ಆರಾಧನೆಗಳು ಸ್ವೀಕರಿಸಲ್ಪಡಬೇಕಾದರೆ, ಸೇವಿಸುವ ಆಹಾರ, ಧರಿಸುವ ಬಟ್ಟೆ, ಕುಡಿಯುವ ನೀರು ಎಲ್ಲವೂ ನಿಷಿದ್ಧದಿಂದ ಮುಕ್ತವಾಗಿರಬೇಕು. ಒಂದು ಪ್ರವಾದಿವಚನ ಹೀಗಿದೆ:

مَنِ اشْتَرَى ثَوْبًا بِعَشَرَةِ دَرَاهِمَ وَفِيْهِ دِرْهَمٌ حَرَامٌ، لَمْ يَقْبَلِ اللّٰهُ لَهُ صَلاَةً مَا دَامَ عَلَيْهِ

'ಹತ್ತು ದಿರ್ಹಮ್ ನೀಡಿ ವ್ಯಕ್ತಿ ವಸ್ತ್ರ ಖರೀದಿಸಿದ. ಅದರಲ್ಲಿ ಒಂದು ದಿರ್ಹಮ್ ನಿಷಿದ್ಧ ಸಂಪಾದನೆಯಾಗಿತ್ತು. ಹಾಗಿದ್ದಲ್ಲಿ ಆ ವಸ್ತ್ರವು ಅವನ ಜೊತೆಗಿರುವ ವರೆಗೆ ಅವನ ಒಂದು ನಮಾಝನ್ನು ಕೂಡ ಅಲ್ಲಾಹನು ಅವನಿಂದ ಸ್ವೀಕರಿಸುವುದಿಲ್ಲ.'[3]

ಪ್ರಾರ್ಥನೆಗಳು ಸ್ವೀಕರಿಸಲ್ಪಡಬೇಕಿದ್ದರೂ ಸಂಪತ್ತಿನ ಪರಿಶುದ್ಧತೆ ಅನಿವಾರ್ಯವಾಗಿದೆ. ಅಬೂಹುರೈರಾ(ರ) ಹೇಳುತ್ತಾರೆ:

ذَكَرَ رَسُولُ اللّٰهِ ﷺ الرَّجُلَ، يُطِيْلُ السَّفَرَ، أَشْعَثَ، أَغْبَرَ، يَمُدُّ يَدَيْهِ إِلَى السَّمَاءِ: يَا رَبِّ! يَا رَبِّ!
وَمَطْعَمُهُ حَرَامٌ، وَمَشْرَبُهُ حَرَامٌ، وَمَلْبَسُهُ حَرَامٌ، وَغُذِيَ بِالْحَرَامِ، فَأَنَّى يُسْتَجَابُ لِذٰلِكَ؟

ಪ್ರವಾದಿಯವರು(ಸ) ಒಮ್ಮೆ ಓರ್ವ ವ್ಯಕ್ತಿಯನ್ನು ನೆನಪಿಸಿದರು: ಅವನು ದೀರ್ಘಕಾಲ ಯಾತ್ರೆ ಮುಗಿಸಿ ಮರಳುತ್ತಿದ್ದನು ಅವನ ಕೂದಲುಗಳು ಕೆದರಿದ್ದುವು. ವಸ್ತ್ರವು ಕೊಳಕಾಗಿತ್ತು. ಆಕಾಶದೆಡೆಗೆ ಕೈಗಳನ್ನೆತ್ತಿ 'ನನ್ನ ಪ್ರಭೂ, ನನ್ನ ಪ್ರಭೂ...' ಎಂದು ಬೇಡಿಕೆಗಳನ್ನು ಸಲ್ಲಿಸುತ್ತಿರುವನು. ಆ ವ್ಯಕ್ತಿಯ ಆಹಾರ ನಿಷಿದ್ಧವಾಗಿದೆ. ಪಾನೀಯ ನಿಷಿದ್ಧವಾಗಿದೆ. ವಸ್ತ್ರವು ನಿಷಿದ್ಧವಾಗಿದೆ. ನಿಷಿದ್ಧವಾದ ವಸ್ತುಗಳೊಂದಿಗೆ ಅವನು ಜೀವಿಸುತ್ತಿರುವನು. ಹೀಗಿರುವಾಗ ಅವನಿಂದ ಪ್ರಾರ್ಥನೆಗಳು ಸ್ವೀಕರಿಸಲ್ಪಡುವುದು ಹೇಗೆ?[4]

ಒಮ್ಮೆ ಸಅದ್(ರ) ಪ್ರವಾದಿಯವರೊಂದಿಗೆ(ಸ) ಪ್ರಶ್ನಿಸಿದರು:

يَا رَسُوْلَ اللّٰهِ ، أُدْعُ اللّٰهَ أَنْ يَجْعَلَنِى مُسْتَجَابَ الدَّعْوَةِ

'ಅಲ್ಲಾಹನ ಪ್ರವಾದಿಗಳೇ, ಪ್ರಾರ್ಥನೆಗಳು ಸ್ವೀಕರಿಸಲ್ಪಡುವವರ ಗುಂಪಿನಲ್ಲಿ ನಾವೂ ಸೇರಲು ನೀವು ಅಲ್ಲಾಹನೊಂದಿಗೆ ಭಿನ್ನವಿಸಿರಿ.' ಪ್ರವಾದಿ(ಸ) ಹೇಳಿದರು,

يَا سَعْدُ، أَطِبْ مَطْعَمَكَ تَكُنْ مُسْتَجَابَ الدَّعْوَةِ، وَالَّذِي نَفْسُ مُحَمَّدٍ بِيَدِهِ، إِنَّ الْعَبْدَ لَيَقْذِفُ اللُّقْمَةَ الْحَرَامَ فِي جَوْفِهِ مَا يُتَقَبَّلُ مِنْهُ عَمَلُ أَرْبَعِينَ يَوْمًا، وَأَيُّمَا عَبْدٍ نَبَتَ لَحْمُهُ مِنْ سُحْتٍ فَالنَّارُ أَوْلَى بِهِ

'ಸಅದ್, ನಿಮ್ಮ ಆಹಾರವು ನಿಷಿದ್ಧವಾದವುಗಳಿಂದ ಮುಕ್ತವಾಗಿರಬೇಕು. ಹಾಗಿದ್ದಲ್ಲಿ ಪ್ರಾರ್ಥನೆಗಳು ಸ್ವೀಕರಿಸಲ್ಪಡುವ ಗುಂಪಿನಲ್ಲಿ ನೀವೂ ಸೇರಿಕೊಳ್ಳುವಿರಿ. ಈ ಮುಹಮ್ಮದ್‌ನ ಆತ್ಮವು ಯಾರ ಕೈಯಲ್ಲಿದೆಯೋ ಅವನಾಣೆ. ಓರ್ವ ದಾಸನು ನಿಷಿದ್ಧ ವಾದ ಆಹಾರ ಪದಾರ್ಥಗಳಿಂದ ಒಂದು ಹಿಡಿ ತನ್ನ ಹೊಟ್ಟೆಗೆ ಕಳಿಸಿದರೆ, ನಲ್ವತ್ತು ದಿನಗಳ ಪ್ರಾರ್ಥನೆಗಳು ಅವನಿಂದ ಸ್ವೀಕರಿಸಲ್ಪಡುವುದಿಲ್ಲ. ನಿಷಿದ್ಧ ಆಹಾರವನ್ನು ತಿಂದು ಬೆಳೆದ ಶರೀರವು ಅಂತ್ಯದಿನದಂದು ನರಕದ ಸಮೀಪದಲ್ಲಿರುತ್ತದೆ.'[5]

لَوْ صَلَّيْتُمْ حَتَّى تَكُونُوا كَالْحَنَايَا، فَصُمْتُمْ حَتَّى تَكُونُوا كَالْأَوْتَارِ لَمْ يُقْبَلْ ذَٰلِكَ مِنْكُمْ إِلَّا بِوَرَعٍ حَاجِزٍ

ಇಬ್ನು ಉಮರ್(ರ) ಹೇಳುತ್ತಾರೆ: 'ನೀವು ಬೆನ್ನುಮೂಳೆ ಬಾಗುವ ವರೆಗೆ ನಮಾಝ್ ನಿರ್ವಹಿಸಿದರೂ ಎಲುಬುಗಳು ಗೋಚರವಾಗುವಂತೆ ಉಪವಾಸವನ್ನು ಆಚರಿಸಿ ಕೃಶವಾಗಿ ಬಿಟ್ಟರೂ ನಿಷಿದ್ಧ ವಾದವುಗಳನ್ನು ತೊರೆಯದೆ ನಿಮ್ಮಿಂದ ಯಾವ ಆರಾಧನೆಗಳನ್ನೂ ಅಲ್ಲಾಹನು ಸ್ವೀಕರಿಸುವುದಿಲ್ಲ.'[6]

ಧರ್ಮಸಮ್ಮತ, ಧರ್ಮನಿಷಿದ್ಧ ಎಂದು ಲೆಕ್ಕಿಸದೆ ಸಿಕ್ಕಿದ್ದೆಲ್ಲವನ್ನೂ ಸಂಪಾದಿಸಿ ಸಂಗ್ರಹಿಸುವವರು ಜೀವನದ ಕೊನೆಯ ಕ್ಷಣದಲ್ಲಿ ಪಶ್ಚಾತ್ತಾಪ ಪಟ್ಟರೆ ಅಲ್ಲಾಹನ ಶಿಕ್ಷೆ ಯಿಂದ ರಕ್ಷಣೆ ಹೊಂದಬಹುದು, ಪರಲೋಕ ಜೀವನದಲ್ಲಿ ವಿಚಾರಣೆಯ ವೇಳೆ ಸುರಕ್ಷಿತರಾಗಿ ಬಿಡುವೆವು ಎಂದು ಭಾವಿಸುವವರಿದ್ದಾರೆ. ಅನ್ಯಾಯ, ಅಕ್ರಮವನ್ನು ನಿರಂತರವಾಗಿ ಮಾಡುತ್ತಾ ಅನ್ಯರ ಸಂಪತ್ತನ್ನು ಕಬಳಿಸುವವರು ಆ ಬಳಿಕ ಧರ್ಮನಿಷ್ಠೆ ಮತ್ತು ಪುಣ್ಯಕಾರ್ಯಗಳನ್ನೆಸಗಿ ಜೀವನವನ್ನು ಸಾಗಿಸಲು ಪ್ರಯತ್ನಿಸುವರು. ಅಂತಹ ಮೂಢರ ಭಾವನೆಗಳನ್ನು ಈ ಕೆಳಗಿನ ಪ್ರವಾದಿವಚನವು ದೂರೀಕರಿಸುತ್ತದೆ. ಪ್ರವಾದಿವರ್ಯರು(ಸ) ಹೀಗೆ ಹೇಳಿರುವರು:

مَنِ اكْتَسَبَ مَالًا مِنْ مَأْثَمٍ، فَوَصَلَ بِهِ رَحِمَهُ، أَوْ تَصَدَّقَ بِهِ، أَوْ أَنْفَقَهُ فِي سَبِيلِ اللهِ جُمِعَ ذَٰلِكَ كُلُّهُ جَمِيعًا، فَقُذِفَ بِهِ جَهَنَّمَ

'ಅನ್ಯಾಯವಾಗಿ ಒಬ್ಬ ವ್ಯಕ್ತಿ ಸಂಪತ್ತನ್ನು ಸಂಪಾದಿಸಿದ ಬಳಿಕ ಅದನ್ನು ಬಳಸಿ ಕುಟುಂಬ ಸಂಬಂಧಗಳನ್ನು ಜೋಡಿಸುತ್ತಾ, ದಾನಧರ್ಮಗಳನ್ನು ಮಾಡುತ್ತಾ, ದೇವ ಮಾರ್ಗದಲ್ಲಿ ಹಣವನ್ನು ಖರ್ಚು ಮಾಡಿದರೂ ಅಂತ್ಯದಿನದಂದು ಅಲ್ಲಾಹನು ಆ ವ್ಯಕ್ತಿಯನ್ನು ಅವೆಲ್ಲವುಗಳನ್ನು ಒಟ್ಟು ಸೇರಿಸಿ ನರಕಕ್ಕೆ ಎಸೆದುಬಿಡುವನು.'[7]

ಝೈದ್ ಬಿನ್ ಅರ್ಕಮ್(ರ)ರಿಂದ ವರದಿ. ಅಬೂಬಕರ್(ರ)ರಿಗೆ ಆಹಾರ ವನ್ನು ತಂದು ಕೊಡುವ ಒಬ್ಬ ಸೇವಕನಿದ್ದನು. ಒಂದು ರಾತ್ರಿ ಅವನು ಆಹಾರವನ್ನು ತೆಗೆದುಕೊಂಡು ಬಂದನು. ಅಬೂಬಕರ್(ರ) ಅದರಿಂದ ಸ್ವಲ್ಪ ಆಹಾರವನ್ನು ತೆಗೆದು ಬಾಯಿಗಿರಿಸಿದರು. ಸೇವಕ ಪ್ರಶ್ನಿಸಿದನು, 'ನಾನು ಆಹಾರವನ್ನು ತೆಗೆದುಕೊಂಡು ಬಂದರೆ ಪ್ರತಿ ಬಾರಿ ನೀವು ಇದನ್ನೆಲ್ಲಿಂದ ತಂದೆನೆಂದು ಪ್ರಶ್ನಿಸಿತ್ತೀರಿ. ಇಂದು ಮಾತ್ರ ಪ್ರಶ್ನಿಸಿಲ್ಲ, ಇದಕ್ಕೆ ಕಾರಣವೇನು?' ಅಬೂಬಕರ್(ರ) ಹೇಳಿದರು, 'ಹಸಿವಿನಿಂದಿದ್ದ ಕಾರಣ ನಾನು ಕೇಳಲು ಮರೆತುಬಿಟ್ಟೆ. ಹೇಳು, ನೀನಿದನ್ನು ಎಲ್ಲಿಂದ ತಯಾರಿಸಿ ತಂದೆ?'

ಅವನು ಉತ್ತರಿಸಿದ, 'ಅಜ್ಞಾನ ಕಾಲದಲ್ಲಿ ನಾನು ಮಂತ್ರಿಸಿ ಊದುವ ಕೆಲಸ ವನ್ನು ಮಾಡುತ್ತಿದ್ದೆ. ಅದಕ್ಕೆ ಪ್ರತಿಫಲವಾಗಿ ಅವರು ನನಗೆ ಏನನ್ನೂ ನೀಡಿರಲಿಲ್ಲ. ಹೀಗೆ ನಾನು ಇಂದು ಅವರ ಬಳಿಯಿಂದ ಹಾದು ಹೋಗುವಾಗ ಅಲ್ಲಿ ಒಂದು ವಿವಾಹ ಸಂಭ್ರಮ ನಡೆಯುತ್ತಿತ್ತು. ಬರುವಾಗ ಅವರು ನನಗೆ ನೀಡಿದ ಆಹಾರವನ್ನೇ ನಾನೀಗ ನಿಮಗೆ ನೀಡಿದೆ.' ಅಬೂಬಕರ್(ರ) ಹೇಳಿದರು, 'ನೀನು ನಾಶವಾಗಿ ಹೋಗು. ನೀನು ನನ್ನನ್ನು ನಾಶಗೊಳಿಸಿ ಬಿಟ್ಟೆ.' ಆ ಬಳಿಕ ತಮ್ಮ ಕೈಬೆರಳನ್ನು ಗಂಟಳಿಗೆ ಹಾಕಿ, ತಿಂದ ಆಹಾರವನ್ನೆಲ್ಲ ಕಷ್ಟಪಟ್ಟು ವಾಂತಿ ಮಾಡಿ ಬಿಟ್ಟರು. ಬಳಿಕ ಹೀಗೆಂದರು:

لَوْ لَمْ تَخْرُجْ إِلَّا مَعَ نَفْسِي لَأَخْرَجْتُهَا، سَمِعْتُ رَسُولَ اللّٰهِ ﷺ يَقُوْلُ: "كُلُّ جَسَدٍ نَبَتَ مِنْ سُحْتٍ فَالنَّارُ أَوْلَى بِهِ" فَخَشِيْتُ أَنْ يَنْبُتَ شَيْئٌ مِنْ جَسَدِيْ مِنْ هٰذِهِ اللُّقْمَةِ!

'ನನ್ನ ಜೀವ ಹೊರಟು ಹೋದರೆ ಮಾತ್ರ ಈ ನಿಷಿದ್ಧ ಆಹಾರವು ನನ್ನ ಹೊಟ್ಟೆ ಯಿಂದ ಹೊರಕ್ಕೆ ಬರುತ್ತದೆ. ಎಂದಾದರೂ ನಾನು ಈ ಆಹಾರವನ್ನು ಹೊರಕ್ಕೆ ಹಾಕಿಯೇ ಬಿಡುವೆನು. ಏಕೆಂದರೆ, ಅಂತ್ಯದಿನದಂದು ನರಕಕ್ಕೆ ಅತಿ ಸಮೀಪ ವಾಗಿರುವುದು ನಿಷಿದ್ಧ ಆಹಾರ ಸೇವಿಸಿದ ಶರೀರವಾಗಿದೆ. ಈ ಆಹಾರ ತಿಂದ ಕಾರಣ ದಿಂದಾಗಿ ನನ್ನ ದೇಹವು ನರಕಕ್ಕೆ ಅರ್ಹವಾಗಿ ಬಿಡುತ್ತದೋ ಎಂದು ನಾನು ಭಯಪಡುತ್ತೇನೆ.'[8]

ಅನ್ಯಾಯವಾದ ಸಂಪತ್ತು ನನ್ನ ಉದರಕ್ಕೆ ಸೇರಿಬಿಟ್ಟಿತೋ ಎಂಬ ಹೆದರಿಕೆ ಒಂದು ರಾತ್ರಿ ಪೂರ್ತಿ ಪ್ರವಾದಿಯವರ(ಸ) ನಿದ್ರೆಯನ್ನು ಕೆಡಿಸಲು ಕಾರಣವಾಗಿತ್ತು ಎಂಬುದು ಆರಂಭದಲ್ಲಿ ಪ್ರಸ್ತಾಪಿಸಿರುವ ಹದೀಸ್‌ನಿಂದ ಮನವರಿಕೆಯಾಗುತ್ತದೆ. ಆ ಪ್ರವಾದಿಯವರ(ಸ) ಮಾರ್ಗವನ್ನು ಅನುಸರಿಸುತ್ತೇವೆಂದು ಹೇಳಬೇಕಾದರೆ ಸತ್ಯ ವಿಶ್ವಾಸಿಗಳು ಎಷ್ಟರ ಮಟ್ಟಿಗೆ ಈ ಭಯ ಮತ್ತು ಜಾಗರೂಕತೆಗಳನ್ನು ಪಾಲಿಸ ಬೇಕಾದೀತು ಎನ್ನುವುದರ ಕುರಿತು ಆಲೋಚಿಸಬೇಕೆಂಬ ಪ್ರೇರಣೆಯು ಈ ಪ್ರವಾದಿ ವಚನದಿಂದ ನಮಗೆ ಸಿಗುತ್ತದೆ.

---

1. ತಬ್ರಾನಿ.
2. ಮುಸ್ಲಿಮ್: 1015, ತಿರ್ಮಿದಿ: 2989.
3. ಅಹ್ಮದ್; 2/98, ಬೈಹಕಿ – ಶುಅ್‌ಬುಲ್ ಈಮಾನ್: 6114, ಮಜ್ಮಉಸ್ಸವಾಇದ್: 10/282.
4. ಮುಸ್ಲಿಮ್: 1015, ತಿರ್ಮಿದಿ: 2989.
5. ತಬ್ರಾನಿ – ಸಗೀರ್, ಮಜ್ಮಉಸ್ಸವಾಇದ್: 10/291.
6. ಇಹ್ಯಾಉ ಉಲೂಮುದ್ದೀನ್, ಭಾಗ: 2, ಪುಟ: 91.
7. ಅಬೂದಾವೂದ್ – ಮರಾಸೀಲ್: 117.
8. ಹಿಲ್ಯತುಲ್ ಔಲಿಯಾಅ್ – ಹಾಫಿಝ್ ಅಬೂ ನುಐಮ್.

59. ಬಡ್ಡಿಯೆಂಬ ಪಾತಕ

عَنْ أَبِي هُرَيْرَةَ رَضِيَ اللَّهُ عَنْهُ أَنَّ رَسُوْلَ ﷺ قَالَ: يَأْتِي عَلَى النَّاسِ زَمَانٌ يَأْكُلُوْنَ فِيْهِ الرِّبَا. قِيْلَ: النَّاسُ كُلُّهُمْ؟ قَالَ: مَنْ لَمْ يَأْكُلْهُ مِنْهُمْ نَالَهُ مِنْ غُبَارِهِ

ಅಬೂಹುರೈರಾ(ರ)ರಿಂದ ವರದಿ. ಪ್ರವಾದಿ(ಸ) ಹೇಳಿದರು, 'ಒಂದು ಕಾಲ ಬರುವುದು. ಅಂದು ಜನರು ಬಡ್ಡಿಯನ್ನು ತಿನ್ನುವವರಾಗುವರು.' ಒಬ್ಬರು ಕೇಳಿದರು, 'ಎಲ್ಲ ಜನರೂ ಅದನ್ನು ತಿನ್ನುವವರಾಗುವರೇ?' ಪ್ರವಾದಿ(ಸ) ಹೇಳಿದರು, 'ಅದನ್ನು ತಿನ್ನದವನಿಗೂ ಅದರ ಧೂಳಾದರೂ ಸೋಂಕುವುದು.'*

ಅಲ್ಲಾಹ್ ಮತ್ತು ಅವನ ಪ್ರವಾದಿ(ಸ) ಯುದ್ಧ ಸಾರಿರುವ, ಪ್ರವಾದಿಯವರು(ಸ) ಏಳು ಮಹಾಪಾಪಗಳ ಪೈಕಿ ಒಂದೆಂದು ಸಾರಿರುವ ಬಹಳ ಗಂಭೀರವಾದ ಆರ್ಥಿಕ ಕೆಡುಕಾಗಿದೆ ಬಡ್ಡಿ. ಇದು ಅನ್ಯಾಯವಾಗಿ ಇತರರ ಸಂಪತ್ತನ್ನು ಕಬಳಿಸುವುದಾಗಿದೆ. ಬಡ್ಡಿಯ ಬಗ್ಗೆ ಇದು ದರೋಡೆ, ಕಳ್ಳತನಕ್ಕಿಂತಲೂ ನಿಕೃಷ್ಟವಾದ ಒಂದು ಕೆಡುಕೆಂದು ಇಸ್ಲಾಮ್ ಹೇಳುತ್ತದೆ.

ಬಡ್ಡಿಯ ಎಲ್ಲ ಪ್ರಕಾರಗಳನ್ನು ಪ್ರವಾದಿಯವರು(ಸ) ನಿಷೇಧಿಸಿರುವರು. ಬಡ್ಡಿ ಪಡೆಯುವುದು, ಬಡ್ಡಿ ನೀಡುವುದು, ಬಡ್ಡಿಯ ವ್ಯವಹಾರದಲ್ಲಿ ಪಾಲ್ಗೊಳ್ಳುವುದು, ಬಡ್ಡಿಯಾಧಾರಿತ ಸಂಸ್ಥೆಗಳಲ್ಲಿ ಕೆಲಸ ಮಾಡುವುದು ಎಲ್ಲವೂ ಒಂದೇ ರೀತಿಯಲ್ಲಿ ಶಿಕ್ಷೆಗೆ ಅರ್ಹವಾದ ಮಹಾ ಅಪರಾಧಗಳಾಗಿವೆ. ಬಡ್ಡಿ ಮತ್ತು ಬಡ್ಡಿ ತಿನ್ನುವವರ ವಿರುದ್ಧ

* ಇಮಾಮ್ ಅಹ್ಮದ್: 2/494, ಅಬೂದಾವೂದ್: 3331, ನಸಾಈ: 7/243, ಇಬ್ನುಮಾಜ: 2278, ಹಾಕಿಮ್: 2/11, ಸುಯೂತಿ – ಜಾಮಿಉಸ್ಸಗೀರ್: 7531, ಅಬೂಯಅ್‌ಲಾ: 6233, ಬೈಹಕಿ – ಸುನನುಲ್ ಕುಬ್ರಾ: 10473 ಮುಂತಾದವರು ಈ ಪ್ರವಾದಿವಚನವನ್ನು ಉಲ್ಲೇಖಿಸಿದ್ದಾರೆ. ಹದೀಸ್ ಸಹೀಹ್ ಆಗಿದೆಯೆಂದು ಇಮಾಮ್ ದಹಬಿ, ಸುಯೂತಿ, ಹಾಕಿಮ್ ಮುಂತಾದವರು ಅಭಿಪ್ರಾಯಪಡುತ್ತಾರೆ.

ಪವಿತ್ರ ಕುರ್‌ಆನ್ ಯುದ್ಧ ಸಾರಿರುವುದನ್ನು ನೋಡಿರಿ, 'ಓ ಸತ್ಯವಿಶ್ವಾಸಿಗಳೇ! ಅಲ್ಲಾಹನನ್ನು ಭಯಪಡಿರಿ. ನೀವು ನಿಜಕ್ಕೂ ವಿಶ್ವಾಸಿಗಳಾಗಿರುವಿರಾದರೆ, ಜನರಿಂದ ನಿಮಗೆ ಬರತಕ್ಕ ಬಡ್ಡಿಯನ್ನು ಬಿಟ್ಟು ಬಿಡಿರಿ. ನೀವು ಹಾಗೆ ಮಾಡದಿದ್ದರೆ, ಅಲ್ಲಾಹ್ ಮತ್ತು ಅವನ ಸಂದೇಶವಾಹಕರ ಕಡೆಯಿಂದ ನಿಮ್ಮ ವಿರುದ್ಧ ಯುದ್ಧ ಘೋಷಣೆ ಇದೆಯೆಂದು ನಿಮಗೆ ತಿಳಿದಿರಲಿ.' **(ಅಲ್ ಬಕರ: 278-279)**

'ಆದುದರಿಂದ ತನ್ನ ಪ್ರಭು ವಿನ ವತಿಯಿಂದ ಈ ಉಪದೇಶ ತಲುಪಿದಾತನು ಮುಂದೆ ಬಡ್ಡಿಯ ವ್ಯವಹಾರವನ್ನು ವರ್ಜಿಸಿದರೆ, ಗತಕಾಲದಲ್ಲಿ ತಿಂದುದು ತಿಂದಾಯಿತು ಮತ್ತು ಅವರ ಪ್ರಕರಣವು ಅಲ್ಲಾಹನ ವಶವಿದೆ. ಈ ಆದೇಶದ ಅನಂತರವೂ ಈ ಕೃತ್ಯವನ್ನು ಪುನರಾವರ್ತಿಸಿದರೆ, ಅಂತಹವರು ನರಕವಾಸಿಗಳಾಗಿದ್ದು, ಸದಾ ಅಲ್ಲೇ ನರಳುತ್ತಿರುವರು.' **(ಅಲ್ ಬಕರ: 275)**

ಬಡ್ಡಿ ತಿನ್ನುವವನಿಗೆ ಪರಲೋಕದಲ್ಲಿ ಸಿಗಲಿರುವ ಕಠಿಣ ಶಿಕ್ಷೆಯ ಬಗ್ಗೆ ಮುನ್ನೆಚ್ಚರಿಕೆ ನೀಡುವ ಅನೇಕ ಪ್ರವಾದಿವಚನಗಳಿವೆ. ಸಮುರಃ ಬಿನ್ ಜುಂದುಬ್(ರ) ಒಂದು ಪ್ರವಾದಿವಚನವನ್ನು ಉಲ್ಲೇಖಿಸಿರುವರು. ಪ್ರವಾದಿ(ಸ) ಹೇಳಿರುವರು:

رَأَيْتُ اللَّيْلَةَ رَجُلَيْنِ أَتَيَانِي، فَأَخْرَجَانِي إِلَى أَرْضٍ مُقَدَّسَةٍ، فَانْطَلَقْنَا حَتَّى أَتَيْنَا عَلَى نَهَرٍ مِنْ دَمٍ وَفِيهِ رَجُلٌ قَائِمٌ، وَعَلَى شَطِّ النَّهَرِ رَجُلٌ، بَيْنَ يَدَيْهِ حِجَارَةٌ، فَأَقْبَلَ الرَّجُلُ الَّذِي فِي النَّهَرِ، فَإِذَا أَرَادَ أَنْ يَخْرُجَ رَمَى الرَّجُلُ بِحَجَرٍ فِي فِيهِ، فَرَدَّهُ حَيْثُ كَانَ، فَجَعَلَ كُلَّمَا جَاءَ لِيَخْرُجَ رَمَى فِي فِيهِ بِحَجَرٍ، فَيَرْجِعُ كَمَا كَانَ، قُلْتُ: مَا هَذَا الَّذِي رَأَيْتُهُ فِي النَّهَرِ؟ قَالَ: آكِلُ الرِّبَا

ಒಂದು ರಾತ್ರಿ ಇಬ್ಬರು ದೇವಚರರು ಒಂದು ಪಾವನವಾದ ಸ್ಥಳಕ್ಕೆ ನನ್ನನ್ನು ಕರೆದುಕೊಂಡು ಹೋದರು. ರಕ್ತ ಹರಿಯುವ ಒಂದು ನದಿಯ ಸಮೀಪ ತಲುಪಿದೆವು. ಅಲ್ಲಿ ನದಿಯ ದಡದಲ್ಲಿ ಒಬ್ಬ ವ್ಯಕ್ತಿ ಕಲ್ಲುಗಳೊಂದಿಗೆ ಸಿದ್ಧನಾಗಿ ನಿಂತಿದ್ದ. ನದಿಯಲ್ಲಿ ಇನ್ನೊಬ್ಬ ವ್ಯಕ್ತಿಯಿದ್ದ. ಆ ವ್ಯಕ್ತಿ ನದಿಯ ದಡಕ್ಕೆ ಈಜಿ ಬಂದು ಸೇರಲು ಪ್ರಯತ್ನಿಸು ವಾಗಲೆಲ್ಲ, ಕಲ್ಲುಗಳೊಂದಿಗಿರುವ ವ್ಯಕ್ತಿ ದೊಡ್ಡ ಕಲ್ಲುಗಳನ್ನು ಎತ್ತಿ ಅವನ ಮುಖಕ್ಕೆ ಎಸೆದು ಅವನನ್ನು ದೂರಕ್ಕೆ ಅಟ್ಟಿ ಬಿಡುತ್ತಿದ್ದ. ಅವನು ಹೊರಗೆ ಬರಲು ಪ್ರಯತ್ನಿಸಿ ದಾಗಲೆಲ್ಲ, ಹೀಗೆ ಮುಖದ ಮೇಲೆ ಕಲ್ಲೆಸೆದು ಅವನನ್ನು ದೂರಕ್ಕೆ ಅಟ್ಟುತ್ತಿದ್ದ. 'ನದಿ ಯಲ್ಲಿ ಕಾಣುವ ಆ ವ್ಯಕ್ತಿ ಯಾರು?' ಎಂದು ನಾನು ಕೇಳಿದೆ. 'ಬಡ್ಡಿಯನ್ನು ತಿನ್ನುತ್ತಿದ್ದವನು' ಎಂದು ದೇವಚರರು ಉತ್ತರಿಸಿದರು.[1]

ಬಡ ವ್ಯಕ್ತಿಯ ಬೆವರು ಬಡ್ಡಿ ತಿನ್ನುವವನ ಆಹಾರವಾಗಿ ಮಾರ್ಪಡುತ್ತದೆ. ಮನುಷ್ಯರ ಅಸಹಾಯಕತೆಯನ್ನು ಶೋಷಣೆ ಮಾಡಿ ಅವರು ಬೆಳೆಯುತ್ತಾರೆ. ಈ ಕಾರಣದಿಂದಾಗಿ ಅಂತ್ಯದಿನದಂದು ಬಡ್ಡಿ ತಿನ್ನುವವನು ರಕ್ತದ ನದಿಯಲ್ಲಿ ಮುಳುಗಬೇಕಾಗಿ ಬರುವುದು. ಜನರ ರಕ್ತವು ಬಡ್ಡಿ ತಿನ್ನುವವನ ನೀರು ಮತ್ತು ಆಹಾರವಲ್ಲವೇ?

ಅಬೂ ಸಈದ್ ಖುದ್ರಿ(ರ) ವರದಿ ಮಾಡಿರುವ ಇನ್ನೊಂದು ಪ್ರವಾದಿವಚನ ಬಡ್ಡಿ ತಿನ್ನುವವನ ಅಂತ್ಯವಿಲ್ಲದ ಆಸೆ ಮತ್ತು ಲಾಲಸೆಯೆಡೆಗೆ ಬೆಟ್ಟು ಮಾಡುತ್ತದೆ. ಪ್ರವಾದಿ(ಸ) ಹೇಳಿರುವರು:

رَأَيْتُ لَيْلَةَ أُسْرِيَ بِي لَمَّا انْتَهَيْنَا إِلَى السَّمَاءِ السَّابِعَةِ، فَأَتَيْتُ عَلَى قَوْمٍ بُطُونُهُمْ كَالْبُيُوتِ فِيهَا الْحَيَّاتُ تُرَى مِنْ خَارِجِ بُطُونِهِمْ، قُلْتُ: يَا جِبْرِيلُ، مَنْ هٰؤُلَاءِ؟ قَالَ: هٰؤُلَاءِ أَكَلَةُ الرِّبَا

'ನನ್ನ ಮಿಅ್‌ರಾಜ್ ಯಾತ್ರೆಯ ವೇಳೆ ಏಳನೆಯ ಆಕಾಶದಲ್ಲಿ ನಾನು ಸಂಚರಿಸುತ್ತಿರುವಾಗ, ಒಂದು ವಿಭಾಗದ ಜನರ ಬಳಿಯಿಂದ ಹಾದು ಹೋಗಬೇಕಾಗಿ ಬಂತು. ಅವರ ಹೊಟ್ಟೆಗಳು ಹುತ್ತದಂತೆ ಕಂಡು ಬರುತ್ತಿದ್ದುವು. ಹಾವುಗಳು ಆಗಾಗ್ಗೆ ಅದರಿಂದ ತಲೆ ಹೊರಕ್ಕೆ ಚಾಚುತ್ತಿರುವಂತೆ ಕಾಣಿಸುತ್ತಿತ್ತು. ನಾನು ಜಿಬ್ರೀಲ್(ಅ)ರೊಂದಿಗೆ ಇದು ಯಾರು? ಎಂದು ಪ್ರಶ್ನಿಸಿದೆ. ಬಡ್ಡಿಯಿಂದ ಉಪಜೀವನವನ್ನು ನಡೆಸುತ್ತಿದ್ದ ವ್ಯಕ್ತಿಗಳು ಎಂದು ಅವರು ಉತ್ತರಿಸಿದರು.'[2]

ಬಡ್ಡಿ ನಿಷೇಧದಲ್ಲಿ ಅಲ್ಪ ಪ್ರಮಾಣದ ಬಡ್ಡಿ, ಹೆಚ್ಚಿನ ಪ್ರಮಾಣದ ಬಡ್ಡಿ ಎಂಬ ವ್ಯತ್ಯಾಸವೇನಿಲ್ಲ. ಸಣ್ಣ ದೊಡ್ಡ ಎಲ್ಲ ರೀತಿಯ ಬಡ್ಡಿಯನ್ನು ಇಸ್ಲಾಮ್ ನಿಷೇಧಿಸಿದೆ. ಬಹಳ ಸಣ್ಣ ಪ್ರಮಾಣದ ಬಡ್ಡಿಯ ಕುರಿತು ಪ್ರವಾದಿಯವರು(ಸ) ನೀಡಿರುವ ಎಚ್ಚರಿಕೆ ಹೀಗಿದೆ: اَلرِّبَا ثَلَاثٌ وَسَبْعُوْنَ بَابًا، أَيْسَرُهَا مِثْلُ أَنْ يَنْكِحَ الرَّجُلُ أُمَّهُ 'ಬಡ್ಡಿಗೆ ಎಪ್ಪತ್ತರಷ್ಟು ಶಾಖೆಗಳಿವೆ. ಅದರಲ್ಲಿ ಅತ್ಯಂತ ಸಣ್ಣದೆಂಬುದು ಕೂಡ ತನ್ನ ತಾಯಿಯೊಂದಿಗೆ ವ್ಯಭಿಚಾರವೆಸಗಿದಷ್ಟು ನಿಕೃಷ್ಟವಾಗಿದೆ.'[3]

ಅನಸ್(ರ) ಹೇಳುತ್ತಾರೆ:

خَطَبَنَا رَسُولُ اللهِ ﷺ، فَذَكَرَ أَمْرَ الرِّبَا، وَعَظَّمَ شَأْنَهُ، وَقَالَ: إِنَّ الدِّرْهَمَ يُصِيبُهُ الرَّجُلُ مِنَ الرِّبَا أَعْظَمُ عِنْدَ اللهِ فِي الْخَطِيئَةِ مِنْ سِتٍّ وَثَلَاثِينَ زَنْيَةً يَزْنِيهَا الرَّجُلُ

ಒಮ್ಮೆ ಪ್ರವಾದಿಯವರು(ಸ) ನಮ್ಮೊಂದಿಗೆ ಬಡ್ಡಿಯ ಭೀಕರತೆಯ ಬಗ್ಗೆ ಭಾಷಣ

ಮಾಡಿದರು. ಅದರಲ್ಲಿ ಅವರು ಹೀಗೆ ಹೇಳಿದರು, 'ಬಡ್ಡಿಯಿಂದ ಒಬ್ಬ ವ್ಯಕ್ತಿ ಗಳಿಸುವ ಒಂದು ದಿರ್ಹಮ್ ಕೆಡುಕಿನ ವಿಷಯದಲ್ಲಿ, ಅಲ್ಲಾಹನ ಬಳಿ ಮುವ್ವತ್ತಾರು ಬಾರಿ ವ್ಯಭಿಚಾರವೆಸಗಿರುವುದಕ್ಕಿಂತಲೂ ಗಂಭೀರವಾದ ವಿಷಯವಾಗಿದೆ.'[4]

ಬಡ್ಡಿ ಪಡೆಯುವುದು ನಿಷಿದ್ಧ. ಅದನ್ನು ಕೊಡುವುದು ಅಷ್ಟು ಕೆಟ್ಟದಲ್ಲ ಎಂಬ ಭಾವನೆ ಕೆಲವರಲ್ಲಿದೆ. ಬಡ್ಡಿಯಲ್ಲಿ ಮುಳುಗಿ ಇರಲು, ಅಗತ್ಯಕ್ಕೂ ಅನಗತ್ಯಕ್ಕೂ ಬಡ್ಡಿ ನೀಡುವ ಸಂಸ್ಥೆಗಳಿಗೆ ಓಡುವ ಇಂತಹ ವ್ಯಕ್ತಿಗಳಿಗೆ ಇಂತಹ ತಪ್ಪುಕಲ್ಪನೆಗಳು ಒಂದು ಸಹಾಯಹಸ್ತವಾಗಿ ಮಾರ್ಪಡುತ್ತದೆ. ಆದರೆ ಬಡ್ಡಿ ತಿನ್ನುವವನನ್ನು, ಬಡ್ಡಿ ನೀಡುವವನನ್ನು, ಅದಕ್ಕೆ ಸಾಕ್ಷಿ ನಿಲ್ಲುವವನನ್ನು, ಅದನ್ನು ಬರೆಯುವವನನ್ನು ಎಲ್ಲರನ್ನೂ ಒಂದೇ ರೀತಿಯಲ್ಲಿ ಪ್ರವಾದಿಯವರು(ಸ) ಶಪಿಸಿರುವರು. ಇಷ್ಟು ಮಾತ್ರವಲ್ಲ, ಕೆಡುಕಿನ ವಿಷಯದಲ್ಲಿ ಅವೆಲ್ಲವೂ ಸಮಾನವಾಗಿದೆಯೆಂದು ಅವರು ಸ್ಪಷ್ಟಪಡಿಸಿರುವರು.

عَنْ جَابِرِ بْنِ عَبْدِ اللّٰهِ رَضِيَ اللّٰهُ عَنْهُمَا، قَالَ: لَعَنَ رَسُولُ اللّٰهِ ﷺ آكِلَ الرِّبَا، وَمُوْكِلَهُ،
وَكَاتِبَهُ، وَشَاهِدَيْهِ، وَقَالَ: هُمْ سَوَاءٌ

ಜಾಬಿರ್ ಬಿನ್ ಅಬ್ದುಲ್ಲಾ(ರ) ಹೇಳಿರುವರು: ಬಡ್ಡಿ ತಿನ್ನುವವನು, ತಿನ್ನಿಸುವವನು, ಬರೆದಿಡುವವನು, ಅದಕ್ಕೆ ಸಾಕ್ಷಿ ನಿಲ್ಲುವವನು ಈ ಎಲ್ಲರನ್ನೂ ಪ್ರವಾದಿಯವರು(ಸ) ಶಪಿಸಿರುವರು. ಅವರೆಲ್ಲರೂ ಸಮಾನರಾಗಿದ್ದಾರೆ ಎಂದು ಅವರು(ಸ) ಹೇಳಿರುವರು.[5]

ಅನಿವಾರ್ಯ ಪರಿಸ್ಥಿತಿ ಎಂದು ಹೇಳಿ ಬಡ್ಡಿಯಾಧಾರಿತ ವ್ಯವಸ್ಥೆಯನ್ನು ಸಮರ್ಥಿಸುವ ಕೆಲವರಿದ್ದಾರೆ. ಆದರೆ ಹಸಿದು ಕಂಗಾಲಾದವರು ಬೇರೇನೂ ತಿನ್ನಲಿಕ್ಕೆ ಸಿಗದೆ ಇದ್ದಾಗಲೂ ಜೀವ ಉಳಿಸಲು ಮಾತ್ರ ಹಂದಿ ಮಾಂಸ ತಿನ್ನಬಹುದು ಎನ್ನುವ ಹಾಗೆ, ಇಸ್ಲಾಮಿನ ವಿದ್ವಾಂಸರು ಬಡ್ಡಿಯ ವಿಷಯವನ್ನು ಕೂಡ ಇದೇ ರೀತಿ ಪರಿಗಣಿಸಿದ್ದಾರೆ. مَا ظَهَرَ فِي قَوْمٍ الزِّنَى وَالرِّبَا إِلَّا أَحَلُّوا بِأَنْفُسِهِمْ عِقَابَ اللّٰهِ 'ಒಂದು ಪ್ರದೇಶದಲ್ಲಿ ವ್ಯಭಿಚಾರ ಮತ್ತು ಬಡ್ಡಿಯು ಕಾಣಿಸಿಕೊಂಡರೆ, ಅಲ್ಲಿಯ ನಿವಾಸಿಗಳು ಅಲ್ಲಾಹನ ಶಿಕ್ಷೆಯನ್ನು ಸ್ವಯಂ ಆಹ್ವಾನಿಸಿದಂತಾಗುತ್ತದೆ'[6] ಎಂಬ ಪ್ರವಾದಿವಚನವು ಬಡ್ಡಿಯನ್ನು ಕ್ಷುಲ್ಲಕವೆಂದು ಕಡೆಗಣಿಸುವವರ ಗಮನದಲ್ಲಿರಬೇಕು.

ಪ್ರಸಕ್ತ ಜಗತ್ತಿನ ಹಣದ ವ್ಯವಹಾರ, ಬ್ಯಾಂಕಿಂಗ್ ವ್ಯವಸ್ಥೆ ಬಡ್ಡಿಯಿಲ್ಲದ ಒಂದು ಜೀವನವನ್ನು ಊಹಿಸಲು ಅಸಾಧ್ಯವಾಗಿಸಿದೆ. ವ್ಯಕ್ತಿ, ಸಮಾಜ ಎಲ್ಲವೂ ಬಡ್ಡಿಯ

ಕಪಿಮುಷ್ಠಿಯೊಳಗಿದೆ. ಯಾವುದೇ ರೀತಿಯಲ್ಲಿ ಬಡ್ಡಿಯ ವ್ಯವಹಾರ ನಡೆಸುವ ಸಂಸ್ಥೆಗಳ ಜೊತೆ ಸಂಬಂಧವಿರದ ವ್ಯಕ್ತಿಗಳು ಸತ್ಯವಿಶ್ವಾಸಿಗಳ ಪೈಕಿಯೂ ಕಾಣಸಿಗುವುದು ದುರ್ಲಭ.

ವಿಶ್ವಾಸ ಮತ್ತು ನೈತಿಕತೆಯು ಬಡ್ಡಿಯ ಕಾಡ್ಗಿಚ್ಚಿನಲ್ಲಿ ಕರಿದು ಹೋಗುತ್ತಿರುವ ಅತ್ಯಂತ ವಿಪತ್ತಿನ ದಿನಗಳ ಬಗ್ಗೆ ಆರಂಭದ ಹದೀಸ್‌ನಲ್ಲಿ ದೂರದೃಷ್ಟಿ ಇದೆ. ಎಲ್ಲರೂ ಬಡ್ಡಿ ತಿನ್ನುವರೆಂದು, ಅದರ ಧೂಳಾದರೂ ಸೋಂಕದ ಒಬ್ಬರೂ ಬಾಕಿ ಉಳಿಯಲಿಕ್ಕಿಲ್ಲವೆಂಬ ಎಚ್ಚರಿಕೆಯು ನಮ್ಮನ್ನು ನಡುಗಿಸಲು ಪರ್ಯಾಪ್ತವಿದೆ.

---

1. ಬುಖಾರಿ: 1386, 2791, 7047.
2. ಅಹ್ಮದ್: 2/253, ಇಬ್ನುಮಾಜ: 2273, ಅಸ್ಬಹಾನಿ – ತರ್ಗೀಬ್: 647, 1377.
3. ಬೈಹಕಿ – ಶುಅ್‌ಬುಲ್ ಈಮಾನ್: 5519, ಹಾಕಿಮ್: 2/37.
4. ಬೈಹಕಿ – ಶುಅ್‌ಬುಲ್ ಈಮಾನ್: 5523, ಇಬ್ನು ಅಬಿದ್ದುನ್ಯಾ ಕಿತಾಬುಲ್ ಗೀಬತ್: 36.
5. ಮುಸ್ಲಿಮ್: 1598
6. ಹಾಕಿಮ್.

60. ಕೆಡವಲ್ಪಡಬೇಕಾದ ಬಂಗಲೆಗಳು

عَنْ أَنَسٍ رَضِيَ اللّٰهُ عَنْهُ قَالَ: مَرَّ رَسُولُ اللّٰهِ ﷺ بِقُبَّةٍ عَلَى بَابِ رَجُلٍ مِنَ الْأَنْصَارِ فَقَالَ: مَا هَذِهِ؟ قَالُوا: قُبَّةٌ بَنَاهَا فُلَانٌ! قَالَ رَسُولُ اللّٰهِ ﷺ: كُلُّ مَا كَانَ هٰكَذَا فَهُوَ وَبَالٌ عَلٰى صَاحِبِهِ يَوْمَ الْقِيَامَةِ، فَبَلَغَ الْأَنْصَارِيَّ ذٰلِكَ، فَوَضَعَهَا، فَمَرَّ النَّبِيُّ بَعْدُ فَلَمْ يَرَهَا، فَسَأَلَ عَنْهَا فَأُخْبِرَ أَنَّهُ وَضَعَهَا لِمَا بَلَغَهُ عَنْكَ، فَقَالَ: يَرْحَمُهُ اللّٰهُ، يَرْحَمُهُ اللّٰهُ!

ಅನಸ್(ರ) ವರದಿ ಮಾಡಿರುತ್ತಾರೆ. ಅನ್ಸಾರಿಯೋರ್ವರು ನಿರ್ಮಿಸಿದ ಮನೆಯ ಮೇಲೆ ಗೋಪುರದಾಕೃತಿಯನ್ನು ನಿರ್ಮಿಸಿದ್ದರು. ಅಲ್ಲಿಂದ ಹಾದು ಹೋಗುವಾಗ ಪ್ರವಾದಿಯವರು(ಸ) ಇದೇನು ಎಂದು ಕೇಳಿದರು. ಅನುಯಾಯಿಗಳು ಹೇಳಿದರು: ಇಂತಿಂತಹ ವ್ಯಕ್ತಿಯು ನಿರ್ಮಿಸಿದ ಗೋಪುರವಿದು. ಪ್ರವಾದಿ(ಸ) ಹೇಳಿದರು: ಅಂತಿಮ ದಿನದಂದು ಇಂತಹ ಗೋಪುರಗಳನ್ನು ನಿರ್ಮಿಸಿದ ವ್ಯಕ್ತಿಗಳಿಗೆ ಇದು ದೋಷಕರವಾಗಿ ಮಾರ್ಪಡುವುದು. ಈ ವಿಷಯವನ್ನು ಅರಿತ ಆ ಅನ್ಸಾರಿಯು ಗೋಪುರ ವನ್ನು ಕೆಡವಿ ಹಾಕಿದರು. ಇನ್ನೊಂದು ಸಂದರ್ಭದಲ್ಲಿ ಅದೇ ದಾರಿಯಾಗಿ ಹೋಗುತ್ತಿರುವಾಗ ಗೋಪುರ ಕಾಣಿಸದೆ ಇರುವುದನ್ನು ಕಂಡು ಅನು ಯಾಯಿಗಳೊಂದಿಗೆ ಆ ಬಗ್ಗೆ ಪ್ರಶ್ನಿಸಿದರು. ತಮ್ಮ ಪ್ರತಿಕ್ರಿಯೆಯನ್ನು ಕೇಳಿದ ಬಳಿಕ ಆ ವ್ಯಕ್ತಿ ಅದನ್ನು ಕೆಡವಿ ಹಾಕಿದ್ದಾರೆ ಎಂಬ ಉತ್ತರ ಸಿಕ್ಕಿತು. ಆಗ ಪ್ರವಾದಿ(ಸ) ಹೇಳಿದರು: ಅಲ್ಲಾಹನು ಅವರ ಮೇಲೆ ಕರುಣೆ ತೋರಿಸಲಿ. ಅಲ್ಲಾಹನು ಅವರ ಮೇಲೆ ಕರುಣೆ ತೋರಿಸಲಿ.*

ಮನುಷ್ಯನು ಅಲಂಕಾರ ಪ್ರಿಯನಾಗಿದ್ದಾನೆ. ವಾಸಿಸುವ ಮನೆ ಮತ್ತು ಪರಿಸರ ಮೋಹಕವಾಗಿರಬೇಕೆಂದು ವ್ಯಕ್ತಿ ಬಯಸುತ್ತಾನೆ. ಬಟ್ಟೆಬರೆ, ಆಭರಣ, ಮನೆ ಸುಂದರ ವಾಗಿರಬೇಕು ಎಂದು ಯಾರು ತಾನೇ ಇಚ್ಛಿಸುವುದಿಲ್ಲ? ಇವು ಯಾವುದೂ ಪಾಪ ಕಾರ್ಯಗಳೋ ತ್ಯಜಿಸಬೇಕಾದ ಕಾರ್ಯಗಳೋ ಅಲ್ಲ. ವ್ಯಕ್ತಿಯ ಸಹಜ ಬೇಡಿಕೆ ಗಳಿವು. ಆದರೆ ಲೌಕಿಕ ಸುಖಾಡಂಬರಗಳ ಈ ಜನ್ಮಸಿದ್ಧ ಪ್ರಕೃತಿ, ಅದರ ಪರಿಧಿಯನ್ನು ಉಲ್ಲಂಘಿಸಿ ದುಂದುವೆಚ್ಚ ಮತ್ತು ಆಡಂಬರದ ಜೀವನಕ್ಕೆ ಮೂಲವಾಗಿ ಮಾರ್ಪಟ್ಟಾಗ ಅದನ್ನು ಸಾಮಾಜಿಕ ಕೆಡುಕೆಂದು ಪರಿಗಣಿಸಬೇಕಾಗುತ್ತದೆ. ಇಂತಹ ವ್ಯಕ್ತಿಗಳ ಬಗ್ಗೆ ಇರುವ ಕಠಿಣ ಎಚ್ಚರಿಕೆಯಾಗಿದೆ ಈ ಮೇಲಿನ ಹದೀಸ್ ವಚನ.

ವಿಶಾಲವಾದ ಸೌಕರ್ಯಗಳಿರುವ ಮನೆ ಪ್ರತಿಯೊಬ್ಬ ವ್ಯಕ್ತಿಯ ಕನಸಾಗಿ ರುತ್ತದೆ. ಇದು ಮನಸ್ಸಿಗೆ ಆನಂದ ಮತ್ತು ದೇಹಕ್ಕೆ ಸುಖ ನೀಡುತ್ತದೆ. ಪ್ರವಾದಿ(ಸ) ಹೇಳಿರುವರು:

مِنْ سَعَادَةِ ابْنِ آدَمَ ثَلَاثَةٌ، وَمِنْ شَقَاوَةِ ابْنِ آدَمَ ثَلَاثَةٌ، مِنْ سَعَادَةِ ابْنِ آدَمَ: اَلْمَرْأَةُ الصَّالِحَةُ، وَالْمَسْكَنُ الصَّالِحُ، وَالْمَرْكَبُ الصَّالِحُ، وَمِنْ شَقَاوَةِ ابْنِ آدَمَ: اَلْمَرْأَةُ السُّوْءُ، وَالْمَسْكَنُ السُّوْءُ، وَالْمَرْكَبُ السُّوْءُ.

'ಮನುಷ್ಯನಿಗೆ ಮೂರು ಸೌಭಾಗ್ಯಗಳಿವೆ. ಮೂರು ವಿಷಯಗಳು ದೌರ್ಭಾಗ್ಯ ಗಳಾಗಿವೆ. ಸದ್ಗುಣಶೀಲ ಪತ್ನಿ, ಸೌಕರ್ಯಗಳುಳ್ಳ ಮನೆ ಮತ್ತು ಉತ್ತಮ ವಾಹನ. ಇವುಗಳು ಸೌಭಾಗ್ಯಗಳಾಗಿವೆ. ಕೆಟ್ಟ ಪತ್ನಿ, ಸೌಲಭ್ಯಗಳಿಲ್ಲದ ಮನೆ, ಉಪಯೋಗ ಶೂನ್ಯ ವಾಹನ ಎಂಬವುಗಳು ದೌರ್ಭಾಗ್ಯಗಳಾಗಿವೆ.'[1]

ಆದರೆ ಆಡಂಬರ, ದುಂದುವೆಚ್ಚ, ಸುಖಲೋಲುಪತೆ ಇತರ ಕಾರ್ಯಗಳಲ್ಲೂ ಮಾಡಕೂಡದು ಎಂಬಂತೆ ಮನೆ ನಿರ್ಮಾಣದ ವಿಷಯದಲ್ಲೂ ಮಾಡಬಾರದು. ಸತ್ಯ ವಿಶ್ವಾಸಿಯ ಮನೆಯು ಇಸ್ಲಾಮ್ ಪ್ರತಿಪಾದಿಸುವ ವಿಶಿಷ್ಟವಾದ ಸಂಸ್ಕೃತಿ ಮತ್ತು ಜೀವನ ರೀತಿಗೆ ಹೊಂದುವಂತಹದ್ದಾಗಿರಬೇಕು. ಅದು ಆಡಂಬರ ಮತ್ತು ದುಂದುವೆಚ್ಚದ ಪ್ರದರ್ಶನವಾಗಬಾರದು. ಪ್ರವಾದಿ(ಸ) ಹೇಳಿರುವರು:

* ಅಬೂದಾವೂದ್: 5237, ಇಬ್ನುಮಾಜ: 4161, ತಬ್ರಾನಿ – ಔಸಾತ್ ಮುಂತಾದವರು ಪದಗಳ ವ್ಯತ್ಯಾಸಗಳೊಂದಿಗೆ ಈ ಪ್ರವಾದಿವಚನವನ್ನು ಉಲ್ಲೇಖಿಸಿರುವರು. ಇದರ ವರದಿ ಪರಂಪರೆಯು ಹಸನ್ ಆಗಿದೆಯೆಂದು ಹದೀಸ್ ವಿದ್ವಾಂಸರಾದ ಮುಹ್ಯುದ್ದೀನ್ ದೀಬ್‌ಮಸ್ತು, ಸಮೀರ್ ಅಹ್ಮದುಲ್ ಅತ್ತಾರ್, ಯೂಸುಫ್ ಅಲಿ ಬುದೈವಿ ಮುಂತಾದವರು ಅಭಿಪ್ರಾಯಪಡುತ್ತಾರೆ.

مَنْ بَنَى فَوْقَ مَا يَكْفِيْهِ كُلِّفَ أَنْ يَحْمِلَهُ يَوْمَ الْقِيَامَةِ

'ತಮಗೆ ಅಗತ್ಯವಿರುವುದಕ್ಕಿಂತ ಹೆಚ್ಚು ವಿಶಾಲವಾಗಿರುವ ಮನೆಯನ್ನು ಒಬ್ಬರು ನಿರ್ಮಿಸಿದರೆ, ಆ ವ್ಯಕ್ತಿ ಅಂತ್ಯದಿನದಂದು ಆ ಮನೆಯನ್ನು ಹೆಗಲ ಮೇಲೆ ಹೊತ್ತು ಕೊಳ್ಳಬೇಕಾಗುತ್ತದೆ.'[2]

ಜಾಬಿರ್ ಬಿನ್ ಅಬ್ದುಲ್ಲಾ(ರ)ರಿಂದ ವರದಿ ಮಾಡಲ್ಪಟ್ಟ ಇನ್ನೊಂದು ಪ್ರಸಿದ್ಧ ಪ್ರವಾದಿವಚನ ಹೀಗಿದೆ:

إِذَا أَرَادَ اللهُ بِعَبْدٍ شَرًّا أَخْضَرَ لَهُ فِي اللَّبِنِ وَالطِّينِ حَتَّى يَبْنِيَ

'ಅಲ್ಲಾಹನು ಒಬ್ಬನನ್ನು ನಾಶಗೊಳಿಸಲಿಚ್ಛಿಸಿದರೆ, ಮಣ್ಣು ಮತ್ತು ಇಟ್ಟಿಗೆಗಳಲ್ಲಿ ಆಸಕ್ತಿಯನ್ನು ಉಂಟು ಮಾಡುತ್ತಾನೆ. ಹೀಗೆ ಅವನು ಮನೆ ನಿರ್ಮಿಸುವುದರಲ್ಲಿ ವ್ಯಸ್ತನಾಗಿ ಬಿಡುವನು.'[3]

ಮನೆಯು ಅಹಂಕಾರ ಪ್ರದರ್ಶನ ಮತ್ತು ಆಡಂಬರವಾಗಿ ಮಾರ್ಪಟ್ಟಾಗ, ಅದು ಪಾಪ ಮತ್ತು ಅನಾವಶ್ಯಕವಾಗಿ ಬಿಡುತ್ತದೆ. ಪ್ರವಾದಿಯವರ ಕಾಲದಲ್ಲಿ ಮನೆಯ ಬಾಗಿಲುಗಳಲ್ಲಿ ಗೋಪುರವನ್ನು ನಿರ್ಮಿಸಿದ ಅನುಯಾಯಿಯ ಬಗ್ಗೆ ಆರಂಭದ ಪ್ರವಾದಿವಚನ ಹೇಳುತ್ತದೆ. ಸುನನ್ ಅಬೂದಾವೂದ್‌ನಲ್ಲಿ ಈ ಘಟನೆಗೆ ಸಂಬಂಧಪಟ್ಟು ಈ ಕೆಳಗಿನ ವಿಷಯಗಳೂ ಇವೆ:

ಪ್ರವಾದಿಯವರ(ಸ) ಪ್ರತಿಕ್ರಿಯೆಯನ್ನು ಇತರರಿಂದ ತಿಳಿದಾಗ ಆ ವ್ಯಕ್ತಿ ಪ್ರವಾದಿಯವರ ಸನ್ನಿಧಿಯಲ್ಲಿ ಹಾಜರಾಗಿ ಸಲಾಮ್ ಹೇಳಿದ. ಆದರೆ ಪ್ರವಾದಿಯವರು ಅವನ ಸಲಾಮ್‌ಗೆ ಉತ್ತರಿಸಲಿಲ್ಲ, ಮಾತ್ರವಲ್ಲ ಅವನ ಆಗಮನವನ್ನೇ ಪರಿಗಣಿಸಲಿಲ್ಲ, ಬದಲಾಗಿ ಅವನಿಂದ ಮುಖ ತಿರುಗಿಸಿದರು. ಪ್ರವಾದಿಯವರ(ಸ) ಕೋಪದ ಕಾರಣವನ್ನು ಅರಿತ ಆ ವ್ಯಕ್ತಿ ಮರಳಿ ಹೋಗಿ ತಾನು ನಿರ್ಮಿಸಿದ ಗೋಪುರಗಳನ್ನು ಕೆಡವಿ ಹಾಕಿದ. ಅದನ್ನು ತಿಳಿದ ಪ್ರವಾದಿ(ಸ) ಹೇಳಿದರು:

أَمَا إِنَّ كُلَّ بِنَاءٍ وَبَالٌ عَلَى صَاحِبِهِ إِلَّا مَالَا ، إِلَّا مَالَا

'ಇಂತಹ ಮನೆಗಳನ್ನು ಹೊರತು ಇತರ ಮನೆಗಳು ಅವುಗಳ ಯಜಮಾನನಿಗೆ ಅಂತಿಮ ದಿನದಂದು ಖಂಡಿತವಾಗಿಯೂ ತೊಂದರೆಯುಂಟು ಮಾಡುವುದು.'[4]

ಒಂದು ದಿನ ಪಿತೃಸಹೋದರ ಅಬ್ಬಾಸ್ ಬಿನ್ ಅಬ್ದುಲ್ ಮುತ್ತಲಿಬ್(ರ) ಒಂದು ಮಾಳಿಗೆ ಮನೆ ನಿರ್ಮಿಸಿದ ಬಗ್ಗೆ ಪ್ರವಾದಿಯವರಿಗೆ(ಸ) ತಿಳಿಯಿತು. ಅವರು

ಹೇಳಿದರು: اِهْدِمْهَا (ನೀವದನ್ನು ಕೆಡವಿ ಬಿಡಿರಿ.) ಅಬ್ಬಾಸ್(ರ) ಪ್ರಶ್ನಿಸಿದರು: أَهْدِمُهَا، أَوْ أَتَصَدَّقُ بِثَمَنِهَا؟ (ನಾನು ಅದನ್ನು ಕೆಡವಿಬಿಡಬೇಕೋ ಅಥವಾ ಅದನ್ನು ಬೇರೆಯವರಿಗೆ ಮಾರಿ ಆ ಹಣವನ್ನು ದಾನ ಮಾಡಬಹುದೇ?) ಪ್ರವಾದಿ(ಸ) ಹೇಳಿದರು: اِهْدِمْهَا (ನೀವು ಅದನ್ನು ಕೆಡವಿಬಿಡಿರಿ.)[5]

ಎತ್ತರಕ್ಕೆ ಕಟ್ಟಲ್ಪಟ್ಟ ಮಾಳಿಗೆಗಳನ್ನು, ಗೋಪುರಗಳನ್ನು ಕೆಡವಿಬಿಡಲಿಕ್ಕೆ ಪ್ರವಾದಿಯವರು(ಸ) ನಿರ್ದೇಶಿಸಿರುವರು. ಇಸ್ಲಾಮ್ ಕಲಿಸಿರುವ ಸಂತುಲಿತ ಜೀವನ ಮತ್ತು ಅರಮನೆಯಂತಹ ಆಡಂಬರದ ಮನೆಗಳ ನಿರ್ಮಾಣ ಒಟ್ಟಿಗೆ ಸಾಗಲು ಸಾಧ್ಯವಿಲ್ಲ, ಆದುದರಿಂದ ಅಂತಹ ಎಲ್ಲ ವ್ಯವಸ್ಥೆಗಳ ವಿರುದ್ಧ ಬಹಳ ಕಠಿಣವಾದ ನಿಲುವನ್ನು ಪ್ರವಾದಿಯವರು(ಸ) ಕೈಗೊಂಡರು. ಮನೆಗಳನ್ನು ಅರಮನೆಗಳಾಗಿ ಮಾರ್ಪಡಿಸುವ, ದುಂದುವೆಚ್ಚ ಮತ್ತು ದುರ್ವ್ಯಯದ ಪ್ರದರ್ಶನ ಶಾಲೆಗಳಾಗಿ ಉಪಯೋಗಿಸಿಕೊಳ್ಳುತ್ತಿರುವವರು ಈ ಪ್ರವಾದಿವಚನದ ಕುರಿತು ಬಹಳ ಗಂಭೀರವಾಗಿ ಚಿಂತನೆ ನಡೆಸಬೇಕು.

---

1. ಅಹ್ಮದ್: 1/168, ಹಾಕಿಮ್: 2/144, ತಬ್ರಾನಿ – ಕಬೀರ್, ಔಸಾತ್, ಬಸ್ಸಾರ್: 1412.
2. ತಬ್ರಾನಿ – ಕಬೀರ್: 10287, ಮಜ್ಮಉಸ್ಸವಾಇದ್: 4/70.
3. ತಬ್ರಾನಿ – ಕಬೀರ್: 10287, ಮಜ್ಮಉಸ್ಸವಾಇದ್: 4/70.
4. ಅಬೂದಾವೂದ್: 5237.
5. ಅಬೂದಾವೂದ್ – ಮರಾಸೀಲ್: 452, ತಬ್ರಾನಿ – ಕಬೀರ್.

61. ಸಾಲಗಾರನ ಸ್ವರ್ಗ ಪ್ರವೇಶ

عَنْ مُحَمَّدِ ابْنِ جَحْشٍ رَضِيَ اللّٰهُ عَنْهُ قَالَ: كُنَّا جُلُوْسًا عِنْدَ رَسُولِ اللّٰهِ ﷺ، فَرَفَعَ رَأْسَهُ إِلَى السَّمَاءِ ثُمَّ وَضَعَ رَاحَتَهُ عَلَى جَبْهَتِهِ، ثُمَّ قَالَ: "سُبْحَانَ اللّٰهِ، مَاذَا نُزِّلَ مِنَ التَّشْدِيْدِ؟" فَسَكَتْنَا وَفَزِعْنَا، فَلَمَّا كَانَ مِنَ الْغَدِ سَأَلْتُهُ: يَا رَسُوْلَ اللّٰهِ، مَا هٰذَا التَّشْدِيْدُ الَّذِي نُزِّلَ؟ فَقَالَ: "وَالَّذِي نَفْسِي بِيَدِهِ، لَوْ أَنَّ رَجُلًا قُتِلَ فِي سَبِيْلِ اللّٰهِ، ثُمَّ أُحْيِيَ، ثُمَّ قُتِلَ، ثُمَّ أُحْيِيَ، ثُمَّ قُتِلَ وَعَلَيْهِ دَيْنٌ، مَا دَخَلَ الْجَنَّةَ حَتَّى يُقْضَى عَنْهُ دَيْنُهُ"

ಮುಹಮ್ಮದ್ ಬಿನ್ ಜಹಶ್(ರ)ರಿಂದ ವರದಿ. ನಾವು ಪ್ರವಾದಿಯವರೊಂದಿಗೆ(ಸ) ಕುಳಿತಿದ್ದೆವು. ಆಗ ಪ್ರವಾದಿಯವರು(ಸ) ಆಕಾಶದೆಡೆಗೆ ಮುಖ ಮಾಡಿ ತಮ್ಮ ಕೈವಸ್ತ್ರವನ್ನು ಹಣೆಯ ಮೇಲೆ ಇಟ್ಟರು. ಬಳಿಕ ಹೀಗೆ ಹೇಳಿದರು: ಸುಬ್‌ಹಾನಲ್ಲಾಹ್! (ಅಲ್ಲಾಹನು ಪರಿಶುದ್ಧನು) ಎಷ್ಟು ಭಯಾನಕವಾದ ಪರಿಸ್ಥಿತಿ ಬಂದೆರಗುತ್ತಿದೆ. ನಾವು ಭಯಭೀತರಾಗಿ ಮೌನ ಪಾಲಿಸಿದೆವು. ಮರುದಿನ ನಾನು ಪ್ರವಾದಿಯವರೊಂದಿಗೆ(ಸ) ಪ್ರಶ್ನಿಸಿದೆ: ಅಲ್ಲಾಹನ ಸಂದೇಶವಾಹಕರೇ! ನಮ್ಮ ಮೇಲೆ ಬಂದಿಳಿಯುವ ಭಯಾನಕ ಅವಸ್ಥೆ ಎಂತಹುದು? ಪ್ರವಾದಿ(ಸ) ಹೇಳಿದರು: ನನ್ನ ಆತ್ಮವು ಯಾರ ಕೈಯಲ್ಲಿದೆಯೋ ಅವನಾಣೆ. ಒಬ್ಬ ವ್ಯಕ್ತಿ ದೇವನ ಮಾರ್ಗದಲ್ಲಿ ವಧಿಸಲ್ಪಟ್ಟು, ಬಳಿಕ ಪುನಃ ಜೀವಂತಗೊಳಿಸಲ್ಪಟ್ಟು ವಧಿಸಲ್ಪಟ್ಟರೂ ತನ್ನ ಮೇಲಿರುವ ಸಾಲವನ್ನು ಮರಳಿಸದಿದ್ದರೆ ಎಂದಿಗೂ ಸ್ವರ್ಗವನ್ನು ಪ್ರವೇಶಿಸಲಾರನು.*

ಮನುಷ್ಯರ ಆರ್ಥಿಕ ವ್ಯವಸ್ಥೆಯಲ್ಲಿ ಸಾಲವು ಸಾಮಾನ್ಯ ವಿಷಯವಾಗಿದೆ. ಸಾಲ ಪಡೆಯದೆ ಮತ್ತು ಕೊಡದೆ ಯಾರಿಗೂ ಜೀವಿಸಲು ಸಾಧ್ಯವಿಲ್ಲ. ಅನಿವಾರ್ಯ ಪರಿಸ್ಥಿತಿಯಲ್ಲಿ ಎಂತಹ ಮನುಷ್ಯನಿಗೂ ಸಾಲವನ್ನು ಪಡೆಯಬೇಕಾಗಿ ಬರುವುದು. ಅಂತ್ಯ ಪ್ರವಾದಿಯವರು(ಸ) ಕೂಡ ಸಾಲ ಪಡೆದುದಾಗಿ ಮತ್ತು ಕೊಟ್ಟಿರುವುದಾಗಿ ಪ್ರವಾದಿವಚನಗಳಿಂದ ತಿಳಿದು ಬರುತ್ತದೆ.

ಪವಿತ್ರ ಕುರ್‌ಆನಿನ ಅತಿ ದೊಡ್ಡ ಸೂಕ್ತವು ಸಾಲಕ್ಕೆ ಸಂಬಂಧಿಸಿದುದಾಗಿದೆ. ಸಾಲದ ವ್ಯವಹಾರ ಅದೆಷ್ಟೇ ಸಣ್ಣ ಪ್ರಮಾಣದ್ದಾಗಿದ್ದರೂ ಬರೆದಿಟ್ಟುಕೊಳ್ಳಬೇಕೆಂದು ಅದಕ್ಕೆ ಸಾಕ್ಷಿ ನಿಲ್ಲಿಸಬೇಕೆಂದು ಪವಿತ್ರ ಕುರ್‌ಆನ್ ನೆನಪಿಸುತ್ತದೆ:

'ಓ ಸತ್ಯವಿಶ್ವಾಸಿಗಳೇ! ನೀವು ಅವಧಿಯನ್ನು ನಿಶ್ಚಯಿಸಿಕೊಂಡು ಪರಸ್ಪರ ಸಾಲದ ಲೇವಾದೇವಿ ಮಾಡುವಾಗ ಅದನ್ನು ಬರೆದಿಟ್ಟುಕೊಳ್ಳಿರಿ. ಬರಹಗಾರನೊಬ್ಬನು ಉಭಯತ್ರರಲ್ಲಿ ಯಾರಿಗೂ ಅನ್ಯಾಯ ವಾಗದಂತೆ ಕರಾರು ಪತ್ರ ಬರೆಯಬೇಕು... ವ್ಯವಹಾರವು ಚಿಕ್ಕದಿರಲಿ ಅಥವಾ ದೊಡ್ಡದಿರಲಿ-ಅವಧಿಯ ನಿರ್ಣಯದೊಂದಿಗೆ ಅದರ ಕರಾರು ಪತ್ರವನ್ನು ಬರೆಯಿಸಿಕೊಳ್ಳು ವುದರ ಬಗ್ಗೆ ಉದಾಸೀನರಾಗದಿರಿ. ಈ ಕ್ರಮವು ಅಲ್ಲಾಹನ ಬಳಿ ನಿಮಗೆ ಹೆಚ್ಚು ನ್ಯಾಯ ಬದ್ಧವಾಗಿದೆ. ಇದರಿಂದ ಸಾಕ್ಷ್ಯ ನೆಲೆಗೊಳ್ಳಲು ಹೆಚ್ಚು ಸುಲಭವಾಗುತ್ತದೆ ಮತ್ತು ನೀವು ಸಂಶಯಗ್ರಸ್ತರಾಗುವ ಸಂಭಾವ್ಯತೆಯು ಕಡಿಮೆಯಾಗುತ್ತದೆ.' **(ಅಲ್ ಬಕರ: 282)**

ಸಾಲ ನೀಡುವುದು ದಾನ ಮಾಡಿದಂತೆ ಪುಣ್ಯವಿರುವ ಕೆಲಸವಾಗಿದೆ. ಪವಿತ್ರ ಕುರ್‌ಆನ್ ಮತ್ತು ಪ್ರವದಿವಚನಗಳು ಸಾಲ ನೀಡುವುದನ್ನು ಪ್ರೋತ್ಸಾಹಿಸಿದೆ. ಪ್ರವಾದಿವರ್ಯರು(ಸ) ಹೀಗೆ ಹೇಳಿರುವರು:

مَا مِنْ مُسْلِمٍ يُقْرِضُ مُسْلِمًا قَرْضًا مَرَّتَيْنِ، إِلَّا كَانَ كَصَدَقَتِهَا مَرَّةً

'ಒಬ್ಬ ಮುಸ್ಲಿಮನು ಇನ್ನೊಬ್ಬ ಮುಸ್ಲಿಮನಿಗೆ ಎರಡು ಬಾರಿ ಸಾಲ ನೀಡುವುದಿಲ್ಲ. ಅದರಲ್ಲಿ ಒಂದನ್ನು ಅವನು ದಾನ ನೀಡಿದ್ದಾಗಿ ದಾಖಲಿಸಲ್ಪಡುವುದು.'[1]

ಸಾಲವು ಭಿಕ್ಷೆ ಬೇಡಿದಂತಲ್ಲ. ಇತರ ಯಾವುದೇ ಉಪಾಯವಿಲ್ಲದೆ ಅನಿವಾರ್ಯ ಪರಿಸ್ಥಿತಿ ಬಂದಾಗ ವ್ಯಕ್ತಿಯು ಸಾಲ ಪಡೆಯಲು ನಿರ್ಬಂಧಿತನಾಗುತ್ತಾನೆ. ಆದರೆ

* ಇಮಾಮ್ ಹಾಕಿಮ್: 2/25, ನಸಾಈ: 4698, ತಬ್ರಾನಿ - ಔಸಾತ್ ಮುಂತಾದವರು ಈ ಪ್ರವಾದಿವಚನವನ್ನು ವರದಿ ಮಾಡಿರುತ್ತಾರೆ. ಇಮಾಮ್ ಹಾಕಿಮ್ ಈ ಪ್ರವಾದಿವಚನವು ಸಹೀಹ್ ಆಗಿದೆಯೆಂದು ಸಾಕ್ಷಿ ಹೇಳುತ್ತಾರೆ. (ಮುಸ್ತದ್‌ರಕ್, ಹದೀಸ್: 2212)

ಬೇಡುವವನು ಹಾಗಲ್ಲ. ಅವನು ಬೇಡುವುದನ್ನೇ ಒಂದು ಉದ್ಯೋಗವಾಗಿಸಿಕೊಂಡಿರುತ್ತಾನೆ. ಅಗತ್ಯವಿದ್ದರೂ ಇಲ್ಲದಿದ್ದರೂ ಅವನು ಬೇಡುತ್ತಲೇ ಇರುತ್ತಾನೆ. ಸಾಲಗಾರನಾದರೆ, ಅತಿ ಅಗತ್ಯವಿದ್ದಾಗ ಮಾತ್ರ ಸಾಲ ಪಡೆಯುತ್ತಾನೆ. ಪ್ರವಾದಿ ವರ್ಯರು(ಸ) ಹೀಗೆ ಹೇಳಿರುವರು:

رَأَيْتُ لَيْلَةَ أُسْرِيَ بِي عَلَى بَابِ الْجَنَّةِ مَكْتُوبًا: اَلصَّدَقَةُ بِعَشْرِ أَمْثَالِهَا، وَالْقَرْضُ بِثَمَانِيَةَ عَشَرَ، فَقُلْتُ: يَا جِبْرِيلُ، مَا بَالُ الْقَرْضِ أَفْضَلُ مِنَ الصَّدَقَةِ؟ قَالَ: لِأَنَّ السَّائِلَ يَسْأَلُ وَعِنْدَهُ، وَالْمُسْتَقْرِضُ لَا يَسْتَقْرِضُ إِلَّا مِنْ حَاجَةٍ

ಮಿಅ್‌ರಾಜ್‌ನ ಸಂದರ್ಭದಲ್ಲಿ ಸ್ವರ್ಗದ ಬಾಗಿಲುಗಳ ಮೇಲೆ ದಾನಕ್ಕೆ ಹತ್ತು ಪಟ್ಟು ಪ್ರತಿಫಲ. ಸಾಲಕ್ಕೆ ಹದಿನೈದು ಪಟ್ಟು ಪ್ರತಿಫಲ ಎಂದು ಬರೆದಿರುವುದನ್ನು ಕಂಡು ನಾನು, 'ಜಿಬ್ರೀಲ್! ಸಾಲ ಕೊಡುವವನು ದಾನ ನೀಡುವವನಿಗಿಂತ ಶ್ರೇಷ್ಠನೇ?' ಎಂದು ಪ್ರಶ್ನಿಸಿದೆ. ಆಗ ಜಿಬ್ರೀಲ್(ಅ), 'ಕಾರಣವಿದೆ. ಬೇಡುವವನು ಕೈಯಲ್ಲಿದ್ದರೂ ಯಾಚಿಸುತ್ತಿರುತ್ತಾನೆ. ಆದರೆ ಸಾಲಗಾರನು ಹಾಗಲ್ಲ. ಅಗತ್ಯವಿಲ್ಲದೆ ಅವನು ಸಾಲ ಕೇಳುವುದಿಲ್ಲ' ಎಂದು ಉತ್ತರಿಸಿದರು.[2]

ಸಾಲ ಪಡೆದರೆ ಅದನ್ನು ಮರಳಿ ನೀಡುವುದು ಕಡ್ಡಾಯವಾಗಿದೆ. ಅದಕ್ಕೆ ಸಮಯವನ್ನು ನಿಶ್ಚಯಿಸಿದ್ದರೆ, ಆ ಸಮಯಕ್ಕೆ ಸರಿಯಾಗಿ ಮರಳಿ ನೀಡಬೇಕು. ಸಾಮರ್ಥ್ಯವಿದ್ದರೂ ಸಾಲ ಮರು ಪಾವತಿ ಮಾಡದೆ ದಿನದೂಡುವುದು ಬಹಳ ಗಂಭೀರವಾದ ಅತಿಕ್ರಮವಾಗಿದೆ.

ಪ್ರವಾದಿವರ್ಯರು ಹೀಗೆ(ಸ) ಹೇಳಿರುವರು: مَطْلُ الْغَنِيِّ ظُلْمٌ 'ಸಾಮರ್ಥ್ಯವಿದ್ದೂ ಸಾಲ ಮರುಪಾವತಿಸಲು ಹಿಂದೇಟು ಹಾಕುವುದು ಅಕ್ರಮವಾಗಿದೆ.'[3]

ಸಾಲವನ್ನು ಆದಷ್ಟು ಶೀಘ್ರ ಮರಳಿಸಬೇಕು ಮತ್ತು ಸಾಲವನ್ನು ನೀಡಿದವನಿಗೆ ಸಂತೋಷವಾಗುವ ರೀತಿಯಲ್ಲಿ ಸಾಲ ಪಡೆದವನು ಅದನ್ನು ಆದಷ್ಟು ಶೀಘ್ರ ಮರಳಿಸಬೇಕೆಂದು ಪ್ರವಾದಿಯವರು(ಸ) ನೆನಪಿಸಿದ್ದಾರೆ. ಅವರು(ಸ) ಹೀಗೆನ್ನುತ್ತಿದ್ದರು: إِنَّ خَيْرَ النَّاسِ أَحْسَنُهُمْ قَضَاءً 'ಜನರಲ್ಲಿ ಅತ್ಯುತ್ತಮರು ಅತ್ಯುತ್ತಮ ರೀತಿಯಲ್ಲಿ ಸಾಲವನ್ನು ಮರುಪಾವತಿಸುವವರಾಗಿರುತ್ತಾರೆ.'[4]

ಸಾಲಗಾರನಾಗಿ ಮರಣ ಹೊಂದಬೇಕಾಗಿ ಬರುವುದು ಬಹಳ ಗಂಭೀರವಾದ ವಿಷಯವಾಗಿದೆ. ಸಾಲವು ಜನರೊಂದಿಗಿರುವ ಹಕ್ಕಾಗಿರುವುದರಿಂದ ಜನರು ಅದನ್ನು

ಕ್ಷಮಿಸುವ ವರೆಗೆ ಅಲ್ಲಾಹನು ಅವರನ್ನು ಕ್ಷಮಿಸುವುದಿಲ್ಲ ಮತ್ತು ಅವನನ್ನು ಮನ್ನಿಸುವುದಿಲ್ಲ. ಹುತಾತ್ಮನು ಕೂಡ ಇದರಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂಬುದನ್ನು ಆರಂಭದಲ್ಲಿ ಪ್ರಸ್ತಾಪಿಸಿದ ಹದೀಸ್ ವಚನವು ನೆನಪಿಸುತ್ತದೆ.

ಸುಬ್ಹಾನಲ್ಲಾಹ್! ಎಷ್ಟು ಭಯಾನಕತೆಯನ್ನು ನಿಮ್ಮ ಮೇಲೆ ಹೊರಿಸಲಾಗುತ್ತಿದೆ ಎಂದು ಪ್ರವಾದಿಯವರು(ಸ) ವ್ಯಾಕುಲ ಪಡುತ್ತಿದ್ದಾರೆ. ತಮ್ಮ ಅಸ್ವಸ್ಥತೆಯು ಜನರನ್ನು ಭಯಭೀತರಾಗಿಸಿದೆ ಎಂಬುದನ್ನು ಅವರು ಅರಿತುಕೊಂಡರು. ಅದು ಅರಿವಾಗಿ ವಿಷಯವೇನೆಂದು ವಿವರಿಸದೆ ಮೌನ ಪಾಲಿಸಿದರು. ಆದರೆ ಮರುದಿನ ತನ್ನ ಅಸ್ವಸ್ಥತೆಗೆ ಕಾರಣವನ್ನು ಕೇಳಿದ ಜನರಿಗೆ ವಿಷಯವನ್ನು ಸ್ಪಷ್ಟಪಡಿಸಿದರು.

ಹುತಾತ್ಮತೆಯು ಬಹಳ ಶ್ರೇಷ್ಠ ಕರ್ಮ. ಇದಕ್ಕಿಂತ ಶ್ರೇಷ್ಠವಾದುದು ಇನ್ನೊಂದಿಲ್ಲ. ಒಬ್ಬ ವ್ಯಕ್ತಿ ದೇವನ ಮಾರ್ಗದಲ್ಲಿ ವಧಿಸಲ್ಪಟ್ಟರೂ ಅವನ ಮೇಲೆ ಸಾಲವಿರುವುದಾದರೆ, ಆ ಕಾರಣದಿಂದಾಗಿ ಅವನ ಸ್ವರ್ಗ ಪ್ರವೇಶವು ತಡೆಹಿಡಿಯಲ್ಪಡುತ್ತದೆ. ಸಾಲವು ಜನರ ಹಕ್ಕಾಗಿದೆ. ಮನುಷ್ಯರ ಪರಸ್ಪರ ವ್ಯವಹಾರಗಳು ಅವರ ಮಧ್ಯೆಯೇ ಪರಿಹರಿಸಲ್ಪಡುವ ವರೆಗೆ ಅಲ್ಲಾಹನು ಅದನ್ನು ಕ್ಷಮಿಸುವುದಿಲ್ಲ. ಒಬ್ಬನು ದೇವನ ಮಾರ್ಗದಲ್ಲಿ ಪುನರಾವರ್ತಿಸಿ ಹುತಾತ್ಮ ನಾದರೂ ಸರಿ. ಇದನ್ನೇ ಪ್ರವಾದಿಯವರು(ಸ) ಕಲಿಸಿರುವರು.

ಅಬೂ ಹುರೈರಾ(ರ) ವರದಿ ಮಾಡಿರುವ ಪ್ರವಾದಿವಚನವೊಂದು ಹೀಗಿದೆ:

قَامَ رَسُولُ اللّٰهِ ﷺ يَخْطُبُ النَّاسَ، فَذَكَرَ: الْإِيمَانُ بِاللّٰهِ وَالْجِهَادُ فِي سَبِيلِ اللّٰهِ مِنْ أَفْضَلِ الْأَعْمَالِ عِنْدَ اللّٰهِ تَعَالَى، فَقَامَ رَجُلٌ، فَقَالَ: يَا رَسُولَ اللّٰهِ ، أَرَأَيْتَ إِنْ قُتِلْتُ فِي سَبِيلِ اللّٰهِ وَأَنَا صَابِرٌ مُحْتَسِبٌ مُقْبِلٌ غَيْرُ مُدْبِرٍ، كَفَّرَ اللّٰهُ عَنِّي خَطَايَايَ؟ قَالَ: نَعَمْ، ثُمَّ قَالَ: فَكَيْفَ قُلْتَ؟ فَرَدَّ عَلَيْهِ الْقَوْلَ كَمَا قَالَ، قَالَ: نَعَمْ، ثُمَّ قَالَ: فَكَيْفَ قُلْتَ؟ فَرَدَّ عَلَيْهِ الْقَوْلَ أَيْضًا، قَالَ: يَا رَسُولَ اللّٰهِ، أَرَأَيْتَ إِنْ قُتِلْتُ فِي سَبِيلِ اللّٰهِ صَابِرًا مُحْتَسِبًا، مُقْبِلاً غَيْرَ مُدْبِرٍ، كَفَّرَ اللّٰهُ عَنِّي خَطَايَايَ؟ قَالَ: نَعَمْ، إِلَّا الدَّيْنَ، فَإِنَّ جِبْرِيلَ سَارَّنِي بِذٰلِكَ!

ಒಮ್ಮೆ ಪ್ರವಾದಿಯವರು(ಸ) ಜನರನ್ನುದ್ದೇಶಿಸಿ ಭಾಷಣ ಮಾಡಿದರು. ಅದರಲ್ಲಿ ಸತ್ಯವಿಶ್ವಾಸದ ಬಗ್ಗೆ, ದೇವನ ಮಾರ್ಗದಲ್ಲಿ ಯುದ್ಧ ಮಾಡುವುದರ ಕುರಿತು ನೆನಪಿಸಿದರು. ಅವುಗಳು ಅಲ್ಲಾಹನ ಬಳಿ ಅತಿಶ್ರೇಷ್ಠವಾದ ಕೆಲಸಗಳಾಗಿವೆ ಎಂದೂ

ಹೇಳಿದರು. ಆಗ ಒಬ್ಬರು ಪ್ರಶ್ನಿಸಿದರು, 'ಅಲ್ಲಾಹನ ಪ್ರವಾದಿಗಳೇ! ನಾನು ದೇವನ ಮಾರ್ಗದಲ್ಲಿ ಬೆನ್ನು ತೋರಿಸದೆ ದೃಢವಾಗಿ ನಿಂತು ಪ್ರತಿಫಲವನ್ನು ಅಪೇಕ್ಷಿಸಿ ಹೋರಾಟ ನಡೆಸಿ ವಧಿಸಲ್ಪಡುವುದಾದರೆ, ನನ್ನ ಪಾಪಗಳನ್ನು ಅಲ್ಲಾಹ್ ಕ್ಷಮಿಸುವನೇ?' ಪ್ರವಾದಿ(ಸ) ಹೇಳಿದರು, 'ಹೌದು.' ಬಳಿಕ ಪ್ರವಾದಿ(ಸ) ಪ್ರಶ್ನಿಸಿದರು: 'ನೀನು ಯಾವುದರ ಕುರಿತು ಪ್ರಶ್ನಿಸಿದೆ? ಇನ್ನೊಮ್ಮೆ ಹೇಳು.' ಆ ವ್ಯಕ್ತಿ ತನ್ನ ಪ್ರಶ್ನೆಯನ್ನು ಪುನರಾವರ್ತಿಸಿದರು. ಪ್ರವಾದಿ(ಸ) ಹೇಳಿದರು, 'ಹೌದು. (ಕ್ಷಮಿಸಲ್ಪಡುವುದು) ಆದರೆ ಸಾಲಗಾರನ ಹೊರತು. ಜಿಬ್ರೀಲ್(ಅ)ರವರು ಈ ವಿಷಯವನ್ನು ಪ್ರತ್ಯೇಕವಾಗಿ ನೆನಪಿಸಿರುವರು.'[5]

ಸಾಲ ಬಾಕಿಯುಳಿಸಿ ಮರಣ ಹೊಂದಿದ ವ್ಯಕ್ತಿಗಳಿಗೆ ಪ್ರವಾದಿವರ್ಯರು(ಸ) ಮಯ್ಯಿತ್ ನಮಾಝನ್ನು ಕೂಡ ನಿರ್ವಹಿಸುತ್ತಿರಲಿಲ್ಲ. ಅಲೀ(ರ) ಹೇಳುತ್ತಾರೆ:

كَانَ رَسُولُ اللهِ ﷺ إِذَا أُتِيَ بِالْجَنَازَةِ، لَمْ يَسْأَلْ عَنْ شَيْئٍ مِنْ عَمَلِ الرَّجُلِ، وَيَسْأَلُ عَنْ دَيْنِهِ،

فَإِنْ قِيلَ: عَلَيْهِ دَيْنٌ، كَفَّ عَنِ الصَّلَاةِ عَلَيْهِ، وَإِنْ قِيلَ: لَيْسَ عَلَيْهِ دَيْنٌ، صَلَّى عَلَيْهِ

ಪ್ರವಾದಿಯವರ(ಸ) ಮುಂದೆ ಯಾರದಾದರೂ ಮಯ್ಯಿತ್ ನಮಾಝ್‌ಗೆಂದು ಬಂದರೆ, ಅವರು ಆ ವ್ಯಕ್ತಿಯ ಕರ್ಮಗಳ ಕುರಿತು ಪ್ರಶ್ನಿಸುತ್ತಿರಲಿಲ್ಲ. ಬದಲಾಗಿ ಸಾಲದ ಕುರಿತು ಕೇಳುತ್ತಿದ್ದರು. ಸಾಲ ಸಂದಾಯವಾಗದೆ, ಬಾಕಿಯಿದೆ ಎಂದು ತಿಳಿಸಿದರೆ, ನಮಾಝ್ ನಿರ್ವಹಿಸದೆ ದೂರ ಸರಿಯುತ್ತಿದ್ದರು. ಬಾಕಿಯಿಲ್ಲ ಎಂದು ಹೇಳಿದರೆ ನಮಾಝ್ ನಿರ್ವಹಿಸುತ್ತಿದ್ದರು.[6]

ಓರ್ವ ವ್ಯಕ್ತಿಯ ಜನಾಝ ತರಲಾಯಿತು. ಆಗ ಪ್ರವಾದಿವರ್ಯರು(ಸ): هَلْ عَلَى صَاحِبِكُمْ دَيْنٌ؟ 'ನಿಮ್ಮ ಈ ಸಂಬಂಧಿಗೆ ಏನಾದರೂ ಸಾಲವಿದೆಯೇ?' ಎಂದು ಕೇಳಿದರು. ಅವರು ಹೇಳಿದರು, 'ಹೌದು. ಸ್ವಲ್ಪ ಸಾಲವಿದೆ.' ಅದನ್ನು ತಿಳಿದಾಗ ಪ್ರವಾದಿಯವರು(ಸ) ನಮಾಝ್ ನಿರ್ವಹಿಸಲು ಮನಸ್ಸು ಮಾಡಲಿಲ್ಲ. ಬದಲಾಗಿ ಅವರು(ಸ) ಹೀಗೆ ಹೇಳಿದರು:

فَمَا يَنْفَعُكُمْ أَنْ أُصَلِّيَ عَلَى رَجُلٍ، رُوحُهُ مُرْتَهَنٌ فِي قَبْرِهِ، لَا تَصْعَدُ رُوحُهُ إِلَى السَّمَاءِ، فَلَوْ

ضَمِنَ رَجُلٌ دَيْنَهُ قُمْتُ فَصَلَّيْتُ عَلَيْهِ، فَإِنَّ صَلَاتِي تَنْفَعُهُ!

'ಈ ವ್ಯಕ್ತಿಗಾಗಿ ನಾನು ನಮಾಝ್ ನಿರ್ವಹಿಸಿ ಏನು ಪ್ರಯೋಜನ? ಅವರ

ಆತ್ಮವು ಸಾಲದ ಕಾರಣದಿಂದಾಗಿ ಗೋರಿಯಲ್ಲಿ ಬಂಧಿಸಲ್ಪಟ್ಟಿದೆ. ಸಾಲವು ಮರು ಪಾವತಿಸಲ್ಪಡುವ ವರೆಗೆ ಅದು ಆಕಾಶ ಲೋಕಕ್ಕೆ ಏರಿಸಲ್ಪಡುವುದಿಲ್ಲ. ಇನ್ನು ಯಾರಾದರೂ ಈ ವ್ಯಕ್ತಿಯ ಸಾಲವನ್ನು ಪಾವತಿಸುವ ಹೊಣೆ ವಹಿಸಿಕೊಂಡರೆ, ನಾನು ಇವನಿಗಾಗಿ ನಮಾಝ್ ನಿರ್ವಹಿಸುವೆ. ನಿಶ್ಚಯವಾಗಿಯೂ ನನ್ನ ಪ್ರಾರ್ಥನೆ ಆಗ ಈ ವ್ಯಕ್ತಿಗೆ ಪ್ರಯೋಜನಕ್ಕೆ ಬರುತ್ತದೆ.'[7]

---

1. ಇಬ್ನುಮಾಜ: 2430, ಇಬ್ನು ಹಿಬ್ಬಾನ್: 5018.
2. ಇಬ್ನುಮಾಜ: 2431.
3. ಬುಖಾರಿ, ಮುಸ್ಲಿಮ್.
4. ಬುಖಾರಿ, ಮುಸ್ಲಿಮ್.
5. ಅಹ್ಮದ್: 2/308–309.
6. ದಾರುಕುತ್ನಿ: 3/78, ಬೈಹಕಿ.
7. ತಬ್ರಾನಿ – ಔಸಾತ್, ಅಬೂ ಯಅ್‌ಲಾ: 6/3477.

62. ಮೂರು ಕೆಡುಕುಗಳು

عَنْ أَبِي الدَّرْدَاءِ رَضِيَ اللّٰهُ عَنْهُ قَالَ: قَالَ رَسُولُ اللّٰهِ ﷺ: لَا تُشْرِكْ بِاللّٰهِ شَيْئًا، وَإِنْ قُطِّعْتَ وَحُرِّقْتَ، وَلَا تَتْرُكْ صَلَاةً مَكْتُوبَةً مُتَعَمِّدًا، فَمَنْ تَرَكَهَا مُتَعَمِّدًا فَقَدْ بَرِئَتْ مِنْهُ الذِّمَّةُ، وَلَا تَشْرَبِ الْخَمْرَ، فَإِنَّهَا مِفْتَاحُ كُلِّ شَرٍّ

ಅಬುದ್ದರ್ದಾ(ರ) ವರದಿ ಮಾಡಿರುತ್ತಾರೆ. ಪ್ರವಾದಿ(ಸ) ಹೇಳಿದರು: ಅಲ್ಲಾಹನೊಂದಿಗೆ ಇತರ ಯಾರನ್ನೂ ನೀನು ಸಹಭಾಗಿಯಾಗಿಸಬೇಡ. ನಿನ್ನ ಅಂಗಾಂಗಗಳನ್ನು ಕತ್ತರಿಸಲಾದರೂ ನಿನ್ನನ್ನು ಬೆಂಕಿಯಲ್ಲಿ ದಹಿಸಿದರೂ ಸರಿ. ಉದ್ದೇಶಪೂರ್ವಕವಾಗಿ ಒಂದು ಕಡ್ಡಾಯ ನಮಾಝನ್ನು ಕೂಡ ತೊರೆಯಬೇಡ. ಉದ್ದೇಶಪೂರ್ವಕವಾಗಿ ನಮಾಝನ್ನು ತೊರೆಯುವವನು ಅಲ್ಲಾಹನ ಉತ್ತರದಾಯಿತ್ವದಿಂದ ಹೊರಗುಳಿಯುವನು. ನೀನು ಮದ್ಯಪಾನ ಮಾಡಬಾರದು. ಏಕೆಂದರೆ ಅದು ಎಲ್ಲ ಪಾಪಗಳ ಕೀಲಿಕೈಯಾಗಿದೆ.*

ವಿಶ್ವಾಸ, ಆರಾಧನೆ ಮತ್ತು ಸಂಸ್ಕಾರಕ್ಕೆ ಸಂಬಂಧಪಟ್ಟ ಮೂರು ವಿಷಯಗಳನ್ನು ಈ ಪ್ರವಾದಿವಚನವು ವಿವರಿಸುತ್ತದೆ. ವಿಶ್ವಾಸದಲ್ಲಿ ಪ್ರಥಮವಾದುದು ಏಕದೇವಾರಾಧನೆ ಯಾಗಿದೆ. ಇದು ಧರ್ಮದ ಮೂಲಭೂತ ಅಡಿಪಾಯಗಳಲ್ಲೊಂದಾಗಿದೆ. ಅಲ್ಲಾಹನಿಗೆ ಇರುವ ಹಕ್ಕು ಮತ್ತು ಅಧಿಕಾರ ಅವನೋರ್ವನಿಗಲ್ಲದೆ ಇನ್ನಾರಿಗೂ ಇಲ್ಲವೆಂದು ಅಂಗೀಕರಿಸುವುದು ಏಕದೇವವಿಶ್ವಾಸದ ಸಾರವಾಗಿದೆ. ಒಬ್ಬ ವ್ಯಕ್ತಿ ಈ

* ಇಮಾಮ್ ಬುಖಾರಿ – ಅದಬುಲ್ ಮುಫ್ರದ್, ಇಬ್ನುಮಾಜ: 4034, ಬೈಹಕಿ – ಸುನನ್: 1/304 ಮುಂತಾದವರು ಈ ಪ್ರವಾದಿವಚನವನ್ನು ಉಲ್ಲೇಖಿಸಿರುವರು. ಇದರ ವರದಿಯ ಪರಂಪರೆಯು ಸಹೀಹ್ ಆಗಿದೆ ಎಂದು ಪ್ರಮುಖ ಹದೀಸ್ ವಿದ್ವಾಂಸರಾದ ನಾಸಿರುದ್ದೀನ್ ಅಲ್‌ಬಾನಿ ಸಾಕ್ಷಿ ನುಡಿಯುತ್ತಾರೆ. (ಸಹೀಹ್ ಅಲ್‌ಜಾಮಿಉಸ್ಸಗೀರ್, ಭಾಗ: 2, ಪುಟ: 1226)

ವಿಶ್ವಾಸವನ್ನು ಅರಿತು ಅಂಗೀಕರಿಸಿದ ಬಳಿಕ ಮಾತು, ಕೃತಿ ಮತ್ತು ಚರ್ಯೆಯಿಂದ ಯಾವುದೇ ವರ್ತನೆಗಳನ್ನು ತೋರಿಸುವುದು ಮಹಾಪಾಪವಾಗಿದೆ. 'ಅಲ್ಲಾಹನು ತನ್ನೊಂದಿಗೆ ಇತರರನ್ನು ಸಹಭಾಗಿಗಳನ್ನಾಗಿ ಮಾಡುವುದನ್ನು ಮಾತ್ರ ಎಂದೆಂದಿಗೂ ಕ್ಷಮಿಸುವುದಿಲ್ಲ. ಅದರ ಹೊರತು ಅವನು ಕ್ಷಮಿಸಲಿಚ್ಛಿಸುವ ಇತರ ಎಲ್ಲವನ್ನೂ ಕ್ಷಮಿಸುವನು. ಅಲ್ಲಾಹ ನೊಂದಿಗೆ ಇತರ ಯಾರನ್ನಾದರೂ ಸಹಭಾಗಿಯನ್ನಾಗಿ ಮಾಡಿದವನು ಅತಿದೊಡ್ಡ ಸುಳ್ಳನ್ನು ಸೃಷ್ಟಿಸಿದನು ಮತ್ತು ಅತ್ಯಂತ ಘೋರ ಪಾಪ ವೆಸಗಿದನು.' (ಅನ್ನಿಸಾ: 48)

ಬಹುದೇವಾರಾಧನೆಯನ್ನು ಧರ್ಮವು ಯಾವ ಕಾರಣಕ್ಕೂ ಅಂಗೀಕರಿಸುವುದಿಲ್ಲ. ಇದನ್ನು ಬಹಳ ದೊಡ್ಡ ಅಕ್ರಮವೆಂದು ಪರಿಗಣಿಸಿ, ಎಲ್ಲ ರೀತಿಯಿಂದಲೂ ಅದನ್ನು ನಿರಾಕರಿಸುತ್ತದೆ. ಸತ್ಯವಿಶ್ವಾಸಿಗಳೆಂದು ಹೇಳುವವರು ಬಹುದೇವವಾದಿ ಸಿದ್ಧಾಂತಗಳಿಂದ ದೂರ ಉಳಿದು ಏಕದೇವಾರಾಧನೆಯನ್ನು ಜೀವನದುದ್ದಕ್ಕೂ ಭದ್ರವಾಗಿ ಪಾಲಿಸುವವ ರಾಗಬೇಕು. ಯಾವ ಪರಿಸ್ಥಿತಿಯಲ್ಲಿಯೂ ಬಹುದೇವಾರಾಧನೆಯ ಸಂಪ್ರದಾಯಗಳನ್ನು ಆಚರಿಸುವವರಾಗಿ ಮಾರ್ಪಡಬಾರದು. ಏಕೆಂದರೆ ಇದು ಅಲ್ಲಾಹನ ಧರ್ಮದ ಅಡಿ ಪಾಯವಾಗಿದೆ. ಅದರಲ್ಲಿ ಏನಾದರೂ ಕಲಬೆರಕೆ ಮಾಡುವವನು ಧರ್ಮವನ್ನು ನಿರಾಕರಿಸುವವನಾಗಿದ್ದಾನೆ. ವಿಶ್ವಾಸ ನಿಷ್ಠೆಯಲ್ಲಿ ಹೊಂದಾಣಿಕೆ ಮಾಡಿಕೊಳ್ಳುವವರು ಸಮಯಸಾಧಕರು ಮತ್ತು ಕಪಟಿಗಳಾಗಿರುವರು. ಮೂಲಭೂತ ವಿಷಯಗಳಲ್ಲೇ ದೃಢ ವಿಶ್ವಾಸವಿಲ್ಲದವರು ಧರ್ಮದ ಇತರ ಮೌಲ್ಯ, ನಿರ್ದೇಶನ, ನಿಯಮಗಳನ್ನು ಹೇಗೆ ತಾನೇ ಬಿಗಿಯಾಗಿ ಹಿಡಿಯಲು ಸಾಧ್ಯ? ಇದೇ ಕಾರಣದಿಂದ ದೇಹವನ್ನು ತುಂಡು ತುಂಡಾಗಿಸಿದರೂ ಬೆಂಕಿಯಲ್ಲಿ ದಹಿಸಿದರೂ ಏಕದೇವ ವಿಶ್ವಾಸಕ್ಕೆ ವಿರುದ್ಧವಾಗಿ ವರ್ತಿಸ ಕೂಡದು ಎಂದು ಪ್ರವಾದಿಯವರು(ಸ) ಎಚ್ಚರಿಸಿರುವರು.

ಎರಡನೆಯದಾಗಿ ನಮಾಝನ್ನು ತೊರೆಯುವುದರ ಕುರಿತು ವಿಮರ್ಶಿಸಲಾಗಿದೆ. ನಮಾಝ್ ಆರಾಧನೆಗಳ ಪೈಕಿ ಬಹಳ ಪ್ರಮುಖವಾದುದು. ಧರ್ಮದಲ್ಲಿ ಇತರ ಯಾವುದೇ ಕರ್ಮಗಳಿಗಿಲ್ಲದ ಮಹತ್ವದ ಸ್ಥಾನಮಾನ ನಮಾಝಿಗಿದೆ. ಇದು ಇಸ್ಲಾಮಿನ ಆಧಾರ ಸ್ತಂಭವಾಗಿದೆ. ಈ ಸ್ತಂಭವಿಲ್ಲದೆ ಧರ್ಮವು ನೆಲೆನಿಲ್ಲುವುದಿಲ್ಲ. ಪ್ರವಾದಿ(ಸ) ಹೀಗೆ ಹೇಳಿರುವರು: رَأْسُ الأَمْرِ الإِسْلَامُ، وَعَمُودُهُ الصَّلَاةُ 'ಕರ್ಮಗಳಲ್ಲಿ ಅತ್ಯುತ್ತಮವಾದುದು ಇಸ್ಲಾಮ್ ಆಗಿದೆ. ಅದರ ಮೂಲಸ್ತಂಭ ನಮಾಝ್ ಆಗಿದೆ.'[1]

ಇನ್ನೊಂದು ಸಂದರ್ಭದಲ್ಲಿ ಪ್ರವಾದಿ(ಸ) ಹೇಳಿರುವರು: لَا دِيْنَ لِمَنْ لَا صَلَاةَ لَهُ، إِنَّمَا مَوْضِعُ الصَّلَاةِ مِنَ الدِّيْنِ كَمَوْضِعِ الرَّأْسِ مِنَ الْجَسَدِ ನಮಾಝ್ ನಿರ್ವಹಿಸದವನಿಗೆ ಧರ್ಮವಿಲ್ಲ. ದೇಹದಲ್ಲಿ ತಲೆಗಿರುವ ಸ್ಥಾನವು ಧರ್ಮದಲ್ಲಿ ನಮಾಝ್‌ಗಿದೆ.[2]

ನಮಾಝನ್ನು ತೊರೆಯುವುದನ್ನು ಪ್ರವಾದಿಯವರು(ಸ) ಬಹುದೇವತ್ವ ಮತ್ತು ದೇವಧಿಕ್ಕಾರಕ್ಕೆ ಹೋಲಿಸಿದ್ದಾರೆ. بَيْنَ الرَّجُلِ وَبَيْنَ الشِّرْكِ وَالْكُفْرِ تَرْكُ الصَّلَاةِ ಒಬ್ಬ ವ್ಯಕ್ತಿ ಮತ್ತು ಶಿರ್ಕ್-ಕುಫ್ರ್‌ಗಳ ಮಧ್ಯೆ ಇರುವ ಮೇರೆ ನಮಾಝನ್ನು ತೊರೆಯುವುದಾಗಿದೆ.[3] مَنْ تَرَكَ الصَّلَاةَ مُتَعَمِّدًا فَقَدْ كَفَرَ جِهَارًا ಒಬ್ಬ ವ್ಯಕ್ತಿ ಉದ್ದೇಶಪೂರ್ವಕವಾಗಿ ನಮಾಝನ್ನು ತೊರೆದರೆ, ಅವನು ಪ್ರತ್ಯಕ್ಷವಾಗಿ ಕುಫ್ರನ್ನು ಕೈಗೊಂಡವನಾಗಿ ಬಿಡುವನು.[4]

ಅಬೂಹುರೈರಾ(ರ) ಹೇಳುತ್ತಾರೆ:

كَانَ أَصْحَابُ رَسُوْلِ اللهِ ﷺ لَا يَرَوْنَ شَيْئًا مِنَ الْأَعْمَالِ تَرْكُهُ كُفْرٌ غَيْرَ الصَّلَاةِ

ನಮಾಝನ್ನು ಹೊರತು ಇತರ ಯಾವುದೇ ಕರ್ಮಗಳನ್ನು ತೊರೆಯುವುದು ಕುಫ್ರ್ ಎಂಬ ಅಭಿಪ್ರಾಯ ಸಹಾಬಿಗಳಿಗಿರಲಿಲ್ಲ.[5]

ಪ್ರಥಮ ಕರ್ತವ್ಯವನ್ನೇ ಪೂರೈಸಲು ತಯಾರಿಲ್ಲದವರು ಇತರ ಕರ್ತವ್ಯಗಳನ್ನು ನಿರ್ವಹಿಸುವುದು ಹೇಗೆ? ಅಂತಹ ವ್ಯಕ್ತಿಯು ತಾನು ವಿಶ್ವಾಸಿ ಎಂದು ಹೇಳಿಕೊಳ್ಳುವುದನ್ನು ಯಾವ ರೀತಿ ಪರಿಗಣಿಸಬೇಕು? ಉದ್ದೇಶಪೂರ್ವಕವಾಗಿ ನಮಾಝನ್ನು ತೊರೆಯು ವವನು ಅಲ್ಲಾಹನ ಉತ್ತರದಾಯಿತ್ವದಿಂದ ಮುಕ್ತನಾಗಿರುವನು ಎಂದು ಪ್ರವಾದಿ ಯವರು(ಸ) ಎಚ್ಚರಿಸಿರುವುದು ಈ ಕಾರಣದಿಂದಾಗಿದೆ. ಉತ್ತರದಾಯಿತ್ವ ದಿಂದ ಮುಕ್ತ ನಾಗುವನು ಎಂದರೆ ಧರ್ಮದಿಂದಲೂ ಮುಸ್ಲಿಮ್ ಸಮುದಾಯ ದಿಂದಲೂ ಅವನು ಹೊರಗೆ ಹೋದವನಿಗೆ ಸಮಾನನಾಗುವನು ಎಂದರ್ಥ.

ಮದ್ಯಪಾನದ ಕುರಿತು ಪ್ರಸ್ತುತ ಪ್ರವಾದಿವಚನದ ಕೊನೆಯಲ್ಲಿ ಪ್ರಸ್ತಾಪಿಸಲಾಗಿದೆ. ಮದ್ಯಪಾನವು ಎಲ್ಲ ಕೆಡುಕುಗಳ ಜನನಿಯಾಗಿದೆ. ಮದ್ಯಪಾನದ ಬಗ್ಗೆ ಒಬ್ಬ ವ್ಯಕ್ತಿಗೆ ಆಸಕ್ತಿಯುಂಟಾಗಿದೆ ಎಂದರೆ ಆ ವ್ಯಕ್ತಿಯ ಸರ್ವನಾಶ ಸಮೀಪಿಸಿದೆ ಎಂದರ್ಥ. ವ್ಯಕ್ತಿಯಲ್ಲಿರುವ ಸಕಲ ಒಳಿತುಗಳನ್ನು ಸುಟ್ಟು ಹಾಕುವ ಬೆಂಕಿಯದು. ಒಂದು ಸಾರೋಪದೇಶ ಕಥೆಯ ಮೂಲಕ ಪ್ರವಾದಿ ಮುಹಮ್ಮದ್(ಸ)ರು ಇದನ್ನು ನಮಗೆ ಹೀಗೆ ಮನವರಿಕೆ ಮಾಡಿಸಿಕೊಟ್ಟಿರುವರು:

إِنَّ مَلِكًا مِنْ مُلُوكِ بَنِي إِسْرَائِيلَ أَخَذَ رَجُلًا، فَخَيَّرَهُ بَيْنَ أَنْ يَشْرَبَ الْخَمْرَ، أَوْ يَقْتُلَ نَفْسًا، أَوْ يَزْنِيَ، أَوْ يَأْكُلَ لَحْمَ خِنْزِيرٍ، أَوْ يَقْتُلُوهُ! فَاخْتَارَ الْخَمْرَ، وَإِنَّهُ لَمَّا شَرِبَ الْخَمْرَ لَمْ يَمْتَنِعْ مِنْ شَيْئٍ أَرَادُوهُ مِنْهُ

ಇಸ್ರಾಈಲ್ ಸಮುದಾಯದಲ್ಲಿ ಓರ್ವ ಅಕ್ರಮಿ ರಾಜನಿದ್ದನು. ಒಬ್ಬ ಸಾತ್ವಿಕನಾದ ವ್ಯಕ್ತಿಯನ್ನು ಅವನು ಬಂಧಿಸಿ, ಈ ನಾಲ್ಕರಲ್ಲಿ ಒಂದು ಕೆಲಸವನ್ನು ನೀನು ಕಡ್ಡಾಯವಾಗಿ ಮಾಡಬೇಕೆಂದು ನಿರ್ಬಂಧಿಸಿದನು. ಮದ್ಯಪಾನ ಮಾಡಬೇಕು, ಇಲ್ಲವೇ ಒಬ್ಬನ ಕೊಲೆ ಮಾಡಬೇಕು ಅಥವಾ ವ್ಯಭಿಚಾರ ಮಾಡಬೇಕು ಅಥವಾ ಹಂದಿ ಮಾಂಸ ತಿನ್ನಬೇಕು. ಇಲ್ಲದಿದ್ದರೆ ನಿನ್ನನ್ನು ಕೊಂದು ಬಿಡುವೆನು ಎಂದು ಬೆದರಿಕೆಯೊಡ್ಡಿದನು. ಅನ್ಯ ಮಾರ್ಗವಿಲ್ಲದೆ ಆ ವ್ಯಕ್ತಿ ಮದ್ಯಪಾನ ಮಾಡಲು ಒಪ್ಪಿದ ಮದ್ಯವು ದೇಹದೊಳಕ್ಕೆ ಸೇರಿದಾಗ ಇತರ ಯಾವೆಲ್ಲ ಪಾಪಗಳನ್ನು ಮಾಡಲು ಆ ಅಕ್ರಮಿ ರಾಜ ಹೇಳಿದ್ದನೋ, ಅವೆಲ್ಲವುಗಳನ್ನೂ ಆ ವ್ಯಕ್ತಿ ಸ್ವ ಇಚ್ಛೆಯಿಂದಲೇ ಮಾಡಿ ಮುಗಿಸಿದನು.[6]

ಇನ್ನೊಂದು ಸಂದರ್ಭದಲ್ಲಿ ಪ್ರವಾದಿವರ್ಯರು(ಸ) ಹೀಗೆಂದಿರುವರು:

لَا يَزَالُ الْعَبْدُ فِي فُسْحَةٍ مِنْ دِينِهِ مَالَمْ يَشْرِبِ الْخَمْرَ، فَإِذَا شَرِبَهَا خَرَقَ اللَّهُ عَنْهُ سَتْرَهُ، وَكَانَ الشَّيْطَانُ وَلِيَّهُ، وَسَمْعَهُ وَبَصَرَهُ وَرَجْلَهُ، يَسُوقُهُ إِلَى كُلِّ شَرٍّ، يَصْرِفُ عَنْ كُلِّ خَيْرٍ

'ಮದ್ಯಪಾನ ಮಾಡದ ವರೆಗೆ ವ್ಯಕ್ತಿಯು ಧರ್ಮದಲ್ಲಿರುವನು. ಮದ್ಯಪಾನ ಮಾಡಿದ ಕೂಡಲೇ ಅಲ್ಲಾಹನು ಆ ವ್ಯಕ್ತಿಯ ಮರೆಯನ್ನು ಕೆಡವಿ ಬಿಡುವನು. ಶೈತಾನನು ಅವನ ರಕ್ಷಣೆಯ ಹೊಣೆಯನ್ನು ಸ್ವೀಕರಿಸುವನು. ಅವನ ಕಣ್ಣು, ಕಿವಿ, ಕಾಲಿನ ಹೆಜ್ಜೆ, ಶೈತಾನನದ್ದಾಗಿ ಬಿಡುವುದು. ಎಲ್ಲ ಕೆಡುಕುಗಳಿಗೂ ಶೈತಾನನು ಅವನನ್ನು ಕರೆದೊಯ್ಯುವನು. ಎಲ್ಲ ಒಳಿತುಗಳನ್ನು ತಡೆಹಿಡಿಯುವುದು.'[7]

ಕೇವಲ ಮದ್ಯಪಾನವನ್ನು ಮಾತ್ರವಲ್ಲ, ಅದರಂತಿರುವ ಎಲ್ಲ ವಿಷಯಗಳನ್ನು ಇಸ್ಲಾಮ್ ನಿಷೇಧಿಸಿದೆ. ಅನಸ್(ರ) ಹೇಳುತ್ತಾರೆ:

لَعَنَ رَسُولُ اللَّهِ ﷺ فِي الْخَمْرِ عَشَرَةً: عَاصِرَهَا وَمُعْتَصِرَهَا، وَشَارِبَهَا وَحَامِلَهَا، وَالْمَحْمُولَةَ إِلَيْهِ، وَسَاقِيَهَا وَبَائِعَهَا وَآكِلَ ثَمَنِهَا وَالْمُشْتَرِيَ لَهَا، وَالْمُشْتَرِى لَهُ

ಮದ್ಯದ ವಿಷಯದಲ್ಲಿ ಹತ್ತು ವಿಭಾಗದವರನ್ನು ಅಲ್ಲಾಹನ ಪ್ರವಾದಿ

ಯವರು(ಸ) ಶಪಿಸಿರುವರು. ಮದ್ಯ ವಿತರಿಸು ವವನು, ವಿತರಿಸಲು ಹೇಳುವವನು, ಕುಡಿಯುವವನು, ಅದನ್ನು ತೆಗೆದುಕೊಂಡು ಹೋಗುವವನು, ತೆಗೆದುಕೊಂಡು ಹೋಗಲು ಆದೇಶಿಸುವವನು, ಕುಡಿಸುವವನು, ಮಾರುವವನು, ಅದರ ಸಂಪಾದನೆ ತಿನ್ನುವವನು, ಅದರಿಂದುಂಟಾಗುವ ವಸ್ತುಗಳನ್ನು ಖರೀದಿಸುವವನು, ಅವುಗಳನ್ನು ಮಾರುವವನು.[8]

ಆರಂಭದಲ್ಲಿ ಬಂದು ಪ್ರವಾದಿವಚನದಲ್ಲಿ ಎಂದಿಗೂ ಕ್ಷಮಿಸಲ್ಪಡದ ಬಹುದೇವ ವಿಶ್ವಾಸ, ಶಿರ್ಕ್ ಮತ್ತು ಕುಫ್ರ್‌ನೆಡೆಗೆ ಒಯ್ಯುವ ನಮಾಝುನ್ನು ತೊರೆಯುವುದು ಮುಂತಾದ ಗಂಭೀರವಾದ ವಿಷಯಗಳೊಂದಿಗೆ ಮದ್ಯಪಾನದ ಕುರಿತೂ ಹೇಳ ಲಾಗಿದೆ. ಮದ್ಯವನ್ನು ಕ್ಷುಲ್ಲಕ ವಿಷಯವೆಂದು ಪರಿಗಣಿಸುವ, ಅದರ ಬಗ್ಗೆ ಮೌನ ವನ್ನು ಪಾಲಿಸು ತ್ತಿರುವ ವಿದ್ವಾಂಸರು ಮತ್ತು ಸಮಾಜಸುಧಾರಕರು ಈ ಪ್ರವಾದಿ ವಚನದ ಕುರಿತು ಗಾಢವಾಗಿ ಚಿಂತನೆ ನಡೆಸಬೇಕಾಗಿದೆ.

---

1. ತಿರ್ಮಿದಿ: 2616, ಅಹ್ಮದ್: 5/231, ಇಬ್ನುಮಾಜ: 3973.
2. ಮಜ್ಮಉಸ್ಸವಾಇದ್: 1/292, ತಬ್ರಾನಿ – ಸಗೀರ್: 1/61, ಸುಯೂತಿ – ಜಾಮಿಉಸ್ಸಗೀರ್: 9705.
3. ಮುಸ್ಲಿಮ್: 82, ಅಬೂದಾವೂದ್: 4678, ತಿರ್ಮಿದಿ: 2622.
4. ತಬ್ರಾನಿ – ಔಸಾತ್, ಇಬ್ನುಮಾಜ: 1080.
5. ತಿರ್ಮಿದಿ: 2622, ಹಾಕಿಮ್: 12.
6. ಹಾಕಿಮ್: 4/147, ತಬ್ರಾನಿ – ಔಸಾತ್.
7. ಜಾಮಿಉಸ್ಸಗೀರ್, ತಬ್ರಾನಿ, ಕನ್ಝುಲ್ ಅಮ್ಮಾಲ್: 13161.
8. ತಿರ್ಮಿದಿ: 1295, ಇಬ್ನುಮಾಜ: 3381.

63. ದಾನಧರ್ಮಗಳ ಶ್ರೇಷ್ಠತೆ

عَنْ أَبِي هُرَيْرَةَ رَضِيَ اللّٰهُ عَنْهُ، قَالَ: قَالَ رَسُوْلُ اللّٰهِ ﷺ: مَنْ تَصَدَّقَ بِعِدْلِ تَمْرَةٍ مِنْ كَسْبٍ طَيِّبٍ - وَلَا يَقْبَلُ اللّٰهُ إِلَّا الطَّيِّبَ - فَإِنَّ اللّٰهَ يَتَقَبَّلُهَا بِيَمِيْنِهِ، ثُمَّ يُرَبِّيْهَا لِصَاحِبِهَا كَمَا يُرَبِّي أَحَدُكُمْ فُلُوَّهُ حَتّٰى تَكُوْنَ مِثْلَ الْجَبَلِ

ಅಬುಹುರೈರಾ(ರ) ವರದಿ ಮಾಡಿರುತ್ತಾರೆ. ಪ್ರವಾದಿ(ಸ) ಹೇಳಿದರು: ಯಾರಾದರೂ ತನ್ನ ಪರಿಶುದ್ಧವಾದ ಸಂಪತ್ತಿನಿಂದ (ಪರಿಶುದ್ಧವಾದುದನ್ನು ಮಾತ್ರ ಅಲ್ಲಾಹ್ ಸ್ವೀಕರಿಸುತ್ತಾನೆ) ಒಂದು ಖರ್ಜೂರವನ್ನು ದಾನ ಮಾಡಿದರೆ, ಅಲ್ಲಾಹನು ತನ್ನ ಬಲಗೈಯಿಂದ ಅದನ್ನು ಸ್ವೀಕರಿಸುವನು. ಆ ಬಳಿಕ ನಿಮ್ಮ ಪೈಕಿ ಒಬ್ಬರು ತನ್ನ ಕುದುರೆ ಮರಿಯನ್ನು ಬೆಳೆಸುವಂತೆ ಅದನ್ನು ಬೆಳೆಸುವನು. ಒಂದು ಪರ್ವತದಷ್ಟು ಎತ್ತರವಾಗುವ ವರೆಗೆ.*

ಇಸ್ಲಾಮ್ ಮನುಷ್ಯನಲ್ಲಿ ಬೆಳೆಸಬಯಸುವ ಬಹಳ ಶ್ರೇಷ್ಠ ಗುಣಗಳ ಪೈಕಿ ಪ್ರಧಾನವಾದುದು ದಾನಶೀಲತೆಯಾಗಿದೆ. ಅಂದರೆ ತನ್ನ ಸಹಜೀವಿಗಳನ್ನು ತನ್ನಂತೆಯೇ ಕಾಣುವುದು ಮತ್ತು ತನಗೆ ಸಿಕ್ಕಿದ ದೇವನ ಅನುಗ್ರಹಗಳನ್ನು ಅವರೊಂದಿಗೆ ಹಂಚಿಕೊಳ್ಳುವುದು ದಾನಶೀಲತೆಯಾಗಿದೆ. ನಮಾಝ್, ಉಪವಾಸ ವ್ರತ ಮತ್ತಿತರ ಆರಾಧನೆಗಳಂತೆ ಸತ್ಯವಿಶ್ವಾಸಿಯ ಜೀವನದಲ್ಲಿ ದಾನಶೀಲತೆಯೂ ತುಂಬಿರುತ್ತದೆ. ದರಿದ್ರರ, ಅನಾಥರ, ಸಮಾಜದಲ್ಲಿರುವ ನಿರ್ಗತಿಕರ ಬಗ್ಗೆ ಇರುವ ಕರುಣೆ ಮತ್ತು ಸಹಾನುಭೂತಿಯು ಈಮಾನಿನ ಕುರುಹಾಗಿದೆ. ಅದಿಲ್ಲದೆ ವಿಶ್ವಾಸವು ಪರಿಪೂರ್ಣವಾಗುವುದಿಲ್ಲ. ಅಲ್ಲಾಹ್ ಇದನ್ನು ಹೀಗೆ ನೆನಪಿಸಿದ್ದಾನೆ: 'ನೀವು ನಿಮ್ಮ

* ಇಮಾಮ್ ಬುಖಾರಿ: 1410, ಮುಸ್ಲಿಮ್: 1014, ನಸಾಈ: 5/57, ತಿರ್ಮಿದಿ: 661, ಇಬ್ನುಮಾಜ: 1842, ಇಬ್ನು ಖುಝೈಮಾ: 2425 ಮುಂತಾದವರು ಉಲ್ಲೇಖಿಸಿರುವ ಪ್ರಬಲ ಹದೀಸ್.

ಮುಖಗಳನ್ನು ಪೂರ್ವದಿಕ್ಕಿಗೆ ಅಥವಾ ಪಶ್ಚಿಮದಿಕ್ಕಿಗೆ ಮಾಡಿಕೊಳ್ಳುವುದು ಧರ್ಮಶೀಲತೆಯಲ್ಲ. ನಿಜವಾಗಿ ಒಬ್ಬನು ಅಲ್ಲಾಹನನ್ನೂ ನಿರ್ಣಾಯಕ ದಿನವನ್ನೂ ದೇವಚರರನ್ನೂ ಅಲ್ಲಾಹನು ಅವತೀರ್ಣಗೊಳಿಸಿದ ಗ್ರಂಥವನ್ನೂ ಅವನ ಸಂದೇಶ ವಾಹಕರನ್ನೂ ಹೃತ್ಪೂರ್ವಕ ಒಪ್ಪಿಕೊಳ್ಳುವುದೂ ಅಲ್ಲಾಹನ ಸಂಪ್ರೀತಿಗಾಗಿ ತನ್ನ ಮನ ಮೆಚ್ಚುಗೆಯ ಸಂಪತ್ತನ್ನು ಬಂಧುಗಳಿಗೂ ಅನಾಥರಿಗೂ ನಿರ್ಗತಿಕರಿಗೂ ಪ್ರಯಾಣಿಕರಿಗೂ ಸಹಾಯಾರ್ಥಿಗಳಿಗೂ ದಾಸ್ಯ ವಿಮೋಚನೆಗಾಗಿಯೂ ವ್ಯಯಿಸುವುದೂ ನಮಾಝನ್ನು ಸಂಸ್ಥಾಪಿಸುವುದೂ ಝಕಾತ್ ನೀಡುವುದೂ ವಾಗ್ದಾನ ಮಾಡಿದರೆ ಪೂರೈಸುವುದೂ ಕಷ್ಟಕಾರ್ಪಣ್ಯಗಳಲ್ಲಿಯೂ ಸತ್ಯಾಸತ್ಯಗಳ ಸಮರವಾಗುತ್ತಿರುವಾಗಲೂ ಸಹನೆಯಿಂದಿರುವುದೂ ಧರ್ಮಶೀಲತೆಯಾಗಿರುತ್ತದೆ. ಇವರೇ ಸತ್ಯಸಂಧರು ಮತ್ತು ಇವರೇ ಧರ್ಮನಿಷ್ಠರು.' **(ಅಲ್ ಬಕರ: 177)**

ವಿಶ್ವಾಸಿಗಳ ಗುಣಸ್ವಭಾವಗಳಲ್ಲಿ ದಾನಶೀಲತೆಯೂ ಇರುವುದನ್ನು ದೃಢಪಡಿಸುವ ಪವಿತ್ರ ಕುರ್‌ಆನಿನ ಅನೇಕ ಸೂಕ್ತಗಳಿವೆ. 'ಪರೋಕ್ಷದ ಮೇಲೆ ವಿಶ್ವಾಸವಿರಿಸುವವರಿಗೆ, ನಮಾಝನ್ನು ಸಂಸ್ಥಾಪಿಸುವವರಿಗೆ, ನಾವು ನೀಡಿರುವ ಸಂಪತ್ತು ಸೌಕರ್ಯಗಳಿಂದ ವ್ಯಯಿಸುವವರಿಗೆ...' **(ಅಲ್ ಬಕರ: 3)**

'ಅವರ ಬೆನ್ನುಗಳು ಹಾಸಿಗೆಗಳನ್ನು ಬಿಟ್ಟಿರುತ್ತವೆ. ತಮ್ಮ ಪ್ರಭುವನ್ನು ಭಯ ಹಾಗೂ ನಿರೀಕ್ಷೆಯೊಂದಿಗೆ ಪ್ರಾರ್ಥಿಸುತ್ತಾರೆ. ನಾವು ಅವರಿಗೆ ದಯಪಾಲಿಸಿರುವ ಜೀವನಾಧಾರ ದಿಂದ ಖರ್ಚು ಮಾಡುತ್ತಾರೆ.' **(ಅಸ್ಸಜ್ದ: 16)**

'ತಮ್ಮ ಸಂಪತ್ತನ್ನು ಅಹೋರಾತ್ರಿ ರಹಸ್ಯವಾಗಿಯೂ ಬಹಿರಂಗವಾಗಿಯೂ ಖರ್ಚು ಮಾಡುವವರ ಪ್ರತಿಫಲ ಅವರ ಪ್ರಭುವಿನ ಬಳಿ ಇದೆ. ಅವರಿಗೆ ಯಾವ ಭಯವೂ ವ್ಯಥೆಯೂ ಇರುವುದಿಲ್ಲ.' **(ಅಲ್ ಬಕರ: 274)**

ದಾನಶೀಲರಿಗೆ ಅಲ್ಲಾಹನ ವಿಶೇಷ ಕರುಣೆ ಮತ್ತು ಅನುಗ್ರಹಗಳು ಲಭಿಸುವುದೆಂದು ಪ್ರವಾದಿಯವರು(ಸ) ಹೇಳಿರುವರು:

إِنَّ الصَّدَقَةَ لَتُطْفِئُ عَنْ أَهْلِهَا حَرَّ الْقُبُوْرِ. وَإِنَّمَا يَسْتَظِلُّ الْمُؤْمِنُ يَوْمَ الْقِيَامَةِ فِي ظِلِّ صَدَقَتِهِ

'ನಿಶ್ಚಯವಾಗಿಯೂ ದಾನವು ಅದನ್ನು ನೀಡಿದವರ ಗೋರಿಯ ಉಷ್ಣತೆಯನ್ನು ಕಡಿಮೆಗೊಳಿಸುತ್ತದೆ. ಅಂತ್ಯದಿನದಂದು ವ್ಯಕ್ತಿ ತನ್ನ ದಾನಧರ್ಮಗಳ ನೆರಳಿನಲ್ಲಿರುವನು.'[1]

ಇನ್ನೊಂದು ಸಂದರ್ಭದಲ್ಲಿ ಪ್ರವಾದಿಯವರು(ಸ) ಹೀಗೆ ಹೇಳಿರುವರು:

إِنَّ الصَّدَقَةَ تُطْفِئُ غَضَبَ الرَّبِّ, وَتَدْفَعُ مِيتَةَ السُّوْءِ

'ದಾನವು ದೇವನ ಕೋಪವನ್ನು ತಣಿಸುತ್ತದೆ. ಅವಘಡದ ಮರಣಗಳನ್ನೂ ತಡೆಯುತ್ತದೆ.'[2]

ಅಂತ್ಯದಿನದಂದು ದಾನಧರ್ಮಗಳು ಯಾವ ರೀತಿ ಮನುಷ್ಯನ ರಕ್ಷಣೆಗೆ ಬರುತ್ತದೆ ಎಂಬುದನ್ನು ಬಹಳ ಮನೋಜ್ಞವಾದ ಉದಾಹರಣೆಯ ಮೂಲಕ ಪ್ರವಾದಿಯವರು(ಸ) ವಿವರಿಸಿದ್ದಾರೆ:

وَآمُرُكُمْ بِالصَّدَقَةِ. وَمَثَلُ ذٰلِكَ كَمَثَلِ رَجُلٍ أَسَرَهُ الْعَدُوُّ. فَأَوْثَقُوا يَدَهُ إِلَى عُنُقِهِ، وَقَرَّبُوهُ لِيَضْرِبُوا عُنُقَهُ، فَجَعَلَ يَقُولُ: هَلْ لَكُمْ أَنْ أَفْدِيَ نَفْسِي مِنْكُمْ؟ وَجَعَلَ يُعْطِي الْقَلِيلَ وَالْكَثِيرَ حَتّٰى فَدَى نَفْسَهُ!

'ನಾನು ನಿಮ್ಮೊಂದಿಗೆ ದಾನ ನೀಡಲು ಆದೇಶಿಸುತ್ತೇನೆ. ದಾನದ ಉದಾಹರಣೆಯು ಹೀಗಿದೆ: ಒಬ್ಬ ವ್ಯಕ್ತಿಯನ್ನು ಅವನ ಶತ್ರುಗಳು ಬಂಧಿಸಿದರು. ಕೈಗಳನ್ನು ಹಿಂದಕ್ಕೆ ಕಟ್ಟಿದರು. ಅವನ ತಲೆಯನ್ನು ಕತ್ತರಿಸಲಿಕ್ಕಾಗಿ ಅವನ ಬಳಿ ಬಂದರು. ಆ ವೇಳೆ ವ್ಯಕ್ತಿ ಪ್ರಶ್ನಿಸಿದ: ಪರಿಹಾರಧನವನ್ನು ನೀಡಿದರೆ ನೀವು ನನ್ನನ್ನು ಬಿಟ್ಟುಬಿಡುವಿರಾ? ಹೀಗೆ ಆ ವ್ಯಕ್ತಿ ತನ್ನ ಬಳಿ ಇದ್ದ ಸಣ್ಣ ಮತ್ತು ದೊಡ್ಡ ಎಲ್ಲ ವಸ್ತುಗಳನ್ನೂ ದಾನ ನೀಡಿದ. ಹೀಗೆ ಆ ಬಂಧನದಿಂದ ಮುಕ್ತಿ ಹೊಂದಿದ.'[3]

ಪರಲೋಕದಲ್ಲಿ ಮಾತ್ರವಲ್ಲ, ಇಹಲೋಕದಲ್ಲಿಯೂ ದಾನಧರ್ಮಗಳನ್ನು ಮಾಡುವವರಿಗೆ ಅಲ್ಲಾಹನ ವಿಶೇಷ ಕರುಣೆಯು ಲಭ್ಯವಾಗುತ್ತದೆ. ಪ್ರವಾದಿಯವರು(ಸ) ತಮ್ಮ ಅನುಯಾಯಿಗಳೊಂದಿಗೆ ಹೇಳಿದ ನೀತಿಕತೆಯೊಂದು ಹೀಗಿದೆ:

بَيْنَا رَجُلٌ يَمْشِي بِفَلَاةٍ مِنَ الْأَرْضِ فَسَمِعَ صَوْتًا فِي سَحَابَةٍ: اسْقِ حَدِيقَةَ فُلَانٍ, فَتَنَحَّى ذٰلِكَ السَّحَابُ, فَأَفْرَغَ مَاءَهُ فِي حَرَّةٍ, فَإِذَا شَرْجَةٌ مِنْ تِلْكَ الشِّرَاجِ قَدِ اسْتَوْعَبَتْ ذٰلِكَ الْمَاءَ كُلَّهُ, فَتَتَبَّعَ الْمَاءَ, فَإِذَا رَجُلٌ قَائِمٌ فِي حَدِيقَتِهِ يُحَوِّلُ الْمَاءَ بِمِسْحَاتِهِ, فَقَالَ لَهُ: يَا عَبْدَ اللّٰهِ, مَا اسْمُكَ؟ قَالَ: فُلَانٌ, لِلْإِسْمِ الَّذِي سَمِعَ فِي السَّحَابَةِ! فَقَالَ لَهُ: يَا عَبْدَ اللّٰهِ, لِمَ تَسْأَلُنِي عَنْ إِسْمِي؟ فَقَالَ: إِنِّي سَمِعْتُ صَوْتًا فِي السَّحَابِ الَّذِي هٰذَا مَاؤُهُ يَقُولُ: اسْقِ حَدِيقَةَ فُلَانٍ لِلْإِسْمِكَ, فَمَا تَصْنَعُ فِيهَا؟ فَقَالَ: أَمَا إِذْ قُلْتَ هٰذَا, فَإِنِّي أَنْظُرُ إِلَى مَا يَخْرُجُ مِنْهَا فَأَتَصَدَّقُ بِثُلُثِهِ, وَآكُلُ أَنَا وَعِيَالِي ثُلُثًا, وَأَرُدُّ فِيهَا ثُلُثَهُ

ಒಂದು ದಿನ ಒಬ್ಬ ವ್ಯಕ್ತಿ ಮರುಭೂಮಿಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಮೋಡಗಳಿಂದ ಒಂದು ಅಶರೀರವಾಣಿ ಕೇಳಿಸಿತು. ಇಂತಿಂತಹ ವ್ಯಕ್ತಿಯ ತೋಟದ ಮೇಲೆ ಮಳೆ ವರ್ಷಿಸಿರಿ. ಹೀಗೆ ಆ ಮೋಡ ಅಲ್ಲಿಂದ ಹೊರಟು ಒಣಗಿ ಬರಡಾದಂತಹ ಒಂದು ಪ್ರದೇಶದಲ್ಲಿ ಮಳೆ ಸುರಿಸಿತು. ಅಲ್ಲಿರುವ ಒಂದು ಹಳ್ಳದಲ್ಲಿ ಆ ನೀರು ಶೇಖರಿಸಲ್ಪಟ್ಟಿತು. ಶಬ್ದವನ್ನು ಆಲಿಸಿದ ವ್ಯಕ್ತಿ ಆ ನೀರಿನ ಹರಿವಿನ ಹಿಂದೆಯೇ ಸಾಗಿದ. ಅಲ್ಲಿ ಒಬ್ಬ ವ್ಯಕ್ತಿ ನೀರು ಸರಾಗವಾಗಿ ಹರಿದು ಹೋಗಲು ಮಣ್ಣನ್ನು ಸರಿಸಿ ಜಾಗ ಮಾಡುತ್ತಿರುವುದನ್ನು ಕಂಡ. ಆ ವ್ಯಕ್ತಿ ತೋಟದಲ್ಲಿರುವ ವ್ಯಕ್ತಿಯೊಂದಿಗೆ ಪ್ರಶ್ನಿಸಿದ, ಅಲ್ಲಾಹನ ದಾಸರೇ, ತಮ್ಮ ಹೆಸರೇನು? ಆ ವ್ಯಕ್ತಿ ಹೆಸರು ಹೇಳಿದ. ಮೋಡದಿಂದ ಕೇಳಿಸಿಕೊಂಡ ಹೆಸರು ಇದುವೇ ಆಗಿತ್ತು ಎಂದು ಆತನಿಗೆ ತಿಳಿಯಿತು. ನೀವೇಕೆ ನನ್ನ ಹೆಸರನ್ನು ವಿಚಾರಿಸಿದಿರಿ? ಎಂದು ಪ್ರಶ್ನಿಸಿದ್ದಕ್ಕೆ ಆಗಂತುಕ ಹೇಳಿದ, ಇಲ್ಲಿ ಮಳೆ ಸುರಿಸಿದ ಮೋಡದಿಂದ ಇಂತಿಂತಹ ವ್ಯಕ್ತಿಯ ತೋಟದಲ್ಲಿ ಹೋಗಿ ಮಳೆ ಸುರಿಸಬೇಕು ಎಂಬ ಆದೇಶ ಮೊಡದಿಂದ ಬಂದಿರುವುದನ್ನು ನಾನು ಆಲಿಸಿದೆ. ಹೀಗೆ ಆಗಲು ನಿಮ್ಮ ಕರ್ಮಗಳು ಹೇಗಿವೆ? ತೋಟದ ಮಾಲಿಕ ಹೇಳಿದ, ನೀವು ಪ್ರಶ್ನಿಸಿರುವುದರಿಂದಾಗಿ ವಿಷಯವನ್ನು ತಿಳಿಸುವೆನು. ಈ ಕೃಷಿ ಭೂಮಿಯಿಂದ ಸಿಗುವ ಬೆಳೆಯನ್ನು ನಾನು ಲೆಕ್ಕ ಮಾಡುವೆ. ನಂತರ ಅದನ್ನು ಮೂರು ಪಾಲು ಮಾಡುವೆ. ಮೂರರಲ್ಲಿ ಒಂದು ಪಾಲನ್ನು ನಾನು ಮತ್ತು ಕುಟುಂಬಕ್ಕಾಗಿ ವಿನಿಯೋಗಿಸುವೆ. ಮೂರರಲ್ಲಿ ಒಂದು ಪಾಲನ್ನು ದಾನ ಮಾಡುವೆ. ಉಳಿದ ಪಾಲನ್ನು ಕೃಷಿ ಭೂಮಿಯಲ್ಲೇ ಪುನಃ ನಾಟಿ ಮಾಡುವೆ.[4]

ದಾನ ನೀಡುವ ದೇವದಾಸನಿಗೆ ಸಿಗಲಿಕ್ಕಿರುವ ಪ್ರತಿಫಲದ ಆಧಿಕ್ಯವನ್ನು ಪ್ರಥಮ ಹದೀಸ್ ತಿಳಿಸುತ್ತದೆ. ದಾನ ನೀಡುವ ವಸ್ತು ಅದೆಷ್ಟು ಅಲ್ಪವಾಗಿದ್ದರೂ ಅದನ್ನು ಆತ್ಮಾರ್ಥವಾಗಿ ನೀಡುವುದಾದರೆ, ತನ್ನ ಬಲಗೈಯನ್ನು ಚಾಚಿ ಅಲ್ಲಾಹನು ಅದನ್ನು ಸಂತೋಷದಿಂದ ಸ್ವೀಕರಿಸುವನು. ಆ ಬಳಿಕ ವ್ಯಕ್ತಿಯು ತನ್ನ ಕುದುರೆಯ ಮರಿಯನ್ನು ಸಾಕಿ ಸಲಹುವಂತೆ ಅದನ್ನು ಪೋಷಿಸುವನು. ಕೊನೆಗೆ ವಿಚಾರಣೆಯ ದಿನ ಪರ್ವತಕ್ಕೆ ಸಮಾನವಾದ ಪ್ರತಿಫಲದ ರೂಪದಲ್ಲಿ ಆ ದಾನಶೀಲ ವ್ಯಕ್ತಿಗೆ ಅದನ್ನು ಮರಳಿಸುವನು.

ದಾನವು ಈ ಮೇಲೆ ಸೂಚಿಸಿದಂತೆ ದೇವನ ಸನ್ನಿಧಿಯಲ್ಲಿ ಸ್ವೀಕಾರಾರ್ಹವೆನಿಸಬೇಕಿದ್ದರೆ, ಬಹಳ ಮುಖ್ಯವಾದ ಒಂದು ಶರತ್ತಿದೆ. ನಿಷಿದ್ಧವಾದ ಮಾರ್ಗದಲ್ಲಿ ಸಂಪಾದಿಸಿದ ಹಣವನ್ನು ಅಲ್ಲಾಹನು ಸ್ವೀಕರಿಸುವುದಿಲ್ಲ, ಅದೆಷ್ಟು ಅಧಿಕ ಪ್ರಮಾಣ

ದಲ್ಲಿದ್ದರೂ ಸರಿ. ಏಕೆಂದರೆ ಅವನು ಪರಮ ಪಾವನನು ಮತ್ತು ಪರಿಶುದ್ಧವಾದುದನ್ನು ಮಾತ್ರ ಸ್ವೀಕರಿಸುವವನಾಗಿದ್ದಾನೆ.

ಒಂದು ಖರ್ಜೂರವನ್ನಾದರೂ ದಾನ ನೀಡಿರಿ ಎಂಬ ಪ್ರಯೋಗವು ದಾನ ನೀಡುವುದು ಕೇವಲ ಶ್ರೀಮಂತರ ಕೆಲಸವಲ್ಲ, ಸಾಧಾರಣ ವ್ಯಕ್ತಿಗಳಲ್ಲಿ ಕೂಡ ಈ ಅಭ್ಯಾಸವು ಇರಬೇಕು ಎನ್ನುವುದರ ಸೂಚನೆಯಾಗಿದೆ. ಪ್ರವಾದಿ(ಸ) ಹೇಳಿರುವರು:

اِتَّقُوا النَّارَ وَلَوْ بِشِقِّ تَمْرَةٍ, فَمَنْ لَمْ يَجِدْ فَبِكَلِمَةٍ طَيِّبَةٍ

'ನೀವು ನರಕದ ಬಗ್ಗೆ ಜಾಗರೂಕರಾಗಿರಿ. ಒಂದು ಖರ್ಜೂರವನ್ನು ದಾನ ನೀಡಿಯಾದರೂ ಸರಿ. ಅದಕ್ಕೂ ಸಾಧ್ಯವಿಲ್ಲವೆಂದಾದರೆ ಒಂದು ಒಳ್ಳೆಯ ಮಾತನ್ನು ಹೇಳಿಯಾದರೂ ಸರಿ.'[5]

---

1. ತಬ್ರಾನಿ - ಕಬೀರ್, ಬೈಹಕಿ - ಶುಅಬುಲ್ ಈಮಾನ್: 3347.
2. ತಿರ್ಮಿದಿ: 664, ಇಬ್ನು ಹಿಬ್ಬಾನ್: 3298.
3. ತಿರ್ಮಿದಿ: 2863, ಇಬ್ನು ಖುಝೈಮಾ: 2/64, ಇಬ್ನು ಹಿಬಾನ್: 6200, ಹಾಕಿಮ್: 1/236.
4. ಮುಸ್ಲಿಮ್: 2984.
5. ಬುಖಾರಿ: 6563, ಮುಸ್ಲಿಮ್: 1016.

64. ನಾಳೆಗೆ ಬೇಕಾಗಿ ಸಂಗ್ರಹಿಸಿಡುವುದು

عَنْ عَائِشَةَ رَضِيَ اللَّهُ عَنْهَا: أَنَّهُمْ ذَبَحُوا شَاةً، فَقَالَ النَّبِيُّ ﷺ: مَا بَقِيَ مِنْهَا؟ قَالَتْ: مَا بَقِيَ مِنْهَا إِلَّا كَتِفُهَا. قَالَ: بَقِيَ كُلُّهَا غَيْرَ كَتِفِهَا

ಆಯಿಶಾ(ರ) ವರದಿ ಮಾಡಿರುತ್ತಾರೆ. ಪ್ರವಾದಿಯವರ(ಸ) ಮನೆಯಲ್ಲಿ ಒಂದು ಆಡನ್ನು ಕೊಯ್ದು ದಾನ ಮಾಡಲಾಯಿತು. ಪ್ರವಾದಿಯವರು(ಸ) ಪ್ರಶ್ನಿಸಿದರು: ಏನಾದರೂ ಬಾಕಿಯುಳಿದಿದೆಯೇ? ನಾನು ಹೇಳಿದೆ, 'ಅದರ ಭುಜದ ಬಾಗದ ಹೊರತು ಬೇರೇನೂ ಬಾಕಿಯುಳಿದಿಲ್ಲ.' ಪ್ರವಾದಿ(ಸ) ಹೇಳಿದರು, 'ಹಾಗಾದರೆ ಅದರ ಭುಜದ ಹೊರತು ಬೇರೆಲ್ಲವೂ ಬಾಕಿ ಯುಳಿದಿದೆ.'*

ಸಂಪಾದಿಸಿ ಉಂಟು ಮಾಡಿದ ಸಂಪತ್ತನ್ನು ಅನಗತ್ಯವಾಗಿ ಖರ್ಚು ಮಾಡಲು ಯಾರೂ ಇಷ್ಟಪಡುವುದಿಲ್ಲ. ಹಣ ಗಳಿಸಬೇಕು, ಇನ್ನಷ್ಟು ಸಂಪತ್ತನ್ನು ಸಂಗ್ರಹಿಸಬೇಕು ಎಂಬುದು ಎಲ್ಲರ ಬಯಕೆ. ಇದಕ್ಕಾಗಿಯೇ ಜನರು ವಿಶ್ರಾಂತಿ ಪಡೆಯದೆ ನಿರಂತರ ದುಡಿಯುತ್ತಾರೆ. ಉದ್ಯೋಗ ಮಾಡುತ್ತಾರೆ. ಮೂರ್ಖರು ಮಾತ್ರ ಹಣವನ್ನು ಅನಗತ್ಯ ವಿಷಯಗಳಿಗೆ ಖರ್ಚು ಮಾಡಿ ನಷ್ಟಕ್ಕೊಳಗಾಗುವರು. ಬುದ್ಧಿವಂತರು ಅಗತ್ಯ ವಿಷಯಗಳಿಗೆ ಮಾತ್ರ ಹಣ ಖರ್ಚು ಮಾಡುತ್ತಾರೆ. ಅನಗತ್ಯ ಖರ್ಚು ವೆಚ್ಚ ಗಳಿಂದ ಸದಾ ದೂರ ಉಳಿಯುತ್ತಾರೆ.

ಸಂಪತ್ತನ್ನು ಇತರರಿಗೂ ಹಂಚಬೇಕು ಎನ್ನುವುದು ಧರ್ಮದ ಶಿಕ್ಷಣವಾಗಿದೆ. ದಾನಧರ್ಮಗಳನ್ನು ನಿಯಮವಾಗಿಸಿರುವುದು ಈ ಕಾರಣಕ್ಕಾಗಿದೆ. ಆದರೆ ಮನುಷ್ಯ

* ಇಮಾಮ್ ತಿರ್ಮಿದಿ: 2470 ಹದೀಸ್ ಆಗಿದೆ ಇದು. ಇದರ ವರದಿಯ ಪರಂಪರೆಯು ಸಹೀಹ್ ಆಗಿದೆಯೆಂದು ಮುಹ್ಯುದ್ದೀನ್ ದೀಬ್ ಮಸ್ತು, ಸಮೀರ್ ಅಹ್ಮದ್ ಅತ್ತಾರ್, ಯೂಸುಫ್ ಅಲಿ ಬುದ್ಯೆವಿ ಮುಂತಾದವರು ಸಾಕ್ಷಿ ನುಡಿಯುತ್ತಾರೆ.

ಪ್ರಕೃತಿಯು ಇದನ್ನು ಒಪ್ಪಿಕೊಳ್ಳಲು ಹಿಂದೇಟು ಹಾಕುತ್ತದೆ. ದಾನ ಮಾಡುವುದರಿಂದ ನನ್ನ ಹಣವು ಮುಗಿದು ಬಿಡಬಹುದು ಎಂಬ ಭಯವೇ ಇದಕ್ಕೆ ಕಾರಣವಾಗಿರುತ್ತದೆ ಬೆವರು ಸುರಿಸಿ, ಕಷ್ಟ ಸಹಿಸಿ ಉಂಟು ಮಾಡಿದ ಹಣವನ್ನು ಇತರರಿಗೂ ನೀಡಬೇಕು ಎಂದು ಹೇಳಿದರೆ ಯಾರಿಗೆ ತಾನೇ ಅದನ್ನು ಒಪ್ಪಿಕೊಳ್ಳಲು ಸಾಧ್ಯವಾಗುತ್ತದೆ? ವ್ಯಕ್ತಿಯನ್ನು ಸ್ವಾರ್ಥ ಮತ್ತು ಜಿಪುಣತೆಗೆ ಪ್ರೇರೇಪಿಸುವಂತಹ ಇಂತಹ ಚಿಂತನೆಗಳನ್ನು ಈ ಮೇಲಿನ ಪ್ರವಾದಿವಚನವು ತಿದ್ದುತ್ತದೆ. ದಾನ ನೀಡುವ ಮೂಲಕ ವ್ಯಕ್ತಿ ತನ್ನ ಹಣವನ್ನು ನಷ್ಟ ಪಡಿಸುವುದಲ್ಲ, ಎಂದೆಂದಿಗೂ ಮುಗಿಯದ ರೀತಿಯಲ್ಲಿ ಸಂರಕ್ಷಿಸಿ ಇಡುತ್ತಾನೆ.

ಹಣ ಉಪಯೋಗಿಸಿದರೆ ಮುಗಿದು ಬಿಡುತ್ತದೆ. ಹಣ ಮಾತ್ರವಲ್ಲ, ಲೌಕಿಕವಾದ ಎಲ್ಲ ವಸ್ತುಗಳ ಸ್ಥಿತಿಯೂ ಇದುವೇ ಆಗಿರುತ್ತದೆ. ಶಾಶ್ವತವಾಗಿ ಯಾವುದೂ ಮನುಷ್ಯನ ಜೊತೆ ಉಳಿದು ಬಿಡುವುದಿಲ್ಲ, ತಿಂದು, ಕುಡಿದು, ಅನುಭವಿಸಿ ಈ ಪೈಕಿ ಎಲ್ಲವೂ ಅವ ನಿಂದ ಅಗಲಿ ಬಿಡುತ್ತವೆ. ಆದರೆ ದಾನಧರ್ಮಗಳ ವಿಷಯ ಹಾಗಲ್ಲ. ಅದು ಹಣವನ್ನು ಕಡಿಮೆ ಮಾಡಲಿಕ್ಕೆ, ಕ್ಷಯಿಸಲಿಕ್ಕೆ ಬಿಡುವುದಿಲ್ಲ. ವ್ಯಕ್ತಿ ದಾನ ಮಾಡುವ ಮೂಲಕ ತನ್ನ ಹಣವನ್ನು ಅಲ್ಲಾಹನಿಗೆ ನೀಡುತ್ತಾನೆ. ಆ ಮೂಲಕ ಅದು ಇತರರು ಕಬಳಿಸಲು ಸಾಧ್ಯವಾಗದ ಒಂದು ಸುರಕ್ಷಿತ ಸ್ಥಳವನ್ನು ತಲುಪುತ್ತದೆ. ಮರಣದ ವೇಳೆ ಮನುಷ್ಯನು ಎಲ್ಲ ಲೌಕಿಕ ಸುಖ ಸೌಲಭ್ಯಗಳನ್ನು ಬಿಟ್ಟು ಅಗಲುವಾಗ, ದಾನಧರ್ಮಗಳು ಅವನ ಜೊತೆಗೇ ಇರುತ್ತವೆ. ಅದೆಂದೂ ಅವನನ್ನು ಬಿಟ್ಟು ಅಗಲುವುದಿಲ್ಲ, ಅಂತ್ಯದಿನದಂದು ಅಲ್ಲಾಹನು ಆ ದಾನಧರ್ಮಗಳೆಲ್ಲವನ್ನೂ ಅನೇಕ ಪಟ್ಟುಗಳಾಗಿಸಿ ಅವನಿಗೆ ಮರಳಿಸುವನು. ಪವಿತ್ರ ಕುರ್‌ಆನ್ ಹೇಳುತ್ತದೆ: 'ಅಲ್ಲಾಹನ ಮಾರ್ಗದಲ್ಲಿ ತಮ್ಮ ಸಂಪತ್ತನ್ನು ಖರ್ಚು ಮಾಡುವವರ ಉಪಮೆ, ಒಂದು ಕಾಳನ್ನು ಬಿತ್ತಿ ಅದರಿಂದ ಏಳು ತೆನೆಗಳು ಹೊರಟು, ಪ್ರತಿಯೊಂದು ತೆನೆಯಲ್ಲಿಯೂ ನೂರು ಕಾಳುಗಳಿರುವಂತಿದೆ. ಇದೇ ರೀತಿಯಲ್ಲಿ ಅಲ್ಲಾಹ್ ತಾನುದ್ದೇಶಿಸಿದವನ ಕರ್ಮಗಳಿಗೆ ವೃದ್ಧಿಯನ್ನು ದಯಪಾಲಿಸುತ್ತಾನೆ. ಅವನು ಅತ್ಯಂತ ಉದಾರಿಯೂ ಸರ್ವಜ್ಞನೂ ಆಗಿರುತ್ತಾನೆ.' **(ಅಲ್ ಬಕರ: 261)**

ಪ್ರವಾದಿವರ್ಯರು(ಸ) ಹೀಗೆ ಹೇಳಿರುವರು:

يَقُوْلُ الْعَبْدُ: مَالِى، مَالِى، وَإِنَّمَا لَهُ مِنْ مَالِهِ ثَلَاثٌ: مَا أَكَلَ فَأَفْنَى، أَوْ لَبِسَ فَأَبْلَى، أَوْ أَعْطَى فَاقْتَنَى، مَا سِوَى ذٰلِكَ فَهُوَ ذَاهِبٌ وَتَارِكُهُ لِلنَّاسِ

'ಮನುಷ್ಯನು ನನ್ನ ಸಂಪತ್ತು ನನ್ನ ಸಂಪತ್ತು ಎಂದು ಹೇಳುತ್ತಿರುವನು. ವಾಸ್ತವದಲ್ಲಿ ಅವನ ಸಂಪತ್ತಿನಲ್ಲಿ ಮೂರು ಮಾತ್ರ ಅವನದ್ದು. ಅವನು ತಿಂದುದು, ಅದು ಮುಗಿದು ಹೋಯಿತು. ಅವನು ಧರಿಸಿದ್ದು, ಅದು ಹಳತಾಗಿ ಹೋಯಿತು. ಅವನು ದಾನ ಮಾಡಿದ್ದು, ಅದು ಸಂಗ್ರಹವಾಯಿತು. ಬಾಕಿಯುಳಿದುದೆಲ್ಲವೂ ಇತರರಿಗೆ ಬಿಟ್ಟು ಅಗಲಿ ಹೋಗುತ್ತಾನೆ.'[1]

ಇಬ್ನು ಮಸ್‌ಊದ್(ರ) ವರದಿ ಮಾಡಿರುತ್ತಾರೆ:

قَالَ رَسُولُ اللهِ ﷺ: أَيُّكُمْ مَالُ وَارِثِهِ أَحَبُّ إِلَيْهِ مِنْ مَالِهِ؟ قَالُوا: يَا رَسُولَ اللهِ! مَا مِنَّا أَحَدٌ إِلَّا مَالُهُ أَحَبُّ إِلَيْهِ، قَالَ: فَإِنَّ مَالَهُ مَا قَدَّمَ وَمَالَ وَارِثِهِ مَا أَخَّرَ

ಪ್ರವಾದಿಯವರು(ಸ) ಪ್ರಶ್ನಿಸಿದರು, 'ನಿಮ್ಮ ಪೈಕಿ ಯಾರಾದರೂ ತನ್ನ ಸಂಪತ್ತಿಗಿಂತ ತಮ್ಮ ವಾರಿಸುದಾರರ ಸಂಪತ್ತನ್ನು ಇಷ್ಟಪಡುವರೇ? ಅನುಯಾಯಿಗಳು ಹೇಳಿದರು, 'ಅಲ್ಲಾಹನ ಸಂದೇಶವಾಹಕರೇ! ನಮ್ಮ ಪೈಕಿ ಯಾರೂ ತಮ್ಮ ಸ್ವಂತ ಸಂಪತ್ತಿಗಿಂತ ಇತರರ ಸಂಪತ್ತನ್ನು ಇಷ್ಟಪಡುವವರಿಲ್ಲ.' ಪ್ರವಾದಿ(ಸ) ಹೇಳಿದರು, 'ಹಾಗಿದ್ದರೆ ನೀವು ಈಗಾಗಲೇ ದಾನ ಮಾಡಿದ್ದು, ಖರ್ಚು ಮಾಡಿದ್ದು ನಿಮ್ಮ ಸಂಪತ್ತಾಗಿದೆ. ಉಳಿಸಿಕೊಂಡಿರುವುದು ನಿಮ್ಮ ವಾರೀಸುದಾರರದ್ದಾಗಿದೆ.'[2]

ಕುದ್ಸೀ ಹದೀಸ್ ಒಂದರಲ್ಲಿ ಪ್ರವಾದಿಯವರು(ಸ) ಹೀಗೆ ಹೇಳಿರುವರು:

يَابْنَ آدَمَ، افْرُغْ مِنْ كَنْزِكَ، عِنْدِي وَلَا حَرَقَ، وَلَا غَرَقَ، وَلَا سَرَقَ، أُوْفِيكَهُ أَحْوَجَ مَا تَكُونُ إِلَيْهِ

'ಆದಮನ ಮಗನೇ, ನಿನ್ನ ಸಂಪತ್ತನ್ನು ನೀನು ಖರ್ಚು ಮಾಡಬೇಕು. ನನ್ನ ಬಳಿ ಅದು ಬೆಂಕಿಯಿಂದ ಅಥವಾ ನೀರಿನಿಂದ ನಾಶ ಹೊಂದುವುದಿಲ್ಲ, ಯಾರಿಂದಲೂ ಅಪಹರಿಸಲ್ಪಡುವುದಿಲ್ಲ. ಅದಕ್ಕೆ ಪ್ರತಿಯಾಗಿ ಅಗತ್ಯವಿರುವುದನ್ನು ನಾನು ನಿನಗೆ ನೀಡುತ್ತೇನೆ.'[3]

ದಾನಶೀಲ ವ್ಯಕ್ತಿಗೆ ತನ್ನ ಬಳಿ ಇರುವ, ಉಳಿದಿರುವ ಸಂಪತ್ತಿನಲ್ಲಿ ಅಲ್ಲಾಹನ ಅನುಗ್ರಹ ಮತ್ತು ಕರುಣೆಯು ಸಿಗುತ್ತದೆ. ಆದುದರಿಂದ ಇಹಲೋಕದಲ್ಲಿಯೇ ಅದರಲ್ಲಿ ಸಮೃದ್ಧಿ ಮತ್ತು ಸುಭಿಕ್ಷೆಯುಂಟಾಗುವುದು. ದಾರಿದ್ರ್ಯ, ಸಂಕಷ್ಟಗಳು ಮತ್ತು ಮಾನಸಿಕ ಕ್ಷೋಭೆಯಿಂದ ಮುಕ್ತರಾಗುವರು. ಇರುವುದರಲ್ಲಿ ತೃಪ್ತಿ ಪಡುವ ಸಾಮರ್ಥ್ಯ, ಮನಸ್ಸಮಾಧಾನ, ಎಲ್ಲ ವಸ್ತುಗಳಿಂದಲೂ ದೇವನ ಅನುಗ್ರಹ ಇವೆಲ್ಲವೂ ಅವನಿಗೆ ದಾನಕ್ಕೆ ಪ್ರತಿಯಾಗಿ ಲಭಿಸುತ್ತದೆ. ಪ್ರವಾದಿ(ಸ) ಹೇಳಿರುವರು:

إِنَّ صَدَقَةَ الْمُسْلِمِ تَزِيْدُ فِي الْعُمْرِ، وَتَمْنَعُ مِيْتَةَ السُّوْءِ، وَيُذْهِبُ اللّٰهُ بِهَا الْكِبْرَ وَالْفَخْرَ

'ಮುಸ್ಲಿಮನ ದಾನವು ಆಯುಷ್ಯವನ್ನು ದೀರ್ಘಗೊಳಿಸುವುದು. ಅಪಘಾ ಮರಣಗಳಿಂದ ರಕ್ಷಿಸುವುದು. ಇದರ ಮೂಲಕ ಅಲ್ಲಾಹನು ಅವನಿಂದ ಅಹಂಕಾ ಮತ್ತು ದುರಭಿಮಾನವನ್ನು ಇಲ್ಲವಾಗಿಸುವನು.'[4]

ಅಬೂಹುರ್ರೈರಾ(ರ) ವರದಿ ಮಾಡಿರುವ ಪ್ರವಾದಿವಚನದಲ್ಲಿ ಹೀಗಿದೆ:

مَا مِنْ يَوْمٍ يُصْبِحُ الْعِبَادُ فِيْهِ إِلَّا مَلَكَانِ يَنْزِلَانِ، فَيَقُولُ أَحَدُهُمَا: اَللّٰهُمَّ اعْطِ مُنْفِقًا خَلَفًا،

وَيَقُوْلُ الآخَرُ: اَللّٰهُمَّ اعْطِ مُمْسِكًا تَلَفًا

'ಪ್ರತಿದಿನ ಸುಪ್ರಭಾತದ ವೇಳೆ ಆಕಾಶಲೋಕದಿಂದ ಇಬ್ಬರು ದೇವಚರರು ಕೆಳಗಿಳಿದು ಬರುವರು. ಓರ್ವ ದೇವಚರ ಹೀಗೆ ಪ್ರಾರ್ಥಿಸುವರು: ಅಲ್ಲಾಹನೇ, ಧರ್ಮನಿಷ್ಠ ವ್ಯಕ್ತಿಗೆ ನೀನು ಹೆಚ್ಚು ಪ್ರತಿಫಲವನ್ನು ನೀಡಬೇಕು. ಇನ್ನೊಬ್ಬ ದೇವಚರ ಹೀಗೆ ಪ್ರಾರ್ಥಿಸುವರು: ಅಲ್ಲಾಹನೇ ಖರ್ಚು ಮಾಡದೆ ಸಂಗ್ರಹಿಸಿಡುವವನಿಗೆ ನೀನು ನಷ್ಟವನ್ನುಂಟು ಮಾಡಬೇಕು.'[5]

ಪ್ರವಾದಿಯವರ(ಸ) ಕುಟುಂಬವು ಸ್ವಾದಿಷ್ಟ ಭೂರಿ ಭೋಜನ ತಯಾರಿಸುವ ಸಂಪತ್ತು ಇರುವವರಾಗಿರಲಿಲ್ಲ. ಮದೀನದ ಜನ ಸಾಮಾನ್ಯರಂತೆ ಬಡವರಾಗಿದ್ದರು. ಹಾಗಿದ್ದರೂ ದಾನಶೀಲತೆಯ ವಿಷಯದಲ್ಲಿ ಪ್ರವಾದಿ(ಸ) ಮತ್ತು ಅವರ ಕುಟುಂಬವು ಎಲ್ಲರಿಗಿಂತ ಮುಂದಿತ್ತು. ಯಾಚಿಸಿ ಬರುವವರಿಗೆಲ್ಲ ಪ್ರವಾದಿಯವರು(ಸ) ನೀಡು ತ್ತಿದ್ದರು. ಯಾರನ್ನೂ ಬರಿಗೈಯಲ್ಲಿ ಹಿಂದಿರುಗಿಸುತ್ತಿರಲಿಲ್ಲ. ಪ್ರವಾದಿಯವರ(ಸ) ಕುಟುಂಬವು ದಾನಶೀಲತೆಯನ್ನು ಒಂದು ಅಭ್ಯಾಸವಾಗಿ ಬೆಳೆಸಿಕೊಂಡು ಬಂದಿತ್ತು.

ಇಮಾಮ್ ಮಾಲಿಕ್(ರ) ವರದಿ ಮಾಡಿರುವ ಘಟನೆ ಹೀಗಿದೆ- ಒಮ್ಮೆ ಓರ್ವ ಅಸಹಾಯಕ ಮಹಿಳೆ ಸತ್ಯವಿಶ್ವಾಸಿಗಳ ಮಾತೆ ಆಯಿಶಾ(ರ)ರ ಮನೆಗೆ ಬಂದು ಆಹಾರವನ್ನು ಬೇಡಿದರು. ಆಯಿಶಾ(ರ) ಅಂದು ಉಪವಾಸದಿಂದಿದ್ದರು. ಒಂದು ರೊಟ್ಟಿಯಲ್ಲದೆ ಮನೆಯಲ್ಲಿ ಬೇರೆ ಏನೂ ಇರಲಿಲ್ಲ. ಅದನ್ನು ಆ ಯಾಚಿಸಿ ಬಂದ ಮಹಿಳೆಗೆ ನೀಡುವಂತೆ ಸೇವಕಿಗೆ ಆದೇಶಿಸಿದರು. (لَيْسَ لَكِ مَا تُفْطِرِيْنَ عَلَيْهِ) 'ತಮಗೆ ಉಪವಾಸವಿದೆಯಲ್ಲವೇ? ಇದನ್ನು ಹೊರತು ಪಡಿಸಿ ಇಲ್ಲಿ ಬೇರೆ ಏನೂ ಇಲ್ಲ' ಎಂದು ಸೇವಕಿ ನೆನಪಿಸಿದಾಗ ಆಯಿಶಾ(ರ) ಹೇಳಿದರು: أَعْطِيهَا إِيَّاهُ 'ಬೇಡ. ಅದನ್ನು ಆ ಮಹಿಳೆಗೆ ಕೊಟ್ಟು ಬಿಡು.'[6]

ಒಮ್ಮೆ ಮುಆವಿಯಾ(ರ) 80,000 ದಿರ್ಹಮ್ ಆಯಿಶಾ(ರ)ರಿಗೆ ಕೊಟ್ಟು ಕಳುಹಿಸಿದರು. ಅಂದು ಕೂಡ ಅವರು ಉಪವಾಸದಿಂದಿದ್ದರು. ತೇಪೆ ಹಾಕಿದ ಬಟ್ಟೆಯನ್ನು ಧರಿಸಿದ್ದರು. ಹಣ ಸಿಕ್ಕಿದ ಕೂಡಲೇ ಏನನ್ನೂ ಬಾಕಿ ಉಳಿಸದೆ ಎಲ್ಲವನ್ನೂ ದರಿದ್ರರು ಮತ್ತು ನಿರ್ಗತಿಕರ ಮಧ್ಯೆ ಹಂಚಿಬಿಟ್ಟರು. ಸಾಯಂಕಾಲವಾದಾಗ ಸೇವಕಿ ಹೇಳಿದಳು:

أَمَّا اسْتَطَعْتِ فِيمَا أَنفَقْتِ أَنْ تَشْتَرِي بِدِرْهَمٍ لَحْمًا تُفْطِرِينَ عَلَيْهِ؟

'ಒಂದು ದಿರ್ಹಮ್‌ನಿಂದ ಲಾದರೂ ಮಾಂಸವನ್ನು ಖರೀದಿಸಿದ್ದರೆ, ನಮಗೆ ಅದರಿಂದ ಉಪವಾಸವನ್ನು ತೊರೆಯ ಬಹುದಾಗಿತ್ತು.' ಆಗ ಆಯಿಶಾ(ರ) ಹೇಳಿದರು: لَوْ كُنْتُ أَذْكَرْتِنِي لَفَعَلْتُ! 'ನೀನೇಕೆ ಅದನ್ನು ಮೊದಲು ನೆನಪಿಸಲಿಲ್ಲ. ಹಾಗೆಯೇ ಮಾಡಬಹುದಿತ್ತು.'[7]

ಪ್ರವಾದಿಯವರ(ಸ) ಇತರ ಪತ್ನಿಯರೂ ಆಯಿಶಾ(ರ)ರಂತೆಯೇ ಇದ್ದರು. ಸತ್ಯವಿಶ್ವಾಸಿಗಳ ಮಾತೆ ಝೈನಬ್ ಬಿಂತಿ ಜಹಶ್(ರ) ಬಡವರ ಮಾತೆ (أُمُّ الْمَسَاكِين) ಎಂದು ಕರೆಯಲ್ಪಡುತ್ತಿದ್ದರು. ಒಮ್ಮೆ ಉಮರ್(ರ)ರವರು ಅವರಿಗೆ ಉಡುಗೊರೆ ಕಳುಹಿಸಿಕೊಟ್ಟಿದ್ದರು. ಹಣದ ಕಟ್ಟಿನೊಂದಿಗೆ ಅಲ್ಲಿಗೆ ತಲುಪಿದಾಗ ಅವರು ಹೇಳಿದರು:

غَفَرَ اللَّهُ لِعُمَرَ! غَيْرِي مِنْ إِخْوَانِي كَانَ أَقْوَى عَلَى قِسْمِ هٰذَا مِنِّي

'ಅಲ್ಲಾಹನು ಉಮರ್(ರ)ರನ್ನು ಕ್ಷಮಿಸಲಿ. ಈ ಪಾಲಿಗೆ ನನಗಿಂತಲೂ ಅರ್ಹರಾದ ವ್ಯಕ್ತಿಗಳು ನನ್ನ ಬಳಿ ಇದ್ದಾರೆ.' ಆಗ ಆಗಂತುಕ ಹೇಳಿದನು: هٰذَا كُلُّهُ لَكِ 'ಇವೆಲ್ಲವೂ ನಿಮಗೆ ಮಾತ್ರ ಇರುವುದಾಗಿದೆ.' ಆಗ ಅವರು ಒಂದು ಬಟ್ಟೆಯಿಂದ ಅದರ ಮೇಲಿದ್ದ ದೃಷ್ಟಿಗೆ ಮರೆ ಮಾಡಿಕೊಂಡು ಹೀಗೆ ಹೇಳಿದರು: سُبْحَانَ اللَّهِ! ضَعُوهُ! وَاطْرَحُوا عَلَيْهِ ثَوْبًا! 'ಅಲ್ಲಾಹನು ಪರಮ ಪಾವನನು. ಅದನ್ನು ಅಲ್ಲಿ ಸುರಿದು ಒಂದು ಬಟ್ಟೆಯಿಂದ ಮುಚ್ಚಿಬಿಡು.' ಬರ್ರ ಬಿಂತರಿ ರಾಫಿಅ್(ರ) ಹೇಳುತ್ತಾರೆ- ಆ ಬಳಿಕ ಅವರು ನನ್ನೊಂದಿಗೆ ಹೀಗೆ ಹೇಳಿದರು:

أُدْخُلِي يَدَكِ فَاقْبِضِي مِنْهُ قَبْضَةً، فَاذْهَبِي بِهَا إِلَى بَنِي فُلَانٍ وَبَنِي فُلَانٍ!

'ನೀನು ಅದರೊಳಗೆ ಕೈ ಹಾಕಿ ಒಂದೊಂದೇ ಮುಷ್ಟಿ ಹೊರ ತೆಗೆ. ಇಂತಿಂತಹ ವ್ಯಕ್ತಿಗಳಿಗೆ ಅದರ ಪಾಲನ್ನು ತಲುಪಿಸಿಬಿಡು.' ಬಳಿಕ ಆ ಬಟ್ಟೆಯಡಿಯಲ್ಲಿ ಸ್ವಲ್ಪ ಮಾತ್ರ ಉಳಿದಿದೆ ಎಂದು ಅರಿತು ನಾನು ಹೇಳಿದೆ:

غَفَرَ اللَّهُ لَكِ يَا أُمَّ الْمُؤْمِنِينَ! وَاللَّهِ لَقَدْ كَانَ لَنَا فِي هٰذَا حَقٌّ!

‘ಸತ್ಯವಿಶವಾಸಿಗಳ ಮಾತೆ, ಅಲ್ಲಾಹನು ನಿಮ್ಮನ್ನು ಕ್ಷಮಿಸಲಿ.. ಅಲ್ಲಾಹನಾಣೆ, ಇನ್ನು ಉಳಿದಿರುವುದು ನಮ್ಮ ಹಕ್ಕಾಗಿದೆ.’ ಅವರು ಹೇಳಿದರು: فَلَكُمْ مَا تَحْتَ الثَّوْبِ ‘ಹಾಗಿದ್ದರೆ, ಆ ಬಟ್ಟೆಯಲ್ಲಿರುವುದನ್ನು ನೀನು ತೆಗೆದಿಡು.’ ಬರ್ರ ಹೇಳುತ್ತಾರೆ: ಬಟ್ಟೆ ತೆಗೆದಾಗ ಅದರಲ್ಲಿ ಕೇವಲ 85 ದಿರ್ಹಮ್‌ಗಳು ಮಾತ್ರ ಬಾಕಿ ಉಳಿದಿತ್ತು.[8]

---

1. ಮುಸ್ಲಿಮ್: 2959.
2. ಬುಖಾರಿ: 6442, ನಸಾಈ: 6/237.
3. ಬೈಹಕಿ – ಶುಅಬುಲ್ ಈಮಾನ್: 3342.
4. ತಿರ್ಮಿದಿ: 664, ತಬ್ರಾನಿ – ಕಬೀರ್, ಹೈತಮಿ ಮಜ್ಮಉಸ್ಸವಾಇದ್: 3/110.
5. ಬುಖಾರಿ: 3/241, ಮುಸ್ಲಿಮ್: 1010, ಅಹ್ಮದ್: 2/305–306.
6. ಮಾಲಿಕ್, ಮುಅತ್ತಾ: 2/997.
7. ಅಲ್ ಇಸ್ವಾಬ: 4/339, ಹಾಕಿಮ್ – ಮುಸ್ತದ್ರಕ್.
8. ತಬಕಾತ್ ಇಬ್ನು ಸಅದ್: 3/216.

65. ದಾನವನ್ನು ಯಾವಾಗ ನೀಡಬೇಕು?

عَنْ أَبِي هُرَيْرَةَ رَضِيَ اللّٰهُ عَنْهُ قَالَ: جَاءَ رَجُلٌ إِلَى رَسُوْلِ اللّٰهِ ﷺ فَقَالَ: يَا رَسُوْلَ اللّٰهِ، أَيُّ الصَّدَقَةِ أَعْظَمُ أَجْرًا؟ قَالَ: أَمَا وَأَبِيْكَ لَتُنَبَّأَنَّهُ، أَنْ تَصَدَّقَ وَأَنْتَ صَحِيْحٌ شَحِيْحٌ، تَخْشَى الْفَقْرَ، وَتَأْمُلُ الْغِنَى، وَلَا تُمْهِلْ حَتَّى إِذَا بَلَغَتِ الْحُلْقُومَ قُلْتَ: لِفُلَانٍ كَذَا، وَلِفُلَانٍ كَذَا، وَقَدْ كَانَ لِفُلَانٍ!

ಅಬೂಹುರೈರಾ(ರ)ರಿಂದ ವರದಿ. ಒಬ್ಬ ವ್ಯಕ್ತಿ ಪ್ರವಾದಿಯವರ(ಸ) ಬಳಿ ಬಂದು ಹೀಗೆ ಪ್ರಶ್ನಿಸಿದ: ಅಲ್ಲಾಹನ ಸಂದೇಶವಾಹಕರೇ! ಯಾವ ದಾನಕ್ಕೆ ಅತ್ಯಧಿಕ ಪ್ರತಿಫಲ ಸಿಗುತ್ತದೆ? ಪ್ರವಾದಿ(ಸ) ಹೇಳಿದರು: ನಿನ್ನ ತಂದೆ ಯಾಣೆ. ನಾನು ಹೇಳುವೆ. ನೀನು ಆರೋಗ್ಯವಂತನಾಗಿದ್ದು, ಜಿಪುಣತೆ ತೋರುವಾಗ ಮತ್ತು ದಾರಿದ್ರ್ಯಕ್ಕೆ ಭಯಪಟ್ಟು ಐಶ್ವರ್ಯವನ್ನು ಆಶಿಸುತ್ತಿರುವ ಸಂದರ್ಭದಲ್ಲಿ ನೀನು ಮಾಡುವ ದಾನವು ಸರ್ವಶ್ರೇಷ್ಠ ದಾನವಾಗಿರುವುದು. ದಾನ ನೀಡಲು ನಿನ್ನ ಆತ್ಮವು ಗಂಟಲಿಗೆ ಬಂದು ತಲುಪುವ ವರೆಗೆ ಕಾದು ನಿಲ್ಲಬಾರದು. ಆಗ ನೀನು ಹೀಗೆ ಹೇಳುವೆ- ಇಂತಿಂತಹವನಿಗೆ ಅಷ್ಟು ನೀಡಿ. ಆದರೆ ವಾಸ್ತವದಲ್ಲಿ ಆಗ ನಿನ್ನ ಸಂಪತ್ತು ಇತರರ ಪಾಲಾಗಿ ಬಿಟ್ಟಿರುವುದು.*

* ಇಮಾಮ್ ಬುಖಾರಿ – ಅದಬುಲ್ ಮುಫ್ರದ್: 778, ಮುಸ್ಲಿಮ್: 1032, ಅಹ್ಮದ್: 2/231, ನಸಾಈ: 6/237, ಇಬ್ನುಮಾಜ: 2706, ಅಬೂ ಯಅ್‌ಲಾ: 6092 ಮುಂತಾದವರು ಈ ಪ್ರವಾದಿವಚನವನ್ನು ಉಲ್ಲೇಖಿಸಿರುವರು. ಇದರ ವರದಿಯ ಪರಂಪರೆ ಬುಖಾರಿ ಮತ್ತು ಮುಸ್ಲಿಮ್‌ನ ಹದೀಸ್ ಸ್ವೀಕಾರಾರ್ಹಗೊಳ್ಳುವ ಮಾನದಂಡಗಳ ಪ್ರಕಾರ ಸಹೀಹ್ ಆಗಿದೆಯೆಂದು ಪ್ರಮುಖ ಹದೀಸ್ ಪಂಡಿತರಾದ ಆದಿಲ್ ಮುರ್ಶಿದ್, ಶುಐಬ್ ಅಲ್ ಅರ್ನವೂತ್ ಮುಂತಾದವರು ಸಾಕ್ಷಿ ನುಡಿದಿದ್ದಾರೆ.

ಯಾವ ದಾನವು ಹೆಚ್ಚು ಶ್ರೇಷ್ಠವೆಂಬುದನ್ನು ಈ ಪ್ರವಾದಿವಚನವು ಸ್ಪಷ್ಟಪಡಿಸುತ್ತದೆ. ಸಂಪತ್ತು ಸುಖ-ಸೌಲಭ್ಯಗಳು ಧಾರಾಳವಿದ್ದು, ಅದನ್ನಾವುದನ್ನೂ ದೇವ ಮಾರ್ಗದಲ್ಲಿ ಖರ್ಚು ಮಾಡದೆ ಇರುವುದು. ಬಳಿಕ ಮರಣವು ಗಂಟಲಿಗೆ ಬಂದು ತಲುಪಿದಾಗ, ನಾನಿದೋ ನನ್ನ ಸಂಪತ್ತನ್ನೆಲ್ಲ ದಾನ ನೀಡಿರುವೆನೆಂದು ವಸಿಯ್ಯತ್ ಮಾಡುವ ಕೆಲವರಿದ್ದಾರೆ. ಜೀವಂತವಿರುವಾಗ ನಿರ್ಗತಿಕರನ್ನು ಅನಾಥರನ್ನು ನೋಡಿಲ್ಲ ಎಂಬಂತೆ ನಟಿಸು ವವರಿರುವರು. ಸ್ವಂತ ಸುಖ-ಸೌಲಭ್ಯಗಳಿಗೆ ಅಮಿತ ಪ್ರಾಧಾನ್ಯತೆ ನೀಡುವವರು ಮತ್ತು ಇತರರನ್ನು ಕಡೆಗಣಿಸುವವರು. ನಂತರ ಇನ್ನು ಜೀವನವಿಲ್ಲವೆಂದು ಸ್ಪಷ್ಟವಾದಾಗ, ಅವಸಾನ ಸಂದರ್ಭದಲ್ಲಿ ಸಂಪತ್ತನ್ನೆಲ್ಲ ಇತರರಿಗೆ ಬರೆದಿಡಲು ಆಸಕ್ತಿ ತೋರಿಸುತ್ತಾರೆ. ದೇವನ ಸಂಪ್ರೀತಿ ಗಳಿಸಲು ಮರಣದ ಸಂದರ್ಭ ದಲ್ಲಿ ಮಾಡುವ ಇಂತಹ ಕೆಲವು ಸತ್ಕರ್ಮಗಳು ಸಾಕಾಗಬಹುದೆಂದು ಅವರು ಭಾವಿಸಿ ಕೊಂಡಿರುತ್ತಾರೆ. ಆದರೆ ದಾನವು ಹೆಚ್ಚು ಪ್ರತಿಫಲಾರ್ಹವಾಗಬೇಕಿದ್ದರೆ, ಅದು ಅವನು ಆರೋಗ್ಯವಂತನಾಗಿದ್ದಾಗ ನೀಡಿದು ದಾಗಿರಬೇಕು. ಪ್ರಾಣವು ಗಂಟಲಿಗೆ ಬಂದು ತಲುಪುವಂತಹ ಅವಸಾನ ನಿಮಿಷಗಳಲ್ಲಿ ಮಾಡುವ ಕರ್ಮಗಳು ದೇವನ ಸನ್ನಿಧಿಯಲ್ಲಿ ಸ್ವೀಕರಿಸಲ್ಪಡಲಾರದು ಎಂಬುದನ್ನು ಪ್ರವಾದಿ(ಸ) ನೆನಪಿಸಿಕೊಟ್ಟಿರುವರು.

ತನಗೆ ಅಗತ್ಯವಿರುವಾಗಲೇ, ಇತರರಿಗಾಗಿ ತೆಗೆದಿರಿಸುವವನು ಮೂಮಿನ್. ತಮ್ಮ ಅಗತ್ಯಗಳನ್ನು ತಡೆದಿರಿಸಿಕೊಂಡು ಸಹಜೀವಿಗಳ ಅಗತ್ಯಗಳಿಗೆ ಸ್ಪಂದಿಸುವವರು. ಸ್ವಯಂ ಹಸಿವಿನಿಂದಿದ್ದರೂ ಇತರರ ಹಸಿವನ್ನು ನೀಗಿಸಲು ಕೆಲಸ ಮಾಡುತ್ತಾರೆ. ಪವಿತ್ರ ಕುರ್‌ಆನ್ ಸತ್ಯವಿಶ್ವಾಸಿಗಳನ್ನು ಯಾವ ರೀತಿ ಪರಿಚಯಿಸಿದೆ ಎಂಬುದನ್ನು ನೋಡಿ: 'ಅಲ್ಲಾಹನ ಮೇಲಿನ ಪ್ರೇಮದಿಂದ ದರಿದ್ರರಿಗೂ ಅನಾಥರಿಗೂ ಸೆರೆಯಾಳುಗಳಿಗೂ ಊಟ ಕೊಡುತ್ತಾರೆ (ಮತ್ತು ಅವರೊಡನೆ ಹೇಳುತ್ತಾರೆ) ನಾವು ಕೇವಲ ಅಲ್ಲಾಹನಿಗಾಗಿ ನಿಮಗೆ ಉಣಿಸುತ್ತಿದ್ದೇವೆ. ನಾವು ನಿಮ್ಮಿಂದ ಯಾವುದೇ ಪ್ರತಿಫಲವನ್ನಾಗಲಿ, ಕೃತಜ್ಞತೆಯನ್ನಾಗಲಿ ಬಯಸುವುದಿಲ್ಲ. ನಮಗಂತು, ನಮ್ಮ ಪ್ರಭುವಿನಿಂದ ಆ ತೀವ್ರ ಕಾಠಿಣ್ಯದ ಅತ್ಯಂತ ಸುದೀರ್ಘ ದಿನದ ಭಯವಿದೆ. (ಅದ್ದಹ್ರ್: 8-10)

'ಸ್ವತಃ ತಮಗೆ ಅಗತ್ಯವಿದ್ದರೂ ಇತರರಿಗೆ ತಮ್ಮ ಮೇಲೆ ಪ್ರಾಶಸ್ತ್ಯ ನೀಡುತ್ತಾರೆ. ವಾಸ್ತವದಲ್ಲಿ ಯಾರು ತಮ್ಮ ಮನಸ್ಸಿನ ಸಂಕುಚಿತತೆಯಿಂದ ರಕ್ಷಿಸಲ್ಪಟ್ಟರೋ ಅವರೇ ವಿಜಯಿಗಳು.' (ಅಲ್ ಹಶ್ರ್: 9)

ತಮ್ಮ ಅಗತ್ಯಗಳೆಲ್ಲ ಮುಗಿದ ಮೇಲೆ ಇತರರಿಗೆ ಸಹಾಯ ಮಾಡುವೆ ಎಂದು

ಭಾವಿಸುವುದು ಮೂರ್ಖತನವಾಗಿದೆ. ಮನುಷ್ಯನ ಅವಶ್ಯಕತೆಗಳು ಎಂದಿಗೂ ಮುಗಿಯುವುದಿಲ್ಲ. ಮನಃಸಮಾಧಾನದ ಅನುಗ್ರಹ ಲಭಿಸದ ವ್ಯಕ್ತಿಗೆ ಎಷ್ಟು ಸಿಕ್ಕಿದರೂ ಸಾಲುವುದಿಲ್ಲ. (لَنْ يَمْلَأَ فَاهُ إِلَّا التُّرَابُ) 'ಮಣ್ಣಲ್ಲದೆ ಮನುಷ್ಯನ ಹೊಟ್ಟೆಯನ್ನು ಇನ್ನಾವುದೂ ತುಂಬಿಸಲಾರದು'[1] ಎಂದು ಪ್ರವಾದಿ(ಸ) ಹೇಳಿರುವರು. ಆದುದರಿಂದ ದಾನ ನೀಡಲು ಸತ್ಯವಿಶ್ವಾಸಿಗಳಿಗೆ ಸ್ವಂತ ಸಮಸ್ಯೆಗಳು ತಡೆಯಾಗಬಾರದು. 'ಅವರು ಸ್ಥಿತಿವಂತರಾಗಿರುವಾಗಲೂ ದುಃಸ್ಥಿತಿಯಲ್ಲಿರುವಾಗಲೂ ತಮ್ಮ ಸಂಪತ್ತನ್ನು ಖರ್ಚು ಮಾಡುತ್ತಾರೆ' (ಆಲಿ ಇಮ್ರಾನ್: **134**) ಎಂದು ಸತ್ಯವಿಶ್ವಾಸಿಗಳ ಬಗ್ಗೆ ಕುರ್‌ಆನ್ ವಿಶೇಷವಾಗಿ ಪ್ರಸ್ತಾಪಿಸಿದೆ.

ದಾರಿದ್ರ್ಯಕ್ಕೆ ಭಯಪಟ್ಟು ದಾನಧರ್ಮಗಳಿಂದ ದೂರ ಉಳಿಯುವವರನ್ನು ಅಲ್ಲಾಹನು ಈ ರೀತಿ ವಿಮರ್ಶಿಸಿರುವನು, 'ಶೈತಾನನು ನಿಮ್ಮನ್ನು ದಾರಿದ್ರ್ಯದಿಂದ ಭಯಭೀತಗೊಳಿಸುತ್ತಾನೆ ಮತ್ತು ಅಶ್ಲೀಲ ಕಾರ್ಯಗಳನ್ನೆಸಗುವ ಪ್ರಚೋದನೆಯನ್ನು ನೀಡುತ್ತಾನೆ. ಆದರೆ, ಅಲ್ಲಾಹನು ನಿಮಗೆ ತನ್ನ ಕ್ಷಮೆ ಹಾಗೂ ಅನುಗ್ರಹದ ವಚನವನ್ನೀಯುತ್ತಾನೆ. ಅಲ್ಲಾಹನು ಮಹಾ ವಿಶಾಲನೂ ಸರ್ವಜ್ಞನೂ ಆಗಿರುತ್ತಾನೆ.'

(ಅಲ್ ಬಕರ: 268)

ಪ್ರವಾದಿವರ್ಯರು(ಸ) ಒಂದು ಸಂದರ್ಭದಲ್ಲಿ ಹೀಗೆ ಹೇಳಿರುವರು:

لَا يُخْرِجُ رَجُلٌ شَيْئًا مِنَ الصَّدَقَةِ حَتَّى يَفُكَّ عَنْهَا لَحْيَيْ سَبْعِيْنَ شَيْطَانًا كُلُّهُمْ يَنْهَى عَنْهَا

'ಒಬ್ಬ ವ್ಯಕ್ತಿ ಏನನ್ನಾದರೂ ದಾನ ನೀಡಲು ಹೊರಟಾಗ ಎಪ್ಪತ್ತು ಪಿಶಾಚಿಗಳು ಅವನನ್ನು ಸುತ್ತುವರಿದು ಅದರಿಂದ ತಡೆಯಲು ಪ್ರಯತ್ನಿಸುತ್ತಿರುವುದು.'[2]

ಪ್ರವಾದಿಯವರ(ಸ) ಅನುಯಾಯಿಗಳು ಆರಂಭದ ಹದೀಸ್‌ನ ಸಾರಾಂಶವನ್ನು ಜೀವನದಲ್ಲಿ ಅಳವಡಿಸಿಕೊಂಡವರಾಗಿದ್ದರು. ಇಮಾಮ್ ತಬ್ರೀ(ರ) ಉಲ್ಲೇಖಿಸಿರುವ ಒಂದು ಘಟನೆ ಹೀಗಿದೆ: ಒಮ್ಮೆ ಉಮರ್ ಬಿನ್ ಖತ್ತಾಬ್(ರ) ನಾಲ್ಕು ನೂರು ಚಿನ್ನದ ನಾಣ್ಯಗಳನ್ನು ಒಂದು ಚೀಲದಲ್ಲಿ ಹಾಕಿ ತಮ್ಮ ಸೇವಕನೊಂದಿಗೆ ಅಬೂ ಉಬೈದ ಜರ್ರಾಹ್(ರ)ರಿಗೆ ಕಳುಹಿಸಿಕೊಟ್ಟು, ಅವರು ಈ ಹಣದಿಂದ ಏನು ಮಾಡುತ್ತಾರೆ ಎಂಬುದನ್ನು ನೋಡಲು ಆದೇಶಿಸಿದರು. ಸೇವಕ ಹೋಗಿ ಅಬೂ ಉಬೈದ(ರ)ರೊಡನೆ ಹೀಗೆ ಹೇಳಿದನು:

يَقُوْلُ لَكَ أَمِيْرُ الْمُؤْمِنِيْنَ: اِجْعَلْ هٰذِهِ فِي بَعْضِ حَاجَتِكَ

'ಈ ಹಣವನ್ನು ನಿಮ್ಮ ಅಗತ್ಯಕ್ಕೆ ಉಪಯೋಗಿಸಲು ಅಮೀರುಲ್ ಮೂಮಿನೀನ್ ಹೇಳಿ ಕಳುಹಿಸಿರುವರು.'

ಅಬೂ ಉಬೈದ(ರ) ಹೇಳಿದರು: وَصَلَهُ اللهُ وَرَحِمَهُ 'ಅಲ್ಲಾಹನು ಅವರನ್ನು ಅನುಗ್ರಹಿಸಲಿ.' ಬಳಿಕ ತನ್ನ ಸೇವಕಿಯನ್ನು ಕರೆದು ಹೇಳಿದರು:

اِذْهَبِي بِهٰذِهِ السَّبْعَةِ إِلَى فُلَانٍ، وَبِهٰذِهِ الْخَمْسَةِ إِلَى فُلَانٍ، وَبِهٰذِهِ الْخَمْسَةِ إِلَى فُلَانٍ

'ಈ ಏಳು ದಿನಾರ್ ಇಂತಿಂತಹ ವ್ಯಕ್ತಿಗೆ ತಲುಪಿಸು. ಈ ಐದು ದಿನಾರ್ ಇಂತಿಂತಹವರಿಗೆ. ಈ ಐದು ದಿನಾರ್ ಇಂತಿಂತಹವರಿಗೆ.'

ಹೀಗೆ ಆ ಚೀಲದಲ್ಲಿರುವ ಎಲ್ಲ ನಾಣ್ಯಗಳು ಮುಗಿದು ಹೋಗುವ ವರೆಗೆ ಬೇರೆ ಬೇರೆಯವರಿಗೆ ಪಾಲು ಮಾಡಿದರು. ಸೇವಕ ಮರಳಿ ಬಂದು ಉಮರ್(ರ)ರಿಗೆ ವಿಷಯವನ್ನು ತಿಳಿಸಿದನು.

ಉಮರ್(ರ)ರವರು ಅಬೂ ಉಬೈದ(ರ)ರಿಗೆ ನೀಡಿದಂತೆ ಮುಆದ್ ಬಿನ್ ಜಬಲ್(ರ)ರಿಗೂ ನಾಲ್ಕು ನೂರು ಚಿನ್ನದ ನಾಣ್ಯಗಳನ್ನು ಸೇವಕನ ಕೈಯಲ್ಲಿ ಕೊಟ್ಟು ಕಳುಹಿಸಿದರು. ಅದನ್ನು ಅವರು ಹೇಗೆ ಖರ್ಚು ಮಾಡುತ್ತಾರೆಂದು ನೋಡಬೇಕೆಂದು ಸೇವಕನಿಗೆ ಆದೇಶಿಸಿದರು. ಸೇವಕನು ಮುಆದ್ ಬಿನ್ ಜಬಲ್(ರ)ರ ಬಳಿಗೆ ಹೋಗಿ ಅಬೂ ಉಬೈದ(ರ)ರೊಂದಿಗೆ ಹೇಳಿದಂತೆಯೇ ಹೇಳಿದ. ಆಗ ಮುಆದ್(ರ) ಹೇಳಿದರು: رَحِمَهُ اللهُ وَصَلَهُ ಅಲ್ಲಾಹ್ ಉಮರ್(ರ)ರನ್ನು ಅನುಗ್ರಹಿಸಲಿ. ಬಳಿಕ ತನ್ನ ಸೇವಕಿಯನ್ನು ಕರೆದು ಅದನ್ನು ಎಲ್ಲರಿಗೂ ದಾನ ಮಾಡಿ ಬಿಡಲು ಆದೇಶಿಸಿದರು. ಮುಆದ್(ರ)ರ ಪತ್ನಿ ಬಾಗಿಲ ಬಳಿ ಬಂದು ಹೇಳಿದರು: نَحْنُ وَاللهِ مَسَاكِينُ 'ಅಲ್ಲಾಹನಾಣೆ! ನಾವೂ ನಿರ್ಗತಿಕರೇ.' ಆದರೆ ಎರಡು ದಿರ್ಹಮ್ ಮಾತ್ರ ಬಾಕಿಯುಳಿದಿತ್ತು. ಅವರು ಅದನ್ನು ಆಕೆಯೆಡೆಗೆ ಎಸೆದರು. ಸೇವಕನು ಮರಳಿ ಬಂದು ಸಂಭವಿಸಿದುದನ್ನೆಲ್ಲ ಉಮರ್(ರ)ರಿಗೆ ವಿವರಿಸಿದನು. ಸತ್ಯನಿಷ್ಠರಾದ ಉಮರ್(ರ) ಹೇಳಿದರು: إِنَّهُمْ إِخْوَةٌ، بَعْضُهُمْ مِنْ بَعْضٍ 'ಅವರೆಲ್ಲರೂ ಸಹೋದರರು. ಪ್ರತಿಯೊಬ್ಬರೂ ಇನ್ನೊಬ್ಬರ ಅಂಶವಾಗಿದ್ದಾರೆ.'[3]

ಹದೀಸ್‌ನ ಆರಂಭದಲ್ಲಿ وَأَبِيكَ (ನಿಮ್ಮ ತಂದೆಯಾಣೆ) ಎಂಬ ಮಾತಿದೆ. ಅಲ್ಲಾಹನ ಹೊರತು ಇತರರ ಆಣೆ ಹಾಕುವುದು ನಿಷಿದ್ಧವಾಗಿದೆ. ಹಾಗೆ ಮಾಡುವುದು ಇಸ್ಲಾಮ್ ನಿಷೇಧಿಸಿರುವ ಕುಫ್ರ್ ಮತ್ತು ಶಿರ್ಕ್ ಆಗಿದೆ. ವಿದ್ವಾಂಸರ ಮಧ್ಯೆ ಈ

ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದರೆ ಅಲ್ಲಾಹನಂತೆ ಮಹಾನತೆಯುಳ್ಳವನು ಎಂಬ ಉದ್ದೇಶವಿಲ್ಲದೆ, ಕೇವಲ ಮಾತಿಗೆ ಒತ್ತು ಕೊಡಲು (ثَكِلَتْكَ أُمُّكَ) ಇಂತಹ ಪದಗಳನ್ನು ಪ್ರಯೋಗಿಸಿದರೆ, ಅದು ನಿಷಿದ್ಧ ಅಥವಾ ತಪ್ಪೆನಿಸುವುದಿಲ್ಲ ಎಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ. ಆರಂಭದ ಪ್ರವಾದಿವಚನ ಇದಕ್ಕೆ ಸಾಕ್ಷಿಯಾಗಿದೆ. ಇಂತಹ ಪ್ರಯೋಗಗಳನ್ನು ಇತರ ಹದೀಸ್‌ಗಳಲ್ಲೂ ಕಾಣಬಹುದಾಗಿದೆ. ಒಬ್ಬ ವ್ಯಕ್ತಿ ಪ್ರವಾದಿಯವರ(ಸ) ಬಳಿ ಬಂದು ಧರ್ಮದ ಕುರಿತು ಪ್ರಶ್ನಿಸಿದರು. ಅದರ ಬಗ್ಗೆ ಉತ್ತರ ತಿಳಿದು ಹಿಂದಿರುಗುವಾಗ ಅವರನ್ನು ನೋಡಿ ಪ್ರವಾದಿ(ಸ) ಹೇಳಿದರು, أَفْلَحَ وَأَبِيهِ 'ಆ ವ್ಯಕ್ತಿಯ ತಂದೆಯಾಣೆ! ಅವನು ವಿಜಯ ಹೊಂದಿದನು.'[4]

ಇಮಾಮ್ ಖತ್ತಾಬಿ(ರ) ಹೇಳುತ್ತಾರೆ:

هٰذِهِ كَلِمَةٌ جَارِيَةٌ عَلَى أَلْسِنِ الْعَرَبِ ، تَسْتَعْمِلُهَا كَثِيْرًا فِي خِطَابِهَا، تُرِيْدُ بِهَا التَّوْكِيْد

'ಅರಬಿಗಳ ನಾಲಗೆಗಳಲ್ಲಿ ಸರ್ವೇ ಸಾಮಾನ್ಯವಾಗಿ ಉಪಯೋಗಿಸಲ್ಪಡುವ ಒಂದು ಮಾತು ಇದಾಗಿದೆ. ಸಂಭಾಷಣೆಯ ವೇಳೆ ಅವರು ಇದನ್ನು ಧಾರಾಳವಾಗಿ ಉಪಯೋಗಿಸುತ್ತಾರೆ. ಮಾತಿಗೆ ಬಲ ನೀಡುವುದು ಎಂಬುದು ಇದನ್ನು ಬಳಸುವುದರ ಉದ್ದೇಶವಾಗಿದೆ.'[5]

---

1. ಬುಖಾರಿ: 6437, ಮುಸ್ಲಿಮ್: 1049.
2. ಅಹ್ಮದ್: 5/350, ಬಸ್ಸಾರ್ - ಕಶ್‌ಫುಲ್ ಅಸ್ತಾರ್: 943, ಹಾಕಿಮ್: 1/417, ಇಬ್ನು ಖುಝೈಮಾ: 2457, ಬೈಹಕಿ - ಶುಅ್‌ಬುಲ್ ಈಮಾನ್: 3474.
3. ತಬ್ರೀ - ಅಲ್ ಕಬೀರ್.
4. ಮುಸ್ಲಿಮ್, ಅಬೂದಾವೂದ್, ಬೈಹಕಿ - ಸುನನುಲ್ ಕುಬ್ರಾ.
5. ಮುಖ್ತಸರ್ ಸುನನಿ ಅಬೀದಾವೂದ್ ವ ಮಆಲಿಮುಸ್ಸುನನ್: 1/230.